ನಮಃ ಶಿವಾಯ ಶಾಂತಾಯ



ಶ್ರೀ ಶ್ರೀ ಆನಂದಮೂರ್ತಿ

ಪ್ರಕಾಶಕರು:
ಆಚಾರ್ಯ ನಾರಾಯಣಾನಂದ ಅವಧೂತ
ಪ್ರಕಾಶನ ಸಚಿವ,
ಆನಂದ ಮಾರ್ಗ ಪ್ರಚಾರಕ ಸಂಘ (ರಜಿ.)
ಆನಂದ ನಗರ,
ಪೋ. ಬಾಗಲತಾ. ಜಿ. ಪುರೂಲಿಯ (ಪ. ಬಂಗಾಲ)

ಅಗಷ್ಟ 1984

ಪ್ರಥಮ ಮುದ್ರಣ:
ಕ್ರಯ: ೧೮-೦೦

ಅನುವಾದಕರು:
ಎಸ್. ಆರ್. ಪಾಟೀಲ ಬಿ.ಈ.

(ಗ್ರಂಥಕರ್ತರಿಂದ ಎಲ್ಲ ಹಕ್ಕುಗಳು ಕಾಯ್ದಿರಿಸಲ್ಪಟ್ಟಿವೆ)

ಮುದ್ರಣ:
ಫ. ಶಿ. ಭಾಂಡಗೆ
ತ್ವರಿತ ಮುದ್ರಣಾಲಯ
ಗಂಗಾಪೂರಸೇಟ, ಗದಗ—582 101

ಕಲಾವಿದರು:
ಮೂರ್ತಿ
ಧಾರವಾಡ

ರೋಮನ್ ಸಂಸ್ಕೃತ

ಬೇರೆ ಬೇರೆ ಭಾಷೆಗಳ ಸರಿಯಾದ ಉಚ್ಚಾರಣೆ ಮಾಡುವುದನ್ನೂ ಮತ್ತು ಸರಳ ಲೇಖನ ಪ್ರಯೋಜನವನ್ನೂ ಮನದಂದು, ಕೆಳಗೆ ನೀಡಲಾದ ಪದ್ಧತಿಯಲ್ಲಿ ರೋಮನ್ ಸಂಸ್ಕೃತ ವರ್ಣಮಾಲೆಯನ್ನು ಹೊಂದಿಸಲಾಗಿದೆ.

ಅ ಆ ಇ ಈ ಉ ಊ ಋ ೠ ಌ ೡ ಎ ಐ ಓ ಔ ಅಂ ಅಃ
अ आ इ ई उ ऊ ऋ ॠ ऌ ॡ ए ऐ ओ औ अं अः
a a′ i ii u u′ r rr lr lrr e ae o ao am′ ah

ಕ ಖ ಗ ಘ ಙ ಚ ಛ ಜ ಝ ಞ ಟ ಠ ಡ ಢ ಣ
क ख ग घ ङ च छ ज झ ञ ट ठ ड ढ ण
ka kha ga gha un̐a ca cha ja jha ina ṭ′a ṭ′ha ḍ′a ḍ′ha n′a

ತ ಥ ದ ಧ ನ ಪ ಫ ಬ ಭ ಮ ಯ ರ ಲ ವ ಶ
त थ द ध न प फ ब भ म य र ल व श
ta tha da dha na pa pha ba bha ma ya ra la va sha

ಷ ಸ ಹ ಕ್ಷ
ष स ह क्ष
s′a sa ha ks′a

ಅಁ ಜ್ಞ ಋಷಿ ಛಾಯಾ ಜ್ಞಾನ
अँ ज्ञ ऋषि छाया ज्ञान
an̐ jin̐a rs′i cha′ya′ jin̐a′na

ಸಂಸ್ಕೃತ ತತೋಽಹಂ

संस्कृत ततोऽहं

Sam'skrta tato'ham

A'nanda Ma'rga Praca'raka Sam'gha

a a' b c d d' e g h i j k l m m' n n' n o p r s s' t t' u u' v y.

ಸಮಗ್ರ ವಿಶ್ವದಲ್ಲಿ ಬಹಳ ಪ್ರಸಾರ ಹೊಂದಿದ, ರೋಮನ್ ಲಿಪಿಯ ಈ ೨೯ ಅಕ್ಷರಗಳಿಂದ ಸಂಸ್ಕೃತ ಭಾಷೆಯ ಸರಿಯಾದ ಉಚ್ಚಾರಣೆ ಮಾಡುವುದು ಸಾಧ್ಯವಿದೆ. ಇದರಲ್ಲಿ ಒತ್ತಕ್ಷರಗಳ ಗೊಂದಲವಿಲ್ಲ. ಅರಬ್ಬೀ, ಫಾರಸೀ ಮತ್ತು ಇತರೇತರ ಭಾಷೆಗಳಲ್ಲಿ f, q, qh, z, ಇತ್ಯಾದಿ ಅಕ್ಷರಗಳ ಪ್ರಯೋಜನವಿರುತ್ತದೆ; ಸಂಸ್ಕೃತದಲ್ಲಿಲ್ಲ.

ಶಬ್ದದ ಮಧ್ಯೆ ಇಲ್ಲವೆ ಕೊನೆಯಲ್ಲಿ 'ಡ' (ड-da) ಮತ್ತು 'ಢ' (ढ़-dha) ಅನುಕ್ರಮವಾಗಿ 'ಡ' (ड़-r'a) ಮತ್ತು 'ಢ' (ढ़-r'ha) ರೂಪದಲ್ಲಿ ಉಚ್ಚಾರಿತವಾಗುತ್ತವೆ. 'ಯ' (ಎಲ್ಲಿ 'ಯ'ದ ಉಚ್ಚಾರವು ಇಅ ಎಂದಾಗುವುದೋ) ದಂತೆ ಅವು ಸ್ವತಂತ್ರ ವರ್ಣಗಳಲ್ಲ. ಪ್ರಯೋಜನಾನುಸಾರ ಮತ್ತು ಅಸಂಸ್ಕೃತ ಶಬ್ದಗಳನ್ನು ಬರೆಯುವ ಕಾಲಕ್ಕೆ r'a ಮತ್ತು r'ha ಗಳನ್ನು ವ್ಯವಹರಿಸಬಹುದಾಗಿದೆ.

ತಿವ ಗೀತೆ

ಜಯ ಶುಭ ವಜ್ರಧರ ಶುಭ್ರ ಕಲೇವರ
ವ್ಯಾಘ್ರಾಂಬರ ಹರ ದೇಹಿ ಪದಮ್ ।
ಜಯ ವಿಷಾಣ ನಿನಾದಕ ಕ್ಲೇಶ ವಿದೂರಕ
ಸರ್ವಾಧಿಧಾರಕ ದೇಹಿ ಪದಮ್

ಜಯ ಆದಿಪಿತಾ ಆದಿದೇವ ಮಂತ್ರೇಶ ಮಹಾದೇವ
ಭಾವಾತೀತ ಅಭಿನವ ದೇಹಿ ಪದಮ್ ।
ರಜತ ಗಿರಿನಿಭ ಮಧುಮಯ ದುರ್ಲಭ
ಆನಂದ ಅಮಿತಾಭ ದೇಹಿ ಪದಮ್
ಜಯ ಸತ್ಯ ಸನಾತನ ಪರಮ್ ಪದಮ್ ॥

ಪರಿವಿಡಿ

ಕ್ರ.ಸಂಖ್ಯೆ	ವಿಷಯ	ಪುಟ
೧.	ನಾಮ ಪರಿಚಯ	೧
೨.	ಕೋಮಲ ಮತ್ತು ಕಠೋರ ರೂಪದಲ್ಲಿ	೬
೩.	ಶಿವ–ಪರಿಕ್ರಮ	೨೦
೪.	ತುಂಬಿ ಬೆಳೆದ ಶಿವ	೩೫
೫.	ಯುಗ ಯುಗದಲ್ಲಿ ಶಿವ	೪೭
೬.	ಶಿವನ ಸಮ್ಮಾನದಲ್ಲಿಯೇ ಸರ್ವರ ಸಮ್ಮಾನವಿದೆ ಭಾಗ–೧	೬೩
೭.	ಶಿವನ ಸಮ್ಮಾನದಲ್ಲಿಯೇ ಸರ್ವರ ಸಮ್ಮಾನವಿದೆ ಭಾಗ–೨	೭೬
೮.	ಶಿವನ ಸಮ್ಮಾನದಲ್ಲಿಯೇ ಸರ್ವರ ಸಮ್ಮಾನವಿದೆ ಭಾಗ–೩	೯೧
೯.	ಶಿವನ ಬೋಧೆ–೧	೧೦೯
	ಶಿವೋಕ್ತಿ–೧	೧೦೯
	ಶಿವೋಕ್ತಿ–೨	೧೧೦
	ಶಿವೋಕ್ತಿ–೩	೧೧೩
	ಶಿವೋಕ್ತಿ–೪	೧೧೬
೧೦.	ಶಿವೋಕ್ತಿ–೫	೧೧೮
	ಶಿವೋಕ್ತಿ–೬	೧೨೧
	ಶಿವೋಕ್ತಿ–೭	೧೨೩
	ಶಿವೋಕ್ತಿ–೮	೧೨೫
	ಶಿವೋಕ್ತಿ–೯	೧೨೬
	ಶಿವೋಕ್ತಿ–೧೦	೧೨೭
೧೧.	ಶಿವನ ಬೋಧೆ–೧	೧೨೯
	ಶಿವೋಕ್ತಿ–೧೧	೧೨೯
	ಶಿವೋಕ್ತಿ–೧೨	೧೩೧
೧೧.	ಶಿವನ ಬೋಧೆ-೨	೧೩೩
	ಶಿವೋಪದೇಶ–೧	೧೩೩
೧೨.	ಶಿವಬೋಧೆ–೨	೧೪೩
	ಶಿವೋಪದೇಶ–೨	೧೪೩
೧೩.	ಶಿವಬೋಧೆ–೨	೧೫೧
	ಶಿವೋಪದೇಶ–೩	೧೫೧
೧೪.	ಶಿವಬೋಧೆ–೨	೧೬೨
	ಶಿವೋಪದೇಶ–೪	೧೬೨
	ಶಿವೋಪದೇಶ–೭	೧೭೩
	ಶಿವೋಪದೇಶ–೮	೧೭೬
೧೭.	ಶಿವಬೋಧೆ–೨	೨೦೫
	ಶಿವೋಪದೇಶ–೯	೨೦೫
	ಶಿವೋಪದೇಶ–೧೦	೨೦೮
	ಶಿವೋಪದೇಶ–೧೧	೨೦೯
	ಶಿವೋಪದೇಶ–೧೨	೨೧೧
	ದರ್ಶನದ ಬೆಳಕಿನಲ್ಲಿ ಶಿವ–೧	೨೧೩
	ದರ್ಶನದ ಬೆಳಕಿನಲ್ಲಿ ಶಿವ–೨	೨೧೮
೧೮.	ದರ್ಶನದ ಬೆಳಕಿನಲ್ಲಿ ಶಿವ–೩	೨೨೧
	ದರ್ಶನದ ಬೆಳಕಿನಲ್ಲಿ ಶಿವ–೪	೨೨೩
	ದರ್ಶನದ ಬೆಳಕಿನಲ್ಲಿ ಶಿವ–೫	೨೨೫
	ದರ್ಶನದ ಬೆಳಕಿನಲ್ಲಿ ಶಿವ–೬	೨೨೮
	ದರ್ಶನದ ಬೆಳಕಿನಲ್ಲಿ ಶಿವ–೭	೨೨೯
೧೯.	ಶಿವಗೀತೆಯಲ್ಲಿ ಶಿವ	೨೩೫
೨೦.	ಧ್ಯಾನಮಂತ್ರದಲ್ಲಿ ಶಿವ	೨೪೪
	ಪ್ರಣಾಮ ಮಂತ್ರದಲ್ಲಿ ಶಿವ	೨೫೩

ಪ್ರವಚನ ೧

ನಾಮ ಪರಿಚಯ

ಕೃಷ್ಣನ ಜೀವನವನ್ನು, ಮುಖ್ಯವಾಗಿ ಎರಡು ಭಾಗಗಳಲ್ಲಿ ವಿಭಜಿಸಬಹುದಾಗಿದೆಯೆಂದು ನಾನು ಕೃಷ್ಣನನ್ನು ಕುರಿತು ಚರ್ಚಿಸುವ ಕಾಲಕ್ಕೆ ಹೇಳಿದ್ದೆ. ಒಂದು ಪಾತ್ರವೆಂದರೆ ವ್ರಜಗೋಪಾಲ. ಇನ್ನೊಂದೆಂದರೆ ಪಾರ್ಥಸಾರಥಿ. ವ್ರಜಗೋಪಾಲನು ಸರ್ವರಿಗೂ ಸಹಜ ಲಭ್ಯನಾಗಿದ್ದ. ಪಾರ್ಥಸಾರಥಿಯಾದರೋ, ಹಾಗಲ್ಲ; ಎಂಬುದನ್ನು ಹೇಳಿದ್ದೆ. ಮಹಾಭಾರತವು ಕೃಷ್ಣನ ರಚನೆಯೇನೋ ಸರಿ; ಆದರೆ ಮಹಾಭಾರತವಷ್ಟೇ ಕೃಷ್ಣನ ಸಾರಸರ್ವಸ್ವವಲ್ಲ. ಮಹಾಭಾರತವನ್ನು ಬಿಟ್ಟರೂ ಕೃಷ್ಣನು ಇರಬಲ್ಲ; ಆದರೆ ಕೃಷ್ಣನನ್ನು ಬಿಟ್ಟು ಮಹಾಭಾರತವಿರಲಾರದು. ಎಂಬುದನ್ನು ಅಗ ನಾನು ಹೇಳಿದ್ದೆ.

ಆದರೆ ಶಿವನನ್ನು ಕುರಿತು ಹೇಳುವಾಗ, ಶಿವನ ಜೀವನವನ್ನು ಹೀಗೆ ಎರಡು ಭಾಗಗಳಲ್ಲಿ ವಿಭಜಿಸಲಾಗದು. ಶಿವನನ್ನು ಸಾವು ಸಂಧಿಸಿದಾಗಲೇ ಸರ್ವವ್ಯಾಪ್ತ ಅಂದರೆ ಸರ್ವಾನುಸ್ಯೂತ ಸತ್ತೆಯನ್ನೇ ಕಾಣುತ್ತೇವೆ. ಅದೇ ಮೇರೆಗೆ ಆ ಅಪರಿಣತ, ಅಲ್ಪ ಬುದ್ಧಿ ಸಂಪನ್ನ, ಮಾನವ ಸಮಾಜದಲ್ಲಿ ಯಾವುದೇ ವಸ್ತುವಿನ ಅವಶ್ಯಕತೆ ಉಂಟಾದಾಗ, ಅಲ್ಲಿ, ಮಳೆಹನಿ ಬೀಳಹತ್ತಿದೊಡನೆ ಬಂದು ಕೊಡೆ ಹಿಡಿಯುವಂತೆ, ಶಿವನು ಆ ಅಗತ್ಯ ತುಂಬಿಕೊಡುತ್ತಿದ್ದನು. ಆದ್ದರಿಂದ ಶಿವನನ್ನು ವಿಭಾಗಿಸಿ ಅವನನ್ನು ಕುರಿತು ಆಲೋಚಿಸಲಾರೆವು. ಅವನನ್ನು ಕುರಿತು ಇತಿಹಾಸವನ್ನೂ ಬರೆಯುವಂತಿಲ್ಲ. ಇದರ ಜೊತೆ ಜೊತೆಗೆ ಮಾನವ ನಾಗರಿಕತೆ ಮತ್ತು ಸಂಸ್ಕೃತಿಗಳ ನಿರ್ಮಾಣದಲ್ಲಿ, ಶಿವನ ಯಾವ ವಿರಾಟ ಭೂಮಿಕೆಯು ರಚಿತವಾಗಿದೆಯೋ, ಅದರ ಬೆಳಕಿನಲ್ಲಿ ಹೇಳುವುದಾದರೆ, ಶಿವನನ್ನು ಹೊರತು ಪಡಿಸಿ, ಮಾನವ ಸಮಾಜದ ನಾಗರಿಕತೆ ಸಂಸ್ಕೃತಿಗಳು ನಿಲ್ಲಲಾರವೆಂದು ಹೇಳಬಹುದಾಗಿದೆ. ಆದರೆ ಮಾನವ ನಾಗರಿಕತೆಯನ್ನು, ಸಂಸ್ಕೃತಿಯನ್ನು ಬಿಟ್ಟರೂ ಶಿವನು ತನ್ನ ಮಹಿಮೆಯಲ್ಲಿಯೇ ಚಿರಕಾಲ ಉಜ್ವಲವಾಗಿ ಬೆಳಗಬಲ್ಲನು.

ಒಂದು ವೇಳೆ, ಪೃಥ್ವಿಯ ಇಂದಿನ ಮತ್ತು ಬಹು ಮುಂದಿನ, ಮಾನವ ಸಮಾಜ ಕುರಿತು ಯಥಾರ್ಥ ರೂಪದಿಂದ ವಿಚಾರಿಸುವುದಾದರೆ, ಅದರ ಯಥಾರ್ಥ ಇತಿಹಾಸವನ್ನು ಬರೆಯುವುದಾದರೆ, ಶಿವನನ್ನು ಬಿಟ್ಟು ಸಾಗಲಾರೆವು.

ಚರಮ ನಿರ್ದೇಶ

ಯಾರು ನಿತ್ಯವೂ ಎರಡು ವೇಳೆ ಸಾಧನೆ ಮಾಡುವರೋ, ಅಂತ್ಯ ಸಮಯಕ್ಕೆ ಅವರ ಮನದಲ್ಲಿ ಪರಮ-ಪುರುಷನ ಭಾವನೆಯು ಅವಶ್ಯವಾಗಿ ಮೂಡುವುದು. ಈ ಪ್ರಕಾರ, ಅವನಿಗೆ ಮುಕ್ತಿ-ಪ್ರಾಪ್ತಿಯು ನಿಶ್ಚಯವಾಗಿ ಲಭಿಸಿಯೇ ತೀರುತ್ತದೆ. ಆದ್ದರಿಂದ, ಪ್ರತಿಯೊಬ್ಬ ಆನಂದಮಾರ್ಗಿಯು, ದಿನದ ಎರಡು ಹೊತ್ತು, ಸಾಧನೆ ಮಾಡಲೇಬೇಕಾಗುತ್ತದೆ. ಪರಮ-ಪುರುಷನ ನಿರ್ದೇಶನವೇ ಇದಾಗಿದೆ. ಯಮ-ನಿಯಮಗಳ ಪಾಲನೆಯಿಲ್ಲದೆ, ಸಾಧನೆಯು ಸಾಧ್ಯವಿಲ್ಲ. ಆದ್ದರಿಂದ, ಯಮ-ನಿಯಮಗಳ ಪಾಲನೆ ಮಾಡುವುದೂ ಸಹ, ಪರಮ-ಪುರುಷನ ನಿರ್ದೇಶನವೇ ಆಗಿದೆ. ಈ ನಿರ್ದೇಶನವನ್ನು ಅಮಾನ್ಯ ಮಾಡುವುದೆಂದರೆ, ಕೋಟ್ಯಂತರ ವರುಷಗಳ ವರೆಗೆ, ಪಶು ಜೀವನದ ಕಷ್ಟದ ಬೆಂಕಿಯಲ್ಲಿ ಬೆಂದು ಬೇಗುದಿಗೊಳ್ಳುವುದಾಗಿದೆ. ಯಾವ ಮನುಷ್ಯನೂ, ಅಂಥ ಕಷ್ಟದ ಬೆಂಕಿಯಲ್ಲಿ ಬಿದ್ದು, ದಗ್ಧವಾಗದಿರಲಿ; ಹಾಗಾದರೆ, ಪರಮ ಪುರುಷನ ಸ್ನೇಹದ ನೆರಳಲ್ಲಿ ಎಲ್ಲರೂ ಬಂದು, ಶಾಶ್ವತ ಶಾಂತಿಯ ಲಾಭ ಪಡೆಯಲಿ; ಆದ್ದರಿಂದ, ಸರ್ವ ಮನುಷ್ಯರನ್ನೂ ಆನಂದ ಮಾರ್ಗದ ಕಲ್ಯಾಣ-ಪಥದತ್ತ ತರುವ ಪ್ರಯತ್ನ ಮಾಡುವುದು, ಪ್ರತಿಯೋರ್ವ ಆನಂದಮಾರ್ಗಿಯ ಕರ್ತವ್ಯವಾಗಿದೆ. ಎರಡನೆಯವರಿಗೆ ಸತ್-ಪಥ ತೋರಿಸುವುದು ಸಾಧನೆಯ ಅಂಗವೇ ಆಗಿದೆ.

ಶ್ರೀ ಶ್ರೀ ಆನಂದಮೂರ್ತಿ

ಈಗ ನಾವು ಮೊದಲು ಶಿವ ಶಬ್ದದ ಅರ್ಥವೇನೆಂದು ಅರಿಯುವಾ: ಶಿವ ಶಬ್ದದ ಅರ್ಥವನ್ನು ತಿಳಿಯುವ ಮೊದಲು, ಆ ಕಾಲದಲ್ಲಿ ಈ ದೇಶದಲ್ಲಿ ಸಂಸ್ಕೃತ ಭಾಷೆಯು ಪ್ರಚಲಿತವಿದ್ದಿತೋ ಇಲ್ಲವೋ? ಎಂಬುದನ್ನೂ ಸಹ ತಿಳಿಯುವ ಅಗತ್ಯವಿದೆ. ಹಲಕೆಲ ವರು ಸಂಸ್ಕೃತ ಭಾಷೆಯು ಮಧ್ಯ ಏಸಿಯಾದಿಂದ ಬಂದಿದೆಯೆಂದು ಹೇಳುತ್ತಾರೆ. ಆದರೆ ಈ ಮಾತು ಯುಕ್ತಿಪೂರ್ಣವಾಗಿಲ್ಲ. ಆದರೆ ಆ ಕಾಲದಲ್ಲಿ ಮಧ್ಯ ಏಸಿಯಾ ಮತ್ತು ಪೂರ್ವ ಯುರೋಪಿನಿಂದ ದಕ್ಷಿಣ ಪೂರ್ವ ಏಸಿಯಾದ ವರೆಗೆ,ಬಹುಶಃ ಒಂದೇ ಬಗೆಯ ಭಾಷೆಯು ರೂಢವಾಗಿತ್ತು: ಎಂಬ ಗ್ರಹಿಕೆಯು ಗ್ರಾಹ್ಯವಾಗಿದೆ. ದಕ್ಷಿಣ ಪೂರ್ವದಲ್ಲಿದ್ದ ಭಾಷೆಯು ವೈದಿಕ ಭಾಷೆಯಾಗಿತ್ತು. ಆರ್ಯರು ಹೊರಗಿನಿಂದ ಭಾರತ ವರ್ಷಕ್ಕೆ ಬಂದವರೆಂಬ ವಿಷಯದಲ್ಲಿ ಈಗ ಯಾವ ಸಂದೇಹವೂ ಉಳಿದಿಲ್ಲವಷ್ಟೇ? ಅದೇ ಮೇರೆಗೆ, ಭಾರತದ ಉತ್ತರ–ಪಶ್ಚಿಮ ಖಂಡದಲ್ಲಿ ಆರ್ಯರ ಪ್ರಭಾವವು ಎಷ್ಟಾಗಿದೆಯೋ, ದಕ್ಷಿಣ–ಪೂರ್ವ ಖಂಡದಲ್ಲಿ ಅಷ್ಟೊಂದಾಗಿಲ್ಲ.

ಆರ್ಯರೊಂದಿಗೆ ವೈದಿಕ ಭಾಷೆಯೂ ಇಲ್ಲಿಗೆ ಬಂದಿದೆ. ಆದರೆ ಸಂಸ್ಕೃತ ಭಾಷೆಯು ಮಾತ್ರ ಭಾರತೀಯ ಭಾಷೆ ಆಗಿದೆಯೆಂದೂ, ಭಾರತದ ಹೊರಗಿನಿಂದ ಬಂದುದಲ್ಲವೆಂದೂ ನಾನು 'ರಾಢ'ದ ಪುಸ್ತಕದಲ್ಲಿ ಸ್ಪಷ್ಟವಾಗಿ ಸಿದ್ಧಪಡಿಸಿದ್ದೇನೆ. ಇನ್ನು ವೈದಿಕ ಭಾಷೆಯು ಎಷ್ಟೊಂದು ಹಿಂದಿನದು? ಈ ಕಾಲವನ್ನು ವರ್ಷ–ತಿಂಗಳು,ದಿನಗಳ ಲೆಖ್ಖದಿಂದ ಅಳೆಯುವುದು ಸಂಭವನೀಯವಲ್ಲ. ಏಕೆಂದರೆ, ಆ ಭಾಷೆಯಲ್ಲಿ ಇರುವ ಪುಸ್ತಕಗಳಲ್ಲಿ ಅತಿ ಹಿಂದಿನ ಪುಸ್ತಕವೇ ಋಗ್ವೇದ. ಆ ಋಗ್ವೇದವು ಆ ಕಾಲದಲ್ಲಿ ಲಿಖಿತ ಅವಸ್ಥೆಯಲ್ಲಿ ಇರಲಿಲ್ಲ. ಏಕೆಂದರೆ, ಆ ಕಾಲದ ಮಾನವರಿಗೆ ಓದುಬರೆಹ ಬರುತ್ತಿರಲಿಲ್ಲ. ಅಕ್ಷರ ಜ್ಞಾನವಿದ್ದಿಲ್ಲ. ಅ, ಆ, ಕ, ಖ–ಗಳ ಜ್ಞಾನವಿರಲಿಲ್ಲ. ಅ–ಆ–ಕ–ಖ ಗಳ ಜ್ಞಾನ ಅಂದರೆ, ಅಕ್ಷರ ಜ್ಞಾನವು, ಇಂದಿನಿಂದ ಹಿಂದಿನ ೫೦೦೦ ವರ್ಷಗಳಿಂದ ೭೦೦೦ ವರ್ಷಗಳ ವರೆಗಿನ ಅವಧಿಯಲ್ಲಿ ಮೂಡಿ ಬಂದಿದೆ. ಬ್ರಾಹ್ಮೀ ಲಿಪಿ, ಖರೊಷ್ಟಿ ಲಿಪಿ ಮತ್ತಿತರ ಅನುರೂಪ ಲಿಪಿಗಳೆಲ್ಲ, ಈ ಬ್ರಾಹ್ಮೀ ಲಿಪಿಯ ಬದಲಾದ ರೂಪಗಳೇ ಆಗಿವೆ. ಶಾರದಾ, ನಾರದಾ, ಅದೇ ರೀತಿ ಕುಟಿಲಾ ಲಿಪಿಗಳುಂಟು. ಶ್ರೀ ಹರ್ಷ ಲಿಪಿಯು ಸಹ ಕುಟಿಲಾ ಲಿಪಿಯ ಬದಲಾದ ರೂಪವಷ್ಟೇ. ಈಗಿನ ಬಂಗಾಲೀ ಭಾಷೆಯ ಲಿಪಿಯು ಸಹ ಶ್ರೀಹರ್ಷ ಲಿಪಿಯೇ ಆಗಿದೆ.

ಋಗ್ವೇದವಾದರೋ,೧೫ ಸಾವಿರ ವರ್ಷ ಪೂರ್ವದಲ್ಲಿಯೇ ರಚಿತವಾಗಿರಬೇಕೆಂದು ಅನುಮಾನಿಸಲಾಗಿದೆ. ಆ ಕಾಲಕ್ಕೆ ಲಿಪಿಯಂತೂ ಇರಲಿಲ್ಲ.

ಈ ಪ್ರಸಂಗದಲ್ಲಿ, ಮಾನವನು ಈ ಪೃಥ್ವಿಯ ಮೇಲೆ ಬಂದು, ಅಜಮಾಸು ೧೦ ಲಕ್ಷ ವರ್ಷಗಳಾಗಿರಬಹುದೆಂದು ಇಲ್ಲಿ ತಿಳಿಸಿದರೆ ಅಸಂಗತವೇನೂ ಅಲ್ಲವಷ್ಟೇ? ಆದರೆ ಅವನು ನಾಗರಿಕತೆಯ ಒಂದು ಕಟ್ಟುಪಾಡಿಗೆ ಒಳಪಟ್ಟಿದ್ದು, ಅಜಮಾಸು ೧೫ ಸಾವಿರ ವರ್ಷ ಮೊದಲು ಮಾತ್ರ. ಅಂದರೆ ಮಾನವನ ನಾಗರಿಕತೆ ಮತ್ತು ಸಂಸ್ಕೃತಿಗಳು ಅಷ್ಟೊಂದು ಹಿಂದಿನವಲ್ಲ ಎಂದಂತಾಯಿತಷ್ಟೇ? ಅವುಗಳು ಆರ್ವಾಚೀನ ಎನ್ನುವ ಅಪವಾದವನ್ನೂ ನಾನು ಮಾಡಲಾರೆ. ಆದರೆ ಪ್ರಾಚೀನತೆಯ ಕಿರೀಟವನ್ನೂ ತೊಡಿಸಲಾರೆ.

ಶಿವನ ಕಾಲದಲ್ಲಿ,ಭಾರತದಲ್ಲಿ ಉತ್ತರ–ಪಶ್ಚಿಮ ಮೂಲೆಯಿಂದ ಆರ್ಯರ ಆಗಮನವು ಶುರುವಾಗಿತ್ತು. ಅಷ್ಟರಲ್ಲಿ ಬಹು ಜನರು ಬಂದು ಬಿಟ್ಟಿದ್ದರು. ಇನ್ನೂ ಬಹಳಷ್ಟು ಜನರು ಬರಹತ್ತಿದ್ದರು. ಮತ್ತೆ ಅನೇಕರು ಬರುವ ಸಿದ್ಧತೆಯಲ್ಲಿ ತೊಡಗಿದ್ದರು. ಇಲ್ಲಿಗೆ ಬಂದ ಆರ್ಯರ ವೈದಿಕ ಭಾಷೆಯ ಪ್ರಭಾವವು ಆ ಕಾಲದ ಭಾರತದ ಭೂಮಿ ಸಂತಾನದ 'ಕಶ್' 'ಶಿಥಿಯಾನ' 'ಇಉಖಿ' ದಕ್ಷಿಣ ಕುಷಾನ ಮುಂತಾದ ಆಡು ಭಾಷೆಗಳ ಮೇಲೆ ವ್ಯಾಪಕವಾಗಿ ಬಿದ್ದಿದೆ.

ಭಾರತದ ಆ ಕಾಲದ ಜನಭಾಷೆಯಾದ ಸಂಸ್ಕೃತದ ಮೇಲೂ ಸಹ ವೈದಿಕ ಭಾಷೆಯ ಪ್ರಭಾವವು ಸಾಕಷ್ಟಾಗಿದೆ. ಆದರೆ ಪ್ರಭಾವವು ಒಂದೇ ಕಡೆಯದಾಗಿರಲಿಲ್ಲ. ಅರ್ಥಾತ್ ಸಂಸ್ಕೃತ ಭಾಷೆಯ ಪ್ರಭಾವವು ವೈದಿಕ ಭಾಷೆಯ ಮೇಲೆ ಸಾಕಷ್ಟು ಬಿದ್ದಿತ್ತು. ಇತ್ತ ತಂತ್ರದ ಜನ್ಮವೂ ಸಹ ಭಾರತದಲ್ಲಿಯೇ ಆಗಿತ್ತು. ಶಿವನು ಅದಕ್ಕೊಂದು ವಿಧಿವತ್ತಾದ ರೂಪ ನೀಡಿದ್ದನು. ಆದರೆ ಶಿವನ ಆವಿರ್ಭಾವಕ್ಕಿಂತ ಮುನ್ನವೇ ವಿಕ್ಷಿಪ್ತ ಮತ್ತು ಅಶುದ್ಧ ರೂಪದಲ್ಲಿ ತಂತ್ರವು (ಕಾಶ್ಮೀರೀ ತಂತ್ರ ಮತ್ತು ಗೌಡೀಯ ತಂತ್ರ) ಭಾರತ ವರ್ಷದಲ್ಲಿದ್ದವು. ಶಿವನು ತಾಂತ್ರಿಕ ಪರಿಸರದಲ್ಲಿ ಲಾಲನೆ–ಪಾಲನೆ ಪಡೆದಿದ್ದರೂ ಸಹ ಆ ತಂತ್ರವು ಶಾಸ್ತ್ರೀಯ ತಂತ್ರವಾಗಿರಲಿಲ್ಲವೆಂಬ ಸಂಗತಿಯು ಸ್ವಾಭಾವಿಕವಾಗಿ ಮನನ ಯೋಗ್ಯವಾಗಿದೆ.

ವೈದಿಕ ಭಾಷೆ ಮತ್ತು ವೈದಿಕ ಧರ್ಮದೊಂದಿಗೆ ಸಹ ಶಿವನು ಸಮ್ಯಕ್ ಪರಿಚಯ ಹೊಂದಿದ್ದನು. ತಂತ್ರ ಮತ್ತು ವೇದಗಳೆರಡರಲ್ಲೂ ಶಿವನ ಪ್ರಸ್ತಾಪ ಕಾಣುತ್ತೇವೆ. ಆದರೂ ಬಹು ಪ್ರಾಚೀನ ಗ್ರಂಥಗಳಲ್ಲಿ ಈ ರೀತಿಯ ಉಲ್ಲೇಖ ಕಾಣೆವು. ಏಕೆಂದರೆ ಸುಪ್ರಾಚೀನ ಕಾಲದಲ್ಲಿ ಗ್ರಂಥ ರಚನೆಯ ಸಂಭವವೇ ಇರಲಿಲ್ಲ. ಅಕ್ಷರದ ಜ್ಞಾನವೂ ಇರಲಿಲ್ಲ. ಹಾಗೆ ಮಾಡಬೇಕು ಹೀಗೆ ಮಾಡಬೇಕು, ಎಂಬುದನ್ನೆಲ್ಲ ಗುರುಮುಖದಿಂದ ತಿಳಿಯತಕ್ಕದ್ದೆಂದು ತಂತ್ರಗಳಲ್ಲಿ ಹೇಳಲಾಗಿದೆ. ಏಕೆಂದರೆ ಪುಸ್ತಕಗಳನ್ನು ಬರೆಯುವಂತಿಲ್ಲ. ಅಕ್ಷರಗಳ ಶೋಧವೇ ಆಗಿರಲಿಲ್ಲ. ವೇದಗಳಲ್ಲೂ ಸಹ, ಗುರುವಿನಿಂದ ಕಿವಿಯಲ್ಲಿ ಕೇಳಕೊಳ್ಳಬೇಕು; ಎಂದು ಹೇಳಲಾಗಿದೆ. ಆದ್ದರಿಂದ ವೇದಕ್ಕೆ 'ಶ್ರುತಿ' ಎಂಬ ಹೆಸರು ಬಂದಿದೆ. ಶ್ರುತಿ ಎಂದರೆ 'ಕಿವಿ' ಎಂದು ಅರ್ಥ. ಯಾವುದನ್ನು ಕಿವಿಯಿಂದ ಕೇಳಿ ಬರೆಯ ಹತ್ತಿದರೋ, ಅದುವೇ 'ಶ್ರುತಿ'ಯೆನಿಸಿತು.

ಶಿವನ ಕಾಲವು ಭಾರತದಲ್ಲಿ ಗೊಂದಲದ ಕಾಲವಾಗಿತ್ತು. ಹೊರಗಿನಿಂದ ಆರ್ಯ ಜನರು ಆಗಮಿಸುತ್ತಿದ್ದರು. ಭಾರತದಲ್ಲಿಯೂ ಸಹ, ಅದರದೇ ಆದ ತಂತ್ರ–ಧರ್ಮವು ಪ್ರಚಲಿತವಿತ್ತು. ಆ ಸಮಯದ ಘರ್ಷಣೆಯ ಪರಿಸ್ಥಿತಿಯಲ್ಲಿ ಶಿವನ ಅವಿರ್ಭಾವವಾಯಿತು.

ಶಿವ ಶಬ್ದದ ಅರ್ಥವೇನು? ತಂತ್ರ, ವೇದ ಮತ್ತು ಲಭ್ಯವಿರುವ ಮೌಖಿಕ ಇಲ್ಲವೆ ಲಿಖಿತ ಪ್ರಮಾಣಗಳಿಂದ ಶಿವ ಶಬ್ದಕ್ಕೆ ಮೂರು ಅರ್ಥಗಳನ್ನು ಪಡೆಯುತ್ತೇವೆ. ಮೊದಲನೆಯ ಮತ್ತು ಮುಖ್ಯವಾದ ಅರ್ಥವೆಂದರೆ, 'ಕಲ್ಯಾಣಿ' ಇಲ್ಲವೆ 'ಮಂಗಲ' ಎಂದು.

ಅನಾದ್ಯನಂತಮುಖಿಲಸ್ಯ ಮಧ್ಯೇ ವಿಶ್ವಸ್ಯ ಸ್ರಷ್ಟಾರಮನೇಕ ರೂಪಂ
ವಿಶ್ವಸ್ಯೈಕಂ ಪರಿವೇಷ್ಟಿತಾರಂ ಜ್ಞಾತ್ವಾಶಿವಂ ಶಾಂತಿಮತ್ಯಂತಮೇತಿ

ಇಲ್ಲಿ 'ಶಿವ' ಶಬ್ದದ ಅರ್ಥವು ಕಲ್ಯಾಣ ಎಂದಿದೆ. 'ಶಿವಮಸ್ತು' ಎಂದರೆ 'ಕಲ್ಯಾಣಮಸ್ತು'. ಈ ಕಲ್ಯಾಣಾತ್ಮಕ ಶಿವನ ಪ್ರತಿರೂಪವೇ 'ಕಲ್ಯಾಣ ಸುಂದರಮ್' ಶಿವನು ಪಂಚಮುಖದಿಂದ ಜಗತ್ತಿನ ಕಲ್ಯಾಣ ಮಾಡುತ್ತಿರುವನೆಂದೂ, ಸೇವೆ ಮಾಡುತ್ತಿರುವನೆಂದೂ ಹೇಳುತ್ತಾರಷ್ಟೇ. ಆ ಪಂಚಮುಖಿಗಳೆಂದರೆ, ವಾಮದೇವ, ಕಾಲಾಗ್ನಿ ಎಂಬೆರಡು ಎಡಬದಿಯ ಮುಖಿಗಳು; ಬಲಬದಿಗೆ ದಕ್ಷಿಣೇಶ್ವರ ಮತ್ತು ಈಶಾನ ಎಂಬೆರಡು ಮುಖಿಗಳು. ಇನ್ನು ನಡುವೆ ಮಹಾನಿಯಂತ್ರಕನೂ, ಸರ್ವಕರ್ಮ ಏಷಣಗಳ ಪ್ರತಿಭೂ ಆದ ಮುಖಿವೇ ಕಲ್ಯಾಣ ಸುಂದರಮ್. ಶಿವನ ಬಲಬದಿಗೆ ದಕ್ಷಿಣೇಶ್ವರ ರೂಪವಿದೆಯಷ್ಟೇ. ಇಲ್ಲಿ ದಕ್ಷಿಣಾ ಎಂದರೆ ಕರುಣೆ ಎಂದರ್ಥ. ಹಾಗಾದರೆ ಆಯಾ ರೂಪವೇ ಆಯಾ ಭೂಮಿಕೆ. ಈ ಮೇರೆಗೆ ಈಶಾನದ ಅರ್ಥವೆಂದರೆ ನಿಷ್ಠಾಪೂರ್ವಕ ನಿಯಂತ್ರಿಸುವುದು. ಇನ್ನು ಇವೆರಡೂ ಭೂಮಿಕೆಗಳನ್ನು ನಿಯಂತ್ರಿಸುವವರಾರು? ಅದುವೇ ನಡುವೆ ಇರುವ ಕಲ್ಯಾಣ ಸುಂದರಮ್ ಭೂಮಿಕೆ. ಅದೇಕೆ ಇವುಗಳಿರಡರಲ್ಲೂ ಅವತೀರ್ಣವಾಗಿದೆ? ಜೀವರ ಕಲ್ಯಾಣಕ್ಕಾಗಿ ತಾನೇ? ಕಲ್ಯಾಣವನ್ನು ಹೊರತು ಪಡಿಸಿ, ಆ ಭೂಮಿಕೆಯ ಬೇರಾವ ಉದ್ದೇಶವೂ ಇಲ್ಲ. ಅದರ ಎಡಬದಿಗೆ ಇರುವ ಎರಡು ಮುಖಿಗಳೆಂದರೆ, ಒಂದು ವಾಮದೇವ ಮುಖಿ; ಇನ್ನೊಂದು ಕಾಲಾಗ್ನಿ ಮುಖಿ. ವಾಮದೇವ ಮುಖಿವು ಅತಿ ಭೀಷಣ ರುದ್ರವಾಗಿದೆ. ರುದ್ರಾತಿರುದ್ರ ರುದ್ರೋತಿರುದ್ರ; ಅರ್ಥಾತ್ ಮಾನವನನ್ನು ಅಳಿಸಿ ಅಳಿಸಿ ಶಿಕ್ಷಿಸುವುದೇ ಆಗಿದೆ. ಆದರೆ ಇಲ್ಲಿರುವ ಉದ್ದೇಶವು ಶಿಕ್ಷಣ ನೀಡುವುದೇ ಹೊರತು, ಆ ಕಲ್ಯಾಣ ಮಾಡುವುದಂತೂ ಅಲ್ಲ. ಇನ್ನು ಕಾಲಾಗ್ನಿ ಭೂಮಿಕೆಯೆಂದರೆ, ಮಾನವರನ್ನು ಸುಡುತ್ತ ಶಿಕ್ಷಿಸುವುದು. ಆದರೆ ಇಲ್ಲಿ ಶಿಕ್ಷಣ ನೀಡಿಕೆ ಇಲ್ಲವೆ ಕಲ್ಯಾಣ ಸಾಧನೆಯೇ ಗುರಿಯಾಗಿದೆ. ಈ ವಾಮದೇವ ಭೂಮಿಕೆ ಮತ್ತು ಕಾಲಾಗ್ನಿ ಭೂಮಿಕೆಗಳ ನಿಯಂತ್ರಣವನ್ನು ಮಧ್ಯವರ್ತಿ ಭೂಮಿಕೆಯಾದ ಕಲ್ಯಾಣ ಸುಂದರಮ್ ಮಾಡುತ್ತದೆ. ಅಂದರೆ ಕಲ್ಯಾಣಕ್ಕಾಗಿಯೇ ಅದು ಸುಂದರವೆನಿಸಿದೆ. ಕಲ್ಯಾಣ ಮಾಡುವುದರಿಂದ ಅದು ಸುಂದರವಾಗಿದೆ. ಅದು ಭೀಷಣವೂ, ಆಗಿದೆ; ಮತ್ತು ಅತಿ ಶಾಂತವೂ ಆಗಿದೆ. ಆದರೆ ಈ ಭೀಷಣತೆ ಮತ್ತು ಶಾಂತತೆಗಳಿರಡರ ಕಲ್ಯಾಣ ಸುಂದರಮ್‌ದ ಭಾವ. ಆದ್ದರಿಂದ, ಕಠೋರವಾಗಿದ್ದರೂ ಸಹ ಜನರು ಅವನನ್ನು ಪ್ರೀತಿಸುತ್ತಾರೆ. ಕೋಮಲವಾಗಿರುವುದರಿಂದಲೂ ಜನರು ಅವನನ್ನು ಪ್ರೀತಿಸುತ್ತಾರೆ. ಹಾಗಾದರೆ, ಇಲ್ಲಿ ಶಿವನ ಯಾವ ಭೂಮಿಕೆ ಇದೆಯೋ, ಅದು ಕಲ್ಯಾಣದ ಭೂಮಿಕೆಯೇ ಆಗಿದೆ. ಆದ್ದರಿಂದ ಶಿವ ಶಬ್ದದ ಮೊದಲನೆಯ ಅರ್ಥವೇ ಕಲ್ಯಾಣ ಇಲ್ಲವೆ ಮಂಗಳ ಎಂದು.

ಶಿವ ಶಬ್ದದ ಎರಡನೆಯ ಅರ್ಥವೆಂದರೆ ಶಿವ-ಶಕ್ತಿ. (cognition, in its zenith status, i.e. the supreme non-attributional entity, beyond the faculties of all existantial bondages) ಅಂದರೆ ಚರಮಾವಸ್ಥೆಯ ಅರಿವು ಅರ್ಥಾತ್ ಅಸ್ತಿತ್ವದ ಬಂಧನಗಳಾಚೆಗಿನ ಪರಮ ನಿರ್ಗುಣ ಸತ್ತೆ.

ಇದುವೆ ಯಥಾರ್ಥ ವ್ಯಾಖ್ಯೆ. ಇದು ಶಿವ ಶಬ್ದದ ಎರಡನೆಯ ಅರ್ಥ. ನಾನು ಅನಂತರ ಈ ಅರ್ಥ ಕುರಿತು ಇನ್ನಷ್ಟು ವಿವರಿಸಿ ಹೇಳುವೆ.

ಮೂರನೆಯ ಅರ್ಥವೆಂದರೆ– ಇಂದಿನಿಂದ ಅಜಮಾಸು ಏಳು ಸಾವಿರ ವರ್ಷ ಪೂರ್ವದಲ್ಲಿ ಈ ಪೃಥ್ವಿಯ ಮೇಲೆ ಬಂದು, ಈ ಪೃಥ್ವಿಯ ಪ್ರತಿ ಧೂಳಿಕಣವನ್ನು ಪವಿತ್ರಗೊಳಿಸಿದ 'ಸದಾಶಿವ' ಎಂದು. ತನ್ನ ಸಂಪೂರ್ಣ ಸತ್ತೆಯನ್ನೂ ಜೀವಿಗಳ ಕಲ್ಯಾಣದಲ್ಲಿ ತೊಡಗಿಸಿ ಹೋದನಾತ. ನಾನಿಲ್ಲಿ ಮಾನವ ಕಲ್ಯಾಣವೆಂದು ಬೇಕೆಂದೇ ಹೇಳಿಲ್ಲ. ಏಕೆಂದರೆ ಸೃಷ್ಟ ಜಗತ್ತಿನಲ್ಲಿ ಮಾನವನನ್ನು ಹೊರತು ಪಡಿಸಿ ಇನ್ನು ಅನೇಕ ಪಶು, ಪಕ್ಷಿ, ತರು, ಲತೆಗಳಿವೆ. ಶಿವನು ಸರ್ವರಿಗೂ ಇದ್ದಾನೆ. ಜೀವರ ಕಲ್ಯಾಣ ಕ್ಕೋಸ್ಕರ ಅವನು ತನ್ನದೆಲ್ಲವನ್ನೂ ಹಂಚಿಹಾಕಿದನು. ಆದ್ದರಿಂದ ಅವನನ್ನು 'ಸದಾಶಿವ' ಎಂದು ಕರೆಯುತ್ತಾರೆ. ಯಾವನು ಯಾವಾಗಲೂ ಮಂಗಳ ರೂಪ ಧಾರಣ ಮಾಡಿರುವನೋ, ಯಾವನು ಸರ್ವರ ಮಂಗಳವನ್ನೇ ಚಿಂತಿಸುವನೋ, ಯಾರ ಅಂತರಿಕ ವ್ರತವು ಮಂಗಳಕಾರಿಯಾಗಿದೆಯೋ, ಅವನೇ ಸದಾಶಿವ. ನಾನು ಇವನನ್ನು ಕುರಿತು ಸಾವಕಾಶವಾಗಿ ನಿಮಗೆ ಹೇಳುವೆ. ನಾನು ಈ ವಿರಾಟ ಪುರುಷನ ಬಗೆಗೆ, ಈ ವಿರಾಟ ವ್ಯಕ್ತಿಯ ಬಗೆಗೆ ಏನೇನು ಹೇಳುವೆನೋ, ಅದೆಲ್ಲ ನಿಮಗೆ ಹಿಡಿಸುವುದೆಂದು ನಾನು ಆಶಿಸುವೆ. ಅಂಧಕಾರ ಮುತ್ತಿದ ನಿಶೆಯಲ್ಲಿ ಬೆಳಕಿನ ಆವಿರ್ಭಾವವನ್ನು ಕೇವಲ ಮಾನವರಷ್ಟೇ ಇಚ್ಛಿಸುವರೇನು? ಎಲ್ಲ ಜೀವ ಜಂತುಗಳೂ ಇಚ್ಛಿಸುತ್ತಿವೆಯಷ್ಟೇ! ಕತ್ತಲೆಯಿಂದ ಮುಚ್ಚಿದ ಅಸ್ತಿತ್ವದ ವಿಸ್ಮೃತಿಯ ಆಳದಿಂದ ಉತ್ತರಣದ ನಿಟ್ಟುಸಿರು ಬಿಡುವುದನ್ನು, ಮುನ್ನಡೆಯುವ ಆಕಾಂಕ್ಷೆಯನ್ನು ತೃಪ್ತಿಗೊಳಿಸುವುದನ್ನು ಎಲ್ಲರೂ ಬಯಸುವರಷ್ಟೇ. ಸರ್ವರ ಈ ಇಚ್ಛೆಯ ಮಾಧುರ್ಯದಲ್ಲಿ, ಪೂರ್ಣತ್ವಡೆಡೆಗೆ ಮುನ್ನಡೆಯುವ ಪ್ರಥಮ ಸುಯೋಗವು, ಯಾವ ಮಹಾಸಂಭೂತಿಯ ಮೂಲಕ ಈ ಪೃಥ್ವಿಗೆ ಲಭಿಸಿದೆಯೋ, ಅವನನ್ನು ಕುರಿತು ಮಾನವನು ಇದುವರೆಗೆ ಯಥಾರ್ಥ ಚರ್ಚೆಯನ್ನು ಮಾಡಿಲ್ಲ. ಏಕೆ ಮಾಡಿಲ್ಲ? ಈ ಪ್ರಶ್ನೆಯು ಇಂದು ಅಪ್ರಸ್ತುತ. ಶಿವನ ಕೊಡುಗೆಯನ್ನು ಯಥಾರ್ಥ ರೂಪದಲ್ಲಿ ತಿಳಿಯುವುದು ಮತ್ತು ಅದರ ಬೆಲೆಯನ್ನು ನಿರ್ಧರಿಸುವುದು ಮತ್ತು ಗುರುತಿಸುವುದು ಪ್ರತಿಯೋರ್ವ ಜೀವಿಯು ಮಾಡಲೇಬೇಕಾದ ಕಾರ್ಯವಾಗಿದೆ. ಹಾಗೆ ಮಾಡಬೇಕಾದರೆ, ಆ ಸತ್ತೆಯನ್ನು ಬಿಟ್ಟು ಮಾಡಲಾರೆವು. ಮೂಲಸತ್ತೆಯನ್ನೇ ಉಪೇಕ್ಷಿಸಿ, ಅದರ ಜ್ಯೋತಿಯ ಕಣವೊಂದನ್ನು ತೆಗೆದುಕೊಂಡು, ಆನಂದ ಪಡೆಯಬಹುದಾಗಿದೆ. ಆದರೆ ಆ ಆನಂದದಲ್ಲಿ ಪೂರ್ಣತೆಯ ವೈಭವವಿರದು.

ಕಲಕತ್ತೆ: ಎಪ್ರಿಲ್ ೧೯೮೨

ಪ್ರವಚನ ೨

ಕೋಮಲ ಮತ್ತು ಕಠೋರ ರೂಪದಲ್ಲಿ

ಮಾನವನು ಪೃಥ್ವಿಯ ಮೇಲೆ ಬಂದು ಅಜಮಾಸು ಹತ್ತು ಲಕ್ಷ ವರ್ಷಗಳಾದ ವೆಂದು ನಾನು ಈಗಾಗಲೇ ಹೇಳಿದ್ದೇನೆ. ಆದರೆ ಮಾನವ ನಾಗರಿಕತೆಯು ಶುರುವಾಗಿ ಹೆಚ್ಚೆಂದರೆ ಹದಿನೈದು ಸಾವಿರ ವರ್ಷಗಳಷ್ಟಾಗಿರಬಹುದು. ಒಂದುವೇಳೆ, ಪ್ರಾಚೀನ ಋಗ್ವೇದದ ಪ್ರಥಮ ಮಂಡಲವು ನಾಗರಿಕತೆಯ ಪ್ರಾರಂಭವೆಂದು ಎಣಿಸುವುದಾದರೆ, ಅದು ಹದಿನೈದು ಸಾವಿರ ವರ್ಷಕ್ಕಿಂತ ಹಿಂದಿನದಾಗಿರಲಾರದು. ಅಂದು ಪ್ರಾರಂಭ ವಾದ ನಾಗರಿಕೆಯು ಬಹುಶಃ ಇಂದಿನ ನಾಗರಿಕತೆಯ ರೀತಿಯಲ್ಲಿರಲ್ಲ. ಕೆಲವೊಂದು ವಿಷಯಗಳಲ್ಲಿ ಮಾತ್ರ, ಮಾನವನು ಕೊಂಚ ಕೊಂಚ ನಿಯಮಗಳನ್ನು ಒಪ್ಪಿಕೊಂಡು ನಡೆಯುತ್ತಿದ್ದನಷ್ಟೇ. ಅದಕ್ಕಿಂತ ಹೆಚ್ಚಿನದೇನೂ ಇರಲಿಲ್ಲ. ಶಿವನು ಅಜಮಾಸು ಏಳು ಸಾವಿರ ವರ್ಷಗಳಷ್ಟು ಹಿಂದೆ, ಆದರೆ, ಋಗ್ವೇದದ ಆದಿಕಾಲದಿಂದ ಎಂಟು ಸಾವಿರ ವರ್ಷಗಳು ಹತಿಸಿದ ಮೇಲೆ, ಅಂದರೆ ಋಗ್ವೇದ ಯುಗದ ಶೇಷಾಂಶ ಕಾಲಕ್ಕೆ ಮತ್ತು ಯಜುರ್ವೇದೀಯ ಯುಗದ ಪ್ರಥಮಾಂಶದ ಕಾಲಕ್ಕೆ ಅವಿರ್ಭವಿಸಿದ್ದನು. ಋಗ್ವೇದದಲ್ಲಿ ನಿರ್ದೇಶಿತ ನಾಗರಿಕತೆಯನ್ನು, ಶಿವನ ಪೂರ್ವದ ನಾಗರಿಕತೆಯೆಂದೂ ಯಜುರ್ವೇದ ಕಾಲದಲ್ಲಿ ಪ್ರಚಲಿತವಿದ್ದ ನಾಗರಿಕತೆಯನ್ನು ಶಿವನ ನಂತರದ ನಾಗರಿಕತೆಯೆಂದೂ ತಿಳಿಯುವಲ್ಲಿ ತಪ್ಪೇನಿಲ್ಲ. ಹೀಗೆ ಋಗ್ವೇದದ ಆದಿಕಾಲ ದಲ್ಲಾಗಲೀ, ಮಧ್ಯಕಾಲದಲ್ಲಾಗಲೀ, ಯಾವುದೇ ನಿಯಮಬದ್ಧ ಸಮಾಜವು ನಿರ್ಮಾಣಗೊಂಡಿರಲಿಲ್ಲ. ಸಾಮಾಜಿಕ ಜೀವನವು ವಿಧಿಬದ್ಧವಾಗಿರಲಿಲ್ಲ. ಮಾತೃ ಶಾಸಿತ ಸಮಾಜದ ವ್ಯವಸ್ಥೆಯು ಅಂತ್ಯವಾಗಹತ್ತಿತ್ತು. ಪಿತೃಶಾಸಿತ ಸಮಾಜದ ಪ್ರಾರಂಭವಾಗಹತ್ತಿತ್ತು. ಪಿತೃಶಾಸಿತ ಸಮಾಜ ವ್ಯವಸ್ಥೆಯಲ್ಲಿ ಪಿತೃವಂಶೀಯ (patnilineal order) ಪದ್ಧತಿ ಮತ್ತು ಜೊತೆ–ಜೊತೆಗೆ ಪಿತೃ-ಪ್ರಧಾನ (patri archal order) ಪದ್ಧತಿಗಳು ಪ್ರಚಲಿತವಿದ್ದವು. ಆದರೆ ಆ ಕಾಲದಲ್ಲಾವ ನಿರ್ದಿಷ್ಟ ನಿಯಮಗಳಿರಲಿಲ್ಲ. ಇದು ಎಲ್ಲಿಯವರೆಗೆ ನಡೆದಿತ್ತೆಂದರೆ, ಮಾತೃ–ವಂಶೀಯ ಪದ್ಧತಿಯ ಪ್ರಭಾವವು, ಇಂದಿನಿಂದ ಎರಡೂವರೆ ಸಾವಿರ ವರ್ಷದಷ್ಟು ಹಿಂದಿನ ವರೆಗೆ ಬುದ್ಧ ಮತ್ತು ಮಹಾವೀರ ಜೈನರ ಕಾಲದವರೆಗೆ ನಡೆದು ಬಂದಿತ್ತು. ಶಿವನ ಕಾಲ ದಲ್ಲಿ ಮಾತೃ ಶಾಸಿತ ಪದ್ಧತಿಯೇನೂ ಸುವ್ಯವಸ್ಥಿತವಾಗಿದ್ದಿಲ್ಲವಾದರೂ, ಮಾತೃ ವಂಶೀಯ ಪದ್ಧತಿಯು ಇನ್ನೂ ರೂಢಿಯಲ್ಲಿತ್ತು. ಪಿತೃ: ಶಾಸಿತ ವ್ಯವಸ್ಥೆ

ಯನ್ನು ಸ್ಥಾಪಿಸಲೋಸುತ ಪಿತೃವಂಶೀಯ ಪದ್ಧತಿಯು ಆವಶ್ಯಕವಾಗಿತ್ತು. ಮತ್ತು ಈ ಪಿತೃವಂಶೀಯ ಪದ್ಧತಿ ಜಾರಿಗೊಳಿಸಬೇಕಾದರೆ, ಓರ್ವ ತಂದೆಯ ಪರಿಚಯ ಹೇಳಿಕೊಳ್ಳಬೇಕಾಗುತ್ತದೆ. ಇದನ್ನು ಭಾರತದಲ್ಲಿ ಪಿತೃಗತ ಗೋತ್ರ ವ್ಯವಸ್ಥೆಯೆಂದು ಹೇಳುತ್ತಾರೆ. ಒಂದೊಂದು ಜನಗೋಷ್ಠಿ ಒಂದೊಂದು ಬೆಟ್ಟದ ಮೇಲಿರುತ್ತಿದ್ದರು. ಆ ಬೆಟ್ಟದಲ್ಲಿ ವಾಸಿಸುವ ಪ್ರಧಾನ ವ್ಯಕ್ತಿಯೊಬ್ಬನು, ಆ ಗೋಷ್ಠಿಯ ತಂದೆಯೆನಿ ಸುತ್ತಿದ್ದನು. ಮಾತೃವಂಶೀಯ ವ್ಯವಸ್ಥೆಯಿದ್ದರೆ, ಆ ಬೆಟ್ಟದ ಪ್ರಧಾನ ಮಹಿಳೆಯು ಗೋತ್ರಮಾತೆ ಎನಿಸುತ್ತಿದ್ದಳು. ಆದರೆ ಮಾತೃವಂಶೀಯ ವ್ಯವಸ್ಥೆಯು ಅಷ್ಟರಲ್ಲಿ ಅಂತ್ಯವಾಗಿ ಹೋಗಿತ್ತು. ಗೋತ್ರ–ಪಿತನಿರಲಿ, ಗೋತ್ರ–ಮಾತೆಯಿರಲಿ ಅವರ ಹೆಸರಿನಿಂದ ಗೋತ್ರವನ್ನು ಹೆಸರಿಸಲಾಗುತ್ತಿತ್ತು. ಅಂದರೆ ಆ ಬೆಟ್ಟವನ್ನು ಅವರ ಹೆಸರಿನಿಂದ ಕರೆಯಲಾಗುತ್ತಿತ್ತು. ಸಂಸ್ಕೃತ ಭಾಷೆಯಲ್ಲಿ ಬೆಟ್ಟಕ್ಕೆ 'ಗೋತ್ರ' ಎನ್ನುತ್ತಾರೆ. ಒಂದೊಂದು ಬೆಟ್ಟದಲ್ಲಿ ಒಬ್ಬ ಋಷಿಯು ಆ ಜನಗೋಷ್ಠಿಯ ತಂದೆ ಇಲ್ಲವೆ ಮುಖಂಡನಾಗುತ್ತಿದ್ದನು. (ಮಾತೃಶಾಸಿತ ಯುಗದಲ್ಲಿ ಗೋಷ್ಠಿ ಮಾತೆ ಇಲ್ಲವೆ ಗೋತ್ರಮಾತೆ ಎಂದು ಕರೆಯುತ್ತಿದ್ದರು.) ಮಹಾಋಷಿ ಕಶ್ಯಪನಿದ್ದನೆಂದು ತಿಳಿಯಿರಿ: ಅವನು ವಾಸಿಸುವ ಬೆಟ್ಟವು ಕಶ್ಯಪ ಗೋತ್ರೀಯ ಬೆಟ್ಟವೆಂದು ಕರೆಯಲ್ಪಡುತ್ತಿತ್ತು. ಇನ್ನೊಂದು ಬೆಟ್ಟವನ್ನು ಮಹಾಋಷಿ ಭಾರದ್ವಾಜರ ಹೆಸರಿನಿಂದ ಗುರುತಿಸುತ್ತಿದ್ದರು. ಈ ಪ್ರಕಾರ ಋಷಿ ಇಲ್ಲವೆ ಆದಿಪಿತನ ಹೆಸರಿನಿಂದ ಗೋತ್ರಗಳನ್ನು ನಿರ್ಧರಿಸುತ್ತಿದ್ದರು. ಆದೇ ಮೇರೆಗೆ, ಈ ಗೋತ್ರ ವಿಚಾರದಿಂದ ಪಿತೃಶಾಸಿತ ಪದ್ಧತಿ ನಡೆಯುತ್ತಿತ್ತು. ಮಾತೃಶಾಸಿತ ಪದ್ಧತಿಯಂತೂ ಇಷ್ಟರಲ್ಲಿ ಸಮಾಪ್ತವಾಗಿ ಹೋಗಿತ್ತು. ಆದರೆ ಮಾತೃ ವಂಶೀಯ ಕ್ರಮ ಇದಾದ ನಂತರ ಸಹ ನಡೆದಿತ್ತು. ಈಗ ಸ್ವಲ್ಪ ಕಾಲ ಮೊದಲು ನಾನು ಬುದ್ಧನ ಕಾಲದ ವರೆಗೂ ಈ ಕ್ರಮ ನಡೆದು ಬಂದಿತ್ತೆಂಬುದನ್ನು ಹೇಳಿದೆನಷ್ಟೇ.

ಶಿವನು ಈ ಮಾತೃವಂಶೀಯ, ಮಾತೃಶಾಸಿತ; ಪಿತೃವಂಶೀಯ, ಪಿತೃಶಾಸಿತ; ವ್ಯವಸ್ಥೆಗಳನ್ನು ಕುರಿತು ಎಳೇಪವಾಗಿ ಒತ್ತಾಯಪಡಿಸಲಿಲ್ಲ. ಜನರು ಸ್ವಾಭಾವಿಕ ಹಾದಿಯಲ್ಲಿ ನಡೆಯುವಂತೆ ಅವನು ಅನುವು ಮಾಡಿಕೊಟ್ಟಿದ್ದನು. ಆದರೆ ಎಲ್ಲಿ ಪಿತೃ ವಂಶೀಯ ಪದ್ಧತಿ ಇದ್ದಿತೋ, ಪಿತೃಶಾಸಿತ ಪದ್ಧತಿಗಾಗಿ ಪಿತೃವಂಶೀಯ ಪದ್ಧತಿ ಇರಲೇಬೇಕಾಗುತ್ತಿತ್ತೋ, ಅಲ್ಲಿ ಗೋತ್ರವನ್ನು ಸಹ ನಿರ್ಧರಿಸಬೇಕಾಗುತ್ತಿತ್ತು. ಈ ಪದ್ಧತಿಗಳನ್ನು ಅನುಸರಿಸುವವರಿಗೆ ಶಿವನು, 'ನೀವು ಆ ಗೋತ್ರ, ಈ ಗೋತ್ರವೆಂದು ಮಾನವ ಮಾನವರಲ್ಲಿ ಘರ್ಷಣೆ ಉಂಟು ಮಾಡಬೇಡಿರಿ' ಎಂದು ತಿಳಿಹೇಳುತ್ತಿದ್ದನು. ಮೊದಲು ಬೆಟ್ಟ–ಬೆಟ್ಟದವರಲ್ಲಿ, ಗೋಷ್ಠಿ–ಗೋಷ್ಠಿಗಳಲ್ಲಿ ಸಂಘರ್ಷ ನಡೆಯುತ್ತಿತ್ತು. ಶಿವನು ಇಂಥ ಘರ್ಷಣೆಯನ್ನು ನಿಷೇಧಿಸಿದನು. ಮತ್ತು ಆ ಜನರಿಗೆ ತಿಳಿಹೇಳುತ್ತ, 'ಯಾರು ನನ್ನನ್ನು ಪ್ರೀತಿಸುವಿರೋ, ಯಾರು ಯಾರು ನನ್ನ ಮಾತನಾಲಿಸುವಿರೋ, ಆ ಜನರೆಲ್ಲ ಒಂದು ಛಂದೋಬದ್ಧ ಜೀವನ ಕ್ರಮದಲ್ಲಿ ಬನ್ನಿರಿ; ಒಂದು ನಿಯಮಾನು ವರ್ತಿತ ಸಮ್ಯಕ ಶಾಸನದ ಕಕ್ಷೆಯೊಳಗೆ ಬನ್ನಿರಿ. ಮತ್ತು ನಾವು ಗೋತ್ರಗಳ ಹೆಸರಿ ನಿಂದ ಮಾನವರ ಮಧ್ಯೆ ಗೋಡೆಗಳನ್ನು ನಿಲ್ಲಿಸುವುದಿಲ್ಲವೆಂದು ಘೋಷಿಸಿರಿ" ಎಂದು ತಿಳಿ ಹೇಳುತ್ತಿದ್ದನು. ಜನರನ್ನು ಅಗಲಿಸುವ ಗೋಡೆಗಳೆಲ್ಲವನ್ನು ಒಡೆದು ಚೂರು

ಚೂರು ಮಾಡಿ, ಸಮಭಾತೃತ್ವದ ಅಂಗಳದಲ್ಲಿ ಸೇರಿ, ಎಲ್ಲರೊಂದಿಗೆ ಊಟ ಮಾಡೋಣ. ನೀರು ಕುಡಿಯೋಣ. ನಾವಿಂದು ಸಹಸ್ರಾರು ಗೋತ್ರಗಳಲ್ಲಿ ಹರಿದು ಹಂಚಿಹೋಗಿಲ್ಲ. ನಮ್ಮ ಗೋತ್ರವೊಂದೇ. ಅದುವೇ ಶಿವ–ಗೋತ್ರ. 'ಆತ್ಮ ಗೋತ್ರಂ ಪರಿತ್ಯಜ್ಯ ಶಿವಗೋತ್ರಂ ಪ್ರವಿಶಂತು.'

ಹೀಗೆ ಶಿವನು ಸಮಾಜ ದೇಹದಲ್ಲಿ ಒಂದು ವಿಪ್ಲವಾತ್ಮಕ ವ್ಯದಸ್ಥೆಯನ್ನು ತಂದನು. ಇದರಿಂದ ಪ್ರಚಲಿತವಿದ್ದ ಭೌಗೋಲಿಕ–ಭಾವನೆ, ಮತ್ತು ಸಾಮಾಜಿಕ ಭಾವನೆಗಳು ಚೂರ್ಣ–ವಿಚೂರ್ಣವಾದವು. ಮತ್ತು ಆ ಭೌಗೋಲಿಕ–ಭಾವನೆ ಮತ್ತು ಸಾಮಾಜಿಕ–ಭಾವನೆ, ಅಂದರೆ ಗೋತ್ರ, ಗೋಷ್ಠಿ ಭಾವನೆಗಳ, ಧಾರಕ, ವಾಹಕ ಮತ್ತು ಪೋಷಕರು ಶಿವನಿಗೆದುರು ಸಾಗಿದರು. ಶಿವನ ವಿರುದ್ಧ ಸಮಾಲೋಚನೆಯ ರಂಗಗಳುದಿಸಿದವು.

ಸಾಮಾಜಿಕ ಕ್ಷೇತ್ರದಲ್ಲಿ, ಮಾನವ–ಮಾನವರಲ್ಲಿ ಬೇರೂರಿದ ಭೇದ–ಭಾವನೆಗಳನ್ನು ಅಳಿಸಿ ಹಾಕಲು ಶಿವನು ಪ್ರಯತ್ನಿಸಿದನು. ಶಿವನಿಗೆ ಮೂರು ಜನ ಹೆಂಡಂದಿರಿದ್ದರು. ಒಬ್ಬಳು ಆರ್ಯಕನ್ಯೆಯಾದ ಗೌರವರ್ಣದ ಪಾರ್ವತಿ. ಎರಡನೆಯವಳು ಅನಾರ್ಯ ಕನ್ಯೆಯಾದ ಕೃಷ್ಣವರ್ಣದ (ಮೇಘವರ್ಣದ) ಕಾಳಿ, ಮೂರನೆಯವಳು ಮಂಗೋಲಿಯನ್ ಕನ್ಯೆಯಾದ ಹಳದಿ ಬಣ್ಣದ ಗಂಗೆ. ಅವನು ಮಾನವ–ಮಾನವರಲ್ಲಿನ ಭೇದ ನೀಗಿಸಿ, ಅವರನ್ನು ಒಂದಾಗಿಸಲು ಇಚ್ಛಿಸಿದನು. ಮತ್ತು ಈ ಅಸಂಗತಿಗಳ ಕಟ್ಟುಪಾಡಿಗೊಳಗಾದ, ಬೇರೆ ಬೇರೆ ತುಂಡು ತುಂಡಾಗಿ ಬಾಧಿತವಾದ, ಮಾನವರನ್ನು ಒಗ್ಗೂಡಿಸಿ, ಸಮ್ಯಕ್ ಚರಿತಾರ್ಥತೆಯತ್ತ ಕರೆದೊಯ್ಯುವ ಪ್ರಯತ್ನವನ್ನು–ಪ್ರಾಣಪೂರ್ವಕ ಪ್ರಯತ್ನವನ್ನು–ಶಿವನು ಮಾಡಿದನು.

ಆ ಕಾಲದ ಮಾನವ ಸಮಾಜದಲ್ಲಿ ಆರ್ಥಿಕ ಸಮಸ್ಯೆಗಳು ಅಷ್ಟೊಂದು ಬಂದಿರಲಿಲ್ಲ. ಆದ್ದರಿಂದ ಆರ್ಥಿಕ ಕ್ಷೇತ್ರದಲ್ಲಿ ಏನನ್ನಾದರೂ ಮಾಡುವ ಅಗತ್ಯ ಬೀಳಲಿಲ್ಲ. ಮಾನವ ಸಮಾಜದಲ್ಲಿ ರಾಜನೀತಿಯೂ ಕುದುರಿರಲಿಲ್ಲ. ಆದ್ದರಿಂದ ಆ ಕ್ಷೇತ್ರದಲ್ಲಿಯೂ ಸಹ ಹೆಚ್ಚಿಗೆ ಏನನ್ನಾದರೂ ಮಾಡಬೇಕಾದ ಅಗತ್ಯ ಬೀಳಲಿಲ್ಲ. ಆದರೆ ಜೀವನದ ಇತರೇತರ ಪಾರ್ಶ್ವಗಳಾದರೋ ಇದ್ದೇ ಇದ್ದುವು.

ಭಾವ–ಜಗತ್ತಿನಲ್ಲಿ, ಚಿಂತನದ ಜಗತ್ತಿನಲ್ಲಿ, ಶಿವನು ಹೀಗೆ ಹೇಳಿದ್ದಾನೆ. ಮಾನವ–ಮಾನವರಲ್ಲಿ ಭೇದ ಬುದ್ಧಿಯನ್ನು ಹುಟ್ಟಿಸಲು ಪ್ರಯತ್ನಿಸುವ, ಭೌಗೋಲಿಕ–ಭಾವನೆ (Geo–Sentiment) ಮತ್ತು ಸಾಮಾಜಿಕ–ಭಾವನೆ (Socio-Sentiment)ಗಳಿಗೆ ಪ್ರೋತ್ಸಾಹನೆ ನೀಡಿ ಮಾನವ ಸಮಾಜದಲ್ಲಿ ಕೃತ್ರಿಮ ಗೋಡೆ ನಿಲ್ಲಿಸುವ ಜನರ ಬಗ್ಗೆ, ಎಲೈ ಮಾನವ ಮಿತ್ರರೇ, ನೀವು ಎಚ್ಚರದಿಂದ ಇರಿ. ಆ ಜನರ ಬಗೆಗೆ ಶಿವನು ಬಳಸಿರುವ ಶಬ್ದವೆಂದರೆ, 'ಲೋಕ ವ್ಯಾಮೋಹ ಕಾರಕ:' ಎಂದು . ಮಾನವ ಮನದಲ್ಲಿ ವಿಭಿನ್ನ ಪ್ರಕಾರದ ಕ್ಷುದ್ರತೆಗಳ ವ್ಯಾಧಿಯನ್ನು ಹೊಗಿಸುತ್ತಾರೆ. ಆದ್ದರಿಂದ ಈ ಜನರ ಬಗ್ಗೆ ಎಚ್ಚರದಿಂದಿರಬೇಕು.

ಆ ಸಮಯದ ಋಗ್ವೇದೀಯ ಯುಗದಲ್ಲಿ ಛಂದವಿತ್ತು; ಆದರೆ ರಾಗ–ರಾಗಿಣಿಯ ಉದ್ಭವವಿನ್ನೂ ಆಗಿರಲಿಲ್ಲ. ಕೇವಲ ಛಂದವಿದ್ದು ಬಿಟ್ಟರೆ ಹಾಡಲು ಬರಲಾರದು.

ಛಂದವಿತ್ತು; ಅಂದರೆ ಮಾನವನು ಕೇವಲ ಕ್ಯಾಂವ, ಭ್ಯಾಂವ ಎಂದಿಷ್ಟೇ ಧ್ವನಿಸುತ್ತಿರಲಿಲ್ಲ. ಕೇವಲ ಛಂದವನ್ನನುಸರಿಸಿ ನಡೆಯಬಹುದು. ಆದರೆ ಅದು ಗೀತಕ್ಕೆ ಪರ್ಯಾಯವಾಗದು. ವೈದಿಕ ಯುಗದಲ್ಲಿ ಋಗ್ವೇದದ ಕಾಲದಿಂದಲೂ ಏಳು ಪ್ರಕಾರದ ಛಂದಗಳಿವೆ. ಆ ಏಳು ಛಂದಗಳೆಂದರೆ ಗಾಯತ್ರಿ, ಉಷ್ಣೀಕ, ವಿಷ್ಟುಪ, ಅನುಷ್ಟೂಪ, ಜಗತೀ, ಬೃಹತೀ ಮತ್ತು ಪಂಕ್ತಿ. ಋಗ್ವೇದದ ತೃತೀಯ ಮಂಡಲದ ದಶಮ ಸೂಕ್ತದಲ್ಲಿ(೩–೧೦–೬೨) ಇರುವ ಸವಿತ ಋಕ್, ಗಾಯತ್ರೀ ಛಂದದಲ್ಲಿ ರಚಿತವಾಗಿದೆ. ಗಾಯತ್ರಿ ಛಂದವೆನ್ನುವುದನ್ನು ಬಿಟ್ಟು, ತಪ್ಪಾಗಿ, ಗಾಯತ್ರಿ ಮಂತ್ರವೆನ್ನುತ್ತಾರೆ. ಅರ್ಥಾತ್ ಛಂದದೊಂದಿಗೆ ಮಾನವನ ಪರಿಚಯವಿತ್ತು. ಆದರೆ ಸೂರ–ಸಪ್ತಕದೊಂದಿಗೆ ಪರಿಚಯವಿರಲಿಲ್ಲ. ಈ ಸೂರ–ಸಪ್ತಕವನ್ನು ಶಿವನು ಸರಿಯಾಗಿ ಪರಿಶೀಲಿಸಿ, ಹೊಂದಿಸಿ ನೋಡಿದ್ದಾನೆ. ವಿಭಿನ್ನ ಜೀವಿಗಳ ಮುಖದಿಂದ, ಜಿಹ್ವೆಯಿಂದ ಧ್ವನಿಯು ಉದ್ಗೀತವಾಗುತ್ತಿದೆ. ಉತ್ಸಾರಿತವಾಗುತ್ತದೆ. ಆದರೊಂದಿಗೆ ವಿಶ್ವದ ಆರೋಹ ಅವರೋಹಗಳ ಭಾವವನ್ನು ಹಿಡಿದು, ಛಂದದ ಜಗತ್ತು ಮುನ್ನಡೆದಿರುವಂತೆ, ಛಂದದ ಉತ್ಥಾನ–ಪತನಗಳ ಆ ಆರೋಹ–ಅವರೋಹಗಳೊಂದಿಗೆ ಒಂದು ಸಂಗತಿಯಿದೆ. ಮತ್ತು ಈ ಸಂ–ಗತಿಯು ಎಂಟನೇ ಸ್ತರದಲ್ಲಿ ಹೋಗಿ ಪ್ರಥಮದ ಸಮೀಪ ಬರುತ್ತಿದೆ. ಏಳು ಜಂತುಗಳ ಧ್ವನಿಯನ್ನು ಕೇಂದ್ರವಾಗಿರಿಸಿಕೊಂಡು 'ಸೂರ ಸಪ್ತಕ'ವನ್ನು ನಿರ್ಮಿಸಲಾಗಿದೆ. ಇದರಿಂದ ಛಂದದ ಮಾಧುರ್ಯವು ಇನ್ನಷ್ಟು ಸ್ಫುಟವಾಗಿ ಮಂಡಿತವಾಗಿದೆ. ಈ ಸೂರ–ಸಪ್ತಕವು ಹೀಗಿದೆ; ಷಡಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ, ನಿಷಾದ. ಇವುಗಳ ಮೊದಲನೇ ಅಕ್ಷರಗಳನ್ನು ತೆಗೆದುಕೊಂಡು ಸೂರ–ಸಪ್ತಕವನ್ನು ತಯಾರಿಸಲಾಗಿದೆ. ಷಡಜದಿಂದ 'ಸಾ', ಋಷಭದಿಂದ ರೇ, ಈ ಪ್ರಕಾರ ಗಾ, ಮಾ, ಪಾ, ಧಾ, ನಿ ಹೀಗೆ ಎಂಟನೇ ಕ್ಷೇತ್ರದಲ್ಲಿ ಬಂದು, ಪ್ರಥಮ ಧ್ವನಿಯನ್ನೇ ಸ್ವಲ್ಪ ಬೇರೆ ಮಾತ್ರೆಯಲ್ಲಿ ಉದ್ಗೀತ ಮಾಡಬೇಕು. ಪೃಥ್ವಿಯ ಯಾವ ಭಾಗದಲ್ಲಿ ಶಿವನ ಪ್ರಭಾವವು ಸ್ವಲ್ಪ ಕಡಿಮೆ ಬಿದ್ದಿದೆಯೋ, ಅಲ್ಲಿ ಈ ಸೂರ ಸಪ್ತಕದ ಅಷ್ಟಮದಲ್ಲಿ ಸ್ವಲ್ಪ ಭಿನ್ನತೆಯುಂಟು. (ಕೂಡಿ–ಕಳೆಯುವಾಗ ಅಸಂಖ್ಯ ಧ್ವನಿಗಳು ಉದ್ಗೀತವಾಗುತ್ತದೆ) ಅದೇ ಮೇರೆಗೆ ಎರಡನೆಯದು ಮೊದಲಿನದರೊಂದಿಗೆ ಚಾಚೂ ತಪ್ಪದೆ ಹೋಲುವುದಿಲ್ಲ. ಅಲ್ಲಿಯೂ ಸಹ, ಢೋ, ರೇ, ಗ, ಮ, ಸೋ, ಲ, ಸೀ, ಡೋ, ಇವೆ. ಇದರ ಅರ್ಥ ಹೀಗಿದೆ. ಏನೆಂದರೆ, 'ಢೋ' ಎರಡು ಸಲ ಬರುತ್ತದೆ. ಮತ್ತು ಎರಡನೇ 'ಡೋ' ವನ್ನೂ ಸಹ ಲೆಖ್ಖಕ್ಕೆ ತೆಗೆದುಕೊಳ್ಳುತ್ತಾರೆ. ಇದರ ಫಲವಾಗಿ ಆ ಜನರಲ್ಲಿ ಸೂರ–ಸಪ್ತಕವಿಲ್ಲ. ಆದರೆ, ಅಷ್ಟಕ (Octave) ಇದೆ. ಈ ಪ್ರಕಾರ ಸೂರ–ಸಪ್ತಕವನ್ನು ಅವಿಷ್ಕರಿಸಿ,ಶಿವನು ಛಂದಮಯ ಜೀವನವನ್ನು ಇನ್ನಷ್ಟು ಮಧುರಮಯ ಮಾಡಿದನು. ಇದೇನು ಸಣ್ಣ ಕೆಲಸವಲ್ಲ.

ಇಂದಿನ ಪೃಥ್ವಿಯ ಸಂಗೀತವು ಸಂಪೂರ್ಣವಾಗಿ ಸೂರ–ಸಪ್ತಕವನ್ನೇ ಆಧರಿಸಿದೆ. ಅತ್ಯಂತ ದುಃಖದ ಮಾತೆಂದರೆ, ಶಿವನು ಗಂಭೀರ ಸಾಧನೆಯ ಮೂಲಕ ಸಂಗೀತದಲ್ಲಿ ಮೊದಲ ಹೆಜ್ಜೆ ಇರಿಸಿದ್ದನು. ಜನರು ಆ ಸಾಧನೆಯನ್ನು ಮರೆತು ಬಿಡುತ್ತಿದ್ದಾರೆ.

ಈಗ ಸಂಗೀತವನ್ನು ಸಾಧನಾ–ಸಂಪತ್ತಿನ ರೂಪದಲ್ಲಿ ಗ್ರಹಿಸದೆ, ಜನರು ಏನೋ ಮೋಜಿಗಾಗಿ ಇಲ್ಲವೆ, ಜೀವನ ನಿರ್ವಹಣೆಯ ವೃತ್ತಿಗಾಗಿ, ಮತ್ತೆ ಕೆಲವರು, ವಿಲಾಸ ಕ್ಕಾಗಿ ಬಳಸುತ್ತಿದ್ದಾರೆ. ಯಾವ ಗಂಭೀರ ಸಾಧನೆಯ ಮೂಲಕ ಶಿವನು ಇದನ್ನು ಆವಿಷ್ಕರಿಸಿದ್ದನೋ, ಇಂದು ಆ ಸಾಧನೆ ಉಳಿದಿಲ್ಲ. ಇಂದು ಹಾಹಾಕಾರ ಎಬ್ಬಿಸಿ ಯಾರಾದರೂ ಹೀಗೆ ಹೇಳಲಿಃ

"ಆರ ಕಿ ಭಾರತೆ ಆಚೆ ಸೆ ಯಂತ್ರ
ಆರ ಕಿ ಆಚೆ ಸೆ ಮೋಹನ ಮಂತ್ರ
ಆರ ಕಿ ಆಚೆ ಸೆ ಮಧುರ ಕಂಠ
ಆರ ಕಿ ಆಚೆ ಸೆ ಸ್ತ್ರಾಣ
ಸೆಯಾ ಆಮಿ ಕಿ ಗಾಇಬೊ ಗಾನ!"

ಒಂದು ವೇಳೆ, ಶಿವನ ಅನುಯಾಯಿಗಳು ಶಿವನ ಹಾದಿ ಹಿಡಿದು, ನೂರರ ಲ್ಲೊಂದು ಪಾಲಿನಷ್ಟಾದರೂ ಮುನ್ನಡೆದರೆ, ಭಾರತದಲ್ಲಿ, ಪೃಥ್ವಿಯಲ್ಲಿ, ಮಹಾವಿಶ್ವ ದಲ್ಲಿ, ಈ ಮೋಹನ ಮಂತ್ರ ಮತ್ತು ಮಧುರ ಕಂಠಗಳು ಮತ್ತೆ ಮರಳಿ ಬರಬಹುದು. ತಮ್ಮನ್ನು ತಾವು ಪೌರುಷ, ನ್ಯಾಯನಿಷ್ಠೆ, ಸರಳತೆ, ಮತ್ತು ಸಾಧನೆಗಳಲ್ಲಿ ಉದ್ಬುದ್ಧ ಗೊಳಿಸುವುದರಿಂದ ಎಲ್ಲ ಕಾರ್ಯವೂ ಕೈಗೊಡುವುದು. ಮತ್ತು ಆತೀತದ ಸಂಪದವು ಸಹ, ಪುನಃ ಮಾನಸ ಜೀವನದಲ್ಲಿ, ಮಾನವ ಸಮಾಜದಲ್ಲಿ, ಮತ್ತೊಮ್ಮೆ ನೆಲೆಸುವುದು.

ಶಿವನು ಗಾನ ಅಥವಾ ಸಂಗೀತವನ್ನು ನಿಯಮಬದ್ಧಗೊಳಿಸಿದನಷ್ಟೇ ಅಲ್ಲ, ಧ್ವನಿ–ವಿಜ್ಞಾನದ ವಿಭಿನ್ನ ದಿಶೆಗಳನ್ನು ಹಿಡಿದು ಅನ್ವೇಷಣೆ ಮಾಡಿ ಪಡೆದ ಫಲವನ್ನು ಮಾನವನು ಇಂದಿಗೂ ಭೋಗಿಸುತ್ತಿದ್ದಾನೆ. ಧ್ವನಿ ವಿಜ್ಞಾನವು ಸ್ವರ–ವಿಜ್ಞಾನವನ್ನ ವಲಂಬಿಸಿದೆ. ಇದು ಮಾನವನ ಶ್ವಾಸ, ನಿ:ಶ್ವಾಸಗಳನ್ನು (Inhalation and exhalation) ಅವಲಂಬಿಸಿದೆ. ಅದನ್ನು ಆಧರಿಸಿಯೇ ಶಿವನು ಛಂದಮಯ ಜಗತ್ತನ್ನು ಮುದ್ರಾಮಯಗೊಳಿಸಿದರು. ಅವನು ಛಂದದೊಂದಿಗೆ ನ್ಯತ್ಯದ ಸಂ-ಗತಿ ಯನ್ನು ತಂದು, ಅದಕೊಂದಿಗೆ ಮುದ್ರೆಯನ್ನೂ ಸಹ ಜೋಡಿಸಿದನು. ಶಿವನಿಗಿಂತ ಪೂರ್ವದ ಋಗ್ವೇದೀಯ ಸಮಾಜದಲ್ಲಿ ಛಂದವೂ ಇರಲಿಲ್ಲ; ಮುದ್ರೆಯೂ ಇರಲಿಲ್ಲ. (ವೇದಾಧ್ಯಯನದಲ್ಲಿ ಯೋಗ್ಯತೆ ಸಂಪಾದಿಸಲು, ಮಾನವನು ವೇದಾಂಗಗಳಲ್ಲಿ ಪಾರ ದರ್ಶಿಯಾಗಬೇಕಾಗುತ್ತದೆ. ಈ ವೇದಾಂಗಗಳು ಆರು: ಛಂದ, ಕಲ್ಪ, ನಿರುಕ್ತ, ಜ್ಯೋತಿಷ್ಯ, ವ್ಯಾಕರಣ ಮತ್ತು ಆಯುರ್ವೇದ. ಹೀಗೆ ಛಂದವು ತುಂಬಾ ಅವಶ್ಯ ವಾಗಿತ್ತು). ಮತ್ತು ಮುದ್ರೆಯ ಸಮಾವೇಶವನ್ನು ಯಾವ ಪ್ರಕಾರ ಮಾಡಲಾಯಿತು? ಬೇರೆ ಬೇರೆ ಜೀವಿಗಳ ಶರೀರದಲ್ಲಿ ಬೇರೆ ಬೇರೆ ಗ್ರಂಥಿಗಳ (glands) ಪ್ರಾಬಲ್ಯ ಇಲ್ಲವೆ–ಅಪ್ರಾಬಲ್ಯವಿರುತ್ತದೆ. ಈ ಕಾರಣದಿಂದ ಬೇರೆ ಬೇರೆ ರೀತಿಯಿಂದ ಅವರ ವರ ಅಭಿವ್ಯಕ್ತಿಯಾಗುತ್ತದೆ. ಇಲ್ಲವೆ ಅಭಿವ್ಯಕ್ತಿಯಾಗುವುದಿಲ್ಲ, ಎಂಬುದನ್ನು ಶಿವನು ಕಂಡುಕೊಂಡನು. ಈ ಎಲ್ಲದರ ಪರಿಚಯದಿಂದ ಎಲ್ಲ ಜೀವರನ್ನು, ಎದುರಿಗಿರಿಸಿ ಕೊಂಡು, ಸಮರ್ಪಕ ಚರ್ಚೆ ನಡೆಸಿದ ಬಳಿಕವೇ ಅವನು ಮುದ್ರೆಯ ಆವಿಷ್ಕಾರ ಮಾಡಿ

ದನು. ಒಂದೊಂದು ಮುದ್ರೆಯು ಮಾನವನ ಗ್ರಂಥಿಗಳನ್ನು ಒಂದೊಂದು ವಿಧವಾಗಿ ಪ್ರಭಾವಿತಗೊಳಿಸುತ್ತದೆ. ಮತ್ತು ಪ್ರೇಕ್ಷಕ ಅಂತೆಯೇ ಶ್ರೋತೃಗಳ ಮೇಲೂ ಸಹ ಬೇರೆ ಬೇರೆ ರೀತಿಯಿಂದ ಪ್ರಭಾವ ಬೀರುತ್ತದೆ. ಇದುವೇ ನೃತ್ಯ ಜಗತ್ತಿನಲ್ಲಿ ಶಿವನ ಮೇಲ್ಕೈ! ಅಂದರೆ, ಆ ಕಾಲದಲ್ಲಿ ಕೈಕಾಲುಗಳನ್ನು ಚಲಿಸುವುದೇ ನೃತ್ಯವೆಂದು ಜನ ತಿಳಿದಿದ್ದರು. ಮತ್ತು ಕೈಕಾಲುಗಳ ಚಲನೆಯೊಂದಿಗೆ ವೈದಿಕ ಛಂದಸ್ಸಿನ ಸಂಯೋಜನೆ ಯಂತೂ, ಹೆಚ್ಚು ಕಡಿಮೆ ಆಗಿತ್ತು. ಇಂಥ ನೃತ್ಯವನ್ನು ನಾವು ಏನು ಬೇಕಾದರೂ ಹೆಸರಿಸಬಹುದು. ಆದರೆ ಅದನ್ನು 'ಧ್ರುಪದೀ ನೃತ್ಯ'ವೆಂದು ಮಾತ್ರ ಕರೆಯಲಾಗದು. ಅದನ್ನು ಧ್ರುಪದೀ ನೃತ್ಯವೆಂದು ಎಣಿಸಲಿಕ್ಕಾಗದು. ಮುದ್ರೆಯನ್ನು ಸಂಯೋಜಿಸಿದ ನಂತರವೇ ಅದು ಧ್ರುಪದೀ ನೃತ್ಯವಾಗುತ್ತದೆ. ಶಿವನ ಮೂಲಕ ಅವಿಷ್ಕೃತವಾದ ತಾಂಡವ ನೃತ್ಯದ ಬಗೆಗೆ ಆ ಮೇಲೆ ಹೇಳುವೆ. ಡಾಕಿನ ಮೇಲೆ ಕಾಠಿ ಬಿದ್ದರೆ, ವಾದ್ಯ ವಾಗದು. ಅದರಲ್ಲಿಯೂ ಸಹ ಛಂದ ಮತ್ತು ಸೂರ–ಸಪ್ತಕ ಸಂಯೋಜನೆಗಳ ಅವಶ್ಯಕತೆಯುಂಟು. ಅದೇ ಮೇರೆಗೆ ಅದು ಕೇವಲ ನೃತ್ಯದ ತಾಳದೊಂದಿಗೆ ಮೂಡಿ ಬರುತ್ತಿಲ್ಲ. ಆದರೊಂದಿಗೆ ಛಂದಗಳೊಂದಿಗೆ ಮುದ್ರೆಯ ಸ-ಗತಿ ಇರಿಸಿಕೊಂಡು ವಾದ್ಯ ಮೊಳಗುತ್ತದೆ. ಶಿವನು ಈ ವಸ್ತುಗಳನ್ನು ಆಮದು ಮಾಡಿಕೊಳ್ಳಲಿಲ್ಲ. ಆಮದು ಮಾಡಿಕೊಳ್ಳುವುದನ್ನು ಬಿಟ್ಟು ನಿರ್ಮಾಣ ಮಾಡಿದುದೇಕೆ? ಯಾವುದನ್ನು ಆಮದು ಮಾಡಿಕೊಳ್ಳಬಹುದಿತ್ತೋ ಆ ವಸ್ತುಗಳು ಬೇರೆಲ್ಲಿಯೂ ಇರಲಿಲ್ಲ. ಆದ ರಿಂದ ಶಿವನು ಸ್ವತಃ ಅವುಗಳನ್ನು ನಿರ್ಮಿಸಿದನು. ಈ ನೃತ್ಯ, ಗೀತ, ಇವುಗಳ ಆವಿಷ್ಕಾರ ಮಾಡಿ ಅವನು ತೆಪ್ಪಗೆ ಕೂಡ್ರಲಿಲ್ಲ. ಶಿವನು ತನ್ನ ಜ್ಞಾನವನ್ನು ಹಂಚಿ ದನು. ಉಪಯುಕ್ತ ಪಾತ್ರತೆ ಹೊಂದಿದ ಭರತ ಮಹರ್ಷಿಗೆ ಅವನು ಹೀಗೆ ಹೇಳಿ ದನು: "ವಿಶ್ವದಲ್ಲಿ ಈ ವಿದ್ಯೆಯನ್ನು ಯಾರು ಕಲಿಯಬಯಸುವರೋ ಅವರಿಗೆಲ್ಲ, ಕುಲ–ಜಾತಿ ಎಣಿಸದೆ ಕಲಿಸು. ಕೇವಲ ಯಾರಲ್ಲಿ ಎಷ್ಟು ಕಲಿಯುವ ಆಗ್ರಹವಿದೆ ಯೆಂಬುದನ್ನು ಮಾತ್ರ ನೋಡು...ಅಂದರೆ ಒಂದು ಕಾಲಕ್ಕೆ ವಿಶ್ವದಲ್ಲಿ ಯಾವುದು ಕೃತ್ರಿಮ ಹಂತದಲಿ, ವಿಧಿಗೊಳಪಡದ ಹಂತದಲ್ಲಿ ಇದ್ದಿತೋ, ಅದಕ್ಕೆಲ್ಲ ಶಿವನು ವಿಧಿಬದ್ಧವಾದ, ಮತ್ತು ಛಂದೋಬದ್ಧವಾದ ರೂಪ ನೀಡಿದನು. ಇಂಥ ಛಂದೋ ಬದ್ಧ ರೂಪವನ್ನು ಸಂಗೀತದಲ್ಲಿ ಮಾತ್ರ ನೀಡಲಿಲ್ಲ. ಜೀವನದ ಪ್ರತಿಯೊಂದು ಅಭಿ ವ್ಯಕ್ತಿಯನ್ನೂ ಸಹ, ಛಂದೋಬದ್ಧ ರೂಪದಿಂದ ಮುನ್ನಡೆಸಬೇಕು. ಹಾಗೆ ಹೀಗೆ ಮಾಡುತ್ತ ಸಾಗಿದರೆ ನಡೆಯದು. ನಿಯಮದ ಕಕ್ಷೆಯಲ್ಲಿ ಬಾರದೆ ನಡೆಯದು.

ಈ ದೊದಲು ಮಾನವ ಸಮಾಜದಲ್ಲಿ ವಿವಾಹ ಪದ್ಧತಿ ಇರಲಿಲ್ಲ. ವಿವಾಹ ಪದ್ಧತಿ ಇರಲಿಲ್ಲವಾದ್ದರಿಂದ, ಮಾತೃಗತವಂಶ ವ್ಯವಸ್ಥೆಯಿತ್ತು. ಏಕೆಂದರೆ ತಾಯಿಯ ಹೆಸರಿನಿಂದ ಪರಿಚಯ ಹೇಳುತ್ತಿದ್ದರು; ತಂದೆಯ ಹೆಸರಿನಿಂದಲ್ಲ. ಆದರೆ ಶಿವನು ವಿವಾಹ (ವಿ–ವಹಕ್ಕೆ ಘ–ಡ—ವಿವಾಹ. ಇದರ ಅರ್ಥವೆಂದರೆ ತನ್ನನ್ನು ತಾನು ಒಂದು ವಿಶೇಷ ನಿಯಮಾನುಸಾರ ನಡೆಸುವುದು) ವ್ಯವಸ್ಥೆಯಲ್ಲಿ ಪರಿವರ್ತನೆ ಮಾಡಿದನು ಮತ್ತು ಆ ವ್ಯವಸ್ಥೆ ಇಂದೂ ಸಹ ಪ್ರಚಲಿತವಿದೆ. ಇದರ ಹೆಸರೇ ಶೈವ ವಿವಾಹ. ಶೈವ ವಿವಾಹದಲ್ಲಿ ಪಾತ್ರ ಮತ್ತು ಪಾತ್ರೀ ಪೂರ್ಣಹೊಣೆಗಾರಿಕೆಯಿಂದ

ವಿವಾಹವಾಗುತ್ತಾರೆ. ಮತ್ತು ಅದರಲ್ಲಿ ಜಾತಿ ಇಲ್ಲವೆ ಕುಲಗಳ ವಿಚಾರವಾವುದೂ ಇರದು. ಅರ್ಥಾತ್ ಶಿವನು ಸಂಪೂರ್ಣ ರೂಪದಿಂದ, ಎಲ್ಲ ಪ್ರಕಾರದ ಭೌಗೋಲಿಕ–ಅಂಟು–ಭಾವನೆಯಾಚೆ ಇದ್ದನು. ಎಲ್ಲ ಸಾಮಾಜಿಕ–ಅಂಟು ಭಾವನೆಗಿಂತ ಮೇಲಿದ್ದರು,

ಯಾವುದೇ ನೀತಿಗೆ, ಯಾವುದೇ ಆದರ್ಶಕ್ಕೆ, ರೂಪ ಕೊಡುವುದಕ್ಕೋಸುಗ ಬಲಿಷ್ಠತೆಯ ಪ್ರಯೋಜನವಿದೆ. ವಿಶೇಷವಾಗಿ ಇಂಥ ಕರ್ಮದ ನೇತೃತ್ವವು ಯಾರ ಪಾಲಿಗೆ ಬರುವುದೋ ಯಾರು ಪುರೋಧಾ ಪುರುಷನಾಗಬೇಕಾಗಿದೆಯೋ, ಯಾರು ಅಗ್ರ ಪುರುಷನಾಗಬೇಕಾಗಿದೆಯೋ, ಅವನು ಕಠೋರನಾಗಿರಬೇಕಾದುದು ಆವಶ್ಯಕ ಮತ್ತು ಅನಿವಾರ್ಯ. ಎಲ್ಲ ಅವಸ್ಥೆಗಳಲ್ಲಿಯೂ ಲಕ್ಷ್ಯವನ್ನು ಸರಿಯಾಗಿರಿಸಿಕೊಳ್ಳಬೇಕು. ಮತ್ತು ಲಕ್ಷ್ಯವನ್ನು ಸರಿಯಾಗಿರಿಸಿಕೊಂಡು ನಡೆಯಬೇಕು. ಯಾವುದೇ ಅಡ್ಡಿ–ಆತಂಕಗಳು ಬಂದರೂ ಚಿಂತೆಯಿಲ್ಲ. ಯಾರೇ ನಿಷೇಧಿಸಲಿ, ವಿರೋಧಿಸಲಿ, ಅದರ ಗಣನೆಯಿರಕೂಡದು. ಹೀಗೆ ನಡೆಯಹತ್ತಿದ ಮೇಲೆ ನಿಲ್ಲಲಾಗದು. ಇಲ್ಲವೆ ಸ್ತಂಭೀಭೂತವಾಗಬಾರದು.

ಪ್ರಾರಂಭತೇ ನ ಖಲು ವಿಘ್ನಭಯೇನ ನೀಚೈಃ
ಪ್ರಾರಭ್ಯ ವಿಘ್ನವಿಹತಾಃ ವಿರಮಂತಿ ಮಧ್ಯಾಃ
ವಿಘ್ನೈರ್ಮುಹುರ್ಮುಹುರಪಿ ಪ್ರತಿಹನ್ಯಮಾನಾಃ
ಪ್ರಾರಭ್ಯ ಉತ್ತಮಾಃ ಜನಾಃ ನ ಪರಿತ್ಯಜ್ಯಂತಿ.

ಪೃಥ್ವಿಯಲ್ಲಿ ಮುಂದೆ ಬಾಧೆಗಳು ಸಂಭವಿಸಬಹುದೆಂಬ ಭೀತಿಯಿಂದ ಕೆಲಸಕ್ಕೆ ಕೈಹಾಕದವರೇ ನೀಚರು. ಅಂಥವರೇ ಅಧಮರು; ಹೀನ ವ್ಯಕ್ತಿಗಳು. ಇನ್ನು ಕಾರ್ಯಕ್ಕೆ ಕೈಹಾಕಿದ ಬಳಿಕ ಬಾಧೆಗಳ ಉತ್ತುಂಗ ಶಿಖರವನ್ನು ಕಂಡು, ಬೆದರಿ, ಗಾಬರಿಗೊಂಡು, ಹಿಡಿದ ಕಾರ್ಯವನ್ನು ಕೈಬಿಡುವವರು ಮಧ್ಯಮ ಶ್ರೇಣಿಯ ವ್ಯಕ್ತಿಗಳೆನಿಸುತ್ತಾರೆ. ಬೇರೆ ಕೆಲವರು ಇರುತ್ತಾರೆ: ಅವರು ಕೈಹಾಕಿದರೆ ತೀರಿತು: ಹೆಜ್ಜೆ ಹೆಜ್ಜೆಗೂ ಬಾಧೆ ಬರಲಿ; ಅದರ ಗೊಡವೆ ಅವರಿಗಿರದು. ಆ ಬಾಧೆಯನ್ನು ಕಾಲಕೆಳಗೆ ಒತ್ತಿ ಪೂರ್ಣ ವಿಷಣ್ಣಗೊಳಿಸಿ ಮುನ್ನಡೆಯುತ್ತಾರೆ. ಇವರೇ ಉತ್ತಮ ಪುರುಷರು. ಇಂಥವರೇ ಪೃಥ್ವಿಯಲ್ಲಿ ಆಗುವ ಅಷ್ಟಿಷ್ಟು ಮಹಾಕಾರ್ಯ ಮಾಡುತ್ತಿರುತ್ತಾರೆ. ಶಿವನು ಸಹ ಅಂಥ ಉತ್ತಮ ಪುರುಷನಾಗಿದ್ದನು. ಶಿವನಿಗೆ ಕಠೋರತೆಯಿಲ್ಲದೆ ಅವನು ಇಷ್ಟೊಂದು ಮಹಾ-ಕಾರ್ಯಗಳನ್ನು ಮಾಡಲು ಶಕ್ತನಾಗುತ್ತಿರಲಿಲ್ಲ. ಆದರೇನು? ಶಿವನು ಎಲ್ಲದರಲ್ಲಿಯೂ ಕಠೋರನಾಗಿದ್ದನೇ ಇಲ್ಲ. ಆದರ್ಶ ಪರಿಪಾಲನೆಯಲ್ಲಿ ಶಿವನು ತುಂಬಾ ಕಠೋರನಿದ್ದನು. ಅಷ್ಟೇಕೆ? ಅವನು ಅತ್ಯಂತ ಕಠೋರನಾಗಿದ್ದನು. ಆದರೆ ವ್ಯವಹಾರದಲ್ಲಿ, ಮನುಷ್ಯರೊಂದಿಗಿನ ಸಂಪರ್ಕದಲ್ಲಿ ಅವನು ತುಂಬಾ ಕೋಮಲನಾಗಿದ್ದನು. ಕಠೋರತೆ ಮತ್ತು ಕೋಮಲತೆಗಳ ಇಂಥ ಸಮ್ಮಿಶ್ರಣವನ್ನು ಈ ಮಹೀತಲದ ಮಾನವರು ಅದಕ್ಕಿಂತ ಮೊದಲು ಕಂಡಿರಲಿಲ್ಲ. ಆದ್ದರಿಂದ ಎಲ್ಲ ಜನರು ಅವನಿಗೆ ಶಿರಬಾಗಿ, ಅವನ ಶ್ರೇಷ್ಠತ್ವವನ್ನು ಒಪ್ಪಿದ್ದರು. ಆದ್ದರಿಂದ ಹೀಗೆ ಹೇಳಬೇಕಾಗುತ್ತದೆ.

ತುಮಿ ಕೋಮಲೇ ಕಠೋರೇ ರುದ್ರ ವೀಣಾಯ
ಶಾಂತಿ ಸಾಯರೇ ಸಿಕ್ತ
ತುಮಿ ಪಾಓಯಾ ನಾ ಪಾಓಯಾರ
ಸಬ ಬೇದನಾರ ಉರ್ಧ್ವೇ
ಸದಾ ಅಛ ನಿರ್ಲಿಪ್ತ
ತುಮಿ ಮಧುರಸೇ ಪರಿಷಿಕ್ತ.

ಶಿವನ ಈ ಕೋಮಲತೆಯನ್ನು ಕೋಮಲತೆಯ ರಾಜನೆನ್ನಲಾಗಿತ್ತು. ಓರ್ವ ವ್ಯಕ್ತಿ ಬಹಳ ಶಾಂತನಾಗಿದ್ದರೆ, ಶಿಷ್ಟನಾಗಿದ್ದರೆ, ಒಳ್ಳೆಯ ಸ್ವಭಾವದಡನಾಗಿದ್ದರೆ, ಅವನೆಂಥ ಒಳ್ಳೆಯ ವ್ಯಕ್ತಿ! ಎಂದು ನಾವು ಉದ್ಗಾರ ತೆಗೆಯುತ್ತೇವಷ್ಟೇ. ಸದಾ ಶಿವನು ಕಠೋರನಾಗಿದ್ದನು. ಇದರಿಂದಾಗಿಯೇ, ಅವನು ಈ ಧರೆಯ ಮೇಲೆ ನೂತನ ದಿಗ್ದರ್ಶನ ನೀಡಬಲ್ಲವನಾಗಿದ್ದನು. ಈ ದಿಗ್ದರ್ಶನಕ್ಕಾಗಿ ಇಂದಿನ ಜನರೂ ಸಹ ಅವನಿಗೆ ಕೃತಜ್ಞರಾಗಿದ್ದಾರೆ. ಮುಂದಿನ ಕಾಲದ ಜನರೂ ಅವನಿಗೆ ಕೃತಜ್ಞರಾಗಿರಬೇಕಾಗುವುದು. ಈ ಮಹೀತಲದ ಮೇಲೆ ಮಾನವ ರೂಪ ಹೊತ್ತ ಜೀವಿಗಳಿರುವ ವರೆಗೆ ಈ ಕೃತಜ್ಞತೆಯು ಮುಗಿಯಲಾರದು; ಮುಗಿಯುವುದೂ ಇಲ್ಲ.

ಕೋಮಲತೆ ಮತ್ತು ಕಠೋರತೆಗಳ ಪ್ರತಿರೂಪವಾಗಿದ್ದ ಸದಾಶಿವನು ಮಾನವರಿಗೆ ನೀಡಿದ ಅತಿ ದೊಡ್ಡ, ಕೊಡುಗೆಯೆಂದರೆ, ಧರ್ಮಬೋಧೆ. ಇಲ್ಲಿ ನಾವು ನೆನಪಿನಲ್ಲಿಡಬೇಕಾದ ಸಂಗತಿಯೆಂದರೆ, ಶಿವನ ಕಾಲದಲ್ಲಿ ಆರ್ಯ ಜನರು ಭಾರತದಲ್ಲಿ ಬಂದಿದ್ದರು; ಇನ್ನೂ ಬರಹತ್ತಿದ್ದರು; ಆ ಮೇಲೆ ಬರುವ ತಯ್ಯಾರಿ ನಡೆಸಿದ್ದರು. ಅವರಲ್ಲಿ ಯಾವುದೇ ವಿಧಿ–ಬದ್ಧವಾದ ಧರ್ಮಬೋಧೆಯಾಗಲಿ, ಧರ್ಮಚೇತನವಾಗಲಿ, ಇಲ್ಲವೆ ಧರ್ಮ ವಿಷಣವಾಗಲಿ ಇರಲಿಲ್ಲ. ಒಬ್ಬೊಬ್ಬ ಋಷಿಯು ಒಂದೊಂದು ರೀತಿಯ ಮಾತನಾಡಿದ್ದನಷ್ಟೇ.

'ವೇದಾಃ ವಿಭಿನ್ನಾಃ ಸ್ಮೃತಯೋವ್ವಿಭಿನ್ನಾಃ
ನೈಕಃ ಮುನಿರ್ಯಸ್ಯ ಮತಂ ನ ಭಿನ್ನಮ್'

ವೇದಗಳು ವಿಭಿನ್ನವಾಗಿದ್ದವು: ಸ್ಮೃತಿಗಳೂ ವಿಭಿನ್ನವಾಗಿದ್ದವು, ತಮ್ಮ ಮತಗಳಲ್ಲಿ ಭಿನ್ನತೆಯಿಲ್ಲದ ಋಷಿಗಳಾರೂ ಇರಲಿಲ್ಲ.

ನಾನು ಈ ಮುನ್ನ ಹೇಳಿದಂತೆ, ಒಂದೊಂದು ಬೆಟ್ಟದ ಮೇಲೆ ಒಂದೊಂದು ಜನಗೋಷ್ಠಿ ವಾಸಿಸುತ್ತಿತ್ತು. ಮತ್ತು ಅವರ ಮುಖಂಡನಿಗೆ ಋಷಿ ಎನ್ನುತ್ತಿದ್ದರು. ಅವನ ಹೆಸರಿನಿಂದಲೇ ಗೋತ್ರ ನಿರ್ಧಾರವಾಗುತ್ತಿತ್ತು. ಅದೇ ಮೇರೆಗೆ, ಪಿತೃಶಾಸಿತ ಸಮಾಜ ವ್ಯವಸ್ಥೆ ರೂಢಗೊಂಡ ಮೇಲೆ, ಒಂದು ಗೋತ್ರದ ವ್ಯಕ್ತಿ ಜೋರು–ಜುಲುಮೆಯಿಂದ ಇನ್ನೊಂದು ಗೋತ್ರದ ಕನ್ನೆಯನ್ನು ಅಪಹರಿಸಿ, ತನ್ನ ಗೋತ್ರದಲ್ಲಿ ತರುತ್ತಿದ್ದನು. ಅಂದರೆ ತಾನಿರುವ ಬೆಟ್ಟಕ್ಕೆ ತರುತ್ತಿದ್ದನು. ಆದ್ದರಿಂದ ವಿವಾಹದೊಂದಿಗೆ ಹುಡುಗಿಯರ ಗೋತ್ರಗಳೂ ಬದಲಾಗುತ್ತಿದ್ದವು. ಇದರಿಂದ ಕನ್ನೆಯರು ಗೋತ್ರಾಂತರಿತರಾಗುತ್ತಿದ್ದರು. ಮತ್ತು ಒತ್ತಾಯದ ಹೊಡೆದಾಟ, ಕಾಳಗಗಳ ನಂತರವೇ ಇಂಥ ಪರಿವರ್ತನೆಯಾಗುತ್ತಿತ್ತು. ಎರಡು ಜನಗೋಷ್ಠಿಗಳ ನಡುವೆ ಕಾಳಗವಾಗುತ್ತಿತ್ತು. ಕಾಳಗದಲ್ಲಿ ಸೋತ ಪಕ್ಷದ ಪುರುಷರು, ವಿಜಯಿಗಳ ಕೃತದಾಸರಾಗುತ್ತಿದ್ದರು. ಮತ್ತು ಹುಡುಗಿಯರು ವಿಜಯಿಗಳ ಮನೆಯ ದಾರಿ ಹಿಡಿಯುತ್ತಿದ್ದರು. ಇನ್ನು ವಿಜಯಿಗಳಾದವರು ಆ ಬೆಟ್ಟವನ್ನು, ಆ ಗೋತ್ರವನ್ನು, ವಶಪಡಿಸಿ

ಕೊಳ್ಳುತ್ತಿದ್ದರು. ಗೋತ್ರಗಳ ಕೆಳಗೆ ಚಿಕ್ಕಪುಟ್ಟ ಉಪಗೋಷ್ಠಿಗಳಿರುತ್ತಿದ್ದವು. ಅವುಗಳಿಗೆ 'ಪ್ರವರ'ಗಳೆನ್ನುತ್ತಿದ್ದರು. ಸೋತ ಗೋತ್ರ ಮತ್ತು ಪ್ರವರಗಳ ಹುಡುಗಿಯರನ್ನು ಒತ್ತಾಯದಿಂದ ಹಿಡಿದು ತರಲಾಗುತ್ತಿತ್ತು. ಕೈಗೆ ಕಬ್ಬಿಣದ ಬೇಡಿಗಳನ್ನು ತೊಡಿಸುತ್ತಿದ್ದರು. ಇಂದು ಸಹ ಬಂಗಾಳ ಮತ್ತು ಉತ್ತರ ಕಡೆಗೆ ಹುಡುಗಿಯರು ತಮ್ಮ ಕೈಯಲ್ಲಿ ಕಬ್ಬಿಣದ ಬಳೆ ತೊಡುವುದುಂಟು. (ಕಲಕತ್ತೆಯ ಆಡುಭಾಷೆಯಲ್ಲಿ ಇದಕ್ಕೆ 'ನೋಆ' ಎನ್ನುತ್ತಾರೆ) ಅದು ಆ ಕನ್ನೆಯರ ಆಧೀನತೆಯ ಮತ್ತು 'ದಾಸಿತ್ವದ ಪ್ರತೀಕವಾಗಿದೆ. ನೀವೆಲ್ಲ ಇದನ್ನು ತಿಳಿದುಕೊಳ್ಳಿರಿ. ಆಕ್ರಮಣಕಾರಿ ಪುರುಷನು, ಆ ಬೆಟ್ಟವನ್ನು ಗೆದ್ದು, ಅದನ್ನು ವಶಪಡಿಸಿಕೊಳ್ಳುತ್ತಿದ್ದನು. ಮತ್ತು ಅಲ್ಲಿಯ ಹುಚುಗಿಯರನ್ನು ಕಟ್ಟಿಹಾಕಿ ತರುತ್ತಿದ್ದನು. ಕಲಕತ್ತೆ ಪ್ರದೇಶದಲ್ಲಿ ಇಂದಿಗೂ ಸಹ, ಕಟ್ಟಿ ಹಾಕುವ ಈ ಪದ್ಧತಿಗೆ 'ಗಾಂಠ ಛಡಾ' (ಗಂಟು ಹಾಕುವುದು) ಎನ್ನುತ್ತಾರೆ. ಹಾಗೆ ನೋಡಿದರೆ ಇದು ಅಪಮಾನಕರ ಜೀವನವೇ ಆಗಿದೆ. ಅಂದರೆ ಸೋತ ಗೋತ್ರಕ್ಕೆ ಇದು ಅಪಮಾನಕರ ಜೀವನವಾಗಿದೆ. ವಿಶೇಷವಾಗಿ ಪರಾಜಿತ ಗೋತ್ರದ ನಾರಿಯರಿಗಾಗಿ ಇನ್ನೂ ಹೆಚ್ಚು ಅಪಮಾನದ ಜೀವನವಾಗಿದೆ. ಆ ಕಾಳಗಗಳಲ್ಲಿ ಪುರುಷರು ಅನೇಕ ಸಲ ನಾರಿಯರ ಹಣೆಯಲ್ಲಿ ಚಿಕ್ಕ ಕೊಡಲಿಯಿಂದ ರಕ್ತ ಹರಿಸುತ್ತಿದ್ದರು. ತಲೆಯಲ್ಲಿ ಸುರಿಯುತ್ತಿದ್ದ ರಕ್ತದ ಪ್ರತೀಕವಾಗಿ ಇಂದು ಸಹ ಕುಂಕುಮ ಹಚ್ಚುತ್ತಾರೆ. ಏನೇ ಆಗಲಿ, ಶಿವನು ಶೈವ–ವಿವಾಹ ಮೂಲಕ ಮಾನವ ಜೀವನದ ಅಪಮಾನದ ಆ ಅಧ್ಯಾಯಕ್ಕೆ ಇತಿಶ್ರೀ ಹಾಡಲು ಇಚ್ಛಿಸಿದನು.

ಈಗ ಧರ್ಮಜೀವನ ಕುರಿತು ಹೇಳುತ್ತಿದ್ದೆ. ಗೋತ್ರ–ಗೋತ್ರಗಳಲ್ಲಿ ಸಂಘರ್ಷ ನಡೆಯುತ್ತಿತ್ತು. ಋಷಿಗಳು ಹೇಗೆ ಹೇಳುತ್ತಿದ್ದರೋ, ಜನಸಾಮಾನ್ಯರು ಹಾಗೆಯೇ ನಡೆದುಕೊಳ್ಳುತ್ತಿದ್ದರು. ಋಷಿಗಳ ವಕ್ತವ್ಯವನ್ನು 'ಆರ್ಷಮತ' ಇಲ್ಲವೆ 'ಆರ್ಷ ಧರ್ಮ'ವೆನ್ನುತ್ತಿದ್ದರು. ಅವರಿಗೆ ತಮ್ಮದೇ ಆದ ಧರ್ಮವಿರಲಿಲ್ಲ. ಬೇರೆ ಬೇರೆ ಋಷಿಗಳು, ಬೇರೆ ಬೇರೆ ಮುನಿಗಳು ಸಾರಿದ, ಬೇರೆ ಬೇರೆ ಮತಗಳ ಸಮೂಹದಿಂದ ಆರ್ಷ ಮತ ಇಲ್ಲವೆ ಆರ್ಷಧರ್ಮವು ಮೂಡಿ ಬಂದಿತು. ಇನ್ನು ಇದಾದರೂ ಕಾಲ ಕಾಲಕ್ಕೆ ಬೇರೆ ಬೇರೆಯಾಗುತ್ತಿತ್ತು. ಋಗ್ವೇದದ ಕಾಲಕ್ಕೆ ಒಂದು ತೆರನಾದ ಆರ್ಷಮತವಿತ್ತು. ಯಜುರ್ವೇದದ ಸಮಯದಲ್ಲಿ ಇನ್ನೊಂದು ಪ್ರಕಾರದ ಆರ್ಷಮತವಿತ್ತು. ಅದೇ ಮೇರೆಗೆ, ಅಥರ್ವ ವೇದದ ಕಾಲಕ್ಕೆ ಬೇರೊಂದು ರೀತಿಯ ಆರ್ಷಮತವಿತ್ತು. ವೇದ ಕ್ಕಾನುಸಾರ ಈ ಮತವು ಬದಲಾಗುತ್ತಿತ್ತು. ಮಂತ್ರಪಾಠದ ಸಂಪ್ರದಾಯವು ಸಹ ವೇದಕ್ಕನುಸರಿಸಿ ಬದಲಾಗುತ್ತಿತ್ತು. ಅಕ್ಷರದ ಉಚ್ಚಾರಣವು ಸಹ ವೇದಕ್ಕನುಸರಿಸಿ ಬದಲಾಗುತ್ತಿತ್ತು. ಹೇಗೆಂದರೆ ಬಂಗಾಳದಲ್ಲಿ ಮುಖ್ಯವಾಗಿ ಯಜುರ್ವೇದೀಯ ಉಚ್ಚಾರಣ ಪ್ರಚಲಿತವಿದೆ. ಗುಜರಾತ ಭಾಷೆಯಲ್ಲಿ ಮುಖ್ಯವಾಗಿ ಋಗ್ವೇದೀಯ ಉಚ್ಚಾರಣೆಯು ರೂಢಿಯಲ್ಲಿದೆ. ಅರ್ಥಾತ್ ಕಾಲಕ್ಕನುಸರಿಸಿ ಪರಿವರ್ತನೆಯಾಗುತ್ತಿರುತ್ತದೆ.

ಇದಲ್ಲದೆ, ಮಂತ್ರದ ಉಚ್ಚಾರಣೆಯು ಹೀಗಿದೆ:

ಸಹಸ್ರ ಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್

ಸಭೂಮಿ ರ್ವಿಶ್ವತೋ ವೃತ್ವಾತ್ಯತಿಷ್ಠ ದ್ದಶಾಂಗುಲಮ್

ಕೆಲವು ವೇದಗಳು ಹೀಗೂ ಹೇಳುತ್ತಿವೆ:

ಸ ಭೂಮಿಂ ಸರ್ವತೋ ಸ್ಪೃತ್ವಾ ಅತ್ಯತಿಷ್ಠ ದ್ದಶಾಂಗುಲಮ್.

ಕೆಲವರು ಹೀಗೆ ಹೇಳುತ್ತಾರೆ:

'ಸರ್ವತೋ ವೃತ್ವಾತ್ಯ ತಿಷ್ಠದ್ದಶಾಂಗುಲಮ್'

ಈ ರೀತಿ ಮಂತ್ರಗಳಲ್ಲಿ ಭೇದವಿದೆ.

ಆದರೂ ಭಾರತದ ನಿವಾಸಿಗಳಾದ ಅನಾರ್ಯರ ಆರ್ಯಕರಣವು ನಡೆಯಲಿಲ್ಲ. ಅವರನ್ನು ಆರ್ಯರ ದಾಸರಾಗಿಸುತ್ತಿದ್ದರು. ಮತ್ತು ಆರ್ಯರ ಮಂತ್ರದ ಮತ್ತು ವೇದದ ನಿಯಂತ್ರಕ ಮಂತ್ರವಾದ 'ಓಂ'ದ ಪಾಠ ಮಾಡುವುದನ್ನು ಅನಾರ್ಯರಿಗೆ ನಿಷಿದ್ಧಗೊಳಿಸಲಾಯಿತು. ಆ ಬಳಿಕ ನಾರಿಯರು ತಮ್ಮ ಮಾನ–ಮರ್ಯಾದೆಗಳನ್ನು ಕಳೆದುಕೊಂಡು ಕುಳಿತ ಮೇಲೆ,ಆ ನಾರಿಯರಿಗೂ 'ಓಂ' ಮಂತ್ರದ ಉಚ್ಚಾರಣೆಯನ್ನು ನಿಷೇಧಿಸಲಾಯಿತು. ಅನಾರ್ಯರು ಮತ್ತು ನಾರಿಯರು,'ಓಮ್' ಮಂತ್ರದ ಬದಲು 'ನಮಃ' ಶಬ್ದದ ಉಚ್ಚಾರಣೆ ಮಾಡುತ್ತಿದ್ದರು. ಈ ಭೇದ ಬುದ್ಧಿಯ ಮೇಲೆ ಆ ಕಾಲದ ಆರ್ಷಮತ ಅರ್ಥಾತ್ ಆರ್ಷಧರ್ಮವು ನಿಂತಿತ್ತು. ಅದು ಹೆಚ್ಚಾಗಿ ಒಂದು ರೀತಿಯ ಭೌಗೋಲಿಕ ಅಂಟು ಭಾವನೆ ಮತ್ತು ಅಲ್ಲಲ್ಲಿ ಸಾಮಾಜಿಕ ಅಂಟು ಭಾವನೆಗಳ ಅನುಸರಣೆಯೇ ಆಗಿತ್ತು. ಹೀಗೆಲ್ಲ ನಡೆದಿತ್ತು. ಇದು ಸರಿಯಾದ ಧರ್ಮವಲ್ಲವೆಂದು ಶಿವನು ಕಂಡುಕೊಂಡನು. ಶಿವನು ಮನುಷ್ಯರ ಮನವನ್ನು ಒಳಹೊಕ್ಕು ನೋಡಿದನು. ಮಾನವನು ಸಂಪೂರ್ಣ ಪ್ರಶಾಂತಿಯನ್ನು ಇಚ್ಛಿಸುತ್ತಿರುವನೆಂಬುದನ್ನು ಕಂಡುಕೊಂಡನು. ಮಾನವನು ಸಾಧಾರಣ ಸುಖವನ್ನಷ್ಟೇ ಬಯಸುವುದಿಲ್ಲ. (ಸುಖಕ್ಕಿಂತ ಮಾನಸಿಕ ಶಾಂತಿ ಒಳ್ಳೇದು) ಮಾನವನು ಯಜ್ಞಗೆಯ್ದು, ಪಶುಹತ್ಯೆ ಮಾಡಿ ಸಹ ಶಾಂತಿ ಪಡೆಯನು. ಇದರಿಂದೇನೋ ಸುಖ ದೊರೆಯಬಹುದಷ್ಟೇ. ಮಾಂಸವನ್ನು ತಿಂದು ನಾಲಗೆಯನ್ನು ತೃಪ್ತಿಗೊಳಿಸಬಹುದು. ಆದರೆ ಶಾಂತಿ ಪಡೆಯಲಾರನು. ಆದ್ದರಿಂದ ಶಿವನು ಮಾನವನಿಗೆ, ತನ್ನೊಳಗೇ ಹೇಗೆ ಪರಮ ಪುರುಷನನ್ನು ಪಡೆಯಬಹುದೆಂಬ ಬಗ್ಗೆ ಸರಿಯಾದ ಹಾದಿ ತೋರಿದನು. ಆ ಪ್ರಾಪ್ತಿ ಮಾರ್ಗವನ್ನು ಹೇಳದಿದ್ದರೆ ಉಚಿತವಾಗುತ್ತಿರಲಿಲ್ಲ. ಅದುವೇ ಸಂಪ್ರಾಪ್ತಿಯ ಹಾದಿಯಾಗಿತ್ತು. ಪ್ರಶಾಂತಿಯ ಹಾದಿಯಾಗಿತ್ತು. ಇದರಿಂದ ಅಪರೋಕ್ಷ ಇಲ್ಲವೆ ಪ್ರತ್ಯಕ್ಷ ಅನುಭೂತಿಯನ್ನು ಸೂಚಿಸಲಾಗಿದೆ. ಶಿವನ ಈ ಮತವನ್ನೇ ಶೈವ ಮತ ಇಲ್ಲವೆ ಶೈವ ಧರ್ಮವೆಂದು ಹೇಳಲಾಗಿದೆ. ಶಿವನಿಗಿಂತ ಪೂರ್ವದಲ್ಲಿಯೇ ತಂತ್ರವಿತ್ತು; ಆದರೆ ಒಂದು ತರಹದ ವಿಕ್ಷಿಪ್ತ ರೂಪದಲ್ಲಿತ್ತು. ಅದಕ್ಕಾವ ಛಂದಬದ್ಧ ರೂಪವಿರಲಿಲ್ಲ. ಈಗ ಸ್ವಲ್ಪ ಮುಂಚೆ ಹೇಳುತ್ತಿದ್ದೆ. ಏನೆಂದರೆ– ಶಿವನು ಏನೆಲ್ಲವನ್ನೂ ನಿಯಮಬದ್ಧಗೊಳಿಸಿದನು. ಎಲ್ಲವನ್ನೂ ಛಂದ ಬದ್ಧಗೊಳಿಸಿದನು ಎಂದು. ವಿಕ್ಷಿಪ್ತವಾದ, ಬಹಳಷ್ಟು ವಿಕ್ಷಿಪ್ತವಾದ, ತಂತ್ರ ಮತ್ತು ಅದರೊಂದಿಗೆ ಆಧ್ಯಾತ್ಮಿಕ ಏಷಣೆಯ ಚರಮ ಮೂರ್ತಿಯ ಶುಭ ಸಂಯೋಗ ಮಾಡಿ, ಅವನು ಶಿವಮತದಲ್ಲಿ ಪರಿವರ್ತನೆಗೆಯ್ದನು. ಈ ಪರಿವರ್ತಿತ ಮತವು ಭೌಗೋಲಿಕ ಅಂಟು ಭಾವನೆ ಮತ್ತು ಸಾಮಾಜಿಕ ಅಂಟು ಭಾವನೆಗಳಿಗೆ ಅತೀತವಾಗಿದೆ. ಇದು

ತಂತ್ರ ಮತ್ತು ಶಿವಮತಗಳ ಸಂಮಿಶ್ರಣದಿಂದ ಸಂಭವಿಸಿತು. ಶಿವಪಥವು ವಿಷಯ ಜಗತ್ತಿನೊಂದಿಗೆ (objective world) ವಿಷಯೀ ಭಾವದ (subjective world) ಶುಭ ಸಮನ್ವಯವನ್ನು ಸ್ಥಾಪಿಸಿತು. ಅಷ್ಟಾದರೂ ಸಹ, ಆ ಪಥವು ಸಂಪೂರ್ಣವಾಗಿ ಕಾಲದ ಅಗತ್ಯವನ್ನು ತುಂಬಿ ಕೊಡದಾಯಿತು. ಇದಕ್ಕೆ ಬೇರೆ ಕಾರಣಗಳುಂಟು. ಆ ಕಾಲದಲ್ಲಿ ಅಕ್ಷರಗಳ ಅವಿಷ್ಕಾರವಾಗಲಿಲ್ಲ. ಆದ್ದರಿಂದ, ಬರೆಯುವ ಸಂಭವವಿರಲಿಲ್ಲ. ಮುಖದಿಂದ ಮುಖಕ್ಕೆ ಸ್ವಲ್ಪ ಸಾಗಿತು. ಲಿಖಿತ ರೂಪದಲ್ಲಿ ಏನೊಂದೂ ಇರಲಿಲ್ಲ. ಏಕೆಂದರೆ, ಆ ಕಾಲದಲ್ಲಿ ಅಕ್ಷರವೇ ಇರಲಿಲ್ಲ. ಆದ್ದರಿಂದ ಅನಂತರ ವೇದವು ಲಿಖಿತ ರೂಪ ಪಡೆದಾಗ, ವೇದದ ಬಹಳ ಅಂಶಗಳು ಲೋಪವಾಗಿ ಬಿಟ್ಟವು. ನಾವೆಷ್ಟೇ ಅತ್ತು ಕರೆದರೂ ಅವಲುಪ್ತವಾದ ವೇದ ಭಾಗವನ್ನು ಮರಳಿ ಪಡೆಯಲಾರದಾದೆವು. ಅದೇ ರೀತಿ, ಶಿವನ ಬಹಳಷ್ಟು ಉಪದೇಶವು ಇಂದು ನಷ್ಟವಾಗಿದೆ, ಮಾನವನಿಗೆ ಆ ಕಾಲಕ್ಕೆ ಅಕ್ಷರ ಜ್ಞಾನವಿರಲಿಲ್ಲವಾದ್ದರಿಂದ.

ಶೈವ ತಂತ್ರ ಮಾರ್ಗವು ಒಂದೆಡೆ ಮಾನವನನ್ನು ಚರಮ ಸತ್ತೆಯತ್ತ ಕರೆದೊಯ್ಯುತ್ತಿದೆ. ಇನ್ನೊಂದೆಡೆಗೆ ವ್ಯಾವಹಾರಿಕ ಜಗತ್ತಿನ ಉಪೇಕ್ಷೆಯನ್ನೂ ಮಾಡುವುದಿಲ್ಲ. ವ್ಯಾವಹಾರಿಕ ಜಗತ್ತಿನೊಂದಿಗೆ ಸಾಮಂಜಸ್ಯವನ್ನು ಒಪ್ಪಿಕೊಂಡು ಸಾಗುತ್ತದೆ. ಇದರ ಶಿಕ್ಷಣ ನೀಡುತ್ತ ಸಾಗುತ್ತದೆ. ಶಿವನು ಹೀಗೆ ಹೇಳುತ್ತಾನೆ. 'ವರ್ತಮಾನೇಷು ವರ್ತೇತ'.ನೀನು ಮನದ ಒಳಗೆ, ಆತ್ಮದೊಳಗೆ,ಪಾರುಗಾಣುವ ಯತ್ನ ಮಾಡು. ನಡೆ ಮುಂದೆ, ನಡೆ ಮುಂದೆ. 'ಚರೇವತಿ, ಚರೇವತಿ'.ಆದರೆ ಹೊರಜಗತ್ತನ್ನು ಉಪೇಕ್ಷಿಸುವುದರಿಂದ ನಿನ್ನ ಒಳಜಗತ್ತಿನ ಶಾಂತಿಗೆ ವಿಘ್ನ ಬರಬಹುದು. ಹೀಗೆ ಇದುವೇ ಭಾರತದ ಪ್ರಾಣಧರ್ಮವಾಯಿತು ಮತ್ತು ಪ್ರಾಚೀನ ಧರ್ಮವಾಯಿತು. ಇಲ್ಲಿ ಅನಾರ್ಯರ ಉಪೇಕ್ಷೆಯೂ ಇಲ್ಲ; ಸ್ತ್ರೀಯರ ಉಪೇಕ್ಷೆಯೂ ಇಲ್ಲ. ಅನ್ನಯಜ್ಞದ ಉಪೇಕ್ಷೆಯೂ ಇಲ್ಲಿಲ್ಲ. ವೈದಿಕ ಯುಗದಲ್ಲಿ ಸ್ತ್ರೀಯರ ಉಪೇಕ್ಷೆಯಾಗುತ್ತಿತ್ತು. ಸ್ತ್ರೀಯರನ್ನು ಕೇವಲ ಸಾಮಾನ್ಯ ಭೋಗದ ವಸ್ತುವೆಂದು ಕಾಣುತ್ತಿದ್ದರು. ಮುಂದೆ ಶೈವ ಯುಗದಲ್ಲಿ 'ಸ್ತ್ರೀ ಜಾತಿಯು ಮಾತೃ ಜಾತಿ' ಎಂಬ ಘೋಷಣೆ ನಿನದಿಸಿತು. ಬಂಗಾಲದಲ್ಲಿ ಶಿವನ ಪ್ರಭಾವವು ವಿಶೇಷವಿತ್ತು. ಇಂದೂ ಸಹ ಅಪರಿಚಿತ ಸ್ತ್ರೀಯರನ್ನು 'ಮಾ' (ತಾಯಿ) ಎಂದೇ ಸಂಬೋಧಿಸುವ ರೂಢಿಯುಂಟು. ಇಂದು ಸಹ ಮಾಸೀಗೆ (ತಾಯಿಯ ಸೋದರಿ) ಮಾಸೀಮಾ ಎಂದೂ ಪಿಸೀಗೆ (ತಂದೆಯ ಸೋದರಿ) ಪಿಸೀಮಾ ಎಂದು ಕರೆಯುತ್ತಾರೆ. ಅಂದರೆ ಎಲ್ಲ ಶಬ್ದಗಳ ಕೊನೆಗೆ ಮಾ (ತಾಯಿ–ಅವ್ವ) ಜೋಡಿಸಿ, ಸ್ತ್ರೀಯರಿಗೆ ವಿಶೇಷ ಸನ್ಮಾನ ತೋರಲಾಗಿದೆ. ಆದ್ದರಿಂದ, ಪಿತೃ–ಶಾಸಿತ ಪದ್ಧತಿಯು (patriarchal order) ಕಿಂಚಿತ್ ಪರಿಮಾಣದಲ್ಲಾದರೂ ಇರುವುದರ ಫಲವಾಗಿ, ಬಂಗಾಲದ ಯುವತಿಯರು ಪಿತೃ–ಕುಲದಿಂದ ಸಂಪೂರ್ಣವಾಗಿ ಆಗಲಿ ಹೋಗುವುದಿಲ್ಲ. ವಿವಾಹದ ನಂತರ ಗೋತ್ರ ಮಾತ್ರ ಬದಲಾಗುತ್ತದೆ. ಆ ಬಳಿಕ ಸಹ ಪಿತೃಕುಲದೊಂದಿಗೆ ಮರಳಿ ಅವಳ ಸಂಪರ್ಕ ಉಳಿಯುತ್ತದೆ. ಈ ಕಾರಣದಿಂದಾಗಿಯೇ, ಬಂಗಾಲದಲ್ಲಿ ಮಗನಿಲ್ಲದ ಸೋದರ ಮಾವನ ಸಂಪತ್ತು ಸೋದರಿಗೆ ದೊರೆಯುತ್ತದೆ.

ಶಿವನ ಧರ್ಮವೆಂದರೆ ಪರಮ ಪುರುಷನನ್ನು ಪಡೆಯುವ ಧರ್ಮವೇ ಆಗಿದೆ. ಅದಕ್ಕೆ ಬೇರಾವ ಹೆಸರಿಟ್ಟು ಕರೆದರೂ ನಡೆಯದು. ಇದು ಯಜ್ಞದಲ್ಲಿಯದರಂತೆ ತುಪ್ಪದ ಆಹುತಿ ನೀಡುವುದಾಗಲಿ; ಪಶುವಿನ ರಕ್ತದ ಆಹುತಿ ನೀಡುವುದಾಗಲಿ; ಇಂಥ ಇತರ ತುಚ್ಛ ಆತ್ಮತೃಪ್ತಿಯ ಮಾರ್ಗವಲ್ಲ. 'ಧರ್ಮವು ಪರಮ ಸಂಪ್ರಾಪ್ತಿಯ ಮಾರ್ಗ; ಪಾಶವೀ ಸುಖದ ಮಾರ್ಗವಲ್ಲ', ಎಂದು ಶಿವನು ಸಿಡಿಲು ಗುಡುಗಿದಂತೆ, ಘೋಷಿಸಿದನು.

"ದೀಪ್ತ ಹೃದ್ದೇಶೇ ಹಿಂಸಾ ಅನಲ ಕಲಯಾರ್ಣೇ ಮತಿ ನಾಈ,
ಬೋಗ ಹುತಾಶನ ಜ್ವಲಿಶೇ ಭೀಷಣ ಸಕಲಿ ಕರಿಶೇ ಛಾಈ,
ನಾಹಿ ಭಕ್ತಿ... ಕುಸುಮ ಕ್ಷೇಮ, ನಾಹಿ ಮದಾರ ಸಿಂಗ ಪ್ರೇಮ,
ಶಮಶಾನ... ಅಂಧಾರ ಹೇರಿ ಚಾರಿಧಾರ ಕೋಥಾ ಏ ಅಲೋಕ ವಾಈ,
ಭೋಗ... ಹತಾಶನ ಜ್ವಲಿಶೇ ಭೀಷಣ ಸಕಲಿ ಕರಿಶೆ ಛಾಈ,
ವೃಥಾ ಯಜ್ಞರೇ ಅನುಷ್ಠಾನ ಶತ ನಿಷ್ಠುರ ಬಲಿದಾನ,
ಧರ್ಮೇರ ಮಾನೆ ವಾಸನಾ ದಾನವೀ ಮಾನವೇ ಪೂಜಿಶೆ ತಾಈ
ಭೋಗ... ಹತಾಶನ ಜ್ವಲಿಶೇ ಭೀಷಣ ಸಕಲಿ ಕರಿಶೇ ಛಾಯಿ"

ಸಮಸ್ತ ಕರ್ಮಗಳ ಏಷಣವನ್ನು ಈಶ್ವರನತ್ತ ತಿರುಗಿಸಿ ಸಾಗುವುದೇ ಧರ್ಮದ ಪೂರ್ಣತೆಯಾಗಿದೆ. ನಾನೀ ಮುನ್ನವೇ ಹೇಳಿದಂತೆ, ಶಿವನು ಕೋಮಲ–ಕಠೋರನಾಗಿದ್ದನು. ವ್ಯಾವಹಾರಿಕ ಜಗತ್ತಿನಲ್ಲಿ ಕೋಮಲ; ಅತಿ ಕೋಮಲ; ಹೆಚ್ಚೇನು? ಕುಸುಮಾದಪಿ ಕೋಮಲ. ಕುಸುಮಕ್ಕಿಂತಲೂ ಕೋಮಲ. ಇದೇ ಮೇರೆಗೆ ಶಿವನ ನೀತಿಯಿತ್ತು. ಮಾನವನು ಇದನ್ನು ಮರೆತು ತಪ್ಪು ಮಾಡುತ್ತಿದ್ದನು. ಮಾನವ ನಾದರೋ ದೇವತೆಯಲ್ಲ. ವೈದಿಕ ದೇವತೆಗಳಾದ ಇಂದ್ರ, ಅಗ್ನಿ, ವರುಣ ಮುಂತಾದವರೂ ಸಹ ಮರೆತು ತಪ್ಪು ಮಾಡುತ್ತಾರೆ. ಅಂದ ಮೇಲೆ ಸಾಧಾರಣ ಮಾನವ ನಂತೂ ತಪ್ಪು ಮಾಡಿಯೇ ಮಾಡುತ್ತಾನೆ. ಶಿವನು ಸಾಮಾನ್ಯ ಮಾನವನ ಮನಸ್ಸಿನ ಸ್ಥಿತಿಯನ್ನರಿತು ನಡೆಯುತ್ತಿದ್ದನು. ಇಂದು ಒಬ್ಬನು ತಪ್ಪಬಹುದು. ನಾಳೆ ಸುಧಾರಿಸಿಕೊಳ್ಳುತ್ತಾನೆ. ಇಂದು ದಾರಿ ನಡೆದು ನಡೆದು, ಬಟ್ಟೆಬರೆಯೆಲ್ಲ ಧೂಳಿ ಮುತ್ತಿದ ಮಾನವನು, ನಾಳೆ ತೊಳೆದ ಬಟ್ಟೆ ಹಾಕುವ ಸುಯೋಗವನ್ನು ಪಡೆಯಲಾರನೆಂದು ಹೇಳುವುದು ಹೇಗೆ? ಇದುವೇ ಶಿವನ ನೀತಿಯಾಗಿತ್ತು. ಯಾರು ಅನ್ಯಾಯವೆಸಗುವರೋ, ಅವರ ವಿರುದ್ಧ ತ್ರಿಶೂಲವೆತ್ತಿ ಆಘಾತ ಮಾಡು. ಯಾವ ಘಳಿಗೆಯಲ್ಲಿ ಅವನು ತನ್ನ ತಪ್ಪನ್ನು ಕಂಡುಕೊಳ್ಳುವನೋ, ಆ ಘಳಿಗೆಯಲ್ಲಿ ಆದರದಿಂದ ಅವನನ್ನು ಬಳಿಗೆ ಕುಳ್ಳಿರಿಸಿಕೋ. ಅರ್ಥಾತ್ ಶಿವನು ಏನೇ ಮಾಡಿದರೂ, ಅದೆಲ್ಲ ಮಾನವರ ಸಂಶೋಧನೆಗಾಗಿಯೇ ಇತ್ತು.

'ನಮಃ ಪಿನಾಕ ಹಸ್ತಾಯ ವಜ್ರ ಹಸ್ತಾಯ ನಮಃ'

ಶಿವನಿಗೆ ನಮಸ್ಕರಿಸುವಾಗ ಹೀಗೆ ನುಡಿಯುತ್ತೇವೆ. ಎಲೈ ಪಿನಾಕ ಪಾಣಿಯೇ, ನಿನಗೆ ನಮಸ್ಕರಿಸುವೆ. ಎಲೈ ವಜ್ರಧಾರಿಯೇ ನಿನಗೆ ನಮಸ್ಕರಿಸುವೆ. ಕಾರಣವಿಷ್ಟೇ.

ನಿನ್ನ ಈ ವಜ್ರವು ಮಾನವರಿಗೆ ಕಷ್ಟ ನೀಡಲಿಕ್ಕಾಗಿ ಅಲ್ಲ; ಪ್ರತಿಯಾಗಿ ಮಾನವನ ಸುಧಾರಣೆಗಾಗಿ. ಮಾನವನನ್ನು ಕಷ್ಟಕಾರ್ಪಣ್ಯಗಳಿಂದ ರಕ್ಷಿಸುವುದಕ್ಕಾಗಿ ಇದೆ. ಮತ್ತು ಮಾನವನು ಸುಧಾರಿಸಿದಂತೆಲ್ಲ ಇದೆಲ್ಲವನ್ನೂ ಮರೆಯುತ್ತಾನೆ. ಈ ಮನ–ಪ್ರಾಣಗಳಿಗೆ ಅತೀತವಾದುದೆಲ್ಲವನ್ನೂ ಮರೆತು ಬಿಡುತ್ತಾನೆ. ಆಗ ಪಾಪಿಯಾದ, ಪಾಪದ ಬೇಗೆಯಿಂದ ಬೆಂದು ಹೋದ, ಮಾನವನು ಶಿವನ ಬಳಿ ಶಿರಬಾಗಿ ಹೀಗೆ ಹೇಳುತ್ತಾನೆ. ನಿನ್ನಲ್ಲಿ ಶರಣು ಪಡೆಯದಿದ್ದರೆ ಬೇರಾರಲ್ಲಿ ಶರಣು ಪಡಯಲಿ? ಎಲೈ ಭೋಲಾನಾಥ. 'ಬೋಳೇ ಶಂಕರ'! ನಿನ್ನ ಹೊರತು ನನಗೆ ಶರಣು ನೀಡುವವ ನೆಂದರೆ ನೀನೇ. ನಾನು ಇಷ್ಟೊಂದು ಪಾಪ ಮಾಡಿದೆ. ನೀನಾದರೂ ನನ್ನನ್ನು ಸುಧಾರಿಸುವುದರೊಂದಿಗೆ ನನ್ನನ್ನು ಕ್ಷಮಿಸಿದೆ. ಎಲೈ ನೀನು ಅಶುತೋಷ. ಇಷ್ಟು ಸರಳವಾಗಿ ಸಂತುಷ್ಟನಾಗಿ ಬಿಡುವೆ. ಇನ್ನು ಆರ್ಯರು ಅಸುರರನ್ನು ಬಹಳ ಹೇಯವಾಗಿ ಕಾಣುತ್ತಿದ್ದರು. ತಿರಸ್ಕರಿಸುತ್ತಿದ್ದರು. ಆ ಅಸುರರು ಎಂದರೆ 'ಅಸರೇರಾ ಕಾರಾ'. ಪ್ರಭಾವ ಬೀರುವವರು–ಆಸೀರಿಯಾ ಎಂಬ ಹೆಸರಿನ ದೇಶವು ಮಧ್ಯ ಏಶಿಯಾ ದಲ್ಲಿತ್ತು. ಆ ದೇಶದ ಜನರು ಅನಾರ್ಯರಾಗಿದ್ದರು. ಆರ್ಯರ ಕಟ್ಟಾ ವಿರೋಧಿ ಗಳಾಗಿದ್ದರು. ಆರ್ಯ ಜನರು ಆ ಅಸುರರನ್ನು ಅತ್ಯಂತ ಹೇಯವಾಗಿ ಕಾಣುತ್ತಿ ದ್ದರು. ಇಂದಿನ ಭಾರತದ 'ಪಾಲಾಮು' ಜಿಲ್ಲೆ ಮತ್ತಿತರ ಗುಡ್ಡಗಾಡು ಪ್ರದೇಶದಲ್ಲಿ ಅಸುರ ಉಪಜಾತಿಯ ಕೆಲ ಜನರು ವಾಸಿಸುತ್ತಿದ್ದಾರೆ. ಅಸುರ ಎಂದೊಡನೆ, ಏನೋ ಇಪ್ಪತ್ತೈದು ಅಡಿ ಎತ್ತರವಿರುವ,ಪ್ರಕಾಂಡ ಕಿವಿ–ಮೂಗು–ಹಲ್ಲುಗಳಿರುವ ಜೀವಿಯೇ? ಅಲ್ಲ; ಹಾಗಲ್ಲ. ಅವನೂ ನಮ್ಮಂತೆಯೇ ಮಾನವ ಜೀವಿ, ಅಂತರವಿಷ್ಟೇ. ಅವನು ಆರ್ಷ ಧರ್ಮವನ್ನು, ಆರ್ಷ ಮತವನ್ನು, ಆರ್ಷ ದೃಷ್ಟಿಕೋನವನ್ನು ಒಪ್ಪಲಿಚ್ಛಿಸುತ್ತಿ ರಲಿಲ್ಲ. ಇಷ್ಟು ಮಾತ್ರ ಅಂತರ! ಇದರಿಂದ ಅವರನ್ನು ಕೊಂದು ಹಾಕುವುದನ್ನು ಪರಮ ಪೂಜ್ಯ ಕರ್ತವ್ಯವೆಂದು ಗಣಿಸುತ್ತಿದ್ದರು. (ಇದೆಂಥ ಅದ್ಭುತ ವ್ಯವಸ್ಥೆ!) ಈ ಅಸುರರೇ ಶಿವನಲ್ಲಿ ಶರಣು ಬೇಡುತ್ತಿದ್ದರು. ಶಿವನೂ ಅವರಿಗೆ ಶರಣು ನೀಡುತ್ತಿ ದ್ದನು. ಅಸುರರು ಶಿವನ ಬಳಿ ಸಾರಿ ಸತ್ಕೃತಿ ಗೆಯ್ಯುತ್ತಿದ್ದರು ಮತ್ತು ಶಿವನಿಂದ ವರ ಪಡೆಯುತ್ತಿದ್ದರೆಂಬುದನ್ನು ನಾವು ನೋಡುತ್ತೇವೆ. ಶಿವನು ಅವರಿಗೆ ಸಹಾಯ ನೀಡಲು ದೇವತೆಗಳ ವಿರೋಧವನ್ನೂ ಎದುರಿಸಿದ. ದೇವತೆ ಎಂದರೆ ಆರ್ಯ. ಆರ್ಯರು ಅಸುರರನ್ನು ಧ್ವಂಸಗೊಳಿಸಲು ಇಚ್ಛಿಸುತ್ತಿದ್ದರು. ಆರ್ಯರು ಆಸ್ಟ್ರೇಲಿ ಯಾದ ಮೋವುರಿ ಉಪಜಾತಿಯನ್ನು ಬಹುಶಃ ಧ್ವಂಸಗೊಳಿಸಿದಂತೆಯೇ ಭಾರತದ ಅನೇಕ ಉಪಜಾತಿಗಳನ್ನೂ ಪ್ರಾಯಃ ಧ್ವಂಸಗೊಳಿಸಿದರು. ಅದೇ ರೀತಿ, ಅಸುರ ರನ್ನೂ ಧ್ವಂಸಗೊಳಿಸಲು ಇಚ್ಛಿಸುತ್ತಿದ್ದರು. ಶಿವನು ಅವರನ್ನು ಉಳಿಸಿದನು. 'ನಾನು ಉಳಿಸದಿದ್ದರೆ, ಇವರು ಉಳಿಯುವರೇ? ಇವರು ಯಾರಲ್ಲಿ ಆಶ್ರಯ ಪಡೆಯುತ್ತಾರೆ?' ಎಂದು ಶಿವನು ಯೋಚಿಸಿದನು. ಆರ್ಯರು ಶ್ರೇಷ್ಠ; ಅಸುರರು ಅಶ್ರೇಷ್ಠರು; ಎಂಬ ಮಾತು ಒಪ್ಪಲರ್ಹವಲ್ಲ. ಈ ಕುರಿತು ನನಗಾರೂ ಯುಕ್ತಿ ಸಂಗತವಾಗಿ ತಿಳಿಸಿ ಹೇಳಿಲ್ಲ. ಈ ತೆರನಾದ ಆರ್ಯ–ಅನಾರ್ಯರ ಸಂಘರ್ಷದ ಅವಸ್ಥೆ ಯಲ್ಲಿ ಶಿವನು ಅವಿರ್ಭವಿಸಿದನು. ಆರ್ಯ, ಅನಾರ್ಯ ಮಂಗೋಲಿಯನ್ ಮತ್ತಿತರ

ಎಲ್ಲ ಗೋಷ್ಠಿಗಳ ಮಾನವರು ಶಾಂತಿಪೂರ್ಣ ಭಾವದಿಂದ ಬಾಳಲಿ; ಎಂದು ಶಿವನು ಸದಾಕಾಲ ಇಚ್ಛಿಸಿದ ಮತ್ತು ಅಂತೆಯೇ ಮಾಡಿದ. ಇದನ್ನು ಶಾಂತಿಪೂರ್ಣ ಭಾವ ದಿಂದ ವಾಸಿಸಲು, ಒಂದು ಚರಮ ಆದರ್ಶವನ್ನು ಗ್ರಹಿಸಲೇಬೇಕಾಗುತ್ತದೆ. ಆ ಕಾರಣ ದಿಂದ, ಆದರ್ಶಗಳಲ್ಲಿ ಹೊಡೆದಾಟವಿದ್ದರೆ, ಮಾನವ–ಮಾನವರಲ್ಲೂ ಹೊಡೆದಾಟ ಉಳಿದೇ ತೀರುತ್ತದೆ. ಹೀಗಾಗಿ ಶಾಂತಿಪೂರ್ಣ ಸಹ-ಅಸ್ತಿತ್ವವು ಸಾಧ್ಯವಾಗದು. ಈ ಮೇರೆಗೆ, ಶಿವನು ಒಂದು ಆದರ್ಶವಿರಿಸಿಕೊಳ್ಳುವ ಬಗೆಗೆ ಎಲ್ಲರಿಗೂ ಒಂದು ಕಥೆ ಯನ್ನು ಬೋಧಿಸಿದನು...ನೀವೆಲ್ಲ ಪರಮ ಪಿತನ ಸಂತಾನ. ನೀವು ಈ ಅಧಿಕಾರದಲ್ಲಿ ಪ್ರತಿಷ್ಠಿತರಾಗುವಿರಿ. ಆದರ್ಶದಲ್ಲಿ ಪೂರ್ಣವಾಗಿ ನೆಲೆಸಿರಿ. ಆದಕ್ಕಾಗಿ ನಿಮಗೆ ಸಹಾಯ ಸಲ್ಲಿಸಲು ನಾನು ಎಲ್ಲ ಕಾಲದಲ್ಲಿಯೂ ಪ್ರಸ್ತುತವಿರುತ್ತೇನೆ!

ಪ್ರವಚನ ೩

ಶಿವ-ಪರಿಕ್ರಮ

ನಾನು ಮೇಲಿಂದ ಮೇಲೆ ಹೇಳುತ್ತಿರುವಂತೆ ಶಿವನ ಕರ್ಮಕ್ಷೇತ್ರವು ಮತ್ತು ಶಿವನದೆನ್ನುವುದೆಲ್ಲ ಸರ್ವಾನುಸ್ಯೂತವಾಗಿದೆ. ಶಿವನು ಆ ಕಾಲದ ಮಾನವ ಜೀವನದ ಯಾವ ಕ್ಷೇತ್ರವನ್ನೂ ಬಿಟ್ಟಿರಲಿಲ್ಲ. ಸ್ಪಂದನದ ಮೇಲಿಂದ ಅಸ್ತಿತ್ವವನ್ನು ನಿರ್ಧರಿಸುತ್ತಾರೆ. ಇನ್ನು ಶ್ವಾಸ, ನಿಶ್ವಾಸಗಳ ಮಾತ್ರೆಯ ಮೇಲೆ ಸ್ಪಂದನವಿದೆ. ಮಾನವನು ದಿನಂಪ್ರತಿ ಇಪ್ಪತ್ತೊಂದು ಸಾವಿರದಿಂದ ಇಪ್ಪತ್ತೈದು ಸಾವಿರ ಸಲ ಶ್ವಾಸ–ನಿಃಶ್ವಾಸ ಕ್ರಿಯೆ ಮಾಡುತ್ತಾನೆ. ಮನಸ್ಸು ಮತ್ತು ಆತ್ಮದ ಮೇಲೆ ಈ ಶ್ವಾಸ–ನಿಃಶ್ವಾಸಗಳ ಪ್ರಭಾವ ಬೀಳುತ್ತದೆ. ನೀವು ಓಡಹತ್ತಿದರೆ ಶ್ವಾಸ-ನಿಃಶ್ವಾಸಗಳು ತ್ವರೆಯಿಂದ ಜರುಗುತ್ತವೆ. ಆ ಕಾಲಕ್ಕೆ ನೀವು ಸರಿಯಾಗಿ ಚಿಂತನ ಮಾಡಲಾರಿರಿ. ಮತ್ತು ಬೇರೆ ಬೇರೆ ಇಂದ್ರಿಯಗಳು ನಾಲಗೆ, ಮೂಗು ಮೊದಲಾದವುಗಳು ಸರಿಯಾಗಿ ಕೆಲಸ ಮಾಡಲಾರವು. ಈ ಕಾರಣದಿಂದ ಸ್ಪಾಂದನಿಕ ಕ್ರಿಯೆಯೂ ಹೆಚ್ಚುತ್ತದೆ. ಮತ್ತು ತತ್ಫಲವಾಗಿ ಸ್ಥಿರತೆಯು ಕುಂಠಿತವಾಗುತ್ತದೆ. ಹೀಗಾಗಿ ಮಾನವನು ವಿಕಾಸದ ಸಮಯದಲ್ಲಿ ಕಾರ್ಯವನ್ನೂ ಮಾಡನು; ಅತ್ತ ಸಂಕೋಚದ ಸಮಯದಲ್ಲಿ ಅನುಭವ ಪಡೆಯುವುದೂ ಇಲ್ಲ. ಹಾಗಾದರೆ ಆ ಸಮಯದಲ್ಲಿ ಸಂಕೋಚ ಕಾಲದ ಅವಧಿಯು ಕಡಿಮೆಯುಂಟು. ಈ ಅನುಭೂತಿ ಸ್ಫುಟವಾಗಿರದು. ಈ ಶ್ವಾಸ–ಪ್ರಶ್ವಾಸಗಳ ಬರುವಿಕೆಯು ಬಲನಾಸಿಕ, ಎಡನಾಸಿಕ ಮತ್ತು ಉಭಯ ನಾಸಿಕಗಳ ಭೇದದಿಂದ ಮನುಷ್ಯನ ಮೇಲೆ ವಿಭಿನ್ನ ರೀತಿಯಲ್ಲಿ ಪ್ರಭಾವ ಬೀರುತ್ತದೆ. ಯಾವಾಗ ವಾಮ, ಯಾವಾಗ ದಕ್ಷಿಣ? ಯಾವಾಗ ಇಡಾ? ಯಾವಾಗ ಪಿಂಗಳಾ? ಇಲ್ಲವೆ ಯಾವಾಗ ಸುಷುಮ್ನಾ? ಈ ಭೇದದಿಂದ ಯಾವ ಸಮಯಕ್ಕೆ ಯಾವ ಕಾರ್ಯ ಮಾಡಬಹುದು? ಯಾವಾಗ ಜಾಗತಿಕ ಕಾರ್ಯ ಮಾಡಬಹುದು? ಅಂದರೆ ಆದಿಭೌತಿಕ ಕಾರ್ಯ ಮಾಡಬಹುದು? ಯಾವಾಗ ಆಧ್ಯಾತ್ಮಿಕ ಕಾರ್ಯ ಮಾಡಬಹುದು? ಇದನ್ನೆಲ್ಲ ಶಿವನೇ ವಿಧಿಸಿವನು. ಯಾವ ಅವಸ್ಥೆಯಲ್ಲಿ ಧ್ಯಾನ ಮಾಡಬೇಕು? ಯಾವ ಅವಸ್ಥೆಯಲ್ಲಿ ಆಸನ? ಯಾವ ಅವಸ್ಥೆಯಲ್ಲಿ ಪ್ರಾಣಾಯಾಮ ಇತ್ಯಾದಿ ಎಲ್ಲವನ್ನೂ ಅವನೇ ವಿಧಿಸಿದ್ದಾನೆ. ಹಾಗಾದರೆ, ಈ ವಿಜ್ಞಾನವೊಂದನ್ನು ಶಿವನೇ ನಿರ್ಮಾಣ ಮಾಡಿದನು. ಈ ವಿಜ್ಞಾನಕ್ಕೆ ಸ್ವರ–ವಿಜ್ಞಾನ ಇಲ್ಲವೆ ಸ್ವರಶಾಸ್ತ್ರ ಇಲ್ಲವೆ ಸ್ವರೋದಯವೆಂದು ಹೆಸರಿಸಲಾಯಿತು. ಶಿವನಿಗಿಂತ

ಮೊದಲು ಈ ವಿಜ್ಞಾನವನ್ನು ಪೃಥ್ವಿಯ ಜನರು ತಿಳಿದಿರಲಿಲ್ಲ. ಈ ವಿದ್ಯೆಯ ಪರಿಚಯ ಜನರಿಗಿರಲಿಲ್ಲ. ಅಂದ ಮೇಲೆ ಕರ್ಮಕ್ಷೇತ್ರದಲ್ಲಿ ಈ ಸ್ವರವಿಜ್ಞಾನವು ಯಾವ ರೀತಿ ಅನ್ವಯಿಸಬಲ್ಲದು? ಮತ್ತು ಪರಿಣಾಮ ಬೀರಬಲ್ಲದು?

ಮಾನವನು ಯಾವ ರೀತಿ ಕಾರ್ಯ ಮಾಡುವುದರಿಂದ ಅವನಿಗೆ ಲಾಭವಾದೀತು? ಎಂಬುದನ್ನು ಶಿವನು ನಿರ್ಧರಿಸಿದನು. ಮತ್ತು ಆ ಮೇರೆಗೆ ನಿರ್ದೇಶನವನ್ನೂ ನೀಡಿದನು. ಈ ತೆರನಾದ ಸ್ವರಶಾಸ್ತ್ರ ಇಲ್ಲವೆ ಸ್ವರೋದಯದ ನಾದದಲ್ಲಿ ಆಧ್ಯಾತ್ಮಿಕ ಜೀವನದ ಜಾಗತಿಕ ಜೀವನದ ಸಂಗ್ರಾಮದಲ್ಲಿ ಮಾನವನಿಗೆ ತರತರದ ಸಹಾಯ ಸಲ್ಲಿಸಿದನು. ಸ್ವಾಭಾವಿಕ ಅವಸ್ಥೆಯಲ್ಲಿ ದೊಡ್ಡ ಕಾರ್ಯವೊಂದನ್ನು ಒಬ್ಬನು ಮಾಡಬೇಕಾದರೆ ಅವನು ಮಹಾವಿಪತ್ತಿನಲ್ಲಿ ಬೀಳುತ್ತಾನೆ. ಕೈಕಾಲು ಮುರಿದು ಬೀಳಬಹುದು. ಇಂಥ ಸಮಯದಲ್ಲಿ ಬದ್ಧಕುಂಭದಿಂದ (ಪೂರ್ಣ ಕುಂಭ) ಅದೇ ಕಾರ್ಯವನ್ನು ಅನಾಯಾಸವಾಗಿ ಮಾಡಬಲ್ಲನು. ಶೂನ್ಯ ಕುಂಭದಂತೆ ಕಾರ್ಯ ಮಾಡಹೋದರೆ ಮನುಷ್ಯನು ಸತ್ತುಹೋಗಬಹುದು. ಉದಾಹರಣೆಗೆ, ಒಂದು ಎತ್ತರವಾದ ಜಾಗವಿದೆ. ಅಲ್ಲಿ ಅತಿ ಭಾರವಾದ ವಸ್ತುವನ್ನು ಎತ್ತಬೇಕಾಗಿದೆ, ಎಂದು ತಿಳಿಯಿರಿ. ಒಂದು ವೇಳೆ ಆ ಭಾರವಾದ ವಸ್ತುವನ್ನು ಎತ್ತುವಾಗ ಶ್ವಾಸದ ಕಡೆಗೆ ಲಕ್ಷ್ಯ ಹರಿಸದೆ ಹೋದರೆ, ಆದರ ಭಾರದಿಂದ ಕೈಯೆಲ್ಲ ನೋವಾಗುತ್ತದೆ. ಶೂನ್ಯಕುಂಭದಿಂದ ಅಂದರೆ ನಿಶ್ವಾಸವನ್ನು ಬಿಟ್ಟು, ಆ ಕಾರ್ಯವೆಸಗಿದರೆ ಕೈ ಅಲ್ಲಾಡಿಸುವುದು ಸಹ ಮಹಾ ಪ್ರಯಾಸವಾಗುತ್ತದೆ.

ಮರಳಿ ಅದೇ ಕಾರ್ಯವನ್ನು ಬದ್ಧಕುಂಭದಿಂದ (ಪೂರ್ಣ ಕುಂಭ) ಮಾಡಿರಿ. ಹೊಟ್ಟೆ ತುಂಬ ನಿಃಶ್ವಾಸ ಎಳೆದು ಆ ವಸ್ತುವನ್ನೆತ್ತಿ ನೋಡಿರಿ! ಅತ್ಯಂತ ಸಹಜವಾಗಿ ಆ ಕೆಲಸವಾಗುತ್ತದೆ. ಇದೆಲ್ಲವೂ ಆ ಸ್ವರದ ಜ್ಞಾನ ಇಲ್ಲವೆ ಸ್ವರಶಾಸ್ತ್ರದಲ್ಲಿ ಅಂಗವಾಗಿದೆ. ಹನುಮಂತನು ನಿಃಶ್ವಾಸವೆಳೆದು ಶರೀರವನ್ನು ಹಿಗ್ಗಿಸಿ ಸಮುದ್ರವನ್ನೇ ಎತ್ತಿದನೆಂದು ಪುಸ್ತಕಗಳಲ್ಲಿ ಓದುತ್ತೀರಿ. ಹನುಮಂತನ ಕಥೆಯು ಬಹು ಹಿಂದಿನ ಕತೆಯಾಗಿದೆ. ಆದರೆ, ಸ್ವರವಿಜ್ಞಾನದ ಇಂಗಿತವಿರುವ ಈ ಕತೆಯಂತೂ ಮುಂದೆ ಸಹ ಇದ್ದೇ ಇರುತ್ತದೆ.

ಒಂದು ವೇಳೆ, ಸ್ವರವಿಜ್ಞಾನಕ್ಕೆ ಸಮ್ಮತವಾಗುವ, ಭಾವದಿಂದ ಮಾನವನು ಕುಣಿದರೆ, ಮತ್ತು ಯಥಾ ರೀತಿ ಛಂದವನ್ನೂ, ಮುದ್ರೆಯನ್ನೂ ಹೊಂದಿಸಿ ಕುಣಿದರೆ, ಆ ಕುಣಿತವು ಬೇರೆಯವರಿಗೆ ಉಪಭೋಗ್ಯವಾಗಲಿ ಬಿಡಲಿ, ತನಗೆ ಮಾತ್ರ ಉಪಭೋಗ್ಯವಾಗಲಿ, ಬಿಡಲಿ ಆ ಕುಣಿತವಂತೂ ಒಂದು ಸುಂದರ ವ್ಯಾಯಾಮದ ದೃಷ್ಟಿಯಿಂದ ಉಳಿದೇ ಉಳಿಯುತ್ತದೆ. ಇನ್ನು ಆ ಕುಣಿತದೊಂದಿಗೆ ತಾಳವಿರಿಸಿ ಪ್ರತಿಯೊಂದು ಗ್ರಂಥಿಯನ್ನು (glands) ಸಮಭಾವದಲ್ಲಿ ಪ್ರಭಾವಿತಗೊಳಿಸಿದರೆ, ಏನಾಗುತ್ತದೆ, ಗೊತ್ತೇ? ಆ ಗ್ರಂಥಿಗಳಿಂದ ಗ್ರಂಥಿರಸವು (harmones) ಉಪಯುಕ್ತ ಭಾವದಿಂದ, ಪ್ರಯೋಜನ ಭಾವದಿಂದ ಹೊರಬರುತ್ತದೆ. ಇದು ಕೇವಲ ಮಾನವ ಶರೀರವನ್ನೆಷ್ಟೇ ಅಲ್ಲ, ಅವನ ಮನ, ಆತ್ಮಗಳನ್ನೂ ಸಹ ಪುಷ್ಟಗೊಳಿಸುತ್ತದೆ. ಮಾನವ ಶರೀರದಲ್ಲಿ–ಪುರುಷ ಸ್ತ್ರೀಯರಿಬ್ಬರಲ್ಲೂ-ಬಹಳಷ್ಟು ಗ್ರಂಥಿಗಳಿರುತ್ತವೆ.

ಆದರಲ್ಲೂ ಪುರುಷ ಶರೀರದಲ್ಲಿ ಸ್ವಲ್ಪ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತವೆ. ಈ ಗ್ರಂಥಿಗಳಿಗೆ ಹೆಚ್ಚಿನ ವ್ಯಾಯಾಮ ಅಗತ್ಯವಿದೆ. ಕೇವಲ ಆಹಾರ ಸೇವಿಸುವುದರಿಂದ ಇವುಗಳ ಪರಿಪಾಲನೆಯಾಗದು. ಇದಕ್ಕಾಗಿ ವ್ಯಾಯಾಮದ ಅಗತ್ಯವಿದೆ. ಇಲ್ಲಿ ವ್ಯಾಯಾಮವೆಂದರೆ, ಶಿವನು ನೀಡಿದ ಛಂದಬದ್ಧವಾದ,ನಿಯಮಬದ್ಧವಾದ ಕುಣಿತವೇ ಆಗಿದೆ.

ಎಲ್ಲ ಕುಣಿತಗಳು ಎಲ್ಲ ಗ್ರಂಥಿಗಳನ್ನು ಸಮಭಾವದಿಂದ ಪ್ರಭಾವಿತಗೊಳಿಸುವುದಿಲ್ಲ. ಆದರೆ, ಶರೀರದಲ್ಲಿರುವ ಕೆಲವೊಂದು ಗ್ರಂಥಿಗಳು ಕುಣಿತದಿಂದ ಪ್ರಭಾವಿತವಾಗುವುದಿಲ್ಲ. ಇವುಗಳ ವ್ಯಾಯಾಮವಾಗದಿರುವುದರಿಂದ ಚಿಕ್ಕ ವಯಸ್ಸಿನಲ್ಲಿಯೇ ಮಾನವನಲ್ಲಿ ಅನೇಕ ಪ್ರಕಾರದ ಸಾಮರ್ಥ್ಯಗಳು ಅಡಗಿ ಹೋಗುತ್ತವೆ. ಉದಾಹರಣೆಗೆ ಚಿಂತನಶೀಲತೆ ಮತ್ತು ಸ್ಮರಣ ಶಕ್ತಿಗಳಂಥ ಗುಣಗಳು; ಅಂದರೆ ಚಿಂತನೆ ಮಾಡುವ ಗುಣವೂ ಮತ್ತು ಮನಸ್ಸಿನಲ್ಲಿ ಇರಿಸಿಕೊಳ್ಳುವ ಗುಣವೂ ಕಡಿಮೆಯಾಗುತ್ತವೆ. ಈ ಎರಡೂ ಗುಣಗಳನ್ನು ಬೆಳೆಸಿಕೊಳ್ಳಲು ಯಾವ ವಿದ್ಯೆಯೂ ಇಲ್ಲ. ಈ ಭಾವದಿಂದ ಎಲ್ಲ ಮುಖಿಗಳನ್ನು ಅರಿತು, ಸಮಸ್ತ ಗ್ರಂಥಿಗಳ ಕತೆಯನ್ನೂ, ಸಮಸ್ತ ಮುದ್ರೆಗಳ ಕತೆಯನ್ನೂ ತಿಳಿದು, ಶಿವನು ಒಂದು ಅಪೂರ್ವವಾದ ಅನಿರ್ಬದ್ಧ ನೃತ್ಯ ಪದ್ಧತಿಯನ್ನು ಕಂಡುಹಿಡಿದನು. ಅದರ ಹೆಸರು "ತಾಂಡವ ನೃತ್ಯ"; ಎಂದು. ಈ ನೃತ್ಯದಲ್ಲಿ ಮಾನವನು ಎಲ್ಲಿಯವರೆಗೆ ಈ ಭೂಮಿಯನ್ನು ಸ್ಪರ್ಶಿಸುವುದಿಲ್ಲವೋ, ಆ ಕ್ಷಣವೇ ಅವನ ಗುಣವು ಆಹತವಾಗುತ್ತದೆ. ಮತ್ತು ಅವನು ಭೂಮಿಯನ್ನು ಸ್ಪರ್ಶಿಸಿದೊಡನೆ ಗುಣಗಳು ಸೇರುತ್ತವೆ. ಭೂಮಿಯನ್ನು ಸ್ಪರ್ಶಿಸದಿರುವ ಸಮಯದಲ್ಲಿ ಗುಣಗಳು ಆಹತವಾಗುತ್ತವೆ ಎಂಬುದರ ಅರ್ಥವಿಷ್ಟೇ. ಈ ನೃತ್ಯದ ಶಿಕ್ಷಣ ನಡೆದಾಗ ಕೆಲ ಕ್ಷಣ ಭೂಮಿಯನ್ನು ಸ್ಪರ್ಶಿಸದೆ ಇರುತ್ತಾರೆ. ಅಂದರೆ ಇನ್ನೊಂದು ಜಿಗಿತ ಮಾಡುತ್ತಾರೆ. ಸಂಸ್ಕೃತ ಭಾಷೆಯಲ್ಲಿ 'ತಂಡು' ಎಂದರೆ 'ಜಿಗಿಯುವುದು' ಎಂದರ್ಥ.

ಯಾವ ನೃತ್ಯದಲ್ಲಿ ಜಿಗಿತವು ಪ್ರಧಾನವಾಗಿದೆಯೋ ಅದುವೇ ತಾಂಡವ ನೃತ್ಯ. ಈ ಭೂಮಿಯನ್ನು ಸ್ಪರ್ಶಿಸದೆ ವೇಳೆಯಲ್ಲಿ ಗುಣಗಳು ಆಹತವಾಗುತ್ತವೆ. ತಂಡು ಎಂದರೆ ಎಂದರೆ ಜಿಗಿತ. ಅಕ್ಕಿಯನ್ನು ಒಡೆದರೆ ಹೇಗೆ ಜಿಗಿಯುವುದೋ ಹಾಗೆ. ಈ ಕಾರಣದಿಂದ ಅಕ್ಕಿಗೆ 'ತಾಂಡುಲ' ಎನ್ನುತ್ತಾರೆ. ಹೀಗೆ ಸಂಸ್ಕೃತದಲ್ಲಿ ಅಕ್ಕಿಗೆ ತಾಂಡವ ಎಂದರು. ಇನ್ನು ಅನ್ನಕ್ಕೆ 'ಉದನ' ಎಂದರು (ಯಾವ ಮಾನವನು ಶುದ್ಧಾಚಾರದಿಂದ ಇರುವನೋ, ಮತ್ತು ಯಾರ ಅನ್ನವು ಪವಿತ್ರವಾಗಿರುವುದೋ, ಅವನು ಶುದ್ಧೋದನನೆನಿಸುವನು. (ಬುದ್ಧನ ತಂದೆಯ ಹೆಸರು ಶುದ್ಧೋದನ ಎಂದಿತ್ತು.) ಏನೇ ಇರಲಿ, ಶಿವನು ಈ ತಾಂಡವ ನೃತ್ಯದ ಪ್ರವರ್ಶನ ಮಾಡಿದನು. ಇದೊಂದು ಅಪೂರ್ವ ಆವಿಷ್ಕಾರವಾಗಿದೆ. ಮಾನವನು ಈ ಮುನ್ನ ಇದನ್ನು ತಿಳಿದಿರಲಿಲ್ಲ. ಭವಿಷ್ಯದ ಮಾನವನು ಸಹ ಇದರಲ್ಲಿ ವಿಕಲ್ಪ ಕಂಡುಹಿಡಿದು ದೂರೀಕರಿಸುವನೆಂದೇನೂ ಹೇಳುವಂತಿಲ್ಲ. ನಾನು ಈ ಮೊದಲು ಹೇಳಿದಂತೆ ಈ ತಾಂಡವವು ಛಂದ, ಮುದ್ರೆ, ಗ್ರಂಥಿಗಳನ್ನು ಸಮನ್ವಯಿಸಿ ಒಟ್ಟಾರೆ ಸಂಗತಿ ಇರಿಸಿ ಸಿದ್ಧವಾಗಿದೆ. ಆದ್ದರಿಂದ ಇದು ಶರೀರಕ್ಕಾಗಿ ಕಲ್ಯಾಣದಾಯಕವಾಗಿದೆ. ಮನಕ್ಕಾಗಿ ಉತ್ಕರ್ಷಸಾಧಕವಾಗಿದೆ;

ಮತ್ತು ಆತ್ಮಕ್ಕಾಗಿ ಉನ್ನತಿ ವಿಧಾಯಕವಾಗಿದೆ? ಶಿವನು ತಾಂಡವ ನೃತ್ಯದ ಆವಿಷ್ಕಾರ ಮಾಡಿ ತೆಪ್ಪಗಾಗಲಿಲ್ಲ. ಪಾರ್ವತಿಯ ಸಹಾಯಕ್ಕಾಗಿ ಅನೇಕ ಪ್ರಕಾರದ ಕುಣಿತಗಳ ಉದ್ಭಾವನೆ ಮಾಡಿದನು. ಮತ್ತು ಮಾನವ ಸಮಾಜದಲ್ಲಿ ಹರಿಬಿಟ್ಟನು. ಈ ಮೊದಲು ಕುಣಿತವೆಂದರೆ ಕೈಕಾಲು ತಿರುಗಿಸುವುದೆಂಬ ಗ್ರಹಿಕೆಯಿತ್ತು. ಈಗ ಅದು ವಿಧಿಬದ್ಧವಾಯಿತು. ಒಂದು ವಿಶೇಷ ಭಾವಧಾರೆಯ ಅನುಶೀಲನವಾಯಿತು. ಹೀಗೆ ಶಿವನು ಎಷ್ಟೋ ರೀತಿಯಿಂದ ಮಾನವ ಸಮಾಜದ ಕಲ್ಯಾಣ ಸಾಧಿಸಿ ಹೋಗಿದ್ದಾನೆ.

ಇದಾದ ಬಳಿಕ, ಜೀವವು ಈ ಪೃಥ್ವಿಯ ಮೇಲೆ ಎಂದಿನಿಂದ ಬಂದಿದೆಯೋ, ಅಂದಿನಿಂದ ಔಷಧಿಗಳೂ ಬಂದಿವೆ. ನಾಯಿ, ಬೆಕ್ಕು, ಹಾವು ಮುಂತಾದವುಗಳೆಲ್ಲ ಒಂದಿಲ್ಲೊಂದು ಅವಸ್ಥೆಯಲ್ಲಿ ಔಷಧಿ (ವನಸ್ಪತಿ)ಯನ್ನೇ ಆಶ್ರಯಿಸಿವೆ. ವನಾರಣ್ಯಗಳಲ್ಲಿರುವ ಜೀವ-ಜಂತುಗಳು ಯಾವುದೋ ಗಿಡದ ಮೇಲೇರಿ ಶರೀರವನ್ನು ತಿಕ್ಕಿ ಆರೋಗ್ಯ ಪಡೆಯುತ್ತವೆ. ಅಂದರೆ, ಎಲ್ಲ ಜೀವಿಗಳೂ, ಹೆಚ್ಚು-ಕಡಿಮೆ ಔಷಧ ದೊಂವಿಗೆ ಪರಿಚಿತವಾಗಿವೆ.

ಆಯುರ್ವೇದವು ಶಿವನಿಗಿಂತ ಮೊದಲೇ ಇದ್ದಿತು, ಎಂದು ಈ ಮೊದಲು ಹೇಳಿದ್ದೇನೆ. ಆಯುರ್ವೇದವು ಛಂದ, ಕಲ್ಪ, ನಿರುಕ್ತ, ವ್ಯಾಕರಣ, ಜ್ಯೋತಿಷ ಆಯುರ್ವೇದ ಅಥವಾ ಧನುರ್ವೇದಗಳೆಂಬ ಆರು ಅಂಗಗಳಲ್ಲೊಂದು. ಆಗ ಆಯುರ್ವೇದವು ಇದ್ದಿಲ್ಲವೆಂದೇನೂ ಅಲ್ಲ. ಶಿವನ ಕಾಲದಲ್ಲಿ ಭಾರತದಲ್ಲಿ ಆಯುರ್ವೇದವಿತ್ತು. ಆದರೆ ಅದು ಏನಾಗಿತ್ತು? ಅದು ಹಠಾತ್ ಪಡೆಯಬಹುದಾದ ಔಷಧೀಯ ಗುಣ ಸಂಪನ್ನವಾದ ವಿಶೇಷ ವಸ್ತುವಾಗಿತ್ತು. ಹೀಗೆ ಔಷಧೀಯ ಗುಣಸಂಪನ್ನ ವಸ್ತುವನ್ನು ಹಠಾತ್ ಪಡೆಯುವುದನ್ನು ಸಂಸ್ಕೃತದಲ್ಲಿ 'ಮುಷ್ಟಿಯೋಗ' ಎನ್ನುತ್ತಾರೆ. (ಬಂಗಾಳಿ ಭಾಷೆಯಲ್ಲಿ ಇದಕ್ಕೆ 'ಘೋಟಲಾ' ಎನ್ನುತ್ತಾರೆ.) ಇದರ ಗುಣಗಳನೇಕ. ಆದರೆ ಇದಕ್ಕೊಂದು ವಿಧಿಬದ್ಧ ರೂಪ ನೀಡಬೇಕು. ಪ್ರಾಚೀನ ಕಾಲದಲ್ಲಿ ವೇದೋಕ್ತ ಆಯುರ್ವೇದವು ಮುಷ್ಟಿಯೋಗವಾಗಿತ್ತು. ಬಹುತೇಕ ಈ ತೆರನಾಗಿತ್ತು. ಅಂದರೆ ಅದಕ್ಕಾವ ವಿಧಿಬದ್ಧ ರೂಪವಿರಲಿಲ್ಲ. ಆಷ್ಟೇನು? ಶಿವನ ಸಮಯದವರೆಗೂ ಇದಕ್ಕಾವ ವಿಧಿಬದ್ಧ ರೂಪವಿರಲಿಲ್ಲ. ಈ ಮುಷ್ಟಿಯೋಗಕ್ಕೆ ಶಿವನು ಪ್ರತಿಯೊಂದಕ್ಕೂ ವಿಧಿಬದ್ಧ ರೂಪ ನೀಡಿದನು. ಇದಕ್ಕೆ 'ವೈದ್ಯಕ ಶಾಸ್ತ್ರವೆಂದು' ಕರೆದರು. ನಾನು ಇಲ್ಲಿ ಆಯುರ್ವೇದ ಶಬ್ದ ಬಳಸಿಲ್ಲ.

ಇಲ್ಲಿ ಭಾರತೀಯ ಸಮಾಜದ ಇತಿಹಾಸ ಕುರಿತು ವಿವರಿಸುವುದು ಒಳ್ಳೆಯದೆಂದು ಕಾಣುತ್ತದೆ. ಶವದ ಅವಯವಚ್ಛೇದ ಅಂದರೆ ಶಲ್ಯಕರಣ (surgical operation) ಮತ್ತು ವಿಶಲ್ಯಕರಣ (ಜೋಡಿಸುವುದು) ಮುಂತಾದವುಗಳ ಚರ್ಚೆಯಲ್ಲಿ ಆಯುರ್ವೇದವು ವಿಶೇಷವಾಗಿ ಮುಂದೆ ಹೋಗಿಲ್ಲ, ಮುಂದೆ ಕೆಲ ಕಾಲಾನಂತರ, ಮಧ್ಯ ಏಶಿಯಾದ ತಾಸಖಿಂಡ ಭಾಗದಿಂದ (ಸಂಸ್ಕೃತದಲ್ಲಿ ಶಾಕದ್ವೀಪ) ಕೆಲವು ಶಾಕದ್ವೀಪೀ (ಶಾಕಲ ದ್ವೀಪೀ) ಬ್ರಾಹ್ಮಣರು ಭಾರತದಲ್ಲಿ ಐತಂದರು. ಅವರು ಭಾರತದಲ್ಲಿ ಶಲ್ಯಕರಣ, ವಿಶಲ್ಯಕರಣಗಳನ್ನು ಅಲ್ಪಸ್ವಲ್ಪ ನಡೆಸುತ್ತಿದ್ದರು. ಆದರೆ ಶವ-ಅವಯವಚ್ಛೇದದ ವ್ಯವಸ್ಥೆ ಬಗ್ಗೆ ಯಾವುದೇ

ಪ್ರಮಾಣಗಳಿಲ್ಲ. ಈ ಬಗ್ಗೆ ತರ್ಕದ ಬೆನ್ನು ಹತ್ತುವುದರಿಂದೆನೂ ಫಲವಿಲ್ಲ. ಪ್ರಮಾಣ ವಂತೂ ಇಲ್ಲ. ಈ ಶಾಕದ್ವೀಪೀ ಬ್ರಾಹ್ಮಣರು ಜಲಮಾರ್ಗವಾಗಿ ಪಶ್ಚಿಮ ಭಾರತ ದಲ್ಲಿ ಪ್ರವೇಶಿಸಿದರು. ಆ ಸಮಯದಲ್ಲಿ ಇಸ್ಲಾಮ ಧರ್ಮ ಸ್ವೀಕರಿಸಲು ಒಪ್ಪದೆ, ಅವರು ಭಾರತಕ್ಕೆ ಬಂದಿದ್ದರು. ಅವರು ಸಮುದ್ರಯಾನ ಮಾಡುತ್ತ ಬರುವಾಗ ತಮ್ಮೊಂದಿಗೆ ಇನ್ನೂ ಇರಡು ವಸ್ತುಗಳನ್ನು ತಂದಿದ್ದರು. ಒಂದು ಲವಂಗ ಮಸಾಲೆ. ಸಂಸ್ಕೃತದಲ್ಲಿ ಲವಂಗಕ್ಕೆ, ಲವಂಗ, ದೇವಕುಸುಮ ಮತ್ತು ವಾರಿಸಂಭವ ಅಂದರೆ ಯಾವುದು ನೀರಿನ ಮೇಲಿಂದ ಬಂದಿದೆಯೋ ಅದು, ಎನ್ನುತ್ತಾರೆ ಅವರುತಂದ ಇನ್ನೊಂದು ವಸ್ತುವೆಂದರೆ, ಜ್ಯೋತಿಷ್ಯದ ಒಂದಂಶವಾದ 'ಹಸ್ತರೇಖಾ ವಿದ್ಯೆ'. ಅದು ಭಾರತ ದಲ್ಲಿ ಇರಲಿಲ್ಲ. ಇದನ್ನು ಶಾಕದ್ವೀಪದಿಂದ ತರಲಾಗಿದೆ. ಆದ್ದರಿಂದ ಇದಕ್ಕೆ ಸಂಸ್ಕೃತ ದಲ್ಲಿ 'ಸಾಮುದ್ರಿಕ ವಿದ್ಯೆ' ಎನ್ನುತ್ತಾರೆ. (palmistry) ಅರ್ಥಾತ್ ಯಾವುದನ್ನು ಸಮುದ್ರದ ಮೇಲಿಂದ ತರಲಾಗಿದೆಯೋ ಅದು. ಹೀಗೆ ಅದೇ ಶಾಕದ್ವೀಪೀ ಬ್ರಾಹ್ಮಣರು ಭಾರತದಲ್ಲಿ ಬಂದರು. ಮತ್ತು ಆಯುರ್ವೇದದ ಸ್ವಲ್ಪ ಉನ್ನತಿಗೆಯ್ದರು. ಆದರೆ ಇದು ಬಹುಕಾಲ ನಂತರದ ಕಥೆ. ಅಂದರೆ ಶಿವನ ನಂತರ ಬಹುತೇಕ ಆರು ಸಹಸ್ರ ವರ್ಷಗಳ ನಂತರದ ಕಥೆ. ಆದರೆ ಆ ಕಾಲದಲ್ಲಿ ಶಿವನು ನೀಡಿದ ವೈದ್ಯಕ ಶಾಸ್ತ್ರದಲ್ಲಿ ಶಲ್ಯಕರಣ, ವಿಶಲ್ಯಕರಣ ಶವ-ವ್ಯವಚ್ಛೇದಗಳೆಲ್ಲ ಇದ್ದವು. ಆದರೆ ಹೊರಗಿನಿಂದ ಆರ್ಯರು ಅತಿ ಅಹಮಹಮಿಕೆಯವರಾಗಿದ್ದರು. ಭಾರತವಾಸಿಗಳನ್ನು ಅವರು ಶೂದ್ರರೆಂದು ಘೋಷಿಸಿದರು. ಇಷ್ಟೇ ಅಲ್ಲ. ಭಾರತೀಯರನ್ನು ತಮ್ಮ ಸಮಾಜದಲ್ಲಿ ಸೇರಿಸಿಕೊಳ್ಳಲಿಲ್ಲ. 'ಅಂತ್ಯಜ' ಮತ್ತು ಪತಿತರೆಂದು ಹೆಸರಿಸಿದರು. ಇಂದೂ ಸಹ ಪೌರಾಣಿಕ ಸಮಾಜದಲ್ಲಿ, ಮೂರು ಪ್ರಕಾರದ ಶೂದ್ರರನ್ನು ಕಾಣುತ್ತೇವೆ. ಆಚರಣೀಯ ಶೂದ್ರ. ಯಾವ ಶೂದ್ರನ ಅಡುಗೆ ಉಣ್ಣಬಹುದೋ, ಮತ್ತು ನೀರನ್ನು ಕುಡಿಯಬಹುದೋ ಅವನು. ಅವನ ಕೈಯಿಂದ ಸಿದ್ಧವಾದ ಪೋಡಾ ಮತ್ತು ಸೈಕಾಗಳನ್ನು ಮಾತ್ರ ತಿನ್ನುವಂತಿಲ್ಲ. ಇನ್ನು ಅನಾಚರಣೀಯ ಶೂದ್ರ, ಯಾರ ಊಟವನ್ನು ಉಣ್ಣಕೂಡದೋ, ಯಾರ ನೀರನ್ನು ಕುಡಿಯಕೂಡದೋ, ಅವರು; ಮೇಲಾಗಿ ಇವರ ನೆರಳು ತಮ್ಮ ಮೇಲೆ ಬಿದ್ದರೆ ಸ್ನಾನಮಾಡಬೇಕಾದ ಕಟ್ಟು ಪಾಡಿಲ್ಲ. ಮತ್ತು ಇವರ ಮನೆಯ ಯಜಮಾನಿಕೆ ಮಾಡಿದರೂ ಪಾತಿತ್ವವು ಉಂಟಾಗುವುದಿಲ್ಲ. ಇನ್ನು ಮೂರನೆಯವರೆಂದರೆ ಅಂತ್ಯಜ ಶೂದ್ರರು. ಇವರೊಂದಿಗೆ ಆರ್ಯರ ಯಾವ ಸಂಪರ್ಕವೂ ಇರುವಂತಿರಲಿಲ್ಲ. ಇವರ ನೆರಳು ತಮ್ಮ ಮೇಲೆ ಬಿದ್ದೊಡನೆ ಸ್ನಾನ ಮಾಡಿಯೇ ತೀರಬೇಕಾಗಿತ್ತು. ಆರ್ಯರಲ್ಲಿ ತುಂಬಾ ಅಹಮಹಮಿಕೆಯಿದ್ದುದರಿಂದ, ಅವರು ಭಾರತದ ಆದಿವಾಸಿಗಳನ್ನು ಮುಖ್ಯವಾಗಿ ಈ ಮೂರು ಭಾಗಗಳಲ್ಲಿ ವಿಭಜಿಸಿದರು. (ಭಾರತದಲ್ಲಿ ಮೊದಲಿನಿಂದಲೂ ಈ ಶೂದ್ರರು ವಾಸವಾಗಿದ್ದರು. ಆರ್ಯರು ಅನಂತರ ಬಂದರು.) ಆದ್ದರಿಂದ ಅವರ ಶವ-ವ್ಯವಚ್ಛೇದವನ್ನು ಹೇಗೆ ಮಾಡಿಯಾರು? ಆರ್ಯರ ಚರ್ಮವನ್ನೂ ಸಹ ಅನಾರ್ಯರು ಮುಟ್ಟುವಂತಿರಲ್ಲಿ. ಇದರಿಂದ ಮಾದರ ಜಾತಿ ಬಂದಿತು. ಈ ವ್ಯವಸ್ಥೆಯು ಇಂದಿಗೂ ಸಹ ಸ್ವಲ್ಪ ನಡೆಯುತ್ತಿದೆ. ಒಮ್ಮೊಮ್ಮೆ ಇಲ್ಲದಿರಲೂ ಬಹುದು. ಅಂದಮೇಲೆ ಅವರು

ಶವ-ವ್ಯವಚ್ಛೇದವನ್ನು ಹೇಗೆ ಮಾಡಿಯಾರು?

ಇದರಿಂದ ಆರ್ಯರು ಶವವನ್ನು ಹೇಗೆ ಕೊಯ್ಯುವರು? ಆರ್ಯರ ಶವವನ್ನು ಸಹ ಅನಾರ್ಯರು ಮುಟ್ಟುವಂತಿರಲಿಲ್ಲ. ಇದರಿಂದ ಶವದ ಜಾತಿ ಕೆಟ್ಟು ಹೋಗುವುದು. ಈ ಅವಸ್ಥೆಯು ಇಂದು ಸಹ, ಅಲ್ಪಸ್ವಲ್ಪ ನಡೆದಿದೆ. ಅವರು ಶವವನ್ನು ಕೊಯ್ದು ಹೋಳು ಮಾಡುವುದೆಂತು? ಶವವನ್ನು ಕೊಯ್ದು ಸೀಳಬೇಕಾದರೆ, ಸ್ಮಶಾನದಲ್ಲಿ ಬಿದ್ದ ಶವದ ಮೇಲೆ ಮಾತ್ರ ಸಾಧ್ಯವಿತ್ತು. ಅಲ್ಲಿ ಅದರ ಜಾತಿಯನ್ನಾರೂ ತಿಳಿಯುವಂತಿರಲಿಲ್ಲ. ಅವನು ಅಂತ್ಯಜನಾಗಿರಬಹುದು; ಅನಾಚರಣೀಯ ಶೂದ್ರನಾಗಿರಬಹುದು. ಇದರಿಂದ ಶವವನ್ನು ಕೊಯ್ದು ಸೀಳಿ, ಪರೀಕ್ಷೆ ನಡೆಸುವ ಸಂಭವವೇ ಇರಲಿಲ್ಲ. ಇನ್ನು ಆ ಶವಗಳೆಲ್ಲ ಕುಲೀನ ಬ್ರಾಹ್ಮಣರ ಶವಗಳಿರಲಿಲ್ಲ. ಇದರಿಂದಲೂ ಶವವನ್ನು ಕೊಯ್ದು ಸೀಳುವಂತಿರಲಿಲ್ಲ. ಇದರಿಂದ ಚಿಕಿತ್ಸಾ ಶಾಸ್ತ್ರದಲ್ಲಿ ಹೆಚ್ಚಿನ ಪ್ರಗತಿಯಾಗಲಿಲ್ಲ. ಆದರೆ ಶಿವನ ಬಳಿ ಇಂಥ ಜಾತಿಪಾತಿ, ಸ್ಪೃಶ್ಯ-ಅಸ್ಪೃಶ್ಯತೆಗಳಾವವೂ ಸುಳಿದಿರಲಿಲ್ಲ. ಆದ್ದರಿಂದ ಅಲ್ಲಿ ಶವವನ್ನು ಕೊಯ್ದು ಸೀಳಿ, ಪರೀಕ್ಷಿಸುವ ವ್ಯವಸ್ಥೆಯಿತ್ತು. ಇದರಿಂದ 'ವೈದ್ಯಕಶಾಸ್ತ್ರ'ದಲ್ಲಿ ಪ್ರಗತಿ ಮೂಡಿ ಬಂದಿತು. ಯಾವ ಯಾವ ಸ್ಥಾನಗಳಲ್ಲಿ ಜನರಲ್ಲಿ ಜಾತಿ ಪಂಗಡದ ಭೇದವು ಸ್ಪುಟವಾಗಿರಲಿಲ್ಲವೋ, ಅಲ್ಲಿ ಶಿವನ ಪ್ರಭಾವ ಅಧಿಕವಾಗಿತ್ತು. ಇದರಿಂದಾಗಿ ವೈದ್ಯಕ ಶಾಸ್ತ್ರವು ತುಂಬಾ ಪ್ರತಿಷ್ಠೆ ಪಡೆಯಿತು. ಆದರೆ ಭಾರತದ ಹೊರಗಿನಿಂದ ಬಂದ ಆರ್ಯರ ಬಳಿ, ವೈದ್ಯಕ ಶಾಸ್ತ್ರದ ಅನುಶೀಲನೆ ನಡೆದಾಗ ಅದು ಚಿಕ್ಕದಾಯಿತು; ಹೀನವೆನಿಸಿತು.

ಆದ್ದರಿಂದ ಆಯುರ್ವೇದ ಕುರಿತು ಚರ್ಚಿಸುವವರು ಅದೇ ಶಾಕದ್ವೀಪದ ಬ್ರಾಹ್ಮಣರು. ಇವರು ಹೊರಗಿನಿಂದ ಅಂದರೆ ದಕ್ಷಿಣ ರಸಿಯಾದಿಂದ ಭಾರತಕ್ಕೆ ಬಂದವರಾಗಿದ್ದರೂ ಸಹ, ಅವರನ್ನು ಭಾರತದ ಬ್ರಾಹ್ಮಣರೆನ್ನುವುದು ಸ್ವೀಕೃತವಾಗಿದೆ. ಈ ಸಂಬಂಧದಲ್ಲಿ ಎರಡು ಮಾತಿಲ್ಲ. ಇಂದಿನಿಂದ ಅಜಮಾಸು ಹದಿಮೂರು ನೂರು ವರುಷ ಮೊದಲು, ಪೌರಾಣಿಕ ಯುಗವು ಪ್ರಾರಂಭವಾಯಿತು. ಆಗ ಪೌರಾಣಿಕ ಧರ್ಮಾವಲಂಬೀ ಬ್ರಾಹ್ಮಣರೆಲ್ಲ ಪ್ರಯಾಗದಲ್ಲಿ ಒಂದು ಅಧಿವೇಶನ ನಡೆಸಿದರು. ಬುದ್ಧಾ ನಂತರ ಯುಗದಲ್ಲಿ ಯಾರು ಪೌರಾಣಿಕ ರೀತಿಯನ್ನು ಒಪ್ಪುವರೋ, ಮತ್ತು 'ನಾವು ವೇದಗಳ ಶ್ರೇಷ್ಠ ತಮತ್ವವನ್ನು ಒಪ್ಪುತ್ತೇವೆ' ಎಂದು ಸಾರುವರೋ, ಅವರು ಒಪ್ಪಿರುವುದು ಪೌರಾಣಿಕ ಧರ್ಮವನ್ನು; ವೈದಿಕ ಧರ್ಮವನ್ನಲ್ಲ. ಎಂಬುದನ್ನೆಲ್ಲ ಆ ಅಧಿವೇಶನದಲ್ಲಿ ಕಂಡುಕೊಂಡರು. ಹೀಗೆ ಆರ್ಯ ಧರ್ಮವು, ಪೌರಾಣಿಕ ಧರ್ಮವನ್ನು ಒಪ್ಪಿಕೊಂಡಿತೇ ಹೊರತು, ವೈದಿಕ ಧರ್ಮವನ್ನಲ್ಲ. ಈ ಪ್ರಯಾಗದ ಅಧಿವೇಶನದಲ್ಲಿ ಯಾರು ಯಾರಿಗೆ ಬ್ರಾಹ್ಮಣರೆನ್ನಬೇಕು? ಯಾರನ್ನು ಬ್ರಾಹ್ಮಣರೆಂದು ಸ್ವೀಕರಿಸಬೇಕು? ಎಂಬ ಬಗೆಗೆ ನಿರ್ಣಯವಾಯಿತು. ಅದರ ಮೇರೆಗೆ ವೇದಗಳ ನಿಯಮಗಳನ್ನು ಒಪ್ಪುವವರನ್ನು, ಪೌರಾಣಿಕ ಧರ್ಮವನ್ನು ಒಪ್ಪಿ ನಡೆಯುವವರನ್ನು, ಬ್ರಾಹ್ಮಣರೆಂದು ಕರೆಯಬೇಕೆಂಬ ನಿರ್ಣಯ ಸ್ವೀಕೃತವಾಯಿತು. ಅವರ ನೈತಿಕ ಮಟ್ಟವು ಹೇಗೇ ಇರಲಿ, ಆ ಬಗ್ಗೆ ಪ್ರಸ್ತಾಪಿಸಿಲ್ಲ. ಜಾತಿ ಪಾತಿ ಎಣಿಸದಿರುವುದು, ವೇದದ ನಿಯಮಗಳಿಗೆ ವಿರುದ್ಧವಾದುದೆಂದೂ ಮತ್ತು

ಅಂತ್ಯಜನ ಶವವನ್ನು ಮುಟ್ಟುವುದು, ಶವವನ್ನು ಕೊಯ್ದು ಸೀಳುವುದು, ಇತ್ಯಾದಿ ಮಾಡುವವರನ್ನು ಬ್ರಾಹ್ಮಣರೆಂದು ಕರೆಯಕೂಡದೆಂದು ನಿರ್ಣಯಿಸಲಾಗಿದೆ. ಆ ಕಾಲದಲ್ಲಿ ಪ್ರಯಾಗ ಅಧಿವೇಶನದಲ್ಲಿ ಉತ್ತರ ಭಾರತದ ಐದು ಮತ್ತು ದಕ್ಷಿಣ ಭಾರತದ ಐದು: ಹೀಗೆ ಹತ್ತು ಶ್ರೇಣಿಯ ಬ್ರಾಹ್ಮಣರನ್ನು, ಮಾತ್ರ ಒಪ್ಪಿಕೊಳ್ಳಲಾಯಿತು. ಐದು ಗೌಡೀ ಮತ್ತು ಐದು ದ್ರಾವಿಡೀ. ಈ ಐದು ವರ್ಗದ ಗೌಡೀಯರೆಂದರೆ: (೧) ಪಂಜಾಬ, ಕಾಶ್ಮೀರ, ದಕ್ಷಿಣ ರಸಿಯಾ ಮತ್ತು ಅಫಘಾನಿಸ್ತಾನ ದೇಶಗಳ ಸಾರಸ್ವತ ಬ್ರಾಹ್ಮಣರು. (೨) ಉತ್ತರ ರಾಜಸ್ತಾನ ಪಶ್ಚಿಮೋತ್ತರ ಪ್ರದೇಶದ ಗೌಡ ಬ್ರಾಹ್ಮಣರು. (೩) ಮಧ್ಯ ಮತ್ತು ಉತ್ತರ ಪ್ರದೇಶದ ಕಾನ್ಯಕುಬ್ಜದ ಬ್ರಾಹ್ಮಣರು. (೪) ಮೈಥಿಲೀ ಬ್ರಾಹ್ಮಣರು ಮತ್ತು (೫) ಗುಜರಾತಿನ ನಾಗರ ಬ್ರಾಹ್ಮಣರು. ಇನ್ನು ಬ್ರಾಹ್ಮಣರೆಂದು ಸ್ವೀಕೃತರಾದ ದಕ್ಷಿಣ ಭಾರತದ ಐದು ಶ್ರೇಣಿಗಳಿಂದರೆ— (೧) ಉತ್ಕಲ ಬ್ರಾಹ್ಮಣ, (೨) ತೈಲಂಗ ಬ್ರಾಹ್ಮಣ, (೩) ದ್ರಾವಿಡ ಬ್ರಾಹ್ಮಣ, (೪) ಕರ್ಣಾಟ ಬ್ರಾಹ್ಮಣ ಮತ್ತು (೫) ಮಹಾರಾಷ್ಟ್ರದ ಚಿತ್ತಪಾವನ ಬ್ರಾಹ್ಮಣ. ಈ ಜನರು ಮೀನು ತಿನ್ನುವುದಿಲ್ಲ. ಇನ್ನು ಬಂಗಾಳದ ರಾಡೀ, ಬಾರೇಂದ್ರ, ಕೇರಳದ ನಂಬೂದ್ರಿ, ಕೊಂಕಣದ ಗೌಡಸಾರಸ್ವತ, ಮಗಧದ ಕ್ರೌಂಚದ್ವೀಪೀ ಮತ್ತು ಅದೇ ರೀತಿ,ಬಿಹಾರದ ಪಶ್ಚಿಮ ಹಾಗೂ ಉತ್ತರ ಪ್ರದೇಶಗಳ ಪೂರ್ವ ಭಾಗದಲ್ಲಿ ವಾಸಿಸುವ ಸರಯೂಪಾರಿಗಳಿಗೆ ಇಂಥ ಸ್ವೀಕೃತಿ ದೊರೆಯಲಿಲ್ಲ.

ಆ ಕಾಲಕ್ಕೆ ಶಾಕದ್ವೀಪೀ ಬ್ರಾಹ್ಮಣರಿನ್ನೂ ಭಾರತದಲ್ಲಿ ಬಂದಿರಲಿಲ್ಲ. ಈ ಜನರು ಆನಂತರ ಬಂದರು. ಆದರೆ ಜ್ಯೋತಿಷ್ಯ ಮತ್ತು ಆಯುರ್ವೇದದ ವಿಷಯ ಕುರಿತು ಚರ್ಚೆ ನಡೆಸುತ್ತಿದ್ದ, ಭಾರತಕ್ಕೆ ಬಂದ ಶಾಕದ್ವೀಪಿಗಳನ್ನು, ಆನಂತರ ಬ್ರಾಹ್ಮಣರೆಂದು ಸ್ವೀಕರಿಸಿದರು. ಆದರೆ ಬಂಗಾಲದಲ್ಲಿ ವಾಸಿಸುತ್ತಿದ್ದ, ಮತ್ತು ಶಿರ್ವೋಕ್ತ ವೈದ್ಯಕ ಶಾಸ್ತ್ರವನ್ನು ಚರ್ಚಿಸಿ ಆಚರಿಸುತ್ತಿದ್ದ ವರ್ಗಕ್ಕೆ ಬ್ರಾಹ್ಮಣರೆಂಬ ಸ್ವೀಕೃತಿ ದೊರೆಯಲಿಲ್ಲ. ಬಂಗಾಲವು ವೈದ್ಯಕ ಚಿಕಿತ್ಸಕ ವಿಜ್ಞಾನದಲ್ಲಿ ಬಹು ಮುಂದೆ ಹೋಗಿತ್ತು. ಆದರೆ ಅವರು ಶವ-ಮುಟ್ಟಬೇಕಾಗಿತ್ತು. ಆ ಕಾರಣದಿಂದ ಅವರನ್ನು ಬ್ರಾಹ್ಮಣರೆಂದು ಸ್ವೀಕರಿಸಲಿಲ್ಲ. ಅದೆಲ್ಲ ಎಂಥ ವ್ಯವಸ್ಥೆ ಇದ್ದಿತೆಂಬುದನ್ನು ನೀವೆಲ್ಲ ಅರಿಯಿರಿ. ಎಂಥ ಅವಿಚಾರದ ಯುಗವಾಗಿತ್ತದು!

ಶಿವನು ವೈದ್ಯಕ ಶಾಸ್ತ್ರವನ್ನು ಹೊಸ ರೀತಿಯಿಂದ ಸಜ್ಜುಗೊಳಿಸಿದನು. ಅದಕ್ಕೊಂದು ವ್ಯವಸ್ಥಿತ ರೂಪು ಕೊಟ್ಟನು. ಈ ಕಾರಣದಿಂದ ಭಾರತವು ಅವನಿಗೆ ತುಂಬಾ ಉಪಕೃತವಾಗಿದೆ. ಆನಂತರದ ಕಾಲದಲ್ಲಿ ಮಧ್ಯ ಏಶಿಯಾದ alchemy ಮತ್ತು alchemistry medico chemistry ಯನ್ನು ಉನ್ನತಿಗೊಳಿಸಿದನು. ಈ ಕೊಡುಗೆಯು ಅಂತಿಂಥ ಚಿಕ್ಕಪುಟ್ಟ ಕೊಡುಗೆಯೇನಲ್ಲ.

ಎಂದಿನಿಂದ ಅಜಮಾಸು ೭೦೦೦ ವರ್ಷಗಳಷ್ಟು ಹಿಂದೆ ಶಿವನು ಅವಿರ್ಭವಿಸಿದನು, ಭಾರತದಲ್ಲಿ ಶಿವನ ಯುಗದ ನಂತರ ಬೌದ್ಧ ಮತ್ತು ಜೈನ ಮತಗಳು ಹೆಚ್ಚಾಗಿ ಹಬ್ಬಿದವು. ಆದರೆ ಜೈನ ಮತ್ತು ಬೌದ್ಧ ಮತಗಳ ಪ್ರಾಗಲ್ಭ್ಯವು ನಡೆಯುತ್ತಿರುವಾಗ ಸಹ, ಶೈವ ಧರ್ಮವು ಜನಗಣದ ಮಧ್ಯೆ ಅಂತರಗಂಗೆಯಂತೆ ಹಬ್ಬಿತ್ತು. ಅದು

ಚೆನ್ನಾಗಿಯೇ ಪಸರಿಸಿತ್ತು. ಬಂಗಾಳದ ಮಾತನ್ನೇ ಇಲ್ಲಿ ಪ್ರಸ್ತಾಪಿಸುವೆ. ನೀವೆಲ್ಲರೂ ತಿಳಿದಿರುವಂತೆ, ಬಂಗಾಳದ ಜನಗೋಷ್ಠಿಯು ಮುಖ್ಯವಾಗಿ ಆರು ಉಪಗೋಷ್ಠಿಗಳಲ್ಲಿ ವಿಭಜಿತವಾಗಿದೆ. ಮೇಲಿನ ಜನರೆಂದರೆ ಬ್ರಾಹ್ಮಣರು. ಅದರಲ್ಲಿಯೂ ವೈದ್ಯರು, ಜನಗಣದ ಶ್ರೇಣಿಗಿಂತಲೂ ಸ್ವಲ್ಪ ಮೇಲಿನವರಾಗಿದ್ದರು. ಬಂಗಾಳದ ಜನಗಣದಿಂದ ಉದ್ಭೋಧವಾಗುವ ಗೋಷ್ಠಿಗಳಿವು: ಪಶ್ಚಿಮ ರಾಢದ 'ಕುರ್ಮೀ ಮಹತ್ತೊ', ಇವರೇ ಮೂಲ ಬಂಗಾಳೀ ಜಾತಿಯವರು. ಇನ್ನು ದಕ್ಷಿಣದತ್ತ ಮಿದನಿಪುರ ಮತ್ತು ಇಪ್ಪತ್ತುನಾಲ್ಕು ಪರಗಣ ಜಿಲ್ಲೆಯಲ್ಲಿ, "ಮಹಿಷಯ"—ರಾಢದ ಉತ್ತರ ಮತ್ತು ಮಧ್ಯ ಭಾಗದ 'ಸದ್ಗೋಪ'; ಬಜೇಂದ್ರ ಭೂಮಿಯ 'ರಾಜವಂಶೀ', ಪೂರ್ವ ಸಮತಟದ ಮತ್ತು ದಕ್ಷಿಣ ದಬಾಕದ 'ನಮಃ ಶೂದ್ರ' ಮತ್ತು ಅದರ ಉಪವರ್ಗವಾದ 'ಚಾಕಮಾ' ಇತ್ಯಾದಿ ಎಲ್ಲವೂ ಮೂಲ ಬಂಗಾಳೀ ಜಾತಿಗಳಾಗಿವೆ. ಆನಂತರ ಕಾಲದಲ್ಲಿ ಆರ್ಯವಸಾಹತುಕಾರರ ಒತ್ತಾಯಕ್ಕೆ ಮಣಿದು, ಚಕಮಾ ವರ್ಗದವರು ಗುಡ್ಡ ಬೆಟ್ಟಗಳಿಗೆ ಹೋಗಿ ವಾಸಮಾಡಬೇಕಾಯಿತು. ಅವರೊಂದಿಗೆ ಆರ್ಯರು ಅಪಚಾರ ಮಾಡಿದರು. ಅವರಿಂದ ಇಂದು ಚಕಮಾ ಪಂಗಡವು ಪರ್ವತದ ಅಂಚಿನಲ್ಲಿಯೇ ಇರುವುದನ್ನು ಕಾಣುತ್ತೇವೆ.

ಅದೇನೇ ಇರಲಿ, ಬೌದ್ಧ–ಜೈನ ಮತಗಳ ಪ್ರಾಬಲ್ಯವಿರುವಾಗ ಸಹ ಈ ಬಂಗಾಳಿಗಳು ಶೈವ ಮತವನ್ನು ತೊರೆಯಲಿಲ್ಲ. ಮೇಲೆ ಬೌದ್ಧ–ಜೈನ ಮತಗಳ ಛಾಯೆ ಆವರಿಸಿತ್ತು. ಆದರೆ ಒಳಗೆ ಶೈವ ಧರ್ಮವೇ ನಡೆದಿತ್ತು. ಈ ಮಾತನ್ನು ಇಲ್ಲಿ ನೆನಪಿಡಿರಿ. ಆನಂತರ ಅದರ ಉಪಯೋಗವಿದೆ. ಅಂಥ ಸಮಯದಲ್ಲಿಯೂ ಶಿವನನ್ನು ಮನದಲ್ಲಿರಿಸಿ ಜನರು ಅಲ್ಪಸ್ವಲ್ಪ ಅನುಷ್ಠಾನವನ್ನು ಕಲ್ಪಿಸಿರಲಿಲ್ಲ. ಶಿವನ ಯುಗದಲ್ಲಿ ಇಂಥ ಅನುಷ್ಠಾನವೇನೂ ಇರಲಿಲ್ಲ. ಆದರೆ ಶಿವನ ಬಗೆಗೆ ಜನರಿಗಿದ್ದ ಭಕ್ತಿ ಮತ್ತು ನಿಷ್ಠೆಗಳ ಕಾರಣದಿಂದ, ಅವರು ಈ ಅನುಷ್ಠಾನವನ್ನು ಪಾಲಿಸುತ್ತಿದ್ದರು. ಇದೇ ಮೇರೆಗೆ ಈ ಅನುಷ್ಠಾನವು ಬಂಗಾಲದಲ್ಲಿ ಇನ್ನೂ ಅಲ್ಪಸ್ವಲ್ಪ ಉಳಿದುಕೊಂಡಿದೆ. ಇನ್ನಷ್ಟು ಸರಿಯಾಗಿ ನೋಡಿದರೆ, ಈ ಅನುಷ್ಠಾನ ಕ್ರಮವು ಲಿಖಿತ ರೂಪದಲ್ಲಿರುವುದನ್ನು ಪಡೆಯುತ್ತೇವೆ. ಸೈನಿಯ ಬಂಗಾಳಿಗಳಲ್ಲಿಯೇ ಇದು ಹೆಚ್ಚಾಗಿ ಪ್ರಚಲಿತವಿತ್ತು. ಚಾಕಮಾ ಜನರು ಆ ಮುಂದಿನ ಕಾಲದಲ್ಲಿ ಹೀನಯಾನೀ ಬೌದ್ಧರಾಗಿದ್ದರು. ಆದರೆ ಇತರ ಐದು ಶ್ರೇಣಿಯ ಜನರೇನೂ ಬೌದ್ಧರಾಗಿಲ್ಲ. ಅವರಿಂದು ಪೌರಾಣಿಕ ಧರ್ಮದಲ್ಲಿ ಬಂದು ಸೇರಿದ್ದಾರೆ. ಆ ಸಮಯ,ಹದಿನಾರಾಣೆ ಶೈವ ಧರ್ಮವಿತ್ತು, ಅವರು ಆಚರಿಸುತ್ತಿದ್ದ ಅನುಷ್ಠಾನಗಳಲ್ಲಿ 'ಚಡಕ' ಎಂಬುದೊಂದು. ಇದೊಂದು ಮಹಾಯಾನೀ ಬೌದ್ಧರ ಧರ್ಮ ಚಕ್ರ ವ್ಯವಸ್ಥೆಯಂತೆ, ಬುದ್ಧನು ಮೊತ್ತ-ಮೊದಲು ಸಾರಾನಾಥದಲ್ಲಿ ಧರ್ಮಪ್ರಚಾರಗೆಯ್ದನು. ಆದಕ್ಕೂ ಮುನ್ನ ಮಗಧದಲ್ಲಿ ಸಾರೀಪುತ್ರ ಹಾಗೂ ಮಹಾಮುದಗಲನಿಗೆ ದೀಕ್ಷೆ ನೀಡಿದ್ದನು. ಆದರೆ ಧರ್ಮ ದೇಪಣೆಯನ್ನು ಸಾರಾನಾಥದಲ್ಲಿಯೇ ನೀಡಿದ್ದನು. (ವಾರಣಾಸೀಯ ಬಳಿಯ ಇಂದಿನ ಸಾರಾನಾಥ. ಇದರ ಪ್ರಾಚೀನ ಹೆಸರು ಈಶಿಪತ್ತನ ಮಿಗದಾಂವ. ಸಂಸ್ಕೃತದಲ್ಲಿ ಋಷಿಪತ್ತನ ಮೃಗದಾವ) ಆಗ ಅವನು ಐವರು ವ್ಯಕ್ತಿಗಳ ಸಮಕ್ಷಮ ವಿಶೇಷ ಮುದೆ

ಯಲ್ಲಿ ಕುಳಿತು ಧರ್ಮದೇಷಣೆ ನೀಡಿದ್ದನು. ಈ ವಿಶೇಷ ಮುದ್ರೆಯ ಹೆಸರು ಧರ್ಮ ಚಕ್ರ ಪ್ರವರ್ತನ ಮುದ್ರೆಯೆಂದಿತ್ತು. ಯಾವ ಐವರು ವ್ಯಕ್ತಿಗಳ ಸಮಕ್ಷಮ ಧರ್ಮ ದೇಷಣೆ ನೀಡಿದ್ದನೋ, ಅವರಿಗೆ ಹೀಗೆ ಹೇಳಿದ್ದನು. ನೀವು ನಿರಂತರವಾಗಿ ಧರ್ಮ ಚಕ್ರವನ್ನು ತಿರುಗಿಸುತ್ತ ಸಾಗಿರಿ. ಈ ಐವರು ಶಿಷ್ಯರೆಂದರೆ ಕೌಂಡಿಪಾಣ, ಬಪ್ಪ, ಭದ್ದೀಯ, ಮಹಾನಾಮ ಮತ್ತು ಅಸ್ಸಾಜಿ. ಈ ಹೆಸರುಗಳ ಸಂಸ್ಕೃತ ರೂಪಗಳು, ಕೌಂಡಿಜ್ಯ, ಬತ್ರ, ಭದ್ರೇಭ, ಮಹಾನಾಮ, ಮತ್ತು ಅಶ್ವಜೀತ. ಧರ್ಮದ ಚಕ್ರ ವನ್ನು ಈ ರೀತಿ ತಿರುಗಿಸುವುದು, ಮಹಾಜ್ಞಾನಿ ಬ್ರಹ್ಮೋಗಳಲ್ಲಿ ಇಂದು ಸಹ ಇದೆ. ವಿಶೇಷವಾಗಿ ಕಿಮ್ ಪುರುಷ, ಏರ್ಷಿಯಾ (ತಿಬೇಟಿನ) ಲಾಮಾ ಮಾದರಿಯಲ್ಲಿ, (hamaism is a braneh of a mahayanism) ಭೂತಾನ, ತಿಬೇಟ, ಅರುಣಾಚಲ, ಲಡಾಖ, ನೇಪಾಳಗಳಲ್ಲಿ, ಮತ್ತು ಸಿಕ್ಕಿಮ್ ಇಲ್ಲವೆ ಬಂಗಾಳದ ದಾರ್ಜಿ ಲಿಂಗದಲ್ಲಿಯೂ ಸಹ ಅಲ್ಲಲ್ಲಿ ಸ್ವಲ್ಪ ಜನರಿದ್ದಾರೆ. ಆ ಜನರು ಚಕ್ರವನ್ನು ತಿರುಗಿಸು ತ್ತಿದ್ದರು. ಮತ್ತು ಹೀಗೆ ಹೇಳುತ್ತಿದ್ದರು. "ಓಮ್ ಮಣಿ ಪದ್ಮೇಹಮ್, ಓಮ್, ಮಣಿ ಪದ್ಮೆಹಮ್" ಎನ್ನುತ್ತಿದ್ದರು. ಈ ವಿಚಾರವನ್ನು ಬಿಂಬಿಸಲು. ಅಂದರೆ ಚಕ್ರವು ನಿರಂತರವಾಗಿ ತಿರುಗುತ್ತಿದೆಯೆಂಬುದನ್ನು ಬಿಂಬಿಸಲು, ಒಂದು ಕೃತ್ರಿಮ ವೃಕ್ಷ ವನ್ನು ನಿಲ್ಲಿಸಲಾಗುತ್ತಿತ್ತು. ಇದರ ಮೇಲೆ ಬಿದಿರುಗಳ ಕಟ್ಟುತ್ತಿದ್ದರು. ಆ ಕೋಲು ತಿರುಗುತ್ತಿತ್ತು. ಈ ತಿರುವಿಕೆಯು ಧರ್ಮಚಕ್ರದ ತಿರುಗುವಿಕೆಯ ಸಂಕೇತವಾಗಿತ್ತು. ಹೀಗೆ ಧರ್ಮ ಚಕ್ರವು ತಿರುಗಿತ್ತು. ತಿರುಗುತ್ತಿತ್ತು. ಚಕ್ರ ಚಕ್ಕರ–ಚಡಕ ತಿರುಗುತ್ತಿ ರುವುದು ಕಲಕತ್ತೆಯಲ್ಲೂ ಸಹ, ಮೊದಲು ಕೆಲವು ಚಡಕ ಡಾಂಗಾ ಪ್ರದೇಶಗಳಿದ್ದವು.

ಈ ಪ್ರಕಾರ ಮಹಾಯಾನ ಬೌದ್ಧರ ಪ್ರಭಾವ ಮತ್ತು ಅದೇ ರೀತಿ ಮೊದಲಿನ ಶೈವ ಧರ್ಮದ ಪ್ರಭಾವವೂ ಸೇರಿ ಚಡಕದ ಪ್ರಾರಂಭವಾಗಿತ್ತು. ಬಂಗಾಳದ ಜನರು ಬೌದ್ಧ ಧರ್ಮ ತೊರೆದು ಪೌರಾಣಿಕ ಧರ್ಮವನ್ನು ಅಜಮಾಸು ಹದಿಮೂರು ನೂರು ವರ್ಷ ಮೊದಲು ಸ್ವೀಕರಿಸಿದ್ದರು. ಬೌದ್ಧ ಧರ್ಮದ ಧರ್ಮ ಚಕ್ರವಿತ್ತು ಆದರೆ ಚಕ್ರ ದೇವತೆಯೇ ಇರಲಿಲ್ಲ. ಹೀಗಾಗಿ ಶಿವಾಚಾರದ ಶಿವನೇ ಚಕ್ರದೇವತೆಯಾದ. ಏಕೆಂದರೆ ಒಳಗೊಳಗೆ ಶೈವ ಧರ್ಮ ಹಿಂಗದೆ ಉಳಿದಿತ್ತು. ಚಡಕದೊಂದಿಗೆ ಇನ್ನು ಒಂದು ಅನುಷ್ಠಾನವು ಲಭಿಸಿತ್ತು. ಅದುವೇ 'ಗಾಜನ'. ವರ್ಷವಿಡೀ ಬೇರೆ ಬೇರೆ ಜನರೊಂದಿಗೆ ಬೇರೆ ಬೇರೆ ರೀತಿಯ ಮಾತನ್ನಾಡುವುದು. ಪ್ರಾಪಂಚಿಕ ಕಾರ್ಯಗಳನ್ನು ಮಾಡುವುದು ಮತ್ತು ಕನಿಷ್ಠ ಒಂದು ದಿನವಾದರೂ ಪ್ರಾಣಶಕ್ತಿಯನ್ನೆಲ್ಲ, ಒಟ್ಟು ಗೂಡಿಸಿ ಶಿವನಾಮ ಗರ್ಜಿಸುವುದು, 'ಹೇ ಶಿವ' ಎಂದು ಮಾನವರನ್ನು ಕರೆಯು ವುದು. 'ಗರ್ಜನ' ಇದು ಪ್ರಾಕೃತದಲ್ಲಿ 'ಗಜ್ಜನ' ಎಂದೂ, ಇಂದಿನ ಬಂಗಾಳದಲ್ಲಿ 'ಗಾಜನ' ಎಂದೂ ಉಚ್ಚರಿಸಲ್ಪಡುತ್ತದೆ. ಹಾಗಾದರೆ, 'ಚಡಕ'ವನ್ನು ತಿಳಿದಂತಾ ಯಿತು. 'ಗಾಜನ'ವನ್ನೂ ತಿಳಿದಂತಾಯಿತು. ನಿಜ ಹೇಳುವುದಾದರೆ, ಶಿವನ ಕಾಲ ದಲ್ಲಿ ಇವಾವವೂ ಇರಲಿಲ್ಲ. ಇವುಗಳೆಲ್ಲ ಶಿವನ ಅವಿರ್ಭಾವದ ನಂತರ ಐದೂವರೆ ಸಾವಿರ ವರ್ಷಗಳ ನಂತರ ಅಂದರೆ ಬೌದ್ಧೋತ್ತರ ಮತ್ತು ಜೈನೋತ್ತರ ಕಾಲದಲ್ಲಿ ಹುಟ್ಟಿವೆಯೆಂಬುದನ್ನು ನೆನಪಿನಲ್ಲಿಡಿರಿ.

ಇನ್ನೂ ಒಂದು ಅನುಷ್ಠಾನವಿದೆ. ಅದುವೇ ಝೂಂಪನ. ಕಬ್ಬಿಣದ ಮೊಳೆ ಗಳ ಮೊನಚಾದ ತುದಿಗಳ ಮೇಲೆ, ಕಬ್ಬಿಣದ ಕುಂಡದ ಮೇಲೆ ಜಿಗಿದಾಡುವುದು. ಝೂಂಪನವಾಗಿದೆ. ಬಾಣಗಳನ್ನು ಮೈಯಲ್ಲಿ ಚುಚ್ಚಿಕೊಂಡು ತಿರುಗುವುದು ಸಹ ಈ ಝೂಂಪನದ ಒಂದು ಭಾಗವೇ ಆಗಿದೆ. ಆ ಕಾಲಕ್ಕೆ ಅತ್ಯಧಿಕ ನಿಷ್ಠೆ ಮತ್ತು ಭಕ್ತಿಯ ಕಾರಣದಿಂದ ಎಷ್ಟೊಂದು ಏಕಾಗ್ರತೆ ಉಂಟಾಗುವುದೆಂದರೆ, ನರದ ಚೇತನ ಶಕ್ತಿಯೇ ಸ್ತಂಭಿತವಾಗುತ್ತದೆ. ಆದ್ದರಿಂದ ಆ ಕಾಲಕ್ಕೆ ಕಷ್ಟವು ಕಷ್ಟವೆನಿಸುವುದೇ ಇಲ್ಲ. ಶರೀರ ದಿಂದ ರಕ್ತ ಹರೆಯುತ್ತಿರುತ್ತದೆ. ಈ ಪದ್ಧತಿಯ ಪರಿವರ್ತನೆಯನ್ನು ವರೇಂದ್ರ ಭೂಮಿಯ (ಬಂಗಾಳದ ಉತ್ತರ ಭಾಗದ ಹೆಸರೇ ವರೇಂದ್ರ ಭೂಮಿ)ಓರ್ವ ಅರಸನು ಮಾಡಿದ್ದನು. ಅವನ ಹೆಸರು ಬಾಣ ರಾಜಾ ಎಂದಿತ್ತು. ಇಂದಿಗೂ ಸಹ ಅವನ ಹೆಸರಿನಲ್ಲಿ ಬಾಣ ಗಡ, ಬಾಣೇಶ್ವರ ಇತ್ಯಾದಿ ಸ್ಥಾನಗಳ ಹೆಸರಿರುವುದನ್ನು ನೀವು ನೋಡಬಹುದು. ಬಾಣ ರಾಜನು ಅತ್ಯಂತ ಶಿವಭಕ್ತನಾಗಿದ್ದನು. ಆದರೆ ಶಿವನ ಅವಿರ್ಭಾವದ ನಂತರ ಐದೂವರೆ ಸಾವಿರ ವರ್ಷಗಳ ನಂತರ ಬಾಣ ರಾಜನು ಬಂದಿ ದ್ದನು. ಬಾಣರಾಜನು ಈ ಎಲ್ಲ ಕ್ರಿಯೆಗಳನ್ನು ವೈಯಕ್ತಿಕ ರೂಪದಲ್ಲಿ, ಮಾಡುತ್ತಿ ದ್ದನು. ಇದರಿಂದ 'ಬಾಣ ವಿಂದ್ಯನಾಗುವುದು' ಎಂದು ಇದನ್ನು ಕರೆಯುತ್ತಿದ್ದರು. ಸ್ನಾಯುಪುಂಜದ ಏಕಾಗ್ರತೆಯಾಗುವ ಕಾರಣದಿಂದ ಕಷ್ಟದ ಬೋಧವಾಗುವುದಿಲ್ಲ. ಇದರಿಂದ ಮಾನವನಿಗೆ ಕಷ್ಟವಾಗುವುದಿಲ್ಲ. ಇದೂ ಸಹ, ಶಿವನ ಕಾಲದ ವಸ್ತುವಲ್ಲ ವೆಂಬುದನ್ನು ನೀವು ನೆನಪಿಡಿರಿ.

ಇದಲ್ಲದೆ, ಇನ್ನೂ ಒಂದು ಉತ್ಸವವನ್ನು ಬಂಗಾಳದ ಎಲ್ಲ ಸ್ಥಾನಗಳಲ್ಲಿ. ಶಿವ ನನ್ನೇ ಕೇಂದ್ರವಾಗಿರಿಸಿಕೊಂಡು, ಸ್ವಲ್ಪಲ್ಲ ಸ್ವಲ್ಪ, ಆಚರಿಸುತ್ತಾರೆ. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ಅಜಯ ನದಿಯ ಘಾಟಿನಲ್ಲಿ ಅಂದರೆ ರಾಢ, ನಾಡಿನಲ್ಲಿ ಆಚರಿಸುತ್ತಾರೆ. ಇದಕ್ಕೆ 'ಬೋಲಾನ' ಎನ್ನುತ್ತಾರೆ. ಕೈಯಲ್ಲಿ ನರ–ಕಪಾಲವನ್ನು ಹಿಡಿದುಕೊಂಡು ಶಿವನ ಹೆಸರಿನಲ್ಲಿ ಕೂಗಿಯುತ್ತಾರೆ, ಹಾಡುತ್ತಾರೆ. ಅತಿ ಜೋರಾಗಿ ಶಿವನ ಗುಣಗಳ ಘೋಷಣೆ ಮಾಡುತ್ತಾರೆ. ಮತ್ತು ಭಿಕ್ಷೆ ಬೇಡುತ್ತಾರೆ. ಇದುವೇ 'ಬೋಲಾನ' ಉತ್ಸವವಾಗಿದೆ. ಈ ಬೋಲಾನ ಉತ್ಸವದಲ್ಲಿ ತಂತ್ರದ ಸ್ವಲ್ಪ ಛಾಯೆಯಿದೆಯೇನೋ ನಿಜ; ಆದರೆ ಇಂಥ ಆಚರಣೆಯು ಶಿವನ ಕಾಲದಲ್ಲಿಯೂ ಇರಲಿಲ್ಲ. ಇದು ಬೌದ್ಧೋ ತ್ತರ, ಜೈನೋತ್ತರ ಸಮಯದಲ್ಲಿ ಆಚಾರದಲ್ಲಿ ಬಂದಿದೆ. ಈ ಎಲ್ಲ ಆಚರಣೆಗಳ ಬಗೆಗೆ ನಿಮಗೆ ಸ್ವಲ್ಪ ತಿಳಿದಿರಲೆಂದು ನಾನು ಈ ಉತ್ಸವದ ಬಗ್ಗೆ ತಿಳಿಸಿ ಹೇಳಿದ್ದೇ ನಷ್ಟೇ. ಈ ರೀತಿಯ ಆಚಾರಗಳಲ್ಲಿ ನೈಜತೆ ಎಷ್ಟು ಎಂಬುದನ್ನು ನೀವು ನೆನಪಿಡಿರಿ.

ಈ ನಾಲ್ಕು ಆಚಾರಗಳ ಬಗ್ಗೆ ಹೇಳಿದ ಮೇಲೆ ಇನ್ನೊಂದು ಮಹತ್ವಪೂರ್ಣ ಮಾತನ್ನು ಹೇಳದಿರಲಾರೆವು. ಅದೆಂದರೆ ಶೈವ ಧರ್ಮದ ನಂತರ ಈ ದೇಶದಲ್ಲಿ ಬೌದ್ಧ ಧರ್ಮ ಬಂದಿತು; ಮತ್ತು ಜೈನ ಧರ್ಮವೂ ಬಂದಿತು. ಆದರೆ ಬೌದ್ಧ ಮತ್ತು ಜೈನ ಧರ್ಮಗಳಲ್ಲಿ, ಕಾಲಾಂತರದಲ್ಲಿ, ಯಾವುದೇ ದಾರ್ಶನಿಕ ಶಕ್ತಿ ಇಲ್ಲವಾ ದುದರಿಂದ ಅವು ಕ್ಷಯಿಸಿದವು. ಇಂಥ ಒಂದು ಅವಸ್ಥೆಯಲ್ಲಿ ಬೌದ್ಧ ಮತ್ತು ಶೈವ ಮತಗಳು ಕ್ಷಯಿಸಹತ್ತಿದ್ದವು ಮತ್ತು ಪೌರಾಣಿಕ ಧರ್ಮದ ಅಭ್ಯುದಯವಾಗಹತ್ತಿತ್ತು.

ಇಂಥ ಒಂದು ಸ್ತರವು ಈ ದೇಶದಲ್ಲಿ ಪ್ರಚಲಿತವಿತ್ತು. ಇದೊಂದು ಮಧ್ಯವರ್ತಿ ಕಾಲದ ವ್ಯವಸ್ಥೆಯಾಗಿದೆ. (Inter-mittant state) ಈ ಅವಸ್ಥೆಯಲ್ಲಿ ಏನು ನಡೆಯುತ್ತಿತ್ತು? ಕ್ಷಯವಾಗುತ್ತ ನಡೆದ ಬೌದ್ಧ ಧರ್ಮವಿತ್ತು. (ಆ ಯುಗದಲ್ಲಿ ಅದರ ಹೆಸರು ಬೌದ್ಧ ಯೋಗಾಚಾರ ಅಥವಾ ವಜ್ರಯಾನ ಎಂದಿತ್ತು) ಅದರ ಜೊತೆಗೆ ಪೌರಾಣಿಕ ಧರ್ಮದ ಉದ್ಭವವಾಗಹತ್ತಿತ್ತು. (ಶಿವಾಚಾರ-ಶೈವ ಧರ್ಮದೊಂದಿಗೆ ಇದರ ಸಂಪರ್ಕವೇನೂ ಇರಲಿಲ್ಲ) ಇವೆರಡರ ಮಿಶ್ರಣದಿಂದ ಆ ಕಾಲಕ್ಕೆ ಒಂದು ಆಚರಿಸಬಲ್ಲ ಮತವಾದವು ಬಂದಿತ್ತು. ಅದರ ಹೆಸರು 'ನಾಥ ಧರ್ಮ'. ಈ ನಾಥ ಧರ್ಮದ ಗುರುಗಳ ಹೆಸರಿನ ಕೊನೆಗೆ 'ನಾಥ' ಶಬ್ದವಿರುತ್ತದೆ. ಹೇಗೆಂದರೆ, ಆದಿ ನಾಥ, ಮತ್ಸ್ಯೇಂದ್ರನಾಥ, (ಇವನು ಮತ್ಸ್ಯೇಂದ್ರಾಸನದ ಪರಿವರ್ತನೆ ಮಾಡಿದನು) ಮೀನನಾಥ, ಗೋರಖಿನಾಥ, ಗೋಹಿನೀನಾಥ, ಚೌರಂಗೀನಾಥ ಇತ್ಯಾದಿ. ಉತ್ತರ ಪ್ರದೇಶ, ಬಿಹಾರ, ಬಂಗಾಲಗಳಲ್ಲಿ ಈ ನಾಥ ಧರ್ಮದ ವ್ಯಾಪಕ ಪ್ರಭಾವವಿತ್ತು. ಹೀಗೆ ಈ ನಾಥ ಧರ್ಮದಲ್ಲಿ ಬೌದ್ಧಧರ್ಮದ ಬಹಳಷ್ಟು ಅಂಶವಿತ್ತು. ಆದರೆ ಇಲ್ಲಿ ಶಿವ ನನ್ನು ಅಧಿಷ್ಠಾತಾ ವಿಗ್ರಹ ರೂಪದಲ್ಲಿ ಒಪ್ಪಲಾಗಿದೆ. ಇದು ಶೈವ ಧರ್ಮವೇನೂ ಅಲ್ಲ. ಹಾಗೆ ನೋಡಿದರೆ, ಶಿವನಿಂದ ಪರಿವರ್ತಿತವಾದುದೇನೂ ಇದರಲ್ಲಿ ಇಲ್ಲ.

ಹೀಗೆ ಕ್ಷಯಿಸುತ್ತಿರುವ ಬೌದ್ಧ ಜೈನ ಧರ್ಮಗಳೊಂದಿಗೆ ಶಿವಾಚಾರವು ಕೂಡಿ ಕೊಂಡಿತೆನ್ನುವ ಮಾತೇನೂ ಇಲ್ಲ. ಪೌರಾಣಿಕ ಮತಾನುಸಾರ ಐದು ಬೇರೆ ಬೇರೆ ಉಪಆಚಾರಗಳಿವೆ. ಇವುಗಳೆಂದರೆ, ಶಿವಾಚಾರ, ಶಾಕ್ತಾಚಾರ, ವೈಷ್ಣವಾಚಾರ, ಸೌರಾಚಾರ ಮತ್ತು ಗಾಣಪತ್ಯಾಚಾರ. ಅತ್ತ ಬೌದ್ಧ ಧರ್ಮದ ಅಂತ್ಯವಾಗಹತ್ತಿತ್ತು. ಇತ್ತ ಪೌರಾಣಿಕ ಧರ್ಮವು ತಲೆ ಎತ್ತತೊಡಗಿತ್ತು. ಇದೇ ಸಮಯಕ್ಕೆ ಪಶ್ಚಿಮ ಭಾರತದಲ್ಲಿ ಮಹಾರಾಷ್ಟ್ರದ ಗಡಿಯಲ್ಲಿ ಗಾಣಪತ್ಯಾಚಾರವು ಪ್ರಾರಂಭವಾಗಿತ್ತು. ಆ ರ್ಥಾತ್ ಗಣಪತಿ ಇಲ್ಲವೆ ಗಣೇಶನನ್ನು ಕೇಂದ್ರವಾಗಿರಿಸಿಕೊಂಡು, ಒಂದು ಹೊಸ ಧರ್ಮಮತವು ಮೂಡತೊಡಗಿತ್ತು. ಬಂಗಾಳದ ಕೆಲವೊಂದು ಭಾಗಗಳಲ್ಲಿ ಶಾಕ್ತ ಧರ್ಮ ಬಲಿದಾನ ಇತ್ಯಾದಿ ಶಾಕ್ತಾಚಾರದ ಉದ್ಭವವಾಗಿತ್ತು.

ದಕ್ಷಿಣ–ಭಾರತದಲ್ಲಿ ಆ ಕಾಲಕ್ಕೆ ಶಿವಾಚಾರದೊಂದಿಗೆ ವೈಷ್ಣವಾಚರದ ಆವಿರ್ಭಾವಾಗಿತ್ತು. ಆ ಕಾಲಕ್ಕೆ ಬಂಗಾಳದಲ್ಲಿ ವೈಷ್ಣವಾಚಾರವಿನ್ನೂ ಬಂದಿರಲಿಲ್ಲ. ಸೌರಾಚಾರವು ಹೊರಗಿನಿಂದ ಬಂದ ಶಾಕದ್ವೀಪೀ ಬ್ರಾಹ್ಮಣರಲ್ಲಿ ಪ್ರಚಲಿತವಿತ್ತು. ಅವರ ಗ್ರಹದೇವತೆ ಸೂರ್ಯ. (ಅವರು ಜ್ಯೋತಿಷ್ಯ ಹೇಳುತ್ತಿದ್ದರು ಶಾಕದ್ವೀಪಿ ಗಳು ಸೂರ್ಯನನ್ನೇ ತಮ್ಮ ಗ್ರಹದೇವತೆಯ ರೂಪದಲ್ಲಿ ಸ್ವೀಕರಿಸಿದ್ದರು). ಅವರು ವೇದ–ವಿರೋಧಿಯಾಗಿದ್ದರು. ಇಂದಿಗೂ ಸಹ, ಶಾಕದ್ವೀಪಿಗಳು ಅಧಿಕವಾಗಿರುವ ಕಡೆಗಳಲ್ಲೆಲ್ಲ ಸೂರ್ಯ–ಮಂದಿರಗಳಿವೆ. ಸೂರ್ಯ ದೇವತೆಯು ಉಡುಗೆಗಳು ಅಫಗಾನೀಯರಂತೆ ಸಡಿಲಾದ ಪೈರುಹಾಮಾ, ನಡುವಿನ ಮೇಲೆ ಅದೇ ಪ್ರಕಾರದ ಜಾಕೀಟು, ಕೈಯಲ್ಲಿ ಜಪಮಾಲೆ,ಶಿರದ ಮೇಲೇ ಟೊಪ್ಪಿಗೆಗಳಾಗಿದ್ದವು.ಯವನ ರೂಪಿ ಸೂರ್ಯ ದೇವತೆಯ ರೂಪವು ಇದಾಗಿತ್ತು. ಅರ್ಥಾತ್ ಮಧ್ಯಏಶಿಯಾದ ಶಾಕ ದ್ವೀಪಿ ಬ್ರಾಹ್ಮಣರ ದೇವತೆಯು ಸೂರ್ಯದೇವತೆಯಾಗಿತ್ತು.

ಏನೇ ಇರಲಿ; ಬೌದ್ಧ ಮತ್ತು ಜೈನ ಮತಗಳೇ ಪ್ರವರ್ತನೆಗೊಂಡು ಈ ಐದು ಆಚಾರಗಳ (Ctlt) ರೂಪ ತಾಳಿದವು. ಈ ಯುಗದಲ್ಲಿದ್ದ ನಾಥಧರ್ಮದ ಮತ್ಸ್ಯೇಂದ್ರನಾಥನು ಬಂಗಾಳದ ರಾಜಪುತ್ರನಾಗಿದ್ದನು. ಆ ಕಾಲಕ್ಕೆ 'ಡಬಾಕ' ಉಪವಂಗದ ರಾಜಧಾನಿಯಾಗಿತ್ತು ಪೈನಾವತಿ. (ಇಂದಿನ ಕೋಮಿಲ್ಲಾ ಜಿಲ್ಲೆಯ ಒಂದು ಜಾಗೆ, ಇಂದಿನ ತ್ರಿಪುರಾ ರಾಜ್ಯದ ಬಳಿ)

ನಾಥ ಧರ್ಮದ ಕಾಲಕ್ಕೆ ಬಂಗಾಳದಲ್ಲಿ ಇನ್ನೊರ್ವ ನಾಥ ಯೋಗಿ ಇದ್ದನು. ಅವನ ಹೆಸರು ಚೌರಂಗಿ ನಾಥ. ಈಗ ಯಾವ ಜಾತಿಯ ಹೆಸರು ಚೌರಂಗೀ ಎಂದಿದೆಯೋ, ಜಾಗೆಯಲ್ಲಿ ಅವನ ಆಶ್ರಮವಿತ್ತು. ಮತ್ತು ಕಾಳೀಘಾಟಿಗೆ ಹೋಗಿಬರಲು ಜನರಿಗೆ ತೊಂದರೆಯಾಗುತ್ತಿತ್ತು. ಚೌರಂಗೀನಾಥನು ತನ್ನ ಶಿಷ್ಯರ ಸಹಾಯದಿಂದ ಕಾಳೀಘಾಟದ ವರೆಗೆ ಒಂದು ಹಾದಿ ಮಾಡಿದನು. ಆ ಹಾದಿಗೆ ಚೌರಂಗೀ ಬಾಬಾನ ಹಾದಿ ಎಂದು ಹೆಸರು ಬಿದ್ದಿತ್ತು. ಈಗೀಗ ಆ ಹಾದಿಯ ಹೆಸರನ್ನು ಬದಲಿಸಿದ್ದಾ ರೆಂದು ಕೇಳಿದ್ದೇನೆ. ಹೀಗೆ ಮಾಡಿ ಇತಿಹಾಸವನ್ನು ವಿಕೃತಗೊಳಿಸಿದ್ದಾರಷ್ಟೇ. ಇದಾ ದರೋ, ಮಧ್ಯವರ್ತಿ ಕಾಲದ ಆವಸ್ಥೆ. ಈ ಆವಸ್ಥೆಯಲ್ಲಿ ಅವನ ವೇಳೆಯಲ್ಲಿ ಬುದ್ಧ ಮತ್ತು ಶಿವನನ್ನು ಸೇರಿಸಲಾಗುತ್ತಿತ್ತು. ಏಕೆಂದರೆ, ನಾನೀಗಾಗಲೇ ಹೇಳಿದಂತೆ, ಕೊನೆಯವರೆಗೂ ಅಂತರಾಳದಲ್ಲಿ ಶೈವ ಧರ್ಮವೇ ಇತ್ತು. ಶೈವ ಧರ್ಮವು ಒಳಗಿನ ಬಂಗಾರವಾಗಿತ್ತು. ಬುದ್ಧ ಧರ್ಮವು ಕೇಪಲ ಮೇಲಿನ ಗಿಲೀಟಾಗಿತ್ತು. ಆ ಕಾಲಕ್ಕೆ ಬುದ್ಧ ಮತ್ತು ಶಿವರನ್ನು ಸೇರಿಸಿ, 'ಬಟುಕ ಬುದ್ಧ'ನನ್ನು ನಿರ್ಮಿಸಲಾಗಿತ್ತು. ಇದುವೇ ಪೌರಾಣಿಕರ ಕೈಯಲ್ಲಿ ಸಿಕ್ಕು, 'ಬಟುಕ ಭೈರವ' ಎಂದಾಯಿತು. ಸಂಸ್ಕೃತದ 'ಬಟುಕ' ಶಬ್ದಕ್ಕೆ ಅನೇಕ ಅರ್ಥಗಳುಂಟು. ಒಂದು ಅರ್ಥವೆಂದರೆ 'ಶ್ರೇಷ್ಠ' ಎಂದು. ಸಂಸ್ಕೃತದ 'ಬಟಕ'ದಿಂದ ಮಾಗಧೀ ಭಾಷೆಯ 'ಬಡುಅ' ಆಯಿತು. ಅದರಿಂದ ಅರ್ಧಮಾಗಧೀಯಲ್ಲಿ 'ಬಡುಅ' ಎಂದೂ, ಬಂಗಾಳಿಯಲ್ಲಿ 'ಬಡುಅ' ಎಂದು ಆಯಿತು. ಇದರಿಂದ ಮಧ್ಯಯುಗದ ಬಂಗಾಳಿಯಲ್ಲಿ 'ಬೋಡೋ' ಎಂದಾಯಿತು.

ಚಟಗಾಂವ ಗಡಿಯಲ್ಲಿ ವಾಸಿಸುವ ಹೀನಯಾನಿ ಬೌದ್ಧರಲ್ಲಿ ಇಂದು ಸಹ 'ಬಡುಅ' ಪದವಿ ಪ್ರಚಲಿತವಿರುವುದನ್ನು ನೀವು ನೋಡಬಹುದಾಗಿದೆ. 'ಬಡುವಾ' ಪದವಿ ಹೊಂದಿದ ಜನರ ಮಾತೃಭಾಷೆಯು ಬಂಗಾಳಿಯಾಗಿದ್ದರೆ, ಅವರು ಚಟಗಾಂವದ ಹೀನಯಾನೀ (ಸ್ಥವಿರವಾದೀ) ಬೌದ್ಧರಾಗಿದ್ದರೆಂದು ಅನುಮಾನಪಡಲು ಆತಂಕವೇ ನಿಲ್ಲ. ಇದಲ್ಲದೆ ಆಸಾಮದ ಪೌರಾಣಿಕ ಮತಾವಲಂಬಿಕೆಗಳಲ್ಲಿಯೂ ಸಹ, 'ಬಡುವಾ' ಪದ್ಧವಿಯಿದೆ. ಏನೇ ಇರಲಿ; 'ಬಡುಅ' ಶಬ್ದದಿಂದ 'ಬೋಡೋ' ಶಬ್ದ ಬಂದಿದೆ. ಈ ಬಂಗಾಳದ ಜನರು ಪೌರಾಣಿಕ ಧರ್ಮವನ್ನು ಸ್ವೀಕರಿಸಿದ್ದಾರೆ. ಬಟುಕ ಭೈರವನೇ (ಬೋಡೋ ಭೈರವ) 'ಬಡೋ ಶಿವ'ನಾಗಿದ್ದಾನೆಂಬುದನ್ನು ಅವರು ಮರೆತಿದ್ದಾರೆ. ಶಬ್ದದಲ್ಲಿರುವ ಹೋಲಿಕೆಯ ಕಾರಣದಿಂದ 'ಬೋಡೋ ಶಿವ'ನನ್ನು 'ಬುಡೋ' ಶಿವನ ನ್ನಾಗಿ ಮಾಡಿಬಿಟ್ಟಿದ್ದಾರೆ. ಏಕೆಂದರೆ, 'ಬೋಡೋ' ಶಬ್ದದ ಅರ್ಥವು ಅವರಿಗೆ ಸಿಗದಾಗಿದೆ. 'ಬಟುಕ' ಶಬ್ದದ ಅರ್ಥವು ತಮಗೆ ತಿಳಿದಿದೆಯೆಂಬುದನ್ನು ಅವರು

ಅರಿತಿಲ್ಲ.

ಸಾವರ್ಣ ಚೌಧರೀ ಜನರು ದಕ್ಷಿಣ ಕಲಕತ್ತೆಯ ಜಮೀನದಾರರಾಗಿದ್ದಾರೆಂಬ ಸಂಗತಿ ತಮಗೆ ಬಹುಶಃ ಗೊತ್ತಿರಬಹುದು. ಪಶ್ಚಿಮ ಕಲಕತ್ತೆಯಲ್ಲಿ ಆ ಜನರು ಕಟ್ಟಿಸಿದ 'ಬಡೋ ಶಿವ'ನ ಮಂದಿರವಿತ್ತು. ಅರ್ಘಾತ್ 'ಬಡೋ ಶಿವನ ಮಂದಿರವಿತ್ತು. ಮತ್ತು ಆ ಮಂದಿರವನ್ನು ಕೇಂದ್ರವಾಗಿರಿಸಿಕೊಂಡು ಹಣ್ಣು, ಹೂ, ತಿಂಡಿ ತಿನಸುಗಳ ಪೇಟೆ ನಿರ್ಮಾಣವಾಗಿತ್ತು. ಆ ಪೇಟೆಗೆ 'ಬುಡಾ ಬಾಜಾರ' ಎಂದು ಜನ ಕರೆಯುತ್ತಿದ್ದರು. ಬುಡಾ ಶಿವನ ಬಾಜಾರವದು. ಪಶ್ಚಿಮ ಏಸಿಯಾದ ಬೇಸಾಯ ಗಾರರ ಆಡುಮಾತಿನಲ್ಲಿ ಇಂದು ಈ 'ಬುಡಾ ಬಜಾರ'ವು'ಬಡಾ ಬಜಾರ'ವಾಗಿ ಬಿಟ್ಟಿದೆ. 'ಬುಡೋ ಶಿವ' ಮಧ್ಯಕಾಲದ ದೇವತೆಯಾಗಿದ್ದ. ಆದರೆ ಇಂದಿನಿಂದ ಏಳು ಸಹಸ್ರ ವರ್ಷ ಮೊದಲು ಆಗಿ ಹೋದ,ಸದಾಶಿವನೊಂದಿಗೆ ಈ ದೇವತೆಯ ಯಾವ ಸಂಬಂಧವೂ ಇಲ್ಲ. ಬುಡಾಶಿವ, ಬೌದ್ಧ ದೇವತೆಯಷ್ಟೇ. ಸರಿಯಾಗಿ ಇದೇ ಪ್ರಕಾರ ಕ್ಷಯಿಸುತ್ತಿರುವ ಬೌದ್ಧಮತದೊಂದಿಗೆ ವೈಷ್ಣವಾಚಾರದ ಮಿಶ್ರಣವಾಗಿ, ಲೋಕೇಶ್ವರ ಬುದ್ಧನ ಉದ್ಭವವಾಯಿತು. ಈ ಲೋಕೇಶ್ವರ ಬುದ್ಧನು ವಿಶೇಷ ಕ್ಷೇತ್ರಗಳಲ್ಲಿ ಬೋಧಿಸತ್ವದ ರೂಪದಲ್ಲಿಯೂ ಗಣ್ಯನೆನಿಸಿದ್ದಾನೆ. ಆಕಾರದಲ್ಲಿ ವಿಷ್ಣುವಿನಂತೆ'. ಆದರೆ, ಶಿರದ ಮುಕುಟದಲ್ಲಿ ಒಂದು ಚಿಕ್ಕ ಬುದ್ಧ ಮೂರ್ತಿ! ಬೋಧಿ ಸತ್ತ್ವರನ್ನು ಗುರುತಿಸಲು ಇದೊಂದು ಲಕ್ಷಣವಾಗಿತ್ತು! ಅಂದರೆ ಶಿರದ ಮೇಲೆ ಬುದ್ಧನ ಮೂರ್ತಿ. ಪೌರಾಣಿಕ ಯುಗದ ಪ್ರಾರಂಭದಲ್ಲಿ ಲೋಕೇಶ್ವರ ಬುದ್ಧನಿಗೆ ಲೋಕೇಶ್ವರ ವಿಷ್ಣು ರೂಪದಲ್ಲಿ ಪೂಜೆಗೆಯ್ಯಲು ಪ್ರಾರಂಭವಾಯಿತು. ನಾನು ಅನೇಕ ಕಡೆಗಳಲ್ಲಿ ಲೋಕೇಶ್ವರ ವಿಷ್ಣುವಿನ ಮೂರ್ತಿಗಳನ್ನು ನೋಡಿದ್ದೇನೆ.

ಇಂಥ ಅವಸ್ಥೆಯಲ್ಲಿ ಬೌದ್ಧ ಮತ್ತು ಶಿವಾಚಾರಗಳ ಮಿಶ್ರಣದ ಫಲವಾಗಿ ಇನ್ನೂ ಒಂದು ದೇವತೆಯ ಉದ್ಭವವಾಯಿತು. ಆ ದೇವತೆಗೆ 'ಬೋಧಿ ಸತ್ತ್ವ ನೀಲನಾಥ' ಎಂದು ಕರೆಯುತ್ತಿದ್ದರು. ಬೋಧಿ ಸತ್ತ್ವವೆಂದು ಯಾರನ್ನು ಕರೆಯ ಬಹುದೆಂಬ ಬಗ್ಗೆ ಕೆಲ ಸಮಯಾನಂತರ ಹೇಳುವೆ.

ಇಂದಿನಿಂದ ಎರಡೂವರೆ ಸಾವಿರ ವರ್ಷ ಮೊದಲು ಬಂಗಾಳಿ ಜನರು ಬೌದ್ಧ ಮತವನ್ನು ಸ್ವೀಕರಿಸಿ ಸಾಗಿದ್ದರು. ಆ ದಿನಗಳಲ್ಲಿ ತಾಯಿ ಮಕ್ಕಳು, ಕಲ್ಯಾಣ ಕೋರಿ ಬೋಧಿ ಸತ್ತ್ವ ನೀಲನಾಥನ ಪೂಜೆ ಮಾಡುತ್ತಿದ್ದರು. ಇದಾದ ಬಳಿಕ ಈ ನಾಡಿನ ಜನರು ಬೌದ್ಧ ಧರ್ಮವನ್ನು ಬಿಟ್ಟು,ಪೌರಾಣಿಕ ಧರ್ಮವನ್ನು ಸ್ವೀಕರಿಸಿದರು. ಇದರಿಂದಾಗಿ ಬೋಧಿ ಸತ್ತ್ವ ನೀಲನಾಥನು ಶಿವ ನೀಲನಾಥನಾಗಿ ಬಿಟ್ಟನು. ಚಡಕ ಪೂಜೆಯು ಶಿವ ಪೂಜೆಯ ಒಂದು ಪ್ರಕಾರವೇ ಎಂದು ಜನ ತಿಳಿದಂತೆ, ನೀಲನಾಥನೂ ಓರ್ವ ಶಿವನೆಂದೇ ಬಗೆದ ಮೇಲೆ, ಚಡಕ ಪೂಜೆಯ ಮುನ್ನಾದಿನ ನೀಲನಾಥನ ಪೂಜೆ ಮಾಡಬಹುದೆಂದು ಜನ ಬಗೆದರು. ಇದರಿಂದ ಚೈತ್ರ ಸಂಕ್ರಾಂತಿಯಂದು ಚಡಕ ಪೂಜೆ ಇದ್ದರೆ, ಅದರ ಮುನ್ನಾದಿನವೇ ನೀಲನ ಪೂಜೆಯಾಗುತ್ತದೆ. ನೈಜದಲ್ಲಿ ನೀಲನಾಥನಿಗೆ ಪೌರಾಣಿಕ ಶಾಸ್ತ್ರ–ನಿರ್ದಿಷ್ಟವಾದ ಯಾವುದೇ ಪೂಜಾ ವ್ಯವಸ್ಥೆಗಳಿಲ್ಲ. ಮತ್ತು ನೀಲನ ಪೂಜೆಯು ಯಾವುದೇ ಬ್ರಾಹ್ಮಣ–ಪುರೋಹಿತನಿಂದ ನಡೆಯಬೇಕಾದ

ಪೂಜೆಯೇನಲ್ಲ. ಏಕೆಂದರೆ ಈ ಪೂಜೆಯು ಅರ್ಧ-ಬೌದ್ಧ ಮತ್ತು ಅರ್ಧ ಶಿವಾಚಾರವಾಗಿದೆ. ಸಾಮಾನ್ಯವಾಗಿ ಬೌದ್ಧ ಮತದಲ್ಲಿ ಯಾವ ರೀತಿ ಪೂಜೆಯಾಗುತ್ತದೆ. ಗೊತ್ತಲ್ಲವೇ? ದೀಪ ಬೆಳಗುತ್ತಾರೆ; ಪ್ರಣಾಮ ಮಾಡುತ್ತಾರೆ, ಮತ್ತು ಕೆಲ–ಕೆಲವು ಜಾಗೆಗಳಲ್ಲಿ ಮಂತ್ರೋಚ್ಚಾರಣೆಯನ್ನೂ ಮಾಡುತ್ತಾರೆ. ನೀಲನಾಥನ ವೇಳೆಯಲ್ಲಿಯೂ ಅದೇ ರೀತಿ ಇತ್ತು. ಸಂಧ್ಯಾಕಾಲಕ್ಕೆ ದೀಪ ಹಚ್ಚುತ್ತಿದ್ದರು. ಗಂಗಾಜಲ ಕೊಡುತ್ತಿದ್ದರು. ಪ್ರಣಾಮ ಮಾಡುತ್ತಿದ್ದರು. ಹೆಚ್ಚು ಜೋರಾಗಿ ಪಾಂಚಾಲಿ ಗೀತ ಹಾಡುತ್ತಿದ್ದರು. ಈ ರೀತಿಯೆಂದರೆ, ಇಂದಿನ ಮಹಾಯಾನಿ ಬೌದ್ಧರ ರೀತಿಯೇ ಆಗಿದೆ. ಬೌದ್ಧರ ಪೂಜೆಯ ಆವಶ್ಯಕ ಅಂಗವೇನು? ದೀಪ ಉರಿಸುವುದು ತಾನೇ? ನೀಲನದೂ ಸಹ ಸರಿಯಾಗಿ ಅದೇ ರೀತಿ. ಅದರಿಂದಾಗಿಯೇ ಹಳ್ಳಿಯ ಹುಡುಗೆಯರು ಹೀಗೆ ಹಾಡುತ್ತಾರೆ.

'ನೀಲೇರ ಘರೇ ದಿಯೇ ಭಾತಿಲ
ಜಲ ಖಾಉಸೇ ಪುತ್ರವತೀ'

* * *

'ಬೆಳಗಿಸು ದೀಪವ ನೀಲನ ಮನೆಯೊಳು
ಬೆಳಗಿನ ನೀರನು ಕುಡಿಯುವ ಮೊದಲು
ಬಳುಕುವ ಬಾಣತಿಯಾಗುವೆ ಪುತ್ರವತಿ'

ಮಕ್ಕಳಿದ್ದ ಹೆಂಗಳೆಯರು ಸಂಧ್ಯಾಕಾಲಕ್ಕೆ ನೀಲ ಮಂದಿರದಲ್ಲಿ ಬತ್ತಿ ನೀಡಿ ಬರುತ್ತಿದ್ದರು. ಇದರಿಂದ ಶಿವನೊಂದಿಗೆ ನೀಲನ ಸರಿಯಾವ ಸಂಪರ್ಕವೇನೂ ಇಲ್ಲ. ಇದು ಬೌದ್ಧೋತ್ತರ ನೀಲನಾಥ. ಇದು ಕೇವಲ ಬೌದ್ಧೋತ್ತರ ಶಿವಾಚಾರ. ಆದರೆ ಶಿವನನ್ನು ಕುರಿತು, ಭಕ್ತಿಯು ಜನಜೀವನದಲ್ಲಿತ್ತು. ವಿಶೇಷವಾಗಿ ಬಂಗಾಳದ ಒಂದು ಚಿಕ್ಕ ಜಾತಿಯಲ್ಲಿತ್ತು, ಎಂದು ಹೇಳುವೆ. ಇನ್ನು ಬೋಧಿಸತ್ತ್ವ ಕುರಿತು ಹೆಚ್ಚಿನ ಸಂಗತಿಯನ್ನು ಅನಂತರ ಹೇಳುವೆ.

ಈ ಯುಗದಲ್ಲಿ ಪೌರಾಣಿಕ ಧರ್ಮವು ಬರಹತ್ತಿದೊಡನೆ, ಬುದ್ಧನ ಪೂಜೆಯನ್ನು ಬಂಗಾಳದ ಜಾತ–ಬಂಗಾಳಿಗಳು ಪ್ರತ್ಯಕ್ಷ ಭಾವದಿಂದ ಮಾಡುವ ಸಾಹಸಕ್ಕಿಳಿಯದಾದರು. ಉಚ್ಚ ಜಾತಿಯವರೆಂದು ಹೇಳಿಕೊಳ್ಳುವವರ ಪ್ರತಾಪವೂ ಹೆಚ್ಚಾಗಿತ್ತು. ಬೌದ್ಧ ಧರ್ಮವನ್ನು ಒಪ್ಪಿಕೊಳ್ಳಲು ಮೂರು ರತ್ನಗಳನ್ನು ಒಪ್ಪಬೇಕಾಗಿತ್ತು. ಆ ಮೂರು ರತ್ನಗಳೆಂದರೆ, ಬುದ್ಧ, ಸಂಘ, ಮತ್ತು ದಮ್ಮ. ಸಂಸ್ಕೃತದ 'ಧರ್ಮ'ವು ಪ್ರಾಕೃತದಲ್ಲಿ 'ದಮ್ಮ'ವೆಂದಾಗಿದೆ. ಯಾವ ಬುದ್ಧನ ಪೂಜೆ ಮಾಡುತ್ತೀರೋ ಆ ಬುದ್ಧನ ಧರ್ಮವೇ 'ಶೂನ್ಯವಾದ'. ಶೂನ್ಯದಿಂದ ಎಲ್ಲವೂ ಬಂದಿದೆ. ಶೂನ್ಯದಲ್ಲಿ ಸ್ಥಿತವಾಗಿದೆ. ಮತ್ತು ಶೂನ್ಯದಲ್ಲಿ ಹೋಗಿಬಿಡುತ್ತದೆ. ಶೂನ್ಯಾತ್ ಆಗಚ್ಛತಿ, ಶೂನ್ಯೇ ತಿಷ್ಠತಿ, ಶೂನ್ಯಮ್ ಗಚ್ಛತಿ. ಇದುವೇ 'ಶೂನ್ಯವಾದ'ವಾಯಿತು.

ಶೂನ್ಯವೆಂದರೆ ಪೂಜಿ. (ಕಲಾಂ) ಆಗ ಮಾತ್ರ ಇಂಥ ಧರ್ಮದ ಪೂಜೆಯು ಕೂರ್ಮಾಕೃತಿಯ ಒಂದು ಶಿಲೆಯನ್ನು ತೆಗೆದುಕೊಂಡು ನಡೆಯಬಹುದು. ಕಶ್ಯಪ ಗೋಲ ಎಂದರೆ ಶೂನ್ಯ (nothing; zero) ಅವರು ಈ ಧರ್ಮರಾಜನ ಪೂಜೆ

ಯನ್ನೇ ಮಾಡುತ್ತಿದ್ದರು. ಅರ್ಥಾತ್ ಬುದ್ಧನೆ ಪೂಜೆ ಮಾಡುತ್ತಿದ್ದರು. ಆದರೆ ಅವನಿಗೆ ಬೇರೆ ಹೆಸರು ಕೊಟ್ಟು, ಧರ್ಮದ ಹೆಸರಿನಿಂದ ಹಾಗೆ ಮಾಡುತ್ತಿದ್ದರು. ಆದ್ದರಿಂದ ನೀವು ಈಗ ಕಾಣುತ್ತಿರುವಂತೆ,ಧರ್ಮರಾಜನು ಶಿವನೆಂದು ಸ್ವೀಕೃತವಾಗಿದೆ. ನಾನು ಈ ಮುನ್ನ ಹೇಳಿದಂತೆ ಬೌದ್ಧ–ಜೈನ ಕಾಲದಲ್ಲಿ ಜಾತ–ಬಂಗಾಳಿಗಳಲ್ಲಿ ಶಿವ ನನ್ನೇ ಒಪ್ಪಿಕೊಳ್ಳಲಾಗಿತ್ತು. ಹೀಗೆ ಧರ್ಮರಾಜ ಶಿವನು ಧರ್ಮ–ಠಾಕೂರನಾದನು. ಇಂದೂ ಸಹ, ಬಂಗಾಳದಲ್ಲಿ ಅನೇಕ ಸ್ಥಳಗಳಲ್ಲಿ ಧರ್ಮರಾಜ ಇಲ್ಲವೆ ಧರ್ಮ ಠಾಕೂರರ ಮಂದಿರಗಳಿವೆ, ಮತ್ತು ಆ ಮಂದಿರಗಳ ಪುರೋಹಿತರು ಅಧಿಕಾಂಶ ಜಾಗೆಗಳಲ್ಲಿ ಬ್ರಾಹ್ಮಣರಾಗಿಲ್ಲ. ಆದರೆ ಜನಜಾತಿ, ಜಾತ–ಬಂಗಾಳೀ ಪುರೋಹಿತರೇ ಇದ್ದಾರೆ. ಕೆಲವೊಮ್ಮೆ ಸದ್ಗೋಪರು, ಕೆಲವೊಮ್ಮೆ ಜಿಲೆಕೈವರ್ತರು (ಮೀನುಗಾರರು) ಈ ಗುಡಿ ಗಳ ಪೂಜಾರಿಗಳಾಗಿ ನೇಮಕಗೊಳ್ಳುತ್ತಾರೆ. ಅವರಿಗೆ ಪೂರ್ಣ ಅಧಿಕಾರವಿದೆ. ಏಕೆಂದರೆ ಶಿವನ ಬಳಿ ಆಚರಣೀಯ, ಅನಾಚರಣೀಯ ಮತ್ತು ಅಂತ್ಯಜ ಶೂದ್ರ ಇತ್ಯಾದಿ ಭೇದಗಳಿಲ್ಲ. ಸರ್ವರೂ ಸ್ನೇಹ–ಸಂತಾನವೇ ಆಗಿದ್ದಾರೆ.

ಅಂಗ ದೇಶದಲ್ಲಿ ಶಿವರಾತ್ರಿಯ ದಿನ ಸಾಯಂಕಾಲದ ವೇಳೆಯಲ್ಲಿ ಅಂತ್ಯಜ, ಅನಾಚರಣೀಯ, ಆಚರಣೀಯ ಶೂದ್ರರೆಲ್ಲರೂ, ಸೇರಿ, ಒಟ್ಟಾಗಿ ಕುಣಿಯುತ್ತಾರೆ. 'ಹರ ಹರ ವ್ಯೋಮ್ ವ್ಯೋಮ್' ಎಂದು ಹೇಳುತ್ತ ಕುಣಿಯುತ್ತಾರೆ. ಆ ಕಾಲಕ್ಕೆ ಸ್ಪೃಶ್ಯ–ಅಸ್ಪೃಶ್ಯ ಎಂಬ ಯಾವ ಭೇದವೂ ಇರದು. ಹೌರಾ ಜಿಲ್ಲೆಯಲ್ಲಿ ಸಾಲಿಖಿ ಎಂಬ ಧರ್ಮತಲವಿದೆ. ಇನ್ನೊಂದು ಕಲಕತ್ತೆಯಲ್ಲಿದೆ (ಧರ್ಮತಲ ಸ್ಟ್ರೀಟ್). ಈಗ ಇದರ ಹೆಸರನ್ನು ಬದಲಿಸಿರುವುದು ಉಚಿತ ಕಾರ್ಯವಾಗದು. ಆದರಿಂದ ಇತಿಹಾಸ ವಿಕೃತರೂಪ ತಾಳುತ್ತಿದೆಯಷ್ಟೇ.

ಏನೇ ಇರಲಿ; ಈ ಮಧ್ಯವರ್ತಿ ಅವಸ್ಥೆಯಲ್ಲಿ, ಆ ಕಾಲದಲ್ಲಿ ಕ್ಷಯಿಸುತ್ತ ನಡೆದ ಬೌದ್ಧ ಧರ್ಮ, -ಜೈನ ಧರ್ಮಗಳು, ಮತ್ತು ನೂತನ ಪೌರಾಣಿಕ ಧರ್ಮಗಳು ಮಿಳಿತ ವಾದ ಅವಸ್ಥೆಯಿತ್ತು. ಆ ಕಾಲಕ್ಕೆ ಪೌರಾಣಿಕ ಧರ್ಮ ಪ್ರವಕ್ತಾನ, ಪ್ರಧಾನ ವಕ್ತಾರನ ಆವಿರ್ಭಾವವಾಯಿತು. ಅವನೇ ಶಂಕರಾಚಾರ್ಯ. ಶಂಕರಾಚಾರ್ಯರಿಂದ ಪ್ರವರ್ತಿತ ವಾದ ಈ ಪೌರಾಣಿಕ ಧರ್ಮವು ಜನಮನದಲ್ಲಿ ಸರಿಯಾದ ಸ್ಥಾನ ಪಡೆಯಲಿಲ್ಲ. ಇಂಥ ಸಂದಿಗ್ಧ ಸ್ಥಿತಿಯಲ್ಲಿ ನೆಲೆಗೊಳ್ಳಲು, ಕೆಳಮಟ್ಟದ ತಾತ್ತ್ವಿಕ ಪದ್ಧತಿಯನ್ವಯ, ಶಂಕರಾಚಾರ್ಯರೇ ಶಿವನ ಅವತಾರವೆಂದು ಘೋಷಿಸಬೇಕಾಯಿತು. ಹಾಗಾದರೆ ಇದು ವಿಕೃತ ಭಾವನೆಯ ಹೊಂಚು (pseudo sentimental strategy) ಎನ್ನಿ ಸುವುದಿಲ್ಲವೇ? ಬಂಗಾಳದಲ್ಲಿ ಮತ್ತು ಅದೇ ರೀತಿ ಇಡೀ ಭಾರತದಲ್ಲಿ ಜನಜಾತಿಯ ಮಧ್ಯೆ ಶಿವನ ಆ ತರಹದ ಪ್ರಭಾವ ಕಂಡುಕೊಂಡಿದ್ದರಿಂದ, ಶಂಕರಾಚಾರ್ಯರ ಹೇಳಿಕೆಯನ್ನು ಶಿವನ ಹೇಳಿಕೆಯೆಂದು ತರ್ಕದ ಒರೆಗೆ ಹಚ್ಚದೆ, ಒಪ್ಪಿಕೊಳ್ಳಲು ಜನತೆ ಒಪ್ಪದಾಯಿತು. ಇದರಿಂದಾಗಿಯೇ ಶಂಕರಾಚಾರ್ಯರು ಶಿವನ ಅವತಾರವೆಂದು ಘೋಷಿಸಬೇಕಾಯಿತು. ಇದು ಹದಿಮೂರು ನೂರು ವರ್ಷಪೂರ್ವದ ಘಟನೆ ಯಾಗಿದೆ.

ಕಲಕತ್ತೆ, ಎಪ್ರಿಲ್ ೨೫,೧೯೮೨.

ಪ್ರವಚನ ೪

ತುಂಬಿ ಬೆಳೆದ ಶಿವ

ಶಿವ ಒಂದು ದರ್ಶನವೇ? ಇಲ್ಲವೆ ವ್ಯಕ್ತಿತ್ವವೇ? ಇಲ್ಲವೆ ದೇವತೆಯೇ? ಇದನ್ನೆಲ್ಲ ತಿಳಿಯಲು ಅನುವಾಗುವಂತೆ, ಶಿವ ತತ್ತ್ವ, ದೇವತಾ ತತ್ತ್ವ ಮತ್ತು ದೈವೀ ಶಕ್ತಿಯ ಸಂಬಂಧದಲ್ಲಿ ಮೊದಲೇ ಸ್ವಲ್ಪ ವಿವೇಚನೆ ಮಾಡುವುದು ಕ್ರಮಪ್ರಾಪ್ತ, ಅದಾದ ಬಳಿಕ, ಶಿವನೊಂದಿಗೆ ಸಂಬಂಧ ಹೊಂದಿದ ದೇವಿ–ದೇವತೆಗಳನ್ನು ಕುರಿತು ವಿವೇಚಿಸಬೇಕಾಗು ವುದು. ಈ ವಿಷಯಗಳ ಸಂಬಂಧದಲ್ಲಿ ಮಾನವ ಮನದಲ್ಲಿ ಪ್ರಬಲ ಜಿಜ್ಞಾಸೆಗಳಿಗೆ ಉತ್ತರ ಸಿಗದಾಗಿದೆ. ಶಿವನದು ಒಂದು ವಿರಾಟ ವ್ಯಕ್ತಿತ್ವ. ಹಾಗೆಂದೇ ಶಿವನ ಜೀವನ ಚರ್ಚೆಯೇ ಒಂದು ದರ್ಶನವಿದ್ದಂತೆ, ಎಂದು ಶಿವನ ಜೀವನ ಕುರಿತು ಹೇಳುತ್ತಾರೆ. ಮತ್ತು ಎಲ್ಲಿ ವ್ಯಕ್ತಿತ್ವ ಮತ್ತು ದರ್ಶನಗಳು ಅಭಿನ್ನವಾಗಿವೆಯೋ, ಅಲ್ಲಿ, ವ್ಯಕ್ತಿತ್ವ ದರ್ಶನಗಳೆರಡೂ ಸೇರಿ, ದೇವತೆಯಾಗಿ ಬಿಡುತ್ತದೆ.

"ದ್ಯೋತತೇ ಕ್ರೀಡತೇ ಯಾಸ್ಮಾತ್ ಉದ್ಯತೇ ದೇವೋತತೇ, ದಿವಿ
ತಸ್ಮಾತ್ ದೇವ ಇತಿ ಪ್ರೋಕ್ತ: ಸ್ತೂಯತೇ ಸರ್ವ ದೇವತೈಃ".

ಯಾವ ಜೀವನವು ನೂರಕ್ಕೆ ನೂರರಷ್ಟು ಅಭಿವ್ಯಕ್ತಗೊಂಡು, ಒಂದು ವಿಶೇಷ ನಿಯಮದಿಂದ, ಒಂದು ವಿಶೇಷ ಮಹಾಕೇಂದ್ರದಿಂದ, ಹೊರಹೊಮ್ಮಿ ಹಬ್ಬುತ್ತ, ವಿಶ್ವ ಬ್ರಹ್ಮಾಂಡದ ಸಮಸ್ತವನ್ನೂ ಪ್ರಭಾವಿತಗೊಳಿಸುವುದೋ ಮತ್ತು ಎಲ್ಲದರೊಳಗೆ ಓತ–ಪ್ರೋತ ಭಾವದಿಂದ ಮುನ್ನಡೆಯುವುದೋ, ಅದುವೇ ದೇವತೆ. ಶಿವನ ಜೀವನ ದಲ್ಲಿ, ಶಿವನ ಜೀವನ-ಚರ್ಯೆಯಲ್ಲಿ, ಶಿವನ ಆದರ್ಶ ಒಗ್ಗೂಡಿದೆ. ಏಕೈಕವಾಗಿದೆ. ಈ ಕಾರಣದಿಂದ ಶಿವನು ಅವಶ್ಯವಾಗಿ ದೇವತೆಯಾಗಿದ್ದಾನೆ.

ಈಗ ದೇವತಾ ತತ್ತ್ವ ಕುರಿತು ಹೇಳುವ ಮುನ್ನ, ಇನ್ನೂ ಸ್ವಲ್ಪ ಹೇಳಬೇಕಾ ಗಿದೆ. ಯಾರು ವಿಭಿನ್ನ ಪ್ರಕಾರದ ಅಭಿವ್ಯಕ್ತಿಗಳ ಸಮೂಹವಾಗಿರುವರೋ, ಯಾರು ಒಂದು ಮಹಾಕೇಂದ್ರದಿಂದ, ಒಂದು ಚಕ್ರನಾಭಿಯಿಂದ, ಹೊರಹೊಮ್ಮಿರುವರೋ, ಇಂಥವರೆಲ್ಲರನ್ನೂ ದೇವತೆಗಳೆನ್ನುತ್ತಾರೆ. ಆದರೆ ಶಿವನಾದರೋ, ಇಂಥವರೆಲ್ಲರ ಸಮಷ್ಟಿ ರೂಪವಾಗಿದ್ದಾನೆ. ಕೇವಲ 'ದೇವತಾ' ಶಬ್ದದಿಂದ ಸೂಚಿಸಿದರೆ ಶಿವನ ಅಭಿವ್ಯಕ್ತಿಯನ್ನು ಸರಿಯಾಗಿ ತಿಳಿಸಿದಂತಾಗದು. ಶಿವನು ದೇವತೆಗಳ ದೇವತೆಯಾಗಿ ದ್ದಾನೆ. 'ದೇವತಾನಾಂ ದೇವತಾ', 'ದೇವನಾಂ ದೇವ ಇತ್ಯರ್ಥೇ ಮಹಾದೇವ'.

ಹೀಗೆ ಶಿವನು ಮಹಾದೇವನಾಗಿದ್ದಾನೆ. ಆದರೆ ಶಿವನೊಂದಿಗೆ ಸಂಬಂಧಿಸಿದ ಇನ್ನೊಂದು ತತ್ತ್ವವಿದೆ. ಪಾರ್ವತಿ, ಕಾಳಿ, ಗಂಗೆ; ಸರಸ್ವತಿ, ಲಕ್ಷ್ಮೀ ಮತ್ತು ಅದೇ ರೀತಿ ಬೇರೆ ಬೇರೆ ಪ್ರಕಾರದ ಬೌದ್ಧ–ತಾಂತ್ರಿಕ, ಜೈನತಾಂತ್ರಿಕ, ಶಿವೋತ್ತರ ತಾಂತ್ರಿಕ, ಮತ್ತು ಪೌರಾಣಿಕ ದೇವಿ–ದೇವತೆಗಳು. ತಾತ್ತ್ವಿಕ ದೃಷ್ಟಿಕೋನದಿಂದ ಈ ಎಲ್ಲ ದೇವಿ ದೇವತೆಗಳೊಂದಿಗೆ ಶಿವನ ದಾರ್ಶನಿಕ, ಸಾಮಾಜಿಕ ಅಥವಾ ವೈಯಕ್ತಿಕ ಸಂಪರ್ಕವು ಎಷ್ಟಿದೆ? ಅಥವಾ ಏನಾದರೂ ಸಂಪರ್ಕವಿದೆಯೋ ಇಲ್ಲವೊ? ಈ ಸಂಬಂಧದಲ್ಲಿ ವಿವೇಚಿಸುವುದು ತುಂಬಾ ಅವಶ್ಯಕವಾಗಿದೆ.

ಈ ಸಮಯದಲ್ಲಿ ದೇವೀಶಕ್ತಿಯ ಮಾತೂ ಬರುತ್ತದಷ್ಟೇ? ದೇವೀ ಶಕ್ತಿ ಯಾವುದು? ಯಾವ ಶಕ್ತಿಯು ಆರೋಹ–ಅವರೋಹಗಳ ಕ್ರಮ (Systaltic movement) ಹಿಡಿದು, ವಿಶ್ವದ ನಾಭಿಕೇಂದ್ರದಿಂದ ಉತ್ಸಾರಿತವಾಗಿ, ಕೆಲವೊಂದು ಧಾರೆಗಳನ್ನು ಪ್ರವಹಿಸುವುದೋ, ಅದುವೇ ದೇವೀ ಶಕ್ತಿ. ಇದರ ಹಿಂದೆ ಎರಡು ತತ್ತ್ವಗಳು ಕ್ರಿಯಾಶೀಲವಾಗಿವೆ. ಒಂದು ಪ್ರಜ್ಞಾ ತತ್ತ್ವಕ್ಕೆ 'ಚಿತಿಶಕ್ತಿ' ಎನ್ನುತ್ತಾರೆ. ದೈವೀ ಚಿತಿಶಕ್ತಿ. ಇನ್ನು ನಾವು ಯಾವ ಶಕ್ತಿ ಕುರಿತು ಪ್ರಸ್ತಾಪಿಸುತ್ತಿರುವೆವೋ, ಅದು ವ್ಯಾವಹಾರಿಕ ಶಕ್ತಿ ಇಲ್ಲವೆ ಕಾಲಿಕಾ ಶಕ್ತಿ. ಕಾಲ ಚಕ್ರದ ಅಂತರಾಳದಿಂದ ಮುನ್ನಡೆದಿದೆ. ಆದ್ದರಿಂದ ಆ ಶಕ್ತಿಗೆ ಕಾಲಿಕಾ ಶಕ್ತಿ ಎನ್ನುತ್ತಾರೆ. ಕಾಳೀ ದೇವಿಯೊಂದಿಗೆ ಅದರ ಸಂಬಂಧವೇನೂ ಇಲ್ಲ. ಇಲ್ಲಿ ಶಿವ ತತ್ತ್ವ ಮತ್ತು ದೇವತಾ ತತ್ತ್ವ ಕುರಿತು ಹೇಳಲೋಸುಗ, ಇತಿಹಾಸದ ಏಳು ಸಾವಿರ ವರ್ಷಗಳಷ್ಟು ಸಮಯದಲ್ಲಿ ನಾವು ಪರಿಶ್ರಮಿಸಬೇಕಾಗುವುದು. ಶಿವನ ಸಮಯದಲ್ಲಿ ರೂಢಿಗೆ ಬಂದ ತಂತ್ರದಲ್ಲಿ, ವ್ಯಾವ ಹಾರಿಕ ರೂಪದಲ್ಲಿ, ಬೇರೆ ಬೇರೆ ಪ್ರಕಾರದ ಶಕ್ತಿಗಳಿದ್ದವು. ಆದರೆ ದೇವಿ-ದೇವತೆ ಗಳಿರಲಿಲ್ಲ. ಆದ್ದರಿಂದ, ದೇವಿ–ದೇವತೆಗಳ ಸಂಬಂಧ ಕುರಿತು ತಿಳಿಸಬೇಕಾದರೆ, ಇನ್ನಷ್ಟು ಹಿಂದೆ ಹೋಗಬೇಕಾಗುತ್ತದೆ. ವೈದಿಕ-ಯುಗದಲ್ಲೇನೋ ದೇವೀ-ದೇವತೆಯರಿದ್ದರು. ಆದರೆ ಅವರ ಮೂರ್ತಿಗಳನ್ನು ಮಾಡಿ ಪೂಜಿಸುವ ಪದ್ಧತಿಯೇನೂ ಇರಲಿಲ್ಲ. ಆ ದೇವೀ-ದೇವತೆಗಳ ಮಾಯಾ ಚಕ್ರ ನಡೆಯುತ್ತಿತ್ತು ಇಂದ್ರ, ಅಗ್ನಿ ಇತ್ಯಾದಿ ರೂಪದಲ್ಲಿ. ಇವರೆಲ್ಲರೂ ವೈದಿಕ ದೇವತೆಗಳೇ. ಆದರೆ ಇವರ ಮೂರ್ತಿಗಳನ್ನು ಮಾಡಿ ಪೂಜಿಸುವ ಪದ್ಧತಿ ಇರಲಿಲ್ಲ. ಪರಮ ಬ್ರಹ್ಮನ ಮೂರ್ತಿ ಮಾಡಿ ಪೂಜಿಸುವ ಪದ್ಧತಿಯೂ ಇರಲಿಲ್ಲ. ಅವರ ಪ್ರತಿಮೆಗಳಿರಲಾರವು ಎಂದು ಹೇಳುತ್ತಿದ್ದರು. 'ಈಶ್ವರಸ್ಯ ಪ್ರತಿಮಾ ನಾಸ್ತಿ'. ಪ್ರತಿಮೆಯ ಅರ್ಥವೆಂದರೆ ಪ್ರತಿರೂಪ. ಅಂದರೆ ಥೇಟ ಅದೇ ತೆರನಾಗಿರುವ ಇನ್ನೊಂದು ವಸ್ತುವನ್ನು ತೋರಿಸುವುದು. ಈಗ ಒಂದು ಬದನೇಕಾಯಿ ಉಂಟು. ಥೇಟ ಅದರಂಥ ಇನ್ನೊಂದು ವಸ್ತುವನ್ನು ಮಾಡುವುದಾದರೆ ಆ ವಸ್ತುವು ಬದನೆಕಾಯಿಯ ಪ್ರತಿಮೆಯಾಗುವುದು. ಹಾಗೆ ನೋಡಿದರೆ ಪರಮ ಪುರುಷನಂಥ ಬೇರಾವುದೂ ಇಲ್ಲ. "ತುಲಾ ವಾ ಉಪಮಾ ಕೃಷ್ಣಸ್ಯ ನಾಸ್ತಿ." ಆದ್ದರಿಂದ ಈಶ್ವರನ ಪ್ರತಿಮೆ ಮಾಡಲು ಶಕ್ಯವಿಲ್ಲ. ಇದುವೇ ವೈದಿಕ ಕಾಲದ ಧ್ಯಾನ–ಧಾರಣೆಯಾಗಿತ್ತು. ಆದಾದ ನಂತರ, ಶೈವ ತಂತ್ರದ ಯುಗಾರಂಭವಾಯಿತು. ಶೈವ ತಂತ್ರ ಕಾಲದಲ್ಲಿಯೂ ವಿಭಿನ್ನ ಕಾಲ ಶಕ್ತಿಗಳಿದ್ದವು. ಆದರೆ ದೇವಿ-ದೇವತೆಗಳ

ಮೂರ್ತಿ ಮಾಡಿ ಪೂಜಿಸುವ ಪದ್ಧತಿ ಇರಲಿಲ್ಲ. ಆ ಮೇಲೆ ಬಂದಿತು, ಶಿವೋತ್ತರ ತಂತ್ರ, ಬೌದ್ಧ ಮತ್ತು ಜೈನ ಯುಗ. ಈ ಬೌದ್ಧ ಮತ್ತು ಜೈನ ಯುಗದಲ್ಲಿ ದೇವಿ–ದೇವತೆಗಳ ಮೂರ್ತಿಗಳನ್ನು ಪೂಜಿಸುವ ಪದ್ಧತಿಯು ಪ್ರವರ್ತಿತವಾಯಿತು. ಮತ್ತು ಅದರ ಅಕ್ಕ ಪಕ್ಕದಲ್ಲಿ, ಸ್ವಲ್ಪ ರೂಪಾಂತರಗೊಂಡ (metamorphosed) ಶಿವೋತ್ತರ ತಂತ್ರ ಬಂದಿತು. ಅಂದರೆ, ತಂತ್ರವು ಶಿವನ ಕಾಲದ್ದೇ ಇದ್ದಿತು. ಆದರೆ ಅದರ ಮೇಲೆ ಬೌದ್ಧ ಮತ್ತು ಜೈನ ಧರ್ಮದ ಪ್ರಭಾವ ಬಿದ್ದಿತ್ತು. ಆದ್ದರಿಂದ ರೂಪಾಂತರಗೊಂಡ (metamorphosed) ಶಿವೋತ್ತರ ತಂತ್ರವೆಂದಿದ್ದೇನೆ. ಬೌದ್ಧ ಮತ್ತು ಜೈನ ಪ್ರಭಾವದಿಂದ ಶಿವೋತ್ತರ ತಂತ್ರದಲ್ಲಿ ದೇವೀ-ದೇವತೆಗಳು ಮತ್ತು ಅದರಲ್ಲೂ ಹಲಕೆಲವರ ಮೂರ್ತಿಪೂಜೆಯೂ ನಡೆದು ಬಂದಿತು.

ಇಲ್ಲಿ ಇನ್ನೊಂದು ಮಾತನ್ನು ಹೇಳುವ ಅಗತ್ಯವಿದೆ. ಬುದ್ಧನ ಮರಣಾನಂತರ ಮೂರು ಶತಮಾನ ಕಾಲದೊಳಗೇ ಬೌದ್ಧ ಧರ್ಮವು ಇಬ್ಭಾಗವಾಯಿತು. ಒಂದರ ಹೆಸರು ಮಹಾಸಾಂಘಿಕ ಎಂದಿತ್ತು. ಇನ್ನೊಂದಕ್ಕೆ ಸ್ಥವಿರವಾದಿ ಇಲ್ಲವೆ ಥೇರವಾದಿ ಎಂದು ಹೆಸರು ಬಿದ್ದಿತು. ಹೀಗಾದ ಸ್ವಲ್ಪ ದಿನಗಳ ನಂತರ, 'ಸಮ್ಮಿತೀಯ' ಹೆಸರಿನ ಇನ್ನೊಂದು ಶಾಖೆಯೂ ಹುಟ್ಟಿಕೊಂಡಿತು. ಆದರೆ ಈ ಶಾಖೆಯು ಬಹುದಿನ ನಿಲ್ಲಲಿಲ್ಲ. ಮಹಾಸಾಂಘಿಕರು ತಮ್ಮನ್ನು 'ಮಹಾಯಾನಿ' ಎಂದು ಕರೆದುಕೊಳ್ಳುತ್ತಿದ್ದರು. ಮತ್ತು ಸ್ಥವಿರವಾದಿಗಳು ತಮ್ಮನ್ನು 'ಹೀನಯಾನಿ'ಗಳೆಂದು ಕರೆದುಕೊಂಡರು. ಈ ಮಹಾಯಾನಿಗಳನ್ನು ಅಥವಾ ಮಹಾಸಾಂಘಿಕರನ್ನು ಇಂಗ್ಲಿಷಿನಲ್ಲಿ ಬೌದ್ಧ ತಂತ್ರದ ಉತ್ತರ ಶಾಖೆ (Northen school of Buddhistic cult) ಎನ್ನುತ್ತಾರೆ. ಇನ್ನು ಸ್ಥವಿರವಾದಿಗಳನ್ನು ಬೌದ್ಧತಂತ್ರದ ದಕ್ಷಿಣ ಶಾಖೆ (Southern School of Buddhisbic cult) ಎನ್ನುತ್ತಾರೆ. ಏಕೆಂದರೆ, ಮಹಾಯಾನದ ಅಧಿಕ್ಷೇತ್ರವು ತಿಬೇಟ, ಚೀನ, ಮಂಗೋಲಿಯಾ, ಹೊರ (outer) ಮಂಗೋಲಿಯಾ, ಅಫಗಾನಿಸ್ತಾನ, ಕಾಶ್ಮೀರ, ನೇಪಾಳ, ಭೂತಾನ, ಸಿಕ್ಕಿಮ, ನೇಫಾ ರಸಿಯಾದ ಪೂರ್ವ ಹಾಗೂ ದಕ್ಷಿಣಭಾಗ ಜಪಾನ ಮತ್ತು ಕೋರಿಯಾ ಇತ್ಯಾದಿ ಪ್ರದೇಶವನ್ನುವರಿಸಿತ್ತು. ಇನ್ನು ಸ್ಥವಿರವಾದಿಗಳ ಬೌದ್ಧ–ತಂತ್ರದ ದಕ್ಷಿಣ ಶಾಖೆಯ ಅಧಿಕ್ಷೇತ್ರವು ಸಿಲೋನ (ಲಂಕಾ), ಬಂಗಾಳದ ಚಟಗ್ರಾಮ, ಬ್ರಹ್ಮದೇಶ ಇಂಡೋನೇಶಿಯಾ, ಮಲೇಶಿಯಾ, ಥಾಯಿಲ್ಯಾಂಡ, ಫಿಲಿಫೈನ್ಸ ಇತ್ಯಾದಿ ಪ್ರದೇಶಗಳನ್ನಾವರಿಸಿತ್ತು. ಇವೆರಡರಲ್ಲಿ ಬರುಬರುತ್ತ ಭೇದವು ಬೆಳೆಯುತ್ತ ಸಾಗಿತು. ಸ್ಥವಿರವಾದಿಗಳ ಧರ್ಮಶಾಸ್ತ್ರಗಳು ಪಾಲಿ ಭಾಷೆಯಲ್ಲಿದ್ದವು ಮತ್ತು ಮಹಾಯಾನಿಗಳ ಧರ್ಮಶಾಸ್ತ್ರಗಳು ಸಂಸ್ಕೃತ ಭಾಷೆಯಲ್ಲಿ ಬರೆಯಲ್ಪಟ್ಟವು. ಆದರೆ ಬುದ್ಧನು ತನ್ನ ಉಪದೇಶವನ್ನು ಪಾಲಿ ಭಾಷೆಯಲ್ಲಿ ನೀಡುತ್ತಿದ್ದನು. ಆ ಮುಂದಿನ ಕಾಲದಲ್ಲಿ ಮಹಾಯಾನ ಬುದ್ಧ ಪಂಥವು ಮತ್ತೆರಡು ಉಪಶಾಖೆಗಳಲ್ಲಿ ಹಂಚಿ ಹೋಯಿತು. ಒಂದರ ಹೆಸರು ಮಂತ್ರಯಾನ; ಇನ್ನೊಂದರ ಹೆಸರು ತಂತ್ರಯಾನ. ಮಂತ್ರ ಯಾನಿಗಳು ಮತ್ತು ತಂತ್ರಯಾನಿಗಳು ವಿಶೇಷವಾಗಿ ಮಾನವನ ಪ್ರಯೋಜನದತ್ತ ಮುಖವಿರುಹಿ, ಬೇರೆ ಬೇರೆ ದೇವಿ–ದೇವತೆಗಳನ್ನು ನಿರ್ಮಿಸಿಕೊಂಡರು. ಅನಂತರ ತಂತ್ರಯಾನ ಶಾಖೆಯು ಕಾಲಚಕ್ರಯಾನ ಮತ್ತು ವಜ್ರಯಾನ ಎಂಬೆರಡು ಕವಲಾಯಿತು.

ಈ ಕಾಲಚಕ್ರಯಾನ ಮತ್ತು ವಜ್ರಯಾನಗಳ ಕಾಲದಲ್ಲಿ ಬೌದ್ಧ ಧರ್ಮವು ಒಂದು ದಾರ್ಶನಿಕ ವಿಪ್ಲವ ಹೊಂದಿತು. ಈ ವಿಪ್ಲವವೇನೂ, ಒಳಿತಿಗಾಗಿಯೇ ಇರಲಿಲ್ಲ. ಆದರೂ ಒಂದು ಬದಲಾವಣೆಯಂತೂ ಆಗಿತ್ತು. ಬುದ್ಧನು ಪ್ರಚುರ ಪಡಿಸಿದ ಮತ ವಾದವು ದುಃಖಿವಾದವಾಗಿತ್ತು.

ಅವನ ಮತಾನುಸಾರ ನಾಲ್ಕು ಮೂಲ ಸತ್ಯಗಳಿವೆ. (೧) ದುಃಖ (೨) ದುಃಖದ ಕಾರಣ (೩) ದುಃಖದ ನಿವೃತ್ತಿ (೪) ದುಃಖ ನಿವೃತ್ತಿಯ ಉಪಾಯ. ಈ ದುಃಖಿ ವಾದದ ಪ್ರಭಾವದ ಕಾರಣದಿಂದ ಬೌದ್ಧ ಧರ್ಮವು ಪಾಸ್ತವ ಜಗತ್ತಿನಿಂದ ಬಹುದೂರ ಸರಿದಿತ್ತು. ಆದರೆ ಈ ವಜ್ರಯಾನ ಹಾಗೂ ಕಾಲಚಕ್ರಗಳು, ಇಂದಿಗೆ ಹದಿನಾರು ಶತಮಾನ ಮೊದಲು ರೂಪಗೊಂಡಿದ್ದವು. ಇವು ದುಃಖಿವಾದವನ್ನು ಬದಿಗೆ ಸರಿಸಿ ಹೊಸ ದರ್ಶನವನ್ನು ರೂಪಿಸಿಕೊಂಡವು. ಈ ಹೊಸದರ್ಶನದ ಹೆಸರು ಅತಿಸುಖಿ ವಾದ ಎಂದು. ಈ ಅತಿಸುಖಿವಾದದ ಕಾಲದಲ್ಲಿ ಏನಾಯಿತು? ಬುದ್ಧನಿಗಿಂತ ಬೇರೆ ಯಾದ, ಯಾವುದೇ ಸುಖದ ಉಪಭೋಗದ ಉಪಕರಣವನ್ನು ಮಾನವನು ಇಚ್ಛಿಸು ತ್ತಿದ್ದನು. ಬುದ್ಧತ್ವ ಪ್ರಾಪ್ತಿಗಿಂತ ಮೊದಲು, ಇಲ್ಲವೆ ಮಾನವನ ಬುದ್ಧತ್ವ ಪ್ರಾಪ್ತಿಯ ಹಾದಿಯಲ್ಲಿ ಸ್ವಲ್ಪದೂರ ಸಾಗಿದ ಬಳಿಕ, ಒಂದು ಪ್ರಕಾರದ ಅವಸ್ಥೆಯ ಕಲ್ಪನೆ ಮಾಡ ಲಾಗಿತ್ತು. ಇದಕ್ಕೆ ಬೋಧಿಸತ್ವ ಎಂದು ಹೆಸರಿಸಲಾಗಿತ್ತು. ಬುದ್ಧನು ಬೇರೆ ಬೇರೆ ತೆರದಿಂದ ಭೋಗದ ಉಪಾದಾನಗಳನ್ನು ಜೋಡಿಸುತ್ತ ಸಾಗುತ್ತಾನೆ; ಎಂಬ ಒಂದು ರೀತಿಯ ಭಾವನೆಯನ್ನು ಗ್ರಹಿಸಿ, ಪಂಚ–ಬುದ್ಧರ ಕಲ್ಪನೆಯನ್ನು ನಿರೂಪಿಸಿದರು. ಇದೇ ಮೇರೆಗೆ ಈ ವ್ಯಾವಹಾರಿಕ ಜಗತ್ತಿನ ಸಂರಚನೆಯಲ್ಲಿ ಬೇರೆ ಬೇರೆ ಶಕ್ತಿಗಳ ಮಾಧ್ಯಮದಿಂದ, ಬೇರೆ ಬೇರೆ ಬುದ್ಧ ಮತ್ತು ಬೋಧಿಸತ್ವರ ಯಾವ ಕಾರ್ಯವು ಸಾಗುವುದೋ, ಆ ಶಕ್ತಿಗೆ ಬುದ್ಧ ಶಕ್ತಿಯೆಂದು ಹೆಸರಿಸಿದರು, ಹೀಗೆ ಮಹಾಯಾನೀ ಬೌದ್ಧ ಧರ್ಮದ ಕಾಲಚಕ್ರಯಾನ ಮತ್ತು ವಜ್ರಯಾನಗಳ ಸಮಯದಲ್ಲಿ ಈ ಪರಿಸ್ಥಿತಿ ಯುಂಟಾಯಿತು. ನಾವೀಗ ಇರುವ ಭಾರತದಲ್ಲಿ, ವಿಶೇಷವಾಗಿ ಬಂಗಾಳದಲ್ಲಿ, ವಜ್ರ ಯಾನವು ವ್ಯಾಪಕ ರೀತಿಯಲ್ಲಿ ರೂಢಿಯಲ್ಲಿತ್ತು.

ಈ ಪಂಚ ಬುದ್ಧ, ಪಂಚಬುದ್ಧಶಕ್ತಿ ಮತ್ತು ಬೋಧಿಸತ್ವ ಕುರಿತು ಸ್ವಲ್ಪ ಹೇಳ ಬೇಕಾಗಿದೆ. ಅತಿಸುಖಿವಾದ ದರ್ಶನವು ಕೇವಲ ಭೋಗದ ಉಪಕರಣವನ್ನು ಬುದ್ಧ ನಿಂದ ಬೇಡುತ್ತಿತ್ತು. ಬುದ್ಧನ ಮುಖವನ್ನು ಬಂಗಾರದಿಂದ ಲೇಪಿಸುತ್ತಿತ್ತು. ಹೀಗೆ ಈ ಪ್ರಕಾರ ಇನ್ನೂ ಐವರು–ಬುದ್ಧರ ಕಲ್ಪನೆ ಮಾಡಲಾಯಿತು.

(೧) ಅಕ್ಷೋಭ್ಯ (೨) ಅಮೋಘಸಿದ್ಧಿ (೩) ಅಮಿತಾಭ (೪) ವೈರೋಚನ (೫) ಧ್ಯಾನೀಬುದ್ಧ. ಇವರೇ ಮುಖ್ಯ ಮಹಾ ಪಂಚ ಬುದ್ಧರಾಗಿದ್ದಾರೆ. ಆ ಮುಂದಿನ ಕಾಲದಲ್ಲಿ ಬೇಡಿಕೆಗೆ ಅನುಸರಿಸಿ ಇವರ ಸಂಖ್ಯೆ ಸ್ವಲ್ಪ ಬೆಳೆಯಿತು. ಈ ಪಂಚ ಬುದ್ಧ ರೊಂದಿಗೆ ಪಂಚ ಬೋಧಿಸತ್ವರ ಕಲ್ಪನೆಯೂ ಆಯಿತು. ಬೋಧಿಸತ್ವಕ್ಕೆ ಅನೇಕ ಅರ್ಥಗಳನ್ನು ಹೇಳಲಾಗುತ್ತದೆ. ಆದರೆ ದೊಡ್ಡ ದೊಡ್ಡ ವಿಚಾರದಿಂದ, ಅಧಿರೋಹ ಣಾತ್ಮಕ ಮತ್ತು ಅವರೋಹಣಾತ್ಮಕ ವಿಚಾರದಿಂದ, ನಾವು ಎರಡು ಅರ್ಥಗಳನ್ನು ಸ್ವೀಕರಿಸಬಹುದು. ಇಂಥ ಒಂದು ಅರ್ಥವೆಂದರೆ, ಮುಂದೆ ಮುಂದೆ ಸಾಗಿ ಬುದ್ಧನನ್ನು ಸಮೀಪಿಸುವುದು. ಈ ಅವಸ್ಥೆಯನ್ನು ಬೋಧಿಸತ್ವವೆನ್ನಬಹುದು. ಇಲ್ಲವೆ ಬುದ್ಧನು

ಲೌಕಿಕ ಜಗತ್ತಿನೊಂದಿಗೆ ಸಂಬಂಧವಿರಿಸಿಕೊಳ್ಳಲು ಬೇಕಾದ ಲೋಕಾಯತ ಆವರಣಕ್ಕೂ ಬೋಧಿಸತ್ವವೆನ್ನಬಹುದು. ಇನ್ನು ಬುದ್ಧಶಕ್ತಿಯನ್ನು ಕುರಿತು ಈ ಮೊದಲು ಹೇಳಿ ದಂತೆ, ಚಲೀಯಮಾನವಾದ ಯಾವ ಶಕ್ತಿಗಳ ಸಹಾಯದಿಂದ ಬುದ್ಧನ ಕಾರ್ಯವು ನಿರ್ವಹಿಸಲ್ಪಡುತ್ತಿತ್ತೋ, ಅದನ್ನೇ ಪ್ರಾರಂಭದಲ್ಲಿ ಬುದ್ಧಶಕ್ತಿಯೆಂದು ಮಹಾ ಮಹಾ ವಿಚಾರ ದೃಷ್ಟಿಯಿಂದ ಕರೆಯಲಾಯಿತು. ಮುಂದೆ ಮಾನವರ ಪ್ರಯೋಜನ ದೃಷ್ಟಿ ಯಿಂದ ಇವುಗಳ ಸಂಖ್ಯೆಯೂ ವರ್ಧಿಸಿತು. ಮೊದಲು ಇದ್ದ ಪಂಚಶಕ್ತಿಗಳು ಹೀಗಿವೆ:

ಉಗ್ರತಾರಾ— ಇದರ ಉಪಾಸನೆಯು ಭಾರತದೇಶದಲ್ಲಿ ಪ್ರಚಲಿವಿತ್ತು.

ವಜ್ರತಾರಾ— ಇದರ ಉಪಾಸನೆಯು ತಿಬೇಟಿನಲ್ಲಿ ಪ್ರಚಲಿತವಿತ್ತು (ತಿಬೇಟಿಗೆ ಆ ಕಾಲದಲ್ಲಿ ಕಿಂಪುರುಷ ವರ್ಷ ಎನ್ನುತ್ತಿದ್ದರು.)

ಭ್ರಾಮರೀ ತಾರಾ— ಇದರ ಉಪಾಸನೆಯು ಚೀನ ದೇಶದಲ್ಲಿ ಪ್ರಚಲಿತವಿತ್ತು.

ವಜ್ರಯೋಗಿನಿ ಮತ್ತು

ವಜ್ರವಾರಾಹಿ.

ಇವೆಲ್ಲವೂ ವಜ್ರಯಾನ ಕಾಲದಲ್ಲಿದ್ದವು. ಇಲ್ಲಿ ಸ್ವಲ್ಪ ಅಪ್ರಸ್ತುತವಾದರೂ ಸಹ, ಒಂದು ವಿಷಯ ಹೇಳಬಯಸುವೆ. ಏನೆಂದರೆ, ಆ ವಜ್ರಯಾನ ಕಾಲದಲ್ಲಿ ಮಾನವನು ಭೋಗ-ಸುಖದ ಆಶೆಯಿಂದ ಮಾನವರನ್ನು ಬಲಿಪೀಠದ ಮೇಲೆ ಏರಿಸು ತ್ತಿದ್ದನು ಅಂದರೆ ನರಬಲಿ ನಡೆದಿತ್ತು. ಆ ವಜ್ರಯಾನ ಕಾಲದಲ್ಲಿ, ವಿಶೇಷವಾಗಿ ಬಂಗಾಳದಲ್ಲಿ— ಲಕ್ಷಾಂತರ ನಿರಪರಾಧಿ ಜನರನ್ನು ಬಲಿ ನೀಡಲಾಗಿದೆ. ಏತಕ್ಕಾಗಿ ಗೊತ್ತೇ? ವಜ್ರಯೋಗಿನಿ ಇಲ್ಲವೆ ವಜ್ರತಾರೆಯ ತೃಪ್ತಿಗಾಗಿ! ಅದೇನೇ ಇರಲಿ, ಈ ಪಂಚಶಕ್ತಿಗಳೊಂದಿಗೆ, ಅನಂತರದ ಕಾಲದಲ್ಲಿ, ಹಾರಿತೀ, ಮಾರಿಚೀ, ಲೌಕಿಕ ದೇವೀ ಶೀತಲೆಯರನ್ನು ಜೋಡಿಸಲಾಯಿತು. ಪ್ರಾರಂಭದಲ್ಲಿ 'ಮನಸಾ' ಲೌಕಿಕ ದೇವಿ ಯಾಗಿದ್ದಳು. ಬೌದ್ಧ ತಂತ್ರ ಕಾಲದಲ್ಲಿ ಈ ದೇವಿಯರಿಂದ ಬಹಳಷ್ಟು ಶಕ್ತಿಗಳನ್ನು ಶಿವೋತ್ತರ ತಂತ್ರದಲ್ಲಿಯೂ ಗ್ರಹಿಸಲಾಗಿದೆ. ಇವಲ್ಲದೆ ಶಿವೋತ್ತರ ತಂತ್ರದ ಅನೇಕ ದೇವಿಯರನ್ನು ಬೌದ್ಧ ತಂತ್ರದಲ್ಲಿಯೂ ಸ್ವೀಕರಿಸಲಾಗಿದೆ. ಹೀಗೆ ಒಂದು ರೀತಿಯ ಪಾರಸ್ಪರಿಕ ವಿನಿಮಯ ಏರ್ಪಟ್ಟಿದೆ. ಇವರನ್ನು ಹೊರತುಪಡಿಸಿ, ಸಮಾಜದಲ್ಲಿ ಅನೇಕ ಲೌಕಿಕ ದೇವಿಯರಿದ್ದರು. ಉದಾಹರಣೆಗೆ— ಮಂಗಳ ಚಂಡೀ, ಕುಲೂಹ ಚಂಡೀ, ಊಲಾಯೀ ಚಂಡೀ, ವನ ಬೀಬಿ, ಶಾಂಕತಾ ಚಂಡೀ ಕಾಲೂರಾಯ್, ದಕ್ಷಿಣರಾಯ್ ಶೂಬಚನೀ ಇತ್ಯಾದಿ. ಮಾನವನು ಭೀತಿಯಿಂದ ಈ ದೇವತೆಗಳ ಪೂಜೆ ಮಾಡುತ್ತಿ ದ್ದನು. ಇವರಲ್ಲಿಂದ ಅನೇಕರನ್ನು, ಮುಂದಿನ ಕಾಲದಲ್ಲಿ ಬೌದ್ಧತಂತ್ರದಲ್ಲಿ ಗ್ರಹಿಸ ಲಾಯಿತು. ಅನೇಕರನ್ನು ಪೌರಾಣಿಕ ಧರ್ಮದಲ್ಲಿ ಅಂತರ್ಗತ ಮಾಡಿಕೊಳ್ಳಲಾಯಿತು. ಇದೆಲ್ಲ, ಆ ಸಮಯದಲ್ಲಿ ಭಾರತದಲ್ಲಿ ಪ್ರಚಲಿತವಿದ್ದ ಪೌರಾಣಿಕ ಯುಗದ ದೇವಿ–ದೇವತೆಯರ ಮಾತಾಯಿತು.

ಈಗ ಶಿವನನ್ನು ಹಿಡಿದು ವಿವೇಚನೆ ಮಾಡಲಿಕ್ಕೋಸುಗ ವಿಶೇಷರೂಪದಿಂದ ನೋಡಬೇಕಾಗಿದೆ. ನಾನು ಈ ಮೊದಲೇ ಹೇಳಿದಂತೆ; ದರ್ಶನ ಮತ್ತು ವ್ಯಕ್ತಿತ್ವಗಳು

ಎಲ್ಲಿ ಒಂದಾಗುತ್ತವೆಯೋ, ಅವೆರಡೂ ಒಂದುಗೂಡಿ ದೇವತೆಯಾಗಿ ಹೊರಹೊಮ್ಮುತ್ತವೆ. ಶಿವನ ಲೌಕಿಕ ಸಾಮಾನ್ಯ ಕರ್ಮೋಪಣೆ ಮತ್ತು ನೈಪುಣ್ಯ ಮತ್ತು ಜೊತೆ ಜೊತೆಗೆ ಶಿವನ ಆದರ್ಶಗತ ದರ್ಶನ (ಆ ಕಾಲದಲ್ಲಿ ಲಿಖಿತ ದರ್ಶನವಿರಲಿಲ್ಲ. ಲಿಖಿತ ದರ್ಶನವು ಮೊತ್ತ ಮೊದಲು ಕಪಿಲ ಋಷಿಯ ಕಾಲದಲ್ಲಿ ಬಂದಿದೆ). ಇದೆಲ್ಲವೂ ಸೇರಿಕೊಂಡು ಶಿವನು ದೇವತೆಯಾದನು. ಹೀಗೆ, ಈ ಶಿವನನ್ನು ಮಾನವನು ದೇವತೆಯನ್ನಾಗಿಸಿದನು. ಏಕೆಂದರೆ ಮಾನವನು ಎಲ್ಲ ವಿಷಯಗಳಲ್ಲಿಯೂ ಶಿವನನ್ನೇ ಅವಲಂಬಿಸಿದ್ದನು. ಆಂದಮೇಲೆ, ಶಿವನನ್ನು ದೇವತೆಯನ್ನದೆ ಬೇರಾರನ್ನು ದೇವತೆಯೆಂದು ತಿಳಿಯಬಲ್ಲನಾತ? ಇನ್ನು ಶಿವೋತ್ತರ ತಂತ್ರವು ಪ್ರಾರಂಭವಾದಾಗ, ಶಿವನು ದೇವತೆಯೆನಿಸಿದ್ದನು. ಆದರೆ, ಆಗ ಜೈನ ಮತ್ತು ಬೌದ್ಧ ತಂತ್ರಗಳ ಪ್ರಭಾವವು ಅವನ ಮೇಲೆ ಬಿದ್ದಿತು. ಶಿವನೊಂದಿಗೆ ಬೇರೆ ಸ್ವಲ್ಪ ಸೇರಿಸಿ ಮತ್ತೊಂದು ಪ್ರಕಾರದ ವಸ್ತುವನ್ನು ನಿರ್ಮಿಸುವ ಪ್ರಯತ್ನ ನಡೆಯಿತು. ಪೌರಾಣಿಕ ಯುಗದಲ್ಲಿ, ಅಲ್ಲಲ್ಲಿ ಶಿವನಿಗೆ ಜನಿವಾರ ಹಾಕಲಾಗಿದೆ. ಆದರೂ ಸರಿಯಾಗಿ ನೋಡಿದರೆ, ಶಿವನಿಗೆ ಜನಿವಾರ ವಿರಲಿಲ್ಲ. ಸರ್ಪವೇ ಅವನ ಜನಿವಾರವಾಗಿತ್ತು. ಇದಾದ ನಂತರ, ಶಿವನೊಂದಿಗೆ ಅತ್ಮೀಯತೆಯ ಸೂತ್ರ ಸ್ಥಾಪಿಸಿ, ಅನೇಕ ದೇವಿ-ದೇವತೆಯರನ್ನು ತರಲಾಯಿತು. ಏಕೆಂದರೆ ಶಿವನೊಂದಿಗೆ ಅತ್ಮೀಯತೆಯನ್ನು ಜೋಡಿಸಿದ ಹೊರತು, ಯಾವುದೇ ದೇವತೆಗೆ ನೈವೇದ್ಯೆವು ಸರಿಯಾಗುತ್ತಿರಲಿಲ್ಲ, ಹೇಗೆಂದರೆ, ಇಲ್ಲಿ ಒಂದು ದೃಷ್ಟಾಂತ ನೀಡಬಯಸುವೆ. ಮನಸಾ ಒಂದು ದೇವತೆ. ಅಲ್ಲಲ್ಲಿ ಮನಸಾ ಶಿವನ ಕನ್ಯೆಯೆಂದು ಹೇಳಲಾಗಿದೆ. ಆದರೆ ಶಿವನ ಕಾಲದಲ್ಲಿ ಮನಸಾ ಇಲ್ಲವೆ ವಿಶಹರಿ ಹೆಸರಿನ ಯಾವ ದೇವಿಯೂ ಇರಲಿಲ್ಲ. ಪೌರಾಣಿಕ ಯುಗದಲ್ಲಿ ಹೀಗೆ ಹೇಳಲಾಗಿದೆ:

"ಆಸ್ತಿಕಸ್ಯ ಮುನೇರ್ಮಾತಾ
ವಾಸುಕಿ ಭಗಿನೀ ತಥಾ
ಜರುತ್‌ಕಾರೂ ಮುನೇ ರ್ಪತ್ನಿ
ಮನಸಾಯೆತ ನಮೋನಮಃ"

ಅಂದರೆ ಮನಸಾದೇವಿ ಆಸ್ತಿಕಮುನಿಯ ತಾಯಿ. ವಾಸುಕೀ ನಾಗನ ಸೋದರಿ. ಮತ್ತು ಜರುತಕಾರೂ ಮುನಿಯ ಪತ್ನಿ. 'ಆಸ್ತಿಕಸ್ಯ ಮುನೇರ್ಮಾತಾ'– ಈ ವಿಷಯದಲ್ಲಿ ಏನನ್ನೂ ಹೇಳುವುದಿಲ್ಲ. ಆದರೆ, 'ವಾಸುಕೀ ಭಗಿನೀ' ಮತ್ತು ಅದೇ ಮೇರೆಗೆ ಶಿವನ ಕನ್ಯಾ ಎನ್ನುವುದರ ಮರ್ಮವಾದರೂ ಏನು?

ಪುರಾಣ ಕತೆಯ ಮೇರೆಗೆ ಮನಸಾ ವಾಸುಕಿ ನಾಗನ ಸೋದರಿಯಾಗಿದ್ದಳು. ಪುರಾಣಾನುಸಾರ ಹಾವುಗಳ ತಾಯಿಯ ಹೆಸರು 'ಕದರೂ' ಎಂದಿದೆ. ತಂದೆಯ ಹೆಸರು ಮಹರ್ಷಿ ಕಶ್ಯಪ ಎಂದಿದೆ. ಹೀಗೆ ಮನಸಾಳ ತಂದೆ ಕಶ್ಯಪನಾದಂತಾಯಿತು. ಆಗ ಅವಳು ಶಿವನ ಕನ್ನೆಯೆಂತಾಗುವಳು? ನಿಜವಾಗಿ ನೋಡಿದರೆ, ಶಿವನೊಂದಿಗೆ ಮನಸಾಳ ಯಾವ ಸಂಬಂಧವೂ ಇಲ್ಲ. ಮನಸಾ ಓರ್ವ ಲೌಕಿಕ ದೇವಿಯಾಗಿದ್ದಳು. ಬೌದ್ಧ ತಂತ್ರ ಮತ್ತು ಪೌರಾಣಿಕ ಕಾಲದಲ್ಲಿ ಅವಳನ್ನು ಸ್ವೀಕರಿಸಲಾಗಿತ್ತು. ಇತ್ತ ಶಿವನಾದೆರೋ, ಏಳು ಸಾವಿರ ವರ್ಷ ಹಿಂದಿನ ವಿರಾಟ ಪುರುಷನಾಗಿದ್ದಾನೆ. ಅವನು

ಪುರಾಣಗಳ ಮಾತುಗಳನ್ನವಲಂಬಿಸಿಲ್ಲ. ಪುರಾಣಗಳನ್ನು ಶಿವನ ನಂತರ ಐದೂವರೆ ಸಾವಿರ ವರ್ಷಗಳ ನಂತರ ರಚಿಸಲಾಗಿದೆಯಷ್ಟೇ.

ಮಾನಸಾಳ ಕತೆ ಹೇಳಿದೆವು. ಈಗ ಪಾರ್ವತಿಯ ಕತೆಯನ್ನಿಷ್ಟು ಹೇಳಬೇಕಷ್ಟೇ? ಪಾರ್ವತಿ ಶಬ್ದದ ಅರ್ಥವೇನು? ಯಾರಾದರೂ, ಪರ್ವತಸ್ಯ ದುಹಿತಾ! 'ಪರ್ವತಸ್ಯ ಕನ್ಯಾ (ಷಷ್ಟೀ ತತ್ಪುರುಷ ಸಮಾಸ) ಇತ್ಯರ್ಥೇ ಪಾರ್ವತೀ', ಅರ್ಥಾತ್ ಪರ್ವತದ ಮಗಳು. ಈಗ ಪಂಚಭೂತಾತ್ಮಕ ಶರೀರ ಹೊತ್ತ ನಾರಿಯೋರ್ವಳು ಬೆಟ್ಟದ ಮಗಳಾಗಬಹುದೇ? ಎಂಬ ಪ್ರಶ್ನೆ ಏಳುತ್ತದೆ. ಯಾವುದಾದರೊಂದು ನದಿಗೆ ಬೇಕಾದರೆ ಬೆಟ್ಟಿದ ಕನ್ಯೆಯೆಂದು ಕರೆಯಬಹುದಾಗಿನೆ. ಆದರೆ 'ಓರ್ವ ನಾರಿಗೆ ಬೆಟ್ಟದ ಕನ್ಯೆಯೆಂದು ಹೇಗೆ ಕರೆಯಬಹುದು? ಹೀಗಂತೂ ಕರೆಯಲಾಗದು. ಅಂದ ಮೇಲೆ 'ಪರ್ವತಸ್ಯ ಕನ್ಯಾ ಇತ್ಯರ್ಥೇ ಪಾರ್ವತೀ' ಎಂದಿರಲಾರದು. 'ಪರ್ವತ ದೇಶೀಯ ಕನ್ಯಾ ಇತ್ಯರ್ಥೇ (ಮಧ್ಯಪದ ಲೋಪಿ ಕರ್ಮಧಾರಯ) ಪಾರ್ವತೀ' ಎಂದಿರಬೇಕು. ಅಂದರೆ ಪರ್ವತ ನಾಡಿನ ಕನ್ಯೆ. ಎಂಬ ಅರ್ಥದಲ್ಲಿ ಪಾರ್ವತೀ. ಬೆಟ್ಟದ ನಾಡಿನಲ್ಲಿ ವಾಸಿಸುವ ಕನ್ಯೆ. ಈಗ ಅನೇಕ ಜನರು ಪಾರ್ವತಿಯು ಹಿಮಾಲಯದ ಕನ್ಯೆ ಎಂದು ಹೇಳುತ್ತಿದ್ದಾರೆ. ಹಿಮಾಲಯದ ಕನ್ಯೆ ಎಂದರೆ ಪಾರ್ವತಿಯ ತಂದೆ ಹಿಮಾಲಯ ಎಂದರ್ಥವಲ್ಲ; ಆದರೆ, ಹಿಮಾಲಯವಾಸಿಯಾದ ಕನ್ಯೆ.

ಈ ಪಾರ್ವತಿಯು ಗೌರಿಯೂ ಆಗಿದ್ದಳು. ಅಂದರೆ ಗೌರವರ್ಣದವಳಾಗಿದ್ದಳು; ಆರ್ಯಕನ್ಯೆಯಾಗಿದ್ದಳು. ಆ ಕಾಲದಲ್ಲಿ, ಭಾರತವಲ್ಲಿ, ಭಾರತದ ಪ್ರಾಚೀನ ಅಧಿವಾಸಿ (ಆಸ್ಟ್ರಿಕೋ–ಮಂಗೋಲ–ನಿಗ್ರೋಯೆಡ್) ಮತ್ತು ಹೊರಗಿನಿಂದ ಬಂದ ಆರ್ಯರ ನಡುವೆ, ಬಹಳಷ್ಟು ಒಳ್ಳೇ ಸಂಪರ್ಕವಿರಲಿಲ್ಲ. ಭಾರತದ ಮೂಲ ನಿವಾಸಿಗಳಿಗೆ ಅಸುರರೆಂದೋ, ದಾನವರೆಂದೋ, ದಾಸರೆಂದೋ, ಕೆಲವೊಮ್ಮೆ ಶೂದ್ರರೆಂದೋ, ಸಂಬೋಧಿಸುತ್ತಿದ್ದರು.

ಇವರನ್ನು ಆರ್ಯರು ತಮ್ಮ ಸಮಾಜದಲ್ಲಿ ಸ್ವೀಕರಿಸಿರಲಿಲ್ಲ. ಆರ್ಯರು ಇವರನ್ನು ತಮ್ಮ ಸಮಾಜದಲ್ಲಿ, ತಮ್ಮ ಪಂಕ್ತಿಯಲ್ಲಿ, ಕೂಡ್ರಗೊಡುತ್ತಿರಲಿಲ್ಲ. ಆದರೆ, ಆಸ್ಟ್ರಿಕೋ–ಮಂಗೋಲ–ನಿಗ್ರೋಯಿಡ್ ರಕ್ತದಿಂದ ಜನ್ಮ ತಳೆದ ಭಾರತ ಪ್ರಾಚೀನ ಮನುಷ್ಯರಿಗೆ ತಮ್ಮದೇ ಆದ ಸಭ್ಯತೆಯಿತ್ತು; ಸಂಸ್ಕೃತಿಯಿತ್ತು. ಅವರು ಉನ್ನತ ಜೀವಿಗಳಾಗಿದ್ದರು. ಆವರದೇ ಆದ ತಂತ್ರ ಸಾಧನವಿತ್ತು; ಅವರದೇ ಆದ ಚಿಕಿತ್ಸಾ ವಿಜ್ಞಾನವಿತ್ತು. ಮತ್ತು ಹೊರಗಿನಿಂದ ಆಗಮಿಸಿದ ಆರ್ಯರೊಂದಿಗೆ ಅವರ ಬಹು ಕಾಲದ ಸಂಘರ್ಷ ನಡೆದೇ ಇತ್ತು. ಈ ಆರ್ಯರ ದೊರೆ, ಹಿಮಾಲಯ ವಾಸೀ ದಕ್ಷನ, ಕನ್ಯೆಯಾಗಿದ್ದಳು; ಗೌರಿ.

ಗೌರಿಯೊಂದಿಗೆ ಶಿವನ ಲಗ್ನವಾದ ಬಳಿಕ, ಆರ್ಯ ಮತ್ತು ಆರ್ಯೇತರ ನಿವಾಸಿಗಳ ಮಧ್ಯೆ, ಒಂದು ಸುಂದರ, ಸಂಪರ್ಕವೇರ್ಪಡುವುದೆಂದು ಅನೇಕರು ಬಗೆದಿದ್ದರು. ವಿವಾಹಕ್ಕಿಂತ ಮೊದಲು, ಗೌರಿಯು ಶಿವನ ಆರಾಧನೆ ಮಾಡುವ ಕಾಲಕ್ಕೆ, ಅರಣ್ಯ–ಸಂಚಾರಿ (ಶವರ) ಭಿಲ್ಲ ಕನ್ಯೆಯರಂತೆ ಉಡುಪು ತೊಡುತ್ತಿದ್ದಳು. ಹುಲ್ಲುಕಡ್ಡಿಯಿಂದ

ಅರಿಷಿಣದ ಎಲೆಗಳನ್ನು ಹೆಣೆದು ಅವಳು ಅವುಗಳನ್ನೇ ವಸ್ತ್ರದಂತೆ ಉಟ್ಟುಕೊಳ್ಳುತ್ತಿದ್ದಳು. ಸಂಸ್ಕೃತ ಭಾಷೆಯಲ್ಲಿ 'ಪರ್ಣ' ಶಬ್ದಕ್ಕಿರುವ ಅನೇಕ ಅರ್ಥಗಳಲ್ಲಿ 'ಅರಿಷಿಣದ ಎಲೆ' ಎಂಬುದೂ ಒಂದು. ಆದ್ದರಿಂದ ಜನರು ಗೌರಿಗೆ 'ಪರ್ಣ ಶಬರಿ' ಎಂದೂ ಹೆಸರಿಸಿದರು.

ಅನಂತರ ಕಾಲದಲ್ಲಿ ಅವಳು ತನ್ನ ಆರಾಧನೆಯಲ್ಲಿ ಸಿದ್ಧಿ ಗಳಿಸಿದ ಬಳಿಕ, ಜನರು ಗೌರಿಯ ಬಳಿಸಾರಿ, 'ಈ ನಿಮ್ಮ ಪರ್ಣವಸ್ತ್ರವನ್ನು ತೊರೆದು ಶಾಟಿ ವಸ್ತ್ರವೆಂದು 'ಸಾಡಿ' (ಸೀರೆ)ಯನ್ನು ಬಳಸಲು ಕೇಳಿಕೊಂಡರು. ಯಾವಾಗ ಗೌರಿಯು ಪರ್ಣವಸ್ತ್ರವನ್ನು ತ್ಯಜಿಸಿದಳೋ, ಆಗ ಜನರು ಅವಳನ್ನು 'ಅಪರ್ಣಾ' ಎಂದು ಕರೆದರು.ಆದರೆ ದುಃಖದ ವಿಷಯವೆಂದರೆ, ಶಿವ ಮತ್ತು ಗೌರಿಯರ ವಿವಾಹವಾದ ನಂತರ ಸಹ, ಆರ್ಯ–ಅನಾರ್ಯರ ಸಂಪರ್ಕವು ನಿಕಟವಾಗಿ ಉಳಿಯಲಿಲ್ಲ. ಹೋರಾಟವು ಇನ್ನಷ್ಟು ತೀವ್ರಗೊಂಡಿತು. ಗೌರಿಯ ತಂದೆಯಾದ, ಆರ್ಯಕುಲದ ದಕ್ಷನು ಶಿವನನ್ನು ನಿಂದಿಸಿದನು. ಮತ್ತು ಶಿವನನ್ನು ಅಪಮಾನಗೊಳಿಸಲೆಂದೇ, ಶಿವನನ್ನು ಬಿಟ್ಟು, ಒಂದು ಯಜ್ಞ ಹೂಡಿದನು. ಅರ್ಥಾತ್ ಆ ಯಜ್ಞಕ್ಕೆ ಶಿವನಿಗೆ ಆಮಂತ್ರಣವನ್ನೇ ಕಳಿಸಲಿಲ್ಲ. ಆ ಯಜ್ಞಸ್ಥಲದಲ್ಲಿ ಶಿವನಿಗಾದ ನಿಂದೆಯನ್ನು ಸಹಿಸಲಾರದೆ, ಪಾರ್ವತಿಯು ತನ್ನನ್ನು ತಾನು ಸುಟ್ಟುಕೊಂಡಳು. ಮತ್ತು ಅಸು ನೀಗಿದಳು.

"ಕ್ಷಾಂತ ಹಿಂ ಗೋ ಪಿತಾ ಶಿವನಿಂದಾ ಅರ ಸಹೇ ನಾ
ಕುಬೇರ ಯಾರ ಭಾಂಡಾರೀ ಬ್ರಹ್ಮಾ ವಿಷ್ಣು ದ್ವಾರೇ ದ್ವಾರೀ
ಆಭಿ ತಾರಈ ಆಜ್ಞಾಕಾರೀ, ಜೇನೇಉ ಕಿ ತಾ ಜಾನ ನಾ"

ಯಾರ ಇರವಿನ ಐಶ್ವರ್ಯದ ಪ್ರಸಾರವು ಕುಬೇರನ ಮಾಣಿಕ್ಯದ ಕಾಂತಿಯನ್ನು ಸಹ ಸೋಲಿಸುತ್ತಿತ್ತೋ, ಯಾರ ಅಪೂರ್ವ ಸೃಜನ ಶಕ್ತಿಯು ಸ್ವಯಂ ಸೃಷ್ಟಿಕರ್ತನನ್ನು ಸಹ ಸೋಲಿಸುತ್ತಿತ್ತೋ, ಯಾರ ಅಸಾಮಾನ್ಯ ವಾತ್ಸಲ್ಯದ ಸ್ನೇಹ ಛಾಯೆಯಲ್ಲಿ ಕೇವಲ ಮಾನವರೇಕೆ ಜೀವ ಜಂತುಗಳು ಮತ್ತು ಸಸ್ಯಾದಿಗಳು ಸಹ ವಾಸಿಸುವರೋ ಆ ಸದಾ ಶಿವನ ಅನುಗಾಮಿನಿಯಾಗಿ ನಾನು ಇದ್ದೇನೆ. ನೀವು ಈ ಮಾತನ್ನು ತಿಳಿದಿಲ್ಲವೇ? ನಿಶ್ಚಯವಾಗಿಯೂ ನೀವು ಇದನ್ನು ತಿಳಿದಿದ್ದೀರಿ. ನಾನು ಶಿವನಿಂದೆಯನ್ನು ಸಹಿಸುವದಿಲ್ಲ. ನೀನು ಕ್ಷಮಿಸು, ತಂದೆ (ದಕ್ಷ), ನೀನು ಕ್ಷಮಿಸು.

ಆ ಆತ್ಮತ್ಯಾಗದ ಬಳಿಕ, ಭಾರತದಲ್ಲಿ ಆರ್ಯ ಮತ್ತು ಅನಾರ್ಯದಲ್ಲಿ ಒಳ್ಳೆಯ ಸಂಬಂಧ ಉಂಟಾಯಿತು. ಇಂದು ಜನರು ಯಾವ ಪೌರಾಣಿಕ ದೇವಿಯನ್ನು ದುರ್ಗಾ ಎಂದು ತಿಳಿಯುವರೋ, ಆ ಪೌರಾಣಿಕ ದೇವಿಯೊಂದಿಗೆ ಗೌರಿ, ಇಲ್ಲವೆ ಪಾರ್ವತಿಯ ಯಾವ ಸಂಪರ್ಕವೂ ಇಲ್ಲ.

ಗೌರಿ ಇಲ್ಲವೆ ಪಾರ್ವತಿಯು ಮಾನವ ಕನ್ಯೆಯಾಗಿದ್ದಳು. ಅವಳಿಗಿದ್ದ ಕೈಗಳು ಎರಡೇ. ಮತ್ತು ಪೌರಾಣಿಕ ಯುಗದ ದೇವಿಯಾದ ದುರ್ಗಾದೇವಿಗೆ ಸಂಬಂಧಿಸಿದಂತೆ ಶಿವ ಯುಗದ ಯಾವ ಅವಶೇಷಗಳು ಇಲ್ಲ.

ಈ ದುರ್ಗಾ ಪೂಜೆಯು ಮುಖ್ಯವಾಗಿ ಮಾರ್ಕಂಡೇಯ ಪುರಾಣದ ಅಸ್ತಿವಾರದ ಮೇಲೆ ನಿಂತಿದೆ. ದೇವಿ ಪುರಾಣ, ಕಾಳಿಕಾ ಪುರಾಣ, ಬೃಹತ್ ನಂದಿಕೇಶ್ವರ ಪುರಾಣ,

ದುರ್ಗಾಭಕ್ತಿ ತರಂಗಿಣಿ, ದೇವಿ ಭಾಗವತ ಮುಂತಾದ ಗ್ರಂಥಗಳ ಆಧಾರದ ಮೇಲೆ ನಿಂತಿದೆ. ಇವುಗಳಲ್ಲಾವುದೂ ಹದಿಮೂರು ನೂರು–ಇಲ್ಲವೆ ಹದಿನಾಲ್ಕು ನೂರು ವರ್ಷಗಳಿಗಿಂತ ಹೆಚ್ಚು ಪ್ರಾಚೀನವಾಗಿಲ್ಲ. ಈ ಮಾರ್ಕಂಡೇಯ ಪುರಾಣವು ಸಹ ಹದಿಮೂರು ನೂರು ಇಲ್ಲವೆ ಹದಿನಾಲ್ಕು ನೂರು ವರ್ಷಗಳಿಗಿಂತೆ ಹೆಚ್ಚು ಪ್ರಾಚೀನವಾಗಿಲ್ಲ. ಅದರೊಳಗಿಂದ ಸರಿಯಾಗಿ ಆಯ್ದ ಏಳುನೂರು ಶ್ಲೋಕಗಳನ್ನು ತೆಗೆದು ಕೊಂಡು ರಚಿಸಿದ ಸಂಕ್ಷಿಪ್ತ ಮಾರ್ಕಂಡೇಯ ಪುರಾಣಕ್ಕೆ "ದುರ್ಗಾ ಸಪ್ತ ಶತೀ" ಎಂದು ಕರೆಯಲಾಗಿದೆ. ವಾಡಿಕೆಯ ಭಾಷೆಯಲ್ಲಿ ಶ್ರೀ. ಶ್ರೀ. ಚಂಡೀ ಎಂದು ಕರೆಯುತ್ತಾರೆ. ಶಿವನ ಸಮಯದಲ್ಲಿ ಇವುಗಳೆಲ್ಲ ಇರಲಿಲ್ಲ. ಶಿವನೊಂದಿಗೆ ಇವುಗಳ ಸಂಪರ್ಕವೂ ಇಲ್ಲ. ಬಹಳಷ್ಟು ಜನರು, ದುರ್ಗೆಯು ಶಿವನ ಪತ್ನಿಯಾಗಿದ್ದಳೆಂದು ತಿಳಿಯುತ್ತಾರೆ. ಆದರೆ ಇದು ಯಾವುದೇ ಪ್ರಕಾರದ ಯಾವುದೇ ಉದಾಹರಣೆಯಿಂದ ಪ್ರಮಾಣಿತವಾಗಲಾರದು. ಶಿವನಿಗೆ ಇದ್ದ ಕೈಗಳು ಎರಡೇ. ನಾಲ್ಕು ಅಲ್ಲ. ಆರು ಅಲ್ಲ. ಪಾರ್ವತಿ ಇಲ್ಲವೆ ಗೌರಿಯ ಕೈಗಳೂ ಎರಡೇ. ದುರ್ಗಾ ಪೌರಾಣಿಕ ದೇವಿಯಾಗಿದ್ದಾಳೆ. ಹೀಗೆ ಅವಳಿಗೆ ಎಷ್ಟೇ ಕೈಗಳಿರಲಿ, ಅವುಗಳೆಲ್ಲ ಪುರಾಣಕಾರನ ಕಲ್ಪನೆ ಮೂಲಕ ನಿರ್ಮಿತವಾಗಿವೆ. ಅದರಲ್ಲಿ ಹೆಚ್ಚು ಹೇಳಬೇಕಾದದ್ದು ಏನೂ ಇಲ್ಲ. ಇನ್ನು ದುರ್ಗಾ ಪೂಜೆಯು ವೇದ ಸಮ್ಮತ ಪೂಜೆಯೂ ಅಲ್ಲ. ಇದಕ್ಕೆ ವೈದಿಕ ಪೂಜೆಯ ಮುದ್ರೆಯೊತ್ತಲು ವೇದದ ದೇವೀ ಸೂಕ್ತಿಯನ್ನು ಬಳಸಲಾಗುತ್ತದೆ. ಆದರೆ ವೇದದ ದೇವೀ ಸೂಕ್ತಿ ಸೂಕ್ತದಲ್ಲಿ ಬರುವ ಹೇಮವಂತೀ ಉಮಾಳೊಂದಿಗೆ, ಶಿವನ ಪತ್ನಿ ಪಾರ್ವತಿ ಇಲ್ಲವೆ ಗೌರಿಯ ಯಾವ ಸಂಬಂಧವೂ ಇಲ್ಲ. ಅದೇ ರೀತಿ ಪೌರಾಣಿಕ ದೇವಿ ದುರ್ಗಾಳ ಸಂಬಂಧವೂ ಇಲ್ಲ. ಇದುವರೆಗೆ ಜನರು, ದರ್ಗಾ ಶಿವನ ಪತ್ನಿಯೆಂದು ತಪ್ಪಾಗಿ ತಿಳಿಯುತ್ತಾ ಬಂದಿದ್ದಾರೆ. ಶಿವನ ಪತ್ನಿಯೆಂದರೆ ಗೌರೀ-ಪಾರ್ವತಿ.

ಶಿವನ ಎರಡನೆಯ ಪತ್ನಿಯೆಂದರೆ ಕಾಲಿಕಾ–ಕಾಲಿ. ಅವಳು ಆರ್ಯೇತರ ಭಾರತದ ನಿವಾಸಿಗಳಾದ, ಮಾನವ ಶಾಸ್ತ್ರಾನುಸಾರ ನಾವು ಆಸ್ಟ್ರೀಕೊ–ಮಂಗೋಲ–ನಿಗ್ರೋಯಿಡ್ ಎಂದು ಕರೆಯುವ ಜನಾಂಗಕ್ಕೆ ಸೇರಿದವಳು. ಈಗ ನೀವೆಲ್ಲರೂ ಕಾಲಿಕಾ ಏಕೆ ಆ ರೀತಿ ಇದ್ದಳು? ಎಂದು ಯೋಚಿಸುತ್ತಿದ್ದೀರಪ್ಪೇ? ಅವಳು ಬೆತ್ತಲೆ ಇದ್ದುದೇಕೆ? ನಾಲಗೆಯನ್ನೇಕೆ ಹೊರಗೆ ಚಾಚಿದ್ದಾಳೆ? ಈ ವಿಷಯ ಕುರಿತು ಕೆಲವು ಕಥೆಗಳಿವೆ. ಆದರೆ ನಾವು ಕಥೆಗಳನ್ನು ಕೇಳುತ್ತ ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಆದರೆ ನಾವಿಂದು ಇತಿಹಾಸದ ಶೋಧ ಮಾಡಬೇಕಿದೆ. ಶಿವನ ಪೆಂಡತಿ ಗೌರಿ. ಅವಳಿಗೊಬ್ಬ ಮಗನಿದ್ದ. ಅವನೇ ಭೈರವ. ಭೈರವ ಎಂದರೆ ತಂತ್ರ–ಸಾಧನೆ ಮಾಡುವವನು, ಎಂದು ಅರ್ಥ. ಕಾಲಿಯ ಮಗಳ ಹೆಸರು ಭೈರವಿ. ಭೈರವಿ ಎಂದರೆ ತಂತ್ರ ಸಾಧನ ಮಾಡುತ್ತಿರುವ ನಾರಿ ಎಂದು ಅರ್ಥ. ಇದಲ್ಲವೆ ಬೇರಾವ ಅರ್ಥವೂ ಇಲ್ಲ. ಭೈರವಿಯು ತಂತ್ರಸಾಧನೆ ಮಾಡುತ್ತಿದ್ದಳು. ಅವಳು ತನ್ನ ತಂದೆಯಿಂದ ಸಾಧನೆಯನ್ನು ಕಲಿತಿದ್ದಳು. ತನ್ನ ಮಗಳು ತಂತ್ರಸಾಧನೆ ಮಾಡುವುದರಿಂದ ಏನಾದರೂ ವಿಪತ್ತು ಒದಗಬಹುದೆಂದು ಕಾಳಿಗೆ ಸ್ವಲ್ಪ ಭಯ. ಈ ಕಾರಣ ಅವಳು ಭಯಂಕರ ಗಂಭೀರ ರಾತ್ರಿಯಲ್ಲಿ ತನ್ನ ಮಗಳ ಶೋಧದ ಸುದ್ದಿ ತಿಳಿಯಲು ಹೋಗಿದ್ದಳು.

ಶಿವನು ಸ್ಮಶಾನದಲ್ಲಿ ಧ್ಯಾನ ಮಗ್ನನಾಗಿದ್ದನು. ನಡೆಯುತ್ತ ಸಾಗಿದ್ದಂತೆ, ಶಿವನ ಶರೀರಕ್ಕೆ ಕಾಲಿಯ ಕಾಲು ತಾಕಿತು. ಇದರಿಂದ ಅವಳಿಗೆ ನಾಚುಗೆಯಾಯಿತು. ಹೀಗಾಗಿ ನಾಚುಗೆಯಿಂದ ನಾಲಗೆ ಕಚ್ಚಿದಳು. ಇತ್ತ ಶಿವನ ಧ್ಯಾನವೂ ಭಂಗವಾಯಿತು. "ಕಸ್ತ್ವಮ್?" ನೀನಾರು? ಎಂದನು. ಕಾಲಿಯು ಶಿವನ ಪತ್ನಿಯಾಗಿದ್ದಳು. ನಾನು ಭೈರವಿ ಎಂದು ಅವಳು ಹೇಳುವಂತಿರಲಿಲ್ಲ. 'ನಾನು ಭೈರವಿಯಾಗಿದ್ದೇನೆ, ಎಂದು ಹೇಳಿ, ಪತಿಯೆದುರು ಪುತ್ರಿಯ ಹೆಸರಿನಿಂದ ಪರಿಚಯಿಸಿಕೊಳ್ಳುವಂತಿರಲಿಲ್ಲ. ಆ ಕಾಲಕ್ಕೆ ತನ್ನನ್ನು ಪರಿಚಯಿಸಿಕೊಳ್ಳುತ್ತ ಅವಳು, "ಕೌವೇರಿ ಅಸ್ಮ್ಯಹಮ್" (ನನ್ನ ಹೆಸರು ಕೌವೇರಿ) ಎಂದಳು. ಅಂದಿನಿಂದ ಕೌವೇರಿ ಎಂದು ಕಾಳಿಗೆ ಇನ್ನೊಂದು ಹೆಸರು ಬಂತು. ಸಂಸ್ಕೃತ ಭಾಷೆಯಲ್ಲಿನ ಕೌವೇರಿ ಶಬ್ದವನ್ನು ಇಂದಿನ ಭಾಷೆಯಲ್ಲಿ ಅನೇಕ ಜನರು ತಪ್ಪಿ, ಕೌವೇರಿ ಎಂದೂ ಕರೆಯುತ್ತಾರೆ. ವಾಸ್ತವಿಕ ಶಬ್ದವು ಕೌವೇರಿ ಎಂದಿದೆ. ಇದು ಕಾಲಿಕಾ ಶಕ್ತಿಯಾಗಿದೆ. ಅನಂತರದ ಕಾಲದಲ್ಲಿ ಇವಳನ್ನೇ ಶಿವೋತ್ತರ ಕಾಲದ ತಂತ್ರದ ಓರ್ವ ತಾಂತ್ರಿಕ ದೇವಿಯ ರೂಪದಲ್ಲಿ ಗ್ರಹಿಸಲಾಗಿದೆ. ಇನ್ನು ಬೌದ್ಧ ತಂತ್ರದಲ್ಲಿಯೂ ಸಹ, ಇವಳನ್ನೇ ಕಾಲಿಕಾ ಶಕ್ತಿಯ ರೂಪದಲ್ಲಿ ಗ್ರಹಿಸಿದ್ದಾರೆ. ಅನಂತರ ಕಾಲದಲ್ಲಿಯೂ ಕಾಲಿಯು ದೇವೀ ರೂಪದಲ್ಲೆ ಪೂಜ್ಯಳೆನಿಸಿದಳು. ಮತ್ತು ಪೌರಾಣಿಕ ಯುಗದಲ್ಲಿ, ಈ ಕಾಳಿಗೆ ಇನ್ನೊಂದು ಹೆಸರಾಯಿತು. ಇದುವೇ ಶ್ಯಾಮಾ ಎಂದು. ಈ ಕಾಳಿಕಾ ಶಕ್ತಿಯೊಂದಿಗೆ ಶಿವನ ಪತ್ನಿ ಕಾಲಿಯ ಯಾವ ಸಂಪರ್ಕವಿಲ್ಲ. ಶಿವನ ಪತ್ನಿಯಾದ ಕಾಲಿಯು ಏಳು ಸಾವಿರ ವರ್ಷ ಮೊದಲು ಇದ್ದಳು. ಮತ್ತು ಶಿವೋತ್ತರ ತಂತ್ರ ಮತ್ತು ಬೌದ್ಧ ತಂತ್ರಗಳಲ್ಲಿ ಸ್ವೀಕೃತಳಾದ ಕಾಲಿಯು ೧೬೦೦–೧೭೦೦ ವರ್ಷ ಪೂರ್ವದವಳಷ್ಟೇ. ಇವಳ ಪೂಜೆಯನ್ನು ಮುಖ್ಯವಾಗಿ ಕಾಲಿಕಾ ಪುರಾಣದ ತಳಹದಿಯ ಮೇಲೆ, ಅನುಷ್ಠಾನ ಮಾಡುತ್ತಾರೆ. ಅಂದರೆ, ವೈದಿಕ ಯುಗದೊಂದಿಗೆ, ಇದರ ಯಾವುದೇ ಸಂಪರ್ಕವಿಲ್ಲ. ಮತ್ತು ಅವರಿಗೆ ಶಿವನ ಸಮಯದೊಂದಿಗೂ ಸಹ ಯಾವುದೇ ಸಂಪರ್ಕವಿಲ್ಲ. ಆದರೆ ಒಂದು ಮಾತು. ಶಿವೋತ್ತರ ತಂತ್ರದ ದೇವಿಯಾಗಿದ್ದರೂ, ಇವಳನ್ನು ಬೌದ್ಧ ತಂತ್ರದಲ್ಲಿಯೂ ಸಹ ಗ್ರಹಿಸಿದ್ದಾರೆ. ಪೂಜಿಸುತ್ತಿದ್ದಾರೆ. ಇನ್ನು ಉಭಯ ತಂತ್ರಗಳಲ್ಲಿ ಸಾಮಾನ್ಯವಾಗಿ ಒಂದೇ ನಿಯಮವಿದೆ.

'ಮೇಘವಾಣಿ ವಿಗತವಸನಾ ಶವ
ಶಿವಾರೂಢಾ ಶ್ಯಾಮಾ ತ್ರಿನಯನಾ,
ನರಶಿರ ಖಡ್ಗಾವರಾ ಭಯಶೋಭನಾ
ಚತುರ್ಭುಜಾ ಕಾಲಿಕಾ ರೂಪಿಣೇ'

ಈ ಕಾಳಿಯು ನಾಲ್ಕು ಭುಜದವಳು. ಶಿವನ ಹೆಂಡತಿ ಕಾಳಿಗೆ ನಾಲ್ಕು ಭುಜಗಳಿರಲಿಲ್ಲ. ಅವಳಿಗಿದ್ದುದು ಎರಡೇ ಕೈಗಳು. ಆದ್ದರಿಂದ ಇಂದಿನ ಕಾಲದಲ್ಲಿ ಪೌರಾಣಿಕ ಮತಾನುಸಾರ ಯಾವ ಕಾಳಿಯ ಪೂಜೆಯು ನಡೆದಿದೆಯೋ, ಅವಳು ಶಿವನ ಹೆಂಡತಿಯೆಂದು ಹೇಳಲಾಗುತ್ತದೆ. ಆದರೆ ಅಮ ಹಾಗಿಲ್ಲ. ಈ ಕಾಳಿಯು ಆ ಕಾಳಿಯಲ್ಲ. ಇಷ್ಟೇ ಅಲ್ಲದೆ ಕಾಳೀ–ಶ್ಯಾಮಾಳ ಪ್ರಸಂಗದಲ್ಲಿಯೂ ಮತಭೇದವಿದೆ.

ಮೊದಲನೆಯ ಮಾತೆಂದರೆ, ಇಂದು ಪೂಜೆಗೊಳ್ಳುತ್ತಿರುವ ಕಾಳಿ ಇಲ್ಲವೆ ಶ್ಯಾಮೂ ಳೊಂದಿಗೆ ಶಿವನ ಯಾವ ಸಂಬಂಧವೂ ಇಲ್ಲ. ಇನ್ನು ಕಾಳಿಯ ಬಣ್ಣ ಕುರಿತು ಹಲವೆಡೆ ಮೇಘವರ್ಣವೆಂದೂ ಇಲ್ಲವೆ ತಿಳಿಗಪ್ಪು ಬಣ್ಣವೆಂದೂ ಹೇಳಲಾಗಿದೆ. ಅಹುವ ಹುದು; ಕನ್ನಿಗೆ ಅಂಥ ಬಣ್ಣ ಇರಬಲ್ಲದು. ಶಿವನ ಹೆಂಡತಿಯ ಬಣ್ಣವೂ ಆ ರೀತಿ ಇತ್ತು. ಆದರೆ ಪುನಃ 'ಶ್ಯಾಮಾ' ಬಣ್ಣವೆಂದೂ ಹೇಳುತ್ತಾರೆ. ಸಂಸ್ಕೃತ ಭಾಷೆಯಲ್ಲಿ 'ಶ್ಯಾಮಾ' ಶಬ್ದಕ್ಕೆ ಎರಡು ಅರ್ಥಗಳುಂಟು. ಒಂದು ಅರ್ಥವೆಂದರೆ ಹರಾ... ಆಗ ಕಾಳಿಯು ಶ್ಯಾಮಾ ಆಗುವುದಿಲ್ಲ. ಈ ಪ್ರಕಾರ ಅರ್ಥಗತ ಅಸಂಗತಿಯು ಸಹ ತೋರಿ ಬರುತ್ತದೆ. ಹೀಗೆ ಮೇಲಿನ ಶ್ಲೋಕದ ಹೇಳಿಕೆಯು ಸ್ವಯಂ ವಿರೋಧಿಯಾಗಿದೆ. ಎರಡನೆಯ ಮಾತೆಂದರೆ ಸಂಸ್ಕೃತದಲ್ಲಿ ಸಹ ಶ್ಯಾಮಾ ಶಬ್ದಕ್ಕೆ ಇನ್ನೂ ಕೆಲವು ವ್ಯಾಖ್ಯೆಗಳಿವೆ. ಅವುಗಳೆಂದರೆ–

'ಶೀತಕಾಲೇ ಭವೇದುಷ್ಣಾ
ಗ್ರೀಷ್ಮೇ ಚ ಸುಖಶೀತಲಾ"
ಅತಸೀ ಪುಷ್ಪ ತರ್ಣಾಭಾ
ಶ್ಯಾಮಾ ಪರಿಕೀರ್ತಿತಾ"

ಯಾರ ಮಧುರ ವ್ಯವಹಾರದಿಂದ ಮಾನವನಿಗೆ ಛಳಿಯಲ್ಲಿ ಬೆಚ್ಚಗಾಗುವುದೋ, ಯಾರ ಮಧುರ ವ್ಯವಹಾರದಿಂದ ಗ್ರೀಷ್ಮಋತುವಿನಲ್ಲಿ ಶೀತಲತೆಯ ಅನುಭವವಾಗುವುದೋ, ಯಾವಳು, ಅತಸೀ ಪುಷ್ಪದಂತೆ, ಅಂದರೆ ಬಂಗಾರ ಬಣ್ಣದವಳಾಗಿ ಇರುವಳೋ ಅವಳೇ ಶ್ಯಾಮಾ ಆಗಿದ್ದಾಳೆ. ಹಾಗಾದರೆ, ಇಲ್ಲಿ ಸ್ವವಿರೋಧವು ಉಳಿಯುತ್ತದೆ. ಆದ್ದರಿಂದ ಇಂದಿನ ದುರ್ಗೆಯಂತೆ ಶ್ಯಾಮಾ ಸಹ ಶಿವನ ಹೆಂಡತಿಯಲ್ಲ. ಶಿವನೊಂದಿಗೆ ಅವಳ ಯಾವುದೇ ಸಂಪರ್ಕ ಘಟಿಸದು. ಶಿವನೊಂದಿಗೆ ಕಾಳಿಯ ಸಂಪರ್ಕವೂ ಇಲ್ಲ. ಏಕೆಂದರೆ, ಹತ್ತು ಭುಜ ಇಲ್ಲವೆ ಎಂಟು ಭುಜದ ಯಾವುದೇ ದೇವಿ ಶಕ್ತಿಯು ಶಿವನ ಹೆಂಡತಿಯಾಗಿರಲಿಲ್ಲ. ಶಿವನಿಗೆ ಕೈಗಳಿರಡು. ಇನ್ನು ನಾಲ್ಕು ಕೈಗಳಿರುವ ಯಾವುದೇ ದೇವಿ ಶಕ್ತಿಯು ಶಿವನ ಪತ್ನಿಯಾಗಿರುವುದು ಶಕ್ಯವಿಲ್ಲ.

ಶಿವನ ಮೂರನೆಯ ಹೆಂಡತಿಯೆಂದರೆ ಗಂಗೆ. ಗಂಗೆಯು ಮುಂಗೋಲ ಕನ್ಯೆಯಾಗಿದ್ದಳು. ಅವಳು ತಿಬೇಟು–ಗಡಿಯಂಚಿನ ಹುಡುಗಿ. ಬಣ್ಣ ಸ್ವಲ್ಪ ಹಳದಿ. ಈಗ ಸ್ವಲ್ಪ ಮೊದಲು ನಾನು ಹೇಳಿದಂತೆ, ಗೌರಿಗೆ ಭೈರವನೆಂಬ ಒಬ್ಬ ಮಗನಿದ್ದ; ಮತ್ತು ಕಾಳಿಗೆ ಭೈರವಿಯೆಂಬ ಮಗಳಿದ್ದಳು. ಮತ್ತು ಗಂಗೆಯ ಒಬ್ಬ ಮಗನೆಂದರೆ ಕಾರ್ತಿಕೇಯ. ಕಾರ್ತಿಕ ಷಣ್ಮುಖಿಂ, ಷಡಾನನ. ತಮಿಳಿನಲ್ಲಿ ಷಣ್ಮುಗಮ್, ಬಾಲ ಸುಬ್ರಹ್ಮಣ್ಯಂ, ಮುರುಗನ್.

ಪಾರ್ವತಿಯ ಮಗನಾದ ಭೈರವನು ಧರ್ಮನಿಷ್ಠನಾಗಿದ್ದನು. ತಂತ್ರಸಾಧಕನಾಗಿದ್ದನು. ಕಾಳಿಯ ಮಗಳಾದ ಭೈರವಿಯೂ ಸಹ ಧರ್ಮನಿಷ್ಠೆಯಾಗಿದ್ದಳು; ಸಾಧಿಕೆಯಾಗಿದ್ದಳು. ಆದರೆ ಗಂಗೆಯ ಪುತ್ರನಾದ ಕಾರ್ತಿಕನು ಹಾಗಿರಲಿಲ್ಲ. ಇದರಿಂದ ಗಂಗೆಯ ಮನಸ್ಸು ಅತ್ಯಂತ ದುಃಖಕ್ಕೀಡಾಗಿತ್ತು. ಅವಳು ಏಕಮಾತ್ರ ಪುತ್ರನನ್ನು ಪಡೆದೂ ದುಃಖಿತಳಾಗಿದ್ದಳು. ಮಾನಸಿಕ ದುಃಖಗ್ರಸ್ತಳಾಗಿದ್ದಳು. ಅವಳ ದುಃಖ

ಮರೆಸುವ ಸಲುವಾಗಿ ಶಿವನು ಅವಳೊಂದಿಗೆ ಮಧುರ ವ್ಯಾವಹಾರ ಮಾಡುತ್ತಿದ್ದನು. ಇದರಿಂದ ಶಿವನು ಗಂಗೆಯೊಂದಿಗೆ ನಡೆಸಿದಷ್ಟು ಮಧುರ ವ್ಯವಹಾರವನ್ನು ಗೌರಿ ಇಲ್ಲವೆ ಕಾಳಿಯೊಂದಿಗೆ ನಡೆಸಿಲ್ಲವೆಂದು ಜನರಾಡಿಕೊಳ್ಳುತ್ತಿದ್ದರು. ಶಿವನು ಗಂಗೆಯನ್ನು ತಲೆಯ ಮೇಲಿರಿಸಿಕೊಂಡು ಕುಣಿಯುತ್ತಿದ್ದನು. ಇದೇ ಆದಾರದ ಮೇಲೆ, ಪೌರಾಣಿಕ ಯುಗದಲ್ಲಿ, ಶಿವನು ಗಂಗೆಯನ್ನು ಜಡೆಯಲ್ಲಿ ಬಂಧಿಸಿಟ್ಟುಕೊಂಡಿದ್ದನೆಂದು ಹೇಳಲಾಯಿತು. ಪುರಾಣ ಕಥೆಯ ಮೇರೆಗೆ ಸ್ವರ್ಗದಲ್ಲಿ ವಿಷ್ಣುಪಾದವನ್ನು ತೊಳೆದ ಜಲ ಧಾರೆಯು ಕೆಳಗೆ ಬರಹತ್ತಿತ್ತು. ಆಗ ಶಿವನು ಅವನ್ನು ತನ್ನ ತಲೆಯಲ್ಲಿ ಧಾರಣ ಮಾಡಿದನು. ಅಂದರೆ ಆ ಪಾದ ತೊಳೆದ ಜಲವು ಅಂದರೆ ಗಂಗೆಯು ಶಿವನ ಪತ್ನಿಯಾದಳು. ಇದರೊಂದಿಗೆ ಶಿವನ ಯಾವುದೇ ಸಂಪರ್ಕವಿಲ್ಲ. ಶಿವನ ಹಣೆಯಿಂದ ಹೊರಟು ಗಂಗೆಯು ಐದು ಧಾರೆಗಳಲ್ಲಿ ನಾಲ್ಕೂ ಕಡೆಗೆ ಪ್ರವಹಿಸಿದಳೆಂದು ಹೇಳಲಾಗುತ್ತಿದೆ.

"ಸ್ವರ್ಗೀತೆ ಅಲಕಾನಂದಾ, ಮರ್ತ್ಯೇ ಭಾಗೀರಥೀ,
ಪಿತೃಲೋಕೇ ಮಂದಾಕಿನೀ, ಪಾತಾಲೇ ಭೋಗವತೀ..."

ಅಂದರೆ ಒಂದು ಧಾರೆಯು ಸ್ವರ್ಗದಲ್ಲಿ ಹರಿಯಿತು, ಅಲಕಾನಂದಾ ಆಗಿ;ಮರ್ತ್ಯ ಲೋಕದಲ್ಲಿ ಬಂದುದು ಭಾಗೀರಥಿಯೆನಿಸಿತು. ಪಿತೃಲೋಕದಲ್ಲಿ ಮಂದಾಕಿನಿಯೆನಿಸಿ, ಪಾತಾಳದಲ್ಲಿ ಭೋಗವತೀ ಎನಿಸಿತು. ಇದೆಲ್ಲ ಪುರಾಣದ ಕತೆಯಷ್ಟೇ. ಈ ಗಂಗೆಯು ಆ ಗಂಗೆಯಲ್ಲ. ಈ ಗಂಗೆಯೊಂದಿಗೆ ಶಿವನ ಪತ್ನಿ ಗಂಗೆಯ ಯಾವ ಸಂಬಂಧವೂ ಇಲ್ಲ. ಈ ಗಂಗೆಯು 'ಗಮ್–ಡ–ಸ್ತ್ರಿಯಾ—ಗಂಗಾ. (ಗ) ಇದರ ಅರ್ಥವೆಂದರೆ ವಿಸ್ತೀರ್ಣ ಭೂಮಿ. ಬಹಳ ದೊಡ್ಡ ದೇಶ. ಮತ್ತು (ಗ)ದ ಅರ್ಥವೆಂದರೆ ಹೋಗ ಹತ್ತಿರುವವಳು. ಹೀಗೆ ಬಹುದೂರದಿಂದ ಬಹು ದೂರಕ್ಕೆ ಹೋಗುತ್ತಿರುವ ನಾರಿ. ಗಂಗೋತ್ರಿಯಿಂದ ಗಂಗೆಯು ಸಾಗರದ ವರೆಗೆ ೧೫೦೦ ಮೈಲು ದೂರ ವಿಸ್ತೀರ್ಣ ಭೂಮಿ ಬಳಸಿ ಹರಿಯುತ್ತಾಳೆ. ಆದ್ದರಿಂದ ಅವಳು ಗಂಗೆಯೆನಿಸಿದ್ದಾಳೆ. ಅರ್ಥಾತ್ ಬಹುದೂರದ ದಾರಿಯನ್ನು ಕ್ರಮಿಸುವ ನಾರಿಯೇ ಗಂಗಾ. ಆದರೆ ಈ ಗಂಗೆಯೊಂದಿಗೆ ಶಿವನ ಪತ್ನಿ ಗಂಗೆಯ ಯಾವ ಸಂಪರ್ಕವೂ ಇಲ್ಲ.

ಕಲಕತ್ತೆ:
೯–೫–೧೯೮೨.

ಪ್ರವಚನ ೫

ಯುಗ ಯುಗದಲ್ಲಿ ಶಿವ

ನಾನೀಗಾಗಲೇ ಹೇಳಿದಂತೆ ಯಾರ ದರ್ಶನ ಮತ್ತು ವ್ಯಕ್ತಿತ್ವಗಳು ಮೇಳವಿಸುವವೋ ಅವನು ದೇವತೆಯಾಗುತ್ತಾನೆ. ಮಾನವನು ಅವನಿಗೆ ಶರಣಾಗುತ್ತಾನೆ. ಅವನನ್ನು ಅನುಸರಿಸುತ್ತಾನೆ. ಅವನ ಇಚ್ಛೆಯನ್ನನುಸರಿಸಿ ಸಾಗಬಯಸುತ್ತಾನೆ. ಏಕೆಂದರೆ ಹಾಗೆ ನಡೆಯುವುದರಿಂದ ಅವನಿಗೆ ಆನಂದವೆನಿಸುತ್ತದೆ. ಕೃಷ್ಣನು ಹೀಗೆ ನುಡಿದಿದ್ದಾನೆ.

"ಯದ್ ಯದಾಚರತಿ ಶೇಷ್ಠಸ್ತದ್ ತದೇವೇತರಾ: ಜನಾ:,
ಸ ಯದ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ"

(ಶ್ರೇಷ್ಠನು ಹೇಗೆ ಹೇಗೆ ನಡೆಯುವರೋ, ಹಾಗೆಯೇ ಇತರ ಜನರೂ ನಡೆಯುತ್ತಾರೆ. ಅವನು ಯಾವ ಪ್ರಮಾಣವನ್ನು ನಿಗದಿಪಡಿಸುವನೋ, ಲೋಕವು ಅದನ್ನೇ ಅನುಸರಿಸುತ್ತದೆ.)

ಶಿವನ ಯುಗದಲ್ಲಿ ಮತ್ತು ಶಿವನ ಸಮಯದ ಉಳಿದ ಭಾಗದಲ್ಲಿ, ಎಲ್ಲ ಆರ್ಯೇತರ ಜನಗೋಷ್ಠಿಗಳು ಶಿವನ ಶ್ರೇಷ್ಠತ್ವವನ್ನು ಒಪ್ಪಿದ್ದವು. ಮತ್ತು ಅವರಲ್ಲಿ ಆರ್ಯ ಮತ್ತು ಆರ್ಯೇತರ ದೇವತೆಗಳಿಗೆ ಸಂಬಂಧಿಸಿದಂತೆ ಯಾವ ಸಂಘರ್ಷವೂ ಇರಲಿಲ್ಲ. ನಾವು ಯಾವ ಪುರುಷನನ್ನು ಒಪ್ಪೋಣ?ಎಂಬ ಪ್ರಶ್ನೆಯೇ ಉಳಿದಿರಲಿಲ್ಲ. ವೇದಗಳಲ್ಲಿಯೂ ಸಹ ಶ್ರೇಷ್ಠ ಪುರುಷ ಇಲ್ಲವೆ ದೇವತೆಯ ರೂಪದಲ್ಲಿ ಶಿವನು ಸ್ವೀಕೃತನಾಗಿದ್ದನು. ವೈದಿಕ ಯುಗದಲ್ಲಿ ಮಾನವನು ಒಪ್ಪಿದ ದೇವಿ–ದೇವತೆಗಳಲ್ಲಿ, ಶಿವನನ್ನು ಸಹ ಬೇರಾರಿಗೂ ಕಡಿಮೆಯಲ್ಲದ ದೇವತೆಯೆಂದು ಗ್ರಹಿಸಲಾಗಿತ್ತು. ಅವನನ್ನು ಪೂಜಿಸಲು ಮೊದಲು ಮಾಡಿದ್ದರು. ಹೀಗೆ ಶಿವನು ನಿರ್ದಿಷ್ಟ ಹಾದಿ ಹಿಡಿದು ಹೆಚ್ಚು–ಹೆಚ್ಚಾಗಿ ನಡೆಯಲಾರಂಭಿಸಿದನು. ವೇದದ ಯಾಗಯಜ್ಞದ ಅಂಶವನ್ನೇನೋ ಒಪ್ಪಿದ್ದರು. ಮತ್ತಿತರ ರಂಗಗಳಲ್ಲಿ ಶಿವನನ್ನೇ ಒಪ್ಪಿಕೊಂಡಿದ್ದರು. ಇನ್ನು ವೇದದ ಯಾಗ–ಯಜ್ಞಗಳನ್ನು ಒಪ್ಪದವರಂತೂ ಶಿವನನ್ನೇ ಹದಿನಾರಾಣೆ ಒಪ್ಪಿಬಿಟ್ಟಿದ್ದರು. ಶಿವ ಹೆಸರಿನಿಂದ ಸೂಚಿತವಾಗುವುದೆಂದರೆ ಶೈವ-ತಾಂತ್ರಿಕ. ನೀವು ಈಗಾಗಲೇ ತಿಳಿದಿರುವಂತೆ ವೇದದಲ್ಲಿ ತಂತ್ರವಿತ್ತು. ಅದೂ ಅಂಶತಃ ಶಿವೋತ್ತರ ತಂತ್ರ ಮಾತ್ರ. ಎಲ್ಲದರಲ್ಲಿಯೂ ವಿಶೇಷ–ವಿಶೇಷ ಮಂತ್ರ ಮೂಲಕ, ವಿಶೇಷ ವಿಶೇಷ ದೇವತೆಯ

ಪೂಜೆಯಾಗುತ್ತಿತ್ತು. ಶಿವನ ಸಮಯದಲ್ಲಿ ಶೈವ ತಂತ್ರದಲ್ಲಿ ಶಿವನ ಪೂಜೆಯನ್ನು ಯಾವುದೇ ವಿಶೇಷ ಬೀಜಮಂತ್ರದಿಂದ ಮಾಡುತ್ತಿರಲಿಲ್ಲ. ಏಕೆಂದರೆ ಆ ಕಾಲಕ್ಕೆ ಮಾನವನು ಶಿವನನ್ನು ಎಷ್ಟೊಂದು ತನ್ನವನನ್ನಾಗಿ, ವಿಕಾತ್ಮರೂಪವಾಗಿ ತಿಳಿದಿದ್ದನೆಂದರೆ ಮಂತ್ರ ಮೂಲಕ ಅವನನ್ನು ಆಹ್ವಾನಿಸುವುದರ ಪ್ರಯೋಜನ ಅವನಿಗೆ ಅನಿಸಲಿಲ್ಲ. ಅವರು ಶಿವನನ್ನು ತಮ್ಮ ಮನುಷ್ಯನೆಂದೂ, ಅತಿ ಸಮೀಪವರ್ತಿಯೆಂದೂ ತಿಳಿದಿದ್ದರು. ಆದ್ದರಿಂದ ಹೊರಗಿನ ಬೀರಾವ ಬೀಜಮಂತ್ರವನ್ನೂ ಅವರು ಒರ ಮಾಡಿಕೊಳ್ಳುತ್ತಿರಲಿಲ್ಲ. ಇನ್ನು ಆ ಕಾಲದ ವೇದವನ್ನನುಸರಿಸುವ ಜನರೂ ಸಹ,ಶಿವನನ್ನು ಒಪ್ಪಿಬಿಟ್ಟಿದ್ದರು. ಆದರೆ ಈ ಜನರು ಶಿವನನ್ನು ಅಷ್ಟೊಂದು ಸಮೀಪದ ವ್ಯಕ್ತಿಯೆಂದು ಬಗೆದಿರಲಿಲ್ಲ. ಮೇಲಾಗಿ ಈ ಮೊದಲು ಹೇಳಿದಂತೆ, ಆ ಕಾಲದಲ್ಲಿ ಮೂರ್ತಿ ಪೂಜೆಯ ಪದ್ಧತಿಯೂ ಇರಲಿಲ್ಲ. ಆದ್ದರಿಂದ ವೇದಾನುಗಾಮೀ ಜನರು ಶಿವಪೂಜೆಯಲ್ಲಿ ಶಿವನನ್ನು ರೂಪಾಂತರ ದೇವತೆಯ- ರೂಪಾಂತರ ತತ್ತ್ವದ-(diety of transmutation-transmutational principle)ರೂಪದಲ್ಲಿ ಗ್ರಹಿಸಿದ್ದರು. ಈ ಯಾವ ರೂಪಾಂತರ ಕ್ರಮ (process of transmutation)ವಿದೆಯೋ, ಅದು ರೂಪಾಂತರ ಕ್ರಮವೇ (process of metamorphosis) ಆಗಿದೆ. ಇದನ್ನು ಯಾವ ರೀತಿ ಸಾಧಿಸಬಹುದೋ, ಅದಕ್ಕಾಗಿ ಅವರು 'ಹಲಂತ' ಯುಕ್ತ 'ಮ' (ಮ್)ವನ್ನು ಬೀಜ ಮಂತ್ರ ರೂಪದಲ್ಲಿ ಬಳಸುತ್ತಿದ್ದರು.

ಈ 'ಹಲಂತ' ಯುಕ್ತ 'ಮ' (ಮ್)ವನ್ನೇ ಬೀಜರೂಪದಲ್ಲಿ ಗ್ರಹಿಸಿದ್ದರು. ಅಂದರೆ, ಶಿವನಿಗೆ ಸಂಬಂಧಿಸಿದ ಏನನ್ನಾದರೂ ಮಾಡಲಿಕ್ಕೋಸುಗ ಅವರು 'ಹಲಂತ' ಯುಕ್ತ ಮ(ಮ್)ವನ್ನು ಬಳಸುತ್ತಿದ್ದರು. ಆ ಜನರು ಶಿವನನ್ನಂತೂ ರೂಪಾಂತರ, ತತ್ತ್ವವೆಂದು,(principle of transmutation) ಸ್ವರೂಪಾಂತರ ತತ್ತ್ವವೆಂದು (principle of matamorphosis) ಒಪ್ಪಿದ್ದರು. ವೈದಿಕ ಯುಗದಲ್ಲಿ ಶಿವನನ್ನು ಒಪ್ಪಲಾಗಿತ್ತು. ಆದರೆ ಸ್ವತಃ ಶಿವನು ನೈದಿಕಾಚಾರವನ್ನು ಮನ್ನಿಸಿರಲಿಲ್ಲ. ಅವನು ತಂತ್ರಾಚಾರವನ್ನೇ ಒಪ್ಪಿ ನಡೆದಿದ್ದನು. ಅದೇ ಮೇರೆಗೆ ದೃಢತೆಯಿಂದ, ಋಜು ಮಾರ್ಗದಿಂದ ನಡೆದಿದ್ದನು. ಈಗಿನ ಶೈವಾಚಾರದ–ಅಂದರೆ ತಾಂತ್ರಿಕ ಶೈವಂಚಾರದ ಬಹುಕಾಲಾನಂತರ, ಇಂದಿನಿಂದ ಹೆಚ್ಚು ಕಡಿಮೆ ಎರಡು ಸಾವಿರ ವರ್ಷದಿಂದೀಚೆ ಜೈನ ಧರ್ಮದ ಪ್ರವರ್ತನವಾಗಿದೆ.

ಆದಾಗ್ಯೂ ವರ್ಧಮಾನ ಮಹಾವೀರನಿಗಿಂತ ಮೊದಲು ಸಹ ತೀರ್ಥಂಕರರು ಬಂದಿದ್ದರು. ಮತ್ತು ಜೈನಧರ್ಮವನ್ನು ಪ್ರಚಾರ ಮಾಡಿದ್ದರೆಂದು ಬಹುಜನರು ಹೇಳುತ್ತಿದ್ದಾರೆ. ಅದೇನೇ ಇರಲಿ, ಈ ಮಾತುಗಳೆಲ್ಲ ಶಿವನ ನಂತರದ ಬಹು ಸಮಯದಿಂದೀಚಿನವಷ್ಟೇ.

ಭಾರತದಲ್ಲಿ ಜೈನ ಧರ್ಮದ ಪ್ರಚಾರವಾಗುವುದರಲ್ಲಿದ್ದಾಗ, ಶಿವನು ಜನಗಣವ ದೇವತೆಯಾಗಿ ಬಿಟ್ಟಿದ್ದನು. ಜನಗಣದ ಮನದಲ್ಲಿ ನೆಲೆಸಿದ್ದನು. ಮಾನವನ ಹೃದಯ-ಗುಹೆಯನ್ನು ಸೇರಿದ್ದನು. ಅವನು ತನ್ನವನೆಂದೇ ಎಲ್ಲರೂ ಬಗೆದಿದ್ದರು. ಅವನ ಲೌಕಿಕ ಅಸಾಮಾನ್ಯ ವ್ಯಕ್ತಿತ್ವ ಇಲ್ಲವೆ ಪ್ರತಿಭೆಯಿಂದ ಹೀಗಾಗಿತ್ತೆಂಬ ಮಾತೇನೂ ಅಲ್ಲ,

ಮಾನವ ಜೀವನದ ಸರ್ವ ಕ್ಷೇತ್ರಗಳಲ್ಲಿಯೂ ಅವನ ಪ್ರಭಾವವು ಅಸಾಮಾನ್ಯವಾಗಿತ್ತು. ಸರ್ವ ಆದಿಕ್ಷೇತ್ರಗಳಲ್ಲಿಯೂ ಅವನು ವಿರಾಟ ದೇವತೆಯಾಗಿದ್ದನು. ಶಿವನ ನಂತರದ ಬಹುಕಾಲದ ಸಂಗತಿಯಾದ ಜೈನಧರ್ಮದ ಪ್ರಚಾರ ಕಾಲದಲ್ಲಿ, ಮಾನವನು ಮೇಲೆ ಮೇಲೆ ಜೈನ ಧರ್ಮವನ್ನು ಗ್ರಹಿಸಿದನು. ವಿಶೇಷವಾಗಿ ರಾಢ ಪ್ರದೇಶದ ಗಡಿನಾಡಿನಲ್ಲಿ ಜೈನಧರ್ಮದ ಪ್ರಶಿಷ್ಠೆ ತುಂಬಾ ಅಧಿಕವಾಗಿತ್ತು. ಭಾರತವನ್ನು ಹೊರತುಪಡಿಸಿ,ಅನೇಕ ಸ್ಥಳಗಳಲ್ಲೂ ಸಹ ಅದಕ್ಕೆ ಪ್ರತಿಷ್ಠೆ ಲಾಭ ದೊರಕಿತ್ತು. ಆದರೆ ಮನದ ಅಂತರಾಳದಲ್ಲಿ, ಅಂತರಗಂಗೆಯಂತೆ ಶೈವಧರ್ಮವು ಅವ್ಯಾಹತವಾಗಿ ಸಾಗಿತ್ತು.

ಜೈನ ಧರ್ಮವು ಅನೇಕ ಶಾಖೆ ಉಪಶಾಖೆಗಳಲ್ಲಿ ಒಡೆದುಹೋಗಿದೆಯೆಂಬ ಸಂಗತಿ ನಿಮಗೆ ಈಗಾಗಲೇ ತಿಳಿದಿರಬಹುದು. ಈ ಶಾಖೋಪಶಾಖೆಗಳಲ್ಲಿ ಮುಖ್ಯವಾಗಿ ದಿಗಂಬರ ಮತ್ತು ಶ್ವೇತಾಂಬರಗಳೆಂಬೆರಡು ಶಾಖೆಗಳುಂಟು. ಐತಿಹಾಸಿಕ ಶೋಧದಿಂದ ಜೈನಧರ್ಮವು ಮೂಲತಃ ದಿಗಂಬರ ಧರ್ಮವಾಗಿದೆಯೆಂಬುದನ್ನು ಕಾಣಬಹುದು. ಆದರೆ, ಅನಂತರದ ಕಾಲದಲ್ಲಿ ಈ ದಿಗಂಬರ ಜೈನ ಮತವಾದಕ್ಕೆ ನಿಗ್ರಂಥಿವಾದವೆಂದು ಕರೆದರು. (ಗ್ರಂಥಿಯೆಂದರೆ ಗಂಟು. ನಿಗ್ರಂಥಿಯೆಂದರೆ ಅರಿವೆಯ ಗಂಟಗಳನ್ನೆ ಬಳಸದಿರುವುದು. ಅಂದರೆ, ವಸ್ತ್ರವನ್ನು ಬಳಸದಿರುವುದು. ಇದರಿಂದಾಗಿಯೇ ಇದಕ್ಕೆ ದಿಗಂಬರವೆಂದು ಕರೆದರು.) ಜೈನ ಧರ್ಮದ ಗೃಹಸ್ಥ ಅನುಯಾಯಿಗಳು ಇದನ್ನು ಹೆಚ್ಚಾಗಿ ಮೆಚ್ಚಲಿಲ್ಲ. ಅದರಿಂದಾಗಿ ಈ ಜನರೇ ಶ್ವೇತಾಂಬರ ಮತವಾದವನ್ನು ರೂಢಿಗೊಳಿಸಿದನು. ಆದರೂ ಜೈನ ಧರ್ಮವು ಮೂಲತಃ ದಿಗಂಬರವಾಗಿದ್ದಿತು. ಹಾಗಾದರೆ ಈ ನಿಗ್ರಂಥಿವಾದದ ಗತಿಯೇನಾಯಿತು? ಶೈವ ಧರ್ಮದೊಂದಿಗೆ ಇದರ ಸಂಮಿಶ್ರಣವಾಯಿತು. ಮಾನವ ಮನವು ಪ್ರಾಣಿಕವಾಗಿ ಶೈವವಾಗಿತ್ತು. ಆದರೆ ಅದರ ಹೊರಗಿನ ಹೊದಿಕೆಯು ದಿಗಂಬರ ಜೈನವಾಗಿತ್ತು. ನಮಗೆ ದೊರೆಯುತ್ತಿರುವ ದಿಗಂಬರ ತೀರ್ಥಂಕರರ ಮೂರ್ತಿಗಳೆಲ್ಲ ನಿಗ್ರಂಥ ಮೂರ್ತಿಗಳೇ ಆಗಿವೆ. ಈ ವಿಷಯವನ್ನು ಇಲ್ಲಿಗೇ ಮುಗಿಸಿ ಇನ್ನೊಂದು ವಿಷಯದತ್ತ ಹೊರಳುವೆ.

ಇತಿಹಾಸ ಪೂರ್ವದ ಯುಗದಲ್ಲಿ—ಅಂದರೆ ವೈದಿಕ ಯುಗಕ್ಕಿಂತ ಪೂರ್ವದಿಂದಲೂ–ಮಾನವನು ಲಿಂಗ ಪೂಜೆ (phallic worship) ಮಾಡುತ್ತಿದ್ದನು. ನಾನು 'ರಾಢ'ದ ಪುಸ್ತಕದಲ್ಲಿಯೂ ಬರೆದಂತೆ, ಬೇರೆ ಬೇರೆ ಜನರ ದಳ ಇಲ್ಲವೆ ಗೋಷ್ಠಿಗಳಲ್ಲಿ ದಾರುಣ ಸಂಘರ್ಷ ನಡೆಯುತ್ತಿತ್ತು. ಮಾನವನಿಗೆ ಅಪತ್ತಿಲ್ಲದ ದಿನವೂ ಇಲ್ಲ. ರಾತ್ರಿಯೂ ಇಲ್ಲ. ಈ ತೆರನಾದ ಒಂದು ಅವಸ್ಥೆಯಲ್ಲಿ ಅವನು ಕಾಲ ಕಳೆಯುತ್ತಿದ್ದನು. ಎಲ್ಲರೂ ತಮ್ಮ ತಮ್ಮ ಸಂಖ್ಯೆಯನ್ನು ಬೆಳೆಸಲು ಇಚ್ಛಿಸುತ್ತಿದ್ದರು. ಮತ್ತು ಈ ಸಂಖ್ಯೆ ಬೆಳೆಸುವ ಪ್ರತೀಕವಾಗಿ ಈ ಲಿಂಗ ಪೂಜೆಯು ಜಗತ್ತಿನ ಬಹುತೇಕ ದೇಶಗಳಲ್ಲಿ ಪ್ರಚಲಿತವಿತ್ತು. ಯಾವುದೊಂದು ವಿಶಿಷ್ಟ ದೇಶದಲ್ಲಿ ಪ್ರಚಲಿತವಿತ್ತೆಂದಲ್ಲ.

ಭಾರತ, ದಕ್ಷಿಣ ಮತ್ತು ಪೂರ್ವ ಮತ್ತು ಮಧ್ಯ ಏಶಿಯಾದಲ್ಲಿ ಲಿಂಗಪೂಜೆಯು ಹೆಚ್ಚಾಗಿ ಪ್ರಚಲಿತವಿತ್ತು. ಮಧ್ಯ ಅಮೇರಿಕೆಯಲ್ಲಿ ಅಂದರೆ, ಉತ್ತರ ಅಮೇರಿಕೆಯ ದಕ್ಷಿಣ ಭಾಗದಲ್ಲಿ ಮತ್ತು ದಕ್ಷಿಣ ಅಮೇರಿಕೆಯ ಉತ್ತರ ಭಾಗದಲ್ಲಿ ಈ ಪೂಜೆಯು ವ್ಯಾಪಕವಾಗಿ ಪ್ರಚಲಿತವಿತ್ತು. ದಕ್ಷಿಣ ಭಾರತದ ಪಲ್ಲವ, ಪಾಂಡ್ಯ, ಚೋಳ ಮತ್ತು ಆಂಧ್ರದ ಶ್ರೀ ಶೈಲೇಂದ್ರ ಸಾಮ್ರಾಜ್ಯದ ಯುಗದಲ್ಲಿ ಭಾರತದಿಂದ ಈ ಲಿಂಗಪೂಜೆಯು ಅಮೇರಿಕೆಗೆ ಹೋಗಿತ್ತೆಂದು ಬಹುಜನರ ಗ್ರಹಿಕೆಯಾಗಿದೆ. ಈ ರೀತಿಯ ಲಿಂಗ ಪೂಜೆಯನ್ನು ಮಧ್ಯ ಅಮೇರಿಕೆಯಲ್ಲಿ ಜನರು ಮಾಡುತ್ತಿದ್ದರು. ಅವರ ನಾಗರಿಕತೆಗೆ 'ಮಾಯಾ' ನಾಗರಿಕತೆಯೆಂದು ಹೆಸರಿಸಲಾಗಿದೆ. ಇದರಿಂದಾಗಿ ಸಂಸ್ಕೃತ ಭಾಷೆಯಲ್ಲಿ ಅಮೇರಿಕೆಯನ್ನು 'ಮಾಯಾ ದ್ವೀಪ'ವೆಂದು ಕರೆಯುತ್ತಾರೆ. ಅದೇನೇ ಇರಲಿ; ಮೂಲ ಸಂಗತಿಯೆಂದರೆ, ಮಾನವನು ಇತಿಹಾಸ ಪೂರ್ವಕಾಲದಿಂದಲೂ ಲಿಂಗಪೂಜೆಯನ್ನು ಮಾಡುತ್ತಿದ್ದಾನೆ. ಮತ್ತು ಅವನದನ್ನು ಒಂದು ಸಾಮಾಜಿಕ ಸಂಸ್ಥೆ ಇಲ್ಲವೆ ಸಾಮಾಜಿಕ ಪೂಜೆಯ ರೂಪದಲ್ಲಿ ಮಾಡುತ್ತಿದ್ದನು. ಇದರೊಂದಿಗೆ ಆಧ್ಯಾತ್ಮಿಕತೆ ಇಲ್ಲವೆ ದಾರ್ಶನಿಕತೆಯ ಯಾವ ಸಂಬಂಧವೂ ಇಲ್ಲ. ಜೈನ ಯುಗದಲ್ಲಿ ದಿಗಂಬರ ಜೈನಯುಗದ ತೀರ್ಥಂಕರರ ನಿಗ್ರಂಥ ಮೂರ್ತಿಗಳು ಮಾನವ ಮನದಲ್ಲಿ ಲಿಂಗಪೂಜೆ ಕುರಿತು ಒಂದು ಹೊಸ ಭಾವವನ್ನೇ ಕುದುರಿಸಿದವು. ಹೀಗೆ, ದಿಗಂಬರ ಜೈನಾಚಾರ್ಯರ ಮೂಲಕವೇ ಮೊತ್ತ ಮೊದಲು ಧರ್ಮಸಾಧನೆಯು, ಲಿಂಗಪೂಜೆಯಲ್ಲಿ, ಬದಲಾವಣೆಯಾಯಿತು. ದಿಗಂಬರ ಜೈನಧರ್ಮದ ಅಕ್ಕಪಕ್ಕದಲ್ಲಿ ಶೈವ ಧರ್ಮವೂ ರೂಢಿಯಲ್ಲಿತ್ತು. ಜೈನ ಧರ್ಮ ಮತ್ತು ಬೌದ್ಧ ಧರ್ಮಗಳು ಭಾರತದಲ್ಲಿ ಪ್ರಚಲಿತವಿರುವಾಗ-ಇನ್ನೂ ಸರಿಯಾದ ಶಬ್ದಗಳಲ್ಲಿ ಹೇಳುವುದಾದರೆ-ಜೈನ ಮತವಾದ, ಬೌದ್ಧ ಮತವಾದಗಳು ಭಾರತದಲ್ಲಿ ನಡೆಯುತ್ತಿದ್ದಾಗ, ಅವುಗಳ ಬದಿ ಬದಿಗೇ, ಪ್ರಚಲಿತವಿದ್ದ ಶೈವ ಧರ್ಮವನ್ನು ಶಿವೋತ್ತರ ತಂತ್ರವೆಂದು ಹೇಳಬಹುದಾಗಿದೆ. ಇದರಿಂದಾಗಿ ಜೈನ ಧರ್ಮದ ಪ್ರಭಾವವು ಈ ಶಿವೋತ್ತರ ತಂತ್ರದ ಮೇಲಾಗಿ, ಶಿವಲಿಂಗ ಪೂಜೆಯಲ್ಲಿ ಪರಿವರ್ತಿತವಾಯಿತು. ಅರ್ಥಾತ್ ಆ ಇತಿಹಾಸ ಪೂರ್ವದ ಲಿಂಗಪೂಜೆಯು ಹೊಸ ರೂಪ ತಾಳಿ, ಆಧ್ಯಾತ್ಮಿಕ ಚೇತನೆ ಮತ್ತು ದಾರ್ಶನಿಕ ಮಾನಸಿಕತೆಗಳೊಂದಿಗೆ ಬೆರೆತುಕೊಂಡಿತು. (ಇಲ್ಲಿ ನೆನಪಿಡಬೇಕಾದ ಸಂಗತಿ ಎಂದರೆ, ಆ ಕಾಲದಲ್ಲಿ ದರ್ಶನವು ಮೂಡಿತ್ತು. ಕಪಿಲ ಮಹರ್ಷಿಯ ನಂತರ ಜೈನಧರ್ಮ, ಬೌದ್ಧ ಧರ್ಮಗಳು ರೂಪುಗೊಂಡಿದ್ದವು. ಹೊಸ ಭಾವನೆ ಹೊಂದಿದ್ದವು. ಈ ಪೃಥ್ವಿಯ ಮೇಲೆ ಇಂದಿನಿಂದ ಎರಡೂವರೆ ಸಾವಿರ ವರ್ಷಗಳಷ್ಟು ಮುನ್ನ ಶಿವಲಿಂಗ ಪೂಜೆ ಶುರುವಾಗಿದೆ.)

ಆದರೆ ಇತಿಹಾಸಪೂರ್ವದ ಶಿವಲಿಂಗ ಪೂಜೆ ಮತ್ತು ಮಧ್ಯಯುಗದ ಭಾರತದ (ಅಂದರೆ ೨೫೫೦ ವರ್ಷಗಳ ಹಿಂದಿನ) ಲಿಂಗ ಪೂಜೆಗಳು ಒಂದೇ ಅಲ್ಲ. ಮಧ್ಯಯುಗದ ಲಿಂಗ ಪೂಜೆಯಲ್ಲಿ ಹೊಸ ಆಧ್ಯಾತ್ಮಿಕತೆ ಮತ್ತು ದಾರ್ಶನಿಕತೆಯನ್ನು ತುಂಬಿ, ಮಾನವ ಮನದಲ್ಲಿ ಒಂದು ರೀತಿಯ ಹೊಸ ಭಾವವನ್ನೇ ಜಾಗ್ರತಗೊಳಿಸಿದರು. ಹೊಸ ರೂಪದಲ್ಲಿ ತೀರ್ಥಂಕರರನ್ನು ಪಡೆದಂತೆ, ಹೊಸ ಭಾವದಿಂದ ಶಿವಲಿಂಗ ಪೂಜೆಯ ಪ್ರವರ್ತನೆಯನ್ನೂ ಮಾಡಿದರು. ಲಿಂಗಪೂಜೆ (phallic worship) ಮಾಡುತ್ತಿದ್ದ

ಪ್ರಾಚೀನ ಕಾಲದ ಮಾನವನ ಮನದಲ್ಲಿ ತನ್ನ ವಂಶವನ್ನು ಬೆಳೆಸುವ, ಸಂಖ್ಯೆಯನ್ನು ಹೆಚ್ಚಿಸುವ ಇಚ್ಛೆಯಿತ್ತು. ಇಲ್ಲವಾದರೆ, ಜೀವಿಸುವುದೇ ಕಠಿಣವಾಗುವ ಸಂಭವವಿತ್ತು. ಆ ಕಾಲದಲ್ಲಿ ಹಗಲು ಯುದ್ಧ, ರಾತ್ರಿ ಕಾಳಗ; ಈ ಅವಸ್ಥೆಯಲ್ಲಿಯೇ ಅವನು ಜೀವಿಸಬೇಕಾಗಿತ್ತು. ಆ ಬಳಿಕ, ಜೈನ ತಂತ್ರದಲ್ಲಿ, ಬೌದ್ಧ ತಂತ್ರದಲ್ಲಿ, ಮತ್ತು ಶಿವೋತ್ತರ ತಂತ್ರದಲ್ಲಿ, ಶಿವಲಿಂಗ ಪೂಜೆಯ ಪರಿವರ್ತನೆಯಾದ ಮೇಲೆ, ಶಿವಲಿಂಗ ಪೂಜೆಯ ವ್ಯಾಖ್ಯೆಯ ರೀತಿಯೇ ಬೇರೆಯಾಯಿತು. ಅದರ ವ್ಯಾಖ್ಯೆ ಹೀಗೆ. 'ಲಿಂಗ್ಯತೇ ಗಮ್ಯತೇ ಯಸ್ಮಿನ್, ತಲ್ಲಿಂಗಮ್. ಯಾವ ಭಾವಧಾರೆಯೇ ಇರಲಿ; ಅಸ್ತಿತ್ವವುಳ್ಳದ್ದು ಏನೇ ಇರಲಿ, ಅದು ಮಹಾಕಾಶದಲ್ಲಿ, ಮಹಾವ್ಯೋಮದಲ್ಲಿ, ನಿರ್ಬಯಲಲ್ಲಿ, ಸೇರಿ ಹೋಗುತ್ತದೆ. ಇನ್ನು, ಅದರ ಎಲ್ಲ ಸ್ಪಾಂದನಿಕ ಅಭಿವ್ಯಕ್ತಿಯು ಆ ಪರಮ ರೂಪಾಂತರದಲ್ಲಿ, (Supreme transmutation) ಆ ಪರಮ ಸ್ವರೂಪಾಂತರದಲ್ಲಿ, (Supreme metamorphosis) ಆ ಪರಮ ಸತ್ತೆಯ ವಿವರ್ತನ ಮೂಲಕವಾದ ಅಸ್ತಿತ್ವದಲ್ಲಿ ಸೇರಿಹೋಗುತ್ತವೆ. ಈ ಶಿವಲಿಂಗವು ಸಕಲ ಪ್ರಾಪ್ತಿಯ ಅಂತಿಮ ಪರಿಸಮಾಪ್ತಿಯಾಗಿದೆ. ಸಕಲ ಅಸ್ತಿತ್ವದ ಪರಮ ಸ್ಥಿತಿಯಾಗಿದೆ.

ಜೈನಯುಗದಲ್ಲಿ ಪ್ರಾರಂಭವಾದ ಶಿವಲಿಂಗ ಪೂಜೆಯು ಭಾರತದ ರಂಧ್ರ ರಂಧ್ರಗಳಲ್ಲಿ ಪ್ರವೇಶಿಸಿತು. ಇನ್ನು ಹೊಸ ಭಾವದಿಂದೊಡಗೂಡಿದ ಶಿವನ ಪೂಜೆಯಲ್ಲಿನ ಬದಲಾವಣೆಯೊಂದಿಗೆ ಧ್ಯಾನ ಮಂತ್ರ ಮತ್ತು ಬೀಜ ಮಂತ್ರಗಳೂ ಸಹ ಬದಲಾದವು. ಈಗ ಈ ಬೀಜಮಂತ್ರ ಕುರಿತು ಒಂದೆರಡು ಹೆಚ್ಚು ಮಾತುಗಳನ್ನಾಡಬೇಕಾಗಿದೆ; ಈ ವಿಶ್ವದಲ್ಲಿ ಏನೇನು ಆಗಹತ್ತಿದೆಯೋ, ಯಾವ ಯಾವ ಸ್ಪಾಂದನಿಕ ಅಭಿವ್ಯಕ್ತಿಯಾಗುತ್ತಿದೆಯೋ, ಅದರ ವರ್ಣವೂ ಇರುತ್ತದೆ; ಧ್ವನಿಯೂ ಸಹ ಇರುತ್ತದೆ. ಮಾನವನ ಕಣ್ಣುಗಳಿಗೆ ಆ ಸೂಕ್ಷ್ಮ ವರ್ಣಗಳು ಗೋಚರವಾಗದಿರಬಹುದು. ಆದರೆ ಗೋಚರವಾಗಲಿಲ್ಲ; ಎಂದಮಾತ್ರಕ್ಕೆ ವರ್ಣಗಳಿಲ್ಲ; ಧ್ವನಿಗಳಿಲ್ಲ; ಎಂದೇನೂ ಅಲ್ಲ. ಅನೇಕ ಜೀವ ಜಂತುಗಳೂ ಸಹ ಬಹಳಷ್ಟು ಗ್ರಹಿಸುತ್ತಿವೆ; ಬಹಳಷ್ಟು ತಿಳಿಯುತ್ತವೆ. ಆದರೆ ಮನುಷ್ಯನಿಗೆ ಅದು ಅಶಕ್ಯವಾಗಿದೆ. ಉದಾಹರಣೆಗೆ, ಮೂಸುವ ಶಕ್ತಿ ಮನುಷ್ಯನಿಗಿಂತ ಹುಲಿಯಲ್ಲಿ ಹೆಚ್ಚಾಗಿದೆ; ನಾಯಿಯಲ್ಲಿಯೂ ಅಧಿಕವಾಗಿದೆ. ನಾಯಿಯು ತನ್ನ ಮೂಸುವ ಶಕ್ತಿಯ ಬಲದಿಂದ ಅನೇಕ ವೇಳೆ ಅಪರಾಧಿಗಳನ್ನು ಸಹ ಪತ್ತೆ ಹಚ್ಚಬಲ್ಲದು. ಆದರೆ ಮಾನವನು ಹಾಗೆ ಮಾಡಲಾರನು. ಪ್ರತಿಯೊಂದು ಅಭಿವ್ಯಕ್ತಿಗೆ ಅದರದೇ ಆದ ಧ್ವನಿಯಿದೆ. ಈ ಧ್ವನಿಯ ಪರಮ ಪರಿಸಮಾಪ್ತಿಯು ಅಥವಾ ಪರಮ ಸಮ್ಮಿಳಿತ ರೂಪವು ಓಂಕಾರವಾಗಿದೆ. 'ಓ...ಮ್'. ಈ ಪ್ರಕಾರದ ಧ್ವನಿಯಲ್ಲಿ ಸೃಷ್ಟಿ ಬೀಜವಾದ 'ಅ'; ಸ್ಥಿತಿ ಬೀಜವಾದ 'ಉ'; ಮತ್ತು ಲಯ ಬೀಜವಾದ 'ಮ' ಇವು ಅಡಗಿವೆ. ಶ್ರೀ-ಶ್ರೀ, 'ಓಮ್'. ವೃದ್ಧಿಯ ಈ ಧ್ವನಿಗೆ ಸ್ಪಂದನದ ಬೀಜ ಮಂತ್ರವೆನ್ನುತ್ತಾರೆ. ಲ್ಯಾಟಿನ್ ಭಾಷೆಯಲ್ಲಿ ಆಕೌಸ್ಟಿಕ್ ರೂಟ(accoustic root) ಎನ್ನುತ್ತಾರೆ. ಬೇರೆ ಬೇರೆ ದೇವ-ದೇವಿಯರ ಕಲ್ಪನೆಗಳೂ ಸಹ ಈ ಧ್ವನ್ಯಾತ್ಮಕ-ಕಂಪನಗಳನ್ನಾಧರಿಸಿಯೇ ಆಗಿವೆ. ಓರ್ವ ಪರಮಬ್ರಹ್ಮನಿಂದ ಬೇರೆ ಬೇರೆ ಸ್ಪಂದನಗಳು ಬೇರೆ ಬೇರೆ ದಿಕ್ಕುಗಳಲ್ಲಿ ಹಬ್ಬುತ್ತ ಹೋಗುತ್ತವೆ. ಅಂಥ ಪ್ರತಿಯೊಂದು

ಸ್ಪಂದನವು ಧ್ವನ್ಯಾತ್ಮಕ ರೂಪವಾಗಿದೆ. ಇದುವೇ ಬೀಜ ಮಂತ್ರ.

ವೈದಿಕ ಶಿವನ ಬೀಜ ಮಂತ್ರವು 'ಹಲಂತ' ಯುಕ್ತ 'ಮ' (ಮ್) ಆಯಿತು. ನಾನು ಈಗಾಗಲೇ ಹೇಳಿದಂತೆ ಶಿವನ ಕಾಲದಲ್ಲಿ ಬೀಜ ಮಂತ್ರದ ಮೂಲಕ ಶಿವನ ಪೂಜೆಯನ್ನು, ಮಾಡುತ್ತಿರಲಿಲ್ಲ. ಏಕೆಂದರೆ, ಶಿವನು ಪ್ರತಿಯೊಬ್ಬರಿಗೂ ತನ್ನವನೇ ಎನಿಸಿದ್ದ; ಏಕಾಂತದ ಸಮೀಪ ವ್ಯಕ್ತಿಯಾಗಿದ್ದ; ಏಕಾಂತ ಮನದ ವ್ಯಕ್ತಿಯಾಗಿದ್ದ. ಆದರೆ ಜೈನ ತಾಂತ್ರಿಕ, ಬೌದ್ಧ ತಾಂತ್ರಿಕ ಮತ್ತು ಶಿವೋತ್ತರ ತಾಂತ್ರಿಕ ಯುಗದಲ್ಲಿ ಶಿವನ ಬೀಜ ಮಂತ್ರವು 'ಐಂ' ಎಂದಾಗಿತ್ತು. 'ಐ' ಅಕ್ಷರವು ಸ್ವರ ವರ್ಣದ ಒಂದು ಅಕ್ಷರವಾಗಿತ್ತು. ಈ 'ಐ' ಅಕ್ಷರವೂ ಬೀಜ ಮಂತ್ರ (accoustic root) ವಾಗಿದೆ. ಅಥವಾ ವೇದ ಯುಗದಲ್ಲಿ (ಅರ್ಥಾತ್ ಆ ಕಾಲದಲ್ಲಿ ಭಾರತದಲ್ಲಿ ತಂತ್ರ ಯುಗವೂ ಪ್ರಚಲಿತವಿತ್ತು. ಇಲ್ಲವೆ ವೇದವು ತಂತ್ರದಿಂದ ಪ್ರಭಾವಿತವಾಗಿತ್ತು). ಈ ಓಮ್... ಓ...ಮ್ ಧ್ವನಿಯನ್ನು ವಿಶ್ಲೇಷಿಸುತ್ತ ಸಾಗಿದರೆ, ಮೂಲತಃ ನಾವು ೫೦ ಧ್ವನಿಗಳನ್ನು ಪಡೆಯುತ್ತೇವೆ. ಮತ್ತು ಆ ಐವತ್ತು ಧ್ವನಿಗಳು ಕಾಲಶಕ್ತಿಯಲ್ಲಿ ವಿಧಿತವಾಗಿವೆ. ಅಂದರೆ ಮಹಾಕಾಲನ ಯಾವ ಶಕ್ತಿಯಿದೆಯೋ, (supreme tempore) ಮಹಾ ಕಾಲನ ಯಾವ ಧ್ವನಿಯಿದೆಯೋ, ಅದು ಅನಾದಿ ಕಾಲದಿಂದ ಅನಂತ ಕಾಲದವರೆಗೆ ಪ್ರವಹಿಸುತ್ತ ಸಾಗಿದೆ. ಆ ಪ್ರವಾಹದಲ್ಲಿ ಬೇರೆ ಬೇರೆ ಕಾಲಗಳ ಉತ್ಥಾನ ಪತನಗಳು ಆಗುತ್ತಿರುತ್ತವೆ.

ಕಾಲವೆಂದರೇನು? ಕರ್ಮದ ಗತಿಶೀಲತೆ, ಕ್ರಿಯೆಯ ಗತಿಶೀಲತೆಯ ಮಾನಸಿಕ ಪರಿಮಾಪನವೇ ಕಾಲ (mental measurement of motivity of action; whenever there is action, there is motion) ಮತ್ತು ಈ ಗತಿ ಶೀಲತೆಯ ಮೇಲೆ ಮಾಡಲಾಗುವ ಮಾನಸಿಕ ಅಳತೆಯೇ ಕಾಲವೆನಿಸುತ್ತದೆ.

ಕಾಲವು ಛೇದಿಸಲಿಕ್ಕಾಗದ ಒಂದು ವಸ್ತುವಾಗಿದೆ. ಅಪರಿಚ್ಛಿನ್ನ ವಸ್ತುವೇನೂ ಅಲ್ಲ. ಪರಿಚ್ಛೇದಯುಕ್ತ ಖಂಡ ಸತ್ತೆಯಾಗಿದೆ. ಆದರೆ ಈ ಖಂಡ ಸತ್ತೆಗಳು ಎಷ್ಟೊಂದು ಸಮೀಪವಾಗಿದೆಯೆಂದರೆ, ಒಂದು ಕಾಲ ಖಂಡಸತ್ತೆಯು,—ಖಂಡಿತ ಸತ್ತೆಯು, ಅದರ ಹತ್ತಿರದ ಕಾಲಿಕ ಖಂಡಿತ ಸತ್ತೆಯೊಂದಿಗೆ ಸೇರಿಕೊಂಡೇ ಇದೆಯೆಂದು ಗೋಚರವಾಗುತ್ತದೆ. ಆದರೆ ಅವು ಸೇರಿಕೊಂಡೇ ಇಲ್ಲ. ನಡುವೆ ಪರಿಚ್ಛೇದ ಮಾಡಲು ಬರುವಂತಿವೆ. ಏನೇ ಇರಲಿ; ಇಂಥ ಕಾಲಿಕ ಸತ್ತೆಯಲ್ಲಿಯೇ ಓಂಕಾರದ ೫೦ ವಿಶಿಷ್ಟ ಭಾಗಗಳು ವಿಧಿತವಾಗಿವೆ. ಈ ಐವತ್ತು ವಿಶಿಷ್ಟ ಭಾಗಗಳು ಹೀಗಿವೆ: ಅ, ಆ, ಇ, ಈ ಯಿಂದ ಹಿಡಿದು ಕ, ಖ, ಗ, ಘ...ಮ, ಯ, ರ, ಲ, ವ, ಶ,ಷ,ಸ, ಮತ್ತು ಕ್ಷ. ಇದರ ಪ್ರಥಮ ಅಕ್ಷರವೇ 'ಅ'. ಅಂತಿಮ ಅಕ್ಷರವು 'ಕ್ಷ'. ಆದರಿಂದ 'ಅಕ್ಷ' ಎನ್ನುತ್ತಾರೆ. 'ಅಕ್ಷ' ಮಾಲೆಯ ಅರ್ಥವೆಂದರೆ, 'ಅ' ದಿಂದ 'ಕ್ಷ'ದ ವರೆಗಿನ ೫೦ ಅಕ್ಷರಗಳು. ಅಥರ್ವ ವೇದದಲ್ಲಿ ಈ ಭಾವನೆಯಿಂದ, ಐವತ್ತು ಅಕ್ಷರಗಳ ಕಾಲ ಶಕ್ತಿಯನ್ನು ಧಾರಣ ಮಾಡಲಾಗಿದೆ. ನಾನು ನಿಮಗೆ ಸ್ವಲ್ಪ ಮೊದಲು ಕಾಲಶಕ್ತಿಯ ಸಂಬಂಧವಾಗಿ ಈ ಮೂಲ ಧಾರಣೆ ಇದ್ದ ಬಗೆಗೆ ಹೇಳಿದ್ದೇನಷ್ಟೇ. ಏಕೆಂದರೆ ಕಾಲ ಶಕ್ತಿಯು ನಿರವಚ್ಛಿನ್ನ ಸತ್ತೆಯೇನಲ್ಲ. ಅನೇಕ ಖಂಡಿತ ಸತ್ತೆಗಳನ್ನು ಒಂದು ದಾರ

ದಿಂದ ಪೋಣಿಸಲಾಗಿದೆಯಷ್ಟೇ. ಇದರಿಂದ ಈ ಅಥರ್ವವೇದ ಯುಗದಲ್ಲಿ ಮಾನವನು ಓದಲು, ಬರೆಯಲು ಕಲಿತಿದ್ದನೆಂದು ತಿಳಿಯುತ್ತದೆ. ಆದರೆ ವೇದಗಳನ್ನು ಬರೆಯುವ ಪರಿಪಾಠವಿರಲಿಲ್ಲ. ಅಂತೂ ಕಾಲಶಕ್ತಿಯ ಕಂಠದಲ್ಲಿ ಈ ಐವತ್ತು ಅಕ್ಷರಗಳಿವೆ ಯೆಂದು ಭಾವನೆ ಮಾಡಲಾಯಿತು. ಅ, ಆ,.....ಕ, ಖ ಅಕ್ಷಗಳ ಪ್ರತೀಕ ರೂಪವಾಗಿ, ೫೦ ಮುಖಗಳನ್ನು ಹಚ್ಚಲಾಯಿತು. 'ಅ' ಅಕ್ಷರವನ್ನು ಹಸ್ತದ ಮೇಲೆ ಇರಿಸಲಾಯಿತು. ಏಕೆಂದರೆ, 'ಅ'ವು ಸೃಷ್ಟಿಯ ಬೀಜ. 'ಅ'ದಿಂದ 'ಕ್ಷ' ವರೆಗಿನ ೪೯ ಅಕ್ಷರಗಳನ್ನು ಕಂಠದಲ್ಲಿರಿಸಲಾಯಿತು. ಇವಳೇ ಅಥರ್ವವೇದದ ಭದ್ರಕಾಲಿ ಯಾದಳು: ಹೀಗೆ ಹೇಳಲಾಗಿದೆ.

ಯತ ಶೋನೆ ಕರ್ಣಪುಟೇ ಸಬತೆ ಮಾಯೇರ ಮಂತ್ರ ಬಟೇ
ಕಾಲೀ ಪಂಚಾಶತ್ ವರ್ಣಮಯೀ ವರ್ಣೇ ವರ್ಣೇ ವಿರಾಜ ಕರೇ
ಕರ್ಣ ಕೇಳುವುದೆಲ್ಲವು,
ತಾಯ ಮಂತ್ರನಿನಾದವು;
ಕಾಳಿ ಅರ್ಧಶತ ವರ್ಣ ಭರೀ
ವರ್ಣವರ್ಣದಲಿ ವಿರಾಜ ಕರೀ

ಏನೇ ಆಗಲಿ; ಈಗಾಗಲೇ ಅಥರ್ವ ವೇದದ ಭದ್ರ–ಕಾಲಿಯ ಬಗ್ಗೆ ತಿಳಿಸಿರುವೆ. ಅವಳಲ್ಲಿ ೫೦ ವರ್ಣಗಳಿವೆಯೆಂಬ ಮಾತು ಬರುತ್ತದೆ. ಅವಳೂ ಸಹ ಪರಿಚ್ಛೇದ ವಿಹೀನ ಅಖಂಡ ಸತ್ತೆಯೇನಲ್ಲ. ಎಷ್ಟೋ ಖಂಡಿತ ಸತ್ತೆಗಳ ಸಮಷ್ಟಿಯಾಗಿದ್ದಾಳೆ. ಅಂದರೆ ದಾರ್ಶನಿಕ ವಿಚಾರದಿಂದ ಅಣು ಅಣುವಿನಿಂದ ತುಂಬಿದುದಾಗಿದೆ. ಹೇಗಾದರೂ ಇರಲಿ; ಈ ಅ, ಆ, ಇ, ಈಗಳ ನಂತರ 'ಐ' ಅಕ್ಷರ ಬರುತ್ತದೆ. ಆ 'ಐ' ಅಕ್ಷರವು ಯಾವುದರ ಬೀಜವಾಗಿದೆ? ಅದು 'ವಾಕ್‌ಭವ' ಬೀಜವಾಗಿದೆ. ಎಲ್ಲ ಬೀಜಗಳಿಂದ ಅಂಕುರ ಕೊನರುತ್ತದೆ. ಯಾವ ಬೀಜದಿಂದ ಪ್ರಜ್ಞೆಯ ಅಂಕುರವು ಕೊನರುವುದೋ, ಯಾವ ಬೀಜದಿಂದ ಜ್ಞಾನದ ಅಂಕುರವು ಕೊನರುವುದೋ, ಆ 'ಐಮ್' ಬೀಜವನ್ನು ಗುರುವಿನ ಬೀಜ–ರೂಪದಲ್ಲಿ ಸ್ವೀಕರಿಸುತ್ತಾರೆ. ಶಿವನನ್ನು ಗುರುವಿನ ರೂಪದಲ್ಲಿ ಒಪ್ಪಲಾಗಿತ್ತು. ಇದರಿಂದ ಜೈನ ತಾಂತ್ರಿಕ, ಬೌದ್ಧ ತಾಂತ್ರಿಕ ಮತ್ತು ಶಿವೋತ್ತರ ತಂತ್ರಗಳ ಯುಗದಲ್ಲಿ ಶಿವನ ಬೀಜವು ಅನುಸ್ವಾರಯುಕ್ತ 'ಐ' ಆಯಿತು. 'ಐಂ! ಶಿವಾಯ ನಮಃ' ಆದರೆ ಈಗ ಸ್ವಲ್ಪ ಮೊದಲು ಹೇಳಿದಂತೆ ವೈದಿಕ ಯುಗದಲ್ಲಿ ಶಿವನ ಬೀಜವು ಹಲಂತ ಯುಕ್ತ 'ಮ' (ಮ್) ಎಂದಿತ್ತು.

ಈಗ ಜೈನ ಶಿವನನ್ನು ನೋಡಿರಿ. ಭಾರತದ ಬೇರೆ ಬೇರೆ ಭಾಗಗಳಲ್ಲಿ ವಿಶೇಷ ವಾಗಿ ರಾಢ ಗಡಿಯಲ್ಲಿ ಭೂಮಿಯನ್ನು ಅಗೆದಗೆದು, ದೊಡ್ಡ ದೊಡ್ಡ ಶಿವಲಿಂಗಗಳನ್ನು ಹೊರತರುತ್ತಿದ್ದಾರೆ. ಇವುಗಳೆಲ್ಲ ಜೈನ, ಶಿವ ಇಲ್ಲವೆ ಜೈನ–ಯುಗದ ಶಿವೋತ್ತರ ತಂತ್ರದ ಶಿವ ಅಷ್ಟೇ. ಈ ಶಿವಲಿಂಗಗಳು ಬಹಳ ದೊಡ್ಡವಾಗಿವೆ. ಆ ಯುಗದಲ್ಲಿ ಭಾರತದಲ್ಲಿ ಜ್ಞಾನದ ಚರ್ಚೆಯು ಪ್ರಬಲರೂಪದಲ್ಲಿ ಶುರುವಾಗಿತ್ತು. ಮತ್ತು ಜ್ಞಾನದ ಬೀಜವಾದ, ವಾಗ್‌ಭಯ ಬೀಜವಾದ, 'ಐ' ಅನ್ನು ಮಾನವನು ಬಹಳ ಒಳ್ಳೇ ಬೀಜದ ರೂಪದಲ್ಲಿ ಒಪ್ಪಿದ್ದನು. ಅನಂತರ ಸರಸ್ವತಿ ಪೂಜೆಯು ರೂಢಿಗೆ ಬಂದಾಗ, (ಆ

ವಿಷಯ ಕುರಿತು ಅನಂತರ ನೋಡೋಣ) ಸರಸ್ವತಿಗೂ ಸಹ ಅದೇ ಬೀಜವನ್ನು ನೀಡ ಲಾಯಿತು. ಅರ್ಥಾತ್, 'ಐಂ' ಸರಸ್ವತಯೇ ನಮಃ ಅಹುದು; ಇದುವರೆಗೆ ಜೈನ–ಶಿವನನ್ನು ಕುರಿತು ಹೇಳುತ್ತಿದ್ದೆ. ಜೈನ–ಶಿವನು ಶೈವಧರ್ಮದಲ್ಲಿ ಅನುಮೋದಿತ ನಾಗಿಲ್ಲ. ಆದರೆ ಜೈನ ಸಮಾಜದಲ್ಲಿ ಅನುಮೋದಿತನಾಗಿದ್ದಾನೆ. ಏಕೆಂದರೆ, ಶಿವನ ಪ್ರಭಾವವನ್ನು ಬದಿಗೆ ಸರಿಸಿ, ಬೇರೊಂದು ಮತವಾದವನ್ನು ನಿಲ್ಲಿಸುವುದು ಸಂಭವ ನೀಯವಾಗಿರಲಿಲ್ಲ. ಮುಂದಿನ ಕಾಲದಲ್ಲಿ, ಜೈನಧರ್ಮದಲ್ಲಿ ಅನೇಕ ಶಾಖೆ-ಪ್ರಶಾಖೆ ಗಳು ಉಂಟಾದವು. ಅದರ ಪ್ರಭಾವವು ಸಮಕಾಲೀನ ಶಿವೋತ್ತರ ತಂತ್ರದ ಮೇಲೂ ಆಯಿತು. ಆಮೇಲೆ ಶಿವನನ್ನು ಪೂಜಿಸುವಲ್ಲಿ ಸಹ, ಭೇದವು ಶುರುವಾಯಿತು. ಇದರಿಂದ, ಜೈನಯುಗದಲ್ಲಿ ಪ್ರವರ್ತಿತವಾದ ಶಿವಲಿಂಗದ ಪೂಜೆಯ ಪದ್ಧತಿ ಕುರಿತು ಸಹ ಅಭಿಪ್ರಾಯ ಭೇದವುಂಟಾಯಿತು. ಕೆಲವು ವಿಶೇಷ ಪ್ರಕಾರದ ಶಿವಲಿಂಗಗಳಿಗೆ ಜ್ಯೋತಿರ್ಲಿಂಗವೆಂದೂ, ಇನ್ನು ಕೆಲವು ವಿಶೇಷ ಪ್ರಕಾರದ ಲಿಂಗಗಳಿಗೆ 'ಆದಿಲಿಂಗ' ವೆಂದೂ, ಬೇರೆ ಕೆಲವು ವಿಶೇಷ ಪ್ರಕಾರದ ಶಿವಲಿಂಗಗಳಿಗೆ ಅನಾದಿ ಲಿಂಗಗಳೆಂದೂ ಕರೆದರು. ಈ ಪ್ರಕಾರ ಜೈನ ಧರ್ಮದಲ್ಲಿ ಎಷ್ಟೊಂದು ಶಾಖೆ ಪ್ರಶಾಖೆಗಳಿದ್ದವೋ, ಶಿವಲಿಂಗದ ಪೂಜಾ ಪದ್ಧತಿಯಲ್ಲಿ ಮತ್ತು ರಚನೆಯ ರೀತಿಯಲ್ಲಿ ಅಷ್ಟೊಂದು ಬದಲಾ ವಣೆಗಳು ಕಂಡುಬಂದವು. ಶಿವಲಿಂಗದ ಒಂದು ವಿಶೇಷ ಪ್ರಕಾರವೆಂದರೆ, ಬಾಣಲಿಂಗ. ಬಾಣಲಿಂಗವೂ ಶಿವನದೇ. ಆದರೆ, ಬದಲಾದ ಕಾಲಕ್ಕೆ ಸಂಬಧಿಸಿದುದಾಗಿದೆ. ಅಂದರೆ, ಪೌರಾಣಿಕ ಯುಗಕ್ಕೆ ಸಂಬಂಧಿಸಿದೆ. ಉತ್ತರ ಬಂಗಾಳದ ಬರೇಂದ್ರ ಭೂಮಿಯ ಅಧಿಪತಿ ಬಾಣರಾಜನ ಮೂಲಕ ಬಾಣಲಿಂಗವು ರೂಪುಗೊಂಡಿತ್ತು. ಏನೇ ಇರಲಿ; ಜೈನ ಯುಗದಲ್ಲಿ ಶಿವಪೂಜೆಯು ಈ ಪ್ರಕಾರ ಮಾರ್ಪಾಟಾಗಿತ್ತು.

ಇತ್ತ, ಜೈನಾಚಾರಿ ಗಣಂಗಳು ಸಸ್ಯಾಹಾರಿಗಳಾಗಿದ್ದಾರೆ. ಶಿವಾಚಾರ್ಯರೂ ಸಹ ಸಸ್ಯಾಹಾರಿಗಳಾಗಿದ್ದಾರೆ. ಆದರೆ, ಶಿವಾಚಾರ್ಯರಲ್ಲಿ ವಾಸ್ತವಿಕತೆಯಿತ್ತು. ಇದರಿಂದಾಗಿ ಶಿವಾಚಾರ್ಯರು ಮಾನವನ ಪ್ರಾಣಸಂಪತ್ತಾದರು. ಅತ್ತ, ಜೈನರು ಕ್ರಮೇಣ ಹಿಂಬದಿಗೆ ಸರಿದರು. ಹೇಗೆಂದರೆ, ಜೈನಾಚಾರ್ಯರು ಹೊಲದಲ್ಲಿ ನೇಗಿಲು ಹೊಡೆಯುವುದಿಲ್ಲ. ಏಕೆಂದರೆ ಹಾಗೆ ಮಾಡುವುದರಿಂದ ಅನೇಕ ಹುಳು-ಹುಪ್ಪಡಿಗಳು ಸತ್ತುಹೋಗಬಹುದೆಂದೂ ಮತ್ತು ಅದರಿಂದ ಅಹಿಂಸಾ ಧರ್ಮದ ಮೇಲೆ ಪೆಟ್ಟು ಬಿದ್ದೀತೆಂದೂ ಅವರ ಅನಿಸಿಕೆ, ಆದರೆ ಶೈವ ಧರ್ಮವು ವಾಸ್ತವಿಕ ಧರ್ಮವಾಗಿದೆ. 'ವರ್ತಮಾನೇಷು ವರ್ತ್ತೀತ' ಎಂದು ಶಿವನು ಹೇಳಿದ್ದಾನೆ. ಜೀವನದಲ್ಲಿಂದೂ ವಾಸ್ತವಿ ಕತೆಯ ವಿರುದ್ಧ ಹೋಗಕೂಡದು. ಆದ್ದರಿಂದ ಆ ಜೈನಾಚಾರ್ಯರ ಯುಗದಲ್ಲೂ ಸಹ, ಶೈವಾಚಾರಿಗಳಾದವರು ಅಂದರೆ ಶಿವೋತ್ತರ ತಂತ್ರದ ಅನುಗಾಮಿಗಳಾದವರು ಸಹ, ಭೂಮಿಯ ಸಾಗುವಳಿ ಮಾಡುತ್ತಿದ್ದರು. ಏಕೆಂದರೆ ವ್ಯವಸಾಯ ಮಾಡದಿದ್ದರೆ, ವಾಸ್ತವದಲ್ಲಿ ಬುದ್ಧಿ-ಸಂಗತವಾಗುತ್ತಿರಲಿಲ್ಲ. ಇದಾದ ನಂತರ, ಇನ್ನೂ ಕೆಲವು ಸಂಗತಿಗಳಿವೆ. ಉದಾಹರಣೆಗೆ, ಬಾಯಿಯಲ್ಲಿ ಹುಳು-ಹುಪ್ಪಡಿಗಳು ಒಳಸೇರಬಾರ ದೆಂದು ಬಾಯಿಗೆ ಪಟ್ಟಿಕಟ್ಟಿಕೊಳ್ಳುವುದು ಇತ್ಯಾದಿ. ಇಂಥವುಗಳನ್ನೆಲ್ಲ ಶೈವಾಚಾರ್ಯ ಗಣ ಒಪ್ಪುತ್ತಿರಲ್ಲ. ಶೈವಾಚಾರ ಗಣವು ಪ್ರಯೋಜನಕ್ಕನುಸರಿಸಿ, ಸಂಗ್ರಾಮದಲ್ಲೂ

ನಿರಂತರವಾಗಿ ಭಾಗವಹಿಸುತ್ತಿದ್ದರು. ಶಿವನ ಸುಸ್ಪಷ್ಟ ನಿರ್ದೇಶನಗಳನ್ನು ಒಪ್ಪುತ್ತಿ ದ್ದರು. ಆದರೂ ಸಹ, ಶೈವಾಚಾರ್ಯ ಗಣವು ಜೈನಧರ್ಮಕ್ಕೆ ತೀರ ಸಮೀಪವಿತ್ತು. ಶೈವಾಚಾರ್ಯ ಗಣವೂ ಸಹ ಸಸ್ಯಾಹಾರ ಸೇವಿಸುವವರಾಗಿದ್ದರು. ಹೀಗೆ, ಜೈನ ಧರ್ಮದ ದೋಷಗಳಿಲ್ಲ ವಿಶಿಷ್ಟವಾಗಿದ್ದವು. ಆ ಸಮಯದ ಶಿವಲಿಂಗಗಳನ್ನು ನೋಡಿ ದರೆ, ಯಾವ ಶಿವನು ಜೈನಯುಗದವನು, ಇನ್ನಾವ ಶಿವನು ಶಿವೋತ್ತರ ತಂತ್ರಯುಗ ದವನೆಂಬುದು ಗೊತ್ತಾಗುತ್ತದೆ.

ಈಗ ಬೌದ್ಧ ಶಿವನನ್ನು ನೋಡುವಾ: ಯಾವ ಕಾರಣದಿಂದ ಜೈನ ಮತವಾದದ ಯುಗದಲ್ಲಿ ಶಿವನ ಪೂಜೆಯಾಗುತ್ತಿತ್ತೋ ಮತ್ತು ಜೈನ ಮತವಾದವು ಶಿವೋತ್ತರ ತಂತ್ರದ ಮೇಲೆ ಪ್ರಭಾವ ಬೀರಿತ್ತೋ, ಅದೇ ಕಾರಣದಿಂದ ಶಿವೋತ್ತರ ತಂತ್ರವೂ ಸಹ, ಜೈನ ಮತವಾದದ ಮೇಲೆ ತನ್ನ ಪ್ರಭಾವ ಬೀರಿತ್ತು. ಇಂಥ ಘಟನೆಯೇ ಬುದ್ಧಯುಗದಲ್ಲಿಯೂ ನಡೆಯಿತು. ಬೌದ್ಧಯುಗ ಮತ್ತು ಜೈನಯುಗಗಳು ಹೆಚ್ಚಾಗಿ ಬದಿ ಬದಿಗೇ ಇದ್ದವು. ಭಗವಾನ ಮಹಾವೀರನು, ಭಗವಾನ ಬುದ್ಧನಿಗಿಂತ ಕೇವಲ ೫೦ ವರ್ಷ ಹಿರಿಯನು. ಚೀನ, ತಿಬೇಟ ಮತ್ತು ಆದೇ ರೀತಿ ಭಾರತದ ಹಲವಾರು ಭಾಗಗಳಲ್ಲಿ ಬೌದ್ಧ ಧರ್ಮದ ವ್ಯಾಪಕ ಪ್ರಚಾರವಿತ್ತು. ಆ ಕಾಲದಲ್ಲಿ ಮಹಾಯಾನ ಬೌದ್ಧ ಧರ್ಮವು ಇಬ್ಭಾಗವಾಗಿ ಬಿಟ್ಟಿತ್ತು. ಆ ಜನರು ಸಹ, ತಂತ್ರಾಚಾರವನ್ನು ಸ್ವೀಕರಿಸಿದ್ದರು. ಈ ಬೌದ್ಧ ತಂತ್ರದಿಂದ, ಶಿವೋತ್ತರ ಕಾಲದ ಶಿವನು ಸ್ವೀಕೃತನಾ ದನು. ಅದೇ ಮೇರೆಗೆ ಅವರು ಸಹ, ಶಿವನ ಮೂರ್ತಿಯನ್ನು ಮಾಡಿ ಪೂಜಿಸುವುದ ಕ್ಕಿಂತ ಹೆಚ್ಚಾಗಿ ಶಿವಲಿಂಗವನ್ನೇ ಪೂಜಿಸತೊಡಗಿದರು. ಇಲ್ಲಿ ನೀವು ಒಂದು ಮಾತನ್ನು ನೆನಪಿಡಿರಿ. ಏನೆಂದರೆ, ಶಿವನ ಧ್ಯಾನಮಂತ್ರದಲ್ಲಿ ಶಿವಲಿಂಗ ಪೂಜೆಯ ಯಾವುದೇ ಉಲ್ಲೇಖವಿಲ್ಲ. ಶಿವಲಿಂಗ ಪೂಜೆಯು ಆನಂತರ ಕಾಲದ ಮಾತೆಂಬುದು ನಿಮಗೆ ನೆನಪಿರಲಿ.

ಶಿವನ ಈ ವಿರಾಟ ಜನಪ್ರಿಯತೆಯ ಕಾರಣ, ಬುದ್ಧ ಧರ್ಮ ಯುಗದಲ್ಲಿಯೂ ಸಹ ಶಿವನನ್ನು ಬಿಟ್ಟು ನಡೆಯಲಿಲ್ಲ. ಶಿವನ ಮೂರ್ತಿ ಇಲ್ಲವೆ ಶಿವಲಿಂಗ ಪೂಜೆಯು ಸ್ವೀಕೃತವಾಗಿತ್ತು. ಆದರೂ ಅವುಗಳಲ್ಲಿ ಸ್ವಲ್ಪ ಅಂತರವನ್ನು ಮಾಡಲಾಗಿತ್ತು. ಶಿವನನ್ನು ಒಂದು ಸಂಪೂರ್ಣ ದೇವತೆಯ ರೂಪದಲ್ಲಿ ಗ್ರಹಿಸದೆ ಬೋಧಿಸತ್ವದ ರೂಪದಲ್ಲಿ ಮಾತ್ರ ಒಪ್ಪಲಾಗಿತ್ತು. ಅಂದರೆ, ಶಿವನ ಮೂರ್ತಿಯನ್ನು ಕಟೆದಾಗ ಅದರ ತಲೆಯ ಮೇಲೆ ಚಿಕ್ಕ ಬುದ್ಧನ ಮೂರ್ತಿಯನ್ನು ಹಚ್ಚುತ್ತಿದ್ದರು. ಇಲ್ಲವೆ, ಶಿವಲಿಂಗದ ಪೂಜೆ ಮಾಡುವುದಿದ್ದರೆ ಅದರ ಮೇಲೆ ಚಿಕ್ಕಬುದ್ಧನ ಮೂರ್ತಿಯನ್ನಿಡುತ್ತಿದ್ದರು. ಅರ್ಥಾತ್ ಇದರಿಂದ ಶಿವನು ಸಂಪೂರ್ಣ ದೇವತೆಯಲ್ಲವೆಂದೂ, ಅವನು ಕೇವಲ ಬೋಧಿಸತ್ವ ನೆಂದೂ ತೋರಿಸುತ್ತಿದ್ದರಲ್ಲದೆ, ಶಿವನ ಆರಾಧ್ಯ ದೇವತೆಯು ಬುದ್ಧನಾದುದರಿಂದ, ಅವನು ಶಿವನ ಶಿರದ ಮೇಲಿರುವನೆಂದೂ ತೋರಿಸುತ್ತಿದ್ದರು. ಈ ಪ್ರಕಾರ ಬೋಧಿ ಸತ್ವ ಶಿವನಾದವನೇ, ಅನಂತರದ ಕಾಲದಲ್ಲಿ ಬುಟಕ ಭೈರವನಾದವನು. ಬೋಡೋ–ಶಿವ ಬುಡೋ ಶಿವನಾದನು. ಬಂಗಾಳದ ಹಳ್ಳಿಹಳ್ಳಿಗಳಲ್ಲಿ ಬುಡೋ ಶಿವನ ಮಂದಿರ ಗಳಿವೆ. ಅವೆಲ್ಲವೂ ಬೌದ್ಧ ಶಿವ ಮಂದಿರಗಳೇ ಸರಿ. ಈ ಬುದ್ಧ ಶಿವನ ಪೂಜೆಯು

ಹಿಮಾಲಯದ ಪೂರ್ವ ಭಾಗದಲ್ಲಿ, ತಿಬೇಟಿನಲ್ಲಿ ಮತ್ತು ಬಂಗಾಲದ ಕೆಲ ಕೆಲವು ಗಡಿ ಗಳಲ್ಲಿ, ವ್ಯಾಪಕ ರೂಪದಲ್ಲಿ ಪ್ರಚಲಿತವಿತ್ತು. ವಜ್ರಯಾನ ಬೌದ್ಧ ಧರ್ಮವು ಬಂಗಾಲ ದಲ್ಲಿ ಪ್ರಚಲಿತವಿದ್ದ ಕಾಲದಲ್ಲಿ, ಅಲ್ಲಿ ಬೌದ್ಧ ಶಿವನ ಪೂಜೆಯು ಶುರುವಾಯಿತು. ಈಗ ಒಂದು ಮಾತನ್ನು ಹೇಳುವುದು ಅಪ್ರಾಸಂಗಿಕವಾಗಲಿಕ್ಕಿಲ್ಲವೆಂದು ಹೇಳುವೆ. ಅದೇ ನೆಂದರೆ, ವಜ್ರಯಾನವು ಭಾರತದಲ್ಲಿ, ತಿಬೇಟಿನಲ್ಲಿ ಮತ್ತು ಚೀನಾದ ಒಂದು ದೊಡ್ಡ ಭಾಗದಲ್ಲಿ, ಪ್ರಚಲಿತವಿತ್ತು. ಆದರೆ, ಇದರ ಮೂಲ ಕೇಂದ್ರವು ನಾಭಿ ಕೇಂದ್ರವು, ಅಂದರೆ ಇದು ಎಲ್ಲಿಂದ ಹಬ್ಬಹತ್ತಿತ್ತೋ ಆ ಕೇಂದ್ರವು, ಇಂದಿನ ಡಾಕಾ ಜಿಲ್ಲೆಯ ವಿಕ್ರಮಪುರದ ವಜ್ರಯೋಗಿನಿ ಎಂಬ ಹೆಸರಿನ ಹಳ್ಳಿಯಾಗಿದೆ. ಅಲ್ಲಿ ಬೌದ್ಧ ತಂತ್ರದ ಓರ್ವ ಆಚಾರ್ಯನಿದ್ದ. ಅವನು ಚೀನ ದೇಶದ ತಾಂತ್ರಿಕನಾಗಿದ್ದ, ಫಾಹಾ-ಊ-ಚಾ ಎಂದವನ ಹೆಸರು. ಇಂದಿಗೂ ವಜ್ರಯೋಗಿನಿ ಗ್ರಾಮವಿದೆ. ವಿಕ್ರಮಪುರವೂ ಇದೆ, ಈ ವಿಕ್ರಮಪುರದ ಇತಿಹಾಸವು ಪೌರಾಣಿಕ ಯುಗದ ಇತಿಹಾಸಕ್ಕಿಂತ ಮುಂಚಿನದಾಗಿದೆ. ಒಂದುವೇಳೆ ಈ ಮುಂದಿನ ದಿನಗಳಲ್ಲಿ ವಂಗ-ಡಬಾಕಗಳ ಇತಿಹಾಸ ಬರೆಯುವೆನಾದರೆ, ವಿಕ್ರಮ ಪುರದ ಸಂಬಂಧವಾಗಿಯೂ ಬಹಳಷ್ಟು ಬರೆಯುವುದಿದೆ.

ಬೌದ್ಧ ತಾಂತ್ರಿಕ ಯುಗದಲ್ಲಿ ವಿಕ್ರಮಪುರಕ್ಕೆ ವಿಕ್ರಮಪುರವೆನ್ನದೆ, 'ವಿಕ್ರಮ ಮಣೇಪುರ'ವೆನ್ನುತ್ತಿದ್ದರು. "ಓಂ ಮಣಿ ಪದ್ಮೇ ಹೂಂ" ಎಂಬುದು ವಜ್ರಯಾನಿ ಬೌದ್ಧ ಯುಗದ ಮಂತ್ರವಾಗಿದೆ. ಆ ಮಣಿಪದ್ಮದಿಂದ 'ವಿಕ್ರಮ ಮಣಿಪುರ' ಶಬ್ದವು ಬಂದಿದೆ.

ಏನೇ ಇರಲಿ, ಬೌದ್ಧ ಯುಗದಲ್ಲಿ ಶಿವಪೂಜೆಯು ಬೋಧಿಸತ್ವದ ರೂಪದಲ್ಲಿ, ಶಿವಮೂರ್ತಿ ಇಲ್ಲವೆ ಶಿವಲಿಂಗದ ತಲೆಯ ಮೇಲೆ ಚಿಕ್ಕದಾದ ಬುದ್ಧಮೂರ್ತಿಯನ್ನಿರಿಸಿ ನಡೆಯುತ್ತಿತ್ತು. ಈ ಬುದ್ಧ-ಶಿವ, ಜೈನ-ಶಿವ ಮತ್ತು ಶಿವೋತ್ತರ ತಂತ್ರ ಯುಗದ ಶಿವ, ಇವರ ಸಂಬಂಧವಾಗಿ, ಇದೀಗ ಹೇಳುತ್ತಿದ್ದೆನಷ್ಟೇ. ಇವರ ಬೀಜ ಮಂತ್ರವು 'ಐಂ' ಆಗಿದೆ. ಇದು ವಾಗ್-ಭವ ಬೀಜವಾಗಿದೆ. ವಿದ್ಯೆಯ ಬೀಜವಾಗಿದೆ. ಈ ಬೀಜ ದಿಂದೆ ಸಮಸ್ತ ಜ್ಞಾನವು ಹೊರಹೊಮ್ಮುತ್ತಿದೆ.

ಇದಾನ ಬಳಿಕ ಪೌರಾಣಿಕ ಶಿವಾಚಾರ ಯುಗ ಮತ್ತು ಪೌರಾಣಿಕ ಶಾಕ್ತಾಚಾರ ಯುಗಗಳು ಶುರುವಾದವು. ಈ ಕಾಲದಲ್ಲಿಯೂ ಶಿವಲಿಂಗ ಪೂಜೆಯು ಅವ್ಯಾಹತ ವಾಗಿ ಸಾಗಿತ್ತು. ಜೈನಯುಗದ ಜ್ಯೋತಿರ್ಲಿಂಗ, ಆನಾದಿ ಲಿಂಗ, ಆದಿಲಿಂಗ ಇತ್ಯಾದಿ ಇಪ್ಪತ್ತೆರಡು ಪ್ರಕಾರದ ಶಿವಲಿಂಗಗಳು ಮತ್ತು ಬಾಣ ರಾಜನ ಶಿವಲಿಂಗ ಇತ್ಯಾದಿಗಳೆಲ್ಲ ಸೇರಿ, ಪೌರಾಣಿಕ ಶಿವ-ಚೇತನೆ ಬಂದಿತು. ಆದರ, ಇನ್ನೂ ಮೋಜಿನ ಸಂಗತಿಯೇ ನೆಂದರೆ, ಈ ಪೌರಾಣಿಕ ಶಿವನು, ಜೈನ, ಬುದ್ಧ ಇಲ್ಲವೆ ಶಿವೋತ್ತರ ತಂತ್ರದ ಶಿವನಾಗಿ ರದೆ, ಬೇರೊಂದು ಪ್ರಕಾರದ ವಸ್ತುವಾಗಿದ್ದನು. ಮತ್ತು ಅವನ ಬೀಜ ಮಂತ್ರವು 'ಹೌಂ' ಎಂದಾಯಿತು. ಪೌರಾಣಿಕ ಶಿವನ ಬೀಜ ಮಂತ್ರವು 'ಹೌಂ ಶಿವಾಯ ನಮಃ' ಅರ್ಥಾತ್ ಬೀಜ ಮಂತ್ರದ ಬದಲಾವಣೆಯಾದಂತೆಲ್ಲ ದೇವತೆಯಲ್ಲಿಯೂ ಬದಲಾವಣೆಯಾಗುತ್ತದೆ. ಅಂದರೆ, ಅಂದಿನಿಂದ ೫೦೦೦ ವರ್ಷ ಮೊದಲಿನ ಆ ಪ್ರಾಣ ಪುರುಷ ಸದಾಶಿವನು ಈಗ ಜೈನಯುಗದ, ಬೌದ್ಧಯುಗದ, ಶಿವೋತ್ತರ ತಂತ್ರ

ಯುಗದ ಪೌರಾಣಿಕ ಯುಗದ ಶಿವನೇನೂ ಅಲ್ಲ. ಬೀಜ ಮಂತ್ರವೂ ಬದಲಾಯಿತು.

ಇನ್ನೂ ಒಂದು ಮೋಜಿನ ಮಾತಿದೆ. ಇದು ಸಾಧಾರಣವಾದುದು. ಯಾರ ಮನವನ್ನಾಗಲಿ ಅಷ್ಟೊಂದು ಹೆಚ್ಚಾಗಿ ಸೆಳೆಯದಿರಬಹುದು. ಸರಿಯಾಗಿ ನೋಡಿದರೆ, ನಮಗೆ ತಿಳಿದು ಬರುವಂತೆ, ಬುದ್ಧ-ಧರ್ಮವು ಬದಲಾವಣೆ ಹೊಂದಿ ಪೌರಾಣಿಕ ಶೈವ ಧರ್ಮದಲ್ಲಿ ರೂಪಾಂತರಿತವಾಗಹತ್ತಿತ್ತು. ಅದು ಮಧ್ಯವರ್ತಿ ಕಾಲೀನ ಅವಸ್ಥೆ. ಆ ಯುಗವನ್ನು 'ನಾಥ ಧರ್ಮ'ಯುಗವೆಂದು ಹೆಸರಿಸಲಾಗಿದೆ. ಈ ನಾಥಧರ್ಮದ ಗುರುಗಳ ಹೆಸರಿನ ಕೊನೆಗೆ 'ನಾಥ' ಶಬ್ದವಿರುತ್ತಿತ್ತು. ಹೇಗೆಂದರೆ, ಆದಿನಾಥ, ಮೀನ ನಾಥ, ಮತ್ಸ್ಯೇಂದ್ರನಾಥ (ಇವನು ಮತ್ಸ್ಯೇಂದ್ರಾಸನವನ್ನು ರೂಪಿಸಿದನು) ಗೋರಖ ನಾಥ, ಗೋಹಿನೀನಾಥ, ಬಾಬಾ ಚೌರಂಗಿನಾಥ (ಇವನ ಹೆಸರಿನಿಂದ ಕಲಕತ್ತೆಯ ಚೌರಂಗಿಯನ್ನು ನಿರ್ಮಿಸಲಾಗಿದೆ) ಈ ಎಲ್ಲರೂ ನಾಥ ಧರ್ಮೀಯರಾಗಿದ್ದಾರೆ. ಈ ನಾಥ ಧರ್ಮವು ಬುದ್ಧ ತಂತ್ರದೊಂದಿಗೆ ಪೌರಾಣಿಕ ಶೈವಾಚಾರದ ಒಂದು ಮಿಶ್ರಣ ವನ್ನು ತಂದಿತು.

ಈ ನಾಥ ಧರ್ಮದ ಗುರುಗಳೆಲ್ಲರ ಹೆಸರಿನ ಕೊನೆಗೆ 'ನಾಥ' ಶಬ್ದವಿದ್ದೇ ಇರುತ್ತದೆ. ಮತ್ತು ಆ ಗಣಂಗಳನ್ನು ಶಿವನ ಅವತಾರ ರೂಪದಲ್ಲಿ ತಿಳಿಯುತ್ತಾರೆ. ಅಂದರೆ, ಅವರ ಮರಣಾನಂತರ ಮಂದಿರಗಳಲ್ಲಿ ಅವರ ಮೂರ್ತಿಗಳನ್ನು ಮಾಡಿ ನಿಲ್ಲಿಸಿ, ಶಿವನ ಅವತಾರ ರೂಪದಲ್ಲಿ ಅವರ ಪೂಜೆ ಮಾಡುತ್ತಿದ್ದರು. ಇದರಿಂದ, ಅವರ ಗುರುಗಳ ಹೆಸರಿನ ಕೊನೆಗೆ ನಾಥ ಶಬ್ದವಿರುವಂತೆ, ಶಿವನ ಪೂಜೆಯನ್ನು ಮಾಡುತ್ತಿದ್ದಾಗ, ಶಿವನ ಹೆಸರಿನ ಕೊನೆಗೂ 'ನಾಥ' ಶಬ್ದದ ಪ್ರಯೋಗ ಮಾಡುತ್ತಿದ್ದರು. ಹೇಗೆಂದರೆ, ತಾರಕ ನಾಥ, ವೈದ್ಯನಾಥ, ವಿಶ್ವನಾಥ ಇತ್ಯಾದಿ. ಶಿವನೇ ಈಯೆಲ್ಲ ನಾಥಯೋಗಿಗಳ ಆರಾಧ್ಯ ದೇವತೆ. ಆದರೆ, ಸುಪ್ರಾಚೀನ ಸದಾಶಿವನೊಂದಿಗೆ ಈ ಶಿವನ ಯಾವುದೇ ಸಂಬಂಧವಿಲ್ಲ. ಮಧ್ಯೆ ೫೫೦೦ ವರ್ಷಗಳ ದುಸ್ತರವಾದ ಅಂತರವಿದೆ. ಇನ್ನು ಪೌರಾಣಿಕ ಯುಗದ ತಂತ್ರದ ಶಿವಾಚಾರ ಇಲ್ಲವೆ ಶಾಕ್ತಾಚಾರದಲ್ಲಿಯೂ ಸಹ, ಶಿವಲಿಂಗ ಪೂಜೆಯು ಮುಂದುವರಿದು ನಡೆದಿದೆ. ಆದರೆ, ಆ ಜನರು ನಾಥ-ಗುರು ಗಳ ಶಿವನಿಗಿಂತ ತಮ್ಮ ಶಿವನನ್ನು ಬೇರೆಯಾಗಿರಿಸಲು ಶಿವನ ಹೆಸರಿನ ಕೊನೆಗೆ 'ಈಶ್ವರ' ಶಬ್ದ ಜೋಡಿಸಿದರು. ಹೇಗೆಂದರೆ- ತಾರಕೇಶ್ವರ, ವಿಶ್ವೇಶ್ವರ, ರಾಮೇಶ್ವರ ಇತ್ಯಾದಿ. ಹೀಗೆ ಶಿವನನ್ನು ನಾಥ ಯೋಗಿಗಳ ಹಾಗೆ 'ನಾಥ' ಶಬ್ದದಿಂದ ಮತ್ತು ಅದೇ ರೀತಿ, ಪೌರಾಣಿಕ ಶಿವಾಚಾರಕ್ಕನುಸರಿಸಿ 'ಈಶ್ವರ' ಶಬ್ದದಿಂದ ಸಂಬೋಧಿಸಲಾಗುತ್ತಿತ್ತು. 'ತಾರಕನಾಥ' ಎಂದಾದರೂ ಕರೆಯಬಹುದು; 'ತಾರಕೇಶ್ವರ' ಎಂದಾದರೂ ಕರೆಯ ಬಹುದು. ಆದರೆ ದೇವಘರದ ವೈದ್ಯನಾಥನನ್ನು ಮಾತ್ರ ವೈದ್ಯೇಶ್ವರನೆನ್ನುವಂತಿಲ್ಲ. ಇದರಿಂದ, ಯಾವ ಶಿವನ ಪೂಜೆಯನ್ನು ಯಾರು ಪ್ರಾರಂಭಿಸಿದರೆನ್ನುವುದು ತಿಳಿದು ಬರುತ್ತದೆ. ನಾಥ ಯೋಗಿಗಳ ಶಿವನಾರು? ಪೌರಾಣಿಕ ಶಿವಾಚಾರ್ಯರ ಶಿವನಾರು? ಎಂಬುದು ತಿಳಿಯುತ್ತದೆ.

ಸೌರಾಷ್ಟ್ರೇ ಸೋಮನಾಥಂಚ
ಶ್ರೀಶೈಲೇ ಮಲ್ಲಿಕಾರ್ಜುನಂ 8

ಉಜ್ಜಯಿನ್ಯಾ ಮಹಾಕಾಲಂ
ಓಂಕಾರಮಮಲೇಶ್ವರಮ್
(ಸೌರಾಷ್ಟ್ರದಲ್ಲಿ ಶಿವನಿಗೆ ಸೋಮನಾಥ ಎನ್ನುತ್ತಾರೆ.
ಶ್ರೀಶೈಲದಲ್ಲಿ ಮಲ್ಲಿಕಾರ್ಜುನನೆನ್ನುತ್ತಾರೆ.
ಉಜ್ಜಯನಿಯಲ್ಲಿ ಮಹಾಕಾಲ ಎನ್ನುತ್ತಾರೆ.
ಮತ್ತು ಅಮಲೇಶ್ವರದಲ್ಲಿ ಓಂಕಾರನಾಥ
ಎನ್ನುತ್ತಾರೆ.)

ಇನ್ನೂ ನೋಡಿರಿ:

ವಾರಾಣಸ್ಯಾಂ ವಿಶ್ವನಾಥಃ
ಸೇತು ಬಂಧೇ ರಾಮೇಶ್ವರಃ
ಝಾಡ ಖಂಡೇ ವೈದ್ಯನಾಥಃ
ರಾಢೇ ಚ ತಾರಕೇಶ್ವರಃ
ಶಿವನಿಗೆ ವಾರಾಣಾಸಿಯಲ್ಲಿ ವಿಶ್ವನಾಥನೆನ್ನುತ್ತಾರೆ,
ಸೇತುಬಂಧದಲ್ಲಿ ರಾಮೇಶ್ವರನೆನ್ನುತ್ತಾರೆ,
ಝಾಢ ಖಂಡದಲ್ಲಿ ವೈದ್ಯನಾಥನೆನ್ನುತ್ತಾರೆ
ಮತ್ತು ರಾಢದಲ್ಲಿ ತಾರಕೇಶ್ವರನೆನ್ನುತ್ತಾರೆ.

ಇದರಿಂದ ಶಿವನ ಪರಿಚಯ ದೊರೆಯುತ್ತದೆ. ಒಂದೆಡೆ ನಾಥ; ಒಂದೆಡೆ ಈಶ್ವರ, ಒಂದೆಡೆ ನಾಥಯೋಗ, ಒಂದೆಡೆ ಪೌರಾಣಿಕ ಶಿವಾಚಾರ. ಇವನ ಬೀಜ ಮಂತ್ರವು 'ಹೌಮ್' ಎಂದು. ಬೀಜ ಮಂತ್ರವು ಬದಲಾಗುತ್ತದೆ. ಇದರಿಂದ ಈ ಶಿವನು ಆ ೭೦೦೦ ವರ್ಷ ಹಿಂದಿನ ಶಿವನಲ್ಲವೆಂದು ತಿಳಿದುಕೊಳ್ಳಬಹುದು.

ಇನ್ನು ಲೌಕಿಕ ಶಿವನನ್ನು ಕುರಿತು ನೋಡುವಾ! ಒಂದು ವೇಳೆ, ಯಾವನೊಬ್ಬ ವ್ಯಕ್ತಿಯ, ವಿರಾಟಪುರುಷನ ದುರ್ದಮನೀಯ ಪ್ರಭಾವವು ಸಮಾಜದ ಅಂತಃಸ್ಥಲದ ಮೇಲೆ ಬಿದ್ದರೆ, ಅದನ್ನು ಕೇವಲ ಮೇಲು-ಮೇಲಿನ ಸ್ತರದಲ್ಲಿ ಇರಿಸಲಿಕ್ಕಾಗದು. ಅದನ್ನು ಕೇವಲ ಮೇಲಿನ ಸ್ತರದಲ್ಲಿ ಶಿಕ್ಷಣ ಹೊಂದಿದ ಮನುಷ್ಯರ ಮುಖಂಡನ ಮಟ್ಟದವನಷ್ಟೇ ಎಂದು ಹೇಳಿ ನಿಲ್ಲಿಸಲಿಕ್ಕಾಗದು. ಅವನು ಅನಾಚಾರಣೀಯ ಶೂದ್ರ, ಆಚರಣೀಯ ಶೂದ್ರ ಮತ್ತು ಅಂತ್ಯಜ ಶೂದ್ರರಲ್ಲಿಯೂ ಪಸರಿಸುತ್ತಾನೆ. ಏಕೆಂದರೆ, ಅವನು ಎಲ್ಲರವನಾಗಿದ್ದಾನೆ. ಅವನಾವುದೇ ವಿಶೇಷ ವ್ಯಕ್ತಿಗಳ ಇಲ್ಲವೆ ವಿಶೇಷ ಗುಂಪಿನವನಲ್ಲ. ಶಿವನಾದರೂ ಹಾಗೇ ಇದ್ದನು. ಪಾಕೃತ-ಜನಸಾಮಾನ್ಯರಲ್ಲಿ, ಅಶಿಕ್ಷಿತ ಗಂಡಸರಲ್ಲಿ, ಅಶಿಕ್ಷಿತ ಹೆಣ್ಣುಮಕ್ಕಳಲ್ಲಿ (ಇವರಿಗೆ ವೇದಾಧಿಕಾರವಿರಲಿಲ್ಲ.) ಅಂತ್ಯಜ ಶೂದ್ರರಲ್ಲಿ (ವೇದವನ್ನು ಕೇಳಿದರೆ, ಗಾಯತ್ರೀ ಮಂತ್ರವನ್ನು, ಸಪತ್ ಋಕ್ ಅನ್ನು ಕೇಳಿದರೆ, ಇವರು ಮಹಾಪಾಪಕೂಪದಲ್ಲಿ ಬೀಳುತ್ತಾರೆಂಬ ನಂಬುಗೆ ಇತ್ತು. ಅಂಥವರ ಶ್ರವಣಶಕ್ತಿಯು ಕೊನೆಯ ವರೆಗೂ ಇಲ್ಲದಂತಾಗಲೆಂಬ ಉದ್ದೇಶದಿಂದ ಅವರ ಕಿವಿಯಲ್ಲಿ ಕಾಯ್ದು ಸೀಸ ಹಾಕುತ್ತಿದ್ದರು.)

ಹೀಗೆ ಇವರೆಲ್ಲರಲ್ಲಿ ಶಿವನು ಪ್ರವೇಶ ಮಾಡಿದ್ದನು. ಸ್ತ್ರೀಯರು ಎಷ್ಟೇ ಕಲಿತವರಿರಲಿ, ಅವರಿಗೆ ವೇದಾಧ್ಯಯನದ ಅಧಿಕಾರವಿರಲಿಲ್ಲ. ನಾರಿಯು ಸಾಧನೆಯಲ್ಲಿ ಎಷ್ಟೇ ಮುಂದುವರಿದಿರಲಿ, ಅವಳು ಮುಕ್ತಿ-ಮೋಕ್ಷಗಳನ್ನು ಪಡೆಯಬೇಕಾದರೆ ಮರಳಿ ಪುರುಷ ಜನ್ಮವೆತ್ತಲೇಬೇಕು. ಅದಕ್ಕಿಂತ ಮೊದಲು, ಅವಳಿಗೆ ಮೋಕ್ಷ ಲಭಿಸದು. ಎಂದು ಅನುಕೂಲಸಿಂಧುವಾದಿಗಳು ಹೇಳುತ್ತಿದ್ದರು. ಈ ಅನುಕೂಲಸಿಂಧುವಾದಿಗಳಿಂದ ಈ ಪ್ರಚಾರವು ಸುದೀರ್ಘ ಕಾಲದಿಂದ ನಡೆದಿತ್ತು. ಶಿವನು ಇವೆಲ್ಲವನ್ನು ಹೊಡೆದು ಹಾಕಿ ಚೂರು ಚೂರಾಗಿಸಿದನು. ತನ್ನ ತ್ರಿಶೂಲದ ಹೊಡೆತದಿಂದ ಎಲ್ಲರನ್ನೂ ತುಂಡು-ತುಂಡಾಗಿಸಿದನು. ಆದ್ದರಿಂದ ಆ ಶಿವನು ಮಾತ್ರ ಹೀಗೆ ಹೇಳಬಲ್ಲನೆಂದು, ಹೇಳುವೆ:

ಮೋರ ನಾಮ ಏಈ ಬೋಲೆ ಖ್ಯಾತ ಹೋಕ,
ಆಮಿ ತೋಮಾದೇರ ಈ ಲೋಕ;
ಏರ ಜೇಯೇ ಬೇಶೀ ಕಿಛು ನಯ,
ಏಈ ಹೋಕ ಶೇಷ ಪರಿಚಯ.

* * *

"ಜನತೆ ತಿಳಿಯಲೆನ್ನ ಖ್ಯಾತಿ
ನಾನವರವನೆಂಬ ಪ್ರೀತಿ.
ಇದುವೆ ನನ್ನ ಚರಮ ಕೀರ್ತಿ
ಇದಕೆ ಮಿಗಿಲು ಇಲ್ಲ ವಾರ್ತೆ."

ಆ ಶಿವನು ಸಮಾಜದ ಅಂತಃಸ್ಥಲವನ್ನೇ ಪ್ರವೇಶಿಸಿದ್ದನು. ಈಗ ಚಿಕ್ಕ ಚಿಕ್ಕ ಮಕ್ಕಳು ಮಣ್ಣಿನಿಂದ ಶಿವ-ಲಿಂಗ ತಯ್ಯಾರಿಸುತ್ತಾರೆ. ಮಣ್ಣಿನ ಪಣತೆಯಲ್ಲಿ ಸ್ವಲ್ಪ ತುಪ್ಪ ಸುರುವಿ, ಹತ್ತಿಯ ಬತ್ತಿ ಮಾಡಿ, ಶಿವನಿಗೆ ಆರತಿ ಎತ್ತುತ್ತಾರೆ. ಆ ಶಿವನು ವೈದಿಕ ಶಿವನೂ ಅಲ್ಲ; ತಾಂತ್ರಿಕ ಶಿವನೂ ಅಲ್ಲ; ಇತ್ತ ಜೈನ-ಬೌದ್ಧರ ಶಿವನೂ ಅಲ್ಲ; ಅಷ್ಟೇಕೆ? ಶಿವೋತ್ತರ ತಾಂತ್ರಿಕನೂ ಅಲ್ಲ; ಪೌರಾಣಿಕ ಶಿವಾಚಾರಿಗಳ ಶಿವನೂ ಅಲ್ಲ. ಇನ್ನು ನಾಥ-ಯೋಗಿಗಳ ಶಿವನೂ ಅವನಲ್ಲ. ಹಾಗಾದರೆ ಅವನಾರು? ಆ ಶಿವನು ಲೌಕಿಕ ದೇವತೆಯಷ್ಟೇ. ಮಣ್ಣಿನ ಮಾನವ; ಮಣ್ಣಿನ ದೇವತೆ. ಇವನು ಲೌಕಿಕ ಶಿವನಾದನು. ಈ ಶಿವನಿಗೆ ಯಾವುದೇ ಬೀಜ ಮಂತ್ರದ ಆವಶ್ಯಕತೆಯಿಲ್ಲ. ಯಾವುದೇ ಧ್ಯಾನಮಂತ್ರದ ಆವಶ್ಯಕತೆಯಿಲ್ಲ. ಅವನು ಯಾವುದೇ ಉಪಚಾರದ ಇಲ್ಲವೆ ಪುರೋಹಿತರ ಗೊಡವೆಗೆ ಹೋಗನು. ಲೌಕಿಕ ಭಾವನೆಯಲ್ಲಿಯೇ ಈ ಶಿವನನ್ನು ದೀರ್ಘ ಕಾಲದಿಂದ ಜನರು ಪೂಜಿಸುತ್ತ ಬಂದಿದ್ದಾರೆ. ಶಿರ ಸರಿಮಾಡಿ ಹೇಳುತ್ತ ಬಂದಿದ್ದಾರೆ. 'ನಮಃ ಶಿವಾಯ ನಮಃ' ಎಂದು. ಮತ್ತು ಮನಸ್ಸಿನೊಳಗೊಳಗೇ ನನ್ನ ಅಶುತೋಷ ಶಿವನು ಇದರಿಂದ ಖುಷಿಯಾಗುತ್ತಾನೆಂದು ಭಾವಿಸುತ್ತ ಬಂದಿದ್ದಾರೆ. ಈ ಶಿವನು, ಪರಮಪುರುಷ ಇಲ್ಲವೆ ಪರಬ್ರಹ್ಮನಾಗಿಲ್ಲದಿರಬಹುದು. ಆದರೆ, ಈ ಶಿವನು ಸಾಮಾನ್ಯ ಮನುಷ್ಯನ ಒಬ್ಬ ನೆಚ್ಚಿನ ದೇವತೆಯಾಗೆದ್ದಾನೆ. ಹೆಚ್ಚೇನು? ತನ್ನವನೇ ಆಗಿದ್ದಾನೆ.

"ಶಿಲ ಶಿಲಾಟನ ಶಿಲೇ ಬಾಟನ
ಶಿವ ಆಛೇನ ಘರೇ.

ಸ್ವರ್ಗ ಥೇಕೇ ಮಹಾದೇವ ಬಲೇನ
ಗೌರೀ ಕಿ ಬತ್ತ ಕರೇ.
ಆಸ ನಾರಾಯಣ ಬಾಸ ನಾರಾಯಣ
ತೋಲಾ ಗಂಗಾ ಜಲ
ಏಈ ಪೇಯೇ ತುಷ್ಟ ಹೊನ
ಭೋಲಾ ಮಹಾದೇವ."

* * *

"ಶಿವನಿಪ್ಪನು ಸರ್ವ ಎಡೆಯಲಿ;
ಶಿವನಿಪ್ಪನು ಗೃಹದಿ.
ಸಗ್ಗದಿಂದ ಮಹಾದೇವ ನುಡಿವ;
"ಗೌರೀ ವ್ರತವೇನ ಮಾಡುವಿ"
"ಬಾರೊ ನಾರಾಯಣ ಕೂರೊ ನಾರಾಯಣ.
ತಗೊ ಗಂಗಾ ಜಲ"
ಅದು ಕುಡಿದೊಡೆ, ಶಿವ ತೃಪ್ತ
ಬೋಳೇ ಶಂಕರ; ಮಹಾದೇವ."

ಸಾಕು. ಶಿವಪೂಜೆಯ ವಿಷಯವಾಯಿತು. ಹಾಗಾದರೆ ಇವನು ಲೌಕಿಕ ಶಿವನೆಂದಾಯಿತು. ಲೌಕಿಕ ಶಿವನನ್ನು ಶಾಸ್ತ್ರದಲ್ಲಿ ಸ್ವೀಕರಿಸಿಲ್ಲ. ಲೌಕಿಕ ಶಿವನ ಪೂಜೆಯನ್ನು ಯಾವುದೇ ಪುರೋಹಿತನು ಮಾಡುವುದಿಲ್ಲ. ಮತ್ತು ಈ ಲೌಕಿಕ ಶಿವನಿಗೂ, ೭೦೦೦ ವರ್ಷ ಹಿಂದಿನ ಸದಾಶಿವನಿಗೂ ಯಾವ ಹತ್ತು ಹೊಂದಾಣಿಕೆಯಿಲ್ಲ. ಆದರೆ ಈ ಲೌಕಿಕ ಶಿವನು ಬಂದುದಾದರೂ ಹೇಗೆ? ಆ ೭೦೦೦ ವರ್ಷ ಪೂರ್ವದ ಸದಾಶಿವನನ್ನು ಕುರಿತು ಜನರಿಗಿದ್ದ ಅತ್ಯಂತ ಮೋಹ-ಮಮತೆಗಳಿಂದಾಗಿಯೇ ಈ ಲೌಕಿಕ ಶಿವನ ಉದ್ಭವವಾಯಿತು.

ಶಿವನ ಈ ವ್ಯಾಪಕ ಜನಪ್ರಿಯತೆಯು ಹೇಗೆ ಉಂಟಾಯಿತು? ಅವನ ಸಾಧುತ್ವ, ಸರಳತೆ, ತೇಜಸ್ವಿತೆ, ಆದರ್ಶ-ನಿಷ್ಠೆಗಳು ಮಾನವನ ಅಂತಃಸ್ಥಲವನ್ನು ಗಂಭೀರ ರೂಪದಿಂದ ಕಲಕಿದವು; ಅಲ್ಲಾಡಿಸಿದವು. ಅವರು ಶಿವನನ್ನು ಪ್ರೀತಿಸದೆ ಬದುಕದಾದರು.

ಛಿಲಿ ಅಮಾರ ಪುತುಲ ಖೇಲಾಯ,
ಪ್ರಭಾತೇ ಶಿವ ಪೂಜಾರ ಬೇಲಾಯ
ತೋರೇ ಅಮಿ ಭೇಂಗೇಛಿ ಆರ ಗಡೇಛಿ
ತುಈ ಆಮಾರ ಠಾಕುರೇರ ಸನೇ
ಛಿಲಿ ಪೂಜಾರ ಸಿಂಹಾಸನೇ
ತರಿ ಪೂಜಾಯ ತೋಮಾರ ಪೂಜಾ ಕರೇಛಿ
ಸಬ ದೇವತಾರ ಆರಾಧ್ಯ ಧನ
ನಿತ್ಯ ಕಾಲೇರ ತುಈ ಪುರಾತನ
ತುಇ ಪ್ರಭಾತೇರ ಆ ಓರ ಸಮವಯಸಿ
ತುಇ ಅಸೀಮೇರ ಉತ್ಸ ಹತೇ,

ಏಸೇಛಿಸ ಆನಂದ ಸ್ರೋತೇ
ನೂತನ ಹಯೇ ಆಭಾರ ಬುಕೇ ಬಿಲಾಸಿ.

* * *

"ಬಾಲ್ಯದ ಆಟಿಗೆ ವಸ್ತುಗಳಲಿರುವೆ;
ಪ್ರಾತಃ ಸಂಧ್ಯೆಯ ಪೂಜೆಯೊಳಿರುವೆ.
ಮರಳಿ ಮರಳಿ ಮುರಿದೆ; ಕಟ್ಟಿದೆ; ನಿನ್ನಯ ಪ್ರತಿಮೆ.
ಎನ್ನ ದೇವತೆಯ ಜಗುಲಿಯನೇರಿಹೆ.
ಅವನ ಪೂಜೆಯಲಿ ನಿನ್ನಯ ಪೂಜೆ
ಸರ್ವದೇವರೊಳು ನೀನೆ ಮಹಾದೇವ.
ನಿತ್ಯನು ನೀನು; ಪುರಾತನ ನೀನು;
ಅನಂತದಿಂದ ಉತ್ಸಾರಿತನು.
ಕರುಣೆ ನಿತ್ಯ ರಸ ಸ್ರೋತನು.
ನಿತ್ಯವಿನೂತನನಾಗಿಹೆಯಯ್ಯ
ಹೃದಯ ಗುಹೆಯಲಿ ಬೆಳಗುವೆಯಯ್ಯಾ"

ಇಂದಿಗೂ ಸಹ, ಯಾವನೊಬ್ಬ ಮಾನವನ–ಆಚರಣೆಯು ಉಚ್ಚಸ್ತರದ್ದಾಗಿದ್ದರೆ. ಅವನು ಸದಾಶಿವನಂಥ ಒಳ್ಳೆಯ ವ್ಯಕ್ತಿಯೆಂದು ಜನರು ಹೇಳುತ್ತಾರೆ. ಅಂದರೆ, ೭೦೦೦ ವರ್ಷಗಳ ಮುಂದಿನ ಮಾನವನೂ ಸಹ, ಆ ಶಿವನನ್ನು ಮರೆತಿಲ್ಲ. ಕಲಿತವರೂ ಮರೆತಿಲ್ಲ; ಕಲಿಯದವರೂ ಮರೆತಿಲ್ಲ. ಅಂತ್ಯಜರೂ ಸಹ, ಅವನನ್ನು ಮರೆತಿಲ್ಲ. ಯಾರೂ ಅವನನ್ನು ಮರೆತಿಲ್ಲ. ಶಿವನ ಸರಳತೆ ಕುರಿತು ಇಂದು ಸಹ, ಜನರಿಂದ ಜನರಿಗೆ ಕತೆ–ಕಥಾನಕಗಳು ಹೇಳಲ್ಪಡುತ್ತಿವೆ. ಶಿವನು, ಸಹಜ ಬುದ್ಧಿಯನ್ನು ಪರಿಚಯಿಸಿರುವ ಅಂತಿಮ ಅಭಿವ್ಯಕ್ತಿಯ ಮೂರ್ತ ಪ್ರತೀಕ. ಕತೆಯೊಂದು ಹೀಗಿದೆಯಲ್ಲವೆ? ಒಂದು ದಿನ ಶಿವನು ಸ್ಮಶಾನದಿಂದ ಮರಳಿ ಬಂದು, ಪಾರ್ವತಿಗೆ ಹೀಗೆ ನುಡಿದನು: 'ಅನ್ನ ನೀಡು' ಅದಕ್ಕೆ ಪಾರ್ವತಿಯು,'ಅನ್ನವನ್ನೇನೋ ಕೇಳುತ್ತೀ. ಆದರೆ, ಅಡುಗೆ ಮನೆಯ ಪರಿವೆಯೇನಾದರೂ ಇದೆಯೇ? ಇಂದು ಅನ್ನದ ಹಂಡೆ ಒಲೆಯ ಮೇಲಿಟ್ಟಿಲ್ಲ. ಅಕ್ಕಿ ತೀರಿದೆ. ಅನ್ನವನ್ನೆಂತು ನೀಡಲಿ?' ಸರಳ ಶಿವನ ಹೀಗೆಂದ:

"ಶಾಕ ನಾಇ ಶುಕ್ತಾ ನಾಇ ವ್ಯಂಜನ ಯದಿ ನಾಇ
ಚೌಲೋ ಬಾಣಂತ ತಬೇ ಫ್ಯಾನ ಭಾತ ಭಾಇ

* * *

ಇರದಿರೆ ಹೋಗಲಿ ಪಲ್ಯ ಪಾಯಸ
ಬಡಿಸೇ ಅಕ್ಕಿಯ ಗಂಜೀಯಾರಸ."

ಆಗ ಪಾರ್ವತಿಯು "ಅಕ್ಕಿಯೇ ಇಲ್ಲದಿದ್ದರೆ ಗಂಜಿಯನ್ನೆಂತು ಆಡುವುದು?" ಎಂದಳು.

ಆಗ ಶಿವನು "ನಾನು ವರ್ಷವಿಡೀ ಭಿಕ್ಷೆ ಎತ್ತಿ ತಂದಿದ್ದೆ. ಇನ್ನೂ ಬಹಳಷ್ಟು ಜೀನಸು ತಂದಿದ್ದೆ. ಅವೆಲ್ಲ ತೀರಿ ಹೋದವೇ?" ಎಂದನು.

ಅದಕ್ಕೆ ಪಾರ್ವತಿಯು, "ನೀನು ಒಂದು ವರ್ಷದ ಹಿಂದಿನ ಮಾತನಾಡುತ್ತೀ. ಆದರೆ, ಉಗ್ರಾಣದಲ್ಲಿ ಸ್ವಲ್ಪ ಅಕ್ಕಿಯಿತ್ತು. ನಿನ್ನ ಗಣೇಶನ ಇಲಿಗಳು ಅದನ್ನೂ ತಿಂದು ಹಾಕಿದವು" ಎಂದಳು.

"ಭಾಂಡಾರೇತೇ ರಾಖಾ ಥಿಲೋ ಪಾಲಿ ಭಯ ಧಾನ
ಗಣೇಶೇರ ಮುಶಾತೇ ಕಾರಿಲ ಜಲ ಪಾನ"

* * *

(ಭಾಂಡಾರದೊಳಿದ್ದಿತು, ಆರು ಸೇರು ಅಕ್ಕಿ
ತೀರಿಹೋಯ್ತು; ಗಣಪನ ಇಲಿಯ ಹಿಂಡು ಮುಕ್ಕಿ)

ಆಗ ಶಿವನು "ಆಯ್ತು, ಒಳ್ಳೇದಾಯ್ತು. ಇಲಿಗಳು ಅಕ್ಕಿ ತಿಂದವು. ತಿಳಿಯಿತು ಬಿಡು. ಹಾಗಾದರೆ, ಇಂದು ಏಕಾದಶಿ ಆಯಿತು" ಎಂದನು.

ಪಾರ್ವತಿಯು ಉತ್ತರಿಸುತ್ತ, "ಇಲ್ಲ; ಇಲ್ಲ. ಏಕಾದಶಿಯೆಂದು ಘೋಷಿಸುವ ಗೊಡವೆ ಬೇಡ. ನಾನು ತೋಟದಿಂದ ಫಲ–ಮೂಲಗಳನ್ನು ಆಯ್ದು ತಂದಿರುವೆ. ಕೈಕಾಲು ತೊಳೆದು ಊಟಕ್ಕೆ ಕೂಡಿರಿ" ಎಂದಳು.

ಶಿವನ ಸರಳತೆ ಕುರಿತು ಇಂಥ ಅಸಂಖ್ಯ ಕತೆಗಳು ಕೇಳಬರುತ್ತವೆ. ಶಿವನು ಮಾನವರಿಗೆ ತಿಳಿಹೇಳಿದ್ದಾನೆ. ಸಾಹಸಿಗಳಾಗಿರಿ; ಧರ್ಮನಿಷ್ಠರಾಗಿರಿ; ಆದರೆ ಸರಳತೆಯನ್ನು ಮಾತ್ರ ತೊರೆಯಬೇಡಿರಿ. ಯಾವಾಗಲೂ ಸರಳ ಹಾದಿಗುಂಟ ಸಾಗಿರಿ. ಶಿವನು ಈ ಋಜುತ್ವದ ಪ್ರತೀಕ. ಆದ್ದರಿಂದ, ಮಾನವನು ದೇವತೆಗಳ ಸರ್ವ ಮಹಿಮೆಗಳನ್ನೂ ಶಿವನಲ್ಲಿ ಕಂಡಿದ್ದಾನೆ. ಮರ್ತ್ಯದ ಮಾನವನು ಎಲ್ಲ ಐಶ್ವರ್ಯಗಳ ಸಮಾವೇಶವನ್ನೂ ನೋಡಿದ್ದಾನೆ. ಆದ್ದರಿಂದ ಶಿವನ ಪಾದದ ಮೇಲೆ ಎಲ್ಲ ಜಾತಿ–ವರ್ಣಗಳ ವಿದ್ವಾಂಸರು ಪೊಡಮಡುತ್ತಾರೆ ಮತ್ತು ಹೀಗೆ ಹೇಳುತ್ತಾರೆ:

"ನಿವೇದಯಾಮಿ ಚಾತ್ಮಾನಂ ತ್ವಂ ಗತಿಃ ಪರಮೇಶ್ವರಃ"

ಕಲಕತ್ತೆ: ೧೨–೫–೧೯೮೨

ಪ್ರವಚನ ೬

ಶಿವನ ಸಮ್ಮಾನದಲ್ಲಿಯೇ ಸರ್ವರ ಸಮ್ಮಾನವಿದೆ

ಋಗ್ವೇದ ರಚನೆಯು ಭಾರತದ ಹೊರಗೆ, ಮುಖ್ಯವಾಗಿ ಮಧ್ಯ ಏಷಿಯಾ ಮತ್ತು ರಷ್ಯಿಯಾದಲ್ಲಿ ಆಗಿದೆಯೆಂದು ಇತಿಹಾಸದ ಪರ್ಯಾಲೋಚನೆಯಿಂದ ತಿಳಿದು ಬರುತ್ತಿದೆ. ಯಜುರ್ವೇದದ ರಚನೆಯು ಬಹ್ವಂಶ ಭಾರತದ ಹೊರಗಡೆ ಸ್ವಲ್ಪ ಭಾರತದಲ್ಲಿಯೂ ಆಗಿದೆ.ಅದೇ ರೀತಿ, ಅಥರ್ವವೇದದ ರಚನೆಯು ಅಪಘಾನಿಸ್ತಾನ ಮತ್ತು ಭಾರತಗಳಲ್ಲಿ ಆಗಿದೆ. ಋಗ್, ಯಜುರ್ ಮತ್ತು ಅಥರ್ವವೇದಗಳ ಉತ್ಪತ್ತಿಯಾದ ಬಹು ಕಾಲಾನಂತರ ಅಂದರೆ ಅಜಮಾಸು ಮೂರುವರೆ ಸಾವಿರ ವರ್ಷಗಳ ನಂತರ, ಕೃಷ್ಣ ದ್ವೈಪಾಯನ ವ್ಯಾಸರ ಮೂಲಕ ವೇದಗಳ ವಿಭಜನೆಯಾಯಿತು. ವೇದಗಳನ್ನು ಬೇರೆ ಬೇರೆ ಶಾಖೆಗಳಲ್ಲಿ ಹಂಚಿ ಹೊಂದಿಸಲಾಯಿತು. ಹೀಗೆ ಪ್ರಾಚೀನ ಭಾಗಕ್ಕೆ ಋಗ್‌ವೇದವೆಂದೂ, ಮಧ್ಯಯುಗೀನ ಭಾಗಕ್ಕೆ ಯಜುರ್‌ವೇದವೆಂದೂ ಮತ್ತು ಉಳಿದ ಭಾಗಕ್ಕೆ ಅಥರ್ವ ವೇದವೆಂದೂ ಕರೆದರು. ಮಹರ್ಷಿ ಅಥರ್ವನು ಉಳಿದ ಭಾಗಗಳ ಕರ್ತರಲ್ಲಿ ಪ್ರಥಮ ಪುರುಷ. ಹೀಗಾಗಿ ಆ ಭಾಗಕ್ಕೆ ಅವನ ಹೆಸರೇ ಬಿದ್ದಿತು. ಮತ್ತು ಈ ಮೂರು ವೇದ ಭಾಗಗಳ ಸಂಗೀತದ ಅಂಶವನ್ನು ಗಮನಿಸಿ, ಸಾಮವೇದವೆಂಬ ಹೆಸರಿನ ಮತ್ತೊಂದು ವೇದವನ್ನು ರಚಿಸಿದರು. ಸಾಮವೇದವೆಂದರೆ ಸ್ವಯಂ ವೇದವೇನೂ ಅಲ್ಲ. ಸಾಮ ಎಂದರೆ ಹಾಡು; ಗಾಯನ.

ಸದಾಶಿವನು ಇರುವ ಸಮಯದಲ್ಲಿ ಋಗ್ವೇದೀಯ ಕಾಲವು ಮುಗಿಯಹತ್ತಿತ್ತು. ಇತ್ತ ಯಜುರ್ವೇದೀಯ ಕಾಲವು ಮೂಡಹತ್ತಿತ್ತು. ಆ ಕಾಲದ ವರೆಗೆ ಅಕ್ಷರಗಳ ಉದ್ಭಾವನೆಯಾಗಿರಲಿಲ್ಲ. ಶಿವನ ಕಾಲದಲ್ಲಿ ತುಂಬಾ ಹೆಚ್ಚು ಅನಾನುಕೂಲವಿತ್ತು. ಏಕೆಂದರೆ ಧ್ವನಿವಿಜ್ಞಾನವಿತ್ತು. ಅಕ್ಷರಗಳ ಉಚ್ಚಾರಣೆಯೂ ಇತ್ತು. ಆದರೆ ಅಕ್ಷರಗಳನ್ನು ಹೇಗೆ ಬರೆಯಬೇಕೆಂಬುದನ್ನು ಮಾತ್ರ ಜನರಿಗೆ ಕಲಿಸಿರಲಿಲ್ಲ. ಬ್ರಾಹ್ಮೀ ಮತ್ತು ಖರೋಷ್ಠೀ ಲಿಪಿಗಳು ಶಿವ–ಸಮಯಾನಂತರ ಆನತಿ–ಕಾಲದಲ್ಲಿ ಉದ್ಭಾವಿತವಾದವು. ಆದ್ದರಿಂದ ಲಿಪಿಯನ್ನು ಪಡೆದ ವಿಜಯದ ಘಂಟೆ ಮೊಳಗಿಸಿದ ವೇದದ ಮೇಲೆ, ತಂತ್ರದ ಪ್ರಭಾವ ಬಿದ್ದಿತು. ಇತ್ತ ತಂತ್ರದ ಮೇಲೆ ವೇದದ ಪ್ರಭಾವವೂ ಬೀಳದಿರಲಿಲ್ಲ. ಶಿವನ ಸಮಯದಲ್ಲಿ ತಂತ್ರದಲ್ಲಿ ಮೂಡಿಬಂದ ಸಮತೋಲನದ ವ್ಯವಸ್ಥೆಯು ಬದಲಾದ ಮುಂದಿನ ಕಾಲದಲ್ಲಿ ವಿವರ್ತಿತವಾಯಿತು. ಲಕ್ಷ್ಯವು ಒಂದೇ

ಇರುವಾಗ, ಹಾದಿಯು ಒಂದೇ ಇರುವಾಗ, ಈ ವಿವರ್ತನೆಯೇಕಾಯಿತು? ಎಂದು ಕೇಳಬಹುದು. ಈ ವಿವರ್ತನೆಗೆ ಇರುವ ಒಂದೇ ಒಂದು ಕಾರಣವೆಂದರೆ ಇದು: ಆ ಕಾಲದಲ್ಲಿ ಲಿಖಿತ ಗ್ರಂಥಗಳಿರಲಿಲ್ಲ. ಗ್ರಂಥಗಳು ಒಂದು ಬಾಯಿಯಿಂದ ಇನ್ನೊಂದು ಬಾಯಿಗೆ ಸಾಗಿಬರುತ್ತಿದ್ದವು. ವೇದದಲ್ಲೂ ಅಷ್ಟೇ; ತಂತ್ರದಲ್ಲೂ ಅಷ್ಟೇ. ಇದರ ಪರಿಣಾಮವೇನಾಯಿತೆಂದರೆ ಓರ್ವ ಮುನಿಯು ಒಂದು ರೀತಿ ಹೇಳಿದರೆ, ಇನ್ನೋರ್ವ ಮುನಿಯು ಇನ್ನೊಂದು ರೀತಿ ಹೇಳುತ್ತಿದ್ದನು. ಈ ರೀತಿಯ ಮತಭೇದ ಇಲ್ಲವೆ ಬೇರೆ ಬೇರೆ ಪಾಠಗಳು ನಡೆದಿದ್ದವು. ಆದರೆ ಅಥರ್ವ ವೇದದ ಕಾಲಕ್ಕೆ ಅಕ್ಷರಗಳ ಬಳಕೆ ನಡೆದಿತ್ತು. ಆದರೆ ವೇದಗಳನ್ನು ಬರೆಯಕೂಡದೆಂಬ ಕುಸಂಸ್ಕಾರ (ಇದನ್ನು ಭಾವ ಜಡತೆ ಇಲ್ಲವೆ 'ಡೊಗ್ಮಾ' ಎಂದೂ ಬೇಕಾದರೆ ಕರೆಯಿರಿ) ಬಲವಾಗಿತ್ತು. ಮಹರ್ಷಿ ಅಥರ್ವನ ಅನುಚರರಾದ ಆಂಗೀರ, ಆಂಗೀರಸ,ಸತ್ಯವಾಹ ವೈದರ್ಭೀ (ಈ ವೈದರ್ಭೀ ಹೆಸರೇ ಸಿದ್ಧಪಡಿಸುವಂತೆ, ಅದರಲ್ಲೂ ವಿವರ್ಭನಲ್ಲಿ, ಆಂಶಿಕವಾಗಿ ರಚಿಸಲ್ಪಟ್ಟಿತು.ಒಟ್ಟಾರೆ ವೇದವನ್ನು ಭಾರತದ ಹೊರಗೇ ರಚಿಸಿದ್ದಾರೆಂಬ ವಿಚಾರಧಾರೆಯು ಸರಿಯಲ್ಲ.) ಮುಂತಾದವರು, ವೇದವನ್ನು ಬರೆದಿಡಬೇಕೆಂದು ಪ್ರಯತ್ನಿಸಿದರು. ಆದರೆ ಆಗ ವೇದವನ್ನು ಬರೆಯುವುದು ನಿಷಿದ್ಧವಾದುದರಿಂದ, ಅವರ ಈ ಸಾಹಸವು ಫಲಿಸಲಿಲ್ಲ. ವೇದಕ್ಕೆ ಶ್ರುತಿ ಎನ್ನುತ್ತಾರಷ್ಟೇ. ಏಕೆಂದರೆ ಆ ಕಾಲಕ್ಕೆ ಅಕ್ಷರವಿರಲಿಲ್ಲ. ಜನರು ಕಿವಿಯಿಂದ ಕೇಳಿ ತಿಳಿದುಕೊಳ್ಳುತ್ತಿದ್ದರು. ಅಕ್ಷರಗಳನ್ನು ಉದ್ಭಾವಿಸಿದ ಮೇಲೆ ಸಹ ವೇದಗಳನ್ನು ಬರೆಯದಿರಲು ಕಾರಣವೇನಿರಬಲ್ಲದು? ಜೋರಾಗಿ ಸಾಹಸ ಮಾಡದಿರುವುದಷ್ಟೇ.

ಈಗ ಶಿವನ ನಂತರ ಕ್ರಮೇಣ ಮಾರ್ಪಾಟಾಗುತ್ತ ಹೋದ ಶಿವೋತ್ತರ ತಂತ್ರವು ಎರಡು ಕವಲಾಗಿ ಒಡೆದಿತ್ತು; ಒಂದು ಗೌಡೀಯ, ಶಾಖೆ; ಇನ್ನೊಂದು ಕಾಶ್ಮೀರೀ ಶಾಖೆ. ಗೌಡೀಯ ಶಾಖೆಯು ರೂಢಿಯಲ್ಲಿದ್ದ ಪೂರ್ವ ಭಾರತದಲ್ಲಿ (ಬಂಗಾಳದಲ್ಲಿ) ವೇದದ ವಿಶೇಷ ಪ್ರಭಾವವೇನೂ ಇರಲಿಲ್ಲ. ಆದರೆ ಕಾಶ್ಮೀರೀ ಶಾಖೆಯು ರೂಢಿಯಲ್ಲಿದ್ದ ಕಾಶ್ಮೀರದಲ್ಲಿ ವೇದದ ಸಾಕಷ್ಟು ಪ್ರಭಾವವಿತ್ತು; ತಂತ್ರದ ಪ್ರಭಾವವೂ ಇತ್ತು. ಹೀಗೆ ಕಾಶ್ಮೀರೀ ಶಾಖೆಯನ್ನೊಳಗೊಂಡ ಶಿವೋತ್ತರ ತಂತ್ರದ ಕಾಲಕ್ಕೆ ಕಾಶ್ಮೀರದ ಜನರು ಆ ಕಾಲದ ಲಿಪಿಯಲ್ಲಿ ಮೊತ್ತ ಮೊದಲು ವೇದವನ್ನು ಬರೆದರು. ಅರ್ಥಾತ್ ವೇದವನ್ನು ಪ್ರಪ್ರಥಮವಾಗಿ ಶಾರದಾ ಲಿಪಿಯಲ್ಲಿ ಬರೆಯಲಾಯಿತು. ಆದರೆ ಮುಂದೆ ಜೈನ ಧರ್ಮ, ಬೌದ್ಧ ಧರ್ಮಗಳು ಬಂದಾಗ, ಮತ್ತು ಅವುಗಳ ಅಕ್ಕಪಕ್ಕದಲ್ಲಿ ಶಿವೋತ್ತರ ತಂತ್ರವೂ ರೂಢಿಯಲ್ಲಿದ್ದಾಗ, ಅಕ್ಷರಗಳ ಅವಿಷ್ಕಾರವಾಯಿತು. ಜೈನ ಮತ–ವಾದದ ಪುಸ್ತಕಗಳನ್ನು ಬ್ರಾಹ್ಮೀ ಲಿಪಿಯಲ್ಲಿ, ಪ್ರಾಕೃತ ಭಾಷೆಯಲ್ಲಿ ಬರೆದರು. ಇನ್ನು ಬೌದ್ಧ ಧರ್ಮದ ಪುಸ್ತಕಗಳನ್ನು ಸಹ, ಮಾಗಧೀ ಪ್ರಾಕೃತದಲ್ಲಿ ಅಂದರೆ ಪಾಲೀಭಾಷೆಯಲ್ಲಿ, ಆ ಕಾಲದಲ್ಲಿನ ಬ್ರಾಹ್ಮೀ ಅಕ್ಷರಗಳಲ್ಲಿ ಬರೆದರು. ಆದರೆ ಶಿವೋತ್ತರ ತಂತ್ರವನ್ನೂ ಸಹ ಆ ಕಾಲದ ಬ್ರಾಹ್ಮೀ ಅಕ್ಷರದಲ್ಲಿಯೇ ಬರೆದರೂ ಸಂಸ್ಕೃತ ಭಾಷೆ ಬಳಸಿದರು. ಒಟ್ಟಾರೆ ಅಕ್ಷರಗಳ ಉದ್ಭಾವನೆಯಾದ ಬಳಿಕ ಬಹು ದೊಡ್ಡ ಆತಂಕ ದೂರಾಯಿತು. ಈ ಸಮಯದಲ್ಲಿ, ಜೈನ ತಂತ್ರ, ಬೌದ್ಧ

ತಂತ್ರ ಮತ್ತು ಶಿವೋತ್ತರ ತಂತ್ರಗಳಲ್ಲಿ ಹೊಂದಾಣಿಕೆ ಶುರುವಾಗಿತ್ತು. ಒಂದೇ ನಾಡಿನಲ್ಲಿ ಒಟ್ಟಾಗಿ ಅಕ್ಕಪಕ್ಕದಲ್ಲಿಯೇ ಇರುವಾಗ, ಈ ಪ್ರಕಾರದ ಹೊಂದಾಣಿಕೆಯು ಅಗಲೇಬೇಕಷ್ಟೇ. ಮತ್ತು ಅದರ ಫಲವೂ ಸಹ ಕೆಟ್ಟದೇನಿರಲಿಲ್ಲ. ಒಳ್ಳೆಯದೇ ಇರಬಹುದು; ಇಲ್ಲವೆ ಒಳಿತು–ಕೆಡಕುಗಳೇ ಇಲ್ಲದಿರಬಹುದು. ಹೇಗೆಂದರೆ ಪೌರಾಣಿಕ ಧರ್ಮಾವಲಂಬಿಗಳ ದೇವತೆಯಾದ ಸತ್ಯನಾರಾಯಣ ಮತ್ತು ಇಸ್ಲಾಂ ಧರ್ಮಾವಲಂಬಿಗಳ ಪೀರ ಭಕ್ತಿಗಳೆರಡೂ ಸೇರಿ ಬಂಗಾಳದ ಮಣ್ಣಿನಲ್ಲಿ 'ಸತ್ಯ–ಪೀರ'ನ ಜನ್ಮವಾಯಿತು. ಅದರ ಫಲವೇನೂ ಕೇಡಿನದಾಗಲಿಲ್ಲ. ಆ ಕಾಲಕ್ಕೆ ಜೈನ ತಂತ್ರ, ಬೌದ್ಧ ತಂತ್ರ ಮತ್ತು ಶಿವೋತ್ತರ ತಂತ್ರಗಳಲ್ಲಿ ಒಂದು ರೀತಿಯ ಪಾರಸ್ಪರಿಕ ತಿಳಿವಳಿಕೆ ಶುರುವಾಗಿತ್ತು. ಎಲ್ಲರೂ ವಿಶಾಲ ತಳಹದಿಯ ಮೇಲೆ ತಂತ್ರವನ್ನು ಬೇರೆ ಬೇರೆ ಅಭಿವ್ಯಕ್ತಿಗಳ ದೃಷ್ಟಿಕೋನಗಳಿಂದ ವಿಚಾರಿಸಿ ೬ಳಿ ವಿಭಾಗಗಳಲ್ಲಿ ಹಂಚಿಹಾಕಬಹುದೆಂಬುದನ್ನು ಒಪ್ಪಿದ್ದರು. ಆದರೆ ಅವರಲ್ಲಿ ಕೇವಲ ಶಬ್ದಗತ ಅಂತರವಿದ್ದಿತಷ್ಟೇ. ಜೀವನದ ೬ಳಿ ಮೂಲ ಅಭಿವ್ಯಕ್ತಿಗಳನ್ನು ಒಪ್ಪಿ, ಒಂದೊಂದು ತಂತ್ರವನ್ನು ಆ ಜನರು ನಿಗದಿಪಡಿಸಿದ್ದರು. ಅದರೊಂದಿಗೆ ತಾವು ಒಂದೊಂದು ತಂತ್ರವನ್ನು ತಯ್ಯಾರಿಸಿದ್ದರೂ ಸಹ ತಂತ್ರದೊಳಗೆ ಅಡಗಿದ ಮಾತು, ಅಡಗಿದ ತತ್ತ್ವಗಳಲ್ಲಿ ಯಾವ ಸಾರ್ಥಕ್ಯವಿಲ್ಲವೆಂಬುದನ್ನೂ ಒಪ್ಪಿದ್ದರು. ಸಾರ್ಥಕ್ಯವೇನಾದರೂ ಇದ್ದರೆ, ಅದು ಕೇವಲ ಹೊರಗಿನ ಶಬ್ದಗಳಿದ್ದು. ಹೇಗೆಂದರೆ ಮೂಲಪ್ರಜ್ಞಾಶಕ್ತಿಯನ್ನು ಜೈನ ತಂತ್ರದಲ್ಲಿ ಜಿನ ರನ್ನ ಇಲ್ಲವೆ ಜಿನ 'ರಅನ' ಎನ್ನುತ್ತಿದ್ದರು.

ಭನಈ ಕಾಹೂ ಜಿನರಅನಬಿ ಕೈಸಾ।
ಕಾಲೇ ಬೋವ ಸಮ್ಮೋಹಿ ಉ ಜೈಸಾ ॥

ಶಿವ–ತಂತ್ರದಲ್ಲಿಯೂ ಶಿವ ಶಬ್ದದ ಬಳಕೆಯು ಶಿವೋತ್ತರ ಕಾಲದಲ್ಲೂ ಇತ್ತು. ಅದೇ ರೀತಿ ಶಿವ ಶಬ್ದವನ್ನು ಶಿವೋತ್ತರ ತಂತ್ರದಲ್ಲಿಯೂ ಬಳಸಲಾಗುತ್ತಿತ್ತು. ಇನ್ನು ಬೌದ್ಧ ತಂತ್ರದಲ್ಲಿ ಬುದ್ಧನ ಬೇರೆ ಬೇರೆ ಹೆಸರುಗಳ ಬಳಕೆಯಾಗುತ್ತಿತ್ತು. ಹೀಗೆ ಅಕ್ಕಪಕ್ಕದಲ್ಲಿ ೬ಳಿ ತಂತ್ರಗಳು ರೂಢಿಯಲ್ಲಿದ್ದವು. ಮತ್ತು ಈ ೬ಳಿ ತಂತ್ರಗಳಲ್ಲಿ ಒಂದೊಂದು ತಂತ್ರದ ನಿಯಂತ್ರೀ ಶಕ್ತಿಯು ರೂಪದಲ್ಲಿ ಒಂದೊಂದು ಯೋಗಿನೀ ತತ್ತ್ವವನ್ನು ಒಪ್ಪಲಾಗಿತ್ತು ಅರ್ಥಾತ್ ಮೂರು ತಂತ್ರ ಮತಗಳು ಒಂದೊಂದು ತಂತ್ರದ ನಿಯಂತ್ರಣಕಾರೀ ಶಕ್ತಿಯನ್ನು ಯೋಗಿನೀ ಎಂದೇ ಕರೆಯುತ್ತಿದ್ದವು. ಮತ್ತು ಈ ಮೂರು ತಂತ್ರ ಮತಗಳು ತಮ್ಮ ತಮ್ಮ ಜನಪ್ರಿಯತೆಯು ಕುಂಠಿತಗೊಳ್ಳದಂತೆ ಇರಿಸಲು, ಶಿವನ ಹೆಸರನ್ನು ಬಳಸುತ್ತಿದ್ದವು. ಪ್ರತಿಯೊಂದು ತಂತ್ರ ಶಕ್ತಿಯು ಶಿವನ ಪತ್ನಿಯೆಂದೇ ಹೇಳುತ್ತಿದ್ದರು. ನಿಮ್ಮಲ್ಲಿ ಯಾರಾದರೂ ಜಬ್ಬಲಪುರಕ್ಕೆ ಹೋಗಿದ್ದರೆ, ಅಲ್ಲಿಯ ಬೆಟ್ಟದ ಮೇಲೆ ೬ಳಿ ಯೋಗಿನಿಯರ ಮೂರ್ತಿಗಳಿರುವುದನ್ನೂ ಅವುಗಳಿಗೆ ಬೇರೆ ಬೇರೆ ಚಿಕ್ಕ ಚಿಕ್ಕ ಮಂದಿರಗಳಿರುವುದನ್ನೂ ನೋಡಿರಬಹುದು. ಶಿಹುದು; ಈ ೬ಳಿ ಯೋಗಿನಿಯರ ಮೂರ್ತಿಗಳು ೬ಳಿ ಮಂದಿರಗಳಲ್ಲಿವೆ. ಇವು ಜೈನ ತಾಂತ್ರಿಕರ ೬ಳಿ ದೇವತೆಗಳು; ಥೇಟ ಇದೇ ರೀತಿ, ಬೌದ್ಧ ತಂತ್ರದಲ್ಲಿ ವಿಶೇಷವಾಗಿ

ಬೌದ್ಧ ವಜ್ರಯಾನದಲ್ಲಿ ಇಂಥ ೬೪ ತತ್ತ್ವಗಳನ್ನು ಸ್ವೀಕರಿಸಲಾಗಿದೆ. ಇನ್ನು ಶಿವೋತ್ತರ ತಂತ್ರಕ್ಕೂ ಇದೇ ಮಾತು ಅನ್ವಯಿಸುತ್ತದೆ. ಯಾವ ರೀತಿ ಸಂಶ್ಲೇಷಣವು (synthesis) ನಡೆದಿತ್ತೆಂಬುದನ್ನು ನೀವಿಲ್ಲಿ ಕಾಣಬಹುದಷ್ಟೇ. ಕೆಲ ಕೆಲವು ಜೈನ ತಂತ್ರದ ದೇವಿಯರನ್ನು ಬೌದ್ಧ ತಂತ್ರದಲ್ಲಿ ಸ್ವೀಕರಿಸಲಾಗಿದೆ. ಹಂದಿ ಮುಖಿಧಾರಿ ಜೈನ ತಾಂತ್ರಿಕ ದೇವಿಯಾದ ವಾರಾಹಿಯು ಬೌದ್ಧ ವಜ್ರಯಾನದಲ್ಲಿ 'ವಜ್ರ ವಾರಾಹಿ' ಯಾದಳು. ಶಿವೋತ್ತರ ತಂತ್ರದ ಕೆಲಕೆಲವು ದೇವಿಯರನ್ನು ಜೈನ ಇಲ್ಲವೆ ಬೌದ್ಧ ತಂತ್ರಗಳಲ್ಲಿಯೂ ಸ್ವೀಕರಿಸಿದ್ದಾರೆ. ಎಲ್ಲರೂ ಸೇರಿ ಜೊತೆಗೂಡಿ ಒಂದು ಹೊಸ ಹಾದಿ ಹಿಡಿಯುವ ಪ್ರಯತ್ನವು ನಡೆಯುತ್ತಿತ್ತು. ಮತ್ತು ಇದೆಲ್ಲ ಅಕ್ಷರದ ಉದ್ಭಾವನೆಯಾದುದರಿಂದ ಮಾತ್ರ ಸಾಧ್ಯವಾಗಿತ್ತು. ಇಲ್ಲವಾದರೆ ಇದರ ಸಂಭವವೇನಿರಲಿಲ್ಲ. ಅಕ್ಷರಗಳ ಬಳಕೆ ಹಬ್ಬುವವರೆಗೆ ಅಂದರೆ ಅಕ್ಷರಗಳ ಬಳಕೆಯು ಶುರುವಾಗುವವರೆಗೆ ದೂರ ದೂರ ಸರಿಯುವ ಕ್ರಮವೇ ನಡೆಯುತ್ತಿತ್ತು. ಅಕ್ಷರಗಳು ಬೆಳಕು ಕಂಡ ಮೇಲೆ, ಸಮೀಪಿಸುವ ಹಾದಿ ಹಿಡಿದರು. ಹೇಗೆಂದರೆ ಜೈನ ತಾಂತ್ರಿಕ ದೇವಿ ಅಂಬಿಕೆಯಾಗಿದ್ದಳು. ಈ ಅಂಬಿಕಾ ದೇವಿಯನ್ನು ಶಿವೋತ್ತರ ತಂತ್ರದಲ್ಲಿಯೂ ಸ್ವೀಕರಿಸಲಾಗಿದೆ. ಶಿವನ ಸತಿಯ ರೂಪದಲ್ಲಿ ಅವಳನ್ನು ಮನ್ನಿಸುತ್ತಿದ್ದಾರೆ. ಆದರೆ ನೀವೆಲ್ಲ ತಿಳಿದಿರುವಂತೆ ಇಂದಿನಿಂದ ೭೦೦೦ ವರುಷ ಹಿಂದಿನ ಸದಾಶಿವನೊಂದಿಗೆ ಈ ದೇವಿಯರ ಯಾವ ಸಂಬಂಧವೂ ಇಲ್ಲ. ಏಕೆಂದರೆ, ಇದೆಲ್ಲ ಅತಿ ಹೆಚ್ಚೆಂದರೆ, ಕೇವಲ ೨೦೦೦ ವರ್ಷಗಳಷ್ಟು ಮಾತ್ರ ಹಿಂದಿನ ಮಾತು. ಅಕ್ಷರಗಳು ಉದ್ಭಾವಿತವಾದ ನಂತರದ ಮಾತಷ್ಟೇ.

ಪುನಃ, ಈ ಅಂಬಿಕಾ ದೇವಿಯು ಒಂದು ತರದಿಂದ ಇನ್ನೊಂದು ತರದಲ್ಲಿ ಬದಲಾಗುವ ಕ್ರಮದಲ್ಲಿ ಪೌರಾಣಿಕ ಶಾಕ್ತಾಚಾರದ ಲಕ್ಷ್ಮೀದೇವಿಯ ರೂಪದಲ್ಲಿ ಸ್ವೀಕೃತಳಾದಳು. ಆದರೂ ನೈಜದಲ್ಲಿ ಇವಳು ಜೈನರ ಅಂಬಿಕೆಯೇ ಸರಿ. ರಾಢದಲ್ಲಿ ಕಾಲನಾ ಎಂಬ ಹೆಸರಿನ ನಗರವಿದೆ. ಆ ನಗರದಲ್ಲಿ ಇಂದಿಗೂ ಸಹ ಅಂಬಿಕಾ ದೇವಿಯ ಮಂದಿರವಿದೆ. ರಾಢ ಪ್ರದೇಶದಲ್ಲಿ ಒಂದು ಕಾಲದಲ್ಲಿ ಜೈನ ಧರ್ಮದ ಅಧಿಕ ಪ್ರಭಾವವಿತ್ತು. ಆದ್ದರಿಂದ ಆ ನಗರದ ಹೆಸರು ಅಂಬಿಕಾ ಕಾಲನಾ ಎಂದಿದೆ. ಬಂಗಾಳಿಯಲ್ಲಿ 'ಎಂಬೋ-ಕಾಲನಾ' ಎಂದು.

ಮತ್ತೆ ಬೌದ್ಧ ದೇವಿಯಾದ ತಾರೆಯನ್ನು ಶಿವೋತ್ತರ ತಂತ್ರದಲ್ಲಿ ಮತ್ತು ಅನಂತರದ ಪೌರಾಣಿಕ ಶಾಕ್ತಾಚಾರದಲ್ಲಿ ಸ್ವೀಕರಿಸಲಾಗಿದೆ. ಶಿವೋತ್ತರ ತಂತ್ರದ ಕಾಳಿಯನ್ನು ಬೌದ್ಧ ಧರ್ಮದಲ್ಲಿಯೂ ಸ್ವೀಕರಿಸಲಾಗಿದೆ. ಅಂದರೆ ಆಗ ಒಂದು ರೀತಿಯ ಸಂಶ್ಲೇಷಣಾತ್ಮಕ ಯುಗವೇ ನಡೆದಿತ್ತು. ಇನ್ನು ಈ ಸಂಶ್ಲೇಷಣದ ಕಾಲಾನಂತರದಲ್ಲಿ ಪೌರಾಣಿಕ ಶಾಕ್ತಾಚಾರದಲ್ಲಿ, ಪೌರಾಣಿಕ ಶಿವಾಚಾರದಲ್ಲಿ ಸಹ, ದೇವತೆಯ ರೂಪದಲ್ಲಿ ಸ್ವಲ್ಪ ಬದಲಾವಣೆಯೊಂದಿಗೆ ಈ ಕಾಳಿಯನ್ನು ಸ್ವೀಕರಿಸಿದ್ದಾರೆ. ಇನ್ನೂ ಸ್ವಲ್ಪ ವಿವರ್ತಿಕ ರೂಪವು ಪಠಾನ ಕಾಲಮಧ್ಯೆ ಆಯಿತು. ಇದರ ಪ್ರಭಾವವು ಇಂಡಿಯ ಸಹ ಹೆಚ್ಚು-ಕಡಿಮೆ ಉಂಟು. ಇನ್ನು ಈ ಸಂಶ್ಲೇಷಣೆಯ ಹಾದಿಯು, ಜೈನ ತಂತ್ರದಲ್ಲಿ, ಬೌದ್ಧ ತಂತ್ರದಲ್ಲಿ, ಅದೇ ರೀತಿ ಶಿವೋತ್ತರ ತಂತ್ರದಲ್ಲಿ ಮೂಡಿ

ಬಂದಿತ್ತು. ಈ ಮೂರರ ಸಮ್ಮಿಶ್ರಣದಿಂದ ಅಂದರೆ, ಈ ಮೂರರಲ್ಲಿ ಯಾವುದರ ಪ್ರಭಾವವು ಹೆಚ್ಚಿಗಿತ್ತೋ ಅದನ್ನು ಹಿಡಿದುಕೊಂಡು, ಒಂದು ಹೊಸ ಭಾವನೆಯ ಹುಟ್ಟು ಹಾಕಲಾಯಿತು. ಈ ಭಾವನೆಯ ಹೆಸರು. 'ದಶ ಮಹಾವಿದ್ಯಾ' ಜೈನ ಜನರು ಕೆಲವರನ್ನು ಒಪ್ಪಿದ್ದರು; ಬುದ್ಧ ತಂತ್ರವೂ ಕೆಲವರನ್ನು ಒಪ್ಪಿತ್ತು.ಶಿವೋತ್ತರ ತಂತ್ರವು ಕೆಲವರನ್ನು ಒಪ್ಪಿತ್ತು.ಈ ಪ್ರಕಾರ ಹತ್ತು ತಾಂತ್ರಿಕ ದೇವತಾ ತತ್ತ್ವಗಳನ್ನೂ ಗ್ರಹಿಸಿ, ಹತ್ತು ಮಹಾವಿದ್ಯೆಗಳು ಉದ್ಬುದ್ಧವಾದವು. ಇದೇ ರೀತಿ ಇದು ಪೌರಾಣಿಕ ಶಾಕ್ತಾಚಾರ, ಶಿವಾಚಾರ, ಮತ್ತು ಗಾಣಪತ್ಯಾಜಾರಗಳಲ್ಲಿಯೂ ಸ್ವೀಕೃತವಾಯಿತು.

ಹೀಗೆ ಇತಿಹಾಸದ ಪರ್ಯಾಲೋಚನೆಯಿಂದ ಯಾವುದೋ ತತ್ತ್ವದ ಅಭಿಭಾವ ಹೇಗಾಗುತ್ತದೆ? ಅದೇ ರೀತಿ ಸಂಶ್ಲೇಷಣೆಯು ಹಾದಿ ಹಿಡಿದು ಅದು ಯಾವ ರೀತಿ ವಿಸ್ತರಿಸುತ್ತದೆ? ಮತ್ತು ಅದರ ಕುಂದು-ಕೊರತೆಗಳಿಂದಾಗಿ ಕೊನೆಗೆ ಅದು, ಮೂಲ ಭಾವನೆಯೇ ನಶಿಸಲು ಹೇಗೆ ಕಾರಣವಾಗುತ್ತದೆ? ಎಂಬುದೆಲ್ಲ ನಮಗೆ ತಿಳಿದು ಬರುತ್ತದೆ.

ಹತ್ತು ಮಹಾ ವಿದ್ಯೆಗಳಿವು:

(೧) ಕಾಲಿ (೨) ತಾರಾ (೩) ಷೋಡಶೀ (೪) ಭುವನೇಶ್ವರಿ ೫) ಭೈರವಿ (೬) ಛಿನ್ನಮಸ್ತಾ (೭) ಧೂಮಾವತಿ (೮) ಬಗಲಾಮುಖಿ (೯) ಮಾತಂಗೀ ಮತ್ತು (೧೦) ಕಮಲಾ. ಇವು ಮೂರೂ ಮತವಾದಗಳಲ್ಲುಂಟು. ಅನೇಕ ಸಮಯ ಇವರ ಬೀಜ ಮಂತ್ರವೂ ಸಹ ಒಂದೇ ಉಂಟು. ನಿಮಗೆ ಸಮ್ಯಕ್ ರೀತಿಯ ಅರಿವು ಮಾಡಿಕೊಡಲು ಈ ಹತ್ತರ ಸಂಬಂಧವಾಗಿ ಸಂಕ್ಷೇಪವಾಗಿ ಹೇಳಿಬಿಡುವೆ. ನಿಮಗೊಂದು ವಿಚಾರ (idea) ನೀಡುವೆ.

ಮೇಘವರ್ಣಾ ವಿಗತವಸನಾ ಶವ ಶೀವಾ ರೂಢಾ ಶ್ಯಾಮಾ ತ್ರಿನಯನಾ।
ನರ ಶಿರ ಖಡ್ಗ ವರಾಭಯ ಶೋಭನಾ ಚತುರ್ಭುಜ ಕಾಲಿಕಾರೂಪಿಣೀ॥
ಗರ್ವಿತ ದಾನವ ಗರ್ವ ಖರ್ವಾಕೃತಿ ಖಡ್ಗ ಖರ್ಪರಾ ನೀಲ ಸರಸ್ವತೀ ।
ಸರ್ವ ಸೌಭಾಗ್ಯ ಪ್ರದಾಯಿನಿಕರ್ತಿ ನಮಸ್ತೆ ತಾರರೂಪಾ । ತಾರಿಣೀ ॥
ಬಾಲಾಗಣ ಸಮಾ ಉಜ್ವಲ ಅಂಗಾಭಾ ಚತುರ್ಭುಜಾ ತ್ರಿನಯನಾ ।
ತ್ರಿಭುವನ ಮನ ಲೋಭಾ ಪಾಶಾಂಕುಶ ಶರಚಾಪ ಧಾರಿಣಿ ಶಿವಾ
ಷೋಡಶೀ ರೂಪಾ ಶಿವ ಭಾವಿನೀ ।
ಹಾಸ್ಯ ಮುಖಾರಿತಾ ನಿಶಾಕರ ವಂದಿತಾ ತ್ರಿಭುವನ ಮಂಗಲ
ಭುವನೇಶ್ವರ ಮಾತಾ ।
ರಕ್ತೋತ್ಪಲಧರಾ ಕೋಟಿ ಭಾನು ನಿಂದಿತಾ ಭೈರವಿ ವರಾಭಯದಾಯಿನೀ॥
ವಿವರ್ಣಾ ವಿಧವಾ ಛಿನ್ನಾಂಬರಧರಾ ಕಾಕಧ್ವಜಾ ಧೂಮಾವತಿ
ಶೂರ್ಪಕರ ।
ಬಗುಲಾ ಮುಖಿ ಪೀತವರ್ಣಾ ಪೀತಾಂಬರ ಮುದ್ಗರ ಅರಿಜಿಪ್ವಾ ಧಾರಿಣೀ॥
ನಿಜಶಿರ ಛಿಂದಿತಾ ರುಧಿರ ಪಾನರತಾ ದಿಗ್ವಾಸಾ ರತಿರಜತನೋ
ಪರಿಸಂಸ್ಥಿತಾ ।

ಛಿನ್ನ ಮಸ್ತಾಮಾತಾ ಡಾಕಿನಿ ಸಮನ್ವಿತಾ ಪ್ರಬಲ ಪಾತಕೀ
ಕುಲಘಾತಿನೀ ॥
ಮಣಿಮಯ ಆಸನೆ ಶ್ಯಾಮಕಲೆವರಾ ಮಾತಂಗೀರೂಪ
ಧರಾ ಸುಧಾಸು ಶೇಖರಾ ।
ಕಾಂಚನಕಾಂತಿ ಸುದೀಪ್ತಾ ಸುಮನೋಹರ ಕಮಲಾ ಹರ
ಹೃದೀವಾಸಿನೀ ।

ಈಗ ಇವರಲ್ಲಿ ಮೊದಲಿನವಳೇ ಕಾಲಿಕಾ. ಕಾಲಿಕೆಯು ಶಿವತಂತ್ರದ ನಿಯಂತ್ರೀ ದೇವತೆ (Controlling deity). ಅಧಿಷ್ಠಾತ್ರಿ ದೇವಿ. ಆದರೆ ಜೊತೆ ಜೊತೆಗೆ ರೂಢಿಯಲ್ಲಿದ್ದ ಬೌದ್ಧ ವಜ್ರಯಾನದಲ್ಲಿಯೂ ಸಹ ಕಾಲಿಕಾ ಶಕ್ತಿಯನ್ನು ಒಪ್ಪಿಕೊಳ್ಳಲಾಗಿತ್ತು. ನಾನು ಎಲ್ಲೋ ಒಂದು ಸಲ ಹೇಳಿದಂತೆ ಶಿವನು ಪ್ರಭಾವವು ಅಸಾಮಾನ್ಯವಾಗಿತ್ತು. ಆದ್ದರಿಂದ ಶಿವನೊಂದಿಗೆ ಈ ದೇವತೆಯ ಸಂಪರ್ಕವನ್ನು ನಿರ್ಣಯಿಸಬೇಕಾಗಿತ್ತು. ಆದ್ದರಿಂದ ಕಾಲಿಕಾ ಶಕ್ತಿಯು ಶಿವನ ಪತ್ನಿ ಎಂದು ಹೇಳಿಬಿಟ್ಟರು. ಆದರೆ ಸರಿಯಾಗಿ ತಿಳಿಯುವದಾದರೆ ಶಿವನು ಇದಕ್ಕಿಂತ ಮೊದಲು ೫ ಸಾವಿರ ವರುಷ ಹಿಂದಿನವನು. ಅಂದಮೇಲೆ ಈ ಕಾಲಿಕೆಯು ಶಿವನ ಪತ್ನಿ ಹೇಗಾಗಬಲ್ಲಳು? ಇನ್ನೊಂದು ಮಾತೆಂದರೆ, ಈ ಕಾಲಿಕೆಗೆ (controlling deity) ನಾಲ್ಕು ಭುಜಗಳಿವೆ. ನಾಲ್ಕು ಕೈಗಳಿವೆ. ಅವಳು ಚತುರ್ಭುಜಾ. ಯಾವುದೇ ಮಾನವೀಯ ದೇಹಕ್ಕೆ ನಾಲ್ಕು ಕೈಗಳಿರಲಾರವು. ಆದ್ದರಿಂದ ಕಾಲಿಕಾ ಶಕ್ತಿ (Kali) ಶಿವನ ಹೆಂಡತಿಯಾಗಳು. ಕಾಳಿಯು ಬದಲಾದ ಕಾಲದ ತಾಂತ್ರಿಕ ಅಧಿಷ್ಠಾತ್ರೀ ದೇವಿ ಮಾತ್ರ.

ಎರಡನೆಯ ದೇವಿ ಎಂದರೆ ತಾರಾ. ತಾರೆಯು ಬೌದ್ಧ ವಜ್ರಯಾನದ ಒಬ್ಬ ದೇವಿ. ನಾನು ಈ ಮೊದಲು ಹೇಳಿದಂತೆ ಭಾರತ ವರ್ಷದಲ್ಲಿ ಪೂಜೆಗೊಳ್ಳುತ್ತಿರುವ ತಾರೆಯ ಹೆಸರು ಭ್ರಾಮರಿ ತಾರಾ (ಕಾಲಿ ಮೂರ್ತಿ) ಎಂದಿತ್ತು. ಭ್ರಮರದಂತೆ ಇರುವಳಾದ್ದರಿಂದ ಭ್ರಾಮರೀ ತಾರಾ. ಇನ್ನು "ಕಿಂಪುರುಷ ವರ್ಷದಲ್ಲಿ" ಅಂದರೆ ತಿಬೇಟಿನಲ್ಲಿ ಪೂಜೆಗೊಳ್ಳುವ ತಾರೆಯು ನೀಲವರ್ಣೆಯಾಗಿದ್ದಳು. ಹೀಗೆ ಈ ಎಲ್ಲ ಘಟನೆಗಳು ಬುದ್ಧಾನಂತರದ ಕಾಲದಲ್ಲಿ ಘಟಿಸಿದವುಗಳಾಗಿವೆ. ಅಂದಮೇಲೆ ಶಿವನ ನಂತರ ಬಹುಕಾಲ ನಂತರದವುಗಳಷ್ಟೇ. ಈ ಕಾರಣದಿಂದ ತಾರಾದೇವಿಯು ಸಹ ಶಿವನ ಹೆಂಡತಿಯಾಗಲು ಶಕ್ಯವಿಲ್ಲ. ಇಲ್ಲಿ ಹೆಸರಿನ ಹೋಲಿಕೆಯು ಸಹ ಸಿದ್ಧಪಡುವದಿಲ್ಲ. ಕಾಳಿಯು ಶಿವನ ಹೆಂಡತಿಯಾಗಿದ್ದಳು. ಅವಳೊಂದಿಗೆ ಶಿವೋತ್ತರ ತಂತ್ರದ ಕಾಲಿಕೆಯು ಕನಿಷ್ಠ ಹೆಸರಿನ ಹೋಲಿಕೆಯನ್ನಾದರೂ ಹೊಂದಿದ್ದಾಳೆ. ಆದರೆ ತಾರೆಯೊಂದಿಗೆ ಇಂಥ ಹೋಲಿಕೆಯೂ ಸಹ ಇಲ್ಲ. ತಾರೆಯು ಸಂಪೂರ್ಣ ವಜ್ರಯಾನೀ ಬೌದ್ಧ ತಾಂತ್ರಿಕ ದೇವಿಯಾಗಿದ್ದಾಳೆ. ಆದರೆ ಶಿವೋತ್ತರ ತಂತ್ರದಲ್ಲಿ ಮತ್ತು ಅದೇ ರೀತಿ ಪೌರಾಣಿಕ ಶಾಕ್ತಾಚಾರದಲ್ಲಿ ಅವಳನ್ನು ಸ್ವೀಕರಿಸಲಾಗಿದೆ. ಈಗ ಬಹಳ ಹುಡುಗರ ಹೆಸರು ತಾರಾಪದ, ತಾರಾಪ್ರಸಾದ ಎಂದು ಇರುವುದನ್ನು ನೀವು ಕಾಣುವಿರಿ. ಅದೇ ರೀತಿ ಅನೇಕ ಹುಡುಗಿಯರ ಹೆಸರು ತಾರಾದೇವಿ ಎಂದು ಇರುವದನ್ನು ನೀವು ಕಾಣುವಿರಿ. ಇಲ್ಲಿ ಇರುವ ಸಂಗತಿ ಇಷ್ಟೇ. ತಾರೆಯೊಂದಿಗೆ ಶಿವನ ಯಾವ

ಸಂಪರ್ಕವೂ ಇಲ್ಲ. ತಾರೆ ಶಿವನ ಹೆಂಡತಿ ಎಂದು ಜನರು ತಿಳಿಯುತ್ತಾರೆ. ಸರಸ್ವ ಸಂಬಂಧ ಹೇಳುವ ಕಾಲಕ್ಕೆ ತಾರೆಯನ್ನು ಕುರಿತು ಇನ್ನಷ್ಟು ಹೇಳುವೆ.

ಇದಾದ ಬಳಿಕ ಮೂರನೆಯವಳೇ ಷೋಡಶೀ ದೇವಿ. ಬೀಜಮಂತ್ರ ಸಂಬಂಧದಲ್ಲಿ ಇನ್ನೊಂದು ಮಾತು ಹೇಳುವುದಿದೆ. ಶಿವನ ಕಾಲದಲ್ಲಿ ಶೈವ ತಂತ್ರದಲ್ಲಿ ಬೀಜ ಮಂತ್ರದ ಬಳಕೆಯಂತೂ ಇರಲಿಲ್ಲವೆಂಬುದನ್ನು ನೀವೆಲ್ಲ ತಿಳಿದಿರುವಿರಷ್ಟೇ. ಜನರು ಶಿವನನ್ನು ಎಷ್ಟೊಂದು ಪ್ರೀತಿಸುತ್ತಿದ್ದರೆಂದರೆ ಅವರು ಶೈವತಂತ್ರದಲ್ಲಿ ಬೀಜಮಂತ್ರವನ್ನು ಬಳಸುವ ಉಪಚಾರಕ್ಕೆ ಕೈ ಹಾಕಿರಲಿಲ್ಲ. ಅನಂತರ ಬೀಜಮಂತ್ರದ ಬಳಕೆಯ ಅವಶ್ಯಕತೆಯೆನಿಸಹತ್ತಿತು. ಬೌದ್ಧ ತಂತ್ರದಲ್ಲಿ ಕಾಲಿಯ ಬೀಜ ಮಂತ್ರವು 'ರಮ್' ಎಂದಿತ್ತು. ಅಂದರೆ ಶಕ್ತಿ ಸಂಪಾತವಾಗುತ್ತಿತ್ತು; ಇದರಿಂದ 'ಶಕ್ತಿಸಂಪಾತಾರ್ಥಂ ಇತ್ಯರ್ಥೇ–'ರಂ'. ಅಂದರೆ, 'ರಂ' ಬೀಜದ ಮೂಲಕ ಶಕ್ತಿಯನ್ನು ಕಾರ್ಯದಲ್ಲಿ ತೊಡಗಿಸುತ್ತಿರುತ್ತಾರೆ. ಆದರೆ ಇದನ್ನು ಯಾವಾಗ ಶಿವೋತ್ತರ ತಂತ್ರದಲ್ಲಿ ಬಳಸಹತ್ತಿದರೋ, ಆಗ ಬೀಜ ಮಂತ್ರವು ಬದಲಾಯಿತು. ಅದು 'ರೀಂ' ಎಂದಾಯಿತು. 'ರ' ಶಕ್ತಿಯೊಂದಿಗೆ 'ಈ' ಜೋಡಿಸಿ 'ರೀ' ಉತ್ಪತ್ತಿಸಲಾಯಿತು. ('ರ' ಧ್ವನ್ಯಾತ್ಮಂ ಶಕ್ತಿ: ಆಧಿಕ 'ಈ' ಪ್ರತ್ಯಯ ಸೇರಿಸಿ ಆದ ಸ್ತ್ರೀವಾಚಕ ಪದವೇ 'ರೀಂ') ಇದರಿಂದ ಶಕ್ತಿಯು ಸ್ತ್ರೀಸತ್ಮೆಯಾಯಿತು. ಈ ಅರ್ಥದಲ್ಲಿ ಈ ಚೇತನೆಯಲ್ಲಿ ಅದನ್ನು ಗ್ರಹಿಸಲಾಗಿದೆ. ಆ ಬಳಿಕ, ಪೌರಾಣಿಕ ಶಾಕ್ತಾಚಾರದಲ್ಲಿ ಯಾವಾಗ ಈ ಕಾಲಿಕಾ ಶಕ್ತಿಯು ಸ್ವೀಕೃತವಾಯಿತೋ, ಆಗ, 'ರೀಂ' ಬೀಜಮಂತ್ರವು ವಿವರ್ತಿತವಾಗಿ, 'ಕ್ರೀಂ' ಎಂದು ಬದಲಾಯಿತು. ಇಂದು ನಾವು ನೋಡುತ್ತಿರುವ ಕಾಲಿಕಾ ಪೂಜೆಯು ಪೌರಾಣಿಕ ಯುಗದಲ್ಲಿ ಪ್ರಚಲಿತವಾಗಿದೆ. 'ಕ್ರೀಂ ಕಾಲಿಕಾಯೈ ನಮಃ'; ಈ ರೀತಿ ಬೀಜ ಮಂತ್ರವು ಬದಲಾಯಿತು. ಸಾಧಾರಣವಾಗಿ, ಬೌದ್ಧ ಅಂತರದ ಕಾಲದಲ್ಲಿ, ಪೌರಾಣಿಕ ಶಾಕ್ತಾಚಾರದ ಸಮಯದಲ್ಲಿ, ಯಾವತ್ತೂ ಬೌದ್ಧ ತಾಂತ್ರಿಕ, ಜೈನ ತಾಂತ್ರಿಕ ಮತ್ತು ಶಿವೋತ್ತರ ತಾಂತ್ರಿಕ ಸಮಸ್ತ ದೇವಿಯರನ್ನೂ ಶಿವನ ಹೆಂಡಂದಿರಾಗಿ ಘೋಷಿಸಿದ್ದರು. ಹೀಗಾಗದಿದ್ದರೆ ಅವರು ಸಮಾಜದಲ್ಲಿ ಪೂಜ್ಯರಾಗುತ್ತಿರಲಿಲ್ಲ. ಆದರೆ, ಬೀಜ ಮಂತ್ರಗಳು ಮಾತ್ರ ಬೇರೆ ಬೇರೆಯಾಗಿದ್ದವು. ಸಾಧಾರಣವಾಗಿ ಪೌರಾಣಿಕ ಯುಗದಲ್ಲಿ ಏನು ಮಾಡಿದ್ದರು? ಶಿವೋತ್ತರ ತಂತ್ರದಿಂದ ತಾಂತ್ರಿಕ ದೇವಿಯರೆಂದು ಗ್ರಹಿಸಿದ ಎಲ್ಲ ಅಧಿಷ್ಠಾತ್ರೀ ದೇವಿಯರನ್ನು ದಕ್ಷಿಣಾ ಶಕ್ತಿಯೆಂದು ಸ್ವೀಕರಿಸಲಾಯಿತು. ಇನ್ನು ಬೌದ್ಧ ವಜ್ರಯಾನದಿಂದ ಬಂದ ದೇವಿಯರನ್ನು ವಾಮ ಶಕ್ತಿಯೆಂದು ಗಣಿಸಲಾಯಿತು. ಉದಾಹರಣೆಗೆ ಕಾಲಿಕಾ. ಅವಳು ಬೌದ್ಧ ತಂತ್ರಾಚಾರದಲ್ಲಿ ಪೂಜಿತಳಾಗಿದ್ದಳು. ಇದರಿಂದ ಅವಳನ್ನು ವಾಮ–ಕಾಲಿಕೆಯೆಂದು ಕರೆಯಲಾಯಿತು. ಅವಳ ಮೂರ್ತಿಯನ್ನು ನಿರ್ಮಿಸುವಾಗ,ಅದರ ಬಣ್ಣವು ಕೃಷ್ಣವರ್ಣದ್ದೇ ಆಗಿರಬೇಕು. ಮತ್ತು ಎಡಗಾಲು ಮುಂದಿರಬೇಕು. ಅವಳ ಎಡಗಾಲಿನ ಮೇಲೆ ರಕ್ತದ ಮುದ್ರೆಯಿರುತ್ತದೆ. ಕೆಂಪು ಅತಿ ಕೆಂಪು. ಈ ವಾಮ ಕಾಲಿಯ ಪೂಜೆಯನ್ನು ಮನೆಯೊಳಗೆ ಮಾಡುತ್ತಿರಲಿಲ್ಲ. ಅಷ್ಟೇಕೆ? ಅವಳನ್ನು ಗ್ರಾಮದ ಮಧ್ಯ ಸಹ ಪೂಜಿಸುತ್ತಿರಲಿಲ್ಲ. ಅವಳ ಪೂಜೆಯನ್ನು ಗ್ರಾಮದ ಹೊರಗೆ ಸ್ಮಶಾನದಲ್ಲಿ ಮಾಡುತ್ತಿದ್ದರು. ಇಂದು

ಇವಳನ್ನು ವಾಮ ಕಾಲಿ, ಸ್ಮಶಾನ ಕಾಲಿ, ರಕ್ಷಾ ಕಾಲಿ, ರಟಂತಿ ಕಾಲಿ ಎಂದು ಕರೆಯುತ್ತಾರೆ. ಇವರೆಲ್ಲ ಬೌದ್ಧ ತಂತ್ರಚಾರದ ದೇವಿಯರೇ ಆಗಿದ್ದಾರೆ. ಆ ಬಳಿಕ ವಾಮ ಶಕ್ತಿಯೆಂದೂ ಕರೆದರು. ಇನ್ನು ಶಿವೋತ್ತರ ಕಾಲದ ಎಲ್ಲ ದೇವಿಯರೂ ಪೌರಾಣಿಕ ಶಾಕ್ತಾಚಾರದಲ್ಲಿಯೇ ಸ್ವೀಕೃತವಾಗಿದ್ದಾರೆ. ಮತ್ತು ಅವರನ್ನು ದಕ್ಷಿಣಾ ಶಕ್ತಿಯೆಂದು ಕರೆಯುತ್ತಾರೆ. ಈ ಕಾಲೀ ಮೂರ್ತಿಯ ಬಣ್ಣವು ಕಪ್ಪು ಇಲ್ಲವೆ ನೀಲಿ; ಅಥವಾ ತಿಳಿಹಸಿರು ಇರುತ್ತದೆ. ಮತ್ತು ಅವಳ ಬಲಗಾಲು ಅಂದರೆ ದಕ್ಷಿಣಾ–ಕಾಲು ದೊಡ್ಡದಿರುತ್ತದೆ. ಇವಳ ಪೂಜೆಯನ್ನು ಬೇಕಾದರೆ ಗ್ರಾಮ ಮಧ್ಯೆ, ಇಲ್ಲವೆ ಮನೆಯೊಳಗೆ ಮಾಡಬಹುದು. ಅಂದರೆ ಬೌದ್ಧ ತಂತ್ರದ ದೇವಿಯನ್ನು ಗ್ರಹಿಸಿದರು. ಆದರೆ, ಮನೆಯೊಳಗಾಗಲಿ, ಗ್ರಾಮದೊಳಗಾಗಲಿ ಅವಳನ್ನು ಕರೆದುಕೊಳ್ಳಲಿಲ್ಲ. ಏಕೆಂದರೆ ಬೌದ್ಧ ತಂತ್ರದ ದೇವಿಯು ಹೊರಗಿನವಳಾಗಿದ್ದಳು. ಮತ್ತು ದಕ್ಷಿಣಾ ದೇವಿಯರಿಗೆ, ಶಿವೋತ್ತರ ದೇವಿಯರಿಗೆ, ಮನೆಯೊಳಗೆ ಮತ್ತೂ ಸ್ವಲ್ಪ ನಿಕಟ ಮಾನ ದೊರೆಯಿತು. ವಾಮ ಇರಲಿ, ದಕ್ಷಿಣಾ ಇರಲಿ, ಉಭಯ ಕಾಲಿಕಾ ಶಕ್ತಿಗಳಿಗೆ ಶಿವನ ಹೆಂಡಂದಿರೆಂದು ಮನ್ನಿಸಲಾಯಿತು. ಆದರೆ ಶಿವನೊಂದಿಗೆ ಇವೆಲ್ಲವುಗಳ ಸಂಬಂಧವೇನಿಲ್ಲ. ಅದು ಶಿವನ ಅನಂತರದ ಐದು ಸಾವಿರ ವರುಷಗಳ ಮಾತಷ್ಟೇ. ಇಷ್ಟೇ ಅಲ್ಲ; ಮಾನನೀಯ ಶಕ್ತಿ ಇಲ್ಲವೆ ಮಾನನೀಯ ಆಧಾರವೆಂದೂ ಚತುರ್ಭುಜ ಹೊಂದಿರಕೂಡದು. ಆದರೂ ಸಹ ಈ ಎಲ್ಲ ದೇವಿಯರಿಗೆ ಅರುವತ್ತುನಾಲ್ಕು ತಂತ್ರಗಳಲ್ಲಿ ಇಂಬುಗೊಡಲಾಗಿದೆ. ವಾಸ್ತವದಲ್ಲಿ ಇವೆಲ್ಲ ಮಾನವಾಧಾರಗಳಲ್ಲ. ಈ ಕಾಲದ ಹಳೆಯ ಬಂಗಾಳೀ ಭಾಷೆಯಲ್ಲಿ ಹೀಗೆ ಹೇಳಿದ್ದಾರೆ.

"ಏಕ ಸೌ ಪದ್ಮಾ ಚೌಷಠೀ ಪಾಂಖಿಡೀ
ತೇ ಮಧ್ಯೇ ನಾಚಂತಿ ಡೊಮ್ನೀ ಬಾಪುಡಿ" ॥

ಇದು ಅತಿ ಹಳೆಯ ಬಂಗಾಳಿ. ಇದರ ಅರ್ಥವಿಷ್ಟೇ:

'ಪದ್ಮವಿರುವದೊಂದೆ; ಷಷ್ಠಿ–ನಾಲ್ಕು ಪಕಳೆ;
ಪಕಳೆ ಮಧ್ಯೆ ಕುಣಿವ ನೈರಾತ್ಮ ದೇವಿ.'

ಬೌದ್ಧ ತಂತ್ರದಲ್ಲಿ, ವಿಶ್ವಬ್ರಹ್ಮಾಂಡದಲ್ಲಿ ಕ್ರಿಯಾಶೀಲ ಶಕ್ತಿಯಾದ ಪ್ರಾಕೃತ ಶಕ್ತಿಗೆ, ಆ ಮುಖ್ಯ ಬೌದ್ಧ ಶಕ್ತಿಗೆ ನೈರಾತ್ಮ ದೇವಿ ಎಂದು ಕರೆಯುತ್ತಾರೆ.

ಇದಾದ ಬಳಿಕ, ಈ ದಶ ಮಹಾವಿದ್ಯಾರ ಷೋಡಶೀ ದೇವಿಯ ಸರತಿ. ಈ ಷೋಡಶೀ ದೇವಿಯನ್ನು ಸಹ ಶಿವಾ ಎಂದು ಕರೆಯುತ್ತಾರೆ. ಶಿವಾ ಎಂದರೆ ಶಿವನ ಹೆಂಡತಿ ಎಂದು ಅರ್ಥ.— ಅಂದರೆ ಶಿವಶಕ್ತಿ ಎಂದು. ಶಿವಭಾವಿನೀ ಅಂದರೆ ಶಿವನ ಭಾವನೆಯನ್ನೇ ಗ್ರಹಿಸಿ ಇರುವವಳು. ಈ ಷೋಡಶೀ ದೇವಿಯು, ಈ ಬೌದ್ಧ ತಾಂತ್ರಿಕ ದೇವಿಯು, ವಜ್ರಯಾನೀ ದೇವಿಯಾಗಿದ್ದಾಳೆ. ಅವಳನ್ನೂ ಸಹ ಶಿವೋತ್ತರ ತಂತ್ರದಲ್ಲಿ ಸ್ವೀಕರಿಸಲಾಗಿದೆ. ಶಿವೋತ್ತರ ತಂತ್ರದಲ್ಲಿ ಸ್ವೀಕೃತಳಾದ ಬಳಿಕ ಈ ದೇವಿಯ ಹೆಸರು ಬದಲಾಯಿತು. ಅವಳ ಹೆಸರು ರಾಜರಾಜೇಶ್ವರಿ ಎಂದಾಯಿತು. ಆ ಮುಂದಿನ ಕಾಲದಲ್ಲಿ, ಪೌರಾಣಿಕ ಶಾಕ್ತಾಚಾರದಲ್ಲಿ ಸಹ, ಈ ದೇವಿಯನ್ನು ಸ್ವೀಕರಿಸಲಾಗಿದೆ. ಪೂಜಿಸಲಾಗಿದೆ. ಬಹಳವಾದರೆ ಜನಸಾಮಾನ್ಯರಲ್ಲಿ ಅವಳ ಪೂಜೆಯು ಅಷ್ಟೊಂದು

ಪ್ರಚಾರವಾಗಿರಲಿಕ್ಕಿಲ್ಲವಷ್ಟೇ. ಬಹಳ ಆಧುನಿಕ ಕಾಲದಲ್ಲಿ, ಅಂದರೆ ಮೊಗಲ ಆಳ್ವಿಕೆಯ ಕೊನೆಗೆ ಮತ್ತು ಆಂಗ್ಲರ ಆಳ್ವಿಕೆಯ ಪ್ರಾರಂಭಕ್ಕೆ 'ನದಿಯಾ'ದ ಕೃಷ್ಣಚಂದ್ರ ಮಹಾರಾಜನು ಈ ರಾಜರಾಜೇಶ್ವರೀ ದೇವಿಯ ವಿವರ್ತಿತ ರೂಪದ ಪೂಜೆಯನ್ನು ಆರಂಭಿಸಿದನು. ಮತ್ತು ಅವಳಿಗೆ ಜಗದ್ಧಾತ್ರೀ ಎಂದು ಹೆಸರಿಸಲಾಯಿತು. ಅಂದರೆ ಜಗದ್ಧಾತ್ರೀ ದೇವಿಯು ಮೂಲತಃ ಬೌದ್ಧ ತಾಂತ್ರಿಕ ಷೋಡಶೀ ದೇವಿಯ ರೂಪಾಂತರಿತ ರೂಪವೇ ಆಗಿದೆ. ಜಗದ್ಧಾತ್ರೀ ದೇವಿಯ ಪೂಜೆಯು ಹೆಚ್ಚು ಅದ್ದೂರಿಯಿಂದ ಕೃಷ್ಣನಗರದಲ್ಲಿಯೇ ನಡೆಯುತ್ತಿರುವ ಬಗ್ಗೆ ನೀವು ಲಕ್ಷ್ಯ ವಹಿಸಿರಬಹುದು. ಹೀಗೇಕೆಂದರೆ, ಆಂಗ್ಲಶಾಸನದ ಆರಂಭ ಯುಗದಲ್ಲಿ ಇದು ಹುಟ್ಟಿಕೊಂಡಿತು. ಇದು ಅತಿ ಹಿಂದಿನ ಪೂಜಾವಿಧಾನವೇನೂ ಅಲ್ಲ. ಮತ್ತು ಷೋಡಶೀಯನ್ನು ಬೌದ್ಧ ತಂತ್ರದಲ್ಲಿ ಶಿವನ ಹೆಂಡತಿಯೆಂದೇ ಸ್ವೀಕರಿಸಲಾಗಿದೆ. ಆದ್ದರಿಂದ ರಾಜರಾಜೇಶ್ವರೀ ದೇವಿಯನ್ನೂ ಆದೇ ರೀತಿ ಭಾವಿಸಲಾಯಿತು. ಮತ್ತು ಜಗದ್ಧಾತ್ರೀ ದೇವಿಯನ್ನು ಸಹ ಹಾಗೆಯೇ ಗ್ರಹಿಸಲಾಯಿತು. ಇತ್ತೀಚಿನ ಇವರೆಲ್ಲ ಏಳು ಸಾವಿರ ವರ್ಷ ಪೂರ್ವದ ಶಿವನ ಪತ್ನಿಯರಾಗುವುದೆಂತು? ಇಲ್ಲಿ ಇದರ ಪ್ರಸ್ತಾಪವು ಸ್ವಲ್ಪ ಅಪ್ರಾಸಂಗಿಕವೆನಿಸಿದರೂ ಚಿಂತೆಯಿಲ್ಲ, ಜಗದ್ಧಾತ್ರೀ ದೇವಿಯ ಪೂಜೆಯು ಬಹಳ ಅದ್ದೂರಿಯಿಂದ ಕೃಷ್ಣನಗರದಲ್ಲಿ ಮತ್ತು ಚಂದನನಗರದಲ್ಲಿ ನಡೆಯುತ್ತಿರುವುದನ್ನು ನೀವು ಕಾಣಬಹುದು. ಚಂದನನಗರದ ನಿವಾಸಿಯೊಬ್ಬನು ನದಿಯಾದ ದಿವಾನನಾಗಿದ್ದನು. (ಬಹುಶಃ ಅವನ ಹೆಸರು ಗೋವಿಂದ ಬಂದೋಪಾಧ್ಯಾಯ ಎಂದಿತ್ತು). ಅವನು ಕೃಷ್ಣನಗರದಲ್ಲಿ ಕಂಡ ಜಗದ್ಧಾತ್ರೀ ಪೂಜೆಯನ್ನು ಚಂದನನಗರದಲ್ಲಿಯೂ ಪ್ರಚಾರ ಪಡಿಸಿದನು. ಆದರೆ ಬಣ್ಣ ಬಣ್ಣದ ಮೆರುಗಿನಲ್ಲಿ, ಮಹಿಮೆಯಲ್ಲಿ, ದೊಡ್ಡ ಪ್ರಮಾಣದಲ್ಲಿ, ಕೃಷ್ಣನಗರದಲ್ಲಿದ್ದಂತೆ ಆಗಲಿಲ್ಲ. ಆದರೆ ಚಂದನನಗರದಲ್ಲಿಯೂ ವಿಶಿಷ್ಟತೆಯಿಲ್ಲದಿಲ್ಲ. ಇಲ್ಲಿ ಜಗದ್ಧಾತ್ರೀ ದೇವಿಯ ಮೂರ್ತಿಯು ತುಂಬಾ ದೊಡ್ಡದಿದೆ. ಏನೇ ಆಗಲಿ; ಮಧ್ಯಯುಗದಲ್ಲಿ ಶಿವೋತ್ತರ ತಂತ್ರ ಜೈನತಂತ್ರ ಮತ್ತು ಆದೇ ರೀತಿ ಬೌದ್ಧತಂತ್ರಗಳಲ್ಲಿ ಸ್ವೀಕೃತರಾದ ದೇವಿ–ದೇವತೆಯರು ಶಿವನ ಪತ್ನಿಯರೇನೂ ಅಲ್ಲ. ಎಂಬುದನ್ನು ನೀವು ಸುಲಭವಾಗಿ ತಿಳಿದಿದ್ದೀರಿ. ಇವರಲ್ಲಿ ಕೆಲವರಿಗೆ ನಾಲ್ಕು ಕೈಗಳಿವೆ. ಇನ್ನೂ ಕೆಲವರಿಗೆ ಎಂಟು ಕೈಗಳಿವೆ. ಹೀಗೆ ಅವರು ಮಾನವ ಆಧಾರದ ಪ್ರತಿಭೂ ಆಗಲಾರರು.

ಈಗ ಒಂದು ಪ್ರಶ್ನೆ ಏಳುತ್ತದೆ. ರಾಮ–ಚಂದ್ರನು ದುರ್ಗೆಯ ಪೂಜೆ ಮಾಡಿದನೆಂದು ಜನರು ಹೇಳುತ್ತಾರೆ. ನೀವು ಸಹ ಈ ಕುರಿತು ಕತೆಗಳನ್ನು ಕೇಳಿರಬಹುದು. ಅದರ ಪ್ರಾಸಂಗಿಕತೆಯು ಏನಿದೆ ಎಂಬುದನ್ನು ಸಹ ನಾನು ತಿಳಿಸುತ್ತೇನೆ. ಇದರ ಸಂಬಂಧದಲ್ಲಿ ಹೇಳುವ ಮೊದಲು ರಾಮಾಯಣ ಕತೆಯನ್ನು ಕುರಿತು ಸಹ ಹೇಳಬೇಕಾಗುತ್ತದೆ. ರಾಮಾಯಣ ಕತೆಯು, ಭಾರತ, ಮಲೇಶಿಯಾ ಮತ್ತು ಇಂಡೋನೇಶಿಯಾಗಳಲ್ಲಿ ಮುಖ್ಯವಾಗಿ ಜನಜನಿತವಿದೆ. ಇದು ಹೀಗೆ ಕೇವಲ ನಾಲ್ಕಾರು ಸಾವಿರ ವರುಷಗಳಿಂದಲ್ಲ. ಅನೇಕ ಸಾವಿರ ವರುಷಗಳಿಂದ ನಡೆದು ಬಂದಿದೆ. ಆದರೆ ಈ ಕಥೆಯನ್ನು ಮೊಟ್ಟ ಮೊದಲು ವಾಲ್ಮೀಕಿ ಮಹರ್ಷಿಯು ಬರೆದಿಟ್ಟರು. ಅವರು ಹೀಗೆ ಬರೆದಿಟ್ಟದ್ದು ಶಿವನುಯುಗ ಕಳೆದು ಬಹುದಿನ ಗತಿಸಿದ ನಂತರ. ಅಷ್ಟೇ ಏಕೆ

ಬುದ್ಧನ ಯುಗದ ನಂತರ ಬಹಳ ದಿವಸಗಳಾದ ಮೇಲೆ. ಈ ಕುರಿತು ನಮ್ಮ ಬಳಿ ಎರಡು–ಮೂರು ಪ್ರಮಾಣಗಳಿವೆ. ಒಂದು ಪ್ರಮಾಣವೆಂದರೆ, ಯಾವ ಪುಸ್ತಕವು ಎಷ್ಟು ಹಳೆಯದೆಂಬುದು ಅದರ ಭಾಷೆಯ ಮೂಲಕ ಗೊತ್ತಾಗಬಹುದು. ಒಂದು ವೇಳೆ ಭಾಷೆಯು ನೂತನವಿದ್ದರೆ, ಆ ಪುಸ್ತಕವು ಸಹ ಹೊಸತಾಗಿರುತ್ತದೆ. 'ರಾಮಾಯಣ' ಅಂದರೆ, ವಾಲ್ಮೀಕಿ ಕೃತ ರಾಮಾಯಣದ ಭಾಷೆಯು ಹಳೆಯದೇನೂ ಅಲ್ಲ. ಇದನ್ನು ಸರಳ ಸಂಸ್ಕೃತ ಭಾಷೆಯಲ್ಲಿ ಬರೆಯಲಾಗಿದೆ. ಇಂಥ ಸರಳ ಸಂಸ್ಕೃತದಲ್ಲಿ ಬೌದ್ಧರ ಶಾಸ್ತ್ರಗಳನ್ನೂ ರಚಿಸಲಾಗಿತ್ತು. ಇನ್ನು ಎರಡನೆಯ ಪ್ರಮಾಣವೆಂದರೆ, ವಾಲ್ಮೀಕಿ–ರಾಮಾಯಣದಲ್ಲಿ ಬುದ್ಧನ ನಾಸ್ತಿಕವಾದದ ವಿರುದ್ಧ ಹೇಳಲಾಗಿದೆ.ಇದಲ್ಲದೆ, ಈ ಕಾರಣದಿಂದ ಬುದ್ಧನ ನಿಂದೆಯನ್ನು ಮಾಡಲಾಗಿದೆ. ನಾಸ್ತಿಕವಾದದ ಕಾರಣ ಬುದ್ಧನನ್ನು ಚೆನ್ನಾಗಿ ಹೀಯಾಳಿಸಲಾಗಿದೆ. ಅವನನ್ನು ಪಾಖಂಡಿ, ಕಳ್ಳ ಮತ್ತು ನಾಸ್ತಿಕ ಎಂದು ಕರೆಯಲಾಗಿದೆ. ಇದರಿಂದ, ರಾಮಾಯಣದ ರಚನೆಯು ಬುದ್ಧನ ನಂತರ ಆಗಿದೆ ಎಂಬುದು ಪ್ರಮಾಣಿತವಾಗುತ್ತದೆ. ಇದರಿಂದಾಗಿಯೇ ಬುದ್ಧನನ್ನು ಕುರಿತು ರಾಮಾಯಣದಲ್ಲಿ ಹೇಳಲಾಗಿದೆ. ಒಂದು ವೇಳೆ ರಾಮಾಯಣವನ್ನು ಬುದ್ಧನಿಗಿಂತ ಮೊದಲೇ ರಚಿಸಿದ್ದರೆ, ಬುದ್ಧನನ್ನು ಕುರಿತು ಅಲ್ಲಿ ಏನನ್ನೂ ಹೇಳುತ್ತಿರಲಿಲ್ಲ. ಅಯೋಧ್ಯಾಕಾಂಡವಲ್ಲಿಯೇ ಈ ಎಲ್ಲ ಮಾತುಗಳನ್ನು ಹೇಳಿದ್ದಾರೆ. ಏನೇ ಇರಲಿ, ಈ ಕುರಿತು ಇನ್ನಷ್ಟು ಹೇಳುವೆ. ಮಹಾಭಾರತವು ಪ್ರಾಚೀನ ಕಾಲದಿಂದ ಜಾನಪದ ನುಡಿಯಲ್ಲಿ ಬಂದಿಲ್ಲ. ಮಹಾಭಾರತದ ಘಟನೆಯು ಬಹುತೇಕ ಮೂರುವರೆ ಸಾವಿರ ವರುಷ ಮೊದಲಿನದಾಗಿದೆ. ಅಂದರೆ, ಕೃಷ್ಣನ ಸಮಯದ್ದಾಗಿದೆ. ಮತ್ತು ಅದೇ ಸಮಯ ಅಥವಾ ಅದಾದ ಬಳಿಕ ಕೆಲ ಸಮಯದ್ದಾಗಿರಬಹುದು. ಮತ್ತು ಅದೇ ಸಮಯ ಇಲ್ಲವೆ ಅದಕ್ಕಿಂತ ಸ್ವಲ್ಪ ಕಾಲ ಕಳೆದ ಮೇಲೆ ಮಹಾಭಾರತವು ಲಿಖಿತ ರೂಪ ತಾಳಿತು. ಮಹಾಭಾರತದಲ್ಲಿಯೂ ಸಹ ರಾಮಾಯಣದ ಸಾಮಾನ್ಯ ಉಲ್ಲೇಖವಿದೆ. ಈ ಉಲ್ಲೇಖವು ವಾಲ್ಮೀಕಿ ರಾಮಾಯಣದಲ್ಲಿ ಇಲ್ಲ. ಅದರೆ, ಆ ಕಾಲದಲ್ಲಿ ಪ್ರಚಲಿತವಿದ್ದ ಜನರ ಮುಖಪಾಠವಾಗಿದ್ದ ಪ್ರಚಲಿತ ರಾಮಾಯಣದಲ್ಲಿ ಇದೆ. ಏನೇ ಆಗಲಿ, ವಾಲ್ಮೀಕಿ ರಾಮಾಯಣದ ಕಾಲದಲ್ಲಿ ಮಾರ್ಕಂಡೇಯ ಪುರಾಣದ ಕಥೆಯು ಪ್ರಚಲಿತವಿರಲಿಲ್ಲ. ಮಾರ್ಕಂಡೇಯ ಪುರಾಣದಲ್ಲಿ ದುರ್ಗೆಯ ಕಥೆ ಹೇಳಲಾಗಿದೆ. ಪೌರಾಣಿಕ ಯುಗದಲ್ಲಿ ಶಾಕ್ತಾಚಾರದ ಆರಂಭವು ಆಗುತ್ತಿದ್ದಾಗ ಮಾರ್ಕಂಡೇಯ ಪುರಾಣವನ್ನು ರಚಿಸಿದ್ದರು. ಆ ಕಾಲಕ್ಕೆ ದುರ್ಗಾದೇವಿಯನ್ನು ಕೆಲವೆಡೆ ಎಂಟು ಕೈಯವಳೆಂದು, ಬೇರೆ ಹಲವೆಡೆ ಹತ್ತು ಕೈಯವಳೆಂದು, ಒಪ್ಪಿಕೊಂಡಿದ್ದರು. ಆದರೆ, ಅಂತಿಮವಾಗಿ ಅವಳಿಗೆ ಹತ್ತು ಕೈಗಳೆಂದು ಸಮರ್ಥಿಸಲಾಗಿತ್ತು. ಇವೆಲ್ಲ ಪುರಾಣಗಳ ಕಲ್ಪನೆಗಳಷ್ಟೇ. ಅದೇನೇ ಇರಲಿ, ವಾಲ್ಮೀಕಿ ರಾಮಾಯಣವು ರಚಿತವಾಗುವ ಕಾಲದ ವರೆಗೆ ಮಾರ್ಕಂಡೇಯ ಪುರಾಣದ ವಿಕಾಸವು ಆಗಿರಲಿಲ್ಲ.ಆ ಕಾಲಕ್ಕೆ ದುರ್ಗಾದೇವಿಯ ಕಥೆಯು ಸಹ ವಿಕಾಸವಾಗಿರಲಿಲ್ಲ. ಇದರಿಂದ ರಾಮಾಯಣದಲ್ಲಿ ರಾಮನು ದುರ್ಗಾದೇವಿಯ ಪೂಜೆಯ ಕಾಲಕ್ಕೆ ಒಂದು ನೂರಾಎಂಟು ನೀಲ ಕಮಲಗಳನ್ನು ಉಪಯೋಗಿಸುತ್ತಿದ್ದನೆಂದೂ, ಅದರಲ್ಲೊಂದು ಕಮಲವನ್ನೂ ದುರ್ಗಾದೇವಿಯು ಅಪಹರಿಸಿದಳೆಂದೂ ಎಂಬ ಕಥೆಗಳಾವವೂ ಆಗಿನ ಜನರಿಗೆ ತಿಳಿದಿರಲಿಲ್ಲ. ವಾಲ್ಮೀಕಿ ರಾಮಾಯಣದಲ್ಲಿಯೂ ಸಹ ಈ ಕುರಿತು ಯಾವ ಉಲ್ಲೇಖವೂ

ಇಲ್ಲ. ಇದಾದ ನಂತರ, ಮಾರ್ಕಂಡೇಯ ಪುರಾಣದ ಯುಗವು ಬಂದಿತು. ಇದನ್ನು ಆಧರಿಸಿ, "ಶ್ರೀ ಶ್ರೀಚಂಡಿ" ಗ್ರಂಥವನ್ನು ರಚಿಸಿದರು. ಪೌರಾಣಿಕ ಶಾಕ್ತಾಚಾರದ ಆವಿರ್ಭಾವವಾದಾಗ ಇರುವ ಶಕ್ತಿಯ ಆದಿಯಾದ ತಮಾವಸ್ಥೆಯನ್ನು ಸಂಸ್ಕೃತ ಭಾಷೆಯಲ್ಲಿ ಆದ್ಯಾಶಕ್ತಿ ಎಂದು ಕರೆಯುತ್ತಾರೆ ಎಂಬುದನ್ನು ನೀವು ನೆನಪಿನಲ್ಲಿಡಬೇಕು. ಪುಲ್ಲಿಂಗದಲ್ಲಿ ಆದಿ; ಸ್ತ್ರೀಲಿಂಗದಲ್ಲಿ ಆದ್ಯಾ. ಈ ಆದ್ಯಾಶಕ್ತಿಯ ಚಂಡ ರೂಪವನ್ನೇ ಚಂಡಶಕ್ತಿ ಇಲ್ಲವೆ ಚಂಡೀ ಎಂದು ಕರೆದಿದ್ದಾರೆ. ಇದನ್ನು ಹದಿಮೂರುನೂರು ವರುಷ ಹಿಂದಿನಿಂದ ಮಾತ್ರ ಕರೆಯುತ್ತ ಬಂದಿದ್ದಾರೆ. ಅದಕ್ಕಿಂತ ಪೂರ್ವದಲ್ಲಿ ಅಲ್ಲ. ಸಂಕ್ಷಿಪ್ತ ಮಾರ್ಕಂಡೇಯ ಪುರಾಣದ ಹೆಸರೇ ಚಂಡೀ. ಇದರಲ್ಲಿ ದೇವಿ ದುರ್ಗೆಯ ಕಥೆ ಇದೆ. ಸುರಥ ರಾಜನ ಕಥೆ ಇದೆ. ಅದರಲ್ಲಿಯೂ ಸಹ ರಾಮನ ಕಥೆಯಿಲ್ಲ. ರಾಮನು ದುರ್ಗಾದೇವಿಯ ಪೂಜೆ ಮಾಡಿದ ಕಥೆಯೂ ಸಹ ಇಲ್ಲ. ರಾಮನು ಯಾವುದೇ ವಾಸ್ತವ ವ್ಯಕ್ತಿಯಲ್ಲ; ಎಂಬುದನ್ನು ನೀವೆಲ್ಲರೂ ತಿಳಿದಿದ್ದೀರಿ. ರಾಮನು ಒಂದು ಕಲ್ಪಿತ ಪಾತ್ರ ಮಾತ್ರ. ಒಬ್ಬ ಆದರ್ಶ ಮಾನವನು ಹೇಗಿರಬೇಕು ಎಂಬುದರ ಕಲ್ಪನೆ ಮಾಡಲಾಗಿದೆ. ಮತ್ತು ಆ ಕಲ್ಪನೆಗೆ ಯಥಾಯೋಗ್ಯ ರೂಪವನ್ನು ನೀಡುವ ಪ್ರಯತ್ನವನ್ನು ವಾಲ್ಮೀಕಿ ಮಹರ್ಷಿ ಮಾಡಿದ್ದಾರೆ. ವಾಲ್ಮೀಕಿಗಿಂತ ಹೆಚ್ಚಿನ ಪ್ರಯತ್ನವನ್ನು ಮೊಗಲ ಕಾಗದ ಪ್ರಸಿದ್ಧ ಕವಿ ಶ್ರೀ ತುಲಸೀದಾಸರು ತಮ್ಮ ಅವಧೀ ಭಾಷೆಯಲ್ಲಿ ಬರೆದ 'ರಾಮಚರಿತ ಮಾನಸ'ದಲ್ಲಿ ಮಾಡಿದ್ದಾರೆ. ರಾಮಚರಿತ ಮಾನಸವು ಸಂಪೂರ್ಣ ರಾಮಾಯಣವೇನಲ್ಲ. ತುಲಸೀದಾಸನು ರಾಮಚರಿತ್ರೆಯನ್ನು ಕುರಿತು ಹೇಗೆ ಯೋಚಿಸಿದ್ದನೋ ಹಾಗೆಯೇ ಬರೆದನು. ಅಂದರೆ, ತುಲಸೀದಾಸನ ಮಾನಸಿಕ ಪರದೆಯ ಮೇಲೆ ರಾಮಚರಿತ್ರೆಯು ಯಾವ ಕಲ್ಪನೆಯನ್ನು ಅವನು ಮಾಡಿದನೋ, ಅದರ ಹೆಸರೇ 'ರಾಮಚರಿತ ಮಾನಸ'. ತುಲಸೀದಾಸರು ಸತ್ಯನಿಷ್ಠೆಯ ವ್ಯಕ್ತಿ. ಇವರಿಂದ ಅವರು ಪುಸ್ತಕದ ಹೆಸರನ್ನು 'ತುಲಸೀದಾಸೀಯ ರಾಮಾಯಣ' ಎಂದು ಇಡಲಿಲ್ಲ. ಅದರೆ ಅವರು ಅದನ್ನು 'ರಾಮಚರಿತ ಮಾನಸ'ದಲ್ಲಿಯೂ ಸಹ, ರಾಮನ ಮೂಲಕ ನಡೆದ ದುರ್ಗಾಪೂಜೆಯ ಯಾವ ಉಲ್ಲೇಖವೂ ಇಲ್ಲ. ಅಂದ ಮೇಲೆ ರಾಮನು ದುರ್ಗಾಪೂಜೆ ನಾಡಿದ್ದನೆಂಬುದು ಎಲ್ಲಿ ಸಿಗುತ್ತದೆ? ಪಠಾಣಯುಗದ ಆರಂಭ ಕಾಲದಲ್ಲಿ ವಾರೇಂದ್ರಭೂಮಿ ಎಂದರೆ, ಉತ್ತರ ಬಂಗಾಲದಲ್ಲಿ ರಾಜಶಾಹೀ ಜಿಲ್ಲೆಯ ತಾಹೇರಪುರದ ಒಬ್ಬ ರಾಜನಿದ್ದನು. ಅವನ ಹೆಸರು ಕಂಸ ನಾರಾಯಣ ರಾಯ ಎಂದಿತ್ತು. ಅದೇನೇ ಇರಲಿ, ಆ ಕಂಸ ನಾರಾಯಣನ ಬಳಿ ಬಹಳಷ್ಟು ಹಣ ವಿತ್ತು. ಅವನು ಬಹುದೊಡ್ಡ ಜಮೀನುದಾರನೂ ಆಗಿದ್ದನು. ಅವನು ತನ್ನ ಕಾಲದ ಪಂಡಿತರನ್ನೆಲ್ಲ ಕರೆದು ನಾನು 'ರಾಜಸೂಯ' ಇಲ್ಲವೆ 'ಅಶ್ವಮೇಧ' ಯಜ್ಞವನ್ನು ಮಾಡಬಯಸಿರುವೆ. ಜನರಿಗೆ ನನ್ನ ಬಳಿ ಇಷ್ಟೊಂದು ಹಣ ಮತ್ತು ಐಶ್ವರ್ಯವಿದೆ, ನಾನು ಎರಡೂ ಕೈಗಳಿಂದ ದಾನ ಮಾಡಬಯಸುವೆ. ಎಂಬುದು ಜನರಿಗೆ ತಿಳಿಯಲಿ ಎಂದು ಅವನು ಹೇಳಿದನು. ಇದನ್ನುಕೇಳಿ ಪಂಡಿತರು ಈ ಕಲಿಯುಗದಲ್ಲಿ ಅಶ್ವಮೇಧ, ರಾಜಸೂಯ ಯಜ್ಞಗಳನ್ನು ನಡೆಸುವುದು ಶಕ್ಯವಿಲ್ಲವೆಂದು ಹೇಳಿದರು. ಈ ಕಾರಣ

ದಿಂದ, ಮಾರ್ಕಂಡೇಯ ಪುರಾಣದಲ್ಲಿ ಇರುವ ದುರ್ಗಾಪೂಜೆಯ ಕಥೆ, ಮತ್ತು ದುರ್ಗೋತ್ಸವದ ಕತೆಗಳಲ್ಲಿ ಬಹಳಷ್ಟು ಖರ್ಚು ಮಾಡುತ್ತಾರೆ. ಬಹಳಷ್ಟು ದೀಪ ಬೆಳಗುತ್ತಾರೆ ಸ್ವಂತ ಐಶ್ವರ್ಯವನ್ನೂ ಜನರಿಗೆ ತೋರಿಸಬಹುದು. ತಾವು ಸಹ ಮಾರ್ಕಂಡೇಯ ಪುರಾಣದಂತೆ ದುರ್ಗಾಪೂಜೆ ಮಾಡಿರಿ. ಎಂದು ಹೇಳಿದರು. ಆ ಕಾಲಕ್ಕೆ ಕಂಸ ನಾರಾಯಣರಾಯನು ಅಂದಿನ ಏಳು ಲಕ್ಷ ಸ್ವರ್ಣ ಮುದ್ರೆಗಳನ್ನು ಖರ್ಚು ಮಾಡಿ ದುರ್ಗಾಪೂಜೆಯನ್ನು ನೇರವೇರಿಸಿದ್ದನು. ಈ ಪ್ರಕಾರ ಈ ವೈಭವದ ದುರ್ಗಾಪೂಜೆಯು ಬಹಳ ಹಿಂದಿನ ಕಾಲದ ಘಟನೆಯೇನೂ ಅಲ್ಲ ಎಂಬುದನ್ನು ನೀವು ತಿಳಿಯಬಲ್ಲಿರಿ. ಇದು ಪಠಾಣ ಕಾಲದ ಆರಂಭದ ಮಾತಷ್ಟೇ. ಇದಕ್ಕಿಂತ ಹೆಚ್ಚಾಗಿ ಕಣ್ಣು ಕುಕ್ಕಿಸುವಂತೆ ಏಕಟಾಕಿಯಾದ (ಏಕ ಟಾಕಿಯ ಜಾಗೆಯು ರಂಗಪುರ ಜಿಲ್ಲೆಯಲ್ಲಿದೆ.) ಜಗತ್‌ವಲ್ಲಭರಾಜನು ಉರ್ಫ್ ಜಗತ್‌ನಾರಾಯಣ ರಾಜ್ಯನು ಎಂಟೂವರೆ ಲಕ್ಷ ಸ್ವರ್ಣಮುದ್ರೆಗಳನ್ನು ವ್ಯಯಿಸಿ, ಇನ್ನೊಂದು ದೊಡ್ಡ ದುರ್ಗಾಪೂಜೆಯನ್ನು ಮಾಡಿದನು. ಅದನ್ನು ಕಂಡು ಬೇರೆ ಜಮೀನುದಾರರು ಸಹ ನಾವೇನು ಕಡಿಮೆ? ನಾವು ಸಹ ಹಣದ ಆಟ ತೋರಿಸಬಲ್ಲೆವು; ಎಂದು ತೋರಿಸಿದರು. ಅವರೂ ಸಹ, ಬಹುದೊಡ್ಡ ವೈಭವ, ವಿಜೃಂಭಣೆಗಳಿಂದ ದುರ್ಗಾಪೂಜೆಯನ್ನು ಆರಂಭಿಸಿದರು. ಈ ರೀತಿ ಪ್ರತಿಯೊಬ್ಬ ಜಮೀನುದಾರನ ಮನೆಯಲ್ಲಿ ದುರ್ಗಾಪೂಜೆಯು ಆರಂಭವಾಯಿತು. ಈ ತೆರನಾಗಿ ಪೂಜೆಯು ಪಸರಿಸಿತು ಮತ್ತು ಎಲ್ಲರ ಮನೆಯ ಪೂಜೆಯಾಯಿತು. ಆ ಕಾಲಕ್ಕೆ ಹುಗಳಿ ಜಿಲ್ಲೆಯ ಬಾಲಾಘಡ ಪೋಲೀಸ್ ಠಾಣೆಯಲ್ಲಿ ಗುಪ್ತಿಪಾಡಾದ (ಜಾಗೆಯ ನಿಜವಾದ ಹೆಸರು ಗುಪ್ತ ಬೃಂದಾವನ) ಹನ್ನೆರಡು ಜನ ಗೆಳೆಯರು ಸೇರಿ ವಿಚಾರಿಸಿದರು. ಏನೆಂದರೆ, ನಾವೆಲ್ಲರೂ ಒಬ್ಬಂಟಿಗರಾಗಿ ಪೂಜೆಯನ್ನು ಮಾಡಲಾರೆವು. ಹನ್ನೆರಡು ಜನ ಸೇರಿದರೆ ಮಾತ್ರ ಪೂಜೆಯ ವ್ಯವಸ್ಥೆಯನ್ನು ಮಾಡಬಲ್ಲೆವು. ಉರ್ದು ಭಾಷೆಯಲ್ಲಿ ಮಿತ್ರನಿಗೆ, "ಯಾರ್" ಎಂದು ಕರೆಯುತ್ತಾರೆ. ಈ ಕಾರಣದಿಂದ, ಹನ್ನೆರಡು "ಯಾರರು" (ಮಿತ್ರರು) ಸೇರಿ ಯಾವ ಪೂಜೆಯನ್ನು ಮಾಡಿದರೋ, ಅದನ್ನು "ಬಾರಹಾ ಯಾರೀ ಪೂಜಾ" ಎನ್ನಲಾಯಿತು. ಮತ್ತು ಬಾರಹಾ ಯಾರೀ ಪೂಜೆಯಲ್ಲಿ ಅಂತ್ಯಜನಿಗೆ ಅಂಜಲಿ ನೀಡುವ ಅಧಿಕಾರವಿರುತ್ತಿರಲಿಲ್ಲ. ಈ ಕಾರಣದಿಂದ, ಎಲ್ಲ ಜನರಿಗೂ ಅಧಿಕಾರ ಸಿಗಲಿ; ಎಂದು ಈ ಬಾರಹಾ ಯಾರೀ ಪೂಜೆಯನ್ನು ಸಾರ್ವಜನಿಕ ಪೂಜೆಯಲ್ಲಿ ಪರಿವರ್ತಿಸಲಾಯಿತು. ಇದರಲ್ಲಿ ಸರ್ವಜನರಿಗೂ ಸಮಾನ ಅಧಿಕಾರ ಸಿಗುತ್ತದೆ. ಅದೇನೇ ಇರಲಿ, ದುರ್ಗಾಪೂಜೆಯು ಪಠಾಣಯುಗದ ಆರಂಭವಸ್ತುವಷ್ಟೇ. ಬಂಗಾಳೀ ಭಾಷೆಯಲ್ಲಿ ಕೃತ್ತಿವಾಸ ಠಾಕೂರ ಕವಿಯು ರಾಮಾಯಾಣವನ್ನು ರಚಿಸಿದ್ದರು. ಆ ಕಾಲಕ್ಕೆ ಹುಸೇನ ಶಾಹನು ಬಂಗಾಲದ ನವಾಬನಾಗಿದ್ದನು. ಹುಸೇನ ಶಾಹನು ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿದ್ದನು. ಅವನು ಬಂಗಾಲೀ ಭಾಷೆಯಲ್ಲಿ ಒಳ್ಳೊಳ್ಳೆಯ ಪುಸ್ತಕ ರಚನೆಯಾಗಲಿ ಮತ್ತು ಜೊತೆಜೊತೆಗೆ ಸಂಸ್ಕೃತ ಪುಸ್ತಕಗಳ ಅನುವಾದವೂ ಬಂಗಾಳೀ ಭಾಷೆಯಲ್ಲಿ ಆಗಲಿ; ಎಂಬ ಉದ್ದೇಶಕ್ಕೋಸುಗ ಅವನು ಅತ್ಯಂತ ಪ್ರಯತ್ನಶೀಲನಾಗಿರುತ್ತಿದ್ದನು. ಅವನ ಪ್ರೋತ್ಸಾಹದಿಂದಾಗಿಯೇ ಕೃತ್ತಿವಾಸ ಕವಿಯು ಬಂಗಾಳೀ ಭಾಷೆಯಲ್ಲಿ ರಾಮಾಯಣವನ್ನು ರಚಿಸಿದನು. ಆ ಕಾಲಕ್ಕೆ ಬಂಗಾಳದ ಜಮೀನುದಾರರಲ್ಲಿ ದುರ್ಗಾಪೂಜೆಯು ಪ್ರಚಲಿತವಾಗಿತ್ತು. ಈ ದುರ್ಗಾಪೂಜೆಗೆ ಇನ್ನೂ ಹೆಚ್ಚಿನ ಮಹತ್ವ ನೀಡಲೋಸುಗ ಅವನು ತಾನು ಬರೆದ ರಾಮಾಯಣದಲ್ಲಿ ರಾಮನ ಮೂಲಕ ದುರ್ಗಾಪೂಜೆಯ ವರ್ಣನೆಯನ್ನು ವರ್ಣಿಸಿದ್ದಾನೆ. ಇದೆಲ್ಲದರ ಕುರಿತು ಯಾವುದೇ ಐತಿಹಾಸಿಕ ತಥ್ಯವೂ ಸಹ ಇಲ್ಲ. ಮೇಲಾಗಿ ಇದು ಬಹಳ ಹಿಂದಿನ ಮಾತಂತೂ ಅಲ್ಲ. ಕೇವಲ ಪಠಾಣಯುಗದ ಮಾತಷ್ಟೇ. ಈ ಪ್ರಕಾರ ರಾಮನು ಯಾವ ದುರ್ಗಾಪೂಜೆಯನ್ನು ಮಾಡಿದನೋ, ಆ ಕಥೆಯು ಬಂಗಾಲದಲ್ಲಿ ಕೃತ್ತಿವಾಸನ ರಾಮಾಯಣದಿಂದ ಆರಂಭವಾಯಿತು. ಈ ಪ್ರಕಾರ ಇದುವರೆಗೆ, ಜೈನತಂತ್ರ, ಬೌದ್ಧತಂತ್ರ, ಶಿವೋತ್ತರ ತಂತ್ರಗಳನ್ನು ಕುರಿತು ಏನನ್ನು ಹೇಳಿರುವೆನೋ ಆ ವಿಷಯ ಕುರಿತು ಅನಂತರ ಇನ್ನಷ್ಟು ಚರ್ಚಿಸುವೆ. ಇದಾರ ಬಳಿಕ ಬಂದ ಪುರಾಣದ ಕಾಲವು ಹದಿಮೂರುನೂರು ವರುಷಗಳಿಗಿಂತ ಹೆಚ್ಚು ಹಿಂದಿನದಾಗಿರಲಿಲ್ಲ. ಇದರ ಆಧಾರದ ಮೇಲೆ ಪೌರಾಣಿಕ, ಶಾಕ್ತಾಚಾರ, ಶೈವಾಚಾರ, ವೈಷ್ಣವಾಚಾರ–ಗಾಣಪತ್ಯಾಚಾರ ಮತ್ತು ಸೌರಾಚಾರಗಳ ವಿಕಾಸವಾಯಿತು.

ಕಲಕತ್ತಾ: ೩೦ ಮೇ ೧೯೮೨

ಪ್ರವಚನ ೭

ಶಿವನ ಸಮ್ಮಾನದಲ್ಲಿಯೇ ಸರ್ವರ ಸಮ್ಮಾನವಿದೆ

(ಭಾಗ–೨)

ಶಿವನ ಅಸಾಮಾನ್ಯ ವೈದುಷ್ಯ, ನೈಪುಣ್ಯ, ಮಾನವಪ್ರೀತಿ ಮುಂತಾದ ಸಕಲ ವಿಷಯಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ವಿಚಾರಿಸಿದಾಗ, ಅಂದಿನ ಸಾಧಕರಿಗೆ ಶಿವನು ಮನುಷ್ಯ ಶರೀರ ಧರಿಸಿದ. ಮನುಷ್ಯ ಮಾತ್ರನೇ ಅಲ್ಲ; ಆದರೆ, ಅವನು ತಾರಕ ಬ್ರಹ್ಮನೇ ಆಗಿದ್ದಾನೆ. ಎಂದು ಮನದಟ್ಟಾಯಿತು. ಈ ವಿಚಾರವು ಆ ದಿನಗಳಲ್ಲೇ ಮೂಡಿ ಜಾಗ್ರತವಾಯಿತು. ಆದರೆ, ಆ ಬಳಿಕ ಅದಕ್ಕೊಂದು ರೂಪ ನೀಡ ಲಾಯಿತು. ಶಿವನು ಪರಮಪುರುಷನಾಗಿದ್ದಾನೆ; ತಾರಕ ಬ್ರಹ್ಮನಾಗಿದ್ದಾನೆ ಎಂಬ ವಿಚಾರವಿದೆ.

ಈ ಪರಮ ಪುರುಷ ಮತ್ತು ಪರಮ ಪ್ರಕೃತಿಯರನ್ನು ಹಿಡಿದೇ ಬ್ರಹ್ಮನಿದ್ದಾನೆ; ಎಂಬ ವಿಚಾರವು ಮಾನವ ಮನದಲ್ಲಿ, ವಿಶೇಷವಾಗಿ ಸಾಧಕರ ಮನದಲ್ಲಿ ಮೂಡಿತ್ತು. ಆ ಮೇರೆಗೆ ಬ್ರಹ್ಮನ ಉಜ್ವಲ ಘನ ಅಭಿವ್ಯಕ್ತಿಯು ತಾರಕ ಬ್ರಹ್ಮನಾದ ಶಿವನದೇ ಆಗಿತ್ತು. ಈ ವಿಚಾರಕ್ಕೆ ಬಹುಕಾಲ ಸಂದ ಬಳಿಕ ಬೌದ್ಧ ತಂತ್ರ, ಜೈನ ತಂತ್ರ ಮತ್ತು ಶಿವೋತ್ತರ ತಂತ್ರಗಳಲ್ಲಿ ಹೆಚ್ಚಿನ ಪುಷ್ಟಿ ದೊರೆಯಿತು. 'ಶಿವಶಕ್ತ್ಯಾತ್ಮಕಂ ಬ್ರಹ್ಮ'ದ ಅನುಭವವು ಅವರಿಗಾಯಿತು. ಕೇವಲ ಸಾಧಕರು ಮಾತ್ರ ಸಾಧನೆಯ ಊರ್ಧ್ವಸ್ತರ ತಲುಪಿ ಪಡೆಯುವ ಅನುಭವವೆಂದರೆ "ತ್ವಮೇಕೋ ದ್ವಿತ್ವಮಾಪನ್ನೋ ಶಿವಶಕ್ತಿ ವಿಭಾಗಶಃ" ಎಲೈ ಪರಮ ಪುರುಷ! ನೀನು ಒಬ್ಬನೇ ಇರುವಿ. ನೀನೇ ಪ್ರಜ್ಞಾ ರೂಪದಲ್ಲಿ ಎಲ್ಲವನ್ನೂ ಈಕ್ಷಿಸುತ್ತಿರುವೆ. ನೀನೇ ಶಕ್ತಿಯ ರೂಪದಲ್ಲಿ ಎಲ್ಲ ವನ್ನೂ ಮಾಡುತ್ತಿರುವೆ. ನೀನೇ ಒಂದು ಕೈಯಿಂದ ದುಃಖವನ್ನು ನೀಡುತ್ತಿರುವೆ, ಮತ್ತು ಇನ್ನೊಂದು ಕೈಯಿಂದ ದುಃಖಾಶ್ರುಗಳನ್ನು ಒರೆಸುತ್ತಿರುವೆ. ನೀನೇ ಕಠೋರ ನುಡಿಗಳಿಂದ ತಿರಸ್ಕರಿಸುತ್ತಿರುವೆ: ಮರಳಿ ನಿನ್ನ ಬಳಿ ಕುಳ್ಳರಿಸಿಕೊಂಡು ಪ್ರೀತಿಸುತ್ತಿರುವೆ. ಎರಡರಲ್ಲೂ ಇರುವವನು ನೀನೊಬ್ಬನೇ. ಈ ಎರಡರಿಂದಲೂ ನೀನು ಸಂಪೂರ್ಣನಾಗಿ ರುವೆ. ನಿನ್ನ ಒಂದು ಭೂಮಿಕೆಯು ಇನ್ನೊಂದು ಭೂಮಿಕೆಗೆ ಪೂರಕವೇ ಆಗಿದೆ.

೧. ಕತ ಏಲೆಮ ಜಾನರೇ ಬಾಂದಾ ಕತ ಜೇ ಕುದರತಕರ;
(ಆರ್) ಹಾಪ (ಸಾಪ) ಹಣಿಯಾ ಕಾಟರೇ ಬಾಂದಾ

೨. ಓಹ್ಗಾ ಹಣಿಯಾ ಹ್ಗಾ ಡೊ
ಕತ ಕೇರಾಮತ ಜಾನ ರೇ ಬಾಂದಾ ಕತ ಕೇರಾಮತ ಜಾನ
ಮಾಹ್ಗು ದರಿಯಾಯ ಜಾಲ ಫೇಲಾಣಿಯಾ ಡದಾಯ ವೈಶ್ಯಾಟಾನ
ಏಕಓರ ಪ್ರಜ್ಞಾ ಶಕ್ತಿಹೈ ಔರ ದುಸರೀ ಓರ ಕ್ರಿಯಾ ಶಕ್ತಿ ಹೈ

೩. ಸತ್ಯಲೋಕೇ ನಿರಾಕಾರಾ ಮಹಾಜ್ಯೋತಿ ಸ್ವರೂಪಿಣೀ
ಮಾಯಾಚ್ಛಾದಿತಾತ್ಮಾನಂ ಜನಕಾ ಕಾರ ರೂಪಿಣೀ
ಮಾಯಾ ವಲ್ಕಲಂ ಸತ್ಯಜ ದ್ವಿಧಾಭಿನ್ನಾ ಯದೋನ್ಮುಖೀ
ಶಿವಶಕ್ತಿ ವಿಭಾಗೇನ ಜಾಯತೇ ಸೃಷ್ಟಿ ಕಲ್ಪನಾ.

೧. ಅರಿಯಲಳವೆ ನಿನ್ನ ಗುಣಗಳಿಹವು ಅಗಣಿತ,
ಎನಿತು ವ್ಯಕ್ತಗೊಳುವ ಸರಿಯ ಕಂಡು ವಿಸ್ಮಿತ;
ಹಾವು ಆಗಿ ಕಚ್ಚುತಿರುವೆ ಚುಚ್ಚಿ ವಿಷವನು,
ಹಾವುಗಾರನಾಗಿ ನೀನೆ ಕೊಡುವೆ ಮದ್ದನು.

೨. ಅಬ್ಬ; ಎಣಿಸಲಳವೆ ನಿನ್ನ ಸಾಹಸ;
ಅಬ್ಬ; ಎಣಿಸಲಳವೆ ನಿನ್ನ ಸಾಹಸ;
ಬೀಸುತಿರುವೆ ಜಾಲವನ್ನು ಜಲಧಿಗೆ
ಎಳೆಯು ತಿರುವೆ ಮರಳಿ ಅದನೆ ಮೆಲ್ಲಗೆ;
ನೀನು ಜ್ಞಾನೈಶಕ್ತಿಯೂ ಆಗಿರುವೆ. ನೀನೇ ಕ್ರಿಯಾಶಕ್ತಿಯೂ ಆಗಿರುವೆ.
ಸತ್ಯಲೋಕ ನಿರಾಕಾರಿ ಮಹಾಜ್ಯೋತಿ ರೂಪಿಯು,
ಮಾಯೆ ಮುಸುಕಿ ಇರುವೆ ಧಾನ್ಯದೊಳಗೆ ಮೊಳಕೆ ರೂಪಿಯು.
ಮಾಯೆ ಮುಸುಕ ಸರಿಯೆ ಬೇಳೆಯೆರಡು ಭಿನ್ನವಾಯಿತು,
ಮಾಯೆ ಹರಿಯೆ, ವಿಭಜಿಸಿ ಶಿವ ಶಕ್ತಿ, ಸೃಷ್ಟಿಯಾಯಿತು.

ಶಿವನ ಕಾಲಾನಂತರ ಐದು ಸಾವಿರ ವರುಷ ಗತಿಸಿದ ಬಳಿಕ; ಒಂದೇ ಆಧಾರದಲ್ಲಿ ಶಿವ–ಶಕ್ತಿಯರಿರವಿನ ವಿಚಾರವು ರೂಪುಗೊಂಡಿತು. ಈ ವಿಚಾರಕ್ಕೆ ಅರ್ಧನಾರೀಶ್ವರ ಶಿವ ಎಂದು ಒಪ್ಪಿಕೊಳ್ಳಲಾಯಿತು. ಶಿವನು ಓರ್ವನೇ. ಅವನ ಬಲಪಾರ್ಶ್ವವು ಶಿವ ನಂತೆಯೇ ಇದೆ; ಆದರೆ ಎಡ ಭಾಗವು ಶಕ್ತಿಯ ಹಾಗೆ. ಪಾರ್ವತಿಯ ಹಾಗೆ ಇದೆ. ಒಂದು ಕಡೆಗೆ ಬಿಳಿದು, ಇನ್ನೊಂದೆಡೆ ಗೌರವರ್ಣ. ಒಂದೆಡೆ ಹುಲಿಯ ಚರ್ಮ; ಇನ್ನೊಂದು ಕಡೆಗೆ ರೇಶಿಮೆ ವಸ್ತ್ರ. ಒಂದೆಡೆಗೆ ಹೆಡೆ ಬಿಚ್ಚಿದ ನಾಗ; ಇನ್ನೊಂದೆಡೆಗೆ ಗೌರಿಯ ಮುಡಿ ಬಿಚ್ಚಿದ ಜಡೆ. ಇದುವೇ ಅರ್ಧ ನಾರೀಶ್ವರ ಶಿವ. ಎರಡರ ಮೇಳದಿಂದ "ಶಿವ– ಶಕ್ತ್ಯಾತ್ಮಕಂ ಬ್ರಹ್ಮ". ಅರ್ಧನಾರೀಶ್ವರ ಶಿವನ ಕಲ್ಪನೆಯು "ಶಿವಶಕ್ತ್ಯಾತ್ಮಿಕಂ ಬ್ರಹ್ಮ" ಸೂತ್ರದ ತಳಹದಿಯ ಮೇಲಿದೆ ಆ ಕಾಲಕ್ಕೆ "ಆನಂದ ಸೂತ್ರಮ್" ರಚಿಸಿರಲಿಲ್ಲ. ಆದರೆ ಈ ಕಲ್ಪನೆಯು ಸಾಧಕರ ಮನದಾಳದಲ್ಲಿ ಮೂಡಿಬಂದಿತ್ತು. ಈ ಅರ್ಧನಾರೀಶ್ವರ ಶಿವನು ಶೈವತಂತ್ರ ಯುಗದಲ್ಲಿ ಇರಲಿಲ್ಲ. ಅವನು ಶಿವೋತ್ತರ ತಂತ್ರ ಕಾಲದಲ್ಲಿ ರೂಪು ಗೊಂಡನು. ಆನಂತರ ಪೌರಾಣಿಕ ಶಿವಾಚಾರದಲ್ಲಿ ಸ್ವೀಕೃತನಾದನು. ಮತ್ತು ಇನ್ನೂ ಮುಂದಿನ ಕಾಲದಲ್ಲಿ ಬರು–ಬರುತ್ತ ಲುಪ್ತವಾಗಿ ಬಿಟ್ಟನು. ಜನಮನದಲ್ಲಿ ಈ ವಿಚಾರಕೆ

ಪೂರ್ಣ ವಿರಾಮ ಬಿದ್ದಿತು. ವರ್ಧಮಾನ ಪಟ್ಟಣದ ಪಶ್ಚಿಮಕ್ಕೆ ವರ್ಧಮಾನ–ಗುಸಕರಾ ರಸ್ತೆಯ ಮೇಲೆ ಒಂದು ನೂರಾ ಎಂಟು ಶಿವಮಂದಿರಗಳಿವೆ. ಅವುಗಳಲ್ಲೊಂದು ಮಂದಿರದಲ್ಲಿ ನಾನು ಅರ್ಧನಾರೀಶ್ವರ ಶಿವನ ಮೂರ್ತಿಯನ್ನು ನೋಡಿದ್ದೆನು. ಈ ಅರ್ಧನಾರೀಶ್ವರ ಶಿವನು ಒಂದು ದಾರ್ಶನಿಕ ಕಲ್ಪನೆಯಾಗಿದೆ. ಶಿವ–ಶಕ್ತಿಯರೊಡಗೂಡಿ, ಪ್ರಜ್ಞೆ ಮತ್ತು ಎನರ್ಜಿ (energy) ಸೇರಿ, ಕಾರ್ಯ ನಿರ್ವಹಣೆ ನಡೆದಿದೆ. ಎನರ್ಜಿಯು ಒಂದು ಅದ್ಯಾಶಕ್ತಿಯಾಗಿದೆ; ಕುರುಡು ಶಕ್ತಿಯಾಗಿದೆ. ಓರ್ವ ಚಿಕ್ಕ ಬಾಲಕನಿಗೆ ವಿದ್ಯುತ್ತಿನ ಸೊಡರು ತಟ್ಟಿದೊಡನೆ ಅವನು ಸಾಯುತ್ತಾನೆ. ಏಕೆಂದರೆ ವಿದ್ಯುತ್ತು ಒಂದು ಎನರ್ಜಿಯಾಗಿದೆ. ಅದು ಕುರುಡು ಶಕ್ತಿಯಾಗಿದೆ. ಇದು ಚಿಕ್ಕ ಬಾಲಕ ಎಂಬ ಭಾವನೆ ಅದರಲ್ಲಿ ಇಲ್ಲ. ಅದರಲ್ಲಿ ಜ್ಞಾನವು ಅಂಕುರಿಸಿಲ್ಲ. ವಿದ್ಯುತ್ತಿನೊಂದಿಗೆ, ಅರ್ಘಾತ್ ಎನರ್ಜಿಯೊಂದಿಗೆ, ಪ್ರಜ್ಞೆಯೂ ಮೇಳವಿಸಬೇಕಾದ ಅಗತ್ಯವಿದೆ. ಪ್ರಜ್ಞೆಯ ಸಮರ್ಥನೆಯು ತುಂಬಾ ಅಗತ್ಯದ್ದಾಗಿದೆ. ಈ ಕುರುಡು ಶಕ್ತಿಗೆ ಚೈತನ್ಯದ ಸಮರ್ಥನೆ ಇಲ್ಲವಾದರೆ, ಆ ಕುರುಡು ಶಕ್ತಿಗೆ ಚೈತನ್ಯದ ಸಮರ್ಥನೆ ಇಲ್ಲವಾಗಿ, ಅದು ಹಾನಿಕಾರಿಯಾಗಬಹುದಾಗಿದೆ. ಈ ಕಾರಣ, ಶಕ್ತಿಯ ಕುಣಿತವೆಲ್ಲ ಶಿವನ ಎದೆಯ ಮೇಲಷ್ಟೇ. ಶಿವನ ಎದೆಯ ಹೊರಗೇನಾದರೂ ಶಕ್ತಿಯು ಕಾಲಿರಿಸಿದರೆ ತೀರಿತು; ಅನರ್ಥ ಕಟ್ಟಿಟ್ಟಬ್ದು ಈ ಪ್ರಕಾರ ಈ ಶಿವ–ಶಕ್ತಿಯರ ಮೂಲಕ ಸೃಷ್ಟಿಗೊಂಡ ಜಗತ್ತಿನ ರೂಪವೇ ಅರ್ಧನಾರೀಶ್ವರ ಶಿವ. ಅಲ್ಲಿ ಶಿವನು ಕೇವಲ ಪ್ರಜ್ಞಾಘನ ಸತ್ತೆಯಾಗಿದ್ದಾನೆ. ಎಲ್ಲವನ್ನೂ ತನ್ನ ಪ್ರಜ್ಞಾ ಶಕ್ತಿಯ ಮೂಲಕ ನೋಡುತ್ತ ಸಾಗಿದ್ದಾನೆ. ಪ್ರಜ್ಞೆಯ ಮೂಲಕ ಶಕ್ತಿಯ ಕುಣಿತವನ್ನು ನಿಯಂತ್ರಿಸುತ್ತ ನಡೆದಿದ್ದಾರೆ. ಅದರ ತನ್ನ ಸ್ವಾಭಾವಿಕ ಋಜುತ್ವದಿಂದ ಸ್ವಾಭಾವಿಕ ಸರಳತೆ ಮತ್ತು ಜಗತ್ ವಾತ್ಸಲ್ಯಗಳ ಮೂಲಕ ನಿಯಂತ್ರಿತನಾಗುತ್ತದೆ.

ಕೀ ಏ ನಿರುಪಮ ಶೋಭಾ ಮನೋರಮ
ಹರ ಗೌರೀ ಏಕ ಶರೀರೇ
ಶ್ವೇತ ಪೀತ ಕಾಯ ರಾಂಗಾ ದುಟಿ ಪಾಯ
ಭಾವಟಿ ಭಾವಿಯಾ ಮರಿ ರೇ.
ಆಧ–ಬಾಘ ಭಾಲ ಅಂಗೇ ವಿರಾಜೇ ಆಧ ಪಟಾಂಬರ ಮೋಹನ ಸಾಜೇ
ಆಧ ಫನೀ ಫನಾ ಭರಿ ರೇ
ಏನಿತೋ ನಿರುಪಮ ಶೋಭಾ ಮನೋರಮ.
ಒಂದೇ ದೇಹದಿ ಹರ–ಗೌರೀ
ಒಂದಿದೆ ಶ್ವೇತ; ಒಂದೆ ಪೀತ.
ಪಾದದ ದರ್ಶನ ಹರುಷಕರಿ.

* * *

ಹುಲಿದೊಗಲೇ ಅರ್ಧಕೆ ಅಂದ
ಪಟ ಅಂಬರ–ವರ್ಧಕೆ ಚೆಂದ
ಶೋಭೆಯು ತಲೆಗೆ ನಾಗರ ಭಾರೀ.

ಅವನು ಸರ್ವರ ಕಲ್ಯಾಣವನ್ನು ಬಗೆಯುತ್ತಾನೆ. ಆದ್ದರಿಂದ ಅವನು ಹೀನ ಕಾರ್ಯ ಮಾಡಲು ಶಕ್ತಿಗೆ ಅನುವು ಮಾಡಿಕೊಡನು. ಶಕ್ತಿಯನ್ನು ನಿಯಂತ್ರಣದಲ್ಲಿ ಇರಿಸಿಕೊಳ್ಳುವಾಗ ಶಿವನ ಸರಳತೆ, ಸಾಧುತ್ವಗಳಾವವೂ ಕ್ಷೀಣವಾಗವು; ಆಗುವುದೂ ಇಲ್ಲ. ಶಕ್ತಿ–ಶಿವರ ಛೇದಿಸಲಿಕ್ಕಾಗದ ಸಂಪರ್ಕದಲ್ಲಿ, ಶಿವನು ಸಂಪೂರ್ಣವಾಗಿ ಸರಳನಾಗಿದ್ದಾನೆ. ಏಕೆಂದರೆ, ಅಭಿವ್ಯಕ್ತಿಯ ಯಾವುದೇ ಕ್ಷೇತ್ರದಲ್ಲಿ ಒಂದಿನಿತೂ ಜಟಿಲತೆಯಿರದು. ಶಿವನು ಶಕ್ತಿಯನ್ನು ನಿಯಂತ್ರಿಸುವಲ್ಲಿ ಸಹ ಸರಳನೇ ಅಗಿರುತ್ತಾನೆ. ಜಟಿಲನಾಗಿಲ್ಲ. ಅಂದರೆ ಜೀವನದ ಚಿಕ್ಕದೊಡ್ಡ ಮನೆತನದ, ಸಾಮಾಜಿಕ ಮುಂತಾದ ಕ್ಷೇತ್ರಗಳಲ್ಲಿ ಶಿವನು ತನ್ನ ಸರಳತೆಯನ್ನು ಬಿಡನು. ಮೇಲಾಗಿ, ತನ್ನ ಕರ್ತವ್ಯವನ್ನೂ ಜೊಕ್ಕಟವಾಗಿ ನಿರ್ವಹಿಸುತ್ತಾನೆ. ಶಿವನ ಲಗ್ನ ಕುರಿತು ಹೇಳುವಾಗ, ಅವನು ಅಲ್ಲಿಯೂ ಸಹ ತನ್ನ ಸರಳತೆಯನ್ನು ತ್ಯಜಿಸಲಿಲ್ಲ; ಎಂದೇ ಹೇಳಲಾಗಿದೆ.

"ಜವೇ ವಿವಾಹೇ ಚಲಿಲೋ ವಿಲೋಚನ,
ಉಗೋ ಮರನ, ಹೇಮೋರಮರಣ
ತಾರ ಕತ ಮತ ಛಿಲ ಆಯೋಜನ, ಛಿಲ ಕತಶತ ಉಪಕರಣ.
ತಾರ ಲಟ–ಪಟಕೊ ಬಾಘಛಾಲ ತಾರ ವೃಷ ರಹಿ ರಹಿ ಗರಜೇ
ತಾರ ವೇಷ್ಮನ ಕರಿ ಜಟಾಜಾಲ ಯತ ಭುಜಂಗದಲ ತರಲೇ
ತಾರ ಪಬಭ ಬಬಭ ಬಾಜೇ ಗಾಲ, ದೋಲೇಗಲಾಯ ಕಪಾಲ
ಆಭರಣ.
ತಾರ ವಿಷಾನ ಫುಕಾರಿ ಉಠೇ ತಾನ. ಉಗೋ ಮರನ
ಹೇ ಮೋರ ಮರನ ॥

ಪ್ರತಿಯೊಂದು ಕ್ಷೇತ್ರದಲ್ಲಿಯೂ ಶಿವನು ಸಹಜನಾಗಿದ್ದಾನೆ; ಸರಳನಾಗಿದ್ದಾನೆ. ಮತ್ತು ಶಿವನಿಂದ ಕಲಿಯಬೇಕಾದ ವಿಷಯವೆಂದರೆ ಈ ಋಜುತ್ವವೇ. ಇದು ಸರಳತೆಯೇ ಆಗಿದ್ದರೂ ಅದರ ಜೊತೆಗೆ ಅವನ ಅಪಾರ ಕರ್ತವ್ಯನಿಷ್ಠೆಯೂ ಸೇರಿದೆ.

ಶಿವನ ಈ ಸರಳತೆಯನ್ನು ಕೇವಲ ದಂತ ಕಥೆಯೆಂದು ತಿಳಿಯಲಾಗಿದೆ. ಚೈತನ್ಯ ಮಹಾಪ್ರಭು ನಿಮಾಯಿಯ ಪಂಡಿತನೆನಿಸಿದ್ದಾಗ; ಅವನು ಇನ್ನೂ ಅಲ್ಪ ವಯಸ್ಸಿನ ಬಾಲಕನಾಗಿದ್ದನು. ಆಗಲೇ ಅವನ ತಂದೆ ತೀರಿಹೋಗಿದ್ದರು. ರಾಮಚಂದ್ರ ಘೋಷನೆಂಬ ಸ್ಥಿತಿವಂತ ವ್ಯಕ್ತಿಯು ಈ ದರಿದ್ರ ಬ್ರಾಹ್ಮಣ ಕುಟುಂಬದ ನಿರ್ವಹಣೆಯ ಎಲ್ಲ ಹೊಣೆ ಹೊತ್ತನು. ಅವನು ನಿಮಾಯಿಯ ಪಾಲಕನಾಗಿದ್ದನು. ಅವನು ನಿಮಾಯಿಯ ವಿವಾಹ ಕಾಲಕ್ಕೆ "ನಾನು ನಿಮಾಯಿಯ ವಿವಾಹವನ್ನು ಸಾಧಾರಣ ರೀತಿಯಿಂದೇನೂ ಮಾಡುವುದಿಲ್ಲ. ಬ್ರಾಹ್ಮಣರಂತೆ ತೆಪ್ಪಗೆ ಕದ್ದುಮುಚ್ಚಿ ವಿವಾಹ ಪಾಗುವಂತೆ ಮಾಡಗೊಡೆನು. ಇದಲ್ಲದ ಶಿವನ ಮದುವೆಯಂತೆ ಕೇವಲ ಕೊಂಬು ಕಹಳೆಯೂದಿ ಕರ್ತವ್ಯ ಪೂರೈಸಿದೆನೆಂದೂ ಕುಳಿತುಕೊಳ್ಳಲಾರೆ. ನಾನು ನಿಮಾಯಿಯ ಮದುವೆಯನ್ನು ಕಾಯಸ್ಥ ಕುಟುಂಬದ ಮದುವೆಯಂತೆ ಜರುಗಿಸುವೆ. ನಗಾರಿ–ನೌಬತ್ತು ಶಹನಾಯಿ ಬಾರಿಸಹಚ್ಚುವೆ." ಎಂದು ಹೇಳಿದ್ದನು. ಈ ಪ್ರಕಾರ ಶಿವನ ಮದುವೆಯಲ್ಲಿ ಕೇವಲ ಕೊಂಬು ಊದಿದ್ದರೇ ಹೊರತು, ಶಹನಾಯಿ ಬಾರಿಸಲಿಲ್ಲ.

ವಧುವಿನ ಮೈಗೇ ರೇಶ್ಮೆ ವಸ್ತ್ರ ತೊಡಿಸಿರಬಹುದೇನೋ. ಆದರೆ ವರನಂತೂ ವಿವಾಹ ಮಂಟಪದಲ್ಲಿ ಗಡದ್ದಾಗಿ ರೇಶಿಮೆ ವಸ್ತ್ರವನ್ನೇನೂ ಧರಿಸಿರಲಿಲ್ಲ. ಅವನು ಕೇವಲ ತನ್ನ ಹುಲಿಚರ್ಮವನ್ನೇ ಸುತ್ತಿಕೊಂಡು ಬಂದಿದ್ದನು. ಕನ್ಯೆಯ ಹಣೆಯಲ್ಲಿಯಲ್ಲಿ ಮುಕುಟವೇನೋ ಇರಬಹುದು; ಆದರೆ ವರನ ಹಣೆಯ ಮೇಲೆ ಜರೀಯುಕ್ತ ಮುಕುಟವೇನೂ ಇರಲಿಲ್ಲ. ಅಲ್ಲಿ ಕೇವಲ ಬಜುಜಂಗವಿತ್ತು. ಇದೇನೂ ಕಾಯಸ್ಥನ ವಿವಾಹವಲ್ಲ; ಆದರೆ ಶಿವನ ವಿವಾಹ.

ಅವನ ಜೀವನದ ಯಾವುದೇ ಕ್ಷೇತ್ರದಲ್ಲಿ ಯಾವುದೇ ರೀತಿಯ ಆಡಂಬರವಿರಲಿಲ್ಲ. ಇವನೇ ಶಿವನು; ಅವನ ವಿಭೂತಿಯು ಅಪಾರ ಮತ್ತು ಅನಂತ; ಅವನ ಪಾದದಲ್ಲಿ ಸರ್ವರೂ ಶಿರಬಾಗುತ್ತಿದ್ದರು. ಆದರೆ ಅವನು ಸ್ವತಃ ಬಹಳ ಬೋಳೆ ಮನುಷ್ಯನಾಗಿದ್ದನು. ಶಿವನ ಈ ವಿರಾಟತ್ವವೇ ಅವನ ಅತಿ ಹೆಚ್ಚಿನ ವೈಶಿಷ್ಟ್ಯವಾಗಿತ್ತು. ಬೇರೆ ದೇವಿ ದೇವತೆಯರನ್ನು ನೋಡಿದರೆ ಕೆಲವರ ಮಸ್ತಕದಲ್ಲಿ ಮುಕುಟವಿದೆ. ಕೆಲವರ ಮಸ್ತಕದಲ್ಲಿ ಮುಕುಟವಿದೆ. ಕೆಲವರ ಕೈಯಲ್ಲಿ ಕಂಕಣವಿದೆ; ಕೆಲವರ ಕಿವಿಯಲ್ಲಿ ಕುಂಡಲವಿದೆ; ಕೆಲವರ ನಡುವಿನಲ್ಲಿ ಚಂದ್ರಹಾರವು ಶೋಭಿಸುತ್ತಿದೆ. ಆದರೆ ಶಿವನಿಗೆ ಇಂಥ ಯಾವ ಆಭರಣವೂ ಇಲ್ಲ. ಅಲಂಕಾರವಿಲ್ಲ. ಶಿವನನ್ನು ಅನುಸರಿಸುವವರಿಗೆ ಗಣ ಎನ್ನುತ್ತಿದ್ದರು. ಅವರು ಸಾಧಾರಣ ಮನುಷ್ಯರೇ ಆಗಿದ್ದರು. ಅವರಿಗೆ ಆರ್ಯರು ಭೂತ, ಪ್ರೇತಗಳ ಸಂಕೇತ ನೀಡಿದರು. (ಭಾರತದ ನಿವಾಸಿಗಳ ಬಣ್ಣವು ಸ್ವಲ್ಪ ಕಪ್ಪು, ಆರ್ಯರ ಬಣ್ಣ ಗೌರ, ಇದರಿಂದ ಅವರ ದೃಷ್ಟಿಯಲ್ಲಿ ಭಾರತದ ಈ ಸಾಮಾನ್ಯ ಮನುಷ್ಯರು ಭೂತ ಪ್ರೇತಗಳಿಗೆ ಸಮನಾಗಿದ್ದರು.) ಈ ಭೂತ ಪ್ರೇತಗಳು ವಾಸ್ತವದಲ್ಲಿ ಭೂತ, ಪ್ರೇತಗಳಾಗಿದ್ದಿಲ್ಲ. ಅವರು ಶಿವನ ಭಕ್ತರಾಗಿದ್ದರಷ್ಟೇ. ಇವರನ್ನು ಸಂಸ್ಕೃತದಲ್ಲಿ ಗಣ ಎಂದು ಕರೆಯುತ್ತಿದ್ದರು. ಶಿವನ ಬಳಿ ಬೇರಾವ ಅಲಂಕಾರವು ಇದ್ದಿಲ್ಲ. ಈ ಗಣಗಳೇ ಶಿವನ ಅಲಂಕಾರವಾಗಿದ್ದವು. ಶಿವನ ನೋವು ನಲಿವುಗಳ ಸಂಸಾರವು ಇವರನ್ನೇ ಕೂಡಿಕೊಂಡಿತ್ತು. ಏಕೆಂದರೆ ಶಿವನ ಸಂಸಾರವು ವಿಶ್ವ ಬ್ರಹ್ಮಾಂಡವೇ ಆಗಿತ್ತು. ಈ ಕಾರಣದಿಂದ ವಿಶ್ವ ಬ್ರಹ್ಮಾಂಡದ ಪ್ರತಿಯೊಬ್ಬ ಮಾನವನು, ಪ್ರತಿಯೊಬ್ಬ ಹತಾಶಗ್ರಸ್ತ ಮಾನವನು, ಪ್ರತಿಯೊಬ್ಬ ಉನ್ನತ ಮಾನವನು, ಪ್ರತಿಯೊಬ್ಬ ವಿದ್ವಾಂಸನಾದ ಮಾನವನು, ಪ್ರತಿಯೊಬ್ಬ ಮೂರ್ಖ ಮಾನವನು, ಪ್ರತಿಯೊಬ್ಬ ಶಿವನ ಭಕ್ತನು ಮತ್ತು ಪ್ರತಿಯೊಬ್ಬ ಶಿವನ ವಿರೋಧಿಯು ಹೀಗೆ ಎಲ್ಲರನ್ನೂ ಕೂಡಿಕೊಂಡೇ ಶಿವನ ಗೃಹಸ್ಥ ಜೀವನವಿತ್ತು. ಯಾರನ್ನೂ ಬಿಟ್ಟು ಹೋಗುವಂತಿರಲಿಲ್ಲ. ಏಕೆಂದರೆ, ಶಿವನಿಗೆ ಎಲ್ಲರೂ ತನ್ನವರೇ. ಏಕೆಂದರೆ, ಎಲ್ಲರೂ ಒಟ್ಟಾರೆ ಸೇರಿ ಶಿವನ ಕುಟೀರದಲ್ಲಿ ಬಂಗಾರದ ಸಂಸಾರ ಹೂಡಿದ್ದರು. ಅಂದ ಮೇಲೆ ಯಾರನ್ನು, ಹೇಗೆ ಬೀಡುವದು? ಈ ಕಾರಣದಿಂದ ಎಲ್ಲರನ್ನು ಸೇರಿಸಿಕೊಂಡು ಅವನ ಸಂಸಾರವಿದೆ. ಅವನು ಅವರ ದೇವತೆಯಾದನು. ಕೆಲವರು ಬಹಿರಂಗವಾಗಿಯೇ ಶಿವನ ನಿಂದೆಯನ್ನು ಮಾಡಿರಬಹುದು. ಆದರೆ ಮನದ ಅಂತರಾಳದಲ್ಲಿ ಶಿವನ ಪ್ರಶಂಸೆಯನ್ನೇ ಮಾಡಿರುತ್ತಾರೆ. ಏಕೆಂದರೆ, ಬೇರೆ ದೇವತೆಗಳು ಅಸಂತುಷ್ಟರಾದರೆ ಅವರಿಂದ ಈ ಜನರಿಗೆ ಹಾನಿಯಾಗುತ್ತದೆ. ಆದರೆ, ಶಿವನಾದರೋ ಯಾರನ್ನು ಶಪಿಸಿದವನೇ

ಅಲ್ಲ. ಶಿವನಿಗೆ ದುಃಖವಾಗುತ್ತದೆ. ನಿಜ ಆದರೆ ಅವನು ಯಾರಿಗೂ ಎಂದೂ ಶಾಪ ಕೊಟ್ಟಿಲ್ಲ. ಅವನು ಯಾರಿಗೂ ಹಾನಿಯುಂಟು ಮಾಡಿಲ್ಲ. ಒಂದು ವೇಳೆ, ಯಾವ ನೊಬ್ಬನು ಶಿವ ನಿಂದೆಯನ್ನು ಮಾಡಿದಾಗ್ಯೂ ಮನಸ್ಸಿನಲ್ಲಿ ಅವನು ಹೀಗೆ ಹೇಳುತ್ತಾನೆ. "ನಿನ್ನದು ಕ್ಷಮಾಮಯ ಶರೀರ, ನೀನು ಆಶುತೋಷನಾಗಿದ್ದಿ. ನೀನು ನನ್ನನ್ನು ಕ್ಷಮಿಸುವೆಯೋ, ಇಲ್ಲವೋ" ಇದರಿಂದ ಅವನು ಅವರನ್ನು ಕ್ಷಮಿಸಿಬಿಡುತ್ತಿದ್ದನು. ಮತ್ತು ಒಂದು ವೇಳೆ ಯಾರಾದರೂ ಸಿಟ್ಟಿನಿಂದ ನೀನು ನನ್ನನ್ನು ಕ್ಷಮಿಸುವೆಯೋ ಇಲ್ಲವೋ ಎಂದಾಗಲೂ ಸಹ ಅವನು ಅವರನ್ನು ಕ್ಷಮಿಸುತ್ತಿದ್ದನು. ಈ ಪ್ರಕಾರ ಶಿವನು ಜನ ಮನದ ಅಂತರಾಳದಲ್ಲಿ ಪ್ರವೇಶಿಸಿದ್ದನು. ಶಿವನು ಎಲ್ಲರವನು. ಆದ್ದರಿಂದ, ಇಂದು ಸಹ ಮಹಾಕಾಶದ ಅನಂತ ನೀಲ ಶೂನ್ಯದಲ್ಲಿ ಶಿವನ ಧ್ವನಿಯು ಗಂಭೀರ ಮತ್ತು ಪ್ರಶಾಂತ ಲಹರಿಗಳಿಂದ ಪ್ರತಿಧ್ವನಿಸುತ್ತಿದೆ.

ಕೆ ಉ ತೊ ಆಮಾರ ಪರ ನಯ,
ಸಬಾಇ ಆಪನ ವಿಶ್ವಮಯ
ಆಮಿ ಸುಧು ಹಾಸಿ ।
ಸುಧು ಭಾಲೋ ಬಾಸಿ,
ನಾಶಿ ಕ್ಲೇಶ ರಾಶಿ ।
ದೀಇ ಅಭಯ
ಕೆ ಉತೊ ಆಮಾರ ಪರ ನೆಯ ।

* * *

"ಇಲ್ಲವೆನಗೆ ಪರರು ಯಾರು;
ಸರ್ವರೆನ್ನ ವಿಶ್ವದವರು.
ಸೂಸುತಿಹುದು ಹಾಸ್ಯಕೇಳಿ,
ಬೀಸುತಿಹುದು ಪ್ರೇಮಗಾಳಿ
ಅವರ ಕಷ್ಟ ಬಂತು ಕೂಡಿ
ಕಳೆವೆ ಭೀತಿ, ಧೈರ್ಯ ನೀಡಿ,
ಇಲ್ಲವೆನಗೆ ಪರರು ಯಾರು.

ಅರ್ಧನಾರೀಶ್ವರ ಶಿವನನ್ನು ಕುರಿತು ಇಷ್ಟು ಸಾಕು. ಅದು ದಾರ್ಶನಿಕ ಕಲ್ಪನೆ ಮಾತ್ರ. ಈಗ ಶಿವನೊಂದಿಗೆ ಸಂಬಂಧಿಸಿದವರನ್ನು ಕುರಿತು ಪ್ರತ್ಯೇಕವಾಗಿ ಹೇಳುವೆ. ನಾನು ನಿಮಗೆ ದುರ್ಗಾ, ಕಾಲೀ, ಗಂಗಾ, ತಾರಾ ಮುಂತಾದವರ ಸಂಬಂಧದಲ್ಲಿ ಹೇಳಿರುವೆ. ಈಗ ಲಕ್ಷ್ಮೀ ಸಂಬಂಧ ಕುರಿತು ಹೇಳುವೆ.

ಪುರಾಣ ಕಥೆಯನ್ನನುಸರಿಸಿ ಹೇಳುವದಾದರೆ ದೇವಾಸುರರು ಸಮುದ್ರ ಮಂಥನ ಮಾಡುವಾಗ, ಸಮುದ್ರದಿಂದ ದೊರೆತ ಬಹು ಮೂಲ್ಯ ವಸ್ತುಗಳಲ್ಲಿ ಐರಾವತ, ಪಾರಿಜಾತ ವೃಕ್ಷ, ಅಮೃತ ಮತ್ತು ಅನೇಕ ವಸ್ತುಗಳಿದ್ದವು. ಅವುಗಳಲ್ಲಿ ಒಂದು ಬಹು ಮೂಲ್ಯ ವಸ್ತುವಿತ್ತು. ಅವಳೇ ಲಕ್ಷ್ಮಿ. ಸಮುದ್ರ ಮಂಥನ ಕಾಲಕ್ಕೆ ಲಕ್ಷ್ಮಿಯು ಸಮುದ್ರದಿಂದ ಹೊರಬಂದಳು. ಪುರಾಣದ ಕಥಾನುಸಾರ ಅವಳ ವಿವಾಹವು

ನಾರಾಯಣನೊಂದಿಗೆ ಆಯಿತು. ಇದರಿಂದ ಒಂದು ಮಾತು ಸ್ಪಷ್ಟವಾಗುತ್ತದೆ. ಅದೆಂದರೆ, ಈ ಲಕ್ಷ್ಮಿಯು ಶಿವನ ಪುತ್ರಿಯಂತೂ ಅಲ್ಲ. ಇವಳು ಸಮುದ್ರ ಮಂಥನ ದಿಂದ ಹೊರಬಂದವಳು ಮತ್ತು ಎರಡನೆ ಮಾತೆಂದರೆ ಪುರಾಣದಲ್ಲಿರುವ ಸಾಗರ ಮಂಥನದ ಕಥೆಯು ಶಿವನ ಸಮಯವಾದ ಬಳಿಕ ಐದೂವರೆ ಸಾವಿರ ವರ್ಷಗಳ ನಂತರ ದ್ದಾಗಿದೆ. ಈ ರೀತಿ ಆತ ಯಕ್ತಿಯ ಆಧಾರದಿಂದಲೂ ಸಹ ಲಕ್ಷ್ಮಿಯು ಶಿವನ ಕನ್ಯೆ (ಮಗಳು)–ಆಗಲಾರಳು. ಪುರಾಣದ ಕಥೆಯಲ್ಲಿ ಸಮುದ್ರ ಮಂಥನದ ಕಾಲಕ್ಕೆ ಶಿವನನ್ನು ಸಹ ಎಳೆದು ತಂದಿದ್ದಾರೆ. ಆದರೆ ಹೀಗಾದುದು ಸಾಗರ ಮಂಥನದ ಸ್ವಲ್ಪ ಕಾಲ ಕಳೆದ ಮೇಲೆ. ಎರಡನೆಯದಾಗಿ ಲಕ್ಷ್ಮಿಯು ಸಂಬಂಧದಲ್ಲಿ, ಮತ್ತೆ ಅದೇ ಪುರಾಣದಲ್ಲಿ ಹೀಗೆ ಹೇಳಲಾಗಿದೆ. ಏನೆಂದರೆ ಒಂದು ಬಾರಿ ಕೃಷ್ಣನು ತನ್ನ ರಾಜಧಾನಿ ಯಿಂದ ಅಂದರೆ ದ್ವಾರಕೆಯಿಂದ ಹೊರಗೆ ಹೋದಾಗ, ನರಕಾಸುರ ಎಂಬ ಹೆಸರಿನ ಒಬ್ಬ ಅಸುರನು (ಅಸುರ ಎಂದರೆ ಯಾವುದೇ ಭಯಂಕರ ಜೀವಿಯೇನೂ ಅಲ್ಲ, ಅವರು ಸಹ ಒಂದು ಜನಾಂಗದ ಮನುಷ್ಯರು. ಒಂದು ಜನ ಗೋಷ್ಟಿಯ ಜನರು. ಇವರ ಮೂಲ ವಾಸಸ್ಥಾನವು ಅಸಿರಿಯಾದಲ್ಲಿದ್ದು ಆ ಮೇಲೆ ಭಾರತದ ಒಳಗೆ ಹೊರಗೆ ಇರುವ ಸಿದಿಯನ್‌ರೇ ಅಸುರ ಜನಾಂಗದ ಒಂದು ಶಾಖೆಯಾದರು. ಸಿದಿಯನ್‌ರು ಮುಖ್ಯವಾಗಿ ಭೂಮಿ ವರ್ಣದವರು. ಅವರು ಸ್ವಲ್ಪ ಕುಳ್ಳರು, ಆದರೆ ದಷ್ಟ ಪುಷ್ಟ ಶರೀರವುಳ್ಳವರು. ಅವರು ವಾಸ್ತವವಾಗಿ ಅಸುರರಲ್ಲ ಆದರೆ ಅಸುರರ ಒಂದು ಉಪ ಶಾಖೆಯಾಗಿದ್ದರು.) ನರಕಾಸುರನು ದಾಳಿ ಮಾಡಿದಾಗ ಕೃಷ್ಣನು ತನ್ನ ರಾಜಧಾನಿ ಯಲ್ಲಿ ಉಪಸ್ಥಿತನಿದ್ದಿಲ್ಲ ಎಂದು ನಾನು ಆಗಲೇ ಹೇಳಿದೆ.ಆಗ ಸತ್ಯಭಾಮೆಯು ಈ ಅಸುರ ನೊಂದಿಗೆ ಕಾದಿ ಅವನನ್ನು ಕೊಂದಳು. ಅವಳು ಅಸುರನನ್ನು ಕೊಂದ ದಿನವೇ ಕೃಷ್ಣ ಚತುರ್ದಶಿಯ ತಿಥಿಯಾಗಿತ್ತು. ಅಸುರನು ಮರಣವಾದ ಕಾರಣ ಆ ದಿನ ದ್ವಾರಕೆಯ ನಿವಾಸಿಗಳಲ್ಲಿ ಚತುರ್ದಶ ತೈಲ ದೀಪಗಳಿಂದ ನಗರವನ್ನೆಲ್ಲ ಬೆಳಗಿಸಿದರು. ಮತ್ತು ಆ ತಿಥಿಗೆ ಇಂದು ಸಹ ಪಶ್ಚಿಮ ಭಾರತದಲ್ಲಿ ನರಕ ಚತುರ್ದಶಿ ಎಂದು ಕರೆದು ಆಚರಿಸ ಲಾಗುತ್ತದೆ. ಈ ದಿನವನ್ನು ಪೂರ್ವಭಾರತದಲ್ಲಿ ಭೂತ ಚತುರ್ದಶಿ ಎಂದು ಕರೆಯು ತ್ತಾರೆ. ಮತ್ತು ಅದರ ಮಾರನೇ ದಿನವೇ ಪೂರ್ವ ಭಾರತದಲ್ಲಿ ಶ್ಯಾಮಾ ಪೂಜೆ ಯನ್ನು ಮಾಡುತ್ತಾರೆ. ಶ್ಯಾಮಾಳನ್ನು ಕುರಿತು ಈ ಮೊದಲೇ ಹೇಳಿ ಬಿಟ್ಟಿರುವೆ.

"ಶೀತ ಕಾಲೇ ಭವೇದುಷ್ಣಾ ಗ್ರೀಷ್ಮೇ ಚ ಸುಖಿ ಶೀತಲಾ
ಅತಸೀ ಪುಷ್ಪ ವರ್ಣಾಭಾಸಾ ಶ್ಯಾಮಾ ಪರಿಕೀರ್ತಿತಾ.

ಶೀತ ಕಾಲದಲ್ಲಿ ಬೆಚ್ಚಗಿರುವವಳೂ, ಬೇಸಗೆಯಲ್ಲಿ ಸುಖ-ಶೀಲತವಾಗಿರುವವಳೂ, ಅತಸೀ ಪುಷ್ಪದಂತೆ ಇಂಪಾದ ಬಣ್ಣವುಳ್ಳವಳೂ ಯಾವಳೋ ಆವಳನ್ನು-ಶ್ಯಾಮಾ ಎನ್ನುತ್ತಾರೆ.

ಆದರೆ ದ್ವಾರಕೆಯಲ್ಲಿ ಮಾರನೆಯದಿನ ಜನರು ಬಹಳ ಉತ್ಸವ ಜರುಗಿಸುತ್ತಾರೆ. ಊಟ,ಪೇಯ,ಪಟಾಖಿ ಹಾರಿಸುವುದು ಇತ್ಯಾದಿ ಆಚರಿಸುತ್ತಾರೆ. ಪ್ರದೋಷ (ಸಂಧ್ಯಾ ಕಾಲದಲ್ಲಿ ರಾತ್ರಿ ಎಂಟು ಗಂಟೆಯ ವೇಳೆಗೆ ಪ್ರದೋಷ ಎನ್ನುತ್ತಾರೆ.) ಸಮಯಕ್ಕೆ ಸತ್ಯಭಾಮೆಯು ದೇವಿಯ ಪೂಜೆ ಮಾಡಿದ್ದಳು. ಅಂದಿನಿಂದ ಸತ್ಯಭಾಮೆಯನ್ನು

ಮಹಾಲಕ್ಷ್ಮಿಯ ಹೆಸರಿನಿಂದ ಪೂಜಿಸುತ್ತ ಬಂದಿದ್ದಾರೆ. ಈ ಗಡಿನಾಡಿನ ಜನರು ಈ ದಿನದ ಎಣಿಕೆಯಿಂದ ಹೊಸ ಖಾತೆಗಳನ್ನು ತೆರೆಯುತ್ತಾರೆ. ದೀಪಾವಳಿಯ ಉತ್ಸವ ವನ್ನು ಆಚರಿಸುತ್ತಾರೆ. ದೀಪಾವಳಿಗೆ ಆಡು ಭಾಷೆಯಲ್ಲಿ ದಿವಾಲೀ ಎನ್ನುತ್ತಾರೆ. ಏನೇ ಇರಲಿ; ಇವಳೇ ಮಹಾಲಕ್ಷ್ಮಿ. ಮಹಾಲಕ್ಷ್ಮಿಯ ಪೂಜೆಯನ್ನು ಪೌರಾಣಿಕ ಶಾಕ್ತಾಚಾರದಲ್ಲಿ ಒಪ್ಪಿಕೊಂಡರು. ಇನ್ನು ಕೆಲವೆಡೆ ಮಹಾಲಕ್ಷ್ಮಿ ಪೂಜೆಗಿಂತ ಮೊದಲು, ಅಲಕ್ಷ್ಮಿಯ ಪೂಜೆಮಾಡಿ, ಅವಳನ್ನು ಬೀಳ್ಕೊಂಡ ಮೇಲೆ ಮಹಾ ಲಕ್ಷ್ಮಿಯನ್ನು ಪೂಜಿಸುತ್ತಿದ್ದರು. ಈ ಮೆರುಗಿನ ಲಕ್ಷ್ಮಿ ಇಲ್ಲವೆ ಮಹಾಲಕ್ಷ್ಮಿಯು ಶ್ರೀಕೃಷ್ಣನ ಹೆಂಡತಿಯಾಗಿದ್ದಳು. ಅವಳ ನೈಜ ಹೆಸರು ಸತ್ಯಭಾಮೆ. ಈ ಲಕ್ಷ್ಮಿ ಇಲ್ಲವೆ ಮಹಾಲಕ್ಷ್ಮಿಯು ಪೌರಾಣಿಕ ದೇವಿಯೇನಲ್ಲ. ಅವಳು ಪುರಾಣ ಯುಗಕ್ಕಿಂತ ಮುಂಚಿನವಳು. ಏಕೆಂದರೆ, ಕೃಷ್ಣನ ಕಾಲವು ಪುರಾಣ ಕಾಲಕ್ಕಿಂತ ಮೊದಲಿನದು. ಈ ಮಹಾಲಕ್ಷ್ಮಿಯು ಶಿವನ ಕಾಲಕ್ಕಿಂತ ಮೂರುವರೆ ಸಾವಿರ ವರುಷ ಈಚಿನವಳು. ಈ ಕಾರಣದಿಂದ, ಸಹ ಅವಳು ಶಿವನ ಮಗಳಾಗಲಾರಳು. ಈ ಲಕ್ಷ್ಮಿಯು ಇನ್ನೊಂದು ಅವಸ್ಥೆ ಇದೆ. ಪೌರಾಣಿಕ ಶಾಕ್ತಾಚಾರದಲ್ಲಿ ಇವಳೇ ಲಕ್ಷ್ಮಿ ಅಥವಾ ಮಹಾಲಕ್ಷ್ಮೀ ರೂಪದಲ್ಲಿ ಸ್ವೀಕೃತಳಾಗಿದ್ದಾಳೆ. ಇದನ್ನು ಹೊರತುಪಡಿಸಿ, ಲಕ್ಷ್ಮಿಯ ವರ್ಣನೆಯನ್ನು ನಾವು ಜೈನತಂತ್ರ, ಬೌದ್ಧ ತಂತ್ರ ಮತ್ತು ಅದೇ ರೀತಿ ಶಿವೋತ್ತರ ತಂತ್ರ ಯುಗದ ದಶಮಮಹಾವಿದ್ಯಾರ ಹತ್ತನೆಯ ಮಹಾ ವಿದ್ಯಾಳ ರೂಪದಲ್ಲಿ ಪಡೆಯುತ್ತೇವೆ. ಇವಳ ಹೆಸರೇ ಕಮಲಾ. ಈ ಮಹಾಲಕ್ಷ್ಮಿ ಮತ್ತು ಕಮಲಾ ಇಬ್ಬರೂ ಒಂದೇ ಎಂದು ಕೆಲವರು ತಿಳಿದಿದ್ದಾರೆ. ಆದರೆ, ಈ ಗ್ರಹಿಕೆಯು ಸರಿಯಲ್ಲ. ಮಹಾ ಲಕ್ಷ್ಮಿಯು ಕೃಷ್ಣನ ಕಾಲದವಳು. ಅವಳು ಕೃಷ್ಣನ ಪತ್ನಿಯಾವ ಸತ್ಯಭಾಮೆ. (ದಶಮಹಾವಿದ್ಯಾ, ಬೌದ್ಧ ತಂತ್ರ, ಜೈನತಂತ್ರ ಮತ್ತು ಶಿವೋತ್ತರ ತಂತ್ರಗಳ ಸಮ್ಮಿಶ್ರಣವೆಂದು ನಾನು ಮೊದಲೇ ಹೇಳಿಬಿಟ್ಟಿದ್ದೇನೆ. ಈ ನೂರರೊಳಗಿಂದ ಅಲ್ಪಸ್ವಲ್ಪ ಗ್ರಹಣಮಾಡಿ ಈ ದಶ ಮಹಾ ವಿದ್ಯಾರನ್ನು ಕಲ್ಪಿಸಲಾಗಿತ್ತು). ಈ ಕಾರಣದಿಂದ, ಯಾವ ಕಮಲಾ ರೂಪಲಕ್ಷ್ಮಿ ಇರುವಳೋ, ಅಂದರೆ, ಲಕ್ಷ್ಮಿಗೆ ಕಮಲಾ ಎಂದು ಹೆಸರಿಟ್ಟು ಕರೆಯಲಾಗಿದೆಯೋ ಅವಳು ನಿಜವಾದ ಲಕ್ಷ್ಮಿ ಅಲ್ಲ. ಅಂದರೆ, ಲಕ್ಷ್ಮಿಯು ಕಮಲಾ ಆಗಲಾರಳು. ಮೇಲಾಗಿ ದಶಮಹಾವಿದ್ಯಾರ ಯುಗವು ಶಿವನ ಕಾಲದಿಂದ ಐದುವರೆ ಸಾವಿರ ವರುಷ ಇತ್ತೀಚಿನದು. ಈ ಕಾರಣದಿಂದ ಅವಳು ಶಿವನ ಕನ್ಯೆಯಾಗಲಾರಳು. ಮಾನವನು ಲಕ್ಷ್ಮಿ ಮತ್ತು ಕಮಲಾರನ್ನು ಪೌರಾಣಿಕ ಯುಗದಲ್ಲಿ ಒಂದೇ ಎಂದು ತಿಳಿಯತೊಡಗಿದನು.

"ಕಮಲಾ ಅಚಲಾ ಹನ ಪರಿಶ್ರಮ ಗುನೆ
ಆಲಸ್ಯೇ ಅಲಕ್ಷ್ಮೀ ಆಸಿಬಾಡೆ ದಿನೇ ದಿನೇ"

ಮಾನವನು ಲಕ್ಷ್ಮೀ ಮತ್ತು ಕಮಲಾರನ್ನು ಒಂದೇ ಎಂದು ಸ್ವೀಕರಿಸಹತ್ತಿದ್ದ ನೆಂಬುದು ಇದರಿಂದ ಪ್ರಮಾಣಿತವಾಗುತ್ತದೆ. ದಶಮಹಾವಿದ್ಯಾರಲ್ಲಿ ಪ್ರತಿ ವಿದ್ಯಾಳನ್ನು ಶಿವನ ಪತ್ನಿ ಎಂದು ಕರೆದು ಒಪ್ಪಿಕೊಳ್ಳುತ್ತಿದ್ದರು. ಈ ಕಾರಣದಿಂದ ಆವಳು ಶಿವನ ಕನ್ಯೆಯಾಗಲಾರಳು. ಕಮಲಾಳ ಸಂಬಂಧದಲ್ಲಿ ಹೀಗೆ ಹೇಳಲಾಗಿದೆ.

"ಕಾಂಚನ ಕಾಂತಿ ಸುದೀಪ್ತಾ ಸುಮನೋಹರಾ ಕಮಲಾ
ಹರ ಹೃದವಾಸಿನಿ"

ಅಂದರೆ, ಅವಳ ಬಣ್ಣವು ಬಂಗಾರದಂತೆ ತೊಳಗುತ್ತಿತ್ತು. ಅವಳು ನೋಡಲು ಬಹು ಸುಂದರಿಯಾಗಿದ್ದಳು. ಮತ್ತು ಶಿವನ ಹೃದಯದಲ್ಲಿ ನಿಂತಿದ್ದಳು. ಶಿವನ ಪತ್ನಿ–ಶಿವಾ–ಶಿವಾನಿ. ಈ ರೀತಿ ನೀವು ಲಕ್ಷ್ಮಿಯು ಶಿವನ ಕನ್ಯೆಯೆಂದೂ, ದುರ್ಗಾಳ ಕನ್ಯೆಯೆಂದೂ ಅನೇಕ ಜನರು ಯೋಚಿಸುತ್ತಿರುವ ಮಾತು ಸರಿಯಲ್ಲವೆಂದು ನಿಮಗೆ ಗೊತ್ತಾಗುತ್ತದೆ. ದುರ್ಗಾದೇವಿಯ ಕಲ್ಪನೆಯು ಪೌರಾಣಿಕ ಯುಗದಲ್ಲಾಗಿದೆ. ಎಂದರೆ, ಇಂದಿನಿಂದ ಹದಿಮೂರುನೂರು ವರುಷ ಪೂರ್ವದ ಕಾಲದಲ್ಲಿ. ಆದರೆ, ಲಕ್ಷ್ಮಿಯ ಕಲ್ಪನೆಯನ್ನು ಅದಕ್ಕಿಂತ ಸ್ವಲ್ಪ ಮೊದಲೇ ಮಾಡಲಾಗಿದೆ. ಮಹಾ ಲಕ್ಷ್ಮಿಯು ಮೂರುವರೆ ಸಾವಿರ ವರುಷ ಮೊದಲಿನವಳು. ಮತ್ತು ಇನ್ನಿತರ ಕಲ್ಪನೆಗಳು, ಅಂದಾಜು ಸಾವಿರದಾ ಏಳುನೂರಾ ಐವತ್ತು ವರುಷ ಪೂರ್ವದವಾಗಿವೆ. ಈ ಕಾರಣದಿಂದ, ಯಾವ ದೃಷ್ಟಿಯಿಂದ ನೋಡಿದರೂ ಲಕ್ಷ್ಮಿಯು ಶಿವ ಇಲ್ಲವೆ ದುರ್ಗೆಯ ಮಗಳಲ್ಲ. ದುರ್ಗೆಯೊಂದಿಗಂತೂ ಶಿವನ ಯಾವ ಸಂಬಂಧವೂ ಇಲ್ಲ. ಏಕೆಂದರೆ, ದುರ್ಗೆಯ ಕಲ್ಪನೆಯು ಶಿವನ ಕಲ್ಪನೆಯ ನಂತರ, ಐದುವರೆ ಸಾವಿರ ವರುಷವಾದನಂತರ ಮೂಡಿತು. ಇದಲ್ಲದೆ, ನಾವು ಇನ್ನೊ೯ರ್ವ ಲೌಕಿಕ ದೇವಿ ಲಕ್ಷ್ಮಿಯನ್ನು ಪಡೆಯುತ್ತೇವೆ. ಅವಳು ಕೃಷ್ಣನ ಪತ್ನಿಯೂ ಅಲ್ಲ, ಮತ್ತು ಸತ್ಯಭಾಮೆಯೂ ಅಲ್ಲ. ಅಷ್ಟೇಕೆ ಅವಳು ದಶಮಹಾವಿದ್ಯಾದ ಕಮಲಾ ಸಹ ಅಲ್ಲ. ಇನ್ನು ಅವಳು ಪೌರಾಣಿಕ ಕಥೆಯಲ್ಲಿ ವರ್ಣಿಸಿದ ಸಮುದ್ರ ಮಂಥನದಿಂದ ಪ್ರಾಪ್ತವಾದ ನಾರಾಯಣನ ಪತ್ನಿಯಾದ ಲಕ್ಷ್ಮಿಯೂ ಅಲ್ಲ. ಅವಳು ಲೌಕಿಕ ದೇವಿಯಾದ ಲಕ್ಷ್ಮಿಯು ಮಾತ್ರ. ಲಕ್ಷ್ಮಿಯನ್ನು ಮಾನವನು ಧನದ ಅಧಿಷ್ಠಾತ್ರಿ ದೇವಿಯೆಂದು ಕರೆದು ಮನ್ನಿಸುತ್ತಾನೆ. ಪೂರ್ವ ಭಾರತದಲ್ಲಿ ಸ್ತ್ರೀಯರು ವಾರದ ಲಕ್ಷ್ಮಿಯ ರೂಪದಲ್ಲಿ ಅವಳನ್ನು ಪೂಜಿಸುತ್ತಿದ್ದಾರೆ. ಇವಳು ಶಾಸ್ತ್ರೀಯ ದೇವಿಯೇನೂ ಅಲ್ಲ. ಪೌರಾಣಿಕ ದೇವಿಯೂ ಅಲ್ಲ. ವೈದಿಕ ದೇವಿಯೂ ಅಲ್ಲ. ತಾಂತ್ರಿಕ ದೇವಿಯಂತೂ ಅಲ್ಲವೇ ಅಲ್ಲ. ಆದರೆ ಅವಳು ಸಂಪೂರ್ಣ ದೇವಿಯು. ಇವಳಿಗಾದ ಬೀಜ ಮಂತ್ರವೂ ಇಲ್ಲ. ಅಷ್ಟೇಕೆ? ಯಾವ ಧ್ಯಾನ ಮಂತ್ರವೂ ಇಲ್ಲ. ಪ್ರಣಾಮ ಮಂತ್ರವೂ ಇಲ್ಲ. ಬಂಗಾಳೀ ಭಾಷೆಯಲ್ಲಿ ಅರ್ಥಾತ್ ಮಾತೃ ಭಾಷೆಯಲ್ಲಿ ಪಂಚಪದಿ (ಐದು ಸಾಲಿನ ಛಂದೋಬದ್ಧವಾದ ಪದ್ಯ)ಯ ಪ್ರಮಾಣವೇ ಸಾಕಾಗುತ್ತದೆ. ಇದು ಎಲ್ಲಿಯ ವರೆಗೆ ಎಂದರೆ ಪುರೋಹಿತರ ಅವಶ್ಯಕತೆಯೂ ಸಹ ಬೀಳದು. ಶಿವನೊಂದಿಗೆ ಈ ಲೌಕಿಕ ದೇವಿಯ ಯಾವ ಸಂಬಂಧವೂ ಇಲ್ಲ. ಈ ರೀತಿಯಾಗಿ ನಾವು ಯುಕ್ತಿಗಳಿಂದ, ಐತಿಹಾಸಿಕ ದೃಷ್ಟಿಕೋನಗಳಿಂದ ಸಹ ವಿಚಾರಿಸಿ ಕಂಡುಕೊಂಡದ್ದೇನೆಂದರೆ, ಶಿವನೊಂದಿಗೆ ಲಕ್ಷ್ಮಿಯ ಯಾವುದೇ ಪ್ರಕಾರದ ಸಂಬಂಧವೂ ಇಲ್ಲ. ಪೌರಾಣಿಕ ದೇವಿ ಲಕ್ಷ್ಮಿ ಮತ್ತು ಲೌಕಿಕದೇವಿ ಲಕ್ಷ್ಮಿ ಇವರ ವಾಹನವು ಗೂಬೆಯೆಂದು ತಿಳಿಯಲಾಗಿದೆ. ಆದರೆ, ಕಮಲಾಳ ವಾಹನವು ಆನೆ ಎಂದು ಸ್ವೀಕೃತವಾಗಿದೆ–ಕುಂಜರ. ಈ ರೀತಿ ಇಬ್ಬರೂ ದೇವಿಯರು ಸಹ ಒಂದೇ ಆಗಿಲ್ಲ. ಈ ಪ್ರಕಾರ, ಲಕ್ಷ್ಮಿಯ ಸಂಬಂಧದಲ್ಲಿ ನಿಮ್ಮೆಲ್ಲರ ಮನದಲ್ಲಿ ಯಾವುದೇ

ಪ್ರಕಾರದ ಭ್ರಮೆಯು ಇರಕೂಡದು.

ಈಗ ನಾವು ಸರಸ್ವತಿಯ ವಿಷಯ ಕುರಿತು ಸ್ವಲ್ಪ ಆಲೋಚಿಸೋಣ. ಸರಸ್ವತಿಯು ಯಾವುದೇ ವೈದಿಕ ದೇವಿಯೂ ಅಲ್ಲ. ವೇದದಲ್ಲಿ ಸರಸ್ವತೀ ಶಬ್ದದ ಉಲ್ಲೇಖವೇನೋ ಇದೆ. ಆದರೆ ಆ ಸರಸ್ವತಿಯು ದೇವಿ ಸರಸ್ವತೀ ಅಲ್ಲ. ಮೊದಲು—"ಸರಸ್ವತೀ" ಶಬ್ದದ ಅರ್ಥ ಹೇಳುವೆ. ಸಂಸ್ಕೃತದಲ್ಲಿ 'ಸರಸ' ಶಬ್ದದ ಅರ್ಥವೆಂದರೆ ದೊಡ್ಡ ಜಲಾಶಯ ಇಲ್ಲವೆ, ಬಳಿಯ ಬಣ್ಣದ ಪ್ರಕಾಶ, ಶುಭ್ರ ಜ್ಯೋತಿ. ಇನ್ನು ಈ ಸರಸ ಯಾರದು? "ಸರಸ" ಶಬ್ದದ ಮುಂದೆ ಮತುಪ್ ಪ್ರತ್ಯಯ ಸೇರಿಸಿ—"ಸರಸ್ವತಿ" ಶಬ್ದದ ಉತ್ಪತ್ತಿಯಾಗಿದೆ. ಇದರ ಸ್ತ್ರೀಲಿಂಗ ರೂಪವೇ "ಸರಸ್ವತೀ" ಇದರ ಅರ್ಥವೆಂದರೆ, ಈ ಶುಭ್ರ ಜ್ಯೋತಿಯಾರದೋ ಅಥವಾ ಒಂದು ಬೃಹತ್ ಜಲಾಶಯವು ಯಾರ ಅಧೀನದಲ್ಲಿದೆಯೋ ಎಂದು. ವೇದದಲ್ಲಿ ಸರಸ್ವತೀ ಶಬ್ದದ ಉಲ್ಲೇಖವಿದೆ.

"ಅನ್ವಿತಮೆ ನದೀತಮೆ ದೇವೀ ತಮೆ ಸರಸ್ವತೀ"

ಈ ಸರಸ್ವತಿಯು ಒಂದು ನದಿಯ ಹೆಸರು. ಈ ನದಿಯು ಇಷ್ಟೊಂದು ಒಳ್ಳೆಯದಾಗಿದೆ. ಮಾನವನಿಗೆ ಇಷ್ಟೊಂದು ಉಪಕಾರಿಯಾಗಿದೆ. ಕಲ್ಯಾಣಕಾರಿಯಾಗಿದೆ. ಅದರಿಂದ ಅದಕ್ಕೆ 'ದೇವೀತಮಾ' ಎಂದು ತಿಳಿದು, ಶ್ರೇಷ್ಠ ದೇವಿಯೆಂದು ಸಾರಿ, ಮಾನವನು ಗೌರವಿಸುತ್ತಾನೆ. ಎಂಬುದು ನದೀ ಶಬ್ದದಿಂದಲೇ ತಿಳಿದು ಬರುತ್ತದೆ. ಈ ರೀತಿ ಸರಸ್ವತಿ ದೇವಿಯೊಂದಿಗೆ ಇದರ ಯಾವುದೇ ಸಂಪರ್ಕವಿರದು. ನಿಜವಾದ ಮಾತೆಂದರೆ, ಪ್ರಾಚೀನ ಭಾರತದಲ್ಲಿ ಚರ್ಮನ್ವತಿ ಮತ್ತು ದೃಷದ್ವತಿ ಎಂಬ ಎರಡು ನದಿಗಳು ಮಹಾಭಾರತದ ಕಾಲದಲ್ಲಿ ಇದ್ದವು. ಚರ್ಮನ್ವತಿ ಹೆಸರಿಗೆ ಒಂದು ಇತಿಹಾಸವೇ ಇದೆ. ಏನೆಂದರೆ ಆರ್ಯರು ಮೊತ್ತ ಮೊದಲು ಪಶ್ಚಿಮ ಭಾರತದ ರಾಜಸ್ಥಾನದಲ್ಲಿ ಇರಲು ಪ್ರಾರಂಭಿಸಿದಾಗ, ಅವರು ಈ ಪ್ರದೇಶದಲ್ಲಿ ಹೆಚ್ಚು ಪಶುಗಳನ್ನು ಕಂಡರು. ಆ ಕಾಲಕ್ಕೆ ಇಲ್ಲಿ ಸಾಕಷ್ಟು ಮಳೆಯಾಗುತ್ತಿತ್ತು. ಅರಣ್ಯವಿತ್ತು. ಮತ್ತು ಪಶುಗಳ ಬಾಹುಲ್ಯವೂ ಇತ್ತು. ಆವರು ಅನೇಕ ಪಶುಗಳನ್ನು ಕೊಂದು ಯಜ್ಞ ಕರ್ಮ ನೆರವೇರಿಸುತ್ತಿದ್ದರು. ಈ ಬಗ್ಗೆ ಒಂದು ಕಥೆ ಹೀಗಿದೆ: ಆರ್ಯರು ಲಕ್ಷಾಂತರ ಪಶುಗಳನ್ನು ಕೊಂದು, ಯಜ್ಞವನ್ನಾಚರಿಸಿದರು. ಆ ಪಶುಗಳ ಚರ್ಮದಿಂದ ಬೆಟ್ಟದಂಥ ಸ್ತೂಪ ನಿರ್ಮಿಸಿದರು. ಆ ಚರ್ಮದ ಸ್ತೂಪದಿಂದ ರಕ್ತಧಾರೆಯು ಚಿಂವ್ ಗುಡುತ್ತ ಸುರಿಯುತ್ತಿತ್ತು. ಆ ಧಾರೆಯೇ ಒಂದು ಚಿಕ್ಕ ನದಿಯಂತೆ ಹರಿಯಹತ್ತಿತ್ತು. ಬಹು ದೂರ ಪ್ರವಹಿಸಿದ ಬಳಿಕ ಅದು ಗಂಗಾಜಲದಲ್ಲಿ ಸೇರಿತು. ಚರ್ಮದೊಳಗಿನಿಂದ ಈ ಜಲವು ರಕ್ತಧಾರೆಯ ರೂಪದಲ್ಲಿ ಬದಲಾಯಿತು. ಈ ಕಾರಣದಿಂದ ಈ ನದಿಗೆ ಸಂಸ್ಕೃತದಲ್ಲಿ ಚರ್ಮನ್ವತೀ ಎಂದು ಹೆಸರಿಸಿದರು. ಇದೇ ಚರ್ಮನ್ವತಿಗೆ ಇಂದು ಚಂಚಲ ನದಿಯೆಂದು ಹೆಸರು. ದೃಷದ್ವತಿ ಎಂಬ ಇನ್ನೊಂದು ನದಿಯಿದೆ. ದೃಷದ್ವತಿಯು ಬಧೇಲಖಂಡ ಪ್ರದೇಶದಲ್ಲಿ ವಿಂಧ್ಯ ಪರ್ವತದಿಂದ ಹೊರಟು ಉತ್ತರಾಭಿಮುಖವಾಗಿ ಹರಿದು ಗಂಗೆಯನ್ನು ಸೇರುತ್ತದೆ. ದೃಷತ್ ಶಬ್ದದ ಅರ್ಥವೆಂದರೆ ಮುರಿಗೆ ಕಲ್ಲು, ನದಿಯ ಹರವಿನಲ್ಲಿ ಬಹಳ ಮುರಿಗೆಗಲ್ಲು, ಹರಳುಗಳಿದ್ದವು.ಆದ್ದರಿಂದ

ಅದಕ್ಕೆ ದೃಷದ್ವತಿ ಎಂದು ಕರೆದರು. ಇದು ಉತ್ತರದಲ್ಲಿ ಗಂಗೆಯತ್ತ ಹರಿಯುತ್ತಿತ್ತು. ಮತ್ತು ಚರ್ಮನ್ವತಿಯು ಪೂರ್ವಾಭಿಮುಖವಾಗಿ ಹರಿಯುತ್ತಿತ್ತು. ಉಭಯ ನದಿಗಳು ಪ್ರಯಾಗದಿಂದ ಸ್ವಲ್ಪ ಈಚೆಗೆ ದಕ್ಷಿಣಕ್ಕೆ ಸಂಗಮಿಸಿದ್ದವು. ಇದಾದ ಬಳಿಕ ಎರಡೂ ಸೇರಿ ಕೌಶಂಬಿಯನ್ನು, ಧಾಟಿ ಪ್ರಯಾಗದ ಬಳಿ ಗಂಗೆಯನ್ನು ಸೇರುತ್ತವೆ. ಈ ಉಭಯ ನದಿಗಳ ಒಟ್ಟಾರೆ ಹೆಸರು ಸರಸ್ವತಿ ಎಂದಾಯಿತು. ಚರ್ಮನ್ವತಿ ಮತ್ತು ದೃಷದ್ವತಿಗಳೆರಡೂ ಸೇರಿ, ಸರಸ್ವತಿಯಾಗಿತು. ಈ ಕೌಶಂಬಿಯಲ್ಲಿ ಅನೇಕ ಭಗ್ನಾವ ಶೇಷಗಳೂ, ಧ್ವಂಸಾವಶೇಷಗಳೂ ದೊರೆತಿವೆ, ಎಂಬುದು ನಿಮಗೆ ಗೊತ್ತಾಗಿರ ಬಹುದು. ಸ್ಥಾನೀಶ್ವರದ ಹರ್ಷವರ್ಧನ ರಾಜನ ಕಾಲದ ಅನೇಕ ಪ್ರಾಚ್ಯ ಸಂಶೋ ಧನದ ನಿದರ್ಶನಗಳು ಇಲ್ಲಿ ದೊರೆತಿವೆ. ಹರ್ಷವರ್ಧನ ದೊರೆಯು ಬಳಸುತ್ತಿದ್ದ ಬಂಗ್ಲಾ ಲಿಪಿಯಲ್ಲಿದ್ದ ಪ್ರಥಮ ಮೊಹರು (seal) ಕೌಶಂಬಿಯಲ್ಲಿ ದೊರೆತಿದೆ. ಹರ್ಷ ವರ್ಧನನ ಈ ಮೊಹರನ್ನು ಶ್ರೀ ಹರ್ಷ, ಲಿಪಿಯಲ್ಲಿ ಬರೆಯಲಾಗಿದೆ. ಅದೂ ಸಹ ಈ ಕೌಶಂಬಿಯಲ್ಲಿಯೇ ದೊರೆತಿದೆ.

ಇನ್ನು ಯಮುನೆಯು ಪಶ್ಚಿಮ, ದಿಶೆಯಿಂದ ಹರಿದು ಬಂದಳು. ಗಂಗೆಯು ಉತ್ತರ–ಪಶ್ಚಿಮದಿಂದ ಬಂದಳು. ಮತ್ತು ದಕ್ಷಿಣ ದಿಕ್ಕಿನಿಂದ, ಚರ್ಮನ್ವತಿ ಮತ್ತು ದೃಷದ್ವತಿಯರ ಒಟ್ಟಾರೆ ಪ್ರವಾಹವಾದ ಸರಸ್ವತಿಯು ಹರಿದು ಬಂದಳು. ಮತ್ತು ಈ ಮೂರು ನದಿಗಳು ಪ್ರಯಾಗದ ಹತ್ತಿರ ಸಂಗಮಿಸಿದವು. ಒಂದು ಸಲ ಮಧ್ಯ ಭಾರತದಲ್ಲಿ ಒಂದು ದೊಡ್ಡ ಭೂಕಂಪವಾಯಿತು. ಈ ಕಾರಣದಿಂದ ಚರ್ಮನ್ವತಿ ನದಿಯು ಪೂರ್ವಾಭಿಮುಖಿಯಾಗಿ ಹರಿಯದಂತಾಯಿತು. ಮತ್ತು ಯಮುನೆಯಲ್ಲಿ ಕೂಡಿತು. ಹೀಗೆ ಚಂಬಲ್ ನದಿಯು ಇಂದು ನೇರವಾಗಿ ಯಮುನಾ ನದಿಯನ್ನು ಸೇರುತ್ತದೆ. ಇನ್ನೂ ದೃಷದ್ವತಿ ನದಿಯು ಸಹ ಚಂಬಲ್ ನದಿಯೊಂದಿಗೆ ಉತ್ತರ ದತ್ತ ಕೂಡಿಕೊಳ್ಳಲಿಲ್ಲ. ಪ್ರತಿಯಾಗಿ ಉತ್ತರ ಪೂರ್ವಾಭಿಮುಖವಾಗಿ ಹರಿದು ಶೋಣ ನದಿಯಲ್ಲಿ ಸೇರುತ್ತದೆ. ಈ ಕಾರಣ ಚರ್ಮನ್ವತಿ ಮತ್ತು ದೃಷದ್ವತಿ ನದಿಗಳ ಒಟ್ಟು ಪ್ರವಾಹವು ಇಂದು ಇಲ್ಲವಾಗಿದೆ. ಇಂದು ಪ್ರಯಾಗದಲ್ಲಿ ತ್ರಿವೇಣಿ ಇಲ್ಲ, ಇರುವುದು ದ್ವಿವೇಣಿ ಮಾತ್ರ. ಏನೇ ಇರಲಿ ಈ ದೃಷದ್ವತಿಯ ಇಂದಿನ ಹೆಸರು ಘಾಘರ ಅಥವಾ ಘಾಘರಾ. ಒಂದು ವೇಳೆ, ನೀವು ಯಾರಾದರೂ ರೀವಾ ಪಟ್ಟಣಕ್ಕೆ ಹೋದರೆ ಈ ದೃಷದ್ವತಿ ನದಿಯನ್ನು ನೋಚಬಲ್ಲಿರಿ. ದೃಷದ್ವತಿ ನದಿಗೆ ಅನಂತರ ಲೌಕಿಕ ಸಂಸ್ಕೃತದಲ್ಲಿ ಘರ ಘರಾ ಎನ್ನುತ್ತಾರೆ. ಆಂದರೆ ನದಿಯ ನೀರಿನಲ್ಲಿ ಭಯಂಕರ ಸಪ್ಪಳವಾಗುತ್ತದೆ. ಏಕೆಂದರೆ, ನದಿಯ ಪಾತ್ರದಲ್ಲಿ ಬಹು ದೊಡ್ಡ ದೊಡ್ಡ ಬಂಡೆ ಗಳಿವೆ. ಅಂದರೆ ದೃಷದ್‌ಗಳಿವೆ. ಆದೇನೆ ಇರಲಿ ಈ ಸರಸ್ವತಿ ನದಿಯು ಉತ್ತರ ಮಧ್ಯ ಪ್ರದೇಶವನ್ನು ಜಲ ನಿಂಚಿತ ಮಾಡಿದೆ. ಈ ಕಾರಣದಿಂದ, ಬಧೇರ ಖಿಂಡದ ಪ್ರದೇಶವು ಬಹಳ ಫಲವತ್ತಾಗಿದೆ. ಇದರಿಂದಾಗಿ ಜನರು ಆ ನದಿಗೆ ದೇವಿ ಎಂದು ಕರೆಯುತ್ತಿದ್ದರು. ಇವಳೇ ವೈದಿಕ ಸರಸ್ವತಿ. ಈ ಸರಸ್ವತಿಯಂತೂ ಯಾವ ದೇವಿಯೂ ಅಲ್ಲ. ನಾರಿಯೂ ಅಲ್ಲ. ಇನ್ನೂ ಶಿವ ಕನ್ಯೆಯಂತೂ ಅಲ್ಲವೆ ಅಲ್ಲ.

ಅಂಬಿ ತಮೇ–'ಎಲೈ ತಾಯಿಯೇ'
ನದಿತಮೆ–'ಎಲೈ ಮಹಾನದಿಯೇ'
ದೇವಿತಮೆ–'ಎಲೈ ಮಹತ್ತಮದೇವತೆ'

ಈ ಸಂಸ್ಕೃತ ಸಾಲಿನ ಶಬ್ದಾರ್ಥವು ಇದೇ ಆಗಿದೆ. ವೇದದಲ್ಲಿ, ದೇವಿಸರಸ್ವತಿಯ ಉಲ್ಲೇಖವೇನೋ ಇದೆ. ಆದರೆ ಇದು ಕೇವಲ ನದಿಯ ಹೆಸರು ಮಾತ್ರ. ಹೀಗೆ ಸರಸ್ವತಿಯು ವೈದಿಕ ದೇವಿಯೇನೂ ಅಲ್ಲ. ಇದನ್ನು ಈಗ ನಾನು ಸಿದ್ಧಪಡಿಸಿದೆ.

ಇದಾದ ಬಳಿಕ, ಬೇರೊಂದು ಕಥೆಯಿದೆ. ಇದು ಶಿವನ ಕಾಲದ ಕಥೆ. ಸರಸ್ವತಿಯು ಶಿವನ ಕನ್ಯೆಯೇನೂ ಅಲ್ಲ, ಅವಳು ಶಿವಕನ್ಯೆ ಎಂಬ ಮತಾವಾದವನ್ನು ನಾನು ತಿರಸ್ಕರಿಸುವೆ. ಅನಂತರದ ಕಾಲದಲ್ಲಿ, ಪುರಾಣದಲ್ಲಿ ಸರಸ್ವತಿಗೆ ಸಂಬಂಧಿಸಿದಂತೆ ಹೇಳಿದ ವಿಷಯ ಕುರಿತು ನಾನು ಸ್ವಲ್ಪ ಕಾಲದಲ್ಲಿ ಹೇಳುವೆನು. ಅವಳು ಶಿವನ ಕನ್ಯೆಯಲ್ಲ. ಇದಕ್ಕೆ ಎಲ್ಲಕ್ಕಿಂತ ದೊಡ್ಡ ಪ್ರಮಾಣವಿದೆ. ಏನೆಂದರೆ ಎಲ್ಲ ದೇವತೆ ಗಳಿಗೂ ಬೀಜ ಮಂತ್ರಗಳಿವೆ. ಧ್ಯಾನ ಮಂತ್ರಗಳಿವೆ ಮತ್ತು ಪ್ರಣಾಮ ಮಂತ್ರಗಳಿವೆ; ಸರಸ್ವತಿಯ ಮಂತ್ರವು ಹೀಗಿದೆ.

ಕಜ್ಜ್ವಲಪೂರಿತ ಲೋಚನ ಭಾರೇ, ಸ್ತನಯುಗ ಶೋಭಿತ ಮುಕ್ತಾಹಾರೇ
ವೀಣಾಪುಸ್ತಕ ರಂಜಿತಹಸ್ತೇ ಭಗವತೀ ಭಾರತೇ ದೇವಿ ಸಮಸ್ತೆ

(ಆನಂದಾಶ್ರುಗಳಿಂದ ತುಂಬಿದ ಕಣ್ಣುಗಳುಳ್ಳವಳೇ, ಮುತ್ತಿನ ಮಾಲೆಗಳಿಂದ ಶೋಭಿ ಸುವ ಸ್ತನಗಳೆರಡನ್ನು ಹೊಂದಿದವಳೇ, ವೀಣೆ, ಪುಸ್ತಕಗಳನ್ನ ಒಂದೊಂದು ಕೈಯ್ಯಲ್ಲಿ ಹಿಡಿದು ಮನವನ್ನು ರಂಜಿಸುವವಳೇ, ಭಗವತಿ ಜ್ಞಾನದೇವಿ ನಿನಗೆ ನಮಸ್ಕಾರ;).

ಶಿವನ ಕಾಲದಲ್ಲಿ ವೀಣೆಯು ಬಳಕೆಯಲ್ಲಿತ್ತು, ವೀಣೆಯು ಅತಿ ಪ್ರಾಚೀನ ಭಾರತೀಯ ವಾದ್ಯ, ಯಂತ್ರ. ಹೀಗೆ ಒಂದು ವೇಳೆ ಸರಸ್ವತಿಯು ಶಿವನ ಕಾಲದಲ್ಲಿ ದ್ದರೆ, ಮತ್ತು ಅವಳ ಕೈಯಲ್ಲಿ ವೀಣೆಯಿದ್ದರೆ, ಅದಾವ ಆಶ್ಚರ್ಯ ಮಾತೂ ಅಲ್ಲ. ವೀಣೆಯು ಸರಳತಮ ತಂತಿಯ ವಾದ್ಯ. ಈ ಸರಳತಮ ವಾದ್ಯ ಯಂತ್ರದ ಮೂಲಕವೇ ಆ ಬಳಿಕ ಬೇರೆ ಬೇರೆ ವಾದ್ಯ ಯಂತ್ರಗಳ ಆವಿಷ್ಕಾರವಾಯಿತು. ಕೆಲವನ್ನು ಭಾರತದಲ್ಲಿ, ಕೆಲವನ್ನು ಮಧ್ಯ ಏಶಿಯಾದಲ್ಲಿ ಮತ್ತೆ ಕೆಲವನ್ನು ಆರ್ಯನ್ಯ ವ್ಯಜದಲ್ಲಿ (ಇದರ ಇಂದಿನ ಹೆಸರು ಇರಾಣ–ಪರ್ಶಿಯಾ,) ಆವಿಷ್ಕರಿಸಲಾಯಿತು. ಫಾರಸಿ ಭಾಷೆಯಲ್ಲಿ 'ಸಿ' ಇದರರ್ಥವು ಮೂರು ಎಂದು.ಆದ್ದರಿಂದ ಮೂರು ತಂತಿಗಳ ವಾದ್ಯಯಂತ್ರವು ಸಿತಾರ್. ಹೀಗೆ ಇನ್ನಿತರ ವಾದ್ಯ ಯಂತ್ರಗಳ ವಿಕಾಸವಾಯಿತು. ಈ ಪ್ರಕಾರ ಒಂದು ವೇಳೆ ಆ ಕಾಲದಲ್ಲಿ ಸರಸ್ವತಿಯ ಕೈಯಲ್ಲಿ ವೀಣೆಯಿದ್ದರೆ, ಅದಾವ ಆಶ್ಚರ್ಯದ ಮಾತು ಅಲ್ಲ. ಆದರೆ ನಿಜವಾಗಿ ಆಶ್ಚರ್ಯಪಡಬೇಕಾದುದೆಂದರೆ ಅವಳ ಕೈಯಲ್ಲಿ ಪುಸ್ತಕವಿರುವುದು. "ವೀಣಾ ಪುಸ್ತಕ ರಂಜಿತ ಹಸ್ತೆ" –ಶಿವನ ಕಾಲ ದಲ್ಲಿ ಮಾನವನು ಬರೆಯುವುದನ್ನು ತಿಳಿದಿರಲಿಲ್ಲ. ಅಂದಮೇಲೆ ಪುಸ್ತಕ ಎಲ್ಲಿಂದ ಬರುತ್ತದೆ? ಪುರಾಣಕಾರನು ತನ್ನ ಜಾಲದಲ್ಲಿ ತಾನೇ ಸಿಕ್ಕಿಕೊಂಡುಬಿಟ್ಟಿದ್ದಾನೆ. ಆ ಕಾಲದಲ್ಲಿ ಅಕ್ಷರವಿರಲಿಲ್ಲ. ಈ ಕಾರಣದಿಂದ ತಾಳೆಗರಿ, ಇಲ್ಲವೆ ಭೂರ್ಜ ಪತ್ರಗಳ ಮೇಲೆ ಪುಸ್ತಕ ಬರೆಯುವ ಸಂಭವವೇ ಇರಲಿಲ್ಲ. ಅಂದಮೇಲೆ ಒಂದು ವೇಳೆ

ಸರಸ್ವತಿಯ ಕೈಯಲ್ಲಿ ಪುಸ್ತಕವಿದ್ದುದೇ ಆದರೂ ಅವಳು ನಿಜವಾಗಿಯೂ ಶಿವನ ಕಾಲಕ್ಕೆ ಸಂಬಂಧಿಸಿದವಳು ಆಗಲಾರಳು. ಆದ್ದರಿಂದ, ಅವಳು ಶಿವನ ಕನ್ಯೆಯೂ ಆಗಲಾರಳು.

ಇದಲ್ಲದೆ ಪುರಾಣ ಪುರಾಣಗಳಲ್ಲಿ ಅಭಿಪ್ರಾಯ ಬೇಧವಿದೆ. ಕೆಲವರು ಸರಸ್ವತಿಯೂ ಬ್ರಹ್ಮನ ಮಗಳೆನ್ನುತ್ತಾರೆ. ಮತ್ತೆ ಕೆಲವರು ವಿಷ್ಣುವಿನ ಹೆಂಡತಿಯೆನ್ನುತ್ತಾರೆ. ಇನ್ನೂ ಕೆಲವರಂತೂ ಅವಳು ಶಿವನ ಕನ್ಯೆ ಮತ್ತು ಬ್ರಹ್ಮನ ಪತ್ನಿ ಎನ್ನುತ್ತಾರೆ.

ಈ ವಿಷಯ ಕುರಿತು, ಪುರಾಣ ಕರ್ತರಲ್ಲಿ ಒಮ್ಮತವಿಲ್ಲ. ಹೀಗೆ ಸರಸ್ವತಿಯೂ ಶಿವನ ಮಗಳು ಎಂಬುದಕ್ಕೆ ಯಾವುದೇ ಪ್ರಭಲ ಪ್ರಮಾಣವಿಲ್ಲ. ಏಕೆಂದರೆ, ಶಿವನು ೭೦೦೦ ವರ್ಷ ಮೊದಲು ಹುಟ್ಟಿದ್ದಾನೆ. ಆದರೆ ಈ ಪುರಾಣಗಳಾದರೋ ಕೇವಲ ೧೫೦೦ ವರ್ಷಗಳ ಹಿಂದೆ ಮಾತ್ರ ಬರೆಯಲ್ಪಟ್ಟಿವೆ.

ಸರಸ್ವತಿಯು ಶಿವನ ಕನ್ಯೆಯು ಆಲ್ಲ. ಮತ್ತು ಬ್ರಹ್ಮನ ಪುತ್ರಿಯೂ ಆಲ್ಲ ಮತ್ತು ಅವನ ಪತ್ನಿಯೂ ಅಲ್ಲ. ವಿಷ್ಣುವಿನ ಪತ್ನಿಯಲ್ಲ; ಎಂಬುದನ್ನು ಸಿದ್ಧಪಡಿಸಲು ಇನ್ನೂ ಒಂದು ಪ್ರಮಾಣವಿದೆ. ಏಕೆಂದರೆ ಸರಸ್ವತಿಯ ಧ್ಯಾನ ಮಂತ್ರದಲ್ಲಿ ಹೀಗೆ ಹೇಳಲಾಗಿದೆ.

ಯಾ ಕುಂದೇಂದು ತುಷಾರ ಹಾರ ಧವಲಾ, ಯಾ ಶುಭ್ರವಸ್ತ್ರಾವೃತಾ
ಯಾ ವೀಣಾವರ ದಂಡಮಂಡಿತಕರಾ, ಯಾ ಶ್ವೇತ ಪದ್ಮಾಸನಾ,
ಯಾ ಬ್ರಹ್ಮಾಚ್ಯುತ ಮಹೇಶ ಪ್ರಭೃತಿ ಹಿ ದೇವೈಃ ಸದಾ ವಂದಿತಾ
ಸಾ ಮಾಂ ಪಾತು ಭಗವತೀ ಸರಸ್ವತೀ ನಿಃಶೇಷ ಜಾಡ್ಯಾಪಹಾ.

(ಕುಂದ ಹೂವಿನ ಬೆಳ್ಳಗಿರುವ, ಚಂದ್ರನಷ್ಟು ಬೆಳ್ಳಗಿರುವ. ತುಷಾರಧಾರೆಯಂತೆ ಬೆಳ್ಳಗಿರುವ, ಶುಭ್ರ ಬಟ್ಟೆ ಧರಿಸಿರುವ, ಕೈಯಲ್ಲಿ ವೀಣೆ ಹಿಡಿದು ಶೋಭಿಸುವ, ಬಿಳಿಯ ಕಮಲದ ಮೇಲೆ ಪವಡಿಸಿರುವ, ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರಿಂದ ಯಾವಾಗಲೂ ಪೂಜೆಗೊಳ್ಳುತ್ತಿರುವ, ಜಗದ ಜಾಡ್ಯವನ್ನು ನಿಶ್ಶೇಷವಾಗಿ ತೊಡೆಯುವ ಭಗವತಿ ಸರಸ್ವತಿಯು ನಮ್ಮನ್ನು ಕಾಪಾಡಲಿ).

ಮೇಲಿನ ಸಾಲೊಂದರಲ್ಲಿ, 'ಯಾ ಬ್ರಹ್ಮಾಚ್ಯುತ ಮಹೇಶ ಪ್ರಭೃತಿಃ ದೇವೈಃ ಸದಾ ವಂದಿತಾ' ಎಂದು ಹೇಳಲಾಗಿದೆ. ಅಂದರೆ, ಯಾವ ದೇವಿ ಸರಸ್ವತಿಯನ್ನು ಬ್ರಹ್ಮ, ಅಚ್ಯುತ ಅರ್ಥಾತ್ ವಿಷ್ಣು ಮತ್ತು ಶಿವ, ಇವರೆಲ್ಲರೂ ಯಾವಾಗಲೂ ಪೂಜಿಸುತ್ತಾರೆ. ಒಂದು ವೇಳೆ ಶಿವನ ಮಗಳಾಗಿದ್ದರೆ, ಶಿವನು ಅವಳನ್ನು ಪೂಜಿಸುತ್ತಿರಲಿಲ್ಲ; ಬ್ರಹ್ಮನ ಮಡದಿಯಾಗಿದ್ದರೆ, ಬ್ರಹ್ಮನಾದರೂ ಅವಳನ್ನು ಪೂಜಿಸುತ್ತಿರಲಿಲ್ಲ. ವಿಷ್ಣುವಿನ ಹೆಂಡತಿಯಾಗಿದ್ದರೆ, ಅವನಾದರೂ ಅವಳನ್ನು ಪೂಜಿಸದಿರಬಹುದಿತ್ತು. –ಈ ರೀತಿ ಪುರಾಣದ ಸಕಲ ಟೊಳ್ಳು ಮಾತುಗಳು 'ಬ್ರಹ್ಮಾಚ್ಯುತ ಮಹೇಶ ಪ್ರಭೃತಿಃ ದೇವೈಃ ಸದಾ ವಂದಿತಾ' ಎಂಬ ಒಂದೇ ಶ್ಲೋಕದಿಂದ ಖಂಡಿಸಲ್ಪಡುತ್ತವೆ. ಈ ಪ್ರಕಾರ ಅವಳು ಬ್ರಹ್ಮ, ವಿಷ್ಣು, ಮಹೇಶ್ವರರಲ್ಲಿ ಅವಳು ಯಾರ ಪುತ್ರಿಯೂ ಅಲ್ಲ; ಯಾರ ಪತ್ನಿಯೂ ಅಲ್ಲ. ಹಾಗಾದರೆ, ನಾವು ಆಚರಿಸುವ ಈ

ಸರಸ್ವತೀ ಪೂಜೆ, ಮತ್ತು ದುರ್ಗೆ ಇಲ್ಲವೆ ಲಕ್ಷ್ಮಿಯೊಂದಿಗೆ ಸರಸ್ವತಿಯ ಪೂಜೆಯ ಆಚರಣೆಯು ಹೇಗೆ ಮತ್ತು ಎಂದಿನಿಂದ ಶುರುವಾಯಿತು?

ನೀವೆಲ್ಲ ತಿಳಿದಿರುವಂತೆ, ಬೌದ್ಧ ತಂತ್ರಯುಗದಲ್ಲಿ, ವಿಶೇಷವಾಗಿ ವಜ್ರಯಾನಿ ತಂತ್ರ ಯುಗದಲ್ಲಿ ಓರ್ವ ದೇವಿಯಿದ್ದಳು. ಅವಳ ಹೆಸರು ತಾರಾ. ತಾರಾಳನ್ನು ದಶಮಹಾವಿದ್ಯಾರಲ್ಲಿ ಎರಡನೇ ಮಹಾವಿದ್ಯಾ ಎಂದು ಸ್ವೀಕರಿಸಿದ್ದರು. ಈ ತಾರೆಯ ಸಂಬಂಧದಲ್ಲಿ ಹೇಗೆ ಹೇಳಿದ್ದಾರೆ.

"ಗರ್ವಿತ ದಾನವಗರ್ವ ಖರ್ವಾಕೃತಿ ಖಡಗಕರ್ಪರಾ ನೀಲ ಸರಸ್ವತೀ
ಸರ್ವ ಸೌಭಾಗ್ಯ ಪ್ರದಾಯಿನೀ ಕರ್ತೀ ನಮಸ್ತೇ ತರಾ ರೂಪಾತಾರಿಣೀ"

(ಎಲೈ ನೀಲವರ್ಣದ ಸರಸ್ವತಿಯೇ ನಿನಗೆ ನಮಿಸುವೆನು. ನೀನು ತಾರಕರೂಪದ ತಾರಾ ಆಗಿರುವೆ. ನೀನು ಗರ್ವಿಷ್ಠ ದಾನವರ ಒರೆಯಲ್ಲಿರುವ ಖಡ್ಗದಿಂದ ಹತ್ತಿಕ್ಕುವ ವಳಾಗಿರುವೆ. ನೀನು ಭಕ್ತರಿಗೆ ಎಲ್ಲ ಸೌಭಾಗ್ಯವನ್ನು ನೀಡುವವಳಾಗಿರುವೆ).

ವಜ್ರಯಾನ ಬೌದ್ಧ ತಾಂತ್ರಿಕ ಯುಗದಲ್ಲಿ, ತಾರಾಳನ್ನು ಭಾರತದಲ್ಲಿ ಉಗ್ರ ತಾರಾ ಎಂದೂ, ಚೀನದಲ್ಲಿ ಭ್ರಾಮಕೀ ತಾರಾ ಎಂದೂ ಮತ್ತು ಕಿಂಪುರುಷ ವರ್ಷ (ತಿಬೇಟ)ದಲ್ಲಿ ವಜ್ರತಾರಾ ಎಂದೂ ಕರೆಯುತಿದ್ದರು.

'ಕಿಂ ಪುರುಷ ವರ್ಷ' ಎಂಬ ಹೆಸರಿನ ಹೆನ್ನೆಲೆಯಲ್ಲಿ ಒಂದು ಮನಸೆಳೆದ ಕಥೆಯಿದೆ. ತಿಬೇಟಿನ ಸ್ತ್ರೀ–ಪುರುಷರೀರ್ವರೂ ಒಂದೇ ರೀತಿಯ ಸಡಿಲಾದ ಬಟ್ಟೆಯನ್ನ್ನು ಧರಿಸುತ್ತಾರೆ; ಆದ್ದರಿಂದ, ದೂರದಿಂದ ಯಾರು ಗಂಡು ಯಾರು ಹೆಣ್ಣು ಎಂದು ಗುರುತಿಸುವದು ಕಷ್ಟವಿತ್ತು. 'ಕಿಮ್ ಪುರುಷ' ಎಂದರೆ, ಅವನು ಪುರುಷನೇ, ಎಂದು ತಿಳಿಯುವದು ಕಠಿಣವಿತ್ತು. ಇನ್ನು ವರ್ಷವೆಂದರೆ ದೇಶ. ಈ ಕಿಮ್‌ಪುರುಷ ವರ್ಷ ಎಂದರೆ ಯಾವ ದೇಶದಲ್ಲಿ ಪುರುಷರನ್ನು ನೋಡಿ ಅವನು ಪುರುಷನೋ ಅತವೋ ಎಂದು ಹೇಳುವದು ಶಕ್ಯವಿದ್ದಿಲ್ಲವೋ ಆದೇಶ. ಅದೇನೇ ಇರಲಿ, ಅಲ್ಲಿ ವಜ್ರತಾರಾಳನ್ನು ಪೂಜಿಸುತ್ತಿದ್ದರು. ವಜ್ರತಾರಾಳ ಇನ್ನೊಂದು ಹೆಸರು ನೀಲ ಸರಸ್ವತಿ ಎಂದಿತ್ತು. 'ಗರ್ವಿತ ದಾನವ ಗರ್ವ ಖರ್ವಾಕೃತಿ, ಖಡಗ ಖರ್ಪರಾ ನೀಲ ಸರಸ್ವತಿ'. ಈ ನೀಲ ಸರಸ್ವತಿಯ ಮೂರ್ತಿಯು ನಿಮಗೆ ಬುದ್ಧ ಗಯೆಯ ಮಂದಿರದಲ್ಲಿಯೂ ದೊರೆಯುತ್ತದೆ. ನೀಲ ಬಣ್ಣದ ತಾರೆ. ವಸಿಷ್ಟ ಮಹರ್ಷಿಯು ಆ ಬೌದ್ಧ ತಂತ್ರಯುಗದ ವ್ಯಕ್ತಿಯಾಗಿದ್ದರು, ಎಂದಿಲ್ಲಿ ಹೇಳಿದರೆ ಅಪ್ರಸ್ತುತವಾಗಲಿಕ್ಕಿಲ್ಲ. ಅವನು ರಚಿಸಿದ ಯೋಗ ವಾಶಿಷ್ಠವು ಅಧ್ಯಾತ್ಮ ರಾಮಾಯಣ ಎಂಬ ಹೆಸರಿನಿಂದ ಖ್ಯಾತಿ ಹೊಂದಿದೆ. ಅದರೊಂದಿಗೆ ರಾಮಾಯಣದ ಯಾವ ಸಂಬಂಧವೂ ಇಲ್ಲ. ಅದು ಸಹ ಬೌದ್ಧ ತಂತ್ರದ ಪುಸ್ತಕವಾಗಿದೆ. ಸಂಸ್ಕೃತ ಭಾಷೆಯಲ್ಲಿ ಬರೆಯಲಾಗಿದೆ. ವಶಿಷ್ಠ ಮಹರ್ಷಿಯು ತಂತ್ರದ ಚೀನಾ ಶಾಖೆಯಲ್ಲಿ ಪ್ರಭುತ್ವ ಸಂಪಾದಿಸಲು ಚೀನಾಕ್ಕೆ ಹೋದನು. ಮತ್ತು ಅಲ್ಲಿಂದ ತಾರಾಳ ಮೂರ್ತಿಯನ್ನು ತಂದು ಪಶ್ಚಿಮ ಬಂಗಾಲದಲ್ಲಿ ಬೀರಭೂಮ ಜಿಲ್ಲೆಯ ತಾರಾಪೀಠ ಎಂಬಲ್ಲಿ, ಪ್ರತಿಷ್ಠಾಪಿಸಿದನು. ಅಂದರೆ ಆ ತಾರೆಯು ಸಹ ಬೌದ್ಧ ತಾಂತ್ರಿಕ ದೇವಿಯಾಗಿದ್ದಳು. ಅವಳು ಪೌರಾಣಿಕ ದೇವಿಯೇನೂ ಅಲ್ಲ.

ಬೌದ್ಧದೇವಿಯಷ್ಟೇ ಆದೇನೇ ಇರಲಿ, ನೀಲ ಸರಸ್ವತಿಯು ಅನಂತರದ ಕಾಲದಲ್ಲಿ ಪೌರಾಣಿಕ ಶಾಕ್ತಾಚಾರದಲ್ಲಿ ಪೌರಾಣಿಕ ಯುಗದಲ್ಲಿ, ಸರ್ವ ಶುಭ್ರ ಸರಸ್ವತಿ ಎಂದು ಸ್ವೀಕೃತಳಾದಳು. ಅಂದರೆ ಅವಳು ನೀಲಿ ಬಣ್ಣದವಳಾಗಿ, ಉಳಿಯದೆ ಶ್ವೇತ (ಬಿಳಿಯ) ಬಣ್ಣದವಳಾದಳು. ಇದು ಇಂದಿನಿಂದ ೧೩೦೦ ವರ್ಷಗಳ ಹಿಂದಿನ ಮಾತಷ್ಟೇ. ಅಂದರೆ ಶಿವನ ಕಾಲದಿಂದ ಬಹಳ ಕಾಲ ಸಂದ ಮೇಲಿನ ಮಾತು. ಒಂದು ವೇಳೆ, ಭೂವಿಯ ಅಗೆತದಿಂದ ನಿಮಗೆ ಶ್ವೇತ ಇಲ್ಲವೆ ಶುಭ್ರ ಸರಸ್ವತಿಯ ಮುಕ್ಕಾದ ಇಲ್ಲವೆ ಪೂರ್ಣ ಮೂರ್ತಿಗಳು ಸಿಕ್ಕರೆ ಅವುಗಳಾವವೂ ೧೩೦೦ ವರ್ಷಗಳಿಗಿಂತ ಪೂರ್ವದವಲ್ಲವೆಂಬುದನ್ನು ನೀವು ನೆನಪಿಡಿರಿ. ಆದರೆ ಈ ಸರ್ವಶುಕ್ಲಾ ಪೌರಾಣಿಕ ಸರಸ್ವತಿ ದೇವಿಯು ಪೂಜೆಯ ಸಹ ವ್ಯಾಪಕ ರೂಪದಲ್ಲಿ ನಡೆಯುತ್ತಿದ್ದಿಲ್ಲ. ಪಠಾಣ ಯುಗದ ವರೆಗಂತೂ ಈ ಪೂಜೆ ನಡೆಯುತ್ತಿರಲಿಲ್ಲ. ಪಠಾಣಯುಗದಲ್ಲಿ ಜನರು ಈ ಸರ್ವಶುಕ್ಲಾ ಸರಸ್ವತಿಯ ಪೂಜೆಯೊಂದಿಗೆ ಪುಸ್ತಕದ ಪೂಜೆಯನ್ನು ಮಾಡುತ್ತಿದ್ದರು. ಆಂಗ್ಲರ ಆಳ್ವಿಕೆಯಲ್ಲಿ ಸಾಹೇಬ ಜನರು ಹೀಗೆ ಹೇಳುತ್ತಿದ್ದರು. ನಿಮ್ಮಲ್ಲಿ ಎಷ್ಟೊಂದು ದೇವ ದೇವತೆಗಳಿವೆ; ಅಂದಮೇಲೆ ನೀವು ಪುಸ್ತಕಗಳನ್ನೇಕೆ ಸರ್ವಶುಭ್ರ ಸರಸ್ವತಿಯಿಂದು ಪೂಜಿಸುತ್ತೀರಿ? ಆ ಕಾಲದ ನಂತರ ಕಲಕತ್ತಾ ಪಟ್ಟಣದಲ್ಲಿ ಸರ್ವ ಶುಭ್ರ ಸರಸ್ವತಿದೇವಿಯ ಮೂರ್ತಿಯನ್ನು ಪೂಜಿಸುವ ಪದ್ಧತಿಯು ಶುರುವಾಯಿತು. ಇದು ಅತ್ಯಂತ ಆಧುನಿಕ–ಕಾಲದ ಮಾತು. ಈ ಸರಸ್ವತಿಯೊಂದಿಗೆ ಶಿವನ ಯಾವ ಸಂಪರ್ಕವೂ ಇಲ್ಲ. ಈ ದೇವಿಯ ಕಲ್ಪನೆಯು ಕೇವಲ ೧೩೦೦ ವರ್ಷ ಪೂರ್ವದ್ದಷ್ಟೇ. ಆದರೆ ಶಿವನ ಕಾಲದಿಂದ ೫೦೦೦ ವರ್ಷಗಳಷ್ಟು ಇಚೀನದು. ಬೌದ್ಧ ತಂತ್ರದಲ್ಲಿನ ತಾರಾದೇವಿಯ ಬೀಜ ಮಂತ್ರವು "ಐಂ" ಎಂದೆತ್ತು. ಐ ಬರೆದು ಒಂದು ಅನುಸ್ವಾರ ಇಡುವದು, "ಐಂ ಸರಸ್ವತೈ ನಮಃ". ಹಲಕೆಲವರು, ಮಹಾಯಾನಿ ಬೌದ್ಧ ಪ್ರಜ್ಞಾ ಪರಿಮಿತಾಳ ಬದಲಾದ ರೂಪವೇ ಸರಸ್ವತಿಯೆಂದು ತಿಳಿಯುತ್ತಾರೆ. ಈ ಗ್ರಹಿಕೆಯು ಸರಿಯಲ್ಲ. ಏಕೆಂದರೆ ಇಬ್ಬರೂ ವಿದ್ಯೆ ಇಲ್ಲವೆ ಪ್ರಜ್ಞೆಯ ದೇವತೆಗಳಾದರೂ ಇಬ್ಬರಲ್ಲಿ ಮೂಲ ಪಾರ್ಥಕ್ಯ (ಬೇರೆ ಬೇರೆ) ವಿದೆ. ಇದರಿಂದ ಲಕ್ಷ್ಮೀಯು ಶಿವನ ಕನ್ಯೆಯಲ್ಲ. ಶಿವನೊಂದಿಗೆ ಅವಳ ಯಾವ ಸಂಪರ್ಕವೂ ಇಲ್ಲ. ಪಾರ್ವತಿಯೊಂದಿಗೂ ಸಹ ಅವಳ ಯಾವ ಸಂಪರ್ಕವೂ ಇಲ್ಲ. ಅದೇ ಮೇರೆಗೆ ಪೌರಾಣಿಕ ಯುಗದ ದುರ್ಗಾದೇವಿಯೊಂದಿಗೆ ಸಹ ಅವಳ ಯಾವ ಸಂಪರ್ಕವೂ ಇಲ್ಲ. ಅದರಂತೆಯೇ ಸರಸ್ವತಿಯ ಪಾಡು ಇದೇ ರೀತಿ, ಶಿವನೊಂದಿಗೆ ಅವಳ ಯಾವ ಸಂಬಂಧವೂ ಇಲ್ಲ. ಅವಳು ಶಿವನ ಮಗಳಲ್ಲ. ವೈದಿಕ ಸರಸ್ವತಿಯು ಕೇವಲ ಒಂದು ನದಿಯ ಹೆಸರು. ಇನ್ನು ತಂತ್ರದ ಸರಸ್ವತಿಯು ನೀಲ ಸರಸ್ವತಿ. ಅರ್ಥಾತ್ ತಾರಾ ದೇವತೆ ಮತ್ತು ಪೌರಾಣಿಕ ದೇವತೆಯಾದ ಸರಸ್ವತಿಯು ಇತ್ತೀಚಿನ ಆಂಗ್ಲರ ಕಾಲದಲ್ಲಿ ಮಾತ್ರ ಪೂಜೆಗೊಂಡವಳು. ಆ ಮೊದಲು ಅವಳ ಮೂರ್ತಿಯನ್ನು ನಿರ್ಮಿಸಿ ಪೂಜಿಸುತ್ತಿರಲಿಲ್ಲ.

ಕಲಕತ್ತಾ: ೨೩ನೇ ಮೇ–೧೯೮೨

ಪ್ರವಚನ ೮

ಶಿವನ ಸನ್ಮಾನದಲ್ಲಿಯೇ ಸರ್ವರ ಸನ್ಮಾನವಿದೆ

ಭಾಗ–೩

ಮಾನವನು ಒಬ್ಬ ಸಮೂಹ ಜೀವಿ ಎಂಬುದನ್ನು ನೀವೆಲ್ಲ ಅರಿತಿದ್ದೀರಿ. ಕೆಲವು ಜೀವಿಗಳು ಒಟ್ಟಾಗಿರುತ್ತವೆ. ಬೇರೆ ಕೆಲವು ಒಂಟಿಯಾಗಿರುತ್ತವೆ. ಅತಿ ಪ್ರಾಚೀನ ಕಾಲದಲ್ಲಿ ಮಾನವಜೀವಿಗಳು ಗೋಷ್ಠಿಗಳ ಮುಖಂಡರು ಹೆಂಗಳೆಯರೇ ಇರುತ್ತಿದ್ದರು. ಮತ್ತು ಅವರನ್ನು ಗೋತ್ರಮಾತೃಕಾ ಇಲ್ಲವೆ ಗೋಷ್ಠಿಮಾತೃಕಾ ಎಂದು ಕರೆಯುತ್ತಿದ್ದರು. ಆದರೆ ಆ ಬಳಿಕ ಈ ವ್ಯವಸ್ಥೆಯು ಬದಲಾಯಿತು. ಮತ್ತು ಇಂಥ ಬದಲಾದ ವ್ಯವಸ್ಥೆಯಲ್ಲಿ ಮುಖಂಡನು ಪುರುಷನೇ ಆಗಿರುತ್ತಿದ್ದನು. ಮತ್ತು ಅವನನ್ನು ಗೋಷ್ಠಿಪಿತ ಇಲ್ಲವೆ ಗೋತ್ರಪಿತ ಎನ್ನುತ್ತಿದ್ದರು. ಈ ಗೋಷ್ಠಿ ಮಾತೃಕಾ ಇಲ್ಲವೆ ದಲಮಾತೃಕಾ ಪದ್ಧತಿಯು ಇರುವವರೆಗೆ ವಂಶಾವಳಿಯು ಮಾತೃ ಪ್ರಧಾನ ವಂಶಾವಳಿಯಾಗಿತ್ತು. ಮತ್ತು ವಂಶಾಧಿಕಾರವು ಸಹ ಮಾತೃಗತ ದಾಯಾಧಿಕಾರ ಮತ್ತು ಮಾತೃಗತ ವಂಶಾವಳಿಯೆಂದರೆ, ಹೀಗೆ ನೀವು ಯಾರನ್ನೇ ಆಗಲಿ ತನ್ನ ಪರಿಚಯ ಹೇಳು ಎಂದಾಗ ಅವನು "ನನ್ನ ಹೆಸರು ಹೀಗೆ, ನನ್ನ ತಾಯಿಯ ಹೆಸರು ಹೀಗೆ, ನನ್ನ ಅಜ್ಜಿಯ ಹೆಸರು ಹೀಗೆ" ಎನ್ನುತ್ತಿದ್ದನು. ಇದು ಮಾತೃಗತ ಕುಲ ವ್ಯವಸ್ಥೆ. ಇಲ್ಲಿ ತಂದೆ ಯಾರು? ಎಂಬ ಬಗ್ಗೆ ಪರಿಚಯಿಸುತ್ತಿರಲಿಲ್ಲ. ಹಾಗೆಯೇ, ಶಿವನ ಕಾಲಕ್ಕಿಂತ ಮೊದಲು ವಿವಾಹ ಪದ್ಧತಿಯು ಇರಲಿಲ್ಲ. ಶಿವನು ಮೊಟ್ಟಮೊದಲು ವಿವಾಹ ಪದ್ಧತಿಯನ್ನು ರೂಢಿಗೆ ತಂದನು. ಹೀಗೆ ವಿವಾಹದ ಪ್ರಾಚೀನತಮ ರೂಪವನ್ನು ಇಂದೂ ಸಹ ಶೈವ ವಿವಾಹ ಎಂದೇ ಕರೆಯುತ್ತಾರೆ. ಈ ವಿವಾಹ ಪದ್ಧತಿಯು ಮಾನವ ಜೀವಿಗಳನ್ನು ಪ್ರಾಣಿ ಜೀವಿಗಳಿಗಿಂತ ಒಂದು ಮೆಟ್ಟಿಲು ಮೇಲಕ್ಕೆ ತಂದಿತು. ಆದರೆ ಎಲ್ಲರೂ ತಾಯಿ ಯಾರು? ಎಂಬುದನ್ನು ಮಾತ್ರ ತಿಳಿಯುತ್ತಿದ್ದರು. ಈ ಕಾರಣದಿಂದ ಕುಲ ವ್ಯವಸ್ಥೆಯು ಮಾತೃಗತವಾಗಿತ್ತು. ಮಗುವಿನ ಹೆಸರು ಸಹ ತಾಯಿಯ ಹೆಸರನ್ನೇ ಆಧರಿಸುತ್ತಿತ್ತು. ತಾಯಿಯ ಹೆಸರು ಒಂದು ವೇಳೆ ಮೋದ್ಗಲಿ ಎಂದಿದ್ದರೆ, ಮಗನ ಹೆಸರು ಮೌದ್ಗಲ್ಯಾಯನ ಎಂದಾಗುತ್ತಿತ್ತು. ತಾಯಿಯ ಹೆಸರು ರೂಪಸಾರಿ ಎಂದಿದ್ದರೆ, ಮಗನ ಹೆಸರು ಸಾರಿ ಪುತ್ರ ಎಂದಿರುತ್ತಿತ್ತು. ತಾಯಿಯ ಹೆಸರು ಮಹಾಪಾಟಲಿ ಎಂದಿದ್ದರೆ ಮಗನ ಹೆಸರು ಪಾಟಲೀಪುತ್ರ ಎಂದಾಯಿತು.

ಇವನೇ ಪಾಟ್ನಾ ಪಟ್ಟಣವನ್ನು ಕಟ್ಟಿಸಿದ್ದನು. ಹೀಗೆ ವ್ಯಕ್ತಿಗಳನ್ನು ತಾಯಿಯ ಹೆಸರಿನಿಂದ ಪರಿಚಯಿಸುತ್ತಿದ್ದರು. ಒಂದು ವೇಳೆ ತಾಯಿಯ ಹೆಸರು ಪೃಥಾ ಇಲ್ಲವೆ ಪೃಥು ಎಂದಿದ್ದರೆ, ಮಗನ ಹೆಸರು ಪಾರ್ಥ ಎಂದಾಗುತ್ತಿತ್ತು. ಅರ್ಜುನನ ಒಂದು ಹೆಸರು ಪಾರ್ಥ ಎಂದೇ ಇದೆ. ತಾಯಿಯ ಹೆಸರು ಕುಂತಿ ಎಂದಿದ್ದರೆ, ಮಗನ ಹೆಸರು ಕೌಂತೇಯ. ಆ ಕಾಲದಲ್ಲಿ ತಾಯಿಯ ಹೆಸರೇ ದೊಡ್ಡ, ಮಾತಾಗಿತ್ತು. ಆ ಕಾಲದಲ್ಲಿ ಮಾತೃಗತ ಕುಲ ವ್ಯವಸ್ಥೆಯಿತ್ತು. ದಾಯಾಧಿಕಾರವು ಸಹ ಮಾತೃಗತವಾಗಿತ್ತು. ಅಂದರೆ ಆ ಕಾಲದಲ್ಲಿ ಆಸ್ತಿಗೆ ಕನ್ಯೆಯರೇ ಅಧಿಕಾರಿಣಿಗಳಾಗುತ್ತಿದ್ದರು. ಮತ್ತೆ ಅವಳಿಂದ ಅವಳ ಮಗಳಿಗೆ ಅಧಿಕಾರ ದೊರೆಯುತ್ತಿತ್ತು. ಈ ಪ್ರಕಾರದ ವ್ಯವಸ್ಥೆಯು ಇಂದಿಗೂ ಸಹ ಪೃಥ್ವಿಯ ಮೇಲೆ ಒಂದಿಲ್ಲೊಂದು ಕಡೆ ಇದೆ. ಮೇಘಾಲಯದಲ್ಲಿ ಇಂದೂ ಸಹ ಈ ವ್ಯವಸ್ಥೆಯೇ ಇದೆ. ಕೇರಳದ ನಾಯರರಲ್ಲಿ ಬಂಗಾಲದ ಜನರಲ್ಲಿ ಸಹ ಹೆಚ್ಚು ಕಡಿಮೆ ಈ ಪದ್ಧತಿಯು ಪ್ರಚಲಿತವಿದೆ. ಬಹಳವಾದರೆ ಹೆಚ್ಚಾಗಿರಲಿಕ್ಕಿಲ್ಲ.

ಅನಂತರದ ಕಾಲದಲ್ಲಿ ಕುಲ ವ್ಯವಸ್ಥೆಯು ಪಿತೃಗತವಾಯಿತು. ಗೋಷ್ಠಿಪಿತ, ಗೋತ್ರಪಿತನ ಹೆಸರಿನ ಮೇಲೆ ಕುಲ ವ್ಯವಸ್ಥೆ ನಡೆಯುತ್ತಿತ್ತು. ಇಂದು, ಯಾರನ್ನೇ ಆಗಲಿ, ನಿಮ್ಮ ಗೋತ್ರವಾವುದು? ಎಂದು ಕೇಳಿದರೆ, ಅವನು ಒಂದು ಕಾಲದಲ್ಲಿ ಯಾವನು ಗೋತ್ರಪಿತನಿದ್ದನೋ ಅವನ ಹೆಸರನ್ನು ಹೇಳುತ್ತಾನೆ. ಈ ರೀತಿ, ಸಾವಕಾಶವಾಗಿ ದಾಯಾಧಿಕಾರವೂ ಸಹ ಪಿತೃಗತವಾಯಿತು; ತಂದೆಯ ಸಂಪತ್ತಿಗೆ ಮಗನನ್ನು ಮತ್ತು ಮಗನ ಸಂಪತ್ತಿಗೆ ಮೊಮ್ಮಗನನ್ನೂ ಅಧಿಕಾರಿಯೆಂದು ಗ್ರಹಿಸಲಾಯಿತು. ಆಸ್ತಿಯ ಅಧಿಕಾರ ಅವರಿಗೇ ದೊರೆಯಿತು. ಹೆಣ್ಣುಮಕ್ಕಳನ್ನು ಒಂದು ರೀತಿಯಲ್ಲಿ ಸಂಪತ್ತಿನ ಅಧಿಕಾರದಿಂದ ವಂಚಿತರನ್ನಾಗಿ ಮಾಡಲಾಯಿತು. ಅಲ್ಲಲ್ಲಿ, ಬಂಗಾಲದಲ್ಲಿರುವಂತೆ, ಮಿಶ್ರಪದ್ಧತಿಯೂ ಪ್ರಚಲಿತವಿದೆ. ಇಲ್ಲಿ ಕನ್ನೆಯರಿಗೂ, ಆಸ್ತಿಯಲ್ಲಿ ಸ್ವಲ್ಪಪಾಲು ಸಿಗುತ್ತದೆ; ಮತ್ತು ಪುತ್ರರಿಗೂ ಸಹ ಸಿಗುತ್ತದೆ. ಬಂಗಾಲದಲ್ಲಿ ಮಾತೃ ಕುಲದ ಸಂಪತ್ತಿನಲ್ಲೂ, ಪಾಲು ಸಿಗುತ್ತದೆ. ಅಂದರೆ, ಹುಡುಗನಿಗೆ ತಾಯಿಯ ಕುಲದ ಆಸ್ತಿಯೂ ದೊರೆಯುತ್ತದೆ. ಆದರೆ ಉಳಿದ ಭಾರತದಲ್ಲಿ ಹೀಗೆ ಸಿಗುವುದಿಲ್ಲ. ಉಳಿದ ಭಾರತದಲ್ಲಿ ಭಿನ್ನ ಗೋತ್ರದಲ್ಲಿ ಆಸ್ತಿಯ ಸ್ಥಾನಾಂತರವಾಗಲಾರದು. ಇದರ ಕಾರಣವಿಷ್ಟೇ, ಅಲ್ಲಿ ಇಡೀ ಸಮಾಜವು ಪಿತೃಶಾಸಿತವಾಗಿದೆ. ಅದೇನೇ ಇರಲಿ, ಮಾತೃಗತ ವ್ಯವಸ್ಥೆ ಇರುವತನಕ ಸಮಾಜದಲ್ಲಿ ಸ್ತ್ರೀಗೆ ಬಹಳ ಮಹತ್ವವಿತ್ತು. ಪುರುಷರಿಗೆ ಯಾವುದೇ ಅಧಿಕಾರವಿರಲಿಲ್ಲ. ಇಂಥ ವ್ಯವಸ್ಥೆಯೇನೂ ಸರಿಯಲ್ಲ. ಎಂದೇ ನನ್ನ ಅಭಿಪ್ರಾಯ. ಇನ್ನು ಪಿತೃಗತ ಕುಲ ವ್ಯವಸ್ಥೆಯಲ್ಲಿ ಪುರುಷನನ್ನು ಎಲ್ಲರಿಗಿಂತ ಶಕ್ತಿಶಾಲಿಯೆಂದು ಎಣಿಸುವುದೂ ಸಹ ಅಷ್ಟೊಂದು ಯೋಗ್ಯವಾಗದು.

"ಸಬಾ ಇ ಮಾನುಷ, ಸಬಾ ಇ ಕಾರ,
ನಿಕ್ತಿರ ಓಜನೇ ಸಮಾನ ಅಧಿಕಾರ".

ಇಂದು ಸ್ತ್ರೀಯರನ್ನು ವಂಚಿಸುತ್ತಿರುವುದೂ ಸಹ ಪಾಪವೇ ಸರಿ.

ಏನೇ ಇರಲಿ; ಆ ಮಾತೃಗತ ಕುಲ ವ್ಯವಸ್ಥೆಯ ಕಾಲದಲ್ಲಿ ಮಾನವನು ಮಾತೃ ಪೂಜೆಯ ವ್ಯವಸ್ಥೆಯನ್ನೂ ಮಾಡಿದನು. ಮತ್ತು ಇದರಿಂದಾಗಿಯೇ ಚಂಡಿಕಾ

ಪೂಜೆಯ ಉದ್ಭವವಾಯಿತು. ಆ ಮಾತೃದಲ ಮುಖಂಡಳು ಅಂದರೆ, ದಲದ ಪ್ರಮುಖಳು ಜನಗೋಷ್ಠಿಯ ಪ್ರಮುಖಳಾಗಿ ಯಾವಳು ಇರುತ್ತಿದ್ದಳೋ, ಅವಳು ನಾರಿಯಾಗಿರುತ್ತಿದ್ದಳು. ಮಾತೃಶಕ್ತಿಯಾಗಿರುತ್ತಿದ್ದಳು.

ಯಾವ ದೇವೀ ಸರ್ವ ಭೂತೇಷು ಶಕ್ತಿ. ರೂಪೇಣ ಸಂಸ್ಥಿತಾ
ನಮಃಸ್ತಸ್ಯೈ ನಮಃಸ್ತಸ್ಯೈ ನಮಃಸ್ತಸ್ಯೈ ನಮೋ ನಮಃ ॥

ಈ ಭಾವನೆಯ ಮೂಲಕ ಪ್ರಭಾವಿತವಾಗಿ ಅನಂತರದ ಶಿವೋತ್ತರ ತಂತ್ರದ ಕೊನೆಗೆ ಮತ್ತು ಪೌರಾಣಿಕ ಶಾಕ್ತಾಚಾರದ ಆರಂಭದಲ್ಲಿ ಮಾತೃ ಪೂಜೆಯು ರೂಢಿಯಲ್ಲಿ ಬಂದಿತು. ಅದೇ ಮೇರೆಗೆ ಭವಿಷ್ಯದಲ್ಲಿ ನಾರಿಯರು ಪ್ರಮುಖರಾಗಲಿ, ಗೋಷ್ಠಿಯ ಮಾತೆಯಾಗಲಿ, ಮತ್ತು ಎಂದೂ ಅವರೆಲ್ಲರನ್ನು ಮೊದಲಿನಿಂದ ಪ್ರಸನ್ನಗೊಳಿಸಲೋಸುಗ ಕುಮಾರಿ ಪೂಜೆಯು ಪ್ರಚಲಿತವಾಯಿತು. ಮತ್ತು ಆ ಚಂಡಿಕಾ ಪೂಜೆಯೇ ಕುಮಾರಿ ಪೂಜೆಗೆ ಸಮರ್ಥನೆ ನೀಡಿತು. ಇನ್ನೂ ಮುಂದೆ ಹೋಗಿ ಅವಳು ಗೋಷ್ಠಿಯ ಮಾತೆಯಾಗಲಿ, ಮತ್ತು ಸಂತುಷ್ಟಗೊಳ್ಳಲಿ ಎಂಬ ಕಾರಣದಿಂದ ನೈವೇದ್ಯ ಮುಂತಾದವುಗಳಿಂದ ಅವಳನ್ನು ಸಂತುಷ್ಟಗೊಳಿಸಿ ಇರಿಸುವ ಪ್ರಯತ್ನ ಮಾಡುತ್ತಿದ್ದರು. ಈ ರೀತಿ ಈ ಚಂಡಿಕಾ ಪೂಜೆ ಇಲ್ಲವೆ ಕುಮಾರಿ ಪೂಜೆಯು ಒಂದು ಸಾಮಾಜಿಕ ಆಚರಣೆಯಾಗಿತ್ತು. ಆದರೆ, ಶಿವೋತ್ತರ ತಂತ್ರ ಮತ್ತು ಪೌರಾಣಿಕ ಶಾಕ್ತಾಚಾರದ ಆರಂಭದ ಕಾಲದಲ್ಲಿ ಇದಕ್ಕೆ ಒಂದು ಧಾರ್ಮಿಕ ರೂಪ ನೀಡಲಾಯಿತು. ಕುಮಾರಿ ಪೂಜೆಯು ಈ ರೀತಿ ಆರಂಭವಾಯಿತು. ಆದರೆ ಇಂದು ಅದು ಬಹುಶಃ ಅಡಗಿ ಹೋಗಿದೆ.

ಅನಂತರ ಕಾಲದಲ್ಲಿ ಸ್ಥಿತಿಯು ಬದಲಾಯಿತು. ಮಾತೃ ಕುಲ ವ್ಯವಸ್ಥೆಯು ಕೊನೆಗೊಂಡಿತು. ಆದರೊಂದಿಗೆ ಸಮಾಜದಲ್ಲಿ ಗೋಷ್ಠಿಮಾತೆಯ ಪ್ರಾಧಾನ್ಯವು ಕೊನೆಗೊಂಡಿತು. ಮುಂದೆ ಗೋಷ್ಠಿಪಿತನ ಇರವು ಬಂದಿತು. ಮತ್ತು ಪುರುಷರ ಯುಗವು ಪ್ರಾರಂಭವಾಯಿತು. ಈ ಪುರುಷರ ಯುಗದಲ್ಲಿಯೂ ಸಹ, ಅದೇ ಪ್ರಕಾರದ ವ್ಯವಸ್ಥೆಯು ನಡೆಯಿತು. ಅಂದರೆ, ದಲದ ಪ್ರಮುಖನನ್ನು ಪ್ರಸನ್ನಗೊಳಿಸಿ ಇರಿಸಬೇಕೆಂಬ ಕಾರಣದಿಂದ ಸ್ವಲ್ಪ ನೈವೇದ್ಯ ಅರ್ಪಿಸುವ ಅವಶ್ಯಕತೆ ಉಂಟಾಯಿತು. ದಲದ ಪ್ರಧಾನರಾದವರು ದಲಪತಿಯಾದರು. ಎಲ್ಲರಿಗಿಂತ ಅವರಿಗೆ ಹೆಚ್ಚು ಪ್ರಾಧಾನ್ಯತೆ ಇತ್ತು. ಹೇಗೆಂದರೆ, ಮೊದಲು ಚಂಡಿಕಾ ಶಕ್ತಿಯ ರೂಪದಲ್ಲಿ ಮಾತೆಗೆ ಪ್ರಾಮುಖ್ಯತೆ ನೀಡಿದಂತೆ ಚಂಡಿಕಾ ಶಕ್ತಿಯು ಚಂಡ ಶಕ್ತಿಯಾಗಿದೆ. ಅಂದರೆ ಗೋಷ್ಠಿ ಮಾತೆಯಲ್ಲಿ ಚಂಡಶಕ್ತಿಯಿದೆ. ಪ್ರಚಂಡಶಕ್ತಿಯಿದೆ. ಅವಳು ತನ್ನ ಇಚ್ಛೆಯನ್ನು ಅನುಸರಿಸಿ ಏನು ಬೇಕಾದರೂ ಮಾಡಬಲ್ಲವಳಾಗಿದ್ದಳು. ಈ ಕಾರಣದಿಂದ ಅವಳನ್ನು ಚಂಡಿ ಎಂದು ಕರೆಯುತ್ತಿದ್ದರು. ಹಾಗೆಯೇ ಈ ಚಂಡೀ ಶಕ್ತಿಗೆ, ಚಂಡ ಶಕ್ತಿಗೆ ಇಲ್ಲವೆ ಜಡ ಶಕ್ತಿಗೆ ಯಾವಾಗ ಪ್ರಾಮುಖ್ಯತೆ ಸಿಕ್ಕಿತು? ಈ ಪ್ರಾಧಾನ್ಯತೆಯು ಶಿವೋತ್ತರ ತಂತ್ರ ಮತ್ತು ಪೌರಾಣಿಕ ಶಾಕ್ತಾಚಾರದಲ್ಲಿ ದೊರೆಯುತ್ತಿದೆ. ಪೌರಾಣಿಕ ಶಾಕ್ತಾಚಾರದ ಬಗೆಗೆ ಅನಂತರ ಹೇಳುವೆ. ಈಗ ನೀವು ಚಂಡ ಶಕ್ತಿಯ ಉದ್ಭವವು

ಹೇಗೆ ಆಯಿತೆಂಬುದನ್ನು ತಿಳಿದು ಕೊಂಡರಷ್ಟೇ.

ಶಿವನೊಂದಿಗೆ ಸಂಪರ್ಕ ಇಲ್ಲವಾದರೆ ಯಾವ ಮಟ್ಟದಲ್ಲೂ ಸ್ಥಾನ ದೊರೆಯುತ್ತಿರಲಿಲ್ಲ. ಇದರಿಂದ ಚಂಡ ಶಕ್ತಿಯನ್ನು ಶಿವನ ಪತ್ನಿಯೆಂದು ಒಪ್ಪಿಕೊಳ್ಳದ ಹೊರತು ಬೇರಾವ ಉಪಾಯವೂ ಇರಲಿಲ್ಲ. ಆದರೆ ಚಂಡಿ ಕಲ್ಪನೆಯ ಹಿನ್ನೆಲೆಯಲ್ಲಿ ಇತಿಹಾಸ ಪೂರ್ವದ ಮಾನವನ ಸಮೂಹ ಬದ್ಧ ಜೀವನದ ಸಾಮಾಜಿಕ ಇತಿಹಾಸವಾಗಿದೆ. ಇತಿಹಾಸ ಪೂರ್ವ ಕಾಲದ ಇತಿಹಾಸವೂ ಇದೆ. ಆ ಇತಿಹಾಸವು ಯಾವುದು? ಅದು ಬರಹದಲ್ಲಿ ಇರದ ಇತಿಹಾಸ. ಈ ಪೃಥ್ವಿಯ ಮೇಲೆ ಬಹಳಷ್ಟು ಅವ್ಯಕ್ತವಾಗಿರುತ್ತದೆ. ಇನ್ನೂ ಬಹಳಷ್ಟು ಅವ್ಯಕ್ತವಾಗಿಲ್ಲವಾದರೂ ಲಿಖಿತ ರೂಪ ಪಡೆದಿರುವದಿಲ್ಲ. ಮಾನವನ ಮನದ ಅನೇಕ ವಿಷಯಗಳು, ಅಭಿವ್ಯಕ್ತಗೊಳಿಸದಂಥವುಗಳಾಗಿರುತ್ತವೆ. ಬಾಯಿ ಮುಚ್ಚಿಕೊಂಡು ತೆಪ್ಪಗೆ ಇರಬೇಕಾಗುತ್ತದೆ. ಅದೇ ರೀತಿ, ಆ ಇತಿಹಾಸವೂ ಸಹ, ಅಲಿಖಿತ ಇತಿಹಾಸವಾಗಿತ್ತು. ಶಿವನೊಂದಿಗೆ ಜೋಡಿಸಿ, ಅದಕ್ಕೆ ಸಾಮಾಜಿಕ ಮತ್ತು ಧಾರ್ಮಿಕ ರೂಪವನ್ನು ನೀಡುವ ಪ್ರಯತ್ನ ಮಾಡಲಾಯಿತು. ಈ ಗೋಷ್ಠೀ ಮಾತೆಯರ ಯುಗದಲ್ಲಿ ಪ್ರತಿಯೊಂದು ಕಾರ್ಯಕ್ಕೂ ಸುಗ ಗೋಷ್ಠೀ ಮಾತೆಯನ್ನು ಸಂತೋಷಪಡಿಸುವ ಅಗತ್ಯವಿತ್ತು. ಅವಳಿಂದ ಅನ್ನ–ವಸ್ತ್ರ ಮುಂತಾದವುಗಳನ್ನು ಬೇಡಿ ಪಡೆಯುತ್ತಿದ್ದರು. ಅವಳನ್ನೇ "ರೂಪ ದೇಹಿ; ಜಯ ದೇಹಿ; ಯಶೋ ದೇಹಿ; ದೀಪೋ ದೇಹಿ; 'ನನಗೆ ರೂಪ ನೀಡು; ನನಗೆ ಜಯ ನೀಡು; ಮತ್ತು ನನಗೆ ಯಶ ನೀಡು; ಮತ್ತು ಹಾಗೆಯೇ ಶತ್ರುವನ್ನು ನಾಶಗೊಳಿಸು' ಎಂದು ಬೇಡುತ್ತಿದ್ದರು. ಈ ಚಂಡಿಕಾ ಶಕ್ತಿಯ ನಿರ್ದೇಶನದ ಮೇಲೆಯೇ ದಳದ ಮಾನವನು ಶತ್ರುವಿನ ವಿರುದ್ಧ ಹೋರಾಡುತ್ತಿದ್ದನು. ಆದ್ದರಿಂದಲೇ 'ದೀಪೋ ಜಹಿ'; ಇಂದು ಚಂಡಿಕಾ ಶಕ್ತಿಯ ಯುಗವು ಪೃಥ್ವಿಯ ಮೇಲೆ ಕೊನೆಗಂಡಿದೆ. ಪುರುಷನು ದಳಪತಿಯಾದನು; ಮತ್ತು ಸಮಾಜವು ಪಿತೃ–ಶಾಸಿತವಾಯಿತು; ಮತ್ತು ಪಿತೃಗತ ಕುಲವ್ಯವಸ್ಥೆಯೂ, ಪಿತೃಗತಿ ದಾಯಾಧಿಕಾರವೂ ಇಂದು ಬಹುಶಃ ಪೃಥ್ವಿಯ ಎಲ್ಲೆಡೆಗಳಲ್ಲಿ ನಡೆಯುತ್ತಿದೆ. ಇದರಿಂದ ಈ ಗೋತ್ರ ವ್ಯವಸ್ಥೆಯು ಶುರುವಾಯಿತು. ಒಂದೊಂದು ದಳದ ಜನರು ಗೋಷ್ಠಿ ನಿರ್ಮಿಸಿಕೊಂಡಿದ್ದರು. ಅದೇ ಮೇರೆಗೆ ಗೋಷ್ಠಿಯ ಜನರಿಂದ ಓರ್ವನು ದಳಪತಿಯಾಗುತ್ತಿದ್ದನು. ಅವನ ಮಾತನ್ನು ಸಮಾಜದಲ್ಲಿ ಎಲ್ಲ ಜನರೂ ಮನ್ನಿಸುತ್ತಿದ್ದರು. ಎಲ್ಲರಿಗಿಂತ ಮೊದಲು ಅವನಿಗೇ ಗೌರವ ತೋರಿಸುತ್ತಿದ್ದರು. ಪ್ರತಿಯೊಂದು ಸಾಮಾಜಿಕ ಅನುಷ್ಠಾನದಲ್ಲಿ ಎಲ್ಲರಿಗಿಂತ ಮೊದಲು ಅವನ ಪೂಜೆಯಾಗುತ್ತಿತ್ತು. ಸಂಸ್ಕೃತದಲ್ಲಿ 'ದಳ' ಶಬ್ದದ ಪರ್ಯಾಯ ಪದವೆಂದರೆ ಗೋಷ್ಠಿ; ಗಣ ಇದರಿಂದ ದಳಪತಿಯ ಅರ್ಥವು ಗಣಪತಿ, ಗಣೇಶ, ಎಂದಾಗುತ್ತದೆ. ಅಂದರೆ, ದಳದ ಮುಖಂಡ (Group Leader) ಗಣೇಶನೆಂದರೆ ಗೋಷ್ಠಿಯ ಪ್ರಮುಖ. ಗಣಪತಿ ಶಬ್ದದ ಬಂಗಾಳೀ ಭಾಷೆಯ ಪರ್ಯಾಯ ಶಬ್ದವೆಂದರೆ 'ದಲಪತಿ' ಇದನ್ನು ಸಂಸ್ಕೃತ ಭಾಷೆಯಲ್ಲೂ ಬಳಸುವುದುಂಟು. ಸಂಸ್ಕೃತದ ದಲಪತಿಯು, (ಪ್ರಾಕೃತದಲ್ಲಿ 'ಪ' ಮತ್ತು 'ತ', 'ಅ' ಆಗುತ್ತವೆ). ಪ್ರಾಚೀನ ಬಂಗಾಳಿಯಲ್ಲಿ 'ದಲಅಈ' ಆಗುತ್ತದೆ. ಅದರಿಂದಲೇ ಇಂದಿನ ಬಂಗಾಳಿಯಲ್ಲಿ 'ದಲಈ' ಆಗಿದೆ. ಬಂಗಾಳಿಯಲ್ಲಿ 'ದಲಈ' ಒಂದು

ಪದವಿಯೂ ಸಹ ಆಗಿದೆ. ಆದರೆ ಮೂಲ ಸಂಸ್ಕೃತ ಶಬ್ದವು 'ದಲಪತಿ' ಗೋಷ್ಠಿಗಳ ಗಣೇಶನು ದಲಪತಿಯೇ ಆಗಿದ್ದನು. ಇತಿಹಾಸಪೂರ್ವ ಯುಗದಲ್ಲಿ, ಈ ಗಣೇಶನ ಶ್ರೇಷ್ಠತ್ವವನ್ನು ಸ್ವೀಕರಿಸಲಾಯಿತು. ಅಂದರೆ, ಮಾತೃಗತ ಕುಲ ವ್ಯವಸ್ಥೆಯಂತೂ ಕೊನೆಗಂಡಿತು. ಮತ್ತು ಪಿತೃಗತ ವ್ಯವಸ್ಥೆಯು ಆರಂಭವಾಯಿತು. ಗಣೇಶನ ಪ್ರಾಧಾನ್ಯವು ಬೆಳೆಯಿತು. ಎಲ್ಲ ಪೂಜೆಗಿಂತ ಮೊದಲು ಗಣೇಶನ ಪೂಜೆಯಾಗುತ್ತದೆ. ಕೆಲವರು ಹಾಸ್ಯದ ಹೊನಲು ಹರಿಯಲು ಹೀಗೆ ಹೇಳುತ್ತಾರೆ. ಏನೆಂದರೆ ಎಲ್ಲ ಪೂಜೆಗಳಿಗಿಂತ ಮೊದಲು ಗಣೇಶನ ಪೂಜೆಯಾಗಬೇಕಿದ್ದರೆ, ಶಿವನ ವಿವಾಹಕ್ಕಿಂತ ಮೊದಲು ಸಹ, ಗಣೇಶನ ಪೂಜೆಯನ್ನು ಮಾಡಿರಬೇಕಲ್ಲ? ಆದರೆ ಶಿವನು ಆರ್ಯನೇನೂ ಅಲ್ಲ. ಹಾಗೆ ಆಗಿರಲೂ ಬಹುದು; ಮತ್ತು ಹಾಗೆ ಆಗದಿರಲೂ ಬಹುದು. ಏಕೆಂದರೆ, ವಿವಾಹವಂತೂ ಕನ್ಯೆಯ ಮನೆಯಲ್ಲಿ ಆಗುತ್ತದೆ. ಗೌರಿಯ ತೌರಿನಲ್ಲಿಯೇ ನಡೆಯಿತು. ಗೌರಿಯು ಆರ್ಯ ಕನ್ಯೆಯೇ ಆಗಿದ್ದಳು. ಆ ಗಣೇಶನೇನೂ ಶಿವನ ಪುತ್ರನಲ್ಲ; ಪಾರ್ವತಿಯ ಪುತ್ರನೂ ಅಲ್ಲ. ಇನ್ನು ದುರ್ಗೆಯ ಪುತ್ರನೂ ಅಲ್ಲ. ಏಕೆಂದರೆ ಇದೊಂದು ಇತಿಹಾಸ ಪೂರ್ವ ಕಾಲದ ದೇವತಾ ತತ್ತ್ವವಾಗಿದೆ. (Diety-Group-Diety-Social Diety) ಧರ್ಮದೊಂದಿಗೆ ಇದರ ಸಂಪರ್ಕವೇ ಇಲ್ಲ. ದಳಪತಿಯ ಪೂಜೆಯು ಧರ್ಮದೊಂದಿಗೆ ಸಂಬಂಧಿಸಿದ ಪೂಜೆಯೇ ಅಲ್ಲ. ಗಣೇಶನ ಪರ್ಯಾಯವಾಚಕ ಶಬ್ದಗಳೆಂದರೆ ವಿನಾಯಕ; ಗಣಪತಿ. ವಿನಾಯಕ ಶಬ್ದದ ಅರ್ಥವೆಂದರೆ, ವಿಶಿಷ್ಟ ನಾಯಕ, ಒಳ್ಳೆಯ ನಾಯಕ; ದೊಡ್ಡ ನಾಯಕ, ಅರ್ಥಾತ್ ಉಚ್ಚ ಕೋಟಿಯ ನಾಯಕ. ವಿನಾಯಕ ಇದರ ಅರ್ಥವು ದಲ-ನಾಯಕನೆಂದೂ ಆಗುತ್ತದೆ. ನೀವು ಅವಶ್ಯವಾಗಿ ವಿನಾಯಕ ಶಬ್ದವನ್ನು ಕೇಳಿರಬಹುದು. ವಿನಾಯಕ ಇದರ ಅರ್ಥವೆಂದರೆ ಗಣೇಶ.

ಹೀಗೆ ನಾವು ಇತಿಹಾಸ ಪೂರ್ವ ಯುಗದ ಮಾನವ ಜಾತಿಯನ್ನು ಕುರಿತು ವಿಚಾರಿಸಿದಾಗ, ಶಿವ ಇಲ್ಲವೆ ಅವನ ಪತ್ನಿ ಪಾರ್ವತಿಯೊಂದಿಗೆ ಗಣೇಶನ ಯಾವ ಸಂಬಂಧವೂ ಇಲ್ಲ. ಮತ್ತು ಶಿವನ ನಂತರ ಬಹುಕಾಲದಿಂದೀಚೆಗಿನ ದುರ್ಗೆಯೊಂದಿಗಂತೂ ಅವನ ಸಂಬಂಧವು ಏನೇನೂ ಇರದು. ಏಕೆಂದರೆ, ಶಿವನೊಂದಿಗೆ ದುರ್ಗೆಯ ಯಾವ ಸಂಬಂಧವೂ ಇಲ್ಲ. ಇಬ್ಬರ ನಡುವೆ ಐದು ಸಾವಿರ ವರ್ಷಗಳ ಅಂತರವಿದೆ.

ಗಣೇಶನು ಇಷ್ಟೊಂದು ದೊಡ್ಡವನೂ, ಹೃಷ್ಟಪುಷ್ಟನೂ ಆಗಿರುವುದೇಕೆ? ಎಂದು ಜನರು ಗಣೇಶನ ವಿಷಯದಲ್ಲಿ ಯೋಚಿಸಬಹುದು. ಮೇಲಾಗಿ ಅವನ ಮುಖವು ಆನೆಯ ಮುಖದಂತೆ ಇರುವುದೇಕೆ? ಎಂದೂ ಜನರು ಯೋಚಿಸಬಹುದು ಇವರ ಹಿಂದೆ ಏನಾದರೊಂದು ಕಾರಣವಿರಲೇಬೇಕು. ನಾನು ಚಿಕ್ಕವನಿದ್ದಾಗ, ಊಟ ಮಾಡದಿದ್ದರೆ ನನ್ನ ಕಕ್ಕಿಯು ಅನೇಕ ಮನೋವೈಜ್ಞಾನಿಕ ಪ್ರಯತ್ನಗಳ ಮೂಲಕ ನನಗೆ ಉಣಿಸುವ ಪ್ರಯತ್ನ ಮಾಡುತ್ತಿದ್ದಳು. 'ನೀನು ಊಟವನ್ನೇಕೆ ಮಾಡುವುದಿಲ್ಲ? ಇದು ನೋಡು; ಗಣೇಶಜ್ಜನು ಎಷ್ಟು ಹೃಷ್ಟಪುಷ್ಟವಾಗಿದ್ದಾನೆ? ಹೊಟ್ಟೆ ತುಂಬ ಉಣ್ಣುತ್ತಾನೆ; ಆದ್ದರಿಂದ ತಾನೇ? ಎಂದು ಹೇಳುತ್ತಿದ್ದಳು. ಇನ್ನೂ ಹೀಗೆ ಹೇಳುತ್ತಿದ್ದಳು:

"ಗಣೇಶ ದಾದಾ ಪೇಟಟಿ ನಾದಾ
ಭಾತ ಖಾಯ ಗಾದಾ ಗಾದಾ,
* * *
ಗಣೇಶ ಅಣ್ಣಗೆ ಡಬರೀ ಹೊಟ್ಟೆ
ಅನ್ನವ ತಿನ್ನುವ ಸಿಕ್ಕಾಪಟ್ಟೆ"

ಇವನ್ನು ಕೇಳಿ ನಾನು ಬಾಯಿಬಿಟ್ಟು ನಗುತ್ತಿದ್ದೆ. ಈ ಅವಕಾಶವನ್ನೇ ಸದುಪಯೋಗಿಸಿ ಕಕ್ಕಿಯು ಅನ್ನದ ಉಂಡೆಯನ್ನು ಬಾಯಿಯಲ್ಲಿ ತುರುಕುತ್ತಿದ್ದಳು.

ತಮ್ಮ ದಲಪತಿಯು ಎಲ್ಲರಿಗಿಂತ ಶಕ್ತಿಶಾಲಿಯಾಗಿರಬೇಕೆಂದು ಸರ್ವರೂ ಯೋಚಿಸುತ್ತಾರೆ; ಮತ್ತು ಇಚ್ಛಿಸುತ್ತಾರೆ. ಇದರಿಂದ ಎಲ್ಲರೂ ಗಣೇಶನ ಮೂರ್ತಿಯನ್ನು ನಿರ್ಮಿಸಲು ಶುರು ಮಾಡಿದರು. ಆಗ ಅತ್ಯಂತ ಹೃಷ್ಟಪುಷ್ಟ ಕಾಣಲು ಮೂರ್ತಿ ನಿರ್ಮಿಸುತ್ತಿದ್ದರು.

ಈ ತೆರದಿಂದ, ಗೆಣೇಶನೇಕೆ ಇಷ್ಟೊಂದು, ಹೃಷ್ಟಪುಷ್ಟನಾಗಿದ್ದಾನೆ? ಎಂಬುದು ನಿಮಗೆ ತಿಳಿದಿರಬಹುದು. ತಮ್ಮ ದಲಪತಿಯನ್ನು ಹೃಷ್ಟಪುಷ್ಟವಾಗಿ ಮತ್ತು ದಪ್ಪವಾಗಿ ಇರಿಸಲು ಜನರು ಬಯಸುತ್ತಾರೆ. ನಮ್ಮ ದಳಪತಿ, ನಮ್ಮ ಗಣೇಶನೇನು, ಅಂಥ ಇಂಥ-ವ್ಯಕ್ತಿಯೇ? ಅವನು ಸಾಧಾರಣ ವ್ಯಕ್ತಿಯೇ? ಈ ಧರೆಯ ಮೇಲೆ ಇರುವ ಎಲ್ಲಕ್ಕಿಂತ ದೊಡ್ಡದಾದ ಪ್ರಾಣಿಯ ಮುಖವು ನಮ್ಮ ದಳಪತಿಗಿದೆ. ಆದ್ದರಿಂದ ಆನೆಯ ಮುಖವನ್ನು ಹಚ್ಚಿದ್ದಾರೆ. ಈ ರೀತಿ ಇತಿಹಾಸಪೂರ್ವದ ಮಾನವನು ಅಲ್ಲಾಡುತ್ತ ಮುಂದುವರೆದು ಈ ಸ್ಥಿತಿಗೆ ಬಂದು ತಲುಪಿದ್ದಾನೆ. ಇದರಿಂದ, ಗಣೇಶನು ಓರ್ವ ಹೃಷ್ಟಪುಷ್ಟ ದೇವತೆಯಾಗಿದ್ದಾನೆ. ಮತ್ತು ಅವನ ಮುಖವು ಆನೆಯದಾಗಿದೆ. ಆದರೆ ಈ ಗಣೇಶನನ್ನು ಧರ್ಮೀಯ ದೇವತೆಯ ಸಾಲಿನಲ್ಲಿ ಪೌರಾಣಿಕ ಗಾಣಪತ್ಯಾಚಾರದ ಕಾಲಕ್ಕೆ ತಂದಿರಿಸಲಾಯಿತು.

ಈ ಗಾಣಪತ್ಯಾಚಾರ ಏನಿದೆ? ಎಂಬುದನ್ನು ತಿಳಿಯುವಾ: ಗಣೇಶನ ತಾಯಿಯು ದುರ್ಗೆ ಎಂದು ಪುರಾಣದಲ್ಲಿ ಒಂದು ಕತೆಯಿವೆ: ಗಣೇಶನು ಜನಿಸಿದಾಗ ಅವನ ಸೋದರ ಮಾವನಾದ ಶನಿಯು (ಶನಿದೇವನ ಹೆಸರನ್ನು ನೀವು ಕೇಳಿರಬಹುದು. ವಾಸ್ತವದಲ್ಲಿ ಶನಿ ಒಂದು ಗ್ರಹದ ಹೆಸರು. ಓರ್ವ ಪೌರಾಣಿಕ ದೇವತೆಯ ಹೆಸರು ಸಹ ಶನಿ ಎಂದೇ ಇದೆ). ತನ್ನ ಸೋದರಳಿಯನನ್ನು ಕಾಣಲೆಂದು ಬಂದನು. ಶನಿಯ ದೃಷ್ಟಿಯು ಬಿದ್ದೊಡನೆಯೇ ಸೋದರಳಿಯನ ಶಿರವು ಹಾರಿ ಹೋಯಿತು. ಈಗೇನು ಮಾಡುವುದು? ಆ ಕಾಲಕ್ಕೆ ಒಂದು ಆನೆಯ ಶಿರವನ್ನು ಕೊಯ್ದು ತಂದು ಮಗುವಿನ ಮುಂಡಕ್ಕೆ ಜೋಡಿಸಲಾಯಿತು. ಹೀಗೆ ಗಣೇಶನ ಮುಖವು ಆನೆಯ ಮುಖವಾಯಿತು. ಇದೊಂದು ಪೌರಾಣಿಕ ಕಥೆ. ಈ ಪೌರಾಣಿಕ ಕಥೆಯೊಂದಿಗೆ, ಶಿವನ ಇಲ್ಲವೆ ಪಾರ್ವತಿಯ ಯಾವುದೇ ಸಂಪರ್ಕವಿಲ್ಲ. ಗಣೇಶನೇನೂ ಶಿವನ ಪುತ್ರನಲ್ಲ. ಪಾರ್ವತಿಯ ಪುತ್ರನೂ ಅಲ್ಲ. ಅವನು ಕೇವಲ ಪೌರಾಣಿಕ ಕಲ್ಪನೆ ಮಾತ್ರ.

ಗಣೇಶನಿಗೆ ಇಂಥ ಆಕೃತಿ ಇಲ್ಲವೆ ಆಕಾರವು ಹೇಗಾಯಿತು? ಎಂಬುದನ್ನು ನಾನು ವಿವರಿಸಿದೆ. ಆದರೆ ಈ ಕಥೆ ಇಲ್ಲಿಗೆ ನಿಲ್ಲುವುದಿಲ್ಲ. ಇದಕ್ಕಿಂತ ಹೆಚ್ಚು ಮೋಜಿನ ಇನ್ನೊಂದು ಕಥೆಯಿದೆ. ಆದರೆ, ಆದರೊಂದಿಗೆ ಮಾನವನ ಸಮೂಹಬದ್ಧ ಜೀವನದ

ಕಥೆಯನ್ನು ಹೆಣೆಯಲಾಗಿದೆ. ಪ್ರಾಚೀನ ಕಾಲದ ಮಾನವನ ಪರಿಸರದಲ್ಲಿ ನಾಲ್ಕೂ ನಿಟ್ಟಿನಲ್ಲಿ ವೈರಿಗಳೇ ತುಂಬಿದ್ದರು. ಎಂಬುದನ್ನು ನೀವು ತಿಳಿದಿದ್ದೀರಿ. ಬರೀ ಇಷ್ಟೇ ಅಲ್ಲ; ಆ ಕಾಲದಲ್ಲಿ ಮಾನವರ ಗೋಷ್ಠಿಗಳಲ್ಲಿ ಪರಸ್ಪರ ಕಾದಾಟ- ಕಚ್ಚಾಟಗಳಾಗುತ್ತಿದ್ದವು. ಈ ಕಾರಣದಿಂದ, ಪ್ರತಿಯೊಂದು ವರ್ಗವೂ ತನ್ನ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲಿಕ್ಕೋಸುಗ ಪ್ರಯತ್ನಶೀಲವಾಗಿರುತ್ತಿತ್ತು. ಈ ಕಾರಣದಿಂದ ಲಿಂಗಪೂಜೆಯ ಪದ್ಧತಿಯು (phallic workship) ಪ್ರಚಲಿತವಾಯಿತು. ಹಂದಿ ಮತ್ತು ಇಲಿಗಳ ಸಂಖ್ಯೆಯು ಇತರ ಪೀಳಿಗೆಗಳಿಗಿಂತ ಹೆಚ್ಚಾಗಿ ಬೆಳೆಯುವುದಷ್ಟೇ. ಹಂದಿಯು ತುಂಬಾ ಹೊಲಸು ಪಶು. ಹೊಲಸು ಹೊಲಸು ವಸ್ತುಗಳನ್ನೇ ತಿನ್ನುತ್ತದೆ. ಇದರಿಂದ ಹಂದಿಯನ್ನು ದಳಪತಿಯ ವಾಹನವನ್ನಾಗಿ ಮಾಡಲಿಲ್ಲ. ಆದರೆ ಇಲಿಯನ್ನು ಈ ವಿಚಾರದಲ್ಲಿ ಗ್ರಹಿಸಲಾಯಿತು. ಇಲಿಯು ಸಹ ಸಂಖ್ಯೆಯಲ್ಲಿ ಬೇಗ ಬೇಗ ವೃದ್ಧಿಸುತ್ತದೆ. ಹೀಗೆ ಇಲಿಯನ್ನೇ ಜನರು ಗಣೇಶನ ವಾಹನವನ್ನಾಗಿ ಆಯ್ಕೆ ಮಾಡಿದರು. ಇಂದು ಸಹ, ಭಾರತದ ಪಶ್ಚಿಮ ಭೂ ಭಾಗದಲ್ಲಿ, ಗಣಪತಿಯ ಪ್ರಭಾವವು ವಿಶೇಷವಾಗಿ ಇರುವ ಕಡೆಯಲ್ಲಿ, ಇಲಿಗಳನ್ನು ಕೊಲ್ಲುತ್ತಿರುವುದಿಲ್ಲ. ಈ ರೀತಿ, ಇಲಿಯನ್ನೇ ಏಕೆ ಗಣಪತಿಯ ವಾಹನವೆಂದು ಸ್ವೀಕರಿಸಿದರೆಂಬ ಬಗ್ಗೆ ನಿಮಗೆ ತಿಳಿವಳಿಕೆಯಾಗಿರಬಹುದು. ಭಾರತದಲ್ಲಿ ಇಲಿಗಳನ್ನೇ ಪೂಜಿಸುವ ಅನೇಕ ಮಂದಿರಗಳೂ ಇವೆ. ಅಲ್ಲಿ ಲಕ್ಷಾಂತರ ಇಲಿಗಳು ಬಂದು ತಮಗೆ ಬೇಕು ಬೇಕೆನಿಸಿದುದನ್ನೆಲ್ಲ ತಿಂದು ಹೋಗುತ್ತವೆ. ಆದರೆ ಅವುಗಳನ್ನು ಯಾರೂ ಹೊಡೆಯುವುದಿಲ್ಲ; ಕೊಲ್ಲುವುದಿಲ್ಲ. ಕೆಲವರು ನಗೆ ಚಾಟಿಗೆಯಲ್ಲಿ ಹೀಗೆ ಹೇಳುತ್ತಾರೆ: ಗಣೇಶನು ಸ್ವತಃ ಹೃಷ್ಟ-ಪುಷ್ಟನಾಗಿದ್ದಾನೆ. ಅಂದ ಮೇಲೆ ಅವನು ಅವಶ್ಯವಾಗಿ ಧನಿಕನೇ ಆಗಿರಬಹುದು. ನಾಲ್ಕಾರು ಗುದಾಮುಗಳ ಒಡೆಯನೂ ಆಗಿರಬಹುದು. ಮತ್ತು ಗುದಾಮುಗಳು ಇದ್ದ ಮೇಲೆ, ಇಲಿಗಳೂ ಇರಲೇಬೇಕು. ಈ ಕಾರಣದಿಂದ ಗಣೇಶನ ವಾಹನವು ಇಲಿಯಾಯಿತು. ನಿಜವಾಗಿ ಅಲ್ಲ.

ಈಗ ಗಣೇಶನ ಹೆಂಡತಿಯನ್ನು ಕುರಿತು ಸ್ವಲ್ಪ ಚರ್ಚಿಸುವ ಅವಶ್ಯಕತೆ ಇದೆ. ಅದೇಕೆ ಅವಶ್ಯವಿದೆ? ಎಂಬುದನ್ನೂ ನಾನು ತಿಳಿಸಿಕೊಡುವೆ. ಈಗ ನೀವು ನಿಜವಾಗಿ ಗಣೇಶನೆಂದರೆ ಯಾರು? ಎಂಬುದನ್ನಂತೂ ತಿಳಿದುಕೊಂಡಿರುವಿರಿ. ಅವನು ಇತಿಹಾಸ ಪೂರ್ವಕಾಲದ ಮಾನವರ ದಳಪತಿಯ ಪ್ರತೀಕ. ದೇವಿ-ದೇವತೆಯರನ್ನು ಕುರಿತು ಪುರಾಣಗಳಲ್ಲಿ ಅನೇಕ ಕಥೆಗಳು. ಪ್ರಚಲಿತವಾಗಿವೆ. ಇವುಗಳಲ್ಲಿ ಗಣೇಶನ ಪತ್ನಿಯು ತುಳಸೀ ಎಂದು ಹೇಳಲಾಗಿದೆ. ಆದರೆ ಕೆಲವು ಪುರಾಣಗಳಲ್ಲಿ ಷಷ್ಠೀ ದೇವಿಯನ್ನು ಅವನ ಹೆಂಡತಿಯೆಂದು ಸ್ವೀಕರಿಸಲಾಗಿದೆ. ಪೌರಾಣಿಕ ಸಮಾಜದಲ್ಲಿ ಮಗು ಜನಿಸಿದ ಒಂದು ತಿಂಗಳೊಳಗೆ ಷಷ್ಠೀ ಪೂಜೆಯನ್ನು ಆಚರಿಸುತ್ತಾರೆ. ಹಲಕೆಲವು ಪುರಾಣಗಳಲ್ಲಿ ಷಷ್ಠೀ ದೇವಿಯು ಕಾರ್ತಿಕನ ಪತ್ನಿಯೆಂದು ಬರೆದಿದ್ದಾರೆ. ಭಾರತದ ಕೆಲವು ಭಾಗಗಳಲ್ಲಿರುವ ಸ್ಥಳೀಯ ಪುರಾಣಗಳ ಅನುಸಾರ ಸಂತೋಷಿಯನ್ನು ಗಣೇಶನ ಪತ್ನಿಯೆಂದು ಬಣ್ಣಿಸಲಾಗಿದೆ. ಅದೇನೇ ಇರಲಿ; ಗಣೇಶನ ಬದಿಗಿರುವ 'ಕೇಲಾ-ಬಹು', ಗಣೇಶನ ಹೆಂಡತಿಯಲ್ಲವೇ? ಹಾಗಾದರೆ, ಅವಳಾರು?

ಇತಿಹಾಸ ಪೂರ್ವದ ಮಾನವನು ರಸಾಯನ ವಿದ್ಯೆಯನ್ನು (chemistry) ಎಳ್ಳಿನಿತೂ ತಿಳಿದಿರಲಿಲ್ಲ. ಬೇನೆ ಬೇಸರಿಕೆಗಳಿಗೆ ಮದ್ದು ಬೇಕಾದರೆ ಅವನು ಗಿಡ-ಬಳ್ಳಿಗಳಲ್ಲಿಯೇ ಹುಡುಕುತ್ತಿದ್ದನು. ಈ ಗಿಡ-ಬಳ್ಳಿಗಳಿಗೆ ಯಾವುದರಲ್ಲಿ ಅವನು ಹೆಚ್ಚು ರೋಗಗಳಿಗೆ ಮದ್ದು ಪಡೆಯುತ್ತಿದ್ದನೋ, ಅವುಗಳನ್ನು ದೇವತೆಗಳೆಂದು ಒಪ್ಪುತ್ತಿದ್ದನು. ಆಯುರ್ವೇದ ಶಾಸ್ತ್ರದಲ್ಲಿ, ಗಿಡಗಂಟಿಗಳಿಲ್ಲವುಗಳಲ್ಲಿ ಔಷಧೀಯ ಗುಣವು ಅಡಗಿರುತ್ತದೆಯೆಂದು ಹೇಳಲಾಗಿದೆ. ಆದರೆ ಯಾವುದರಲ್ಲಿ ಹೆಚ್ಚು ಗುಣಗಳಿವೆಯೋ ಅವುಗಳಿಗೇ ಜನರು ಹೆಚ್ಚಿನ ಸಮ್ಮಾನ ನೀಡುತ್ತಿದ್ದರು. ಮತ್ತು ಅವುಗಳನ್ನು ಅಧಿಕ ಪ್ರಯತ್ನದ ಮೂಲಕ ರಕ್ಷಿಸುತ್ತಿದ್ದರು. ಮತ್ತು ಅವುಗಳನ್ನು ಹೆಚ್ಚು ಹೆಚ್ಚು ಹಚ್ಚಿ ಬೆಳೆಸುತ್ತಿದ್ದರು. ಇತಿಹಾಸ ಪೂರ್ವದ ಮಾನವನು ಮದ್ದು ತಯ್ಯಾರಿಸಲು ಕಲಿತಿರಲಿಲ್ಲ. ಅವರು ಗಿಡ-ಮೂಲಿಕೆಗಳನ್ನೇ ನೇರವಾಗಿ ಪ್ರಯೋಗಿಸುತ್ತಿದ್ದರು. ಆ ಕಾಲದ ಮಾನವನು, ವಿಶೇಷವಾಗಿ ಭಾರತ ವರ್ಷದಲ್ಲಿ, ಇಂಥ ಒಂಭತ್ತು ತರದ ಗಿಡಗಳ ಸಂಸ್ಪರ್ಶ ಪಡೆದಿದ್ದನು. ಇವುಗಳಲ್ಲಿ ಬೇರೆ ಬೇರೆ ಬಗೆಯ ಗುಣಗಳಡಗಿದ್ದವು. ಅವುಗಳಲ್ಲಿ ಔಷಧೀಯ ಗುಣಗಳೂ ಇದ್ದವು. ಮತ್ತು ಜೊತೆಗೆ ಖಾದ್ಯ ವಿಶೇಷತೆಗಳೂ ಇದ್ದವು. ಈ ತರದ ಗಿಡಗಳನ್ನು ಮಾನವನು ಪೂಜಿಸುತ್ತ ಬಂದನು. ದೇವಿದೇವತೆಗಳ ರೂಪದಿಂದೇನೂ ಅಲ್ಲ; ಆದರೆ ಉಪಯೋಗೀ ವಸ್ತು ಎಂಬ ರೂಪದಲ್ಲಿ, ಗಿಡಗಳಲ್ಲಿ ದೇವತ್ವ ಇಲ್ಲವೆ ದೇವಿತ್ವ ಕಲ್ಪಿಸುವ ರೂಢಿಯು ಅನಂತರದ ಬಹು ಕಾಲಾನಂತರ ಬಂದಿತು. ಈ ವಿಷಯ ಕುರಿತು ನಾನು ಶಿವನ ಬೋಧೆಯಲ್ಲಿ ತಿಳಿಸಿ ಹೇಳುವೆ. ಆ ಒಂಬತ್ತು ಪ್ರಕಾರದ ಗಿಡಗಳೆಂದರೆ–(೧) ಕದಲಿ (ಬಾಳೆ), (೨) ಕಚೂ (ಶ್ಯಾವೆಗಡ್ಡೆ), (೩) ಹರಿದ್ರಾ (ಅರಿಷಣ), (೪) ಜಯಂತೀ, (೫) ಅಶೋಕ, (೬) ಬಿಲ್ವ, (೭) ದಾಡಿಮ (ಡಾಳಿಂಬ), (೮) ಮಾನ, (೯) ಧಾನ್ಯ (ಭತ್ತ).

ಕದಲಿ(ಬಾಳೆ)ಯು ಅತಿ ಪುಷ್ಟಿಕರ ಖಾದ್ಯವಾಗಿದೆ. ಶಾಲಾ (ವಿಷಮ) ಎಂಬ ಹೆಸರಿನ ಒಂದು ಜ್ವರವಿದೆ. ಒಂದು ಇಲ್ಲವೆ ಎರಡು ದಿನ ಅಂತರ ಬಿಟ್ಟು ಜ್ವರ ಬರುತ್ತದೆ. ಈ ಜ್ವರದ ಹೆಸರನ್ನು ಬಹುಶಃ ನೀವು ಕೇಳಿ ನೆನಪಿಟ್ಟಿರಬಹುದು. ಅದಕ್ಕೆ ಕದಳಿಯೊಂದೇ ಏಕಮಾತ್ರ ಔಷಧವಾಗಿದೆ. ಯಕೃತ್ (liver) ಮೇದೋಜ್ಜೀರಕ ಗ್ರಂಥಿ, (pancreas) ಮೂತ್ರಪಿಂಡ (Kidney), ಈ ಮೂರು ಅಂಗಗಳ ಕ್ಷಮತೆಯನ್ನು ಬಾಳೆಯು ಸರಿಪಡಿಸುತ್ತದೆ. ಇನ್ನು ಆಮಶಂಕೆ ರೋಗಕ್ಕೂ ಕದಳಿಯೇ ತಕ್ಕ ಔಷಧಿಯಾಗಿದೆ. ಕೂಸು ಸತ್ತ ಗರ್ಭಿಣಿ ಸ್ತ್ರೀಯರಿಗೂ ಸಹ ಕದಳಿಯು ಅತ್ಯುತ್ತಮ ಔಷಧಿಯಾಗಿದೆ; ಜೊತೆಗೆ ಉತ್ತಮ ಖಾದ್ಯವೂ ಆಗಿದೆ. ಯಾವ ಸ್ತ್ರೀಯ ಸಂತಾನವು ಹುಟ್ಟಿನೊಡನೆ ಸಾಯುವವೋ, ಅವಳ ಆರೋಗ್ಯದ ಔಷಧವೂ ಕದಳಿಯೇ ಆಗಿದೆ. ಮಗು ಚಿಕ್ಕ ವಯಸ್ಸಿನಲ್ಲಿರುವಾಗ ಸತ್ತುಹೋದರೆ, ಆಗ ಆ ಕೂಸಿಗೆ ತಾಯಿಯ ಮೊಲೆಹಾಲು ಸಿಗದೆ ಅದು ಎಲುಬು ಮಾಂಸಗಳ ಗೊಂಬೆಯಾಗುತ್ತದೆ. ಸೊರಗಿ ಸೊರಗಿ ಸಣ್ಣಾಗುತ್ತದೆ. ಆ ಕಾಲಕ್ಕೆ ಬಾಳೆಹಣ್ಣನ್ನು ಚೆನ್ನಾಗಿ ಕೊಳೆಸಿ ಮಗುವಿಗೆ ತಿನ್ನಿಸಬೇಕು. ಹೇಗೆಂದರೆ, ಬಾಳೆಹಣ್ಣಿನ ಸಿಪ್ಪೆಯು ಪೂರ್ಣ ಕಪ್ಪಾದ ಮೇಲೆ ಆ ಹಣ್ಣನ್ನು ಮಲೆಸಿ ಮಗುವಿಗೆ ತಿನ್ನಿಸಿದರೆ ತಾಯಿಯ ಹಾಲಿಗಿಂತಲೂ ಹೆಚ್ಚು ಗುಣಕಾರಿ

ಆಗುತ್ತದೆ. ಇನ್ನು ಕರುವಿನ ತಾಯಿ ಸತ್ತಾಗ, ಕರುವಿಗೆ ಹಾಲು ಸಿಗುವುದಿಲ್ಲ. ಆಗ ಸಹ ಇಂಥ ಅಧಿಕ ಪಕ್ವವಾದ ಬಾಳೇಹಣ್ಣನ್ನು ಅದರ ಎರಡರಷ್ಟು ಹುರಿಗಡಲೆ ಹಿಟ್ಟಿನಲ್ಲಿ ಕಲೆಸಿ ತಿನ್ನಿಸಿದರೆ ಕರು ಹೃಷ್ಟ–ಪುಷ್ಟವಾಗುತ್ತದೆ.

ಎರಡನೆಯದೆಂದರೆ 'ಕಚೂ'; ಶ್ಯಾವೆಗಡ್ಡೆಯಲ್ಲಿ ಖಾದ್ಯಗುಣವು ಅತ್ಯಂತ ಕಡಿಮೆ. ಆದರೆ ಅದು ಮೂತ್ರಪಿಂಡಕ್ಕೆ ತುಂಬಾ ಉಪಕಾರಿ.

ಮೂರನೆಯದೆಂದರೆ ಹರಿದ್ರಾ, ಅರಿಷಣ. ಅರಿಷಣವು ಒಂದು ಶ್ರೇಷ್ಠ ಮಸಾಲೆ ಜೀನಸು. ಅದರೊಂದಿಗೆ ಅದು ಪರಿಣಾಮಕಾರಿ ವಿಷಕ್ರಿಯಾ ನಾಶಕವೂ (anti-ceptic) ಆಗಿದೆ. ಇಲ್ಲಿ ಅರಿಷಣವೆಂದರೆ, ಒಣ ಅರಿಷಣವಲ್ಲ; ಆದರೆ ಕಚ್ಚಾ ಅರಿಷಣವೆಂದು ಗ್ರಹಿಸತಕ್ಕದ್ದು. ಯಾವ ಅರಿಷಣವನ್ನೂ ಭೂಮಿಯಿಂದ ಕೀಳುತ್ತಾರೋ, ಅದಕ್ಕೆ ಕಚ್ಚಾ ಅರಿಷಣವೆನ್ನುತ್ತಾರೆ; ಅದನ್ನೇ ಬಿಸಿಲಲ್ಲಿ ಒಣಗಿಸುತ್ತಾರೆ. ಆಗ ಅದಕ್ಕೆ ಒಣ ಅರಿಷಣ ಇಲ್ಲವೆ 'ಶುಂಠಿ' ಅರಿಷಣವೆನ್ನುತ್ತಾರೆ. ಜನರು ಪೇಟೆಯಲ್ಲಿ ಕೊಂಡು ಹಿಟ್ಟು ಮಾಡುವ ಅರಿಷಣವು 'ಶುಂಠಿ ಅರಿಷಣ'ವಷ್ಟೇ. ಈ ಒಣ ಅರಿಷಣವನ್ನು ಮಾತ್ರ ಅಡುಗೆ ತಯ್ಯಾರಿಸುವಾಗ ಬಳಸುತ್ತಾರೆ. ಕಚ್ಚಾ ಅರಿಷಣವನ್ನಲ್ಲ. ಕಚ್ಚಾ ಅರಿಷಣದಲ್ಲಿ ವಿಷಕ್ರಿಯೆಯುಂಟು. ಹೆಚ್ಚು ತಿಂದರೆ ಮಾನವನು ಸತ್ತುಹೋಗುತ್ತಾನೆ. ಆದರೆ ಅದು ವಿಷಕ್ರಿಯಾ ನಾಶಕವೂ ಆಗಿದೆ. ಕಚ್ಚಾ ಅರಿಷಣದಿಂದ, ಚರ್ಮರೋಗಗಳೂ, ರಕ್ತರೋಗಗಳೂ ನಾಶವಾಗುತ್ತವೆ. ಕಚ್ಚಾ ಅರಿಷಣದ ಪ್ರಖರತೆಯು ಎಷ್ಟೊಂದು ಇರುತ್ತದೆಯೆಂದರೆ, ಒಂದು ವೇಳೆ, ಮೊಸಳೆ-ಮೀನುಗಳು ಅದನ್ನು ತಿಂದರೆ ಸತ್ತುಹೋಗುತ್ತವೆ. ಮೀನು–ಮೊಸಳೆಗಳ ದೇಹದಲ್ಲಿ ಹಸಿ–(ಕಚ್ಚಾ) ಅರಿಷಣವು ಒಳಸೇರಿದರೆ ಅವು ಸಾಯುತ್ತವೆ. ಎಲ್ಲಿ ಬಹು ಜನರು ಒಂದೆಡೆ ಸೇರಬೇಕಾಗುವುದೋ ಅಲ್ಲಿ, ರೋಗ ಹಬ್ಬಿಕೊಳ್ಳುತ್ತದೆ. ಈ ಕಾರಣದಿಂದ ಪ್ರಾಚೀನ ಭಾರತದಲ್ಲಿ, ವಿಶೇಷವಾಗಿ ಬಂಗಾಲದಲ್ಲಿ, ಒಂದು ನಿಯಮವಿತ್ತು. ಏನೆಂದರೆ, ಜನರು ಹಸಿ ಅರಿಷಣವನ್ನು ಪುಡಿಮಾಡಿ ನೀರಿನಲ್ಲಿ ಕಲೆಸಿ ಮೈಗೆ ಲೇಪಿಸಿಕೊಂಡು, ಬಳಿಕ ಸ್ನಾನಮಾಡುತ್ತಿದ್ದರು. ಇಂದು ಸಹ, ಸ್ವಲ್ಪ ಇಲ್ಲವೆ ಸ್ವಲ್ಪ, ಈ ರೀತಿ ನಡೆಯುತ್ತದೆ. ಮದುವೆಯ ಮುನ್ನ ಈಗಲೂ ಅರಿಷಣ ಹಚ್ಚುತ್ತಾರೆ. ಜನರು ಏಕೆ ಅರಿಷಣ ಲೇಪಿಸಿಕೊಳ್ಳುತ್ತಾರೆ? ಎಂಬುದನ್ನು ನೀವೀಗ ತಿಳಿದುಕೊಂಡಿರಷ್ಟೇ.

ಇದಾದ ನಂತರ ಜಯಂತೀ. ಇದರ ಬೇರುಗಳಲ್ಲಿ ಅಧಿಕ ಔಷಧೀಯ ಗುಣವಿದೆ. ಪಾಂಡು-ಕುಷ್ಠರೋಗಕ್ಕಂತೂ (white leprosy) ಇದು ತುಂಬಾ ಪರಿಣಾಮಕಾರೀ ಔಷಧ. ನಿಜವಾಗಿ ಜಯಂತಿಯು ತ್ವಚೆಯನ್ನು ವಿವರ್ಣಗೊಳಿಸುವ ವಿಳು ತರದ ರೋಗಗಳಲ್ಲಿ ನಾಲ್ಕಕ್ಕೆ ದಿವ್ಯೌಷಧವಾಗಿದೆ. ಆದ್ದರಿಂದಲೇ ಜನರು ಜಯಂತಿಯನ್ನು ಪೂಜಿಸುತ್ತಿದ್ದರು.

ಆ ಬಳಿಕ ಅಶೋಕ. ಇನ್ನೂ ಸರಿಯಾಗಿ ಹೇಳುವುದಾದರೆ ಸೀತಾ ಅಶೋಕ. ಬರೀ ಅಶೋಕ ಎಂದರೆ ದೇವದಾರು. ಆದರೆ ಔಷಧೀಯ ಗುಣವಿರುವ ಅಶೋಕವು, ಸೀತಾ–ಅಶೋಕ. ಸರ್ವ ಪ್ರಕಾರದ ಸ್ತ್ರೀಯರ ರೋಗಗಳಿಗೂ ಇದು ಆದರ್ಶ ಔಷಧಿ ಅಶೋಕದಿಂದ ತಯ್ಯಾರಿಸಿದ ಮದ್ಯಕ್ಕೆ ಅಶೋಕಾಸವ ಇಲ್ಲವೆ ಅಶೋಕಾರಿಷ್ಟವೆನ್ನು

ತ್ತಾರೆ. ಇದರ ಔಷಧೀಯ ಗುಣಗಳು ವಿಪುಲ.

ಇದಾದ ನಂತರ ಬಿಲ್ವ. ಹಸೀ ಬಿಲ್ವ ಫಲವು ಉದರದ ರೋಗಗಳಿಗೆಲ್ಲ ಔಷಧಿಯಾಗಿದೆ. ಹಸೀ ಬಿಲ್ವವನ್ನು ಹುರಿದು ತಿನ್ನುತ್ತಾರೆ. ಪಕ್ವವಾದ ಬಿಲ್ವವು ಅಷ್ಟೊಂದು ಒಳ್ಳೆಯ ಮದ್ದಲ್ಲ. ಸಂಸ್ಕೃತದಲ್ಲಿ 'ಬಿಲ್' ಶಬ್ದದ ಅರ್ಥವೆಂದರೆ, ಬಿಲ; ಸಣ್ಣ ತೂತು. ಯಾವ ಸಣ್ಣ ತೂತುಗಳನ್ನು ಒಳಸೇರಿ ಹೊಟ್ಟೆಗೆ ಹಿತ ಮಾಹುವುದೋ ಅದುವೇ ಬಿಲ್ವ. ಆದರ ಈ ಅಸಾಮಾನ್ಯ ಗುಣಗಳಿಂದಾಗಿ, ಅದಕ್ಕೆ 'ಶ್ರೀ ಫಲ' (ಶ್ರೇಷ್ಠ ಗುಣಯುಕ್ತ ಫಲ) ಎಂಬ ಪರ್ಯಾಯವೂ ಇದೆ.

ಇದಾದ ಮೇಲೆ, ದಾಳಿಂಬ ಅಂದರೆ, ಅದರ ತೊಗಟೆ, ಬೇರು ಮತ್ತು ಹಣ್ಣು ಗಳೆಲ್ಲವೂ, ಎಲ್ಲ ಪ್ರಕಾರದ ಸ್ತ್ರೀಯರ ರೋಗಗಳಿಗೆ ಉತ್ತಮ ಔಷಧಿಯಾಗಿವೆ. ಭಾರತ ಮತ್ತು ಚೀನಾಗಳೆರಡರಲ್ಲೂ ಪ್ರಚಲಿತವಿರುವ ಆಯುರ್ವೇದಿಕ ಚಿಕಿತ್ಸಾ ಶಾಖೆ ಗಳಲ್ಲಿ ದಾಳಿಂಬದ ಈ ಗುಣಗಳನ್ನು ಸ್ವೀಕರಿಸಲಾಗಿದೆ.

ಇನ್ನೂ ಮುಂದಿನದು "ಮಾನ್". ನಮ್ಮ ಶರೀರದಲ್ಲಿ ಮಾಂಸವನ್ನು ನಿರ್ಮಿಸಲು ಪಿಷ್ಮಮಯ (starch) ಖಾದ್ಯವು ಅವಶ್ಯವಿದೆ. ಇದಕ್ಕೋಸುಗ ಮಾನ್ ತುಂಬಾ ಅನುಪಮ ಖಾದ್ಯವಾಗಿದೆ. ಮಾನ್‌ದಲ್ಲಿ ಆಲೂಗಡ್ಡೆಗಿಂತ, ಅಷ್ಟೇಕೆ, ಹಲಸಿನ ಹಣ್ಣಿನ ಬೀಜದಲ್ಲಿರುವದಕ್ಕಿಂತ ಹೆಚ್ಚಿನ ಗುಣಗಳಿವೆ; ಹಲಸಿನ ಬೀಜಗಳಿಗಿಂತ ಬಟಾಟೆಯಲ್ಲಿ ಎರಡೂವರೆ ಪಟ್ಟು ಹೆಚ್ಚು ಗುಣಗಳು ಅಡಗಿವೆ. ಈ ದೇಶದಲ್ಲಿ ಆಲೂಗಡ್ಡೆ ಬರು ವದಕ್ಕಿಂತ ಮೊದಲು ಜನರು ಹಲಸಿನ ಬೀಜಗಳನ್ನೇ ಬಳಸುತ್ತಿದ್ದರು. ಇನ್ನು ಹಲಸಿನ ಬೀಜಗಳಿಗಿಂತಲೂ ಮಾನ್‌ದ ಗುಣವು ಅಧಿಕವಾಗಿದೆ. ಇದಲ್ಲದೆ ಮಾನ್‌ವು ಅತ್ಯಂತ ಸ್ನಿಗ್ಧಕಾರಕವಾಗಿದೆ. ಅಂದರೆ ಬಿಸಿಲುಗಾಲದಲ್ಲಿ ಶರೀರವು ಉಷ್ಣವಾಗಿ ಮೂಗಿನಿಂದ ರಕ್ತ ಸುರಿಯುತ್ತದೆ. ಆಗ ಮಾನ್–ಔಷಧಿ ಕೆಲಸಕ್ಕೆ ಬರುತ್ತದೆ. ಈ ರೀತಿ ಮಾನ್ ಆಹಾರವಾಗಿದೆ, ಔಷಧಿಯಾಗಿದೆ.

ಇನ್ನು ಕೊನೆಯದಾಗಿ ಧಾನ್ಯ. ಭತ್ತ ಅಂದರೆ ಯಾವುದರೆಂದ ಅಕ್ಕಿಯು ಹೊರ ಬರುವದೋ ಅದು. ಭತ್ತದ ಗುಣಗಳ ಬಗ್ಗೆ ಏನು ಹೇಳಲಿ? ಆದರೆ ಭತ್ತದ ಬಳಕೆ ಯನ್ನು ಕುರಿತು ಹೇಳಬಲ್ಲೆ. ಏನೆಂದರೆ, ಬತ್ತದಿಂದ ಸಲೀಸಾಗಿ ಮದ್ಯ ತಯಾರಿಸು ತ್ತಾರೆ. ಮತ್ತು ಆ ಮದ್ಯದಿಂದ ಎಷ್ಟೋ ಔಷಧಿಗಳನ್ನು ತಯಾರಿಸುತ್ತಾರೆ. ಆ ಕಾಲದಲ್ಲಿ ಭತ್ತದ–ಈ ವಿಶಿಷ್ಟ ಗುಣಗಳನ್ನು ಕುರಿತು ಲಕ್ಷ್ಯವಹಿಸಿದ್ದರು.

ಈ ಒಂಭತ್ತು ಪ್ರಕಾರದ ಗಿಡಗಳಲ್ಲಿ ವಿಶೇಷ ಗುಣಗಳಿರುವರ ಕಾರಣ ಜನರು ಇವುಗಳ ಮೇಲೆ ಹೆಚ್ಚು ಶ್ರದ್ಧೆ ಇರಿಸಿದ್ದರು. ಪ್ರಾಚೀನ ಕಾಲದಲ್ಲಿ ಮಾನವನು ಕುಂಕುಮ ಹಚ್ಚಿಕೊಂಡು ಇವುಗಳ ಪೂಜೆ ಮಾಡುತ್ತಿದ್ದನು. ಇದಾದ ಬಳಿಕ ಶಿವೋ ತ್ತರ ತಂತ್ರದ ಯುಗವು ಬಂದಿತು. ಆಗ ಈ ಒಂಭತ್ತು ಗಿಡಗಳನ್ನು ಸ್ವೀಕರಿಸಿದರು. ನಾನು ಈ ಮೊದಲು ಚಂಡಿಕಾ ಶಕ್ತಿಯ ಕಥೆಯನ್ನು ಹೇಳಿಬಿಟ್ಟಿದ್ದೇನೆ. ಈ ೯ ಗಿಡಗಳು ಆ ಚಂಡಿಕಾ ಶಕ್ತಿಯ ೯ ಅಭಿವ್ಯಕ್ತಿಗಳಾಗಿವೆ. ಈ ಕಾರಣದಿಂದ ಇವುಗಳಲ್ಲಿ ಈ ತರದ ಔಷಧಿ ಗುಣಗಳಿವೆ. ಇಂಥ ವಿಚಾರಧಾರೆಗಳನ್ನು ಆ ಕಾಲದ ಭಾರತೀಯ ಜನರು ಆರಂಭಿಸಿದ್ದರು. ಕದಳಿಯಲ್ಲಿ ಚಂಡಿಕಾ ಶಕ್ತಿಯ ಅಭಿಪ್ರಕಾಶವಿದೆ ಎಂದು

ಅವರು ಒಪ್ಪಿದ್ದರು. ವಾಸ್ತವದಲ್ಲಿ ಇದು ಒಂದು ಕಲ್ಪನೆಯಷ್ಟೇ. ಪೌರಾಣಿಕ ವಿಚಾರಗಳು ಇದಕ್ಕೆ ಬ್ರಾಹ್ಮಣೇಶಕ್ತಿ ಎಂಬ ಹೆಸರು ಕೊಟ್ಟಿದ್ದರು. ಶ್ಯಾವೆ (ಕಚೂ) ಗಡ್ಡೆಯಲ್ಲಿ ಇರುವ ಶಕ್ತಿಗೆ ಕಾಲಿಕಾ ಶಕ್ತಿ ಎಂಬ ಹೆಸರು ನೀಡಿದರು. ಹರಿದ್ರಾ(ಅರಿ ಷಿಣ)ದಲ್ಲಿ ಇರುವ ಗುಣಗಳಿಗೆ ದುರ್ಗಾ ಶಕ್ತಿ ಎಂದು ಹೆಸರಿಸಿದರು. ಜಯಂತಿಯಲ್ಲಿ ಇರುವ ಗುಣಗಳಿಗೆ ಕಾರ್ತಿಕೀ ಶಕ್ತಿ ಎಂಬ ಹೆಸರು ನೀಡಿದರು. ಅಶೋಕದಲ್ಲಿ ಇರುವ ಗುಣಗಳನ್ನು ಆಧರಿಸಿ, ಅದರಲ್ಲಿರುವ ಶಕ್ತಿಗೆ ಶೋಕರಹಿತಾಶಕ್ತಿ ಎಂಬ ಹೆಸರು. ಬಿಲ್ವ ದಲ್ಲಿ ಗುಣಗಳಿವೆ. ಅದಕ್ಕೆ ಶಿವ ಎಂಬ ಹೆಸರು. ದಾಳಿಂಬದಲ್ಲಿರುವ ಡಂಡಿಕಾ ಶಕ್ತಿಗೆ ರಕ್ತದಂತಿಕಾ ಎಂಬ ಹೆಸರು. ಮಾನ್‌ದಲ್ಲಿರುವ ಶಕ್ತಿಗೆ ಚಾಮುಂಡಾಶಕ್ತಿ ಎಂಬ ಹೆಸರು. ಮತ್ತು ಧಾನ್ಯದಲ್ಲಿರುವ ಶಕ್ತಿಗೆ ಲಕ್ಷ್ಮಿ ಎಂದು ಹೆಸರು. ಇಂದು ಸಹ ಹಳ್ಳಿಗಾಡಿನಲ್ಲಿರುವ ಜನರು ಭತ್ತದ ಕಾಳನ್ನು ಕಾಲಿನಿಂದ ಮೆಟ್ಟಿಬೊಡನೆ "ತಾಯಿ ಲಕ್ಷ್ಮಿ!" ಎಂದು ಹೇಳಿ ಕೈಯಿಂದ ಹಣೆ ತಟ್ಟಿಕೊಳ್ಳುತ್ತಾರೆ.

ಆ ಒಂಭತ್ತು (೯) ಪ್ರಕಾರದ ಗಿಡಗಂಟಿಗಳಲ್ಲಿ ೯ ಪ್ರಕಾರದ ಚಂಡಿಕಾಶಕ್ತಿ ಇರುವವೆಂದು ಹೇಳಿ ಆ ಜನರು ಒಪ್ಪಿಕೊಂಡಿದ್ದರು. ಮತ್ತು ಈ ಶಕ್ತಿಗಳ ಒಟ್ಟಾರೆ ಹೆಸರು ನವದುರ್ಗಾ ಎಂದಿತ್ತು. ಮತ್ತು ಅವರ ೯ ಪ್ರಕಾರದ ವೃಕ್ಷಗಳ ಒಟ್ಟಾರೆ ಹೆಸರು ನವಪತ್ರಿಕಾ ಎಂದಿತ್ತು. ಇಂದಿನಿಂದ ೧೩೦೦ ವರ್ಷಗಳ ಹಿಂದೆ ಯಾವಾಗ ಪೌರಾಣಿಕ ಮತಾನುಸಾರ ದುರ್ಗೆಯ ಕಥೆಯನ್ನು ಹೇಳಲಾಯಿತೋ, ಆಗ ಅವರು ಅವಳೊಂದಿಗೆ ಈ ೯ ಪತ್ರಿಕಾಗಳ ಪೂಜೆಯನ್ನು ಸಹ ನಡೆಸಹತ್ತಿದರು. ಮೂರ್ತಿಯ ಕಲ್ಪನೆಯಂತೂ ಅನಂತರ ಮಾಡಿದ್ದರು. ಅಷ್ಟಭುಜಾ ಮೂರ್ತಿ ಇಲ್ಲವೆ ದಶಭುಜಾ ಮೂರ್ತಿ ಎಂದು. ಇದು ನವದುರ್ಗಾ ಮತ್ತು ಅದೇ ಮೇರೆಗೆ ನವ ಪತ್ರಿಕಾ. ಈ ೯ ಪತ್ರಿಕಾಗಳಲ್ಲಿ ಬಾಳೆಗಿಡಕ್ಕೆ ಸೀರೆ ಉಡಿಸಿ ಗಣೇಶನ ಬಳಿ ನಿಲ್ಲಿಸುತ್ತಾರೆ. ನೋಡ ಲಿಕ್ಕೆ ಯಾವಳೋ ಸ್ತ್ರೀ ನಿಂತ ಹಾಗೆ ಅನಿಸುತ್ತದೆ. ಗಣೇಶನ ಬಳಿ ಇದೆ ಮತ್ತು ತಲೆಯ ಮೇಲೆ ಮುಸುಕು ಇದೆ. ನೋಡಿದ ಜನರು ಗಣೇಶನ ಪತ್ನಿಯು ದುರ್ಗಾಳ ಮಗನ ವಧುವೋ? ಯಾರು ಈ "ಕೇಲಾಬಹು" ಎಂದು ಯೋಚಿಸುತ್ತಾರೆ. ಆದರೆ ಇಂಥದೇನೂ ಇಲ್ಲ, ಬಾಳೆಯಲ್ಲಿ ಯಾವ ಶಕ್ತಿ ಇದೆಯೋ ಅದಕ್ಕೆ ಬ್ರಹ್ಮ, ಮಾಣೇ ಶಕ್ತಿ ಎಂದು ಹೆಸರು. ಇದನ್ನು ನಾನು ಮೊದಲೇ ಹೇಳಿದ್ದೇನೆ. "ಕೇಲಾಬಹು" ಎಂದು ಹೇಳುವ ಯಾರ ಸಂಪರ್ಕವೂ ಗಣೇಶನೊಂದಿಗೆ ಇಲ್ಲ. ಇದಕ್ಕಾವ ಪ್ರಮಾಣವೂ ಇಲ್ಲ. ಪ್ರಾಚೀನ ಆರ್ಯರ ಮತ್ತು ಆರ್ಯೇತರ ಸಮಾಜ ಹಾಗೂ ತಾಂತ್ರಿಕ ಸಮಾಜಗಳಲ್ಲಿಯೂ ಸಹ ಒಂದು ನಿಯಮವಿತ್ತು. ಏನೆಂದರೆ ಪುರುಷನ ಎಡಗಡೆ ಎಡಗಡೆ ಅವನ ಹೆಂಡತಿ ಇರಬೇಕು. ಈ ಕಾರಣದಿಂದ ಸಂಸ್ಕೃತ ಭಾಷೆಯಲ್ಲಿ ಹೆಂಡತಿಗೆ "ಬಾವೂ" ಎಂದು, ಪರ್ಯಾಯ ನಾಮವಿದೆ. ಬಾವೂ ಇದರರ್ಥವೆಂದರೆ ಎಡಗಡೆ ಇರುವವಳು. ಹೀಗೆ ಬಾವೂ ಎಂದರೆ ನಾರಿ ಎಂದು ಅರ್ಥವಾಗುತ್ತದೆ. ಪ್ರಸಿದ್ಧ ಕವಿಯಾದ ರಾಯ ಗುಣಾಕಾರ ಭಾರತಚಂದ್ರನು ತನ್ನ ಒಂದು ಕವಿತೆಯಲ್ಲಿ ಹೀಗೆ ಹೇಳಿದ್ದಾನೆ.

ಅನ್ನಪೂರ್ಣಾ ಉತ್ತರಿಲಾ ಗಾಂಗ ನೀರ ತೀರೇ
'ಪಾರ ಕರ' ಬಲಿಯಾ ಡಾಕಿಲಾ ಪಾಟನೀ ರೇ
ಸೇಈ ಘಾಟೇ ಬೇಯಾ ದೇಯು ಈಶ್ವರೀ ಪಾಟನೀ
ತ್ವರಾಯ ಆನಿಲಾ ನೌಕಾ ವಾಮಾಸ್ವರೆ ಸುನಿ ।

ವಾಮಾ ಎಂದರೆ ನಾರಿ. ಆದರೆ ಇಲ್ಲಿರುವ 'ಕೇಲಾ ಬಹು' ಗಣೇಶನ ಬಲಗಡೆಗೆ ಇದ್ದಾಳೆ. ಅವಳು ಗಣೇಶನ ಪತ್ನಿಯಾಗಿಯೂ ಅವನ ಬಲಗಡೆ ಇರಬಲ್ಲಳೇ? ಎರಗಡೆಗೆ ಇರಬಹುದಲ್ಲದೆ ಬೇರೆಲ್ಲಿ ನಿಲ್ಲಿಸಬಹುದು? ಎಡಗಡೆಗೆ ಬೇರೆ ದೇವೀ–ದೇವತೆಯರಿದ್ದಾರೆ. ಈ ಪ್ರಕಾರ, 'ಕೇಲಾಬಹು' ದುರ್ಗೆಯ ಸೊಸೆಯೂ ಅಲ್ಲ; ಮತ್ತು ಗಣೇಶನ ಪತ್ನಿಯೂ ಅಲ್ಲ; ಎಂಬುದು ನಿಮಗೆ ಗೊತ್ತಾಯಿತಷ್ಟೇ.

ನಿಮಗೀಗ, ನವದುರ್ಗಾ ಮತ್ತು ನವಪತ್ರಿಕಾರ ವಿಷಯದಲ್ಲಿ ಸ್ವಲ್ಪ ತಿಳಿಸುವೆ. ಗಣೇಶನ ಪತ್ನಿಯ ಹೆಸರು ತುಲಸೀ ಎಂದಿತ್ತು. ಕೆಲವು ಪುರಾಣಗಳ ಮೇರೆಗೆ ಅವನ ಪತ್ನಿಯ ಹೆಸರು ಷಷ್ಠಿ ಎಂದಿದೆ. ಅದೇ ಮೇರೆಗೆ ಬೇರೆ ಕೆಲವು ಪುರಾಣಗಳಿಗನುಸರಿಸಿ, ಕಾರ್ತಿಕನ ಪತ್ನಿಯ ಹೆಸರು ಷಷ್ಠೀ ಎಂದಿದೆ.

ಈಗ ನಾವು ಗಣೇಶನನ್ನು ಕುರಿತು ಚರ್ಚಿಸುತ್ತಿದ್ದೆವು. ಗಣೇಶನನ್ನು ಇತಿಹಾಸ ಪೂರ್ವ ಕಾಲದಲ್ಲಿ ದಳಪತಿ. ಇಲ್ಲವೆ ಗಣಪತಿ ಎಂದು ಸ್ವೀಕರಿಸಲಾಗಿದೆ. ಅವನನ್ನೇ ಕೇಂದ್ರವಾಗಿರಿಸಿಕೊಂಡು ಶಿವೋತ್ತರ ತಂತ್ರಯುಗದಿಂದ ಸ್ವಲ್ಪ ಕಾಲ ಕಳೆದ ಮೇಲೆ, ಪೌರಾಣಿಕ ಯುಗದಲ್ಲಿ ಗಾಣಪತ್ಯಾಚಾರ ಎಂಬ ಒಂದು ಸಾಧನ ಕ್ರಮವು (cult) ರೂಢಿಯಲ್ಲಿ ಬಂದಿತು. ಅಂದಾಜು ಹದಿಮೂರು–ನೂರು ವರ್ಷಗಳಷ್ಟು ಪೂರ್ವದಿಂದ ಉದ್ಭವಿಸಿದ ಪೌರಾಣಿಕ ಮತವಾದದಲ್ಲಿ ಐದು ಆಚಾರ (cult) ಗಳಿವೆಯೆಂಬುದನ್ನು ನೆನಪಿಡಬೇಕು. ಅವುಗಳೆಂದರೆ ಶೈವಾಚಾರ, ಶಾಕ್ತಾಚಾರ, ವೈಷ್ಣವಾಚಾರ, ಗಾಣಪತ್ಯಾಚಾರ ಮತ್ತು ಸೌರಾಚಾರ. ಶೈವಾಚಾರದಲ್ಲಿ ಜೀವಿಯ ಲಕ್ಷ್ಯವೆಂದರೆ ಶಿವ; ಸಮಾಧಿಯನ್ನು ಪಡೆಯುವುದೇ ಲಕ್ಷ್ಯ. ಶಿವತತ್ವದಲ್ಲಿ ಸಮಾಧಿ, ಪ್ರಜ್ಞೆಯಲ್ಲಿ ಸಮಾಧಿ. ಜೀವಿಯು ತನ್ನ ಹೊರಗಿನ ಅಭಿವ್ಯಕ್ತಿಗಳನ್ನು ಅಂತರ್ಲೋಕದತ್ತ ಕೊಂಡೆಯ್ಯುತ್ತಾನೆ. ಅವನು ಜೀವಾತ್ಮನಲ್ಲಿ ತಲುಪಿ, ಜೀವಾತ್ಮನು ಪರಮಾತ್ಮನಲ್ಲಿ ಸೇರುತ್ತಾನೆ. ಇದು ಶಿವತ್ವದ ಸಾಧನೆ (cult) ಯಾಗಿದೆ.

ಯಚ್ಛೇದ್ ವಾಂಗ್ಮನಸಿ, ಪ್ರಾಜ್ಞಸ್ತದ ಯಚ್ಛೇದ್ ಜ್ಞಾನಾತ್ಮನಿ।
ಜ್ಞಾನಮಾತ್ಮಾನಿ ಮಹತಿ ನಿಯಚ್ಛೇದ್ ತದ್ ಯಚ್ಛೇಚ್ಛಾಂತ ಆತ್ಮನಿ. ॥

ಈ ಶಾಂತಾತ್ಮವೇ ಶಿವಾತ್ಮ. ಅಂದರೆ ಶಿವತ್ವದಲ್ಲಿ ಸಮಾಧಿ. ಶಿವಸಮಾಧಿಯೇ ಜೀವಿಯ ಲಕ್ಷ್ಯ. ಈ ಸಾಧನ-ಪದ್ಧತಿಗೆ (cult) ಪೌರಾಣಿಕ ಮತವಾದದ ಶೈವಾಚಾರ ಎನ್ನುತ್ತಾರೆ.

ಇದಾದ ನಂತರ ಶಾಕ್ತಾಚಾರ. ತನ್ನ ತಾಮಸಿಕ ಶಕ್ತಿಯನ್ನು, ತಮೋಗುಣೀ ಶಕ್ತಿಯನ್ನು, ಭವಾನೀ ಅಥವಾ ಕಾಲಿಕಾ ಶಕ್ತಿಯಲ್ಲಿ ಸೇರಿಸುವುದು. ಮತ್ತು ಈ ಕಾಲಿಕಾ ಶಕ್ತಿಯೊಂದಿಗೆ ಸಂಯುಕ್ತಗೊಳಿಸಿ, ಅದರೊಳಗಿಂದ ರಜೋಗುಣೀ ಭಕ್ತಿಯನ್ನು

ಹೀರುವುದು. (ಈ ಕ್ಷೇತ್ರದಲ್ಲಿ ಕಾಲಿಕಾ ಶಕ್ತಿಯು 'ಯಂ') ಅದರೊಳಗಿಂದ ರಜೋಗುಣೀ ಶಕ್ತಿಯನ್ನು ತಂದು ಭೈರವೀ ಶಕ್ತಿಯಲ್ಲಿ ಬೆರೆಸುವುದು. (ಭೈರವೀ ಶಕ್ತಿಯ ಬೀಜಮಂತ್ರವು 'ಶ') ಭೈರವೀ ಶಕ್ತಿಯು ವಿದ್ಯಾಶೀಲ ಶಕ್ತಿಯಾಗಿದೆ. ವ್ಯಕ್ತ ಶಕ್ತಿಯಾಗಿದೆ. ಅನೇಕ ಜನರು ರಜೋಗುಣದ ಸಂಸ್ಪರ್ಶದಲ್ಲಿ ಬರಲು ಬಯಸುತ್ತಾರೆ. ಶಕ್ತಿಯ (Energy) ಬೀಜ ಮಂತ್ರವು 'ರ' ಮತ್ತು ರಜೋಗುಣದ ಬೀಜಮಂತ್ರವು 'ಶ'. ಅನೇಕ ಜನರು ರಜೋಗುಣವನ್ನು ಆಶ್ರಯಿಸಿದ ಶಕ್ತಿಯನ್ನು (Energy) ಬಯಸುತ್ತಾರೆ. ಇದರಿಂದ ಪೃಥ್ವಿಯ ಮೇಲೆ ಅವರ ಹೆಸರು ಮತ್ತು ಯಶಗಳು ಪ್ರತಿಷ್ಠಿತವಾಗುತ್ತವೆ. ಅಂದ ಮೇಲೆ ಅವರಿಗೆ ಬೇಕಾದುದು 'ಶ' ಮತ್ತು 'ರ' ಅಂದರೆ 'ಶ್ರ'. ಇದರೊಂದಿಗೆ ಸ್ತ್ರೀಲಿಂಗದ 'ಕ್ವಿಪ್' ಪ್ರತ್ಯಯ ಸೇರಿ, 'ಶ್ರೀ' ಆಗಿದೆ. ಈ ಕಾರಣದಿಂದ, ಹೆಸರಿನ ಮುಂದೆ 'ಶ್ರೀ' ಸೇರಿಸಬೇಕೆಂಬ ನಿಯಮವು ಪ್ರಾಚೀನ ಕಾಲದಿಂದಲೂ ಪ್ರಚಲಿತವಿದೆ. ಅಂದರೆ ಮಾನವನು ರಜೋಗುಣೀ ಶಕ್ತಿ ಸಂಪಾತವನ್ನು ಇಚ್ಛಿಸುತ್ತಾನೆ. ಇಂದು ಇಂಥ ಜನರ ಸಂಖ್ಯೆ ಸ್ವಲ್ಪ ಕಡಿಮೆ ಆಗಿದೆ. ಆದರೆ ವಿಶ್ರೀ ಆಗಲು ಯಾರೂ ಬಯಸಲಿಕ್ಕಿಲ್ಲ, ಎಂದು ನಾನು ಆಶಿಸುತ್ತೇನೆ. ಇದಾದನಂತರ ಈ ರಜೋಗುಣೀ ಭೈರವಿ ಶಕ್ತಿಯೊಳಗಿನಿಂದ ಸತ್ತ್ವಗುಣ ಭಾವವನ್ನೂ ತರುವದು. ಮತ್ತು ಅದನ್ನು ಸತ್ತ್ವಗುಣೀ ಕೌಶಕಿ ಶಕ್ತಿ ಇಲ್ಲವೇ ಮಹಾ ಸರಸ್ವತಿಯಲ್ಲಿ ಸೇರಿಸುವದು; ಶುಭ್ರ ಜ್ಯೋತಿಯಲ್ಲಿ ಸೇರಿಸುವದು. ಇದು ಪರ್ಯಾಯ ಕ್ರಮಿಕ ಪೌರಾಣಿಕ ಶಾಕ್ತಾಚಾರವಾಗಿದೆ. ಈ ಶಾಕ್ತಾಚಾರದ ಸೂತ್ರಧಾರಿಯು ಕಾಳಿಕಾ ಶಕ್ತಿ. ಈ ಕಾಲಿಕಾಳು ಶಿವನ ಕಾಲಿಕಾಳಲ್ಲ. ಅವಳು ಬೌದ್ಧ ತಂತ್ರದ, ಶಿವೋತ್ತರ ತಂತ್ರದ, ಕಾಲಿಕಾ ಸಹ ಅಲ್ಲ. ಅಷ್ಟೇ ಏಕೆ? ಪೌರಾಣಿಕ ದೇವಿ ಕಾಲಿಕಾ ಅಲ್ಲ. ಈ ಕಾಲಿಕೆಯು ಓರ್ವ ದಾರ್ಶನಿಕ ಪರಿಭಾಷೆಯ ಓರ್ವ ಸಾಧನಾ ಕ್ರಮಿಕತೆಯ ಮೂಲ ಭಾವನೆ ಆಷ್ಟೇ. ಇದಾದನಂತರ ವೈಷ್ಣವಾಚಾರ.

ವಿಸ್ತಾರಃ ಸರ್ವ ಭೂತಸ್ಯ ವಿಷ್ಣೋರ್ವಿಶ್ವಮಿದಂ ಜಗತ್
ದೃಷ್ಟ್ವಯಮಾತ್ಮವತ್ ತಸ್ಮಾದಭೇದೇನ ವಿಚಕ್ಷಣೈಃ

ವಿಶ್ವದ ಪ್ರತಿಯೊಂದರಲ್ಲೂ ವಿಷ್ಣುವು ಪ್ರವೇಶಿಸಿದ್ದಾನೆ.ವಿಶ್ವದ ಪ್ರತಿಯೊಂದರಲ್ಲೂ ಯಾವದು ಪ್ರವೇಶಿಸಿದೆಯೋ ಅದುವೇ ವಿಷ್ಣು. ಈ ಕಾರಣದಿಂದ ಪ್ರತಿಯೊಂದು ವಸ್ತುವಿನಲ್ಲಿ ವಿಷ್ಣುವನ್ನು ಕಾಣುವದೇ ವೈಷ್ಣವಾಚಾರದ ಮೂಲ ಕಥೆಯಾಗಿದೆ.

ವಿಷ್ಣು ಪರಿಷ್ಟಿತಃ ವಿಷ್ಣುಃ ವಿಷ್ಣುಃ ಖಾದತಿ ವಿಷ್ಣವೈ
ಕಥಂ ಹಸಸಿ ರೇ ವಿಷ್ಣು ಸರ್ವಂ ವಿಷ್ಣುಮಯಂ ಜಗತ್

ಒಬ್ಬ ವಿಷ್ಣು ಭಕ್ತನು ವೈಷ್ಣವನಾಗಿರುತ್ತಾನೆ. ಅವನು ಪ್ರತಿಯೊಂದು ವಸ್ತುವಿನಲ್ಲಿ ವಿಷ್ಣುವಿನ ದರ್ಶನ ಪಡೆಯುತ್ತಾನೆ. ಅದಾದನಂತರ ಅವನು ಊಟ ಮಾಡಲು ಕೂಡುತ್ತಾನೆ, ಅವನ ಒಂದು ನಾಯಿ ಇತ್ತು. ಅವನು ನಾಯಿಯನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡನು. ಪುನಃ ತಾನೇ ಊಟ ಮಾಡಹತ್ತಿದನು. ಮತ್ತು ನಾಯಿಯೂ ಸಹ ಅದೇ ತಟ್ಟೆಯಿಂದ ತಿನ್ನಹತ್ತಿತು. ಪಂಡಿತನೊಬ್ಬನು ಇದನ್ನು ನೋಡಿ ನಗೆಯಾಡುತ್ತ ಹೀಗೆಂದನು. "ನೋಡಪ್ಪಾ ನೋಡು" ಯಾವ ತರಹದ ವೈಷ್ಣವನಿದ್ದಾನೆ. ನಾಯಿಯನ್ನು ತೊಡೆಯ ಮೇಲೆ ಕೂಡ್ರಿಸಿ ಕೊಂಡಿದ್ದಾನೆ.

ಅದನ್ನು ಮುಟ್ಟಿಸಿಕೊಂಡಿದ್ದಾನೆ. ಊಟ ಮಾಡುತ್ತಿದ್ದಾನೆ. ಇಷ್ಟಾದ ಮೇಲೂ ವೈಷ್ಣವ ಎಂದು ಹೇಳಿಕೊಳ್ಳುತ್ತಾನೆ." ವಿಷ್ಣು ಪರಿಷ್ಠಿತಃ ವಿಷ್ಣುಃ ಅಂದರೆ ವಿಷ್ಣು ರೂಪಿ ಮನುಷ್ಯನ ತೊಡೆಯ ಮೇಲೆ ವಿಷ್ಣು ರೂಪಿ ನಾಯಿ ಇದೆ. ಹೀಗೆ ವಿಷ್ಣುವೇ ವಿಷ್ಣುವನ್ನು ತಿನ್ನುತ್ತಾನೆ. ಜೊತೆಗೆ ವಿಷ್ಣುರೂಪಿ ಮನುಷ್ಯನು ವಿಷ್ಣುರೂಪಿ ನಾಯಿಯೊಂದಿಗೆ ವಿಷ್ಣುರೂಪಿ ಭೋಜವನ್ನು ಸ್ವೀಕರಿಸುತ್ತಿದ್ದಾನೆ. ಮತ್ತು ವಿಷ್ಣು ಆದ ನೀನು ಇದನ್ನು ಕಂಡು ಏಕೆ ನಗುತ್ತಿರುವಿ? ಎಲ್ಲವೂ ವಿಷ್ಣುಮಯವೇ ಆಗಿದೆ. "ಕಥಂ ಹಸಸಿ ಅರೇ ವಿಷ್ಣು". ಎಲವೋ; ವಿಷ್ಣುರೂಪಿ ಮಾನವ? ನೀನು ಇದನ್ನು ಕಂಡು ನಗುತ್ತಿರುವಿ ಏಕೆ? ಇದು ಪೌರಾಣಿಕ ವೈಷ್ಣವಾಚಾರ ಅಥವಾ ವೈಷ್ಣವಿಕ ಸಾಧನೆ (cult) ಆಗಿದೆ.

ನಾಲ್ಕನೆಯದೇ ಗಾಣಪತ್ಯಾಚಾರ ಇತಿಹಾಸ ಪೂರ್ಣಯುಗದ ದಳ ಮುಖಿಂಡವಾದ. ಇಲ್ಲವೇ ಗಣಪತಿವಾದ, ವಿನಾಯಕವಾದ, ಅಥವಾ ಗಣೇಶವಾದವಿದ್ದಿತು. ಇದಾದ ನಂತರ ಪೌರಾಣಿಕ ಸಾಧನೆಯಲ್ಲಿ (cult) ರೂಪಾಂತರಿತವಾಯಿತು. ಆ ಕಾಲಕ್ಕೆ ಈ ಭಾವವನ್ನು ಗ್ರಹಿಸಲಾಯಿತು. ಅಂದರೆ ಈ ದಳಪತಿಯೇ ವಿಶ್ವದ ಪ್ರಮುಖನಾದನು. ಅಂದರೆ ಯಾವನು ಪರಮ ಪುರುಷನು ಅವನೇ ನಮ್ಮ ದಳಪತಿಯು. ಈ ಕಾರಣದಿಂದ ನಾವು ನಮ್ಮ ಚಿತ್ತವನ್ನು ಅವನಿಗೆ ಅರ್ಪಿಸಿ ಅವನನ್ನು ಸಂತುಷ್ಟ ಪಡಿಸುತ್ತೇವೆ. ಈ ಪ್ರಕಾರ ಪೌರಾಣಿಕ ಮತವಾದದ ಗಾಣಪತ್ಯಾಚಾರವು ಆರಂಭವಾಯಿತು. ಇವರು ಗಣಪತಿಯ ಉಪಾಸಕರಾಗಿದ್ದಾರೆ. ಇದುವೇ ಗಾಣಪತ್ಯ ಸಾಧನೆಯಾಗಿದೆ. ಇನ್ನು ಉಳಿದದ್ದು ಎಂದರೆ ಸೌರ ಸಾಧನೆ.

ಈ ಸೌರ ಸಾಧನೆಯ ಪ್ರಚಾರವನ್ನು ಶಾಕ ದ್ವೀಪದ ಬ್ರಾಹ್ಮಣರು ಮಾಡಿದ್ದರು. ಅವರು ಶಾಕ ದ್ವೀಪದಿಂದ ಬಂದಿದ್ದರು. ಶಾಕ ದ್ವೀಪವು ರಶಿಯಾದ ದಕ್ಷಿಣದ ಗಡಿಯಲ್ಲಿದೆ. ತಾಸಕಂಟ್‌ವು ಇದರ ರಾಜಧಾನಿ ಇದರ ಗ್ರೀಕ್ ಭಾಷೆಯ ಹೆಸರು. ಸ್ಯಾಕ್ಡೋನಿಯಾ (sacdonia) ಎಂದಿದೆ. ಸ್ಯಾಕ್ಡೋನಿಯಾದಿಂದ ಅವರು ಭಾರತವನ್ನು ಪ್ರವೇಶಿಸಿದರು. ಅವರು ವೇದಾದಿಗಳನ್ನು ಒಪ್ಪುತ್ತಿರಲಿಲ್ಲ. ಅವರು ಆಯುರ್ವೇದಾಚಾರಿಗಳಾಗಿರುತ್ತಿದ್ದರು. ಅದರೊಂದಿಗೆ ಜ್ಯೋತಿಷಿಗಳಾಗಿಯೂ ಇದ್ದರು. ಏಕೆಂದರೆ, ಇವರು ಜ್ಯೋತಿಷಾಚಾರ್ಯರಾಗಿರುತ್ತಿದ್ದರು. ಮತ್ತು ಜ್ಯೋತಿಷ್ಯದ ಕುರಿತು ಚರ್ಚಿಸುತ್ತಿದ್ದರು. ಈ ಕಾರಣದಿಂದ ಗ್ರಹದೇವತೆಯಾದ ಸೂರ್ಯನನ್ನು ಪೂಜಿಸುತ್ತಿದ್ದರು. ಸೂರ್ಯ ಶಬ್ದಕ್ಕೆ ಅಪತ್ಯಾರ್ಥದಲ್ಲಿ 'ಅ' ಪ್ರತ್ಯಯ ಸೇರಿಸುವದರಿಂದ 'ಸೌರ' ಶಬ್ದದ ವಿಕಾಸವಾಯಿತು. ಸೌರ ಶಬ್ದದ ಅರ್ಥವೆಂದರೆ, ಸೂರ್ಯನ ಉಪಾಸಕ. ಯಾವಾಗ ಇದು ಸಾಧನಾ ಪದ್ಧತಿಯಲ್ಲಿ (cult) ರೂಪಾಂತರಿತವಾಯಿತೋ, ಆಗ ಜಗತ್ತಿನ ಸೃಷ್ಟಿ ಸೂರ್ಯನು ಮತ್ತು ಅವನೇ ಸೌರ ಪ್ರಣಾಲಿಯ ಸೃಷ್ಟಾ ಸಹ ಆಗಿದ್ದಾನೆ. ಎಂಬ ಭಾವನೆಯನ್ನು ಸ್ವೀಕರಿಸಲಾಯಿತು. ಅಂದರೆ ಈ ಪೃಥ್ವಿ, ಮಂಗಳ, ಬುಧ ಮುಂತಾದ ಗ್ರಹಗಳೆಲ್ಲ ಸೂರ್ಯನಿಂದಲೇ ನಿರ್ಮಿತವಾಗಿವೆ. ಸೂರ್ಯನೇ ಇವುಗಳ ತಂದೆ ಆಗಿದ್ದಾನೆ; ಸವಿತಾ ಆಗಿದ್ದಾನೆ. ಅದೇ ರೀತಿ ವಿಶ್ವದ ತಂದೆ– ಸವಿತಾ ಸೂರ್ಯ– ಪರಮ ಪುರುಷನು ಈ ಕಾರಣದಿಂದ

ಸೂರ್ಯನ ಆ ಸವಿತಾ ರೂಪದಲ್ಲಿ ಅರ್ಥಾತ್ ವಿಶ್ವದ ತಂದೆಯ ರೂಪದಲ್ಲಿ ಆರಾಧನೆ ಮಾಡಹತ್ತಿದರು. ಮತ್ತು ಅದನ್ನು ಆಶ್ರಯಿಸಿದ ಸಾಧನೆಯೇ ಸೌರ ಸಾಧನೆ (cult) ಎನಿಸಿತು. ಇದು ಶಾಕ ದ್ವೀಪದ ಬ್ರಾಹ್ಮಣರ ಮೂಲಕ ಬೇರೆ ಸ್ಥಳಗಳಿಗೂ ಹಬ್ಬಿತು. ಆದರೆ ಭಾರತದಲ್ಲಿ ಇದು ಎಲ್ಲಿಯೂ ಒಳ್ಳೆಯ ರೀತಿಯಿಂದ ವಿಸ್ತಾರಗೊಳ್ಳಲಿಲ್ಲ. ಇದು, ಅಲ್ಲಲ್ಲಿ ಮಾತ್ರ ಹಬ್ಬಿಕೊಂಡಿತು. ಈ ಐದು ಆಚಾರಗಳು ಪೌರಾಣಿಕ ಕಾಲಕ್ಕೆ ಸಂಬಂಧಿಸಿವೆ. ಇವುಗಳಲ್ಲಿ ಕೆಲವೆಡೆ ಕ್ಷೀಣ ರೂಪದಲ್ಲಿಯೂ ಕೆಲವೆಡೆ ಸಾಮಾನ್ಯ ರೂಪದಲ್ಲಿಯೂ ಪ್ರಚಲಿತವಾಗಿವೆ. ಇವುಗಳೊಂದಿಗೆ ಕೆಲವೊಂದರ ಸಮರ್ಥನೆಗಾಗಿ ಅಲ್ಲಲ್ಲಿ ದರ್ಶನಗಳು ಇವೆ. ಮತ್ತು ಕೆಲವೆಡೆ ಯಾವ ದರ್ಶನಗಳೂ ಇಲ್ಲ.

ನಾನು ಈ ಮೊದಲೇ ನಿಮಗೆ ಗಂಗೆಯನ್ನು ಕುರಿತು ಹೇಳಿದ್ದೇನೆ. ಪಾರ್ವತಿಯ ಮಗನು ಭೈರವ. ಭೈರವಿಯು ಕಾಲಿಯ ಮಗಳು. ಇವರಿರ್ವರೂ ತಂತ್ರ ಸಾಧನೆ ಮಾಡುತ್ತಿದ್ದರು. ಮತ್ತು ಶಿವನಿಗೆ ಅತ್ಯಂತ ಪ್ರಿಯರಾಗಿದ್ದರು. ಆದರೆ, ಗಂಗೆಯ ಮಗನಾದ ಕಾರ್ತಿಕನ ಒಹಿರಂಗ ರೂಪವೂತೂ ಪ್ರಬಲವಾಗಿತ್ತು. ಅವನ ರುಚಿಯು ಪಸ್ತು ಜಗತ್ತಿನತ್ತ ಹೆಚ್ಚಾಗಿತ್ತು. ಹಾಗೆ ನೋಡಿದರೆ, ಬೋಧಿ ಜಗತ್ತಿನತ್ತ ಅವನಿಗಾವ ರುಚಿಯೂ ಇರಲಿಲ್ಲ. ಇದು ಗಂಗೆಗೆ ಒಳ್ಳೆಯದೆನಿಸಲಿಲ್ಲ. ಈ ಕಾರಣದಿಂದ ಗಂಗೆಗೆ ಬಹಳ ದುಃಖವಾಯಿತು. ಇದರಿಂದ ಶಿವನು ಗಂಗೆಯ ಬಗ್ಗೆ ಬಹಳ ದಯಾಪೂರ್ಣನಾಗಿರುತ್ತಿದ್ದನು. ಅದನ್ನು ಕಂಡು ಜನರು ಹಾಸ್ಯಪೂರಿತವಾಗಿ, ಶಿವನು ಗಂಗೆಯನ್ನು ತಲೆಯ ಮೇಲೆ ಹೊತ್ತುಕೊಂಡಿದ್ದಾನೆ. ಎನ್ನುತ್ತಿದ್ದರು. ವಾಸ್ತವದಲ್ಲಿ ಅವನು ಗಂಗೆಯ ವ್ಯಥೆಯನ್ನು ದೂರಗೊಳಿಸುವ ಪ್ರಯತ್ನ ಮಾಡುತ್ತಿದ್ದನು. ಆದರೆ, ಅನಂತರದ ಕಾಲದಲ್ಲಿ ಪೌರಾಣಿಕ ಶಾಕ್ತಾಚಾರ ಮತ್ತು ಶೈವಾಚಾರ ಯುಗದಲ್ಲಿ ಇದನ್ನೇ ಗಂಗೆಯು ಶಿವನ ಜಡೆಯಲ್ಲಿ ಬಂಧಿತಳಾಗಿದ್ದಾಳೆ ಮತ್ತು ಅಲ್ಲಿಂದ ಗಂಗೆಯ ಧಾರೆಯು ಹರಿಯುತ್ತಿದೆ ಎಂದು ಹೇಳಲಾಯಿತು. ಇದೊಂದು ಪೌರಾಣಿಕ ಕಲ್ಪನೆಯಷ್ಟೇ. ಹೀಗೆ ಹೇಳಲಾಗಿದೆ.

"ಶಂಕರ ಮೌಲಿ ನಿವಾಸಿನೀ ವಿಮಲೇ"
ಹರಿಪದ ಪದ್ಮವಿಹಾರಿಣೀ ಗಂಗೆ,
ಹಿಮವಿಧು ಮುಕ್ತಾ ಧವಲ ತರಂಗೆ."

ಸ್ವರ್ಗದಲ್ಲಿ ಹರಿ ಇಲ್ಲವೆ ನಾರಾಯಣನ ಪಾದ–ಕಮಲಗಳನ್ನು ತೊಳೆದವಳೇ ಗಂಗೆ. ಆ ನೀರೇ ಹರಿಯುತ್ತಿ ಬಂದು ಶಿವನ ಜಲೆಯಲ್ಲಿ ಬದ್ಧವಾಯಿತು. "ಹಿಮ ವಿಧು ಮುಕ್ತಾ" ಬರ್ಫದಿಂದ ನಿರ್ಮಾಣವಾದ ಚಂದ್ರನಿದ್ದಾನೆ; ವಿಧುವಿದ್ದಾನೆ. ಆ ವಿಧುವನ್ನು ಭೇದಿಸಿ, ವಿಧುವಿನಿಂದ ಮುಕ್ತವಾಗಿ, ಧವಲ ತರಂಗಗಳು ಅರ್ಥಾತ್ ಬಳಿಯ ಜಲತರಂಗಗಳು ವಿಶ್ವದಲ್ಲಿ ಎಲ್ಲೆಡೆ ಪಸರಿಸಿದವು. 'ಶಂಕರ ಮೌಲಿ ನಿವಾಸಿನೀ ವಿಮಲೇ–ಶಂಕರನ ಜಡೆಯಲ್ಲಿ ವಾಸವಾದ ಸ್ವಚ್ಛ ನೀರು. ಅಂದರೆ, ಗಂಗೆಯ ನೀರು ಎಂದರ್ಥ. ಏನೇ ಇರಲಿ; ಇದು ಪುರಾಣಕಾರನ ಕಲ್ಪನೆಯಷ್ಟೇ. ಈ ಮುನ್ನ ಗಂಗೆಯ ಮಗನಾದ ಕಾರ್ತಿಕನನ್ನು ಕುರಿತು, ಹೇಳುವಾಗ, ಅವನಲ್ಲಿ ಬಹಿರ್ಮುಖಿ

ಭಾವವೇ ಅಧಿಕವಾಗಿತ್ತು; ಎಂದು ಹೇಳಿರುವೆನಷ್ಟೇ. ಪುರಾಣಕಾರನು ಕಾರ್ತಿಕನ ವಿಷಯದಲ್ಲಿಯೂ ಸಹ, ಬಹಳ ಹೆಚ್ಚು ಕಡಿಮೆ ಮಾಡಿದ್ದಾನೆ. ಈ ಗಂಗಾ ನದಿಯ ಮಗನೇ ಕಾರ್ತಿಕನೆಂದು ಅವನು ತಿಳಿದಿದ್ದಾನೆ. ಒಂದು ನದಿಗೆ ಮಾನವ ರೂಪದ ಸಂತಾನವಾಗುವುದುಂಟೇ? ಸಾಮಾನ್ಯ ವಿಜ್ಞಾನವು ಏನು ಹೇಳುತ್ತದ? ಹೀಗೆಂದೂ ಆಗಲಾರದೆಂದು ತಾನೇ? ಆದರೆ ಪುರಾಣದ ಕಥಾನುಸಾರ ಕಾರ್ತಿಕನು ಗಂಗೆಯ ಪುತ್ರನಾಗಿದ್ದಾನೆ. ಮತ್ತು ಜಲಪ್ರವಾಹದಲ್ಲಿ ತೇಲುತ್ತ ಅವನು ಒಂದು ಮಳಲು ರಾಶಿಯ ಮೇಲೆ ಬಂದು ಬಿದ್ದುಕೊಂಡನು. ಮತ್ತು ನದಿಯ ದಂಡೆಯ ಮೇಲೆ ಅಡ್ಡಾದಿಡ್ಡಿಯಾಗಿ ಉರುಳಾಡಿದನು; ಭೋರಿಟ್ಟನು. ಆ ಅಳುವನ್ನು ಕೇಳಿ ಆಕಾಶದಲ್ಲಿರುವ ಆರು ನಕ್ಷತ್ರಗಳ, ಮನದಲ್ಲಿ ದಯೆ ಕುದುರಿತು. ಆದರಿಂದ ಆ ನಕ್ಷತ್ರಗಳು ಅವನಿಗೆ ಮೊಲೆಯೂಡಿಸಿದವು. ಇದರಿಂದ ಮಗುವಿಗೆ ಷಡಾನನ, ಷಣ್ಮುಖಿಮ್, ಎಂದು ಹೆಸರು ಬಂತು. ಈ ಷಣ್ಮುಖಿಮ್‌ಗೆ ದಕ್ಷಿಣ ಭಾರತದಲ್ಲಿ ಷಣ್ಮುಗಮ್, ಮುರುಗಮ್, ಬಾಲ ಸುಬ್ರಹ್ಮಣ್ಯಂ, ಕಾರ್ತಿಕೇಯಂ ಎಂದು ಹೆಸರುಗಳಿವೆ. ಇವೆಲ್ಲವೂ ಪರ್ಯಾಯ ವಾಚಕ ಹೆಸರುಗಳು. ಪುರಾಣದ ಕಥಾನುಸಾರ, ಕಾರ್ತಿಕನ ಜನ್ಮದ ಕಾಲಕ್ಕೆ, ಒಂದೇ ಮುಖವಿತ್ತು. ಅದೇ ಪ್ರಧಾನ ಮುಖವಾಗಿದೆ. ಈ ಕಥೆಯನ್ನು ಕೇಳಿ ನೀವು ನಗಬೇಕಾಗಿಲ್ಲ. ಇದು ಪುರಾಣದ ಕಥೆಯಷ್ಟೇ. ಮತ್ತು ಈ ಪ್ರಧಾನ ಮುಖದಿಂದ ಅವನು ನಕ್ಷತ್ರದಿಂದ ಮೊಲೆ ಕುಡಿದಿದ್ದನು. ಈ ಕಾರಣ, ಅವನಿಗೆ ಕಾರ್ತಿಕ ಎಂಬ ಹೆಸರು ಬಂತು. ಆಶ್ವಿನೀ, ಭರಣೀ, ಕೃತ್ತಿಕಾ-ಕೃತ್ತಿಕಾ ಆಕಾಶದಲ್ಲಿ ಮೂರನೆಯ ನಕ್ಷತ್ರವಾಗಿದೆ. ಇಲ್ಲಿ ಸ್ವಲ್ಪ ಅಪ್ರಾಸಂಗಿಕವಾದರೂ ಪರವಾಯಿಲ್ಲ; ಆದರೂ ಹೇಳಬಯಸುವೆ. ಅದೆಂದರೆ, ನಕ್ಷತ್ರದ ಹೆಸರು ಕೃತ್ತಿಕಾ, ಎಂದಿದೆ. ತ್ತ–ಒತ್ತಕ್ಷರವಿದೆ. ಕೃತ್ತಿಕ-ಷ್ಣ—ಕೃತ್ತಿಕ. ಹೀಗೆ 'ಕೃತ್ತಿಕ'ದ ಉಚ್ಚಾರದಲ್ಲಿ ಎರಡು 'ತ' ಬರುತ್ತವೆ. ಸಂಸ್ಕೃತ ವ್ಯಾಕರಣಕ್ಕೆ ಅನುಸರಿಸಿ, ರೇಫದ ನಂತರದ ವ್ಯಂಜನದ ದ್ವಿತ್ವವು ವಿಕಲ್ಪದಿಂದ ಆಗುತ್ತದೆ. ಅರ್ಥಾತ್ ಎಲ್ಲ ರೇಫವನ್ನು ಬರೆಯುವರೋ, ಅದರ ಕೆಳಗೆ ಒಂದು ಅಕ್ಷರವನ್ನಾದರೂ ಬರೆಯಬಹುದು. ಧರ್ಮ–'ಮ'ದಲ್ಲಿ ರೇಫವನ್ನಾದರೂ ಬರೆಯಬಹುದು. 'ಮ್ಮ'ದ ಮೇಲೆ ರೇಫವನ್ನಾದರೂ ಬರೆಯಬಹುದು. ಕರ್ಮ–ಒಂದು 'ಮ' ಇರಬಹುದು. ಇಲ್ಲವೆ ಎರಡಿರಬಹುದು. ಆದರೆ ಕಾರ್ತ್ತಿಕ ಬರೆಯುವಾಗ ವಿಕಲ್ಪವಾಗಕೂಡದು. ಅಂದರೆ, ರೇಫದ ಕೆಳಗೆ ಎರಡನೇ 'ತ' ಇರಲೇಬೇಕು. ಒಂದೇ 'ತ' ಇರಿಸಿದರೆ, ತಪ್ಪಾಗುತ್ತದೆ. ತಾಯಿಯ ಹೆಸರು ಕೃತ್ತಿಕಾ ಎಂದಿದೆ; ಕೃತ್ತಿಕಾ ಎಂದಲ್ಲ. ಒಂದು ವೇಳೆ ತಾಯಿಯ ಹೆಸರು ಕೃತಿಕಾ ಎಂದಿದ್ದರೆ. ಆಗ, ರೇಫದ ಕೆಳಗೆ ಒಂದು 'ತ' ಇಟ್ಟರೂ ಸರಿ; ಎರಡು 'ತ' ಇಬ್ಬರೂ ಸರಿ. ಕೃತ್ತಿಕಾದಂಥ ಹಲವು ಶಬ್ಧಗಳಿವೆ. ಉದಾ ವಾರ್ತ್ತಿಕಾ. ಇಲ್ಲಿ 'ತ' ದ್ವಿತ್ವವಾಗಿರುತ್ತದೆ; ಇವುಗಳ ಮೂಲ ಶಬ್ಧದಲ್ಲಿ 'ತ' ದ್ವಿತ್ವವಾಗಿರುವ ಕಾರಣ, ರೇಫದ ಕೆಳಗೆ ಎರಡು 'ತ' ಇಡಬೇಕಾದುದು ತುಂಬಾ ಅನಿವಾರ್ಯ. ಇದು ಸಂಸ್ಕೃತ ವ್ಯಾಕರಣದ ಅನುಶಾಸನ. ಏನೇ ಇರಲಿ ಇದು–ಕಾರ್ತ್ತಿಕ.

ಹೀಗೆ ಕಾರ್ತ್ತಿಕನನ್ನು ಕುರಿತು ನಮಗೆ ತಿಳಿದು ಬರುವುದೇನೆಂದರೆ ಅವನು

ನಿಸ್ಸಂದೇಹವಾಗಿ ಶಿವನ ಮಗನು. ಆದರೆ ಪಾರ್ವತಿಯ ಮಗನೂ ಅಲ್ಲ; ದುರ್ಗೆಯ ಮಗನೂ ಅಲ್ಲ. ಅವನು ಶಿವನ ಪತ್ನಿಯಾದ ಗಂಗೆಯ ಮಗನು. ನದೀ ಗಂಗೆಯ ಪುತ್ರನೇನೂ ಅಲ್ಲ. ಆದೇ ಮೇರೆಗೆ ಅವನ ಮಾನವ ಶರೀರವು ಆರು ಮುಖಿಗಳನ್ನೇನೂ ಹೊಂದಿರಲಿಲ್ಲ. ಅವನ ಮುಖವು ಒಂದೇ ಇದೆ. ಅವನು ಷಡಾನನನಾಗಲಾರನು. ಕಾರ್ತ್ತಿಕನು ಅವಿವಾಹಿತನಾಗಿದ್ದನೆಂಬ ತಪ್ಪು ಭಾವನೆಯೊಂದು ಜನರ ಮನದಲ್ಲಿ ನೆಲೆಸಿದೆ. ಹುಗಳಿ, ಇಪ್ಪತ್ತುನಾಲ್ಕು ಪರಗಣ. ಜಿಲ್ಲೆಗಳ ಗ್ರಾಮಗಳಲ್ಲಿ ಪ್ರಚಲಿತವಿರುವ ಜಾನಪದ ಗೀತೆಗಳಲ್ಲಿ, ಕಾರ್ತ್ತಿಕನು ಅವಿವಾಹಿತನೆಂಬ ಬಣ್ಣನೆಯನ್ನು ಕೇಳುತ್ತೇವೆ. ಆದರೆ ಇದು ತಪ್ಪು. ಕೆಲವು ಪುರಾಣಗಳ ಅನುಸಾರ ಅವನ ಹೆಂಡತಿಯ ಹೆಸರು ಷಷ್ಟೀ. ಅದರೆ ಬೇರೆ ಹಲವು ಪುರಾಣಾನುಸಾರ ಅವನ ಹೆಂಡತಿಯ ಹೆಸರು ದೇವಸೇನಾ. ಪ್ರಾಚೀನ ಕಾಲದಲ್ಲಿ ಹೆಂಗಳೆಯ ಹೆಸರುಗಳು, ವಸಂತಸೇನಾ, ಶರತ್‌ಸೇನಾ ಇತ್ಯಾದಿ. ಇರುತ್ತಿದ್ದವು. ಹೀಗೆ, ಆ ಅರ್ಥದಲ್ಲಿ, ಕಾರ್ತ್ತಿಕನು ದೇವಸೇನಾಪತಿ ಅರ್ಥಾತ್ ದೇವಸೇನೆಯ ಗಂಡ. ದೇವಸೇನಾಪತಿಯ ಅರ್ಥವನ್ನು ಜನರು, ದೇವತೆಗಳ ಸೈನ್ಯದ ಮುಖ್ಯಸ್ಥನೆಂದು ತಪ್ಪಾಗಿ ತಿಳಿಯುತ್ತಾರೆ. ಆದರೆ ವಾಸ್ತವವಾಗಿ ಕಾರ್ತ್ತಿಕನು ದೇವಸೇನೆಯ ಪತಿಯಾಗಿದ್ದನು. ಇದರಿಂದ ಕಾರ್ತ್ತಿಕನು ಅವಿವಾಹಿತನಾಗಿರಲಿಲ್ಲವೆಂಬುದು ಸಿದ್ಧವಾಗುತ್ತದೆ.

ಇವೆಲ್ಲವೂ ಪುರಾಣಗಳ ಕಥೆಗಳು. ನಮ್ಮ ಬಾಲ್ಯದ ದಿನಗಳಲ್ಲಿ ನಾವು ಹೀಗೆ ಹಾಡುತ್ತಿದ್ದೆವು.

'ಕಾರ್ತ್ತಿಕ ಠಾಕೂರ ಹ್ಯಾಂಗಲಾ'
ಏಕಬಾರ ಆಸೆ ಮಾರ ಸಂಗೆ
ಏಕಬಾರ ಆಸೆ ಎಕ್ಲಾ.

* * *

ಕಾರ್ತ್ತಿಕ ಠಾಕುರ ಬಡಕಲು,
ಒಮ್ಮೆ ಪಡೆವನು ತಾಯಿ ಸಂಗ
ಒಮ್ಮೆ ಬರುವನು ಬಂಟ ಹಾಂಗ.

ಆದರೆ ಇದು ತಪ್ಪು. ಏಕೆಂದರೆ ಕಾರ್ತ್ತಿಕ ತಾಯಿ ದುರ್ಗಾ ಅಲ್ಲ. ಅವನು ಗಂಗೆಯ ಮಗ.

ಇದುವರೆಗೆ ನೀವು ಶಿವನ ಕುಲುಂಬದ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರಷ್ಟೇ, ಕಾರ್ತ್ತಿಕನು ಬೇರೆ ಬೇರೆ ಪುರಾಣಗಳಿಗನುಸರಿಸಿ, ಬೇರೆ ಬೇರೆ ದಂತ ಕಥೆಗಳಿಗನುಸರಿಸಿ, ಬೇರೆ ಬೇರೆ ಜಾನಪದ ಕತೆಗಳಿಗನುಸರಿಸಿ, ಸ್ವಲ್ಪ ಹೆಚ್ಚಾಗಿಯೇ ಬಹಿರ್ಮುಖೀ ಸ್ವಭಾವದವನೆಂದು ತಿಳಿಯುತ್ತದೆ. ಇದರಿಂದ ಪುರಾಣಕಾರರು ಅವನ ವಾಹನವನ್ನು ಕುರಿತು, ವಿಚಾರ ಮಾಡುವ ಕಾಲಕ್ಕೆ, ಎಲ್ಲಕ್ಕಿಂತ ಸುಂದರ ಪಕ್ಷಿಯಾದ ನವಿಲನ್ನೇ ಅವನ ವಾಹನವೆಂದು ಸ್ವೀಕರಿಸಿದರು. ಇದಕ್ಕೆ ಬೇರಾವ ಕಾರಣಗಳೂ ಇಲ್ಲ. ಈ ಪ್ರಕಾರ ಕಾರ್ತ್ತಿಕನ ಕಥೆ ಇದೆ. ನಾವು ಶಿವನಿಗೆ ಸಂಬಂಧಿಸಿದ ದೇವೀ–ದೇವತೆಗಳನ್ನು ಕುರಿತು ಚರ್ಚಿಸಿದಾಗ, ದುರ್ಗಾ ಶಿವನ ಪತ್ನಿಯಂತೂ ಅಲ್ಲವೆ ಅಲ್ಲ. ಇನ್ನು

ದುರ್ಗಾಳ ಕಲ್ಪನೆಯೂ ಸಹ,ಶಿವನ ಕಾಲಾನಂತರ ಐದು ಸಹಸ್ರ ವರ್ಷ ಗತಿಸಿದ ನಂತರ ಮೂಡಿ ಬಂದಿದೆ ಎಂದು ತಿಳಿವೆವು. ಲಕ್ಷ್ಮಿಯೂ ಶಿವನ ಮಗಳಲ್ಲ; ಸರಸ್ವತಿಯೂ ಅವನ ಮಗಳಲ್ಲ. ಗಣೇಶನು ಶಿವನಿಗಿಂತ ಬಹು ಪುರಾತನನು. ದಳಪತಿ ಪೂಜೆಯು ಅತಿ ಪ್ರಾಚೀನ ಕಾಲದಿಂದ ಬಂದಿದೆ. ಕಾರ್ತಿಕನು ಶಿವನ ಮಗ. ಆದರೆ ಪಾರ್ವತಿ ಇಲ್ಲವೆ ದುರ್ಗೆಯ ಮಗನಲ್ಲ. ಅವನು ಗಂಗೆಯ ಮಗ. ಈಯೆಲ್ಲ ದೇವಿ–ದೇವತೆಗಳ ಸಂಬಂಧವನ್ನು ಶಿವನೊಂದಿಗೆ ಕಲ್ಪಿಸುವ ಪ್ರಯಾಸವು ಹಿಂದೆಯೂ ಇತ್ತು ಇಂದೂ ನಡೆದಿದೆ. ಇದರ ಇಂದಿನ ಕಾರಣವೆಂದರೆ, ಶಿವನ ಅಸಾಮಾನ್ಯ, ಅಲೌಕಿಕ ವ್ಯಭಾವವು ಜನ–ಸಮಾಜದ ಮೇಲೆ ಇರುವುದೇ ಆಗಿದೆ. ಈ ಕಾರಣದಿಂದ ಜನರು ದೇವಿ–ದೇವತೆಯರಿಗೆ ಶಿವನೊಂದಿಗೆ ಸಂಬಂಧ ಕಲ್ಪಿಸುತ್ತಾರೆ. ಹಾಗೆ ಮಾಡುವುದರಿಂದ ಅವರ ಮರ್ಯಾದೆಯು ವೃದ್ಧಿಸುತ್ತದೆ. ಅರ್ಥಾತ್ ಶಿವನ ಸಮ್ಮಾನದಲ್ಲಿಯೇ ಸರ್ವರ ಸಮ್ಮಾನವೂ ಇದೆ.

ಕಲಕತ್ತೆ
೩೦–೫–೧೯೮೨.

ಪ್ರವಚನ ೯

ಶಿವನ ಬೋಧೆ-೧

ಶಿವೋಕ್ತಿ–೧

ಶಿವನು ಸರ್ವಜೀವಿಗಳು ನಡೆಯುವ ಹಾದಿಯ ಸರ್ವ ಉತ್ಸಾರಣ ಮತ್ತು ಉತ್ಸರ್ಜಗಳ ದಿಗ್ದರ್ಶಿಯಾಗಿದ್ದಾನೆ. ಅವನ ವಿಚಾರದಲ್ಲಿ, ಅವನ ದೃಷ್ಟಿಯಲ್ಲಿ ಯಾವುದೂ ಉಪೇಕ್ಷಣೀಯವಲ್ಲ. ಯಾವುದನ್ನೂ ಹೀಗಳೆಯಲಾಗದು. ಅವನು ಎಲ್ಲ ವಿಶೇಷ ಪಾತ್ರಗಳಲ್ಲಿ ವಿಶೇಷ ಮೂಲ್ಯಗಳನ್ನು ಕಾಣುತ್ತಾನೆ. ಅದೇ ಮೇರೆಗೆ ದೇಶ–ಕಾಲ–ಪಾತ್ರದ ಈ ತ್ರಿದಂಡದ ಅಪೇಕ್ಷಿಕತೆಯಲ್ಲಿ ಸರ್ವವೂ ಅಸ್ಥಿ ಮಾಂಸವಾಗಿದೆ. ವಿರಾಟ ಮಾನಸದ ಅಭಿಸರ್ಜನದಲ್ಲಿ ಬರುವವರು, ದ್ವಂದ್ವವನ್ನು ಬಿಟ್ಟು ಹಾದಿ ಕಂಡುಕೊಂಡು ಮುಂದುವರಿಯುತ್ತಾರೆ. ಆದಿ ಬಿಂದುವಿನಿಂದ ಹೊರಹೊಮ್ಮಿ ಅನಂತದ ಅಸೀಮತ್ವದಲ್ಲಿ ಲೀನವಾಗಿ, ತಮ್ಮನ್ನು ಸ್ಥಾಯೀ ರೂಪದಲ್ಲಿ ಮೂಲ್ಯವಾನ ರನ್ನಾಗಿಸಿಕೊಂಡು ಸಾಗುತ್ತಾರೆ.

ಈ ಬರುಹೋಗುಗಳು ಪರಮಾರ್ಥ ತತ್ತ್ವ ಇಲ್ಲವೆ ಅಂತಿಮ ಉತ್ಕರ್ಷದ ವಿಧಾಯಕ ಸಂಗತಿಗಳೇನಲ್ಲ. ಇದೆಲ್ಲ ಪರಮ ಪುರುಷನ ಲೀಲೆಯೇ ಆಗಿದೆ. ಇನ್ನು ಈ ಲೀಲಾ ಕ್ರೀಡೆಗಳಲ್ಲಿಯೇ ಅಪರಿಮೇಯವಾದ ಇದರ ಮೂಲ್ಯವು ಅಡಗಿದೆ. ಎಲ್ಲವೂ ಜ್ಞಾನದ ಎಲ್ಲೆಯಾಚೆಗಿನ ಜಗತ್ತಿನಿಂದ ಬರುತ್ತದೆ. ಮತ್ತು ಆಚೆಗಿನ ಜಗತ್ತಿನಲ್ಲಿಯೇ ಸೇರಿಹೋಗುತ್ತದೆ. ಇದನ್ನೆಲ್ಲ ಜ್ಞಾನದ ಅಳತೆಗೋಲಿನಿಂದ ಅಳೆಯಲಾರೆವು. ಇನ್ನು ಜ್ಞಾನದ ಅಳತೆಯ ಅಳವಿನಲ್ಲಿರುವ ಈ ಕ್ಷಣಿಕವಾದವನ್ನು ಹಿಡಿದು ಈ ವರ್ತಮಾನವಿದೆ. ಭೂತವು ಹಿಡಿತದ ಆಚೆಗಿದೆ. ಕೇವಲ ವರ್ತಮಾನವು ಮಾತ್ರ ಕಾಲನ ಅಳತೆಗೆ ಎಟುಕುವ ಸಂಭವವಿನೆ. ನಡೆಯುವಿಕೆ (ಚಲಮಾನಾ) ಎಂದರೆ ಒಂದು ಕಾಲ–ಖಂಡದಿಂದ ಇನ್ನೊಂದು ಕಾಲಖಂಡದಲ್ಲಿ ಹೋಗುವುದು. ಈ ದೃಷ್ಟಿಯಿಂದ ಭೂತವು, ನಾವು ಈಗಾಗಲೇ ಸ್ವೀಕರಿಸಿರುವಂತೆ, ಕೇವಲ ಆಪೇಕ್ಷಿಕ ಸತ್ಯವಾಗಿದೆ. ಅದೇ ರೀತಿ ಭವಿಷ್ಯವೂ ಸಹ, ನಾವು ಒಪ್ಪಿಕೊಂಡಂತೆ, ಆಪೇಕ್ಷಿಕ ಸತ್ಯವಾಗಿದೆ. ಆದರೆ ವರ್ತಮಾನವು ಏನಾಗಿದೆ?

ವರ್ತಮಾನವು ಎಷ್ಟೊಂದು ಅಲ್ಪವಾಗಿದೆಯೆಂದರೆ ಅದನ್ನು ಇನ್ನು ಮುಂದೆ ಅಂಶ ಅಂಶವಾಗಿ ವಿಭಜಿಸುವುದಕ್ಕೆ ಯಾವ ಮಹತ್ವವೂ ಇಲ್ಲ. ಮೇಲಾಗಿ ಯಾವ

ಸ್ಥಾಯೀ ಮೂಲ್ಯವೂ ಇಲ್ಲ. ಯಾವ ಭೂತದ ಭಾಗವನ್ನು ಮಾನವನು ತನ್ನ ತಿಳವಳಿಕೆಗನುಸರಿಸಿ, ಭವಿಷ್ಯದ ಭಾಗದೊಂದಿಗೆ ಸಮೀಕರಿಸಬಲ್ಲನೋ ಅದನ್ನೇ ವರ್ತಮಾನವೆನ್ನುತ್ತಾರೆ. ಕಾಲದ ಖಂಡ–ಸ್ವಭಾವದ ಸರಿಯಾದ ತಿಳಿವಳಿಕೆ ಇಲ್ಲದುದರಿಂದ, ಕೆಲವು ದಾರ್ಶನಿಕರು ಈ ಜಗತ್ತನ್ನು ಮತ್ತು ವರ್ತಮಾನವನ್ನು ಉಪೇಕ್ಷಿಸುತ್ತಾರೆ ಮತ್ತು ಭವಿಷ್ಯತ್ತನ್ನೇ ಕಾಮನಬಿಲ್ಲಿನಂತೆ ಚಿತ್ರಿಸುತ್ತಾರೆ. ಮತ್ತು ಆ ಕಾಮನಬಿಲ್ಲಿನತ್ತ ಜನರು ಧಾವಿಸುವಂತೆ ಮಾಡುತ್ತಾರೆ. ಅವರು ವರ್ತಮಾನವನ್ನು ಮರೆತೇಬಿಡುತ್ತಾರೆ. ಆ ಕಾಮನಬಿಲ್ಲಿನ ವಾಸ್ತವಿಕ ಅಸ್ತಿತ್ವವು ಎಷ್ಟು ಅಲ್ಪ? ಎಂಬುದನ್ನೇ ಕುರಿತು ಅವರು ಆಳವಾಗಿ ಆಲೋಚಿಸುವುದಿಲ್ಲ.

ಇನ್ನು ಇತಿಹಾಸಕಾರರು ಇತಿಹಾಸದ ಮಾನವೀಯ ಮೂಲ್ಯ ಕುರಿತು ಎಷ್ಟೊಂದು ಯೋಚಿಸುವರೋ, ಅಷ್ಟೊಂದು ವರ್ತಮಾನದಲ್ಲಿ ಅದರ ಪ್ರಯೋಗ ಮೂಲ್ಯ ಕುರಿತು ಯೋಚಿಸುವುದಿಲ್ಲ. ಈ ಕಾರಣದಿಂದ ಭೂತದೊಂದಿಗೆ ಅವರ ವರ್ತಮಾನದ ಸಂಬಂಧವು ಛಿನ್ನ-ವಿಚ್ಛಿನ್ನವಾಗುತ್ತಿದೆ. ಅವರು ಭೂತದ ಮೂಲ್ಯವನ್ನು ಹೇಳಲಿಚ್ಛಿಸುತ್ತಾರೆ. ಆದರೆ ವರ್ತಮಾನದ ಮೂಲ್ಯ ಬೋಧವನ್ನೇ ನಷ್ಟಗೊಳಿಸಿಬಿಡುತ್ತಾರೆ. ಇನ್ನು ಇತಿಹಾಸವು ವರ್ತಮಾನದಿಂದ ಬೇರ್ಪಟ್ಟರೆ, ಜನರು ಅದರ ಮಹತ್ವವನ್ನೂ ಅರಿಯುವುದಿಲ್ಲ, ಅದರ ಬೆಲೆಯನ್ನೂ ಅರಿಯುವುದಿಲ್ಲ. ಹೀಗಾಗಿ ಮಾನವ ಜೀವನವು ಒಮ್ಮುಖವಾಗುತ್ತದೆ.

ಕೆಲವು ಜನರು ಈ ಚಂಚಲ ವರ್ತಮಾನವನ್ನು ಚರಮವೆಂದೂ ಪರಮವೆಂದೂ ಒಪ್ಪಿಕೊಳ್ಳುತ್ತಾರೆ. ಮತ್ತು ಪ್ರಜ್ಞಾವರ್ಜಿತವಾದ, ಶಕ್ತಿವರ್ಜಿತವಾದ, ಜಡವನ್ನೇ ಮೂಲ ಉತ್ಸ (ಆದಿ ಬಿಂದು) ಅಥವಾ ಎಲ್ಲಕ್ಕಿಂತ ಮೂಲ್ಯವಾನ ತತ್ತ್ವವೆಂದು ಬಗೆಯುತ್ತಾರೆ. ಹೀಗೆ ಮಾನವನ ಪ್ರಜ್ಞಾ ಸ್ಥಿತಿಯು ಹಾದಿಯನ್ನು ತಡೆಯುತ್ತಾರೆ. ಅವರ ಮೇರೆಗೆ ಭೋಗವೇ ಚರಮ ಮತ್ತು ಪರಮ ಪುರುಷಾರ್ಥವಾಗಿದೆ. ಶಿವನಾದರೋ ತನ್ನ ಉಕ್ತಿಯಲ್ಲಿ, ತನ್ನ ಕಾರ್ಯದಲ್ಲಿ, ತನ್ನ ಭಾವದಲ್ಲಿ ಮತ್ತು ತನ್ನ ಸರ್ವಾತ್ಮಕ ಅಭಿಸ್ಪೂರ್ತಿಯಲ್ಲಿ, ಈ ಮೂರೂ ಪ್ರಕಾರದ ದೋಷಗಳಲ್ಲಿ ಯಾವುದೊಂದಕ್ಕೂ ಆಶ್ರಯ ನೀಡಲಿಲ್ಲ.

ನೀವು ವರ್ತಮಾನದ ಅಸ್ತಿವಾರದ ಮೇಲೆ ನೆಲೆಯಾಗಿರಿ; ಎಂದು ಅವನು ಹೇಳಿದ್ದಾನೆ. ಭೂತವನ್ನು ನೀವು ನಿಮ್ಮ ವರ್ತಮಾನದ ಅಭಿವೃದ್ಧಿಯಲ್ಲಿ ತೊಡಗಿಸಿರಿ ಮತ್ತು ಯಾವುದು ಮಾನವರ ಐಶ್ವರ್ಯದ ದೃಢವಾದ ಅಸ್ತಿವಾರವಾಗುವುದೋ ಮತ್ತು ವಜ್ರನಿಷ್ಪಂದವಾಗುವುದೋ ಅಂಥ ಹಾದಿಯಿಂದ ನಿಮ್ಮ ಭವಿಷ್ಯದ ಪರಿಕಲ್ಪನೆ ಮಾಡಿರಿ. ಶಿವನು ಈ ಕುರಿತು ಸ್ಪಷ್ಟ ಶಬ್ದಗಳಲ್ಲಿಯೇ ಹೇಳಿದ್ದಾನೆ:

'ವರ್ತಮಾನೇ ಷು ವರ್ತೆತ' (ವರ್ತಮಾನದಲ್ಲಿ ಇರು.)

ಶಿವೋಕ್ತಿ–೨

"ಕರ್ಮಣಾ ಬದ್ಧತೇ ಜೀವಃ
ವಿದ್ಯಯಾ ತು ಪ್ರಮುಚ್ಯತೇ"

(ಜನರು ಕರ್ಮದಿಂದ ಬದ್ಧರಾಗುತ್ತಾರೆ. ಮತ್ತು ಆತ್ಮವಿದ್ಯೆಯಿಂದ ಮುಕ್ತರಾಗುತ್ತಾರೆ.)

ಒಂದು ವೇಳೆ ಮಾನವನು ಜ್ಞಾನವರ್ಜಿತನಾಗಿ ಕರ್ಮ ಮಾಡುತ್ತ ಹೊರಟರೆ. ಅವನು ಕರ್ಮ ಬಂಧನದಲ್ಲಿ ಬದ್ಧನಾಗಿ, ಕೊನೆಗೆ ಜಡತತ್ತ್ವವನ್ನೇ ಹೊಂದುತ್ತಾನೆ, ಎಲ್ಲಿ ಮಾನವನು ಕೇವಲ ಯಂತ್ರದಂತೆ ಕಾರ್ಯ ಮಾಡುತ್ತಿದ್ದು, ಆ ಯಾಂತ್ರಿಕತೆಯೊಂದಿಗೆ ಪ್ರಜ್ಞೆಯ ಯಾವ ಸಂಬಂಧವಿರಿಸಿಕೊಳ್ಳುವುದಿಲ್ಲವೋ, ಆಗ ಆ ಯಾಂತ್ರಿಕತೆಯು ಕೇವಲ ಜಡಶಕ್ತಿಯ ಅಭಿಸ್ಪೂರ್ತಿಯೆಂದು ತಿಳಿಯಬೇಕು. 'ಕೆಲಸ ಮಾಡುತ್ತ ಸಾಗಿರಿ; ಕೆಲಸ ಮಾಡುತ್ತ ಸಾಗಿರಿ' ಎಂದು ಅನೇಕರು ಹೇಳುವುದನ್ನು ನಾವು ಕೇಳುತ್ತೇವೆ. ಅವಶ್ಯವಾಗಿ ಕೆಲಸ ಮಾಡೋಣ. ಆದರೆ, ಆ ಪ್ರಜ್ಞಾ-ವರ್ಜಿತ ರೂಪದಲ್ಲಿ ಮಾಡುವುದು ಬೇಡ. ಒಂದು ಯಂತ್ರವು ಯಾವಾಗ ಕಾರ್ಯ ಮಾಡುವುದೋ, ಆಗ ಆ ಕರ್ಮದೊಂದಿಗೆ ನಿಯಂತ್ರಕ ಪ್ರಜ್ಞಾಸತ್ತೆಯೊಂದಿರುತ್ತದೆ. ಒಂದು ವೇಳೆ ಯಂತ್ರಕ್ಕೆ ಅನಿಯಂತ್ರಿತವಾಗಿ ಕಾರ್ಯ ಮಾಡಗೊಟ್ಟರೆ, ದುರಂತವು ಅನಿವಾರ್ಯವಾಗುತ್ತದೆ. ಆದ್ದರಿಂದಲೇ "ವಿದ್ಯಯಾ ತು ಪ್ರಮುಚ್ಯತೇ" (ವಿದ್ಯೆಯಿಂದ ಬಿಡುಗಡೆಯಾಗುತ್ತದೆ) ಎಂದು ಹೇಳಲಾಗಿದೆ.

ನಾನು 'ಬುದ್ಧಿಯ ಮುಕ್ತಿ–ನವ್ಯ ಮಾನವತಾವಾದ' ಪುಸ್ತಿಕೆಯಲ್ಲಿ, ಚೆನ್ನಾಗಿ ಓದಿರಿ; ಬರೆಯಿರಿ; ಚೆನ್ನಾಗಿ ಜ್ಞಾನಾಭಾಸ ಮಾಡಿರಿ. ಮತ್ತು ವಿಚಾರಶೀಲ ಮನನದ ಮೂಲಕ ಯಾವುದು ಗ್ರಹಣ ಯೋಗ್ಯವೋ ಅದನ್ನು ಗ್ರಹಿಸಿರಿ' ಎಂದು ಹೇಳಿರುವೆನಷ್ಟೇ. ಸಾಮಾನ್ಯ ಮಾನವನ ಸ್ವಭಾವವೆಂದರೆ, ಮನದ ಎರಡು ವಿಶೇಷ ಗುಣಗಳಾದ ಚಿಂತನ ಮತ್ತು ಸ್ಮರಣವಿರಿಸಿಕೊಳ್ಳುವ ಗುಣಗಳನ್ನು ಪೂರ್ಣವಾಗಿ ಬಳಸುವುದಿಲ್ಲ. ಇಲ್ಲವೆ ಬಳಸಬಯಸುವುದಿಲ್ಲ.

ಪ್ರತ್ಯಕ್ಷ, ಅನುಮಾನ ಮತ್ತು ಆಗಮ ಎಂಬ ಮೂರು ಪ್ರಮಾಣಗಳಲ್ಲಿ ಜನರು ಅನುಮಾನ ಪ್ರಮಾಣವನ್ನು ಬಹು ದೂರವಿರಿಸುತ್ತಾರೆ. ಚಿಂತನ ಮತ್ತು ಸ್ಮರಣಗಳನ್ನು ಅಭ್ಯಾಸದ ರೂಪದಲ್ಲಿರಿಸಿಕೊಳ್ಳದೆ, ಬಹಳ ಸಲ ಅವನು ಪ್ರತ್ಯಕ್ಷಕ್ಕಿಂತ ಆಗಮಕ್ಕೇ ಬಹಳ ಹೆಚ್ಚಿನ ಮಹತ್ವ ನೀಡುತ್ತಾನೆ. ಆಗಮ ಪ್ರಮಾಣದ ಒತ್ತಡದಲ್ಲಿ ಅವನು ಬಹಳ ಸಲ, ಆಗಮಕ್ಕೇ ಹೆಚ್ಚು ಮಹತ್ವ ನೀಡುತ್ತಾನೆ. ಆಗಮಿಕ ಪ್ರಭಾವದ ಒತ್ತಡಕ್ಕೆ ಸಿಲುಕಿ ಅವನು ಬಹಳ ಸಲ, ಯುಕ್ತಿ ಸಂಗತವಾಗಿದ್ದರೂ, ಪ್ರತ್ಯಕ್ಷವನ್ನು ಒಪ್ಪದೆ ಹೋಗುತ್ತಾನೆ. ಪ್ರತ್ಯಕ್ಷದಲ್ಲಿ ದೋಷವೇನಿಲ್ಲವೆಂದು ನಾನಿಲ್ಲಿ ಪ್ರತಿಪಾದಿಸುವುದಿಲ್ಲ. ಮತ್ತು ಯಾರೂ ಆ ರೀತಿ ಹೇಳರು. ಆದಾಗ್ಯೂ ಸಹ, ಪ್ರತ್ಯಕ್ಷವು ಜ್ಞಾನದ ವಿಶ್ವಾಸಾರ್ಹ ಮೂಲವೆಂದು ಸಾಮಾನ್ಯವಾಗಿ ಸ್ವೀಕೃತವಾಗಿದೆ. ಆದರೆ ಜನರು ಆಗಮದ ಒತ್ತಡಕ್ಕೆ ಮಣಿದು, ಪ್ರತ್ಯಕ್ಷದ ಬೆಲೆಯನ್ನು ಆಗಾಗ ನಿರ್ಲಕ್ಷಿಸುವುದುಂಟು. ಉದಾಹರಣಾರ್ಥವಾಗಿ ನೋಡಿರಿ. ಯಾವನೋ ಹೇಳುತ್ತಾನೆ; ಮಂತ್ರ ಬಲದಿಂದ ಚಂದ್ರನನ್ನು ತುಂಡು ತುಂಡು ಮಾಡಲಾಯಿತು ಎಂದು. ಯಾವನೋ ಒಬ್ಬನು ಚಂದ್ರನ ಶರೀರದ ಮೇಲೆ ಕಪ್ಪು ಚಿಹ್ನೇ ಇಟ್ಟನು; ಎಂದು ಇನ್ನೊಬ್ಬನು ಹೇಳುತ್ತಾನೆ. ಮಗುದೊಬ್ಬನು, ಚಂದ್ರನ ತೊಡೆಯ ಮೇಲೆ ಮೊಲವೊಂದು ಕುಳಿತಿದೆ.

ಆದ್ದರಿಂದ ಚಂದ್ರನಿಗೆ ಕಪ್ಪು ಕಲೆಯುಂಟಾಗಿದೆ; ಎಂದು ಹೇಳು ಹೇಳುತ್ತಾನೆ. ಈ ಕಾರಣದಿಂದಾಗಿಯೇ ಚಂದ್ರನಿಗೆ 'ಶಶಾಂಕ' ಎಂಬ ಹೆಸರು ಬಂದಿದೆ. ಈ ಕಥೆಗಳನ್ನೆಲ್ಲ ಆಗಮಿಕ ಸತ್ಯವೆಂಬಂತೆ ಗ್ರಹಿಸಿ, ತನ್ನ ಕಣ್ಣಿನ ಜ್ಞಾನ–ತಂತುಗಳನ್ನೇ ಒಪ್ಪದವರು, ಈ ಎಲ್ಲ ಆಗಮಿಕ ಕಥೆಗಳ ಪರವಾಗಿ ಪ್ರಚಾರಗೆಯ್ಯುತ್ತ ಬಂದರು. ಮತ್ತು ಇದರ ಫಲಸ್ವರೂಪವಾಗಿ, ಭಾವ ಜಡತೆಯ ವಶವರ್ತಿಗಳಾದರು. ಈ ಪ್ರಕಾರ ಭಾವ ಜಡತೆಗೆ ವಶವರ್ತಿಗಳಾಗಿ, ತಿಳಿದೋ ತಿಳಿಯದೆಯೋ, ತಮ್ಮ, ತಮ್ಮನ್ನು ಮಿಥ್ಯೆಯ ಕಿಸರಿನಲ್ಲಿ ಮುಳುಗಿಸಿಕೊಂಡರು. ಮತ್ತು ಮಾನವನ ಜ್ಞಾನಾತ್ಮಕ ಪ್ರಸಾರ ಮತ್ತು ಜ್ಞಾನೇಷಣೆಗಳನ್ನು ನಷ್ಟಗೊಳಿಸಿಬಿಟ್ಟರು. ಈ ಆಗಮಿಕ ಪ್ರಮಾಣದ ಪ್ರಭಾವವು ಹೆಚ್ಚಾಗಿ, ಓದು–ಬರೆಹ ಕಲಿಯಲಿಚ್ಛಿಸದ ತಮ್ಮ ವಿಚಾರಶೀಲತೆಯನ್ನು ವರ್ಧಿಸಲಿಚ್ಛಿಸದ, ತಮ್ಮ ಚಿಂತನ ಮತ್ತು ಸ್ಮರಣ ಶಕ್ತಿಗಳನ್ನು ಕಬ್ಬಿಣದ ಸಂದೂಕದಲ್ಲಿ ಬೀಗಹಾಕಿ ಇಟ್ಟು, ಅದರ ಮೇಲೆ ತಾಳ ಬಾರಿಸುತ್ತಿರುವ ಜನರ ಮೇಲೆ ಹೆಚ್ಚಾಗಿದೆ. ಈ ಮೊದಲೇ ಹೇಳಿದಂತೆ ಆಗಮಿಕ ಪ್ರಮಾಣವನ್ನು ಒಪ್ಪಬೇಕೆಂಬುದೇನೋ ಸರಿಯೇ. ಆದರೆ ಈ ಆಪೇಕ್ಷಿಕ ಜಗತ್ತಿನಲ್ಲಿ ಯಾವುದೊಂದು ಮಾತನ್ಯ ಅಪೌರುಷೇಯ ನೇದ ವೆಂದು ಕರೆದು ಪ್ರದರ್ಶನ ನಡೆಸುವುದೇನೂ ಉಚಿತವಲ್ಲ.

ಇದಲ್ಲದೆ ಆಗಮಿಕ ಪ್ರಮಾಣದ ಇನ್ನೊಂದು ದೊಡ್ಡ ದೋಷವೂ ಇದೆ. ಆಗಮ ಪ್ರಮಾಣದಲ್ಲಿ ಅಜ್ಞತೆಯಿಂದ ಜನಿಸಿದ ದೋಷವೂ ಇರಬಹುದು; ಇಲ್ಲವೆ ಕಾಲದಲ್ಲಿ ಬದಲಾವಣೆಯಾಗುವುದರಿಂದ ಉಂಟಾಗುವ ದೋಷಗಳೂ ಇರಬಹುದು, ಇವುಗಳಲ್ಲದೆ, ಯಾವ ವ್ಯಕ್ತಿಯನ್ನು ನಾವು ಆಗಮ ಪ್ರಮಾಣದ ಉತ್ಸವೆಂದು ಗ್ರಹಿಸುವೆವೋ ಅವನಲ್ಲಿ ಮಾನವೇತರ ನಿಮ್ನ ವೃತ್ತಿಗಳು ಪ್ರೇರಕವಾಗಿರಬಹುದು. ಒರ್ವ ಅಸಾಧು ಮನುಷ್ಯನು ಒಂದು ವೇಳೆ ಜನಗೋಷ್ಠಿಯೊಂದರ ಮೇಲೆ ತನ್ನ ಪ್ರಭಾವ ಬೀರಲು ಶಕ್ತನಾದರೆ, ಆದರಿಂದಾಗಿ, ಆ ಜನಗೋಷ್ಠಿಯು ಅವನ ಮಾತುಗಳನ್ನು ಆಗಮ ಪ್ರಮಾಣವೆಂದು ಸ್ವೀಕರಿಸಿದರೆ, ಆ ಕ್ಷೇತ್ರದಲ್ಲಿ ಆ ವ್ಯಕ್ತಿಯು ತನ್ನ ಸ್ವೇಚ್ಛಾಚಾರ ಮೂಲಕ ದೋಷಪೂರ್ಣ ಮಾನಸಿಕತೆಯನ್ನು ಮತ್ತು ಇನ್ನಿತರ ಹಾನಿಕಾರಕ ವೃತ್ತಿಗಳನ್ನು ಮಾನವರ ಮೇಲೆಹೇರಿ, ಅವರಿಗೆ ಅಪಾರ ಹಾನಿಯುಂಟು ಮಾಡುತ್ತಾನೆ. ಅವರು ಆ ನಿರಪರಾಧಿ, ವಿಶ್ವಾಸಿ ಜನರನ್ನು ಕಾಲಚಕ್ರದಲ್ಲಿ ಸಿಕ್ಕಿಸಿ, ದಲಿತಗೊಳಿಸಿ, ಜಜ್ಜಿ ಜಜ್ಜಿ ಹಿಟ್ಟಾಗುವಂತೆ ಮಾಡಿ, ಪಾತಾಳದ ಗವಿಯಲ್ಲಿ ಮುಳುಗಿಸಿಬಿಡುತ್ತಾರೆ. ವೈಯಕ್ತಿಕ ವಿಚಾರ ಲಹರಿಗೆ ಅಸ್ತಿವಾರದ ಮೇಲೆ ರಚಿತವಾದ ಬುದ್ಧಿಯ ಸಮರ್ಥನೆ ಇರಲಾರದ ಭಾವಜಡತೆಯನ್ನು ಅಥವಾ ಆಕಾಶದಲ್ಲಿ ಹಾರುವ ಬಣ್ಣಬಣ್ಣದ ಕಲ್ಪನೆಯ ಬಲೂನುಗಳನ್ನು ಒಂದು ಪ್ರಕೃಷ್ಟ ಮತವಾದವೆಂದು ಕರೆದು, ಪೃಥ್ವಿಯ ಕೋಟ್ಯಂತರ ಜನರ ಹೆಗಲ ಮೇಲೆ ಹೇರಿ ಮಾನವರ ಮೂಲ್ಯ-ಬೋಧವನ್ನೇ ನಾಶಗೊಳಿಸುತ್ತಾರೆ. ವಾಸ್ತವವಾಗಿ ಮಾನವನಿಗೆ ಆಳಾಗಿರಬೇಕಾಗಿದ್ದ, ಪ್ರಜ್ಞಾವರ್ಜಿತ, ವೇದನಾಹೀನ ಜಡ ಪದಾರ್ಥವನ್ನು, ಚರಮ ಮತ್ತು ಪರಮವೆಂದು ಘೋಷಿಸಿ, ಅವನ ಉಪಾಸ್ಯವನ್ನಾಗಿಸಿ, ಮಾನವನ ಮಾನವೀಯ ಸಂಪದವನ್ನು ಮತ್ತು ಚಿನ್ಮಯ ಸಂಪದವನ್ನು

ನಷ್ಟಗೊಳಿಸಿ, ವ್ಯಷ್ಟಿ ಮತ್ತು ಸಮಷ್ಟಿಯನ್ನು ದೀರ್ಘಕಾಲದ ವರೆಗೆ ಹಾಹಾಕಾರದ ತಿರುಗಣಿಯಲ್ಲಿ ಕೆಡಹುತ್ತಾರೆ.

ಈ ಪ್ರಕಾರದ, ಆಗಮಿಕ ತತ್ತ್ವದ ಬುದ್ಧಿಹೀನ, ಧಾರಕ, ವಾಹಕ ಮತ್ತು ಪರಿಪೋಷಕರ ಸಂಬಂಧದಲ್ಲಿ ಶಿವನು ಸತರ್ಕವಾಗಿರಲು ಜನರಿಗೆ ಹೇಳಿದನಲ್ಲದೆ, ಅವನು ಇನ್ನೂ ಮುಂದೆ ಹೋಗಿ,ಇವರು ಪ್ರಾಪಂಚಿಕ ಕ್ಷೇತ್ರದಲ್ಲಿ ಮಾನವರ ಸರ್ವನಾಶವನ್ನೇ ಗೆಯ್ಯುತ್ತಾರೆ. ಮತ್ತು ಆತ್ಮಿಕ ಕ್ಷೇತ್ರದಲ್ಲಿಯೂ ಸಹ, ಮಾನವನನ್ನು ಹತಾಶೆಯ ಅಂಧಕಾರದಲ್ಲಿ ಚೆಲ್ಲುತ್ತಾರೆ; ಎಂದು ಹೇಳಿದ್ದಾನೆ. ಈ ಜನರು ಮಾನವನ ಮನದಲ್ಲಿ ಭಯಾನಕ ವ್ಯಾಧಿಯನ್ನೂ ಸೃಷ್ಟಿಸುತ್ತಾರೆ. ಮತ್ತು ಮಾನವನ ಇಡೀ ಅಸ್ತಿತ್ವವನ್ನೇ ನೋವಿನಿಂದ ಹಣ್ಣು ಹಣ್ಣಾಗಿಸುತ್ತಾರೆ. ಅವರ ಹಾದಿಯಲ್ಲಿ ಕೇವಲ ಸಾವು, ಕರಾಳ ಕುಚೇಷ್ಟೆಗಳೇ ಇರುತ್ತವೆ. ಇವರನ್ನು ಕಠೋರ ಭಾಷೆಯಲ್ಲಿ ನಿಂದಿಸುತ್ತ ಶಿವನು 'ಲೋಕ ವ್ಯಾಮೋಹ ಕಾರಕ' ಎಂದು ಅವರನ್ನು ಹೀಗಳಿದಿದ್ದಾನೆ.

ಶಿವೋಕ್ತಿ–೩

ಸಮೂಹ ಜೀವಿಗಳು, ಮತ್ತು ವಿಕಾಕಿ ಜೀವಿಗಳೆಂದು ಜೀವ ಜಗತ್ತನ್ನು ಇಬ್ಭಾಗಿಸುವಂತೆ ಕುಟುಂಬ ಜೀವನದ ದೃಷ್ಟಿಯಿಂದಲೂ ಸಕಲ ಜೀವಿಗಳನ್ನು ಎರಡು ವಿಶಾಲ ವರ್ಗಗಳಲ್ಲಿ ವಿಂಗಡಿಸಬಹುದಾಗಿದೆ; ಪರಿವಾರಾಸಕ್ತಿಯ ಆನೆ, ಸಿಂಹ ಪಾರಿವಾಳ ಇತ್ಯಾದಿ ಒಂದು ವರ್ಗ; ಹುಲಿ, ನಾಯಿ ಬೆಕ್ಕು, ಮೇಕೆ ಇತ್ಯಾದಿ ಸ್ವೈರ ಪ್ರಾಣಿಗಳ ಇನ್ನೊಂದು ವರ್ಗ.

ವಿಕಾಸದ ಪ್ರಾರಂಭ ನೆಲೆಯಲ್ಲಿ ಮಾನವನು ಸ್ವೈರಾಚಾರಿ ಜೀವನವನ್ನು ರೂಢಿಸಿಕೊಂಡಿದ್ದನು. ಆಗ ಅವನಿಗಾವ ಕೌಟುಂಬಿಕ ಹೊಣೆಗಾರಿಕೆಗಳೇನೂ ಇರಲಿಲ್ಲ. ಆದರೆ ಬರು–ಬರುತ್ತ ಕುಟುಂಬ ವೃತ್ತಿಯು ಬೆಳೆಯಿತು. ಆದರೂ ಸಹ, ಆ ಕುಟುಂಬ ವೃತ್ತಿಯು ಆನೆ, ಸಿಂಹ, ಪಾರಿವಾಳ ಇತ್ಯಾದಿ ಜೀವಿಗಳಲ್ಲಿರುವುದಕ್ಕಿಂತ ಬೇರೇನೂ ಇರಲಿಲ್ಲ. ಕೆಲವು ಸಹಜಾತ ಸಂಸ್ಕಾರಗಳ ಪ್ರೇರಣೆಯಿಂದಾಗಿ, ಪುರುಷಜೀವ ಮತ್ತು ಸ್ತ್ರೀ ಜೀವಗಳು, ಒಂದು ಕೌಟುಂಬಿಕ ತಿಳುವಳಿಕೆ ಮಾಡಿಕೊಂಡರು. ಆದರೆ ಅವರಲ್ಲಿ, ವಿವೇಕಯುತ ಹೊಣೆಗಾರಿಕೆಯ ಅರಿವಂತೂ ಇರಲಿಲ್ಲ. ಪ್ರತಿಯಾಗಿ, ಪರಸ್ಪರ ಸಂಪರ್ಕದಲ್ಲಿಯ ಶಿಥಿಲತೆಯಿಂದಾಗಿ, ಒಬ್ಬರು ಇನ್ನೊಬ್ಬರನ್ನು ಪರಿತ್ಯಜಿಸಿ, ಮನ ಬಂದಂತೆ ಬೇಕು ಬೇಕಾದೆಡೆಗೆ ಹೋಗಿ ಬಿಡುತ್ತಿದ್ದರು. ಹೀಗೆ ಸ್ವೈರಾಚಾರಿಗಳು ಬಹು ಸಂಖ್ಯೆಯಲ್ಲಿದ್ದರು. ಈ ಸ್ವೈರಾಚಾರಿಗಳು, ಕೌಟುಂಬಿಕ ಜನರ ಶಾಂತಿಯನ್ನು ಕದಡಿ, ದೊಡ್ಡ ದೊಡ್ಡ ಜಗಳ ತಂಟೆಗಳಿಗೆ ಕಾರಣೀಭೂತರಾಗುತ್ತಿದ್ದರು.

ಈ ಸ್ವೈರ ಜೀವಿಗಳು ಯಾವ ಪ್ರಕಾರದಿಂದಲೂ ಸಂತಾನದ ಹೊಣೆಯನ್ನು ಹೊರುತ್ತಿರಲಿಲ್ಲ. ಅವರು ತಮ್ಮಿಚ್ಛೆ ಬಂದೆಡೆ ಅಲೆದಾಡುತ್ತಿದ್ದರು. ಇದರ ಫಲವಾಗಿ, ಶೈಶವಾವಸ್ಥೆಯಲ್ಲಿರುವ ಮಕ್ಕಳ ಭರಣ–ಪೋಷಣ, ಲಾಲನೆ–ಪಾಲನೆಗಳನ್ನೆಲ್ಲ ತಾಯಿಯೇ ನೋಡಿಕೊಳ್ಳಬೇಕಾಗಿತ್ತು. ತಾಯಿಯು ತಾನೊಬ್ಬಳೇ ಈ ಗುರುತರ

ವಾದ ಭಾರ ಹೊರಲು ಸಮರ್ಥಳಾಗುತ್ತಿರಲಿಲ್ಲ. ಈ ಕಾರಣದಿಂದ, ಅನೇಕ ಶಿಶುಗಳು ಅಲ್ಪಕಾಲ ಜೀವ ಹಿಡಿದುಕೊಂಡು, ಬೇಗ ಸಾವಿಗೀಡಾಗುತ್ತಿದ್ದವು. ಇಷ್ಟಾಗಿ ಬದುಕಿ ಉಳಿದ ಮಕ್ಕಳೂ ಸಹ ತಾಯಿಯ ಎದೆಹಾಲು ಹಿಂಗಿದ ಬಳಿಕ ಸಂಕಟದ ಸಾಗರವನ್ನೇ ಎದುರಿಸಬೇಕಾಗುತ್ತಿತ್ತು, ಹೀಗಾಗಿ ತಾಯಿಯ ಮಮತೆಯಿಂದ ಆ ಮಕ್ಕಳು ಚ್ಯುತ ರಾಗುತ್ತಿದ್ದರು. ತಾಯಿಯು ತನ್ನ ಮುಂದಿನ ಹೊಸ ಮಗುವಿನತ್ತ ಧ್ಯಾನ ನೀಡು ತ್ತಿದ್ದಳು. ಇದು ಮಾನವನ ಇತಿಹಾಸಪೂರ್ವ ಕಾಲದ ಸಂಗತಿ. ಈ ಇತಿಹಾಸಪೂರ್ವ ಕಾಲದಲ್ಲಿ ವೇದದ ಕೆಲವು ಅಂಶಗಳನ್ನು ಆಗಲೇ ರಚಿಸಲಾಗಿತ್ತೆಂಬುದನ್ನು ನೆನಪಿಡು ವುದು ತುಂಬಾ ಅವಶ್ಯವಾಗಿದೆ. ಅವುಗಳನ್ನು ಆ ಕಾಲದ ತಥಾಕಥಿತ ಕೌಟುಂಬಿಕ ವ್ಯಕ್ತಿಗಳೇ ರಚಿಸಿದ್ದರು. ಸ್ವೈರಾಚಾರಿಗಳ ಜೀವನವು ಸಂಪೂರ್ಣವಾಗಿ ಪಶುಜೀವನ ದಂತೆಯೇ ಇದ್ದಿತು.

ವಿಶ್ವದ ಪ್ರತಿಯೊಂದು ವಸ್ತುವು ಗತಿಶೀಲವಾಗಿದೆ. ದೃಶ್ಯದಿಂದ ದೃಶ್ಯವು ಬದಲಾಗುತ್ತಿದೆ. ದೂರ ದೂರ ಹೋದ ಚಿತ್ರಗಳು ಮನದ ಪಟಲದಿಂದ ಮರೆ ಯಾಗುತ್ತವೆ. ಇಂದಿನ ಮಾನವರು ಆ ಸ್ವೈರಿ ಮತ್ತು ಸ್ವೈರಿಣಿಯರ ಯುಗವನ್ನು ಮರೆತು ಬಿಟ್ಟಿದ್ದಾನೆ. ಮತ್ತು ಆ ಬಂಧನ-ವಿಹೀನ ಸಾಂಸಾರಿಕರ ಜೀವನ-ಕಥೆಗಳ ನ್ನೆಲ್ಲ ಮರೆತಿದ್ದಾನೆ. ಮತ್ತು ಹೀಗೆ ಮರೆತು ಬಿಡುವಲ್ಲಿ ಯಾವ ವಿರಾಟ ಪುರುಷನ ಕೊಡುಗೆಯು ಸಾಕಷ್ಟು ಮಹತ್ವಪೂರ್ಣವಾಗಿದೆಯೋ ಅವನೇ ಶಿವ. ತ್ರಿಕಾಲದರ್ಶಿ ಶಿವ- ತಾರಕ ಬ್ರಹ್ಮ ಶಿವ. ಮಾನವನಲ್ಲಿ ಪ್ರಖರವಾದ ಬುದ್ಧಿ ಇದೆಯೆಂಬುದನ್ನೂ ಮತ್ತು ಸಂರಚನಾತ್ಮಕ ಚೇತನೆಯಿದೆಯೆಂಬುದನ್ನೂ ಶಿವನು ಕಂಡು ಕೊಂಡನು. ಆದರೂ ಸಹ ಮಾನವನೇಕೆ ಈ ರೀತಿ ಬಿದ್ದುಕೊಂಡಿದ್ದಾನೆ? ಅವನೇಕೆ ತನ್ನ ಈ ದೀರ್ಘ ಭವಿಷ್ಯ ಜೀವನವನ್ನು ಅನಂತ ಕಾಲದ ವರೆಗೆ, ಗ್ಲಾನಿಮಯವಾಗಿ ಮಾಡಿಕೊಂಡನು? ಅವರಿಗೋಸ್ಕರ ಉಜ್ವಲ ಚೇತನದಿಂದ ಬೆಳಗುವ ನಿಷ್ಠೆ ಮತ್ತು ಸದ್ಗುಣಗಳ ಜೀವ ನಾದರ್ಶವನ್ನು ಪ್ರಸ್ತುತಗೊಳಿಸಬಾರದೇಕೆ? ಎಂದು ಶಿವನು ಯೋಚಿಸಿದನು. ಈ ಗುರುತ್ವಪೂರ್ಣ ಮಹಾ ಆದರ್ಶದ ಅಣತಿಯಿಂದ ಉದ್ಭೂತವಾಗುವ ಮಹಾ ಹೊಣೆ ಯನ್ನು ಹೊರಬಯಸುವವರು, ಒಂದು ವೇಳೆ, ಕೌಟುಂಬಿಕ ಜೀವನದ ಬಂಧನಗಳನ್ನು ಒಪ್ಪಲು ಸಿದ್ಧರಾಗದಿದ್ದರೆ, ಏಕಾಕಿ ಜೀವಿಗಳಾಗಿರಬಹುದು,ಎಂದೂ ಶಿವನು ಘೋಷಿಸಿ ದನು. ಆದರೆ ಈ ಏಕಾಕಿ ಜೀವಿಯೆಂದೂ ಸ್ವೈರಾಚಾರಿಯಾಗನು. ಆದರೆ 'ಯತಿ' ಯಾಗುತ್ತಾನೆ. ಇತರ ಜನರು ಲಂಗು-ಲಗಾಮಿಲ್ಲದ ಸಂಸಾರಿಗಳಾಗುವುದಿಲ್ಲ. ಆದರೆ, ಅವರು ಹೊಣೆಹೊತ್ತ ಸುಶೃಂಖಿಲೆ ತೊಟ್ಟ ಸಂಸಾರಿಗಳಾಗಬೇಕಾಗುತ್ತದೆ.

ನಾರಿಯು ಉಪಜೀವನಕ್ಕಾಗಿ ಅರ್ಜಿಸಲು, ಸಕ್ಷಮಳಿರಲಿ; ಬಿಡಲಿ; ನಾರಿಯ ಭರಣ-ಪೋಷಣೆಯ ಹೊಣೆಯನ್ನು ಪುರುಷನೇ ಹೊರಬೇಕೆಂದೂ ಶಿವನು ವಿಧಿಸಿ ದನು. ಈ ಭರಣ ಪೋಷಣದ ಹೊಣೆಯನ್ನು ಹೊರುವ ಕಾರಣದಿಂದ, 'ಭೃ' ಧಾತುವಿಗೆ ತೃಕ್ ಪ್ರತ್ಯಯ ಹಚ್ಚಿ, 'ಭರ್ತೃ' ಶಬ್ದದ ಉತ್ಪತ್ತಿ ಮಾಡಿದ್ದಾರೆ. ಇದರ ಪ್ರಥಮಾ ವಿಭಕ್ತಿ ಏಕವಚನವೇ ಭರ್ತಾ; ಅಂದರೆ ಗಂಡ. ಗ್ರಾಮ್ಯ ಬಂಗಾಳಿಯಲ್ಲಿ 'ಭಾತಾರ' ಶಬ್ದವು ರೂಢಿಯಲ್ಲಿದೆ. ಇದರ ಫಲವಾಗಿ ಮಕ್ಕಳ ಪಾಲನೆ-ಪೋಷಣೆ

ಮಾಡಲು ನಾರಿಗೆ ಬಹಳಷ್ಟು ಅನುಕೂಲವಾಯಿತು. ಕುಟುಂಬಕ್ಕೆ ಅನ್ನ-ವಸ್ತ್ರಗಳ ವ್ಯವಸ್ಥೆ ಮಾಡುವ ಹೊಣೆಯಿಂದ ಅವಳು ಬಹಳಷ್ಟು ಮುಕ್ತಳಾದಳು. ಇಷ್ಟೇ ಅಲ್ಲ: ಮಗು ಬೆಳೆದು ದೊಡ್ಡವನಾದರೆ, ಅವನ 'ಲಾಲನೆ-ಪಾಲನೆ'ಯ ಭಾರವು ತಾಯಿಗಿಂತ ತಂದೆಯ ಮೇಲೆ ಹೆಚ್ಚು ಬೀಳುವಂತಾಯಿತು.

ಸ್ವೈರಾಚಾರಿಗಳ ಜೀವನದಲ್ಲಿಂತೂ ಮಗುವಿಗೆ ತಂದೆಯ ಪರಿಚಯವು ನಿಶ್ಚಯ ವಾಗಿ ಆಗುತ್ತಿರಲಿಲ್ಲ. ಆದರೆ, ಕೌಟುಂಬಿಕ ಜೀವನದಲ್ಲಿಯೂ ಸಹ ತಂದೆಯಾರೆಂಬುದು ತಿಳಿಯುವಂತಿರಲಿಲ್ಲ. ಮಗು ಕೇವಲ ತನ್ನ ತಾಯಿಯನ್ನು ಮಾತ್ರ ಗುರುತಿಸುತ್ತಿತ್ತು. ತಾಯಿಯ ಮೊಲೆ ಹಾಲು ಬಿಡಿಸಿದ ಮೇಲೆ, ಮಗು ತಾಯಿಯನ್ನು ಮರೆತು ಬಿಡು ತ್ತಿತ್ತು. ಇದರ ಫಲವಾಗಿ ಅತಿ ಚಿಕ್ಕ ವಯಸ್ಸಿನಲ್ಲಿಯೇ ತಾಯಿಯ ಸ್ನೇಹದ ನೆರಳಿ ಗಿಂತ ವಂಚಿತರಾಗಿ, ಮಾನವ ಮನದಲ್ಲಿ ಸುಕುಮಾರ, ಸುಮಧುರ ವೃತ್ತಿಗಳು ವಿಕಾಸ ಗೊಳ್ಳುವ ಸುಯೋಗವೇ ತಪ್ಪಿಹೋಗುತ್ತಿತ್ತು. ಮಾನವಾತ್ಮ, ಮಾನವ ಮನೀಷೆಯು ಅರಳುವ ಮುನ್ನವೇ ಒಣಗಿ ಹೋಗುತ್ತಿತ್ತು. ಅರಳಿ ಹೂವಾಗುವ ಸುಯೋಗವು ಅದಕ್ಕೆ ಸಿಗುತ್ತಿರಲಿಲ್ಲ. ಅನಂತ ಮಾಧುರ್ಯದಿಂದ ವಿಶ್ವವನ್ನು ತುಂಬುವ ಸುಯೋ ಗವು ಆ ಕಾಲದ ಮಾನವರಿಗೆ ಪ್ರಾಪ್ತವಾಗಿರಲಿಲ್ಲ. ಪುರುಷನನ್ನು 'ಭರ್ತಾ' ಎಂದು ಘೋಷಿಸಿ ಶಿವನು, ಮಾನವ ಜಾತಿಯ ಬಗೆಗೆ ತನ್ನ ಕರ್ತವ್ಯವನ್ನು ವಿರಾಟ ಅಂಶದಿಂದ ಪರಿಪಾಲಿಸಿದ್ದಾನೆ.

ಹಾಗಾದರೆ ಇಷ್ಟಕ್ಕೇ ಎಲ್ಲವೂ ಮುಗಿಯಿತೇನು? ಇಲ್ಲ. ಇದಾದ ಬಳಿಕ ಇನ್ನೂ ಬಹಳಷ್ಟಿದೆ. ಶಿವನು ನಾರಿಯನ್ನು 'ಕಲತ್ರ' ಎಂದು ಕರೆದನು. ಅವಳು ಗಂಡ ಮತ್ತು ಮಕ್ಕಳ ಬಗೆಗಿನ ತನ್ನ ಹೊಣೆಯನ್ನು ಯಾರೊಬ್ಬರ ಮನವೂ ನೋಯದಂತೆ ನಿರ್ವಹಿಸುತ್ತಾಳೆ. ಈ ನೂತನ ವ್ಯವಸ್ಥೆಯನ್ನು ಒಪ್ಪಿಕೊಳ್ಳುವವರೇ 'ವಿವಾಹಿತ' ರೆನಿಸುತ್ತಾರೆ. ಇದನ್ನು ಘೋಷಿಸಿ ಬಿಡುತ್ತಾರೆ. ಮತ್ತಿತರ ಜನರೂ ಆ ವಿವಾಹದಲ್ಲಿ ಉಪಸ್ಥಿತರಿದ್ದು, ಆ ವಿವಾಹ ಸಂಸ್ಕಾರಕ್ಕೆ ಸಾಕ್ಷಿ ನೀಡುವರು. ಮತ್ತು ದಂಪತಿಗಳಿಗೆ ಆಶೀರ್ವಾದ ನೀಡುತ್ತಾರೆ ಮತ್ತು ಸಹಕಾರದ ಆಶ್ವಾಸನೆ ನೀಡುತ್ತಾರೆ. ವಿ-ವಹ-ಧಞ-ಪ್ರತ್ಯಯ ಹಚ್ಚಿ ವಿವಾಹ ಶಬ್ದದ ಉತ್ಪತ್ತಿಯಾಗಿದೆ. ಇದರ ಅರ್ಥವೆಂದರೆ, ಈ ಸಂಸ್ಕಾರಾನಂತರ ಉಕ್ತ ಪುರುಷ ಮತ್ತು ನಾರಿಯರ ಸ್ವೈರಿ ಮತ್ತು ಸ್ವೈರಿಣಿಯರಾಗಿ ಉಳಿಯರು. ಅವರು ಭರ್ತಾ ಮತ್ತು 'ಕಲತ್ರ' ನಾತೆಯಿಂದ ಪೂರ್ಣ ಹೊಣೆಗಾರಿಕೆ ಯನ್ನು ನಿರ್ವಹಿಸಬೇಕಾಗುತ್ತದೆ.

ನಾರೀ ಶಬ್ದವು ಸ್ತ್ರೀಲಿಂಗ ಸೂಚಿಯಾಗಿದೆ. ಆದರೆ ಶಿವನು 'ಕಲತ್ರ' ಶಬ್ದ ವನ್ನು ನಪುಂಸಕ ಲಿಂಗದ ರೂಪದಲ್ಲಿ ಬಳಸಿದ್ದಾನೆ. ಏಕೆಂದರೆ ತನ್ನ ಗಂಡನ ಬಳಿ ಯಲ್ಲಿರುವ ಸ್ತ್ರೀಯನ್ನು ಕುರಿತು ಸ್ತ್ರೀಲಿಂಗವಾಚಕ ಬಳಸಬಹುದಾದರೂ, ಸಂತತಿ ಇಲ್ಲವೆ ಇತರ ಜನರ ಸಂಬಂಧದಲ್ಲಿ ಅವಳು ಪುರುಷನಿಗೆ ಸಮಾನವಾಗಿ ಮಹಿಮಾಮಯಿ ಯಾಗಿದ್ದಾಳೆ. ಈ ಕಾರಣದಿಂದ ವಿವಾಹಿತ ಸ್ತ್ರೀಯನ್ನು ಶಿವನು 'ಕಲತ್ರ' ಎಂದು ತಿಳಿದು, ಅವಳಿಗೆ ವಿಶೇಷ ಮರ್ಯಾದೆ ನೀಡಿ ನಪುಂಸಕ ಲಿಂಗದ ಶಬ್ದದಿಂದ ಕರೆದನು. ವಿವಾಹ ಶಬ್ದದ ಶಾಬ್ದಿಕ ಅರ್ಥವೆಂದರೆ, ವಿಶೇಷ ಪ್ರಕಾರದ ಹೊಣೆಗಾರಿಕೆಯನ್ನು

ಗ್ರಹಿಸಿ ಹೊಸ ರೀತಿಯಿಂದ ಜೀವನಧಾರೆಯನ್ನು ಹರಿಸುವುದು. ಶೈವ ವಿವಾಹದ ಒಳಗೆ ಅಡಗಿದ ತಾತ್ಪರ್ಯವಿದೇ ಆಗಿದೆ.

ಶಿವನು ಈ ಹೊಣೆ ಹೊತ್ತುಕೊಂಡೇ ವಿವಾಹವಾದನು. ಈ ಕಾರಣದಿಂದ ಈ ವಿಶ್ವದಲ್ಲಿ ಪ್ರಥಮ ವಿವಾಹವನ್ನು ಶಿವನೇ ಮಾಡಿಕೊಂಡನೆಂದು ನಿರ್ವಿವಾದವಾಗಿ ಹೇಳ ಬಹುದಾಗಿದೆ. ಕಲತ್ರ-ತನ್ನ ಭರ್ತ್ಯಾನನ್ನು ಕುರಿತು ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಲಿ; ಮತ್ತು ಅವನ ಕ್ಲೇಶವನ್ನು ದೂರಗೊಳಿಸಲೋಸ್ಕರ ಸದಾ ಪ್ರಯತ್ನಿಸು ತ್ತಿರಲಿ; ಎಂಬ ಕಾರಣದಿಂದಾಗಿಯೇ ಶಿವನ ಕಠೋರ ನಿರ್ದೇಶವು ಹೀಗಿತ್ತು— 'ಯದ್ ಭರ್ತ್ಯುರೇರ ಹಿತಮಿಚ್ಛತಿ ತದ್ ಕಲತ್ರಮ್'. ಒಂದು ವೇಳೆ, ಕಲತ್ರಳ ಮನದಲ್ಲಿ ಭರ್ತ್ಯನನ್ನು ಕುರಿತು ಹಿತದ ಭಾವನೆಯುಂಟಾಗುವುದೋ, ಆಗ ಆ ಪರಿವಾರ ದಲ್ಲಿ ಮಧುರತೆ ಇರುವುದು; ಆಗ ಮಾತ್ರ ಹುಲ್ಲಿನ ಮನೆಗಳಲ್ಲಿ ಬಂಗಾರದ ಸಂಸಾರ ಗಳಾಗಬಲ್ಲವು.

ಶಿವೋಕ್ತಿ–೪

'ಪ್ರತಿಕೂಲ ವೇದನೀಯಂ ದುಃಖಿಂ' ಎಂದು ಹೇಳಲಾಗಿದೆ. ಜೀವನು, ವಿಶೇಷ ವಾಗಿ ಮಾನವನು, ಯಾವ ಪರಿಸರದಲ್ಲಿ ತನ್ನ ಮಾನಸಿಕತೆಯ ಧಾರೆಯನ್ನು ನಿರಾತಂಕ ಗತಿಯನ್ನು ಹರಿಸುವನೋ, ಆ ಧಾರೆಯು ಅವನಿಚ್ಛೆಯಂತಿರಲಿ; ಇರದಿರಲಿ; ಅನಂತರದ ಕಾಲದಲ್ಲಿ, ಆ ಧಾರೆಗನುಸಾರವಾಗಿಯೇ ಸಂಸ್ಕಾರಗಳುಂಟಾಗುತ್ತವೆ. ಚಟವು (habit) ಸ್ವಭಾವ (Nature) ದಲ್ಲಿ ಪರಿಣಮಿಸುತ್ತದೆ. ಆ ಸ್ಥಿತಿಯಲ್ಲಿ ಅನೇಕ 'ಪ್ರತಿಕೂಲ ವೇದನೀಯಂ'ಗಳು 'ಅನುಕೂಲ ವೇದನೀಯಂ'ಗಳಲ್ಲಿ ಪರಿಣಮಿಸುತ್ತದೆ.

ಒಂದು ವೇಳೆ ವ್ಯಕ್ತಿಯ ಸಂಸ್ಕಾರ–ಜಾತ ವೇದನೆಗಳನ್ನು ಆಹತಗೊಳಿಸುವರೋ ಅರ್ಥಾತ್ ಅವುಗಳ ಮೇಲೆ ಇನ್ನೊಂದು ಪ್ರಕಾರಧ ಆಘಾತ ನೀಡುವರೋ, ಆಗ, ಆಹತ ಮಾನವನ ಆಹತ ವೇದನೆಯಿಂದ ಯಾವ ಪ್ರತಿಕ್ರಿಯೆಯು ಉಂಟಾಗುವುದೋ ಅದಕ್ಕೆ ಕ್ರೋಧವೆನ್ನುತ್ತಾರೆ. (ಕ್ರುದ್ಧ–ಅಲಂ, ಪ್ರತ್ಯಯ-ಕ್ರೋಧ. ಅನೇಕ ಜನರು, ತಪ್ಪಾಗಿ ಘಞಬ್. ಪ್ರತ್ಯಯ ಹಚ್ಚಿ ಈ ಶಬ್ದೋತ್ಪತ್ತಿಯಾಗಿದೆಯೆಂದು ತಿಳಿದಿದ್ದಾರೆ. ನಿಜವಾಗಿ ಇದೊಂದು ವ್ಯತಿಕ್ರಮವಾಗಿದೆ) ಈ ಕ್ರೋಧವು ಮಾನವನ ದೇಹದಲ್ಲಿ ತನ್ನ ತರಂಗಗಳನ್ನು ಯಾವಾಗ ಉಂಟು ಮಾಡುವುದೋ, ಆಗ ಅದು ಅತ್ಯಲ್ಪ ಕಾಲದಲ್ಲಿಯೇ ಸ್ನಾಯು ಕೋಶ (Nerve-cells) ಗಳನ್ನು ಅಲ್ಲಾಡಿಸಿ ಬಿಡುತ್ತದೆ. ಅದುವೇ ಮಾನವನ ವಿಚಾನ ಶಕ್ತಿಯನ್ನು ಭಿನ್ನ ವಿಚ್ಛಿನ್ನಗೊಳಿಸುತ್ತದೆ. ಸ್ನಾಯು ಕೋಶಗಳ ಅತಿಚಂಚಲತೆಯು ಸ್ನಾಯು ತಂತು (Nerve-Fibres) ಗಳನ್ನು ಸ್ಪಂದಿತ ಮತ್ತು ಕಂಪಿತಗೊಳಿಸುತ್ತದೆ. ಇದರ ಪ್ರಭಾವದಿಂದ ಇಡೀ ದೇಹವು ಥರ ಥರ ನಡುಗಹತ್ತು ತ್ತದೆ. ಶರೀರದ ವಿಶೇಷ ವಿಶೇಷ ಭಾಗಗಳಲ್ಲಿ ರಕ್ತದ ಚಲನೆಯು ಹೆಚ್ಚಾಗುತ್ತದೆ. ಹೃತ್ಪಿಂಡದ ಕ್ರಿಯೆಯು ಕುಂಠಿತವಾಗುತ್ತದೆ. ಇದರಿಂದ ಆರೋಗ್ಯದ ಅವನತಿಯಾಗು ತ್ತದೆ. ಸಂಗ್ರಾಮದಲ್ಲಿ ಪರಾಜಯ ಉಂಟಾಗುತ್ತದೆ. ಅಕಾಲ ಮೃತ್ಯು ಘಟಿಸುತ್ತದೆ.

ಇಷ್ಟಕ್ಕೇ ಮುಗಿಯಲಿಲ್ಲ. ಕ್ರುದ್ಧ ಮಾನವನ ಕ್ರೋಧಾವಸ್ಥೆಯಲ್ಲಿ ಚಿಂತನ ಶಕ್ತಿಯು ಸಮಾಪ್ತವಾಗುತ್ತದೆ. ಮತ್ತು ಕ್ರೋಧವು ಕೊನೆಗೊಂಡ ನಂತರವೂ ಸಹ, ಆ ಮುಸುಕು ಬಲವತ್ತರವಾಗಿರುತ್ತದೆ. ಮತ್ತು ಮಾನವನು ಚೆನ್ನಾಗಿ ಅಲೆದಾಡುತ್ತ ಅದನ್ನೇ ಕುರಿತು ಯೋಚಿಸುತ್ತಿರುತ್ತಾನೆ. ಇದರಿಂದ ಅವನ ಆಧ್ಯಾತ್ಮಿಕ ಸಾಧನೆಯೂ ಸಹ ಹಾನಿಗ್ರಸ್ತವಾಗುತ್ತದೆ. ಈ ಪ್ರಕಾರ ನಾವು ಈ ಕ್ರೋಧವು ಶರೀರವನ್ನೇ ಕ್ಷತಿ ಗ್ರಸ್ತಗೊಳಿಸುವುದನ್ನು ಮತ್ತು ಮನವನ್ನು ಸ್ತಂಭಿತಗೊಳಿಸುವುದನ್ನೂ ಕಾಣುತ್ತೇವೆ. ಆತ್ಮಿಕ ಪ್ರಗತಿಯ ಪಥದಲ್ಲಿ, ಕಂಟಕಗಳೇಳುತ್ತವೆ. ಮಹಾಯೋಗಿಯಾವ ಶಿವನು ಈ ತತ್ತ್ವವನ್ನು ಸಮ್ಯಕ್ ರೂಪದಿಂದ ತಿಳಿದುಕೊಂಡೇ ಮಾನವನಿಗೆ 'ಕ್ರೋಧ ಏವ ಮಹಾನ್ ಶತ್ರುಃ' ಎಂದು ಹೇಳಿದ್ದಾನೆ.

ಪಟಣಾ: ೬–೬–೧೯೮೨

ಪ್ರವಚನ ೧೦

ಶಿವೋಕ್ತಿ–೫

ಮಾನವನು ವಸ್ತು ಜಗತ್ತನ್ನು, ಭಾವ ಜಗತ್ತನ್ನು ಮತ್ತು ಆತ್ಮಿಕ ಜಗತ್ತನ್ನು ಆತ್ಮಸ್ಥೀಕರಿಸಿಕೊಳ್ಳಲು ಬಯಸುತ್ತಾನೆ. ಈ ಬಯಕೆಯನ್ನು ಅವನು, ಅರಿತೋ ಅರಿಯದೆಯೋ, ಮಾಡುತ್ತಾನೆ. ಯಾವಾಗ ಅವನು ಆತ್ಮಿಕ ಜಗತ್ತಿನಲ್ಲಿ ಆತ್ಮಸ್ಥೀಕರಿಸಿಕೊಳ್ಳಲು ಬಯಸುವನೋ, ಆಗ ಅದೇ ಆತ್ಮಸ್ಥೀಕರಣದ ಪ್ರಕ್ರಿಯೆಯಲ್ಲಿಯೇ ತಮ್ಮ ಆತ್ಮವನ್ನು ತಾವು ಆತ್ಮಸ್ಥೀಕರಿಸಿಕೊಳ್ಳಬಯಸುವ ಸತ್ತೆಯಲ್ಲಿ ಲಯಿಸಿ ಕಳೆದು ಕೊಂಡು ಬಿಡುತ್ತಾರೆ. ಅದೇ ರೀತಿ, ಯಾವುದನ್ನು ಅವನು ತನ್ನದಾಗಿಸಿಕೊಳ್ಳಬಯಸುವನೋ ಅದರಲ್ಲಿಯೇ ತನ್ನನ್ನು ಲಯಿಸಿಕೊಳ್ಳುತ್ತಾನೆ. ಒಂದು ನದಿಯು ಸಮುದ್ರದ ವಿಶಾಲತೆಯನ್ನು ಕಂಡು, ಆ ಮಹತ್ತಾದುದನ್ನು ಪಡೆಯುವ ಏಷಣೆಯಿಂದ ಅದರತ್ತ ಅತ್ಯಂತ ತೀವ್ರಗತಿಯಿಂದ ಧಾವಿಸುತ್ತದೆ ಮತ್ತು ಸಮುದ್ರವನ್ನು ತನ್ನದಾಗಿ ಪಡೆಯುತ್ತದೆ. ಆದರೆ, ಈ ಪಡೆಯುವಿಕೆಯಲ್ಲಿಯೇ ಅದರ ಸಮಾನವಾಗುವ ಬಯಕೆಯ ನಿವೃತ್ತಿಯಾಗುತ್ತದೆ. ಅದು ಆ ಸಮುದ್ರದಲ್ಲಿ ಅಡಗಿ ಹೋಗುತ್ತದೆ.

ಜೀವ–ಮಾನಸವು, ಭಾವಜಗತ್ತಿನಲ್ಲಿ ಏನನ್ನಾದರೂ ತನ್ನದಾಗಿಸಿಕೊಳ್ಳಲು ಪ್ರಯತ್ನಿಸಿದರೆ, ಆಗ ಅದು ಅಸಾಧಾರಣ ಅವಸ್ಥೆ ಹೊಂದುತ್ತದೆ. ವಾಸ್ತವ ಬೋಧವನ್ನು ಸಂಪೂರ್ಣವಾಗಿ ಮರೆಯದಿದ್ದರೂ ಅವರು, ಈ ಅವಸ್ಥೆಯಲ್ಲಿ, ಅದರ ಬಗೆಗೆ ವಿಸ್ಮೃತಿ ತಾಳುತ್ತಾರೆ. ಈ ಕಾರಣದಿಂದಾಗಿಯೇ ದೊಡ್ಡ ದೊಡ್ಡ ವಿದ್ವಾಂಸರು ಮತ್ತು ಪಂಡಿತರು ವಾಸ್ತವಿಕತೆಯಿಂದ ವಿಮುಖರಾಗುತ್ತಾರೆ. ಅವರ ಅಸ್ತಿತ್ವ ಬೋಧೆಯಾದರೋ ಭಾವಜಗತ್ತಿನಲ್ಲಿ ಗರಿಗೆದರಿ ಹಾರುತ್ತದೆ. ಇದು ಎಲ್ಲಿಯ ವರೆಗೆ ಇರುವುದೆಂದರೆ. ಅವನು ಸತ್ಯದ ಕಠೋರತೆಯನ್ನು ಮರೆಯದಿದ್ದರೂ ಸಹ, ಅದನ್ನು ಉಪೇಕ್ಷಿಸುತ್ತಾನೆ. ಇಲ್ಲವೆ ಮರೆತು ಬಿಡುವ ಪ್ರಯತ್ನ ಮಾಡುತ್ತಾನೆ. ಮರೆಯುವುದು ಸಾಧ್ಯವಾಗಲಿ, ಬಿಡಲಿ ಅವನಂತೂ ಮರೆಯಬಯಸುತ್ತಾನೆ. ಈ ಮರೆವಿನ ಪ್ರಯತ್ನದಲ್ಲಿ, ಅವನು ಸಾಮಯಿಕ ರೂಪದಿಂದ ವಾಸ್ತವಿಕತೆಯನ್ನು ಮರೆತು ಬಿಡುತ್ತಾನೆ.

ಭೂಲೇ ಥಾಕಾ
ನೇ ತೋ ನಯ ಭೋಲಾ
ವಿಸ್ಮೃತಿರ ಮರ್ಮೆ ಬಾಸಿ,
ರಕ್ತೆ ಮೋರ ದಿವಿಛೋ ದೋ ಲಾ.
* * *
ವಿಸ್ಮೃತಿಯಿಂದಿಹುದು,
ಅಲ್ಲ ಮರೆತು ಇಹುದು;
ವಿಸ್ಮೃತಿ–ಹೃದಯದಿ ನೆಲೆಸಿದೆ,
ಎನ್ನಯ ರಕ್ತವ ಕಲಕಿದೆ.

ಭಾವ ಜಗತ್ತಿನಲ್ಲಿ ಏನನ್ನಾದರೂ ತನ್ನದಾಗಿಸಿಕೊಂಡ ಸಮಯದಲ್ಲಿ ಸಾಧಾರಣವಾಗಿ ಏನಾಗುತ್ತದೆ? ಅವನು ಎಷ್ಟೊಂದನ್ನು ತನ್ನದಾಗಿಸಿಕೊಳ್ಳುವನೋ, ಅಷ್ಟೊಂದು ತನ್ನ ಸಂಪಾದನೆಯಿಂದು ಬಗೆಯುತ್ತಾನೆ. ಇದರಿಂದಾಗಿ, ಅವನು ತನ್ನ ಮಾನಸ ಬೋಧವನ್ನು ಉಬ್ಬಿಸಿಕೊಂಡು, ವಟಗುಟ್ಟುವ ಕಪ್ಪೆಯಂತಾಗುತ್ತಾನೆ. ಹೇಗೆ ವಟಗುಟ್ಟುವ ಕಪ್ಪೆಯು ಇತರ ಕಪ್ಪೆಗಳಿಗಿಂತ ತನ್ನ ಆಕಾರವನ್ನು ದೊಡ್ಡದಾಗಿಸಿಕೊಳ್ಳುವುದೋ ಮತ್ತು ವಿರಾಟತೆಯನ್ನು ತೋರಿಸಿಕೊಳ್ಳಲು, ಅದು ಅಹಂಕಾರದಿಂದ ತನ್ನ ಆಕಾರವನ್ನು ಇನ್ನಷ್ಟು ಬೆಳೆಸಿಕೊಂಡು, ತತ್ಫಲವಾಗಿ ಕೊನೆಗೆ ಹೊಟ್ಟೆ ಹರಿದು ಹೋಗುವಂತಾಗುವುದೋ, ಅದೇ ರೀತಿ; ಭಾವನೆಯ ಜಗತ್ತಿನ ಯಾವುದೊಂದು ತತ್ತ್ವವನ್ನು ಯಾವ ಜನರು ತಮ್ಮದಾಗಿಸಿಕೊಳ್ಳಬಯಸುವರೋ, ಅವರು ಅಹಂಕಾರದಿಂದ ಚೂರು ಚೂರಾಗುತ್ತಾರೆ ಮತ್ತು ಕೊನೆಯಲ್ಲಿ ಅವರ ಧ್ವಂಸವು ಅನಿವಾರ್ಯವಾಗುತ್ತದೆ.

ಇನ್ನು ಎಲ್ಲಿ ಜಡಜಗತ್ತನ್ನು ತನ್ನದಾಗಿಸಿಕೊಳ್ಳುವ ಸ್ಪೃಹೆ ಇರುವುದೋ, ಅಲ್ಲಿ ಸಾಧಾರಣವಾಗಿ ಭಾವ-ಜಗತ್ತಿನ ಇಲ್ಲವೆ ಆತ್ಮಿಕ ಜಗತ್ತಿನ ಸ್ಪೃಹೆಯು ಅತ್ಯಂತ ಕಡಿಮೆಯಾಗಿರುತ್ತದೆ. ಇಲ್ಲಿ ಜಡಜಗತ್ತಿನ ಕ್ಷುಧೆಯು ಸ್ವಲ್ಪ ಹೆಚ್ಚಾಗಿರುತ್ತದೆ. "ಈ ಜಡಜಗತ್ತಿನ ಹಸಿವನ್ನು, ಜಗತ್ತಿನ ಸಕಲ ಸಂಪತ್ತನ್ನು, ಸರ್ವ ಮಾನವರಲ್ಲಿ ಸಮಾನವಾಗಿ ಹಂಚುವೆ. ಇಲ್ಲವೆ, ಸರ್ವರೂ ತಮ್ಮ ತಮ್ಮ ಸಾಮರ್ಥ್ಯಾನುಸಾರ ಶ್ರಮಿಸಲಿ. ಮತ್ತು ತಮಗೆ ಅವಶ್ಯವಿದ್ದಷ್ಟು ಪ್ರಯೋಜನ ಪಡೆಯಲಿ. ನಾನು ಈ ನೀತಿಯನ್ನು ಸಮರ್ಥಿಸುವೆ. ಈ ಮನೋಭಾವದಿಂದ ಪ್ರೇರಿತವಾದ ಸಮಸ್ತ ದಾರ್ಶನಿಕ ಮತವಾದಗಳು ಕೊನೆಯಲ್ಲಿ ಜನರ ಮಧ್ಯೆ ವೈರವನ್ನು ಹುಟ್ಟಿಸುತ್ತವೆ. ಹೀಗಾಗಿ ಸಾಮೂಹಿಕ ಶಾಂತಿಯನ್ನು ನಷ್ಟಗೊಳಿಸುವುದರೊಂದಿಗೆ ವೈಯಕ್ತಿಕ ಶಾಂತಿಯನ್ನು ನಷ್ಟಗೊಳಿಸುತ್ತವೆ. ಮಾನವರು, ಒಬ್ಬರನ್ನೊಬ್ಬರು, ಸರಳ ರೂಪದಲ್ಲಿ ತಿಳಿಯುವುದಿಲ್ಲ. ಮತ್ತು ಸಂದೇಹದಿಂದ ನೋಡತೊಡಗುತ್ತಾರೆ. ಇಂದಿನ ಜಡವಾದವು ಮಾನವನನ್ನು ಈ ಸ್ಥಿತಿಯ ವರೆಗೆ ತಲುಪಿಸಿದೆ. ಇದರ ಪರಿಣಾಮವು ತುಂಬಾ ಹೆದರಿಕೆ ತರುವಂತಿದೆ.

ಜಡ ಜಗತ್ತಿನ ಆತ್ಮಸ್ಥೀಕರಣ ಇಚ್ಛೆಯನ್ನು ಸಹಜ ಭಾಷೆಯಲ್ಲಿ ಹೇಳುವುದಾದರೆ, ಮುಕ್ತಿ ವರ್ಜಿತವಾದ ಪ್ರಾಪ್ತಿಯ ಏಷಣೆಯನ್ನು 'ಲೊಭ'ವೆನ್ನುತ್ತಾರೆ.

ಆತ್ಮಿಕ ಭೂಮಿಯಲ್ಲಿ ಆಪಸ್ಥೀಕರಿಸುವಿಕೆಯ ಪ್ರಯತ್ನವು ನಿರ್ದೋಷವಾಗಿದೆ; ನಿಷ್ಕಲುಷವಾಗಿದೆ; ನಿಷ್ಕಲಮಯವಾಗಿದೆ. ಭಾವ ಜಗತ್ತಿನಲ್ಲಿ, ಯಾವುದೊಂದು ವಸ್ತುವನ್ನು ತನ್ನದಾಗಿಸಿಕೊಳ್ಳುವುದು ಒಂದು ವೇಳೆ, ಜಗತ್ತಿನ ಕಲ್ಯಾಣಕ್ಕೋಸ್ಕರ ಇದ್ದರೆ, ಅದೂ ಸಹ ನಿರ್ದೋಷವೇ ಸರಿ. ಇಲ್ಲವಾದರೆ ಅದು ವಿಶ್ವದ ಮನೋಜಗತವನ್ನು ಕುಲಷಿತ ಗೊಳಿಸುತ್ತದೆ ಮತ್ತು ಅಸಹಿಷ್ಣುವಾಗಿಸುತ್ತದೆ. ಭಾವಜಡತೆ–ಭಾವಜಡತೆಗಳಲ್ಲಿ ಸಂಘಾತವಾಗುತ್ತದೆ. ಸಿದ್ಧಾಂತಗಳ (theory) ಸಂಘರ್ಷವು ಸಹ ಮಾನವರನ್ನು ಅಸಹಿಷ್ಣುವನ್ನಾಗಿಸುತ್ತದೆ. ಮತ್ತು ಅವರನ್ನು ಪಶುಗಳ ಸ್ತರಕ್ಕೆ ತಂದು ಮುಟ್ಟಿಸುತ್ತದೆ.

ಭೂತ ಕಾಲದಲ್ಲಿ ಈ ಪೃಥ್ವಿಯ ಮೇಲೆ ಅನೇಕ ಭಾವಜಡತೆಗಳಲ್ಲಿ ನಡೆದ ಸಂಘರ್ಷವನ್ನು ನೋಡಿದ್ದೇವೆ. ಆ ನೆಪದಿಂದ ಅನೇಕ ರಕ್ತಪಾತದ ಪ್ರಸಂಗಗಳನ್ನೂ ಕಂಡಿದ್ದೇವೆ. ಮಧ್ಯಯುಗದಲ್ಲಂತೂ ಇದು ದೈನಂದಿನ ಘಟನೆಯೇ ಆಗಿ ಪರಿಣಮಿಸಿತ್ತು. ಇಂದಿನ ಯುಗದಲ್ಲಿ ಸಹ ಸಿದ್ಧಾಂತಗಳ ಸಂಘರ್ಷವಂತೂ ಇದೆ. ಇದರಿಂದ ಸಹ ಅದ ರಕ್ತಪಾತವೇನೂ ಕಡಿಮೆಯಲ್ಲ. ಸಾಕಷ್ಟು ಅಧಿಕವಾಗಿಯೇ ಇದೆ. ಅಸಹಿಷ್ಣುತೆಯ ಪ್ರಮಾಣವು ಸಹ ಅತಿಶಯವಾಗಿ ಬೆಳೆದಿದೆ. ಮಾನವ–ಮಾನವರಲ್ಲಿಯ ವಿಶ್ವಾಸವೇ ಹೊರಟು ಹೋಗಿದೆ. ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ವಿಶ್ವಾಸವನ್ನು ಕಳೆದುಕೊಂಡಿದೆ. ಜೀವನದ ಪ್ರತಿಯೊಂದು ಭೂಮಿಕೆಯಲ್ಲಿ, ನಾವು ಮನದಲ್ಲಿ ಒಂದು ರೀತಿ ಯೋಚಿಸುತ್ತೇವೆ. ಮತ್ತು ಮುಖದಿಂದ ಇನ್ನೊಂದನ್ನು ಆಡುತ್ತೇವೆ. ಆದರೆ ಮತ್ತೆ ಕಾರ್ಯದಲ್ಲಿ ಬೇರೊಂದು ರೀತಿಯಲ್ಲಿ ಮಾಡುತ್ತೇವೆ. ಅರ್ಥಾತ್ ಕಪಟತೆಯ ಚರಮ ಸ್ತರದಲ್ಲಿದ್ದೇವೆ. ಇದರ ಹಿನ್ನೆಲೆಯಲ್ಲಿ ಯಾವ ವೃತ್ತಿಯ ಕೈವಾಡವಿದೆ? ಇದರ ಹಿಂದಿರುವುದೆಂದರೆ ಕಲ್ಯಾಣ–ವರ್ಜಿತ ಭಾವಸಂಪತ್ತನ್ನು ತನ್ನದಾಗಿಸಿಕೊಳ್ಳುವ ಪ್ರಯತ್ನವಿದೆ. ಅದಕ್ಕಿಂತ ಹೆಚ್ಚಾಗಿ, ಜಡಜಗತ್ತಿನ ಭೋಗ ಸಂಪತ್ತಿನ ಮೊತ್ತದ ಮೇಲೆ ಹೆಚ್ಚು ಹೆಚ್ಚಾಗಿ ಅಧಿಕಾರ ಹೊಂದುವ ಪ್ರಯತ್ನವಿದೆ.

ಈ ಕಾರಣದಿಂದ, ಭಾವ ಜಗತ್ತಿನಲ್ಲಿಯೇ ಆಗಲಿ; ಜಡಜಗತ್ತಿನಲ್ಲಿಯೇ ಆಗಲಿ, ಯಾವ ವೃತ್ತಿಯ ಪ್ರೇರಣೆಯಿಂದ ಇಂದಿನ ಏಕಾಕಿ ಮಾನವನಾಗಲಿ, ಗೋಷ್ಠಿ–ಬದ್ಧ ಮಾನವನಾಗಲಿ, ಲಂಗು–ಲಗಾಮಿಲ್ಲದೆ ಧಾವಿಸುತ್ತಿರುವನೋ, ಆ ವೃತ್ತಿಯೇ ಲೋಭ ವೃತ್ತಿಯಾಗಿದೆ. ಈ ವೃತ್ತಿಯನ್ನು ವಿಚಾರ ಸಮ್ಮತವಾಗಿ ಮತ್ತು ಬುದ್ಧಿ ಸಂಗತವಾಗಿ, ಶುಭ ಬುದ್ಧಿ ಮತ್ತು ಅದೇ ಮೇರೆಗೆ ಸಾಧನೆಯ ಮೂಲಕ ನಿಯಂತ್ರಿಸದಿರುವುದರ ಫಲಸ್ವರೂಪವಾಗಿ, ಮಾನವ ಜಾತಿಯು ಅಕಾಲ ಮೃತ್ಯುವಿಗೀಡಾಗಬಹುದಾಗಿದೆ. ಯಾವ ತತ್ತ್ವವೂ ಸಹ ಅದನ್ನು ರಕ್ಷಿಸಲಾರದು. ಈ ಲೋಭ ವೃತ್ತಿಯು ಇಂದಿನ ಮಾನವನನ್ನು ಎಂಥ ಸ್ತರದಲ್ಲಿ ತಂದಿರಿಸಿದೆಯೆಂದರೆ, ಅವನು ಯಾವುದೇ ಪಾಪವನ್ನು ಪಾಪವೆಂದು ಗಣಿಸುತ್ತಿಲ್ಲ. ಪಾಪದ-ಅರಿವನ್ನೇ ಅವನು ಒಂದು ದುರ್ಬಲತೆಯೆಂದು ತಿಳಿಯುತ್ತಾನೆ. ಮತ್ತು ಪಾಪದ ಪರಾಕಾಷ್ಠೆಯನ್ನು ಒಂದು ಬೌದ್ಧಿಕ ಶೂರತನವೆಂದು ಹೇಳಿಕೊಂಡು,–ಪರೋಕ್ಷ ರೂಪದಲ್ಲಾದರೂ ಸರಿ, ಪ್ರತ್ಯಕ್ಷ ರೂಪದಲ್ಲಾದರೂ ಸರಿ–ಪ್ರಕಟಪಡಿಸುತ್ತಾನೆ. ತ್ರಿಕಾಲದರ್ಶಿಯಾದ ಶಿವನು ಜಡವಾದದ ಹತೋಟಿ

ಮೀರಿದ ಪ್ರಸಾರವನ್ನೂ ಮತ್ತು ಅದರ ಭಯಂಕರ ಪರಿಣಾಮವನ್ನೂ ಮುಂಗಂಡು, 'ಲೋಭಃ ಪಾಪಸ್ಯ ಹೇತು ಭೂತಃ' ಎಂದು ಸ್ಪಷ್ಟವಾಗಿ ಹೇಳಿದ್ದಾನೆ.

ಶಿವೋಕ್ತಿ–೬

ತನ್ನನ್ನು ಜಾಹೀರಪಡಿಸಿಕೊಳ್ಳುವ ಬೇಸರಿಯದ ಪ್ರಯತ್ನವು ಮಾನವನ ಮಾನಸಿಕ ವ್ಯಾಧಿಗಳಲ್ಲಿಯೇ ಹೆಚ್ಚಿನದಾಗಿದೆ. ಎರಡನೆಯವರನ್ನು ಒತ್ತರಿಸಿ ತನ್ನನ್ನು ಮೇಲೆತ್ತರಿಸಿ ಕಾಣಿಸಿಕೊಳ್ಳಬೇಕು; ಮತ್ತು ಇದರಿಂದ ಜನರು ತನ್ನ ತೋರಿಕೆ ಕಂಡು ಚಕಿತರಾಗಲಿ; ಸ್ತಂಭಿತರಾಗಲಿ; ಸಂತ್ರಸ್ತರಾಗಲಿ; ಮೂಕವಿಸ್ಮಿತರಾಗಲಿ; ತೆರೆದ ಕಣ್ಣಿನಿಂದ ನೋಡಲಿ; ಎಂಬುದೇ ವ್ಯಾಧಿಯ ಮೂಲ ಕಾರಣವಾಗಿದೆ. ಯಾರಲ್ಲಿ ಇನಿತಾದರೂ ಗುಣವಾಗಲಿ, ಯೋಗ್ಯತೆಯಾಗಲಿ ಇದ್ದರೆ, ಅವರ ನೂತು ಬಡುವೆ. ಆದರೆ, ಯಾರಲ್ಲಿ ಯಾವೊಂದು ಗುಣವೂ ಇಲ್ಲವೋ ಮತ್ತು ಯಾರೆದುರು ನೂರುಬಾರಿ ಎದ್ದು ಕುಳಿತರೂ ಒಂದು ಕವಡೆಯೂ ದೊರೆಯುವುದಿಲ್ಲವೋ, ಅಂಥವರು ಸಹ ತಮ್ಮನ್ನು ಮೂರ್ಖರೆಂದೋ, ಜ್ಞಾನಿಗಳೆಂದೋ, ಜಾಹೀರ ಪಡಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ತಮ್ಮ ಈ ಅಪಜೇಷ್ಟೆಯಿಂದ ಯಾರು ನಗೆಚಾಟಿಗೆ ಮಾಡುವರೋ, ಯಾರು ತಮ್ಮ ಹೂರಣವನ್ನು ಬಯಲಿಗೆಳೆಯುವರೋ, ಅದರತ್ತ ಅವರ ಗಮನವೇ ಇಲ್ಲ. ತಮ್ಮಲ್ಲಿ ತಾವು ಮಸ್ತರಾಗಿರುತ್ತಾರೆ. ಇದು ಯಾವ ಮಟ್ಟಿ ಮುಟ್ಟಿರುವುದೆಂದರೆ, ಯಾವ ಕರಣ ಶಕ್ತಿಯ ಮೂಲಕ ಬೃಹದ್ಕ್ಷುದ್ರ, ಶುಭ-ಅಶುಭ, ಇತ್ಯಾದಿ ಸಮಸ್ತ ಕರ್ಮಗಳು ನಿಷ್ಪನ್ನವಾಗುವವೋ, ಆ ಕರಣ ಶಕ್ತಿಯು ಒಂದು 'ಜ್ಞ' ಸತ್ತೆಯ ಸಾಕ್ಷಿತ್ವವನ್ನು ಅವಲಂಬಿಸಿದೆ. ಅಲ್ಪಜ್ಞ ಮಾನವರು ಬಹುಶಃ ಈ ದಾರ್ಶನಿಕ ತತ್ತ್ವದ ಮಾತನ್ನು ಸಹ ಮರೆಯುವರೆಂಬ ಮಾತನ್ನು ಸಹ ಆ ಜನರು ಮರೆಯುತ್ತಾರೆ. ಆದರೆ ಯಾವ ಜನರಲ್ಲಿ ಸ್ವಲ್ಪ ವಿದ್ಯೆ ಇದೆಯೋ, ಅವರು, ತಿಳಿದಿದ್ದರೂ ಸಹ ಈ ಮಾತನ್ನು ಮರೆತು ಬಿಡಲು ಬಯಸುತ್ತಾರೆ. ಇದರ ಹಿನ್ನೆಲೆಯಲ್ಲಿ ಅದೇ ವೃತ್ತಿಯು ಕಾರ್ಯ ಮಾಡುತ್ತದೆ. ತಮ್ಮನ್ನು ತಾವು ಜಾಹೀರಪಡಿಸಿಕೊಳ್ಳುವ ಪ್ರಯತ್ನವೇ ಅದು.

ಒಂದು ಮಕ್ಕಳ ಕತೆಯಿದೆಯಲ್ಲವೇ? ರಾಜನ ಸಂದೂಕದಲ್ಲಿ ಕೆಲವು ಬಂಗಾರದ ನಾಣ್ಯಗಳನ್ನಿಟ್ಟಿದ್ದನು. ಅವುಗಳ ಬಳಕೆ ನಿಂತು ಹೋದುದರಿಂದ ಅವುಗಳಿಗೆ ಹೊಲಸು ಪತ್ತಿತ್ತು. ರಾಜನು ಅವುಗಳನ್ನು ಒಣಗಿಸಲೆಂದು. ಬಿಸಿಲಲ್ಲಿ ಹರವಿದನು. ಒಂದು ಕಪ್ಪೆಯು ಅವುಗಳಲ್ಲಿಂದ ಒಂದು ನಾಣ್ಯವನ್ನೆತ್ತಿಕೊಂಡು ಬಾಯಲ್ಲಿ ಇರಿಸಿಕೊಂಡಿತು. ಮತ್ತು ನುಂಗಿತು. ಅದರಿಂದ ಅದರ ಹೊಟ್ಟೆ ಉಬ್ಬಿ ಹೋಯಿತು. ಗಂಟಲು ಸಹ ಉಬ್ಬಿತು. ಇದರಿಂದ ಸೊಕ್ಕಿ, ಆ ಕಪ್ಪೆಯು ಕೂಗಲಾರಂಭಿಸಿತು.

ರಾಜಾರ ಘರೆ ಜೆ ಧನ ಆಛೇ
ಆಮಾರ ಘರೇ ಓ ಸೇ ಧನ ಆಛೇ.
ರಾಜನಷ್ಟು ಧನಿಕಲ್ತೆ?
ಹಾಡಲೇನು ನನಗೆ ಕೊರತೆ?

ಆಗ ಎಲ್ಲರೂ ಕಪ್ಪೆಯನ್ನು ಕುರಿತು, 'ನಿನ್ನ ಮನೆಯಲ್ಲಿ ಎಂಥ ಧನವಿದೆಯಪ್ಪಾ'? ಎಂದು ಕೇಳಿದರು. ಆ ಕಪ್ಪೆಯ ಆ ನಾಣ್ಯವನ್ನೇ ಮರಳಿ ಮರಳಿ, ಏಳು ನೂರು ಸಲ ತಿರುಗಿಸಿ ಹೊರ ಚೆಲ್ಲಿ ಜನರಿಗೆ ತೋರಿಸಹತ್ತಿತು. ಮತ್ತು "ನಾನೇನು ಮಹಾರಾಜನಿಗಿಂತ ಕಡಿಮೆಯವನೇ?" ಎಂದು ನುಡಿಯಿತು. ತಮ್ಮನ್ನು ತಾವು ಜಾಹೀರಪಡಿಸಿಕೊಳ್ಳುವವರ ಮನೋವೃತ್ತಿ ಈ ತೆರನಾದುದು.

ಪ್ರಜ್ಞಾಸತ್ತೆಯ ವಿಷಯೀತ್ವವಿಲ್ಲದೆ ಯಾವುದೇ ವಿಷಯಭಾವವಿರಲಾರದು. ದಾರ್ಶನಿಕ ತತ್ತ್ವವನ್ನು ಮರೆತು, ಯಾರಾದರೂ ವಿಷಯವನ್ನೇ ದೊಡ್ಡದೆಂದು ಯೋಚಿಸಿದರೆ, ಆಗ ಅವನ ರೋಗವು ಚರಮ ಸೀಮೆಯನ್ನು ತಲುಪುತ್ತದೆ.

"ದೃಕ್ ದರ್ಶನ ಶಕ್ತ್ಯೋರೇಕಾತ್ಮ ತೇವಾಹಸ್ಮಿತಾ".

(ಜನರು ಮೂರ್ಖಿತನದ ಶಿಖರಸ್ಥಿತಿಯಲ್ಲಿದ್ದಾಗ, ಅವರು ದೃಕ್‌ಶಕ್ತಿ ಮತ್ತು ದರ್ಶನ ಶಕ್ತಿಗಳ ಪಾರ್ಥಕ್ಯವನ್ನು ಮರೆಯುತ್ತಾರೆ. ಇಲ್ಲವೆ ಅವುಗಳಲ್ಲಿಂದ ಒಂದನ್ನು ಇನ್ನೊಂದರೊಂದಿಗೆ ಕಲಬೆರಕೆ ಮಾಡಿಬಿಡುತ್ತಾರೆ. ಮತ್ತು ಪ್ರಲಾಪಿಸುತ್ತ ಕೂಡ್ರುತ್ತಾರೆ. ಈ ಮಾನಸಿಕ ದೋಷದ ಹೆಸರೇ 'ಅಸ್ಮಿತಾ'.)

ಏಕೆಂದರೆ 'ಅಸ್ಮಿತಾ' ಪ್ರಜ್ಞಾವರ್ಜಿತವಾಗಿದೆ. ಈ ಕಾರಣದಿಂದ ಅಸ್ಮಿತಾಗ್ರಸ್ತ ವ್ಯಕ್ತಿಯು ತನ್ನ ವಿವೇಚನಬುದ್ಧಿಯನ್ನು ಕಳೆದುಕೊಳ್ಳುತ್ತಾನೆ. ಹೊತ್ತಪೊದಲು ಅವನು ವಿಚಾರಿಸುವುದೇನೆಂದರೆ ನಾನು ಇಷ್ಟೊಂದು ತಿಳಿದಿರುವೆ. ಇದಕ್ಕಿಂತ ಹೆಚ್ಚಾಗಿ ತಿಳಿಯಲಿಕ್ಕೆ ಇನ್ನೇನು ಉಳಿದಿದೆ? ಈ ಕಾರಣದಿಂದ ಅವನ ಬುದ್ಧಿಗೆ ಪೂರ್ಣವಿರಾಮ ಬೀಳುತ್ತದೆ. ಬುದ್ಧಿಯ ಅಗ್ರಗತಿಯು ಸದಾಕಾಲ ನಿಂತುಹೋಗುತ್ತದೆ. ಎರಡನೆಯದಾಗಿ, 'ಅಸ್ಮಿತಾ'ದಿಂದ ಉಂಟಾದ ಒರಟುತನದಿಂದಾಗಿ, ಅವರು ಇನ್ನಷ್ಟು ಕಲಿಯಬೇಕೆಂಬ ಜಿಜ್ಞಾಸೆಯೇ ಕಮರಿ ಹೋಗುತ್ತದೆ. ಯಾವುದಾದರೂ ಪ್ರಯೋಜನಕರ ವಸ್ತುವನ್ನು ತಿಳಿಯುವ ಇಲ್ಲವೆ ಕಲಿಯುವ ಆಗ್ರಹವೇ ಅವರಲ್ಲಿ ಪೂರ್ಣವಾಗಿ ಕೊನೆಗೊಳ್ಳುತ್ತದೆ. ಕೇವಲ ಜ್ಞಾನ ಜಗತ್ತಿನಲ್ಲಿ ಮಾತ್ರವೇ ಅಲ್ಲ; ವ್ಯಾವಹಾರಿಕ ಜಗತ್ತಿನಲ್ಲಿಯೂ ಸಹ, ಅವನಲ್ಲಿ ಅಜ್ಞತೆಯು ಬೆಟ್ಟದಷ್ಟು ಎತ್ತರ ಕೂಡಿಬೀಳುತ್ತದೆ. ಈ ಕಾರಣದಿಂದ, ಅವನು ಸಮಾಜದಿಂದ ಸಂಸಾರದಿಂದ, ಹೊರತಳ್ಳಲ್ಪಡುತ್ತಾನೆ. ಇದು ಅವನ ಉನ್ನತಿಯ ಹಾದಿಯನ್ನು ತಡೆಗಟ್ಟುತ್ತದೆ. ಇಷ್ಟೇ ಅಲ್ಲ. ಮಾನವನ ಶರೀರದಂತೆಯೇ ಅವನ ಮನವು ಸಹ, ಅತ್ಯಂತ ಗತಿಶೀಲವಾಗಿದೆ. ಯಾರೂ ಅದನ್ನು ತಡೆದು ನಿಲ್ಲಿಸಲಾರರು. ದಣಿದು ನಿಂತು ಬಿಡಲು ಇಲ್ಲಿಗೆ ಯಾರೂ ಬರುವುದಿಲ್ಲ. ಎಲ್ಲರೂ ಸಾಗುತ್ತಿರುತ್ತಾರೆ. ಸಾಗುವವರು; ಸಾಗಲೇಬೇಕು. ಇನ್ನು ಇಂಥ ಸ್ಥಿತಿಯಲ್ಲಿ ಯಾವಾಗ ಅಗ್ರಸರವಾಗುವ ಗತಿಯು ತಡೆಯಲ್ಪಡುವುದೋ, ಆ ಸಮಯಕ್ಕೆ ಅವರು ಅಧೋಗತಿಯತ್ತ ಧಾವಿಸುತ್ತಾರೆ. ಈ ಸ್ಥಿತಿಯಲ್ಲಿ ಆ ಅಸ್ಮಿತೆಯಿಂದ ಹುಟ್ಟಿದ ಔದ್ಯತ್ವವು ಮನುಷ್ಯನನ್ನು ಧ್ವಂಸದತ್ತ, ಪತನದತ್ತ ತೆಗೆದುಕೊಂಡೊಯ್ಯುತ್ತದೆ. ಈ ಅಸ್ಮಿತೆಯಿಂದ ಜನಿಸಿದ, ಔದ್ಯತ್ವವು ಎಲ್ಲವನ್ನೂ ಮರೆಸಿ, ಕೇವಲ ತನ್ನದೇ ಪ್ರಚಾರಕ್ಕಿಳಿಯುತ್ತದೆ. ಇದರ ಹಿಂದೆ 'ಅಹಂ' ವೃತ್ತಿಯ ಕಾರ್ಯ ಮಾಡುತ್ತದೆ. ಅರ್ಥಾತ್ ನಾನೇ ಸರ್ವವಾಗಿದ್ದೇನೆ. ನಾನಿಲ್ಲದಿದ್ದರೆ ಬೇರಾವುದೂ ಇರಲಾರದು.

ಈ ಅಹಂಕಾರ ರೂಪಿಯಾದ, ಭಯಂಕರ ವ್ಯಾಧಿಯಿಂದ ಮಾನವರನ್ನು ದೂರ ಮಾಡಲು "ಅಹಂಕಾರಃ ಪತನಸ್ಯ ಮೂಲಮ್" ಎಂದು ಶಿವನು ಆದೇಶ ನೀಡಿದ್ದಾನೆ.

ಶಿವೋಕ್ತಿ–೭

ವಸ್ತುವಿನ ಆಪೇಕ್ಷಿಕ ಪರಿವರ್ತನೆಯು ಯಾವುದರಿಂದಾಗುವುದೋ, ಅದಕ್ಕೆ ಕರ್ಮವೆನ್ನುತ್ತಾರೆ. ಈ ಸ್ಥಾನ ಪರಿವರ್ತನೆಯು ಜಾಗತಿಕ ಕ್ಷೇತ್ರದಲ್ಲಿ ಹೆಚ್ಚಾಗಿರುತ್ತದೆ. ಹೆಚ್ಚು ಅನುಭೂತವಾಗಿರುತ್ತದೆ. ಮಾನಸಿಕ ಕ್ಷೇತ್ರದಲ್ಲಿಂತೂ ಇನ್ನಷ್ಟು ಹೆಚ್ಚಾಗಿರುತ್ತದೆ. ಮತ್ತು ಅದರ ಅನುಭೂತಿಯು ಸಹ ಹೆಚ್ಚಿನ ಮೊತ್ತದಲ್ಲಾಗುತ್ತದೆ. ಇನ್ನು ಆತ್ಮಿಕ ಕ್ಷೇತ್ರದಲ್ಲಿ ಸ್ಥಾನಪರಿವರ್ತನೆಯೇ ಇರದು. ಆದರೆ ಗತಿಶೀಲತೆಯು ಮಾತ್ರ ಇನ್ನಷ್ಟು ಹೆಚ್ಚಾಗಿಯೇ ಇರುತ್ತದೆ. ಮತ್ತು ಅದರ ಹೆಚ್ಚಿನ ಅನುಭೂತಿಯೂ ಆಗುತ್ತದೆ. ಅದರಿಂದ ಒಂದು ಆನಂದ ಘನ ಸತ್ತೆಯ, ನಿರವಚ್ಛಿನ್ನ ಭಾವವು ಸಮಗ್ರ ಸತ್ತೆಯನ್ನು ಆಪ್ಲುತಗೊಳಿಸುತ್ತದೆ. ಸಾಮಗ್ರಿ ಅಸ್ತಿತ್ವವನ್ನು ಒಂದು ಮಧುರನಿಷ್ಪಂದದಿಂದ ಓತಪ್ರೋತಗೊಳಿಸುತ್ತದೆ.

ಈ ಆತ್ಮಿಕ ಭೂಮಿಯ ಮೇಲಿನ ಕರ್ಮವೇ ನಿಜವಾದ 'ಯಾಗ'(ಯಜ್‌ಞಾ) ಇದರಲ್ಲಿ ಒಂದು ಬೇಸರವಿರದ ಪ್ರಯತ್ನವಿರುವುದು. ಆ ಪ್ರಯತ್ನವೆಂದರೆ ಯಾವುದೇ ಜಾಗತಿಕ ಬಂಧನಗಳನ್ನು ಸ್ವೀಕರಿಸಲಾರೆನು; ಸರ್ವ ಪ್ರಕಾರದ ಬಾಧೆ–ವಿಪತ್ತುಗಳನ್ನು ಸರ್ವಸತ್ತೆಯಿಂದ ಚೂರ್ಣವಿಚೂರ್ಣಗೊಳಿಸುತ್ತ ಋದ್ಧಿಯತ್ತ ಮುಂದುವರಿಯುತ್ತಿರುವೆನು; ಯಾವುದೇ ರೀತಿಯ ಮಾನಸಿಕ ವಿಕಲತೆಗೆ ಇಂಬುಗೊಡೆನು. ಅರ್ಥಾತ್ ವಿಕಲತೆಯ ಸತ್ತೆಯನ್ನೇ ನಷ್ಟಗೊಳಿಸಿ, ಉಲ್ಕೆಯಂತೆ ಅದನ್ನು ಒಡೆದು ಪುಡಿಪುಡಿ ಮಾಡಿ, ಅದರ ಅಸ್ತಿತ್ವದ ಬೆಳಕಿನ ಛಾಯೆಯಿಂದ ಅದನ್ನು ಚೂರ್ಣವಿಚೂರ್ಣಗೊಳಿಸಿ ಉಪಜೀವನದ ಪ್ರಯೋಜನದತ್ತ ಮುನ್ನಡೆಯುವೆನು, ಯಾವುದೊಂದು ಬಾಧೆಯು ಹಿಮಾಲಯದಂತೆ ಉತ್ತುಂಗವಾಗಿ ನಿಂತರೆ ಅದನ್ನು ಸಹ ನಸುನಗುತ್ತ, ಒಡೆದು ಚೂರು–ಚೂರಾಗಿಸಿ ಬಿಡುವೆನು. ಚಿಕ್ಕ ಚಿಕ್ಕ ಕಲ್ಲು ಬಂಡೆಗಳನ್ನಂತೂ ನನ್ನ ಎತ್ತರೆತ್ತರದ ಜಿಗಿತದಿಂದ ಪಾರುಗಾಣುವೆನು.

ಆತ್ಮಿಕ ಕ್ಷೇತ್ರದಲ್ಲಿ, ಅನೇಕ ದಾರ್ಶನಿಕ ದೋಷಗಳು, ಭಾವಜಡತೆಗಳ ರೂಪದಲ್ಲಿ, ಚಿಕ್ಕ ದೊಡ್ಡ ಗಹ್ವರಗಳಂತೆ ಹಬ್ಬಿರುತ್ತವೆ. ಅವುಗಳನ್ನು ಸಹ, ಜಿಗಿದು ಪರಮ ಸತ್ತೆಯಲ್ಲಿ ತಾನೇ ತಾನಾಗಿ ಸೇರಿ, ಒಂದಾಗುವೆನು.

ಯಾವಾಗ ಮಾನವನು ಜಡತ್ವದ ಬಾಧೆಗಳ ವಿರುದ್ಧ ಸಂಗ್ರಾಮ ಹೂಡುವನೋ, ಆಗ ಅದು ಅವನ ಜಡಸಾಧನೆಯಾಗುತ್ತದೆ. ಯಾವಾಗ ಅವನು ಭಾವಜಗತ್ತಿನ ಬಾಧೆಗಳ ವಿರುದ್ಧ ಸಂಗ್ರಾಮ ಹೂಡುವನೋ, ಆಗ ಅದು ಅವನ ಭಾವಸಾಧನೆಯೆನಿಸುತ್ತದೆ. ಇನ್ನು ಯಾವಾಗ ಅವನು ಆತ್ಮಿಕ ಸಾಧನೆಯ ಹಾದಿಯಲ್ಲಿ ಬರುವ ಬಾಧೆಗಳ ವಿರುದ್ಧ ಸಂಗ್ರಾಮ ಹೂಡುವನೋ, ಆಗ ಅವನ ಸಾಧನೆ ಮತ್ತು ಸ್ವಯಂ ತಾನು ಒಂದಾಗುತ್ತಾರೆ. ಆದ್ದರಿಂದಲೇ ಜ್ಞಾನಿಗಳು 'ಭಕ್ತಿ'ಯೇ ಸಾಧನೆ ಮತ್ತು ಸಾಧ್ಯ ಎಂದು ಹೇಳುತ್ತಾರೆ. ಮಾನವನು ಯಾವಾಗ ಆಧ್ಯಾತ್ಮಿಕ ಸಾಧನೆಯನ್ನು

ಮಾಡುವನೋ, ಆ ಕ್ಷೇತ್ರದಲ್ಲಿ ಅದನ್ನು ವಿಶೇಷಾರ್ಥದಲ್ಲಿ 'ಅಭಿಧ್ಯಾನ'ವೆಂದೂ ಮತ್ತು ವ್ಯಾಪಕ ಅರ್ಥದಲ್ಲಿ 'ಪರಿಶ್ರಮ' ಎಂದೂ ಕರೆಯುತ್ತಾರೆ. ಮಾನವನು ಯಾವಾಗ ಭಾವಜಗತ್ತಿನಲ್ಲಿ ಸಾಧನೆ ಮಾಡುವನೋ, ಆಗ ಅದಕ್ಕೆ ವಿಶೇಷಾರ್ಥದಲ್ಲಿ 'ಧಾರಣಾ' ಎಂದೂ ಮತ್ತು ವ್ಯಾಪಕ ಅರ್ಥದಲ್ಲಿ ಪರಿಶ್ರಮ ಎಂದೂ ಕರೆಯುತ್ತಾರೆ. ಇನ್ನು ಯಾವಾಗ ಮಾನವನು ಜಡಸಾಧನೆ ಮಾಡುವನೋ, ಆಗ ಅದಕ್ಕೆ ವಿಶೇಷಾರ್ಥದಲ್ಲಿ 'ಶ್ರಮ' ಎಂದೂ, ವ್ಯಾಪಕಾರ್ಥದಲ್ಲಿ ಪರಿಶ್ರಮವೆಂದೂ ಕರೆಯುತ್ತಾರೆ. ಈ ಮೂರೂ ಪ್ರಕಾರದ ವಿಶೇಷ ಅರ್ಥ ಮತ್ತು ಒಂದು ವ್ಯಾಪಕ ಅರ್ಥದಲ್ಲಿಯೇ ಮಾನವನ ಆಸ್ತಿತ್ವಿಕ ಕರ್ಮಕುಶಲತೆಯೂ ಅಡಗಿವೆ. ಇವುಗಳ ಸಮ್ಮಿಳಿತ ಹೆಸರೇ ಯೋಗ. ಯೋಗವು ಕರ್ಮದ ಕೌಶಲವಾತದೆ.

ಶಿವನ ಸಮಯದಲ್ಲಿ ಪ್ರಪತ್ತಿವಾದವಿರಲಿಲ್ಲ. ಪ್ರಪತ್ತಿವಾದವು 'ಸೂಫಿ' ಮತ ವಾದದ ವಸ್ತು ಮತ್ತು ವೈಷ್ಣವ ಮತದ ಗೂಢ ಅಂತರ್ಗತ ವಸ್ತುವಾಗಿದೆ. ನಾನಿಲ್ಲಿ ಪ್ರಪತ್ತಿವಾದ ಕುರಿತು ಹೆಚ್ಚಿನ ಆಲೋಚನೆ ಮಾಡಬಯಸುವುದಿಲ್ಲ. ಆದರೆ ಮಾನವನ ಕರ್ಮ ವಿಷಯದ ಅಭಿಸ್ಫೂರ್ತಿಯ ಕ್ಷೇತ್ರದಲ್ಲಿ, ಈ ಶ್ರಮ, ಈ ಧಾರಣಾ, ಮತ್ತು ಈ ಅಭಿಧ್ಯಾನಗಳಿಗೆ ವಿಶೇಷ ಮೂಲ್ಯವಿದೆ.

ಮಾವಿನಗಿಡದತ್ತ ಮುಖದಿರುಹಿ ನೋಡುತ್ತ ಒಬ್ಬ ಕನಸುಗಣಿಯು, ಈ ಮಾವಿನ ಹಣ್ಣು ಉದುರಿ ನನ್ನ ಬಾಯಲ್ಲಿಯೇ ಬೀಳಲಿ. ಬೀಳುವಾಗ ಅದರ ಸಿಪ್ಪೆಯು ಕಳಚಿ ಹೊರಗಾಗಲಿ; ಬಾಯಿಯಲ್ಲಿ ಬಿದ್ದ ಮೇಲೆ ಅದರ ಗೊರಟವು ತಂತಾನೆ ಬಾಯಿಯಿಂದ ಹೊರಗೆ ಬಿಡಿದು ಬೀಳಲಿ; ಎಂದು ಕನವರಿಸುವವನ ಅಭಿಲಾಷೆಯು ಬೇಕಾದರೆ ಸಂಪೂರ್ಣವಾಗಿ ಕೈಗೂಡಲಿ; ಆದರೆ ಅನಂತ ಕಾಲದ ಅವಧಿಯ ದೃಷ್ಟಿಯಿಂದ ಇದೆಲ್ಲ ಕೇವಲ ಸೈದ್ಧಾಂತಿಕ ಜಗತ್ತಿನಲ್ಲಿ ಮಾತ್ರ ಸಂಭವನೀಯವಷ್ಟೇ; ವ್ಯಾವಹಾರಿಕ ಜಗತ್ತಿನಲ್ಲಿ ಅಲ್ಲ. ವ್ಯಾವಹಾರಿಕ ಜಗತ್ತಿನಲ್ಲಾದರೋ, ಶ್ರಮಪಟ್ಟು ಗಿಡ ಹತ್ತಬೇಕು. ಹಣ್ಣು ಹರಿಯಬೇಕು. ಸಿಪ್ಪೆ ತೆಗೆಯಬೇಕು ಮತ್ತು ಅದರ ತಿಳಿಲಿನ ರುಚಿ ಹೀರುತ್ತ ಹೀರುತ್ತ, ಗೊರಟವನ್ನು ಬಾಯಿಯಿಂದ ಹೊರಗೆ ಉಗುಳಬೇಕು.

'ನಾನು ಬೌದ್ಧಿಕ ಉತ್ಕರ್ಷ ಸಾಧಿಸುವೆ, ಮತ್ತು ಹೀಗೆ ಯೋಚಿಸುತ್ತ ಅನಂತ ಕಾಲದ ವರೆಗೆ ಕುಳಿತುಕೊಳ್ಳುವೆ'. ಬಹುದೂರದ ಭವಿಷ್ಯತ್ತಿನಲ್ಲಿ ಬೌದ್ಧಿಕ ಉತ್ಕರ್ಷವು ಸಂಭವನೀಯವಾಗಿದೆ. ಆದರೆ ಹಾಗೆ ಮಾಡದೆ ಯಾವುದೇ ಧಾರಣಾತ್ಮಕ ಪ್ರಕ್ರಿಯೆಯನ್ನು ನಾವು ಗ್ರಹಿಸಿದರೆ, ಅದರಿಂದ ಬುದ್ಧಿಮತ್ತೆಯ ಪರಿಚಯವಾಗಬಹುದು.

ಪರಮಪುರುಷನು ನನಗೆ ಅತ್ಯಂತ ಪ್ರಿಯವಾಗಿದ್ದಾನೆ. ಪರಮಪುರುಷನು ನಮ್ಮ ಕಣ್ಣೆದುರಿನ ಚುಕ್ಕೆಯಾಗಿದ್ದಾನೆ. ನಾನು ಅವನನ್ನು ನನ್ನ ಸರ್ವಸತ್ತೆಯಿಂದ ಪಡೆಯಲಿಚ್ಛಿಸುತ್ತೇನೆ. ಈ ಭಾವವನ್ನು ಇರಿಸಿಕೊಂಡರೆ, ಪರಮಪುರುಷನು ದೂರ ಸರಿಯುತ್ತಾನೆ. ಆದರೆ ಒಂದು ವೇಳೆ ಸರ್ವಸತ್ತೆಯಿಂದ, ನಾವು ವಿಧಿ ನಿರ್ದಿಷ್ಟ ಹಾದಿಯಿಂದ ಪರಮಪುರುಷನನ್ನು ಪಡೆಯಲೋಸುಗ, ಸಮಗ್ರ ಹೃದಯ ವೇಗದಿಂದ ಧಾವಿಸಿದರೆ, ಆಗ ಪರಮ ಸಂಪ್ರಾಪ್ತಿಯು ದೂರದ ಮಾತೇನಲ್ಲ. ಈ ಪ್ರಕಾರ, ನಮಗೆ ಕಂಡುಬರುವುದೇನೆಂದರೆ, ಜಡ–ಜಗತ್ತಿನ ಶ್ರಮ ಇಲ್ಲವೆ ಪರಿಶ್ರಮ, ಮಾನಸ

ಜಗತ್ತಿನ ಧಾರಣ ಇಲ್ಲವೆ ಪರಿಶ್ರಮ ಮತ್ತು ಆತ್ಮಿಕ ಜಗತ್ತಿನ ಅಭಿಧ್ಯಾನ ಇಲ್ಲವೆ ಪರಿಶ್ರಮ–ಇವುಗಳಿಲ್ಲವೂ ಸರ್ವ ರೀತಿಯ ಉನ್ನತಿ ಇಲ್ಲವೆ ಪ್ರಾಪ್ತಿಗಾಗಿ, ಸರ್ವ ವಿಧದಿಂದ ಮಾಡಲೇಬೇಕೆಂಬ ಹಂಬಲವು ತುಂಬಾ ಅವಶ್ಯವಾಗಿದೆ. ಈ ಪರಿಶ್ರಮವೇ ಜೀವರನ್ನು ಋದ್ಧಿ, ಪ್ರಾಪ್ತಿ, ಸಮೃದ್ಧಿ ಮತ್ತು ಸಂಪ್ರಾಪ್ತಿಯ ಮೊದಲನೆಯ ಮತ್ತು ಕೊನೆಯ ಮೆಟ್ಟಿಲಿನಂತೆ ಸಹಾಯ ನೀಡುತ್ತದೆ. ಪರಿಶ್ರಮ–ವಿಮುಖತೆಯು ಚಿಕ್ಕ ದೊಡ್ಡ ಸಮಸ್ತ ಸಿದ್ಧಿಗಳ ಹಾದಿಯಲ್ಲಿ, ಎಲ್ಲಕ್ಕಿಂತ ದೊಡ್ಡ ಬಾಧೆಯಾಗಿದೆ. ಈ ಕಾರಣದಿಂದ ಶಿವನು, "ಪರಿಶ್ರಮೇಣ ವಿನಾ ಕಾರ್ಯ ಸಿದ್ಧಿರ್ಭವತಿ ದುರ್ಲಭಾ" ಎಂದು ಹೇಳಿದ್ದಾನೆ.

ಶಿವೋಕ್ತಿ–೮

ಮಾನವನೇಕೆ ಸುಳ್ಳು ಹೇಳುತ್ತಾನೆ? (೧) ವೈಯಕ್ತಿಕ ಸ್ವಾರ್ಥಕ್ಕೋಸ್ಕರ (ಹೆದರಿ ಸುಳ್ಳು ಹೇಳುವುದು ಸಹ ವೈಯಕ್ತಿಕ ಸ್ವಾರ್ಥದಲ್ಲಿಯೇ ಎಣಿಕೆಯಾಗುತ್ತದೆ). (೨) ಸ್ವಭಾವ–ಗತ ಭಾವದಿಂದ ಈ ವಿಶ್ವ ಬ್ರಹ್ಮಾಂಡವು ಸತ್ಯದಿಂದ ವಿವೃತವಾಗಿದೆ. ಜೀವ ಜಂತುಗಳೆಲ್ಲ ಅಸತ್ಯ ನುಡಿಯುವುದಿಲ್ಲ; ಉದ್ಭಿಜ ಜಗತ್ತಿನಲ್ಲಿಯೂ ಅಸತ್ಯ ಭಾವದ ಪೋಷಣೆಯಿಲ್ಲ. ಇನ್ನು ಎಲ್ಲಿಯ ವರೆಗೆ ಬೇರೊಂದನ್ನು ಕಲಿಯುವುದಿಲ್ಲವೋ, ಅಲ್ಲಿಯವರೆಗೆ ಮಾನವ ಶಿಶುವು ಸಹ, ಅಸತ್ಯ ಕಥನಕ್ಕಿಳಿಯದು. ಅಂದರೆ ಅಸತ್ಯ ಭಾವದ ಪೋಷಣೆ ಮಾಡಲಾರದು. ಮೇಲಾಗಿ ನಾವು ಯಾರಿಗೆ ಹಿಂದುಳಿದ ಮನುಷ್ಯನೆನ್ನುತ್ತೇವೆಯೋ ಅವನು ಸಹ ಸುಳ್ಳು ಹೇಳುವುದಿಲ್ಲ. ಮತ್ತು ಆ ಭಾವವನ್ನು ಪೋಷಿಸುವುದಿಲ್ಲ.

ಯಾರು ಅಗ್ರಸರ ಮಾನವರೋ, ಮುಂದುವರಿದವರೋ, ಅವರು ಮಾತ್ರ ವೈಯಕ್ತಿಕ ಸ್ವಾರ್ಥ ಇಲ್ಲವೆ ಸ್ವಭಾವಗತ ಭಾವದಿಂದ ಅಸತ್ಯ ನುಡಿಯುತ್ತಾರೆ. ಇತ್ತ ಯಾರು ಧರ್ಮನಿಷ್ಠರಾಗಿರುವರೋ ಅವರು ಸಹ, ಅನಗ್ರಸರ ಮಾನವರಂತೆಯೇ ಸತ್ಯನಿಷ್ಠರಾಗಿ ಉಳಿಯುವರಿಷ್ಟೇ ಅಲ್ಲ; ಅದಕ್ಕಿಂತ ಸ್ವಲ್ಪ ಹೆಚ್ಚಾಗಿರುತ್ತಾರೆ. ಯಾವುದು ಹೇಗಿದೆಯೋ ಹಾಗೆ ಘಟಿಸಿತು ಎಂದು ಹೇಳುವುದಕ್ಕೆ, 'ಋತ' ಎನ್ನುತ್ತಾರೆ. ಅನಗ್ರಸರ ಸರಳ ಮಾನವರಲ್ಲಿ, ಈ ಋತದ ಭಾವನೆಯು ಮತ್ತು ಋತದ ಧೃತಿಯು ಇರುತ್ತದೆ. ಆದರೆ ಧರ್ಮನಿಷ್ಠರಾದ ಜನರು ಇನ್ನೂ ಹೆಚ್ಚು 'ಋತ'ವನ್ನು ಬಯಸುತ್ತಾರೆ. ಅದನ್ನು ಇನ್ನಷ್ಟು ಸೋಸುತ್ತಾರೆ. ಮತ್ತು ಜಗತ್ತಿನ ಕಾರ್ಯದಲ್ಲಿ ಬಳಸುತ್ತಾರೆ. ಎಲ್ಲಿ ಋತವು ಅಕಲ್ಯಾಣ ಇಲ್ಲವೆ ಅನೃತದ ಸೂಚನೆ ನೀಡುವುದೋ ಆಗ ಅವರು ಋತವನ್ನು ಕಲ್ಯಾಣದತ್ತ ಮುನ್ನಡೆಸುತ್ತಾರೆ. ಈ ಕಲ್ಯಾಣಕೃತ ಋತಕ್ಕೇ ಸತ್ಯವೆನ್ನುತ್ತಾರೆ.

ಧರ್ಮದ ವೃಕ್ಷವು ಜಿಗುರೊಡೆದು ಹಬ್ಬಬೇಕಾದರೆ, ಈ ಸತ್ಯವನ್ನೇ ಆಧರಿಸ ಬೇಕಾಗುತ್ತದೆ. ಅರ್ಥಾತ್ ಯಾರು ಸತ್ಯವನ್ನು ಒಪ್ಪುವುದಿಲ್ಲವೋ ಅವರು ಋತವನ್ನೂ ಒಪ್ಪಲಾರರು. ಯಾರು ವೈಯಕ್ತಿಕ ಸ್ವಾರ್ಥದಿಂದ ಇಲ್ಲವೆ ಸ್ವಾಭಾವಿಕ ಸ್ವಾರ್ಥದಿಂದ ಸುಳ್ಳಿಗೆ ಇಂಬುಗೊಡುವರೋ, ಅವರಲ್ಲಿ ಧರ್ಮ ನೆಲೆಸಲಾರದು.

ಯಾವ ಮಾನವನು ವೈಯಕ್ತಿಕ ಸ್ವಾರ್ಥದಿಂದ ಸುಳ್ಳು ಹೇಳುವನೋ, ಅವನು ಪಶುಪಕ್ಷಿಗಳಿಗಿಂತ ಅಷ್ಟೇ ಏಕೆ ಉದ್ಭಿಜ ವಸ್ತುಗಳಿಗಿಂತ ಹಿಂದಿನವನೇ ಸರಿ. ಯಾರು ಸ್ವಭಾವಗತ ರೂಪದಿಂದ ಸುಳ್ಳು ನುಡಿಯುವರೋ, ಅವರು ದೀರ್ಘಕಾಲದಿಂದ ನಿರಾತಂಕವಾಗಿ ಇಲ್ಲವೆ ಸ್ವಪ್ರಯತ್ನದಿಂದ ಸುಳ್ಳು ಹೇಳುವ ಅಭ್ಯಾಸವನ್ನೇ ರೂಢಿಸಿಕೊಂಡವರೆಂದು ತಿಳಿಯಬಹುದು. ಅವರ ಆ ಅಭ್ಯಾಸವೇ ಇಂದು ಅವರ ಸ್ವಭಾವವಾಗಿ ಬಿಟ್ಟಿರುತ್ತದೆ.

ಅಭ್ಯಾಸವನ್ನು ದೂರೀಕರಿಸಲು ಸ್ವಲ್ಪ ಕಷ್ಟಪಡಬೇಕಾಗುತ್ತದೆ. ಆದರೆ ಸ್ವಭಾವವನ್ನು ಬದಲಿಸಲು ದೀರ್ಘಕಾಲದ ಪ್ರಯಾಸದ ಅಗತ್ಯವಿದೆ. ವಸ್ತುತಾಂತ್ರಿಕಜಗತ್ತಿನಲ್ಲಿ ಜರುಗುವ ಸಮಸ್ತ ಅಪರಾಧಗಳ ಮೂಲ ಕಾರಣವೆಂದರೆ ಸುಳ್ಳು ಹೇಳುವುದೇ ಎಂದು ಹೇಳುತ್ತಾರೆ"Falsehood is the noumenal cause of all phenomenal crimes." ಈ ಕಾರಣದಿಂದ ಒಂದು ವೇಳೆ, ಯಾರೇ ಆಗಲಿ; ಧರ್ಮದ ಪ್ರದರ್ಶನ ಮಾಡಲೊಲ್ಲರೇಕೆ? ಎಷ್ಟೊಂದು ಪೂಜಾ ಪಾಠ ನಡೆಸಲಿ; ಶಗಣಿ ಸಾರಿಸಲಿ; ಗಂಗಾಜಲ ತರಲಿ; ಏನೇನೋ ಪ್ರದರ್ಶನ ಮಾಡಲೊಲ್ಲರೇಕೆ? ಅದೆಷ್ಟೋ ತೀರ್ಥ ಯಾತ್ರೆ ಮಾಡಿ ಮುಗಿಸಲೊಲ್ಲರೇಕೆ? ಮತ್ತು ಎಲ್ಲಿ ಅರಿದರೆದು ತಲೆ ಬೋಳಿಸಲೊಲ್ಲರೇಕೆ? ಆದರ ಅವರು ಒಂದು ವೇಳೆ, ಸತ್ಯನಿಷ್ಠರಾಗಿರದಿದ್ದರೆ, ಅವರು ಧರ್ಮದ ಎಲ್ಲೆಯಲ್ಲಿ ಉಳಿಯಲಾರರು. ಆದ್ದರಿಂದಲೇ ಶಿವನು "ಧರ್ಮಃ ಸಃ ನ ಯತ್ರ ನ ಸತ್ಯಮಸ್ತಿ" ಎಂದು ಹೇಳಿದ್ದಾನೆ.

ಶಿವೋಕ್ತಿ–೯

ಮಾನವನು ಸತ್ಯಾಶ್ರಯಿಯಾಗಿರಲಿ; ಬಿಡಲಿ; ವಿಶ್ವದ ಪರಿಸರವಂತೂ ಸತ್ಯಾಶ್ರಯಿಯಾಗಿಯೇ ಇದೆ. ಪ್ರತಿಯೊಂದು ಜೀವಜಂತು, ಪ್ರತಿಯೊಂದು ಉದ್ಭಿಜ ಪದಾರ್ಥವು ಸತ್ಯದ ಪ್ರತಿನಿಧಿಯಂತಿದೆ. ತಾಳಿ ಮರದ ಮೇಲಿನ ಗುರುತುಗಳನ್ನು ನೋಡಿಯೇ ಅದರ ವಯಸ್ಸನ್ನು ಕಂಡುಹಿಡಿಯಬಹುದು. ನೌಕರಿಯಲ್ಲಿ ಅನುಕೂಲವಾಳುವುದೆಂದು ಅದು ತನ್ನ ವಯಸ್ಸನ್ನು ಕಡಿಮೆಯೆಂದು ತೋರಬಯಸುವುದಿಲ್ಲ. ಆಲದ ಮರದ ಎಲೆಗಳಲ್ಲಿಯ ನರ ರೇಖೆಗಳು ಒಂದೇ ರೀತಿಯಾಗಿರುತ್ತವೆ. ಕರ ಉಳಿಸಿಕೊಳ್ಳಲು ರೇಖೆಗಳಲ್ಲಾವ ಏರುಪೇರು ಆಗುವುದಿಲ್ಲ. ಕುರಿ ಹಿಡಿಯಲು ಅನುಕೂಲವಾಗಲೆಂದು ತೋಳವೇನೂ ತನ್ನ ಧ್ವನಿಯನ್ನು ಬದಲಿಸುವುದಿಲ್ಲ. ಇವೆಲ್ಲವೂ ಸತ್ಯದ ಪ್ರತಿನಿಧಿಗಳಾಗಿವೆ: ವಿಧ್ಯೆಯ ಪರಿಚಯವೇ ಅವುಗಳಿಗಿಲ್ಲ. ಮಾನವನು ಸುಳ್ಳನ್ನು ಸ್ವಾರ್ಥಕ್ಕೋಸುಗ ಇಲ್ಲವೆ ಸ್ವಭಾದವಶದಿಂದ ಅವಲಂಬಿಸುತ್ತಾನೆಂದು ಇದೀಗ ಸ್ವಲ್ಪ ಮೊದಲು ಹೇಳಿದೆ. ಮಾನವನು ತನ್ನ ಸುತ್ತುಮುತ್ತು ಇರುವ ಪರಿಸರದಲ್ಲಿ ಕ್ಷುದ್ರ ಸ್ವಾರ್ಥದಿಂದಾಗಿಯೋ ಇಲ್ಲವೆ ಬೃಹತ್ ಸ್ವಾರ್ಥದಿಂದಾಗಿಯೋ ಸತ್ಯದಲ್ಲಿ ಕಲಂಕ ಹಚ್ಚಿ, ಈ ಸುಳ್ಳಿನ ಛತ್ರದ ನೆರಳಲ್ಲಿ ಆಶ್ರಯ ಪಡೆಯಲಿಕ್ಕೋಸುಗ ಪ್ರಯಾಸ ಪಡುತ್ತಾನೆ. ಮನೋವಿಜ್ಞಾನದ ದೃಷ್ಟಿಯಿಂದ ಮಾನವೇತರ ಜೀವಿಗಳಿಗಿಂತ ಮಾನವನು ಹೆಚ್ಚು ಸ್ವಾರ್ಥಿಯಾಗಿರುವುನೆಂದೂ ಮತ್ತು ಹೆಚ್ಚು ಕ್ಷುದ್ರನಾಗಿರುವುನೆಂದೂ ಸಿದ್ಧಪಡುತ್ತದೆ. ಸ್ವಭಾವಗತ ರೂಪದಲ್ಲಿ ಮಿಥ್ಯಾಚಾರಿಯಾಗುವ ಪ್ರಸಂಗವು,

ಕಲ್ಲು, ಕಟ್ಟಿಗೆ, ಮರಳು, ಇಟ್ಟಿಗೆ ಇತ್ಯಾದಿಗಳಿಗೆ ಬರದು. ಇನ್ನು ಉದ್ಭಿಜ ಮತ್ತು ಮಾನವೇತರ ಜೀವಿಗಳಿಗೂ ಸಹ ಬರದು (ಅದರೆ, ಮನುಷ್ಯನೇ ಅವುಗಳಿಗೆ ಮಿಥ್ಯಾಚಾರ ಕಲಿಸಿದರೆ, ಆ ಮಾತು ಬೇರೆ) ಮಾನವನೂ ಸಹ ಸ್ವಾಭಾವಿಕವಾತ ಮಿಥ್ಯಾಚಾರಿಯಾಗುವ ಯೋಗ ಹೊಂದನು. ಆದರೆ ಬುದ್ಧಿವಂತ ಮಾನವನು ತನ್ನ ನೀಚ ಆಶಯದಿಂದ, ತನ್ನ ಕೀಳು ಪ್ರಯತ್ನದಿಂದ, ಈ ಪ್ರಸಂಗವನ್ನು ತಂದುಕೊಳ್ಳುತ್ತಾನೆ.

"ಪ್ರತಿಕೂಲ ವೇದನೀಯಂ ದುಃಖಿಮ್" ಎಂದು ಹೇಳುತ್ತಾರೆ. ಓರ್ವ ಮಿಥ್ಯಾಚಾರಿ ಮಾನವನಿಗೆ,—ಅಂದರೆ, ಯಾರ ಸಂಸ್ಕಾರಗತ ತರಂಗಗಳು ಮಿಥ್ಯಾಚಾರಿಯಾಗಿವೆಯೋ, ಅವನಿಗೆ–ಈ ಜಗತ್ತಿನಲ್ಲಿ ಸತ್ಯಾಶ್ರಯಿ ಪರಿಸರದಲ್ಲಿ ಇರಬೇಕಾಗುತ್ತದೆ. ಆದರೆ ಮಿಥ್ಯಾಚಾರಿ ಮಾನವನ ಭಾವತರಂಗಗಳು ಮಿಥ್ಯಾಚಾರಿಯಾಗಿದೆ, ಅವನ ಸಂಸ್ಕಾರಗಳು ಮಿಥ್ಯಾಚಾರಿಯಾಗಿವೆ. ಪ್ರತಿಕೂಲ ಸಂಸ್ಕಾರ ಇಲ್ಲವೆ ಪ್ರತಿಕೂಲ ಭಾವತರಂಗಗಳ ಪರಿಸ್ಥಿತಿಯಲ್ಲಿ ಮಾನವನು "ಪ್ರತಿಕೂಲ ವೇದನೀಯಂ ದುಃಖಿಮ್";ಇದರ ಅನುಭವ ಪಡೆಯುತ್ತಾನೆ. ಹೀಗೆ ಮಿಥ್ಯಾಚಾರಿ ಮಾನವನೊಬ್ಬನು ಈ ಸತ್ಯಾಶ್ರಯಿ ಜಗತ್ತಿನಲ್ಲಿ ದುಃಖಿವನ್ನು ಅನುಭವಿಸುತ್ತಾನೆ. ಆದ್ದರಿಂದಲೇ ಶಿವನ ಈ ಜಗತ್ತಿನ ಮಾನವರನ್ನು ಸಾವಧಾನಗೊಳಿಸುತ್ತ, "ಮಿಥ್ಯಾವಾದೀ ಸದಾ ದುಃಖೀ" ಎಂದು ಹೇಳಿದ್ದಾನೆ.

ಶಿವೋಕ್ತಿ–೧೦

ಸರಳ ಹಾದಿ ಹಿಡಿದು ಸಾಗುವುದೇ ಸರ್ವಜೀವಿಗಳ ಸ್ವಾಭಾವಿಕ ಗತಿಯಾಗಿದೆ. ಭಯ ಮನೋವೃತ್ತಿ, ಸ್ವಾರ್ಥಪರತೆ, ಇಲ್ಲವೆ ಇತರ ಯಾವುದೋ ಪಾಪವೃತ್ತಿಯ ಮೂಲಕ ಪ್ರಚೋದಿಸಲ್ಪಟ್ಟು, ಮಾನವ ಮತ್ತಿತರ ಜೀವಿಗಳು ಅಡ್ಡಹಾದಿ ಹಿಡಿದು ವ್ಯವಹರಿಸುತ್ತವೆ. ಈ ವಕ್ರ ಹಾದಿಯು ಕೇವಲ ಜಡ ಇಲ್ಲವೆ ಜಾಗತಿಕ ಕ್ಷೇತ್ರದಲ್ಲಷ್ಟೇ. ಆಗುವುದೆಂಬ ಮಾತೇನೂ ಇಲ್ಲ. ಮಾನಸಿಕ ಕ್ಷೇತ್ರದಲ್ಲೂ ಇರುತ್ತದೆ. ಅರ್ಥಾತ್, ಭಯ ಮತ್ತು ಸ್ವಾರ್ಥಪರತೆಗಳು ಮಾನವನನ್ನು ಸಂಶಯಗ್ರಸ್ತನನ್ನಾಗಿಸುತ್ತವೆ. ನಿರ್ದೋಷಿಯಾದ ಮಾನವನಿಗೂ ಸಹ ತಪ್ಪಾಗಿ ವಿಚಾರಿಸ ಹಚ್ಚುತ್ತವೆ. ನಿರ್ದೋಷ ವ್ಯಕ್ತಿಯನ್ನು ಕುರಿತು ಸಂಶಯ ತಾಳಿ, ಅವನೊಂದಿಗೆ ಅನಿಷ್ಟ ವ್ಯವಹಾರ ಮತ್ತು ಸದಾಚಾರಹೀನ ವ್ಯವಹಾರಕ್ಕೆ ಇಳಿಯುತ್ತಾರೆ. ಯಾರ ಮನದಲ್ಲಿ ಇನಿತಾದರೂ ಶುಭ ಬುದ್ಧಿ ಇರುವುದೋ, ಅವರು, ತಮ್ಮ ಈ ರೀತಿಯ ನಡವಳಿಕೆಯು ಉಚಿತವಲ್ಲವೆಂದು ಯಾವಾಗ ಯೋಚಿಸುವೂರೋ, ಆಗ ನಾಚುಗೆಯಿಂದ ತಲೆತಗ್ಗಿಸುತ್ತಾರೆ. ಯಾರಲ್ಲಿ ಶುಭಬುದ್ಧಿಯು ಸಮಾಪ್ತವಾಗಿದೆಯೋ, ಅವರಿಗೇನೂ ನಾಚುಗೆಯೆನಿಸದು. ಗ್ಲಾನಿಯ ಅನುಭವವಾಗದು. ಮೊದಲು ಸಂದೇಹಿಸಲೇಬೇಕು.ಅನಂತರ ಆ ಸಂದೇಹದ ನಿರಸನ ಮಾಡಿಕೊಳ್ಳಬೇಕು. ಪಾಪೀ ಮಾನಸಿಕತೆಯ ಅತಿ ದೊಡ್ಡ ಲಕ್ಷಣವೇ ಇದು.

ಈ ಕಾರಣದಿಂದ ಪಾಪಿ–ಭಾವನೆಯಿಂದ ಪ್ರೇರಿತನಾದ ವ್ಯಕ್ತಿ ಇಲ್ಲವೆ ಸಮೂಹ, ಇಲ್ಲವೆ ಜನಗೋಷ್ಠಿಗಳು ಸಂದೇಹಕ್ಕೆ ಮಾರು ಹೋಗಿ, ಬೇರೆ ಬೇರೆ ಪ್ರಕಾರದ ಅಮಾನವೀಯ ಕಾರ್ಯಗಳಲ್ಲಿ ತೊಡಗುತ್ತಾರೆ. ಈ ಜನರಲ್ಲಿ ಪಶ್ಚಾತ್ತಾಪದ

ಬೋಧವೂ ಸಹ ಕಾಣಬರದು. ಯಾವ ದರ್ಶನಗಳು ಓರ್ವ ಮಾನವನ ಬಗ್ಗೆ ಇನ್ನೋರ್ವ ಮಾನವನಲ್ಲಿ ಸಂದೇಹ ಮೂಡಿಸುವುವೋ, ಮಾನವರನ್ನು ಮಾನವರ ಶತ್ರುವೆಂದು ತಿಳಿಯಲು ಕಲಿಸುವುವೋ, ಆಯೆಲ್ಲ ದರ್ಶನ ಇಲ್ಲವೆ ತತ್ತ್ವಗಳು ಭೂತ ಕಾಲದಲ್ಲಿ ಮಾನವರಿಗೆ ಬಹಳಷ್ಟು ಹಾನಿ ಮಾಡಿವೆ. ಮತ್ತು ಕಾಲ ಬಂದಾಗ ಅವು ಸುಧಾರಿಸದೆ ಹೋದರೆ, ಭವಿಷ್ಯದಲ್ಲಿಯೂ ಸಹ ಬಹಳಷ್ಟು ಅಕಲ್ಯಾಣ ಗೆಯ್ಯುತ್ತವೆ.

ಪರಿಸ್ಥಿತಿಯು ಎಲ್ಲಿಯ ವರೆಗೆ ಮುಟ್ಟುವುದೆಂದರೆ, ಪ್ರತಿಯೋರ್ವ ಮಾನವನ ಹಿಂದೆ ಗುಪ್ತಚಾರರನ್ನು ನಿಯಮಿಸಬೇಕಾಗುತ್ತದೆ. ಮತ್ತು ಪ್ರತಿಯೊಬ್ಬ ಗುಪ್ತ ಚಾರನು ಸರಿಯಾಗಿ ಕಾರ್ಯನಿರ್ವಹಿಸುವನೋ ಇಲ್ಲವೋ ಎಂಬುದನ್ನು ಖಚಿತಪಡಿಸಿ ಕೊಳ್ಳಲು, ಬೇರೊಬ್ಬ ಗುಪ್ತಚಾರರನ್ನು ನೇಮಿಸಬೇಕಾಗುತ್ತದೆ. ಈ ರೀತಿ ಪೂರ್ಣ ರೀತಿಯಿಂದ ಈ ಗುಪ್ತಚಾರ ಮನೋವೃತ್ತಿಯು ಸಮಾಜದ ತಲೆಯೇರಿ ಮೆರೆಯುತ್ತದೆ. ಮತ್ತು ಅದರಿಂದಾಗುವ ವಿಷಮಯ ಪರಿಣಾಮವೇನೆಂದರೆ, ಅದು ಸಮಸ್ತ ಮಾನಸಿಕ ಸಂಪತ್ತನ್ನು ವಿಷಯುಕ್ತ ಮಾಡುತ್ತದೆ. ಮತ್ತು ಮಾನವನ ಅಸ್ತಿತ್ವವನ್ನೇ ನಿರರ್ಥಕಗೊಳಿಸುತ್ತದೆ. ಮಾನವನು 'ಸಿನಿಕ'ನಾಗುತ್ತಾನೆ. ಇಲ್ಲವೆ ವಿಷಮಯ ಪರಿಸ್ಥಿತಿಯಿಂದ ಪಾರಾಗಲು ದೇಶತ್ಯಾಗ ಇಲ್ಲವೆ ಸಮಾಜ ತ್ಯಾಗ ಮಾಡಲು ಬಾಧ್ಯಸ್ಥನಾಗುತ್ತಾನೆ.

ಈ ಮಾತು ಇಲ್ಲಿಗೇ ಮುಗಿಯದು; ಯಾರು ಪಾಪಾಚಾರ ಇಲ್ಲವೆ ವಕ್ರಹಾದಿಗುಂಟ ಸಾಗುವುದು ಸಮಾಜಸಂಸಾರವನ್ನು ವಿಷಮಯಗೊಳಿಸಿರುವರೋ, ಅವರು ತಮ್ಮ ನಿಯಂತ್ರಕರನ್ನೂ ಸಹ ಮುಗಿಸಿ ಬಿಡುತ್ತಾರೆ. ಇಂದು ಯಾರು ಚರಿತ್ರೆಯ ಅತ್ಯುನ್ನತ ಪದದಲ್ಲಿರುವರೋ, ಅವರೇ ಒಂದು ದಿನ ತಮ್ಮ ಉತ್ತರಾಧಿಕಾರಿಗಳಿಂದ ಇತಿಹಾಸದ ಪುಟಗಳಿಂದ ಅಳಿಸಿ ಹಾಕಲ್ಪಡುತ್ತಾರೆ. ಹೀಗೆ ಪಾಪಾಚಾರಿ ಜನರು ಕುಟಿಲ ಮಾರ್ಗ ಹಿಡಿದು, ಸಾಗಿ, ವಿಶ್ವದ ವಾತಾವರಣವನ್ನು ಕಲುಷಿತಗೊಳಿಸಿ ಬಿಡುತ್ತಾರೆ. ಆ ಪಾಪಾಚರಣೆಯೇ ಕುಟಿಲ ಮಾರ್ಗಗುಂಟ ಸಾಗಿ ಆ ಪಾಪಾಚಾರಿಗಳ ಮೇಲೆಯೇ ಬಂದು ಬೀಳುತ್ತದೆ.

ಯಾರು ಇತರ ಜನರಿಗೆ ನ್ಯಾಯ ನೀಡಲು ಬಯಸುವದಿಲ್ಲವೋ, ಇತರರ ಕತ್ತು ಹಿಸುಕಿ, ತಮ್ಮ ಕೂಗಿಗೂ ಜಯಭೇರಿ ಮೊಳಗಿಸುವ ಹಪಣಿಕೆ ಹೂಡುವರೋ, ಅವರಿಗೆ ಕೊನೆಯಲ್ಲಿ ಸುವಿಚಾರ ಹೊಳೆಯದು. ಮತ್ತು ಅವರ ಆಕಾಶದಲ್ಲಿ ಮೊಳಗ ಬೇಕಾದ ಧ್ವನಿ ಪಾತಾಳ ಸೇರುತ್ತದೆ. ತ್ರಿಕಾಲದರ್ಶಿಯಾದ ಶಿವನು ಈ ಕಠೋರ ತತ್ತ್ವಗಳನ್ನು ತಿಳಿದಿದ್ದನು. ಈ ಕಾರಣದಿಂದಾಗಿಯೇ ಅವನು ಭಕ್ತ ಮತ್ತು ಧಾರ್ಮಿಕ ಜನರಿಗೆ–'ಪಾಪಸ್ಯ ಕುಟಿಲಾ ಗತಿಃ' ಎಂದು ಹೇಳಿದನು.

ಪಾಟಣಾ
೧೩–೬–೧೯೮೨

ಪ್ರವಚನ ೧೧

ಶಿವನ ಬೋಧೆ-೧

ಶಿವೋಕ್ತಿ–೧೧

ಉದ್ಭಿಜ, ಜೀವಜಂತು, ಮಾನವ ಮತ್ತು ಸರ್ವ ಪ್ರಕಾರದ ಜಡ ಇಲ್ಲವೆ ಚೇತನ ಸತ್ತೆಗಳ ಅಸ್ತಿತ್ವವನ್ನು ಧರಿಸಿರುವುವೇ ಧರ್ಮವಾಗಿದೆ. ಆದ್ದರಿಂದ ಯಾವ ಸತ್ತೆಯ ಧರ್ಮವು ವಿಪರ್ಯಸ್ತವಾಗಿದೆಯೋ, ಆ ಸತ್ತೆಯ ಅಸ್ತಿತ್ವವೇ ಮುಗಿಯ ಹತ್ತಿತೆಂದು ತಿಳಿಯಬಹುದು. ಆದ್ದರಿಂದ ಧರ್ಮವು ನಾಶವಾಗಹತ್ತಿದೊಡನೆ, ಜ್ಞಾನಿ, ಗುಣಿ ಮತ್ತು ಚಿಂತನಶೀಲ ವ್ಯಕ್ತಿಗಳು ಬಹಳಷ್ಟು ಚಿಂತೆಗೊಳಗಾಗುತ್ತಾರೆ. ನಿಜವಾಗಿ, ಜೀವಿಯ ಅಧಿಷ್ಠಾತೃ ದೇವತೆಯ ಧರ್ಮ. 'ಧೃಯತೇ ಧರ್ಮ ಇತ್ಯಾಹುಃ, ಸ ವಿಭ ಪರಮಂ ಪ್ರಭುಃ' ವಿಜ್ಞಾನಿಗಳು ಅನೇಕ ಸತ್ತೆಗಳ ಧರ್ಮದೊಂದಿಗೆ ಸರಿಯಾಗಿ ಪರಿಚಯ ಹೊಂದಿ, ಅವುಗಳ ವಿಷಯದಲ್ಲಿ ಸಂಶೋಧನೆಗೈಯ್ಯುತ್ತಾರೆ. ಹೊಸ ಹೊಸ ತಥ್ಯಗಳನ್ನು ಆವಿಷ್ಕರಿಸುತ್ತಾರೆ. ಸೃಷ್ಟಿಯ ಹೊಸ ಹೊಸ ಯೋಜನೆಗಳನ್ನು ರೂಪಿಸುತ್ತಾರೆ.

ಉದ್ಭಿಜ, ಜೀವ–ಜಂತು, ಇಟ್ಟಿಗೆ, ಕಟ್ಟಿಗೆ, ಕಲ್ಲು, ಮಾನವರೆಲ್ಲ ತಮ್ಮ ಧರ್ಮದಲ್ಲಿ ಮಹಾನರಾಗಿದ್ದಾರೆ. ಸರ್ವರೂ ತಮ್ಮ ತಮ್ಮ ಧರ್ಮದಲ್ಲಿ ದೊಡ್ಡವರೇ. ಧರ್ಮದ ಅರ್ಥವು ರಿಲಿಜನ್ (Religion) ಎಂಬ ಅರ್ಥದಲ್ಲಿ ಅಲ್ಲ. ಬದಲಾಗಿ, ಸತ್ತೆಯ ಪರಿಚಯವನ್ನು ಸಾರಾಸಾರವಾಗಿ ಹೇಳುವುದಾಗಿದೆ. ಮಾನವನಿಗೆ ಈ ಶರೀರ ಲಭಿಸಿದೆಯೆಂದ ಮೇಲೆ ಅವನು ಮಾನವನಾಗಿಯೇ ಬಾಳಬೇಕು. ಮಾನವ ರೂಪದಲ್ಲಿಯೇ ಅವನು ತನ್ನ ಅಸ್ತಿತ್ವವನ್ನು ಪ್ರತಿಷ್ಠಿತಗೊಳಿಸಬೇಕು. ಮತ್ತು ಮಾನವ ರೂಪದಲ್ಲಿ ಗೌರಯುತವಾಗಿ ಮರಣವನ್ನಪ್ಪಬೇಕು. ಏಕೆಂದರೆ ಇದು ಅವನ ಮಾನವೀಯ ಧರ್ಮವಾಗಿದೆ. ಜೀವಿಸಲೋಸುಗ, ವಿಕಾಸ ಹೊಂದಲೋಸುಗ ಮತ್ತು ಸಾಯಲೋಸುಗ, ಅವನು ಮಾನವೇತರ ಜೀವವಾಗಿ ಪರಿಣಮಿಸಕೂಡದು.

ಮಾನವ ಧರ್ಮದ ಸಾರಸತ್ವವು ಮೂರು ತತ್ತ್ವಗಳಲ್ಲಡಗಿದೆ. ಇನ್ನು ನಾಲ್ಕನೆಯದು ಆ ಮೂರರ ಪರಿಣತಿಯಷ್ಟೇ. ಈ ಮೂರು ತತ್ತ್ವಗಳಲ್ಲಿ ಮೊದಲನೆಯದು ವಿಸ್ತಾರ. ಎರಡನೆಯದು ರಸ. ಮೂರನೆಯದು ಸೇವಾ. ಇನ್ನು ನಾಲ್ಕನೆಯ

ಪರಿಣಾಮ ರೂಪಿ ತತ್ತ್ವವೆಂದರೆ ಪರಮಪುರುಷನಲ್ಲಿ ಪರಾನಿವೃತ್ತಿ. ಮಾನವನು ವಿಸ್ತಾರಗೊಳ್ಳಲು ಬಯಸುತ್ತಾನೆ. ವಿಸ್ತಾರಗೊಳ್ಳಬೇಕಾದರೆ ಇತರರ ಸಂಪತ್ತನ್ನು ಕಸಿದುಕೊಳ್ಳುವುದು ಪ್ರಯೋಜನಕಾರಿಯಾಗದು. ಅವನು ತನ್ನ ಸತ್ತಾ–ಬೋಧವನ್ನು ಮತ್ತು ಅದೇ ಮೇರೆಗೆ ಮಾನವೀಯ ಮೂಲ್ಯಬೋಧವನ್ನು ಮಧುರವಾಗಿ ಸೇರಿಸಿ, ಸಮಸ್ತ ವಿಶ್ವದಲ್ಲಿ ಹಬ್ಬಿಸುವನು. ತನ್ನೊಳಗಿನ ಮಧುರತಮ ಭಾವವನ್ನು ವಿಶ್ವದ ಪ್ರತಿಯೊಂದು ಸತ್ತೆಯ ಅಂತರಾಳದಲ್ಲಿ ತುಂಬುತ್ತಾನೆ.

ರಸ ಎಂದರೆ, ಎಲ್ಲ ಕಾಲದಲ್ಲಿಯೂ, ಅಸಂದ–ಘನಭಾವದಲ್ಲಿ ಅಭಿಷಿಕ್ತನಾಗಿರುವುದು; ಅಸ್ತಿತ್ವ ಬೋಧವನ್ನು ಸರಸತೆಯಲ್ಲಿ ಉಜ್ಜೀವಿಸುವುದು. ಯಾವ ವಿರಾಟ ಸತ್ತೆಯಿಂದ ತನ್ನ ಅಸ್ತಿತ್ವವು ಉತ್ಸರಣಗೊಂಡಿದೆಯೋ, ಅವನೊಂದಿಗೆ ನಿತ್ಯ ಸಂಪರ್ಕ ಹೊಂದಿದಾಗ ಮಾತ್ರ ಇದೆಲ್ಲ ಸಂಭವನೀಯವಾಗಬಹುದು.

ಇದು ಕೊಡು–ಕೊಳ್ಳುವ ಜಗತ್ತು. ಮತ್ತು ಈ ಕೊಡುಕೊಳ್ಳುವಿಕೆಯ ಕಾರ್ಯ ಮಾಡುತ್ತಿರುವಾಗ, ಮಾನವನ ಮಾನಸಿಕ ಉನ್ನತಿ ಇಲ್ಲವೆ ಅವನತಿಗಳು ಎಳ್ಳಿನಿತೂ ಆಗುವುದಿಲ್ಲ. ಕೇವಲ ಕೊಳ್ಳುವ ಕಾರ್ಯದಲ್ಲಿ ನಿರತನಾದರೆ ಮನಸ್ಸು ಕೀಳಾಗುತ್ತದೆ. ಇನ್ನು ಕೇವಲ ಕೊಡುವಿಕೆಯನ್ನು ಕುರಿತು ಯೋಚಿಸುತ್ತಿದ್ದರೂ ಸಹ, ಕೆಲವೊಮ್ಮೆ ಅಸ್ತಿತ್ವ ವಿಮುಖತೆಯ ಭಾವವು ಕಾಣಬರುತ್ತದೆ. ಆದ್ದರಿಂದ ಮಾನವನು ಈ ಕೊಡುಕೊಳ್ಳುವ ಸ್ತರದಿಂದ ಮೇಲಕ್ಕೆ ಹೋಗಬೇಕು. ಅಂದರೆ, ತನ್ನನ್ನು ಬೃಹತ್ ಸತ್ತೆಯೊಂದರ ಯಂತ್ರವೆಂದು ಬಗೆದು; ಆ ಬೃಹತ್ ಸತ್ತೆಯ ಅಭೀಪ್ಸಿತ ಕಾರ್ಯದಲ್ಲಿ, ಆ ಯಂತ್ರವನ್ನು ಅನನ್ಯ ಮನಸ್ಕನಾಗಿ ತೊಡಗಿಸಬೇಕು. ಇದು ಸೇವೆಯ ಸಾರ ಮರ್ಮವಾಗಿದೆ.

ಈ ವಿಸ್ತಾರ, ರಸ ಮತ್ತು ಸೇವೆ— ಇವು ಮೂರೂ ಸಾಧನೆಗಳಾಗಿವೆ. ಇನ್ನು ನಾಲ್ಕನೆಯ ಸತ್ತೆಯೇ ಸಾಧ್ಯ.

ಈ ಪ್ರಕಾರ ಮಾನವನ ಧರ್ಮವು ಈ ನಾಲ್ಕು ತತ್ತ್ವಗಳ ಮಾಲೆಯಾಗಿದೆ. ಈ ಧರ್ಮವೇ ಮಾನವನ ಪರಮ ಮಿತ್ರನಾಗಿದೆ. ಈ ಧರ್ಮಕ್ಕೋಸುಗ ಮಾನವನು ಯಾವುದೇ ಪ್ರಕಾರದ ಕಾರ್ಯ ಮಾಡಬಲ್ಲನು. ಬೇಕಾದ ತ್ಯಾಗ ಮಾಡಲಿಕ್ಕೆ ಸಮರ್ಥನಾಗುತ್ತಾನೆ. ಈ ಧರ್ಮಕ್ಕೋಸುಗ ಯಾವುದೇ ರೀತಿಯ ತ್ಯಾಗವೂ ದೊಡ್ಡ ತ್ಯಾಗವಲ್ಲ. ಯಾವ ಕ್ಲೇಶವೂ ದೊಡ್ಡ ಕ್ಲೇಶವಲ್ಲ. ಆದ್ದರಿಂದ ಈ ಧರ್ಮಕ್ಕೆ 'ಭಾಗವತ ಧರ್ಮ'ವೆನ್ನುತ್ತಾರೆ.

"ಧರ್ಮೋ ರಕ್ಷತಿ ರಕ್ಷಿತಃ" ಎಂಬ ಶಿವನ ಉಕ್ತಿಯಿದೆ. ಆರ್ಥಾತ್ ಯಾರು ಧರ್ಮರಕ್ಷಣೆ ಮಾಡುವರೋ, ಧರ್ಮವು ಸಹ ಅವನನ್ನು ರಕ್ಷಿಸುತ್ತದೆ. ಧರ್ಮವು, ಧಾರ್ಮಿಕನನ್ನು ಸ್ಥೂಲ ರೂಪದಲ್ಲಿ ರಕ್ಷಿಸುತ್ತದೆ. ಸೂಕ್ಷ್ಮ ರೂಪದಲ್ಲಿ ರಕ್ಷಿಸುತ್ತದೆ; ಕಾರಣ ರೂಪದಲ್ಲಿಯೂ ರಕ್ಷಿಸುತ್ತದೆ. ಯಾವಾಗ ಧರ್ಮವು ಸ್ಥೂಲ ರೂಪದಲ್ಲಿ ರಕ್ಷಣೆ ಮಾಡುವುದೋ, ಆವಾಗ ಮಾನವನು ಅದನ್ನೆಲ್ಲ ತನ್ನ ಕಣ್ಣೆನೆದುರು ಕಾಣುತ್ತಾನೆ; ಕಾಲದ ಸೂಚನೆಯಿಂದ ತಿಳಿಯುತ್ತಾನೆ. ಮತ್ತು ಸ್ಪರ್ಶದ ಮಾಧುರ್ಯವನ್ನು ಅನುಭವಿಸುತ್ತಾನೆ. ಯಾವಾಗ ಧರ್ಮವು ಕಾರಣ ರೂಪದಿಂದ ಯಾರಿಗಾದರೂ

ಸಹಾಯ ಸಲ್ಲಿಸಿದರೆ, ಆಗ ಮಾನವನು ಅದನ್ನು ಅನುಭವಿಸಿ, ತನ್ನೊಳಗಿನ ಮಾಧುರ್ಯದೊಂದಿಗೆ, ತನ್ನ ಮನದಿಂದ, ತನ್ನ ಪ್ರಾಣದಿಂದ, ಪರಮ ಪುರುಷನಿಗಾಗಿ ಹಂಬಲಿಸುತ್ತಾನೆ. ಆದ್ದರಿಂದ ಹೊರಜಗತ್ತಿನಲ್ಲಿ ಆ ವಸ್ತುವು ಸ್ಫುಟಗೊಳ್ಳುವುದಿಲ್ಲ. ಯಾವಾಗ ಧರ್ಮವು ಸೂಕ್ಷ್ಮ ರೂಪದಲ್ಲಿ ರಕ್ಷಣೆ ಮಾಡುವುದೋ, ಆಗ ಅದರ ಅನುಭವವನ್ನು ಮಾನವನು ಮನನ ಮೂಲಕ ಮಾಡಬಲ್ಲವನಾಗಿದ್ದಾನೆ.

ಧರ್ಮದ ಗತಿಶೀಲತೆಯು ಮುಖ್ಯವಾಗಿ ಸೂಕ್ಷ್ಮಸ್ತರದಲ್ಲಿ ಆಗುತ್ತದೆ. ಈ ಮನನ ಶೀಲತೆಯ ಹೆಚ್ಚಳವನ್ನು ಕೇವಲ ಧಾರ್ಮಿಕ ವ್ಯಕ್ತಿಗಳು ಮಾತ್ರ ಅನುಭವಿಸಬಲ್ಲರು. ಧರ್ಮವು ಸೂಕ್ಷ್ಮರೂಪದಲ್ಲಿ ಯಾವಾಗಲೂ ಅವನೊಂದಿಗೆ ಇರುತ್ತದೆ. ಆಗ ಅವನು, ತನ್ನ ಧರ್ಮ ಮತ್ತು ತನ್ನ ಪ್ರಾಪ್ತಿಯ ಪರಮ-ಪುರುಷರೀರ್ವರೂ ಅಭಿನ್ನರೆಂಬ ಅನುಭವ ಪಡೆಯುತ್ತಾನೆ. ಆದ್ದರಿಂದಲೇ ಶಿವನು, "ಧರ್ಮಸ್ಯ ಸೂಕ್ಷ್ಮಾ ಗತಿಃ" ಎಂದು ಸ್ಪಷ್ಟ ಶಬ್ದಗಳಲ್ಲಿಯೇ ಹೇಳಿದ್ದಾನೆ.

ಶಿವೋಕ್ತಿ–೧೨

ಸರ್ವ ಅವಸ್ಥೆಗಳಲ್ಲಿಯೂ ಮಾನವನು ಮಾಡಲೇಬೇಕಾದುದೊಂದಿದೆ: ಅದುವೇ ಧರ್ಮಾಚರಣೆ. ಇದೀಗ ಸ್ವಲ್ಪ ಮೊದಲು ಮಾನವನಿಗೋಸ್ಕರ ಧರ್ಮವೆಂದರೆ ಭಾಗವತ ಧರ್ಮವೇ ಆಗಿದೆಯೆಂದು ಹೇಳಿದೆ. ಮತ್ತು ಅದು ವಿಸ್ತಾರ, ರಸ, ಸೇವೆ ಮತ್ತು ಪರಮಪುರುಷನಲ್ಲಿ ಪರಾನಿವೃತ್ತಿಗಳೆಂಬ ನಾಲ್ಕು ಸ್ತರಗಳಲ್ಲಿ ವಿನ್ಯಸ್ತವಾಗಿದೆ. ನಾಲ್ಕನೆಯ ಧರ್ಮಪಾದವಾದ ಪರಮಪುರುಷನಲ್ಲಿ ಪರಾನಿವೃತ್ತಿಯೇ ಧರ್ಮದ ಕೊನೆಯ ಮಾತು. ಇಲ್ಲವೆ ಪರಮಾರ್ಥ. ಪ್ರಾರಂಭದ ಮೂರು, ಪರಮಾರ್ಥಕ್ಕೇರುವ ಮೂರು ಮೆಟ್ಟಿಲುಗಳು.

ಯಾವುದು ಧರ್ಮದ ಚರಮ ಕಥೆಯೋ ಮತ್ತು ಎಲ್ಲಿ ಗತಿಯು ಅಶೇಷರೂಪದಲ್ಲಿ ಇರುವುದೋ, ಎಲ್ಲ ಆದಿ ಮಧ್ಯ-ಅಂತ್ಯಗಳ ವಿಚಾರ ವಿಶ್ಲೇಷಣೆಯು ಮನೀಷೆಯ ಮೂಲಕ ಸಂಭವವಾಗುವುದಿಲ್ಲವೋ, ಆ ಪರಮ ಪುರುಷನಲ್ಲಿಯ ಪರಾನಿವೃತ್ತಿಯ ಸಂಶೋಧನೆಗಾಗಿ, ಮಾನವನು ಈ ಪೃಥ್ವಿಯ ಮೇಲೆ ಬಂದಿದ್ದಾನೆ. ಈ ಚರಮಸ್ತರಕ್ಕೆ ತತ್–ಸ್ಥಿತಿಯ ಆರಂಭದ ಮಾತೆಂದು ಹೇಳಬಹುದು. ಕೊನೆಯ ಕಥೆಯೆಂದೂ ಕರೆಯಬಹುದು. ಮತ್ತು ಮಧ್ಯದ ಕಥೆಯೆಂದೂ ಕರೆಯಬಹುದು. ಅಂದರೆ ಇಲ್ಲಿ ಆದಿ–ಮಧ್ಯೆ–ಅಂತ್ಯ ಇವು ಮೂರು ಒಂದಾಗುತ್ತವೆ.

ರಾಢದ (ಮಾನ ಭೂಮದ) ಬಾಹುಲ ಪಚಾಈ ಶೇಖಿನು ಹೇಳುತ್ತಾನೆ:

"ದಯಾಲ ತೋಮಾರ ರಕಮ ಜೋರ್ಯೂ ಭಾರ।
ಶೇಷರ ಪರೇ ಓ ಶುರು ಆಛೇ ಏಈ ಬೂರ್ಝೋಛಿ ಸಾರ."
ದೇವ ನೀನು ದಯೆಯು ನಿಧಿಯು
ನಿನ್ನ ಬಗೆಯು ತಿಳಿಯಲಳವೆ?
ನಿನ್ನ ಕೊನೆಯೊಳಿಹುದು ಆದಿ
ಸಾರವಿಷ್ಟೆ; ಎಂದು ಅರಿವೆ.

ಆದ್ದರಿಂದಲೇ, ಶೂದ್ರೋಚಿತವೇ ಇರಲಿ; ವೈಶ್ಯೋಚಿತವೇ ಇರಲಿ; ಕ್ಷಾತ್ರೋಚಿತವೇ ಇರಲಿ; ವಿಪ್ರೋಚಿತವೇ ಇರಲಿ; ಏನೇ ಇರಲಿ, ಯಾರೇ ಇರಲಿ; ಪ್ರತಿಯೊಂದು ಅವಸ್ಥೆಯಲ್ಲಿಯೂ ಧರ್ಮವನ್ನು ಪರಿಪಾಲಿಸಲೇಬೇಕು.

"ತಸ್ಮಾತ್ ಧರ್ಮಃ ಸದಾ ಕಾರ್ಯಃ ಸರ್ವವರ್ಣೈಃ ಪ್ರಯತಂತಃ"

ಪರಮಬ್ರಹ್ಮನಲ್ಲಿ ತದ್ಸ್ಥಿತಿ ಪ್ರಾಪ್ತಿಯು, ಈ ಮೂರೂ ಮೆಟ್ಟಿಲುಗಳನ್ನು ಉಲ್ಲಂಘಿಸಿದರೆ ಅಸಾಧ್ಯವೆಂಬುದನ್ನು ನಾವಿಲ್ಲಿ ಕಂಡುಕೊಳ್ಳಬೇಕಾಗಿದೆ. ಆದ್ದರಿಂದ ಯಾರಾದರೂ, ಈ ಕಷ್ಟಕೋಟಲೆಯಿಂದ ಬೆಂದ ಮಾನವನ ದುಃಖದ ಕತೆಯನ್ನು ಮರೆತು, "ಹಿಮಾಲಯದ ಕಂದರಕ್ಕೆ ಹೋಗಿ, ಕಾಲುಮೇಲೆ ಮಾಡಿ, ತಲೆ ಕೆಳಗೆ ಮಾಡಿ, ಯುಗ ಯುಗಗಳ ವರೆಗೆ ಸಾಧನೆ ಮಾಡುವೆ; ಮತ್ತು ಪರಮ ಪುರುಷನು ಸ್ವತಃ ಗವಿಯ ಕಲ್ಲಿನ ಬಾಗಿಲು ಸರಿಸಿ, ಎದುರಿಗೆ ಬಂದು, "ವತ್ಸ ಕಿಮ್ ಕಾಂಕ್ಷೇ?" "ಮಗೂ ನಿನ್ನ ಬಯಕೆ ಏನು?" ಎಂದು ಕೇಳಲಿ; ಆಗ ನಾನು 'ಪರಮಾತ್ಮ!' ಸಪ್ತರ್ಷಿ ಮಂಡಲದಲ್ಲಿ ನನಗೊಂದು ಸ್ಥಾನ ಬೇಕು ಎನ್ನುವೆ." ಎಂಬುದೆಲ್ಲ ಆಗದೆ-ಹೋಗದ ಮಾತು. ಇಂಥದೆಂದೂ ಸಂಭವಿಸದು. ಗಿರಿಕಂದರಗಳಲ್ಲಿ ಮಾಡಿದ ದೀರ್ಘ ಸಾಧನವೆಲ್ಲ ನದಿ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತದೆ. ಆದ್ದರಿಂದ ಭಾಗವತ ಧರ್ಮದ ಹಾದಿ ಯಾಗದು. ಗೃಹೀ, ಯಾವಾಗ ತಾಪತ್ರಯಗಳಿಂದ ಬೆಂದ ಮಾನವರ ಸೇವೆ ಮಾಡು ವನೋ ಆಗ, ಗೃಹಸ್ಥ ಧರ್ಮವನ್ನು ಪಾಲಿಸುತ್ತಲೇ, ಭಾಗವತ ಧರ್ಮದಲ್ಲಿ ಪ್ರತಿಷ್ಠಿತ ನಾಗಬಲ್ಲನು. ಮತ್ತು ಸನ್ಯಾಸಿಯು ಸಹ, ಗೃಹಸ್ಥ ಧರ್ಮದ ಹೊರಗಿದ್ದುಕೊಂಡೇ ಭಾಗವತ ಧರ್ಮದ ಅನುಶೀಲನೆಯನ್ನು ಮಾಡುತ್ತಾನೆ. ಮತ್ತು ಮನುಷ್ಯನ ಪ್ರತಿ ಯೊಂದು ಪ್ರಕಾರದ ಕ್ಲೇಶದಲ್ಲಿ ಶಾಂತಿ ಮತ್ತು ಸಂವೃದ್ಧಿಯನ್ನು ಲೇಪಿಸಬಲ್ಲನು. ಇದುವೆ ಧರ್ಮೋಚಿತ ಹಾದಿಯಾಗಿದೆ. ಇದುವೇ ಪರಮಪುರುಷನ ಇಚ್ಛೆಯಾಗಿದೆ.

ಯಾವ ಸನ್ಯಾಸಿ ಇಲ್ಲವೆ ಗೃಹಸ್ಥನು, ಗಿರಿಕಂದರಗಳಲ್ಲಿ, ತಪಸ್ಯೆಯಲ್ಲಿ ನಿರತ ನಾಗಿರುವನೋ, ಅವನ ತಪಸ್ಯೆಯು, ಬಾರಿ ಬಾರಿಗೆ ಪ್ರಾಪಂಚಿಕ ನೆನಹು ಮತ್ತು ವಿಚಾರಗಳ ಆಘಾತದಿಂದ ಪೂರ್ಣ ಚೂರು-ಚೂರಾಗಿ, ಹೋಗುತ್ತದೆ. ಹಿಮಾಲಯ ಪರ್ವತದ ಮೇಲೆ ಕುಳಿತು, ಕಲಕತ್ತೆಯ ಖಿರ್ಜೂರ ಬೆಲ್ಲದ 'ಸಂದೇಶ' ಸಿಹಿತಿನಿಸಿನ ಧ್ಯಾನ ಮಾಡುವನೇನೋ? ಯಾವ ಸನ್ಯಾಸಿಯು ಮಾನವರ ದುಃಖದ ಮಡುವಿನ ಸ್ಪರ್ಶದಿಂದ ಕಲಕುವನೋ, ಅವನ ಸನ್ಯಾಸವು, ಅವನ ಯತಿಚರ್ಯೆಯು, ಸಾರ್ಥಕ ವಾಗುತ್ತದೆ. ಮತ್ತು ಜೀವದ ನಗೆ-ನಲಿವುಗಳು ಅವನಲ್ಲಿ ಕೆಂಪು ರತ್ನದಂತೆ ಹೊಳೆದು ತೊಳಗುತ್ತವೆ. ಮೂರೂ ಮೆಟ್ಟಿಲುಗಳನ್ನು ಸ್ಪರ್ಶ ಮಾಡಿಯೇ ಅವನು ಪರಮ ಲಕ್ಷ್ಯವನ್ನು ಮುಟ್ಟಬಲ್ಲನು. ಈ ಕಾರಣದಿಂದಾಗಿಯೇ ಶಿವನು, ಮಾನವನು ಧರ್ಮಾ ಚರಣೆಯನ್ನು ಮಾಡಲೇಬೇಕು, ಎಂದು ಹೇಳಿದ್ದಾನೆ. "ಆತ್ಮ ಮೋಕ್ಷಾರ್ಥಂ, ಜಗತ್ ಹಿತಾಯ ಚ."

ಪ್ರವಚನ ೧೧

ಶಿವನ ಬೋಧೆ-೨

ಶಿವೋಪದೇಶ-೧

"ಏಕಂ ಜ್ಞಾನಂ ನಿತ್ಯಂ ಅದ್ಯಂತ ಶೂನ್ಯಂ
ನಾನ್ಯತ ಕಿಂಚಿತ್ ವರ್ತತೇ ವಸ್ತು ಸತ್ಯಮ್
ತಯೋರ ಭೇದೇಹ ಸ್ಮಿನ್ ಇಂದ್ರಿಯೋಪಾಧಿನಾ ವೈ
ಜ್ಞಾನಸ್ಯಾಯಂ ಭಾಸತೇ ನಾನ್ಯಥೈವ"

(ಜ್ಞಾನವು ಒಂದೇ; ಅದು ನಿತ್ಯವಾದುದು; ಅದಕ್ಕೆ ಆದಿಯೂ ಇಲ್ಲ; ಅಂತ್ಯವೂ ಇಲ್ಲ. ಯಾವಾಗ ತಾನ್ಮಾತ್ರಿಕ ಸ್ಪಂದನಗಳನ್ನು ಗ್ರಹಿಸುವ ಇಲ್ಲವೆ ಸುರಿಸುವ ಇಂದ್ರಿಯ ಗಳ ಉಪಾಧಿಗಳನ್ನು ನಿರೋಧಿಸುವರೋ ಮತ್ತು ಅಂತರ್ಜಗತ್ತು ಮತ್ತು ಬಹಿರ್ಜಗತ್ತು ಒಂದಾಗುವವೋ ಆಗ, ವಿಕಸತ್ತೆಯ ಜ್ಞಾನವಷ್ಟೇ ಇರುತ್ತದೆ.)

ಸಾಂಖ್ಯ ದರ್ಶನವು ಅತ್ಯಂತ ಪ್ರಾಚೀನ ದರ್ಶನವಾಗಿದೆ. ಸಾಂಖ್ಯ ಶಬ್ದದ ಅರ್ಥವೆಂದರೆ ಸಂಖ್ಯೆಗೆ ಸಂಬಂಧಿಸಿದುದಾಗಿದೆ. ಸಾಂಖ್ಯ ಎಂಬ ಹೆಸರೇ ಸೂಚಿಸುವಂತೆ. ಸಾಂಖ್ಯ ದರ್ಶನಕ್ಕಿಂತ ಬಹು ಪೂರ್ವ ಕಾಲದಿಂದಲೂ ಮಾನವನಿಗೆ ಸಂಖ್ಯಾ ತತ್ತ್ವದ ಅಂದರೆ ೧, ೨, ೩, ೪, ೫, ೬, ೭, ೮, ೯ ಇವುಗಳ ಪರಿಚಯವಿತ್ತು. ಮತ್ತು ಶೂನ್ಯವೂ ಮೂಲ್ಯಹೀನವಲ್ಲ; ಎಂಬುದನ್ನವನು ತಿಳಿದಿದ್ದನು. ಯಾವುದೊಂದು ಸಂಖ್ಯೆಯ ಬಲಕ್ಕೆ ಶೂನ್ಯವನ್ನಿರಿಸಿದರೆ. ಅದರ ಮೂಲ್ಯವು ಹತ್ತು ಪಟ್ಟು ಹೆಚ್ಚಾಗುತ್ತದೆ. ಆದರೆ ಅದೇ ಶೂನ್ಯವನ್ನು ಸಂಖ್ಯೆಯ ಎಡಕ್ಕೆ ಇರಿಸಿದರೆ, ಅದರ ಮೂಲ್ಯವು ಹೆಚ್ಚೂ ಆಗುವುದಿಲ್ಲ. ಕಡಿಮೆಯೂ ಆಗುವುದಿಲ್ಲ. ಶೂನ್ಯದ ಮಹತ್ವವನ್ನು ಅರಿತ ಬಳಿಕ, ದಶಮಾಂಶ ಪದ್ಧತಿಯು ಅಭಿವೃದ್ಧಿ ಹೊಂದಿತು.

ಮನೋವೈಜ್ಞಾನಿಕ ವಿಚಾರದಿಂದ ನೋಡಿದರೆ, ಎಲ್ಲ ಸಂಖ್ಯೆಗಳಲ್ಲಿ ಶೂನ್ಯದ ನಂತರದ ಸ್ಥಾನವು ಒಂದು ಸಂಖ್ಯೆಗಿದೆ. ಸಾಮಾನ್ಯವಾಗಿ, ಮಾನವನ ಮನಸ್ಸು ಸರ್ವ ದಿಶೆಗಳಲ್ಲಿ ಹರಿಯುತ್ತಿರುತ್ತದೆ. ಸರ್ವ ದಿಶೆಗಳಲ್ಲಿ ಹರಿದು ಹಂಚಿ ಹೋದ ಮನವನ್ನು, ಬಹು ಶಾಖೆಗಳುಳ್ಳ, ಬಹು ಪಲ್ಲವಿತ ಮನವನ್ನು, ಅರಿತೋ, ಅರಿಯದೆಯೋ, ಯಾವು ದೊಂದು ವಿಶೇಷ ವಸ್ತು ಇಲ್ಲವೆ ವಿಶೇಷ ಭಾವದತ್ತ, ತಿರುಗಿಸಿದರೆ, ಈ ನಿರ್ದೇಶಿತ

ಗತಿಯ ಲಕ್ಷ್ಯಕ್ಕೆ ಮನಸಾತ್ವಿಕ ವಿಚಾರದಿಂದ 'ಒಂದು' ಏನ್ನುತ್ತಾರೆ. ಈ ಪ್ರಕಾರ ನೋಡಿದರೆ, ಎರಡು ಎಂದರೆ ಎರಡು 'ಒಂದು'ಗಳು; ಮೂರು ಎಂದರೆ ಮೂರು 'ಒಂದು'ಗಳು. ಈಗ ಹೀಗೆ ತಿಳಿಯಿರಿ. ಸಂಖ್ಯೆಯೇನೋ ಇದೆ. ಆದರೆ 'ಒಂದು' ಗಳ ನಿರ್ದಿಷ್ಟ, ಸ್ಪಷ್ಟ ಸೂಚನೆ ಇರುವುದಿಲ್ಲ. ಆಗ ನಾವು ಅನ್‌ಏಕ + ಅನೇಕ; ಎಂದರೆ ಒಂದು ಅಲ್ಲ; ಅನೇಕ ಎನ್ನುತ್ತೇವೆ.

ಗಂಭೀರವಾಗಿ ಯೋಚಿಸಿದಾಗ, ಸರ್ವ ಸತ್ತೆಗಳೂ ಸಂಶ್ಲೇಷಣೆಯ ಹಾದಿಯಲ್ಲಿ ಸಾಗುತ್ತವೆ. ಮತ್ತು 'ಒಂದ'ರಲ್ಲಿ ಸೇರಿ ಸಮಾಪ್ತಿಗೊಳ್ಳುತ್ತವೆಯೆಂಬುದನ್ನು ಕಾಣುತ್ತೇವೆ. ಇದಲ್ಲದೆ, ಜಡಾತ್ಮಕ ವಿಚಾರದಿಂದಾಗಲಿ, ಇಲ್ಲವೆ ಭಾವಾತ್ಮಕ ವಿಚಾರದಿಂದಾಗಲಿ, ನೋಡಿದರೆ, ಸರ್ವವೂ 'ಜ್ಞ' ಸತ್ತೆಯ ದೇಶೀಯ, ಕಾಲಿಕ ಇಲ್ಲವೆ ಪಾತ್ರಿಕ ಕ್ಷೇತ್ರದ ರೂಪಳಾಗಿರುತ್ತವೆ. ಈ ಕ್ಷೇತ್ರಿಕ ರೂಪಗಳನ್ನು ತಾವು 'ಜ್ಞ' ಸತ್ತೆಯ ಒಳಗೆ ಅಡಗಿದ ಅನ್ವಯಕಾರಿ ಶಕ್ತಿಯ ಮಾಧ್ಯಮದಿಂದ ತಿಳಿಯುತ್ತೇವೆ.

ಈ ಅಂತರ್ನಿಹಿತ ಅನ್ವಯಕಾರೀ ಶಕ್ತಿಗಳು 'ಜ್ಞ' ಶಕ್ತಿಯಿಂದ ಬೇರೇನೂ ಅಲ್ಲ. ಹೇಗೆಂದರೆ, ಮಾವಿನಹಣ್ಣು ಎಂದೊಡನೆ, ಅದರ ತೊಗಟೆ, ತಿಳಲು, ರಸ, ಗೊರಟ ಇತ್ಯಾದಿ ಎಲ್ಲವನ್ನೂ ನಾವು ಗ್ರಹಿಸುತ್ತೇವೆ. ಅದೇ ರೀತಿ, 'ಜ್ಞ' ಸತ್ತೆ ಎಂದೊಡನೆ, ಅದರ ಸಾಕ್ಷಿತ್ವ, ವಿಶ್ವದ ಮೂಲ ಕಾರಣವಾಗಿ ಅದರ ಪಾತ್ರ, ಅದರ ಗುಣಗಳು ಅಥವಾ ಆಂತರ್ನಿಹಿತ ಶಕ್ತಿಗಳು ಮತ್ತು ಅದರ ಮೇಲೆಯೇ ಈ ಶಕ್ತಿಗಳ ಕ್ರಿಯೆ ಇತ್ಯಾದಿಗಳಲ್ಲಿ ಒಳಗೊಳ್ಳುತ್ತವೆ. ಈ ವಿಶ್ವದ ಅಭಿವ್ಯಕ್ತಿಗಳೆಲ್ಲ ಈ ಒಂದು ಮತ್ತು ಪರಮ ಜ್ಞ–ಸತ್ತೆಯ ವಿಭಿನ್ನ ಅಭಿಪ್ರಕಾಶಗಳಾಗಿವೆ. ಆದ್ದರಿಂದಲೇ ಈ ಶ್ಲೋಕದಲ್ಲಿ ಮೊತ್ತ ಮೊದಲು "ಏಕಂ ಜ್ಞಾನಂ" ಎಂದು ಹೇಳಲಾಗಿದೆ.

"ಅನಿತ್ಯಾಶುಚಿ ದುಃಖಾನಾತ್ಮನಂ ನಿತ್ಯಶುಚಿ ಸುಖಾತ್ಮಖ್ಯಾತಿರವಿದ್ಯಾ". ಯಾವ ದೋಷಪೂರ್ಣ ಮಾನಸಿಕತೆಯಿಂದ ಬದ್ಧನಾದ ಮಾನವನು, ಅನಿತ್ಯವನ್ನು ನಿತ್ಯವೆಂದೂ, ಅಶುಚಿಯಾದುದನ್ನು ಶುಚಿಯೆಂದೂ, ದುಃಖಿವನ್ನು ಸುಖಿವೆಂದೂ ಮತ್ತು ಅನಾತ್ಮವನ್ನು (non-Spiritualistic) ಆತ್ಮಿಕ (Spritualistic) ಎಂದೂ ಬಗೆಯುವುನೋ, ಅದಕ್ಕೆ ಅವಿದ್ಯೆ ಎನ್ನುತ್ತಾರೆ. ಇನ್ನು ಅನಿತ್ಯ ಎಂದರೆ ಯಾವುದು? ಯಾವುದು ಯಾವಾಗಲೂ ಅಸ್ತಿತ್ವದಲ್ಲಿಲ್ಲವೋ, ಯಾವುದು ಕಾಲದಿಂದ ಬಾಧಿತವಾಗುವುದೋ, ಯಾವುದು ವ್ಯವಚ್ಛಿನ್ನವಾಗಿದೆಯೋ ಅದಕ್ಕೆ ಅನಿತ್ಯವೆನ್ನುತ್ತಾರೆ. ಇದಕ್ಕೆ ವಿಪರೀತವಾಗಿರುವುದೇ ನಿತ್ಯ. ಅಂದರೆ ಕಾಲದಿಂದ ವ್ಯವಚ್ಛಿನ್ನವಾಗದಿರುವುದು, ಆಪೇಕ್ಷಿಕ ಅಂಶಗಳಾವ ದೇಶ, ಕಾಲ ಮತ್ತು ಪಾತ್ರಗಳಿಂದ ಆಭಾಧಿತವಾದುದು, ನಿತ್ಯವೆನಿಸುತ್ತದೆ. ಅಂದರೆ ಅದು ಹಿಂದೆ ಹೇಗೆ ಇದ್ದಿತೋ ಹಾಗೆಯೇ ಇಂದೂ ಇರುತ್ತದೆ; ಮುಂದೆಯೂ ಇರುವುದು.

ಬರುಹೋಗುವ ಈ ಜಗತ್ತಿನಲ್ಲಿ ಯಾವುದು ಬರುವುದೋ ಅದು ಹೋಗುತ್ತದೆ.

"ಏಈ ದಿನ ಆಸೇ ಏಈ ರಾತ ಆಸೇ ಭಾಈ
ಯಾರಾ ಆಸೇ ತಾರಾ ಸಬಾಈ ಚಲಿಯಾ ಜಾಯ,
ಮನೇರ ಮುಕುರೇ ಮೃದುರೇಖಾ ರೇಖೇ ಜಾಯ."

ದಿನವೂ ಬರುತಿದೆ; ಬರುವುದು ರಾತ್ರಿ
ಬಪ್ಪದು ಯಾವುದೊ, ಹೋಗುತಲಿಪ್ಪದು.
ಮನಕನ್ನಡಿಯಲಿ ಮೆತ್ತಗೆ ರೇಖೆಯ
ತಪ್ಪದೆ ಮುದ್ರೆಯ ಒತ್ತುತಲಿಪ್ಪದು.

ಈ ಪೃಥ್ವಿಯು ಅನಂತ ಗತಿಗಳ ಚಿತ್ರವಾಗಿದೆ. ಕಾಮನ ಬಿಲ್ಲಿನ ಬಣ್ಣ ಬಣ್ಣಗಳ ಸಮೂಹವಾಗಿದೆ. ಇದನ್ನು ಕಂಡು, ತನಗೆ ನಿತ್ಯವಸ್ತು ಪ್ರಾಪ್ತವಾಯಿತೆಂದು ಯಾರಾದರೂ ಭಾವಿಸಿದರೆ ಇಲ್ಲವೆ ಈ ಬಣ್ಣದ ಬೆಡಗಿನಿಂದ ನಿಶೆಯೇರಿದರೆ, ಅವರು ದೊಡ್ಡ ತಪ್ಪನ್ನೆಸಗುತ್ತಾರೆ. ಮಾನವನ ಮನಸ್ಸು ಇಹದ ಚಿಕ್ಕಪುಟ್ಟ ಅಣ್ವಂಶಗಳತ್ತ ಆಕರ್ಷಿತವಾಗುತ್ತದೆ. ಮತ್ತು ಅವುಗಳನ್ನೇ ಅಪ್ಪಿಕೊಂಡು ಆತ್ಮತೃಪ್ತಿಯ ಮಾರ್ಗ ಅರಸತೊಡಗುತ್ತದೆ. ಆದರೆ ತೃಪ್ತಿಯ ಉಪಲಬ್ಧಿಗಿಂತ ಬಹುಪೂರ್ವದಲ್ಲಿಯೇ, ಆ ಚಿಕ್ಕಪುಟ್ಟ ಅಣ್ವಂಶಗಳು, ಆ ಬಣ್ಣದ ಸಡಗರಗಳೆಲ್ಲ. ಶೂನ್ಯದಲ್ಲಿ ಮಾಯವಾಗುತ್ತವೆ. ಕೊನೆಗೆ ಅವರು ಕಣ್ಣಿಲ್ಲದ, ಕಬಂಧ ರಕ್ಕಸನಂತೆ, ದಿಕ್ಕುಗಾಣದೆ, ಹಾಹಾಕಾರ ಮಾಡುತ್ತ ಗೋಳಾಡಬೇಕಾಗುತ್ತದೆ. ಇದೇನು ವಿಧಿಲಿಖಿಯಲ್ಲ; ಇದು ವಿಶ್ವದ ನಿಯಮವಷ್ಟೇ.

ಅವಿದ್ಯೆ ಅರ್ಥಾತ್ ಈ ದೋಷಪೂರ್ಣ ಮನೋಭಾವವು ಮಾನವನಿಗೆ ಅನಿತ್ಯವನ್ನೇ ನಿತ್ಯವೆಂದು ಬೋಧಿಸುತ್ತದೆ. ಮತ್ತು ದಿಕ್ಕೆಟ್ಟ ಮಾನವನು, ಕೆಲವೊಮ್ಮೆ ತಿಳಿದೂ ತಿಳಿದು, ಕೆಲವೊಮ್ಮೆ ತಿಳಿಯದೆ, ಆ ಮೃಗತೃಷ್ಣೆಯ ಬೆನ್ನುಹತ್ತಿ ಹೋಗುತ್ತಾನೆ. ಕೊನೆಗೆ ತುಂಬಾ ಹತಾಶೆಗೊಂಡು, ತನ್ನ ಅಮೂಲ್ಯ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಾನೆ. ಈ ಯಾವ 'ಜ್ಞ' ಸತ್ತೆಯಿದೆಯೋ, ಯಾವುದು ಸಮಸ್ತ ಸತ್ತೆಗಳ ಜ್ಞೇಯ ತತ್ತ್ವವಾಗಿದೆಯೋ, ಅದು ಕೇವಲ ನಿತ್ಯವಾಗಿದೆ. ಆದ್ದರಿಂದ ಯಾವುದೇ ನಿತ್ಯವಸ್ತು ಪ್ರಾಪ್ತಿಗಾಗಿ ಈ ಜಗತ್ತಿನ ಕ್ಷುದ್ರ ಸುಖಿಭೋಗವನ್ನು ಬೆಂಬತ್ತಿ ಓಡಕೂಡದು. ಪ್ರತಿಯಾಗಿ ಆ ನಿತ್ಯಾನಂದ ಸತ್ತೆಯನ್ನೇ ತನ್ನ ಜೀವನದ ಏಕಮೇವ ಲಕ್ಷ್ಯವೆಂದು ಅರಿತು, ತನ್ನ ಸಮಸ್ತ ವೃತ್ತಿಗಳನ್ನು ಅತ್ತ ಹರಿಸಬೇಕು. ಅನಿತ್ಯವನ್ನು ನಿತ್ಯವೆಂದು ತಿಳಿದು ತನ್ನ ಸಾಮರ್ಥ್ಯವನ್ನು ಯಾವುದೇ ರೂಪದಲ್ಲಿಯೂ ಹಾಳು ಮಾಡಿಕೊಳ್ಳಬಾರದು.

ಪ್ರತಿಯೊಂದು ಸೃಷ್ಟ ವಸ್ತುವೂ ಸಾಂತವಾಗಿದೆ. ಸಾಂತದ ನಡುವೆ ಇದ್ದುಕೊಂಡು, ಸಾಂತ ಅಣುಮನದ ಸಹಾಯದಿಂದ, ಅನಂತದ ಭಾವ–ಗ್ರಹಣವು, ಸೈದ್ಧಾಂತಿಕವಾಗಿ ಸಹ ಸಂಭವನೀಯವಿಲ್ಲ; ಇನ್ನು ಪ್ರಯೋಗ ಭೂಮಿಯಲ್ಲಿ ಸಂಭವಿಸುವ ಮಾತಂತೂ ದೂರವೇ ಉಳಿಯಿತು. ಯಾವಾಗ ಮನಸ್ಸು ಅನಂತದ ಭಾವನೆಯಲ್ಲಿ ಮೈಮರೆಯುವುದೋ, ಆಗ ಸಾಂತ ಮನವು ತನ್ನ ಇತಿಮಿತಿಯನ್ನು ಅತಿಶಯಿಸುತ್ತದೆ; ಮತ್ತು ಅಪಾರ ಶಾಂತಿ ಸ್ಥಿತಿಯಲ್ಲಿ ಮೈಮರೆಯುತ್ತದೆ. ಈ ಅತಿಶಯಿಸುವಿಕೆಯೇ ಪರಮ ಪ್ರಶಾಂತಿಯಾಗಿದೆ; ಪರಮ ಪ್ರಾಪ್ತಿಯಾಗಿದೆ.

ಪ್ರತಿಯೊಂದು ಸಾಂತ ಸತ್ತೆಗೆ ಆದಿಯೂ ಇದೆ; ಅಂತ್ಯವೂ ಇದೆ. ಅಂದರೆ ಅದಕ್ಕೆ ಆದಿಬಿಂದುವಿದೆ; ಅಂತ್ಯ ಬಿಂದುವೂ ಇದೆ. ಈ ಆದಿ ಅಂತ್ಯಗಳ ನಡುವೆ

ಮಧ್ಯಬಿಂದುವೂ ಇವೆ. ಯಾವುದಕ್ಕೆ ಆದಿ ಇದೆಯೋ ಅದಕ್ಕೆ ಅಂತ್ಯವೂ ಇರಲೇಬೇಕು. ಹೀಗಾಗಿ ಅವರ ಮಧ್ಯಬಿಂದುವೂ ಇರುತ್ತದೆ. ಆದರೆ ಯಾವುದು ಅನಾದಿಯಾಗಿದೆಯೋ ಅದು ಅನಂತವೂ ಆಗಿದೆ. ಅನಾದಿಯು ಯೋಗವು ಅನಂತದೊಂದಿಗೆ ಆಗದು. ಹೀಗಾಗಿ ಅಲ್ಲಿ ಸಹಜವಾಗಿ ಮಧ್ಯಬಿಂದುವೂ ಇರಲಾರದು. A point (.) has a position, but no magnitude. ಆದಿಬಿಂದುವಿಗೆ ಸ್ಥಾನ (position) ವಿದೆ. ಅಂತ್ಯ ಬಿಂದುವಿಗೂ ಸ್ಥಾನವಿದೆ. ಮತ್ತು ಮಧ್ಯಬಿಂದುವಿಗೂ ಸ್ಥಾನವಿದೆ. ಆದರೆ ಯಾವುದಕ್ಕೆ ಸೀಮಾರೇಖೆಯೇ ಇಲ್ಲವೋ ಅದರ ಆದಿಬಿಂದುವೂ ಕಾಣಬರದು; ಅಂತ್ಯಬಿಂದುವೂ ಕಾಣಬರದು. ಮತ್ತು ಮಧ್ಯಬಿಂದುವೂ ಕಾಣಬರದು. ಆದ್ದರಿಂದ ಅದರ ಪರಿಮಾಣದ ಪ್ರಶ್ನೆಯೇ ಏಳದು.

ಯಾವುದೊಂದು ಸಾಂತ ವಸ್ತುವಿನ ಜ್ಞಾತೃವು ಅನಂತತೆಯ ಜ್ಞಾತೃವಾದಾಗ, ಅದು ಶಬ್ದ ಮತ್ತಿತರ ಗುಣಗಳಿಲ್ಲದಾಗಿ ವಿಷಯ ರಹಿತವಾಗುತ್ತದೆ. ಸಾಂತ ವಸ್ತುಗಳ ಧೂಳಿ ಮುತ್ತಿದ ಈ ಧರಾತಲದ ಮೇಲೆ ಕುಳಿತುಕೊಂಡಾಗಲೂ ಸಹ, ಮಾನವನ ಮನಸ್ಸಿನಲ್ಲಿ ಅನಂತದ ಬಣ್ಣದ ಮುದ್ರೆ ಮೂಡಬಹುದು. ಅನಂತದ ಆವೇಶಕ್ಕೊಳಗಾಗಬಹುದು. ಆದರೆ ಕೇವಲ ಇಂಥ ಹೃದಯಭಾವನೆಯಿಂದ ಪೂರ್ಣಾನುಭೂತಿ ಲಭಿಸದು. ಆದ್ದರಿಂದ, ಎಲ್ಲ ಜ್ಞಾನಿಗಳು, ಎಲ್ಲ ತಪಸ್ವಿಗಳು, ಎಲ್ಲ ಬ್ರಹ್ಮವೇತ್ತರು, ಪರಮ ಪುರುಷನಲ್ಲಿ ಆತ್ಮ-ಸಮರ್ಪಣೆ ಮಾಡಿಕೊಳ್ಳದೆ ಪರಮ ಸಂಪ್ರಾಪ್ತಿಯ ಬೇರಾವ ಮಾರ್ಗವೂ ಇಲ್ಲವೆಂದು ಒಗ್ಗೂರಲಿನಿಂದ ಘೋಷಿಸುತ್ತ ಬಂದಿದ್ದಾರೆ. ಆದ್ದರಿಂದ ಈ ಜ್ಞ-ಪುರುಷನನ್ನು ಕುರಿತು "ಆದ್ಯಂತ ಶೂನ್ಯಮ್" ಎಂದು ಹೇಳಲಾಗಿದೆ.

ಸತ್ವ, ರಜಸ್ ಮತ್ತು ತಮಸ್ ಎಂಬೀ ಮೂರು ಗುಣಗಳ ಐಂಧನದ ಮೂಲಕ ಸೃಷ್ಟಿಗೊಂಡುದನ್ನು 'ವಸ್ತು' ಎಂದು ಕರೆಯುತ್ತಾರೆ. ಯಾವುದರಲ್ಲಿ ಈ ಮೂರು ಗುಣಗಳ ಬಂಧನವಿಲ್ಲವೋ ಅದನ್ನು 'ಅ-ವಸ್ತು' ಎನ್ನುತ್ತಾರೆ. 'ಜ್ಞ' ಸ್ವರೂಪವು ಪರಮಸತ್ತೆಯಾಗಿದೆ. ಅಲ್ಲಿ ವಿಷಯಗಳಿಲ್ಲ. ಆದ್ದರಿಂದ ಅದು 'ಅ ವಸ್ತು' ಆಗಿದೆ. ವಿಷಯದಿಂದೊಡಗೂಡಿದ್ದರೆ ಅದು ವಸ್ತುವಾಗುತ್ತದೆ. ಅಂದ ಮೇಲೆ 'ಜ್ಞ-ಸತ್ತೆಯು' ಎಂಥ ವಸ್ತು?

ವಸ್ತುವು ಸ್ಫುಟವಾಗಿರಲಿ, ಅಸ್ಫುಟವಾಗಿರಲಿ, ಅದರ ಗುಣಗಳಂತೂ ಇರಲೇಬೇಕಷ್ಟೇ. ಯಾವ ವಸ್ತುವು ಗುಣಗಳನ್ನು ಹೊಂದಿದ್ದರೂ ಆ ಗುಣಗಳು ಅಸ್ಫುಟವಾಗಿರುವವೋ ಮತ್ತು ಜೀವಿಗಳಿಂದ ಇಂದ್ರಿಯ ಗ್ರಾಹ್ಯವಾಗಿರುವುದಿಲ್ಲವೋ, ಅಂಥ ವಸ್ತುವನ್ನು ಸದ್ವಸ್ತು ಎನ್ನುತ್ತಾರೆ. ಮತ್ತು ಯಾವಾಗ ಅದು ಇಂದ್ರಿಯಗ್ರಾಹ್ಯತೆ ಇಲ್ಲವೆ ಪರಿಕಲ್ಪನೆಯ ಅಳವಿನಲ್ಲಿ ಬರುವುದೋ ಆಗ ಅದಕ್ಕೆ 'ಪದಾರ್ಥ' ಎನ್ನುತ್ತಾರೆ. ಮಾನವ ಮನೀಷೆಯು ಇಂದ್ರಿಯ ಗ್ರಾಹ್ಯತೆಗಿಂತ ಬಹಳ ಊರ್ಧ್ವದ ವರೆಗೆ ಹೋಗುತ್ತದೆ ಇಲ್ಲವೆ ಹೋಗಬಲ್ಲದು. ಆದ್ದರಿಂದ ಅನೇಕ ಜ್ಞಾನಿಗಳು ಐದು ಕರ್ಮೇಂದ್ರಿಯ ಮತ್ತು ಐದು ಜ್ಞಾನೇಂದ್ರಿಯಗಳಲ್ಲದೆ ಮನವನ್ನು ಸಹ ಹನ್ನೊಂದನೆಯ ಇಂದ್ರಿಯವಾಗಿ ಪರಿಗಣಿಸಿದ್ದಾರೆ. ಅಂದರೆ, ಮನೀಷೆಯ ಪ್ರಕೃತಿಯು ಸೂಕ್ಷ್ಮತ್ವ ವರ್ಧನೆಯ ಕ್ರಮದಲ್ಲಿ, ಅಜ್ಞಾತ ಸದ್ವಸ್ತುವನ್ನು ಜ್ಞಾತ ಇಲ್ಲವೆ ಅರ್ಧ-ಜ್ಞಾತ ಪದಾರ್ಥಗಳಲ್ಲಿ

ರೂಪಾಂತರಗೊಳಿಸುತ್ತದೆ. ಈ ರೂಪಾಂತರಣ ಕ್ರಮದಿಂದಾಗಿ, ಪ್ರಕೃತಿಯು ಎರಡೂ ದಿಶೆಯಲ್ಲಿ ಸಾಗುತ್ತದೆ. ಆದ್ದರಿಂದ ಅದನ್ನು 'ಉಭಯ ಪ್ರವಾಹಿನಿ' ಅರ್ಥಾತ್ ಸ್ಥೂಲತ್ವದತ್ತ ಸಾಗಬಹುದು ಇಲ್ಲವೆ ಸೂಕ್ಷ್ಮತ್ವದತ್ತ ಸಾಗಬಹುದು. ಎಂದು ಕರೆಯುತ್ತಾರೆ. ಮತ್ತು ಯಾವಾಗ ಪದಾರ್ಥವೇ ಕಾಲಾನುಕ್ರಮದಲ್ಲಿ, ಜ್ಞಾತ್ಯಸತ್ತೆಯಲ್ಲಿ ರೂಪಾಂತರವಾಗುವುದೋ, ಆಗ ಪ್ರಾಕೃತ ಭಾವವು ನಿವೃತ್ತಿಗೊಂಡಿತ್ತೆಂದು ನಾವು ಹೇಳುತ್ತೇವೆ. ಈ ಕಾರಣದಿಂದಾಗಿಯೇ ಪ್ರಕೃತಿಯನ್ನು ನಿತ್ಯನಿವೃತ್ತಾ ಎನ್ನುತ್ತಾರೆ.

'ವಸ್ತುಸತ್ಯಂ' ಎಂದರೆ ಸತ್ಯ ವಸ್ತು. ಈಗ ಪ್ರಶ್ನೆಯೆಂದರೆ, ಸತ್ಯವಸ್ತು ಮತ್ತು ಸದ್ವಸ್ತು ಎರೆಡೂ ಒಂದೇ ಆಗಿವೆಯೋ ಇಲ್ಲವೋ, ಎಂಬುದಾಗಿದೆ. ನಮ್ಮೀ ಜಗತ್ತು, ಕಾರ್ಯತಃ ಸದ್ವಸ್ತು, ಮೂಲತಃ ಸದ್ವಸ್ತು ಮತ್ತು ತೋರಿಕೆಯ ಸದ್ವಸ್ತು ಈ ಮೂರನ್ನು ಒಳಗೊಂಡಿದೆ. ಇವುಗಳಲ್ಲಿ ಮೂಲತಃ-ಸದ್ವಸ್ತುವು ಇಂದ್ರಿಯ ಗ್ರಹಣೆಗೂ ಅತೀತವಾಗಿದೆ ಮಾನಸಿಕ ಕಲ್ಪನೆಗೂ ಅತೀತವಾಗಿದೆ. ತೋರಿಕೆಯ ಸದ್ವಸ್ತುವು ಇಂದ್ರಿಯ ಗ್ರಾಹ್ಯವಾಗಿದೆ. ಅದನ್ನು ನಾವು ಮನೀಷೆಯ ವಿಶ್ಲೇಷಣೆಯಿಂದೆ ಮತ್ತು ವೈಜ್ಞಾನಿಕ ಅವಿಷ್ಕಾರದಿಂದ ಪದಾರ್ಥದಲ್ಲಿ ರೂಪಾಂತರಿಸಬಲ್ಲೆವು. ಇನ್ನು ಮೂಲತಃ ಸದ್ವಸ್ತುವು ಮನೀಷೆಯ ಅಳವಿನಲ್ಲಿ ಬರುತ್ತಿದ್ದರೂ, ಇಂದ್ರಿಯ ಗ್ರಹಣದ ಎಲ್ಲೆಯಲ್ಲಿ ಬರುವುದಿಲ್ಲ. ನಾವದನ್ನು ಅನುಭವಿಸಬಹುದು. ಆದರೆ ಪದಾರ್ಥದಲ್ಲಿ ರೂಪಾಂತರಿಸಲಾರೆವು. ನಾವದನ್ನೂ ಮೂಲತಃ-ಸದ್ವಸ್ತುವಿನಂತೆಯೇ ಹೃದಯದ ಸೂಕ್ಷ್ಮ ಭಾವನೆಯೊಂದಿಗೆ ಅನುಭವಿಸಬಲ್ಲೆವು ಆದರೆ ಅದನ್ನು ಲೋಕಾಯತ ತತ್ತ್ವದಲ್ಲಿ ತರಲಾರೆವು. ನಾವದನ್ನು ಲೋಕಾಯತ ತತ್ತ್ವದಲ್ಲಿ ತರಬೇಕಾದರೆ ನಮ್ಮ ಇಡೀ ಅಸ್ತಿತ್ವವನ್ನು ಲೋಕೋತ್ತರ ತತ್ತ್ವದಲ್ಲಿ ಪರ್ಯವಸಾನಗೊಳಿಸಬೇಕಾಗುತ್ತದೆ. ಮೂಲತಃ-ಸದ್ವಸ್ತುವನ್ನು ಪ್ರಾಪ್ತಿ ಮಾಡಿಕೊಳ್ಳಬೇಕಾದರೆ ತನ್ನ ಸತ್ತಾ ಬೋಧವನ್ನು ಪ್ರತ್ಯಕ್(ಪ್ರತೀಚಂ ಅರ್ಥಾತ್ ವಿಪರೀತಂ ಅಂಚತಿ ಆಥಾ ವಿಜಾನಾತಿ ಇತ್ಯರ್ಥೇ ಪ್ರತಿ-ಅಕ್-ಪ್ರತ್ಯಕ) ಸತ್ತೆಯಲ್ಲಿ ಲೀನಗೊಳಿಸಬೇಕು. ವಿಷಯರಹಿತವಾದ ಅವಸ್ತುವೇ ಸತ್ಯವಸ್ತುವಾಗಿದೆ.

ಆದರೆ ಮೂಲತಃ ಸದ್ವಸ್ತುವು ವಸ್ತುವಾಗಿದ್ದರೂ ಅದು ಅವಸ್ತುವಿಗೆ ನಿಕಟವಿದೆ. ಇನ್ನುಳಿದ ವಸ್ತುಗಳಲ್ಲಿ ಕೆಲವು ಮಾನಸಿಕ ಕಲ್ಪನೆಗೆ ಎಟುಕುತ್ತದೆ. ಬೇರೆ ಕೆಲವು ಮಾನಸಿಕ ಕಲ್ಪನೆಗೆ ಎಟುಕುವುದಲ್ಲದೆ ಇಂದ್ರಿಯ ಗ್ರಾಹ್ಯವೂ ಆಗಿವೆ.

ಪರಿಣಾಮಕ್ಕೊಳಗಾಗದ ಸದ್ವಸ್ತುವನ್ನು ಹೊರತುಪಡಿಸಿ ಬೇರಾವುದನ್ನೂ, ವಸ್ತು ಜಗತ್ತಿನಲ್ಲಿ, ಸತ್ಯವೆನ್ನಲಾಗದು.ಒಂದು ವೇಳೆ, ಇದರ ಹೊರತು ಬೇರೊಂದನ್ನು ಸತ್ಯವೆಂದು ಬಗೆದರೆ, ಅನವಸ್ಥೆಯ ದೋಷ ಉಂಟಾಗುತ್ತದೆ. ದೈವೀ ಪ್ರಜ್ಞೆಯಲ್ಲಿ ಅಸ್ತಿತ್ವದ ಸಂಕಟ ಉಂಟಾಗುತ್ತದೆ. ಆದ್ದರಿಂದಲೇ "ನಾನ್ಯತ್ ಕಿಂಚಿತ್ ವರ್ತ್ತತೇ ವಸ್ತು ಸತ್ಯಮ್" (ವಸ್ತು-ಸತ್ಯದ ಹೊರತು ಬೇರಾವುದೂ ಇರದು.)

ಇಂದ್ರ ಎಂದರೆ ಕರ್ಮಕ್ಷೇತ್ರದಲ್ಲಿ ಪ್ರಧಾನಪಾತ್ರದಲ್ಲಿರುವವನು. ಈ ಅರ್ಥದಲ್ಲಿ ದೇವತೆಗಳ ರಾಜನನ್ನು ಸಹ ಇಂದ್ರ ಎನ್ನುತ್ತಾರೆ. ದೊಡ್ಡ ಶಾಲ ವೃಕ್ಷವನ್ನು 'ಇಂದ್ರ ತರು' ಎನ್ನುತ್ತಾರೆ. ತನ್ನ ಅಸ್ತಿತ್ವವನ್ನು ಕ್ರಿಯಾನ್ವಯಗೊಳಿಸುವಲ್ಲಿ ಪ್ರಧಾನ ಪಾತ್ರ

ವಹಿಸಿದುದಕ್ಕೆ ಇಂದ್ರಿಯ ಎನ್ನುತ್ತಾರೆ. ಇದರಿಂದ ಇಂದ್ರಿಯಗಳು ಸಾಮೂಹಿಕ ಸತ್ತೆಯ ತನ್ಮಾತ್ರೆಗಳ ಗ್ರಹಣ ಮತ್ತು ವರ್ಜನ ಕಾರ್ಯಗಳನ್ನು ಮಾಡುತ್ತವೆ. ಬಂಧನ ಶಕ್ತಿಗಳ ಪ್ರಭಾವದಿಂದ 'ಜ್ಞ' ಸತ್ತೆಯಲ್ಲಿ ಉಂಟಾಗುವ ಸ್ಪಾಂದನಿಕ ಭಾವಧಾರೆಯನ್ನು ಗ್ರಹಿಸುವ ಮತ್ತು ವರ್ಜಿಸುವ ಕಾರ್ಯವನ್ನು ಈ ಇಂದ್ರಿಯಗಳು ಮಾಡುತ್ತವೆ. ಸೃಷ್ಟಿಚಕ್ರದ ಪ್ರತಿಸಂಚರ ಧಾರೆಯಲ್ಲಿ, ಇಂದ್ರಿಯಗಳು ಈ ಅನ್ವಯ ಕ್ರಿಯೆಯನ್ನು ವೃದ್ಧಿಗೊಳಿಸುವ ಅಧಿಕಾರ ಹೊಂದುತ್ತವೆ. ಇಂದ್ರಿಯಗಳ ಈ ಕ್ರಿಯಾಧಿಕಾರವೇ ಅವುಗಳ ಉಪಾಧಿಯಾಗಿದೆ. ಅರ್ಥಾತ್ ಇಂದ್ರಿಯ ಸಮೂಹದಲ್ಲಿ ಉಪಾಧಿ ಇರುವ ಕಾರಣದಿಂದಾಗಿಯೇ ಒಂದು 'ಜ್ಞ' ಸತ್ತೆಯು ಅಸಂಖ್ಯ ಅಣುಸತ್ತೆಗಳಿಗೆ ಅಸಂಖ್ಯ ರೂಪಗಳಿಂದ ರೂಪಾಯಿತವಾಗುತ್ತದೆ. ಇದರಿಂದಾಗಿಯೇ ಹೀಗೆ ಹೇಳಿದ್ದಾರೆ.

"ರೂಪಾತೀತ ನೋ ಈ ಪ್ರಭು.
ಲಾಖೋ ರೂಪ ದೇಖಾ ಓಲೋ
ಅಬ್ ಹಮ್ ಕೇಕರಾ ಹೇರಿ"

* * *

ರೂಪಾತೀತ ನೀನಿಹೆ ಪ್ರಭು,
ಲಕ್ಷಲಕ್ಷ ರೂಪವ ತೋರ್ಪೆ,
ನಾನಾವುದನು ಈಕ್ಷಿಸಲೀಗ?

ಈ 'ಜ್ಞ' ಸತ್ತೆಯ ಅಸಂಖ್ಯ ಊಹ–ಅವರೋಹಗಳ ಸಂಬಂಧದಿಂದ ಅಸಂಖ್ಯ ಅಣುಸಂರಚನೆಗಳುದಿಸುತ್ತವೆ. ಮತ್ತು ಅವು ಒಂದೆಡೆಗೆ ಸೃಷ್ಟಿಯ ಪ್ರತಿಯೊಂದು ಚರಣದಲ್ಲಿ ಅವಿಶ್ರಾಂತ ಪ್ರಾಣಶಕ್ತಿಗೆ ಮತ್ತು ಇನ್ನೊಂದೆಡೆಗೆ, ಏಕವಾಗಿರುವ ಅವನನ್ನು ಅನೇಕ ಎಂದು ಬಯುವ ತಪ್ಪು ಕಲ್ಪನೆಗೆ ಇಂಬುಗೊಟ್ಟಿವೆ. ಈ ತಪ್ಪಿನಿಂದಾಗಿಯೇ ಒಂದೆಡೆ ಜೀವನದ ಸರ್ವ ಸುಮಧುರತೆಯೂ ಇನ್ನೊಂದೆಡೆ, ಸುತೀಪ್ರ, ಜೀಳು ಕಡಿತದ ಚುಚ್ಚುವಿಕೆಯೂ, ಮತ್ತು ಮರ್ಮಭೇದಿಯಾದ ಆರ್ತನಾದವೂ ಇವೆ. ಆದ್ದರಿಂದ ನಾವು ಏಕದಲ್ಲಿ ಅನೇಕವನ್ನು ಕಾಣುತ್ತೇವೆ. ಅವುಗಳಲ್ಲಿ ಪೂರ್ಣತೆ ಇರಬಹುದು; ಅಪೂರ್ಣತೆ ಇರಬಹುದು. ಅವುಗಳಲ್ಲಿ ಸಿಹಿಯಿರಬಹುದು; ಕಹಿ ಇರಬಹುದು. ಇದೆಲ್ಲ ಇಂದ್ರಿಯ ಸಮೂಹಗಳ ವಿಶೇಷ ಪಾತ್ರದಿಂದಾಗಿ, ಉಪಾಧಿಯ ಕಾರಣದಿಂದಾಗಿ 'ತಯೋರ ಭೇದೋ ಸ್ಮಿನ ಇಂದ್ರಿಯೋಪಾಧಿನಾ ವೈ'.

ಮಾನವ ಜೀವನದ ಮೊದಲ ಸ್ತರದಲ್ಲಿ, ಯಾವಾಗ ಜನರು, ರೂಪ-ರಸ-ಗಂಧ ಸ್ಪರ್ಶ ಇತ್ಯಾದಿ ತನ್ಮಾತ್ರೆಗಳ ಸುಂದರ ವರ್ಣಮಯ ಧಾರೆಯನ್ನು ಕಾಣುವರೋ, ಆಗ ತತ್‌ಕ್ಷಣ ಅವುಗಳತ್ತ ಆಕರ್ಷಿತರಾಗುತ್ತಾರೆ. ಇಡೀ ವಿಶ್ವವೇ ಅನೇಕಾನೇಕ ವರ್ಣಗಳ ವೈಭವಯುತ ಸಾಲು–ಪಯಣಿಗರಂತೆ ತೋರುತ್ತದೆ. ಈ ದೃಶ್ಯವು ಅವರ ಇಂದ್ರಿಯಗಳನ್ನು ಸೆರೆಹಿಡಿಯುತ್ತದೆ. ಮತ್ತು ಅವರ ಮನವು ಅದನ್ನೇ ಜೀವನದ ಲಕ್ಷ್ಯವೆಂದು ಬಗೆದು, ಅವುಗಳ ಬೆಂಬತ್ತಿ ಧಾವಿಸುತ್ತದೆ. ಈ ನಯನಮನೋಹರ ವಾದ–ಪ್ರಪಂಚದ ದೃಶ್ಯವು ಜನರನ್ನು ಪ್ರಥಮ ಸ್ತರದಲ್ಲಿ, ಆಂತರಿಕ ಜಗತ್ತಿನಿಂದ ಬಾಹ್ಯ ಜೀವನದತ್ತ ಪ್ರಚೋದಿಸುತ್ತದೆ. ಆ ಹಂತದಲ್ಲಿ ಯಾರಾದರೂ ಅವರಿಗೆ

ಆಂತರಿಕ ಜಗತ್ತಿನತ್ತ ಸಾಗಲು ಹೇಳಿದರೆ, ಅವರು ಉದ್ವಿಗ್ನಗೊಳ್ಳುತ್ತಾರೆ. ಕೋಪೋದ್ರಿಕ್ತರಾಗುತ್ತಾರೆ. "ನಾನಿಲ್ಲಿ ಚೆನ್ನಾಗಿದ್ದೇನೆ" ಎಂದವರು ತಿಳಿಯುತ್ತಾರೆ. ತಮ್ಮ ಮನದ ಬಣ್ಣವನ್ನು ಇತರರ ಬಣ್ಣದೊಂದಿಗೆ ಮೇಳವಿಸುತ್ತ, ಹಸಿರು ಹುಲ್ಲಿನ ವೆತ್ತನೆಯ ಹಾಸುಗೆಯ ಮೇಲೆ ಅಲೆಯುತ್ತ, "ಈ ಎಲ್ಲ ವಸ್ತುಗಳು ನನಗಾಗಿಯೇ ಇವೆ" ಎಂದವರು ನುಡಿಯುತ್ತಾರೆ.

ಕೀ ಕಥಾ ಉಠೇ ಮರ್ಮರಿಯಾ ಬಕುಲತರು–ಪಲ್ಲವೇ
ಭ್ರಮರ ಉಠೇ ಗುಂಜರಿಯಾ ಕೀ ಭಾಷಾ
ಊರ್ಧ್ವಮುಖೇ ಸೂರ್ಯಮುಖೀ ಸ್ಮರಿಭೇ ಕೋನವಲ್ಲಭೇ
ನಿರ್ಝರಿಣೇ ಬಹಿಭೇ ಕೋನ ಪಿಪಾಸಾ.

* * *

ಬಕುಳ ಗಿಡದ ರೆಂಬೆ ತಮ್ಮೊಳು
ಪಿಸುಗುಡುತಿಹ ಕಾರಣವರಿಯೆ.
ಕರಿಯದುಂಬಿ ರ್ಝೇಂಕರಿಸುವ
ಗುಂಜರವದ ಭಾಷೆಯರಿಯೆ.
ಅಧೋಮುಖದ ಸೂರ್ಯಮುಖೀ
ಯಾವ ಪತಿಯ ನೆನೆಯುತಲಿಹುದೊ?
ಹಂಗದಂಥ ಪಿಪಾಸೆ ಮತ್ತೆ
ಹರಿವ ಝರಿಗೆ ಯಾವುದಿಹುದೋ?

ಈ ಜಡಮುಖೀ ಅಸ್ತಿತ್ವವು ಮಾನವ ಜೀವನದ ಪ್ರಥಮ ಸ್ತರವಾಗಿದೆ. ಈ ಸ್ತರದಲ್ಲಿ ಮಾನವನು ತನ್ನ ಇಡೀ ಸತ್ತೆಯಿಂದ ಒಂದೇ ಒಂದು ಮಾತನ್ನು ಹೇಳುತ್ತಾನೆ. ಅದೆಂದರೆ "ನಾನು ಇದ್ದೇನೆ. ನಾನು ಮಾತ್ರ ಇದ್ದೇನೆ"

ಜಡ ಜಗತ್ತು ಕೋಮಲ–ಕಠೋರಗಳ ಸೂಕ್ಷ್ಮ ಮಿಶ್ರಣವಾಗಿದೆ.

ಗೋಲಾಪ ಸುಂದರ ಅತಿ, ಸಂಕಟಕ ವೃಂತೇ ಫೋಂಟ
ನಿರ್ಝರ ಸುಂದರ ಗತಿ, ರೂಕ್ಷಗಿರಿ ಪಥೇ ಛೋಟೆ
ಕಮಲ ಸುಗಂಧೇ ಭರಾ ಜನಮೆ ಪಂಕಿಲ ಸರೆ,
ಭ್ರಮೆ ಜೀವ ಪೂರ್ಣ ಧರಾ ಜೀವ ಶೂನ್ಯ ಕ್ಷಪರೆ ।

* * *

ಅರಳಿವೆ ಸುಂದರ ಗುಲಾಬಿಯು
ಚುಚ್ಚುವ ಮುಳ್ಳಿನ ಮಧ್ಯದಲಿ,
ನಯನವ ತಣಿಸುವ ನೀರರ್ಝರಿ
ಹರಿದಿದೆ ಬೆಟ್ಟದ ಕೊರಕಿನಲಿ.
ಸುಗಂಧ ಸೂಸುವ ಕಮಲಗಳು
ಕೆಸರಲಿ ಅರಳಿವೆ ಸರಸಿಯಲಿ.
ಜೀವಿಗಳಾಗರ ಧರೆ–ಭ್ರಮಣ
ಜೀವಿಗಳಿಲ್ಲದ ಕಕ್ಷೆಯಲಿ.

ಆಘಾತ ಪ್ರತ್ಯಾಘಾತಗಳಿಗೆ ಈಡಾದ ಮಾನವರು ಚಿಂತನೆಗೆ ತೊಡಗುತ್ತಾರೆ. ದುಃಖದ ಬಾಧೆಯು ಅವರನ್ನು ಕಾರ್ಯ–ಕಾರಣತತ್ತ್ವ ವಿಶ್ಲೇಷಣೆ ಹಚ್ಚುತ್ತದೆ. ಅವರ ನೊಂದ ಹೃದಯಗಳು ಅವರಿಗಿಂತ ದೊಡ್ಡವರ ಸಾಂತ್ವನವರಮಾತು ಕೃತಿಗಳಿಂದ ತಮ್ಮ ಅಳಲನ್ನು ಅಳಿಯಬಯಸುತ್ತಿವೆ. ಈ ಚಿಂತನದ ಫಲವಾಗಿ ತಮ್ಮ ಕ್ಷುದ್ರ ಆತ್ಮಕ್ಕಿಂತ ಮಹತ್ತರ ಸತ್ತೆಯೊಂದಿದೆಯೆಂಬ ಸತ್ಯವನ್ನು ಅವರು ಕಂಡುಕೊಳ್ಳುತ್ತಾರೆ. ಆ ಸತ್ತೆಯೊಂದಿಗೆ ಅವನ ಸಂಪರ್ಕವು ಹೇಗಾದರೂ ಇರಲೊಲ್ಲದೇಕೆ? ಆ ಸತ್ತೆಯು ಅವನಿಗೆ ದೊರೆಯಲಿ ಬಿಡಲಿ, ಏನೇ ಆದರೂ ಅವನು ಅದರಿಂದ ಸ್ವಲ್ಪವಾದರೂ ಪಡೆಯಲು ಬಯಸುತ್ತಾನೆ. ಆಗ ಅವನು 'ತ್ರಾಹಿ ಮಾಮ್; ಪಾಹಿ ಮಾಮ್' ನನ್ನನ್ನು ಉಳಿಸು. ನನ್ನನ್ನು ರಕ್ಷಿಸು; ಎಂದು ಮೊರೆಯಿಡುತ್ತಾನೆ.

ಅನಂತರ ಅವನು ತನ್ನ ಮನದ ಮಾತನ್ನು ಬದಲಿಸುತ್ತಾನೆ. ಮತ್ತು 'ನಾನೂ ಇರುವೆ. ಪ್ರಭು. ನೀನು ಇರುವೆ' ಎನ್ನಹತ್ತುತ್ತಾನೆ. ಈ ಬಯಕೆ ಮತ್ತು ಅದರ ಪೂರ್ತಿಗಳು ಅವನ ಮನದ ಅತೃಪ್ತಿಯನ್ನು ದೂರಗೊಳಿಸಲಾರವು. ಹೊರಜಗತ್ತಿನ ಹಸಿರು ಸೂಸುವ ಸೊಬಗು ಅವನ ಒಳಜಗದ ಮರುಭೂಮಿಯನ್ನು ತೊಯ್ಯಿಸದು. ವಾಸನೆಗಳ ಒಣ-ಬೀಜಗಳು ಅಂಕುರಿಸುವುದಿಲ್ಲ. ಆಗ ಇನ್ನೂ ಒಳಗೆ, ಇನ್ನಷ್ಟು ಆಳಕ್ಕೆ ಹೋಗಬೇಕೆಂದು ಅವನು ಅರಿತುಕೊಳ್ಳುತ್ತಾನೆ. ಸಮಾಧಾನದ ಸುಳಿವು ಇನ್ನೂ ಒಳಗಿದೆ, ಎಂದು ಅನುಭವಿಸುತ್ತಾನೆ. ಅದರ ಖಿಡಕಿ ಬಾಗಿಲುಗಳು ಮುಚ್ಚಿವೆ. ಅಲ್ಲಿ ವಾತಾವರಣವು ಕೆಟ್ಟಿದೆ. ಆ ಸುಳಿವಿನ ಶೋಧದಲ್ಲಿ ಅವನು ಹೆಜ್ಜೆ ಹೆಜ್ಜೆ ಒಳಸೇರುತ್ತಾನೆ. ಆದರೆ ಸರಿಯಾದ ರಸ್ತೆಯ ಗುರುತು ಸಿಗದು. ಸಾಲೋಕ್ಯದ ಸರಿಯಾದ ಹಾದಿಯೂ ಸಿಗದು. ಇನ್ನು ಸಾಯುಜ್ಯದ ಮಾತಂತೂ ದೂರವೇ ಉಳಿಯಿತು. ತಮ್ಮ ಮನೋವ್ಯಥೆಗಳನ್ನೆಲ್ಲ ಒಂದುಗೂಡಿಸಿ, ಅವರು ತಮ್ಮ ನೋವಿನ ಅಶ್ರುಧಾರೆಯನ್ನು ಸುರಿಸತೊಡಗುತ್ತಾರೆ. ಮತ್ತು ಹಣೆ ಗಟ್ಟಿಸುತ್ತ ತಾವರಿಯದ ದೇವರನ್ನು ಕುರಿತು ಹೀಗೆ ಹೇಳುತ್ತಾರೆ.

ವೃಥಾ ಜನ್ಮ ಗೋವಾಯ ಲೂ
ಹೇನ ಪ್ರಭು ನ ಮಜಲೂ
ಖೋಯಾ ಅಲೂ ಸೋಹ ಗುಣನಿಧಿ।
ಹಮಾರ ಕರಮ ಮಂದ
ನ ಮಿಲಲ ವಿಕ ಬೂಂದ
ಪ್ರೇಮ ಸಿಂಧುರಸಕ್ ಅವಧಿ,

* * *

ವೃಥಾ ಜನ್ಮ ಕಳೆಯಿತು
ಮಹಾ ಪ್ರಭುವ ಭಜಿಸದೆ,
ಕರ್ಮ ಮಂದವಾಯಿತು
ಗುಣ ನಿಧಿಯ ಪಡೆಯದೆ,

ದೊರೆಯದಾಯ್ತು ಅಮೃತ ಬಿಂದು
ಹರಿದರೇನು ಪ್ರೇಮ ಸಿಂಧು?

ಆ ಜ್ಞ ಸತ್ತೆಯೇ ಚರಮ ಸತ್ತೆ. ಅದರಾಚೆಗೆ ಯಾವುದೂ ಇಲ್ಲ. ಹತಾಶನಾದ ಮಾನವನ ಹೃದಯ ವೇದನೆಯನ್ನು ಆ 'ಜ್ಞ' ಸತ್ತೆಯೂ ಸಹೃದಯತೆಯಿಂದ ಅನುಭವಿಸುತ್ತದೆ. ಮತ್ತು ಆ ತ್ರಸ್ತ ಜೀವಿಗಳಿಗೆ ಸ್ನೇಹಸ್ನಿಗ್ಧ ಬೆಳಕಿನ ಹಾದಿ ತೋರುತ್ತದೆ. ಆಗ ಮೊದಲು ಹತಾಶಗೊಂಡ ಜನರು ಆನಂದೋಲ್ಲಾಸದಿಂದ ಪುಳಕಿತರಾಗಿ,'ಪ್ರಭು. ನೀನೂ ಇರುವೆ; ನಾವೂ ಇರುತ್ತೇವೆ' ಎಂದು ಘೋಷಿಸುತ್ತಾರೆ.

ಮಾನವನು ಆಂತರಿಕ ಜಗತ್ತಿನತ್ತ ನಡೆಯುತ್ತಿರುತ್ತಾನೆ. ವಸುಧೆಯ ಹೊರ ಹೊರಗಿನ ರಸ ಸೂಸುವ ಸುಂದರತೆಯು ಅವನ ಮನವನ್ನೀಗ ಪುಳಕಿತಗೊಳಿಸದು. ರೂಪ ವರ್ಣಗಳ ರ್ಯುಗರ್ಯುಗಿಸುವಿಕೆಯಾಗಲಿ, ಅವುಗಳ ತೊಳಗಿ ಬೆಳಗುವ ಆಕರ್ಷಣೆಯಾಗಲಿ, ಅವರ ಮನದ ಅಂತರಾಳದಲ್ಲಿ ಇನ್ನಾವ ಪ್ರತಿವೇದನೆಯನ್ನೂ ಹುಟ್ಟಿಸದು. ವರ್ಣಮಯ ಜಗತ್ತಿನ ಕಾಂತಿಯು ಅವರ ಅಂತರ್ಜಗತ್ತಿನ ಹೊಂಬೆಳಕಿನಲ್ಲಿ ಸೇರಿ ಒಂದಾಗುತ್ತದೆ. ಹೇಗೆಂದರೆ–

"ಪ್ರಸಾದ ಬಲೇ ಯಾ ಛಿಲೀ ಭಾಈ ತಾಈ ಹಬಿರೇ ನಿಡೇನ ಕಾಲೇ,
ಯೇಮನ ಜಲೇರ ಬಿಂಬ ಜಲೇ ಉದಯ ಜಲ ಹಯೇ ಸೇ
ಮಿಶಾಯ ಜಲೇ".

* * *

ಆದಿಯೊಳೆಂತೋ ಅಂತ್ಯದೊಳಂತೆ
ಪ್ರಸಾದ ನುಡಿವನು; ನೀನಿಹೆಯಂತೆ.
ನೀರಿನ ಮೇಲಣ ಗುಳ್ಳೆಯು ತಾನು
ನೀರೊಳು ಸೇರುವ ಪರಿಯನು ಕಾಣು.

ಇನ್ನೂ ಮುಂದೆ.

ಜಲ ಮೇ ಕುಂಭ ಹೈ
ಕುಂಭ ಮೇ ಜಲ ಹೈ
ಬಾಹರ ಭೀತರ ಪಾನೀ
ಘಾಟಾ ಕುಂಭ ಜಲ ಜಲ ಹೀ ಸಮಾನಾ
ಯಹ ತತ್ತ್ವ ಭೂಲ್ಯೋ ಜ್ಞಾನೀ।

* * *

ಜಲದಲಿ ಕುಂಭ
ಕುಂಭದಿ ಜಲವು
ಒಳಹೊರ ಬಳಸಿದೆ ನೀರು.
ಕುಂಭವು ಒಡೆಯೆ
ಜಲ ಜಲ ಒಂದೆ.
ತಿಳಿಯೈ ತತ್ತ್ವದ ಬೇರು

ಇಂದ್ರಿಯಗಳು ಬಾಹ್ಯಜಗತ್ತಿನಿಂದ ತನ್ಮಾತ್ರೆಗಳನ್ನು ಗ್ರಹಿಸುವುದಾಗಲಿ, ವರ್ಣಿಸುವುದಾಗಲಿ ಮಾಯೆಯ ಆಟದಂತೆ ತೋರಿಬರುತ್ತದೆ. ಬಾಹ್ಯ ಜಗತ್ತು ಅಂತರ್ಜಗತ್ತಿನಲ್ಲಿ ಲೀನವಾಗುತ್ತದೆ. ಮತ್ತು ಅಂತಿಮವಾಗಿ, ಏಕಸತ್ತೆಯಾಗಿ ಉಳಿಯುತ್ತದೆ. "ನೀನು ಇರುವಿ. ಕೇವಲ ನೀನೇ ಇರುವಿ".

ಆದ್ದರಿಂದ, "ಜ್ಞಾನಸ್ಯಾಯಂ ಭಾಸತೇ ನಾನ್ಯಥೈವ". (ಈ ಜ್ಞಾನ ಮಾತ್ರ ಹೊಳೆಯುತ್ತದೆ; ಬೇರಾವುದೂ ಅಲ್ಲ.)

ಪಾಟಣಾ ೨೮–೬–೧೯೮೨

ಪ್ರವಚನ ೧೨

ಶಿವಬೋಧೆ—೨

ಶಿವೋಪದೇಶ–೨

ಆತ್ಮಜ್ಞಾನಂ ವಿದುರ್ಜ್ಞಾನಂ ಜ್ಞಾನಾನ್ಯನ್ಯಾನಿ ಯಾನಿ ತು
ತಾನಿ ಜ್ಞಾನಾವ ಭಾಸಾನಿ ಸಾರಸ್ಯ ನೈವ ಬೋಧನಾತ್

(ಆತ್ಮ ಜ್ಞಾನವೇ ನಿಜವಾದ ಜ್ಞಾನವು. ಇನ್ನಿತರ ಜ್ಞಾನಗಳೆಲ್ಲ ಕೇವಲ ಜ್ಞಾನದ ಛಾಯೆಗಳಷ್ಟೇ. ಅವುಗಳೇನೂ ಆತ್ಮಬೋಧೆಯತ್ತ ಕರೆದೊಯ್ಯುವುದಿಲ್ಲ.)

ಆತ್ಮ ಜ್ಞಾನವೇ ನಿಜವಾದ ಜ್ಞಾನವು. ಈಗ ಪ್ರಶ್ನೆಯೆಂದರೆ, ಜ್ಞಾನವಾವುದು? ಪ್ರಾಚೀನ ಸಂಸ್ಕೃತದ ಜಿಜ್ಞಾ (ಜ್ಞಾ) ಧಾತುವಿನಿಂದ ಕೃದರ್ಥದಲ್ಲಿ ಅನಟ ಪ್ರತ್ಯಯ ಹಚ್ಚಿ, ಜ್ಞಾನ ಶಬ್ದೋತ್ಪತ್ತಿಯಾಗಿದೆ. ಈ 'ಜಿಜ್ಞಾ' ಧಾತುವೇ ಪ್ರಾಚೀನ ಲ್ಯಾಟಿನದಲ್ಲಿ 'ಕಿ–ಜ್ಞಾ' ಮತ್ತು ಆದೇ ಮೇರೆಗೆ 'ಕೇನ' (keno) ದಲ್ಲಿ ರೂಪಾಂತರಗೊಂಡಿದೆ. ಈ keno ದ (ಕೇನದ) ರೂಪಾಂತರವೇ ಇಂಗ್ಲೀಷಿನಲ್ಲಿ know (ನೊ) ಶಬ್ದವಾಗಿದೆ. ಪ್ರಾಚೀನ ಲ್ಯಾಟಿನದ keno (ಕೇನ) ಶಬ್ದದಲ್ಲಿ k (ಕೆ) ಅಕ್ಷರವು ಇದೆಯೆಂದೇ ಇಂಗ್ಲೀಷಿನ know (ನೊ) ಶಬ್ದದಲ್ಲಿ, k (ಕೆ) ಉಚ್ಚರಿಸದಿದ್ದರೂ ಅದನ್ನಿರಿಸಿಕೊಳ್ಳಲಾಗಿದೆ.

ಈಗ ತಿಳಿಯುವಿಕೆಯ ಪ್ರಕ್ರಿಯೆಯು ಯಾವುದು? Subjectivisation of objectivities is the faculty of knowing ಎಂದು ಹೇಳುತ್ತಾರೆ. ಅಂದರೆ, ವಿಷಯಗಳ ಆತ್ಮಸ್ಥೀಕರಣವನ್ನೇ ಜ್ಞಾನ ಕ್ರಿಯೆ ಎನ್ನುತ್ತಾರೆ. ಯಾವ ಸತ್ತೆಯು ಈ ಅಂತಃಕರಣಿಕ ಅಧಿಗ್ರಹಣವು ನಡೆಯುತ್ತಿರುವುದೋ, ಆ ಸತ್ತೆ ಇಲ್ಲವೆ ಸತ್ತಾ ಸಮೂಹವನ್ನು ಬಹಿಃಕರಣ (objectivity) ವೆನ್ನುತ್ತಾರೆ.

ಈಗ ನಮ್ಮೆದುರಿನ ಪ್ರಶ್ನೆಯೆಂದರೆ, ಮಾನಸ ಜಗತ್ತಿನ ಸತ್ತೆಯೊಂದನ್ನು ಬಹಿಃಕರಣವೆಂದು ಸ್ವೀಕರಿಸಿ, ಅದನ್ನು ಆ ಬಳಿಕ ಆತ್ಮಸ್ಥೀಕರಿಸಬಲ್ಲೆನೇ? (Subjectivise) ಅಥವಾ ಇಲ್ಲವೇ? ಸಂಭವವಂತೂ ಇದ್ದೇ ಇದೆ. ಅಸ್ತಿತ್ವಿಕ ನಾನು ಭಾವನೆಗೆ, ಬಹಿರ್ಜಗತ್ತಿನ ಸರ್ವಸತ್ತೆಗಳು ಜ್ಞಾನ–ಶಕ್ತಿಯ ಅಳವಿನಲ್ಲಿ ಬರುತ್ತವೆ. ಆದರೆ ಈ ಅಸ್ತಿತ್ವಿಕ 'ನಾನು' ತನಗಿಂತ ಮಹತ್ತರವಾದುದನ್ನೇನಾದರೂ ನೋಡಬಲ್ಲುದೇ? ಇದು ಮನೋವಿಜ್ಞಾನದ ಒಂದು ಜಟಿಲ ಪ್ರಶ್ನೆಯಾಗಿದೆ.

ಅಸ್ತಿತ್ವದ ಸೂಕ್ಷ್ಮತಮ ಬೋಧವೇ ಮಾನಸ ಜಗತ್ತಿನ ಪ್ರಥಮ ಸ್ತರವಾಗಿದೆ ಆದಿಭ್ರೂಣವಾಗಿದೆ. ಮತ್ತು ಚಿತಿಶಕ್ತಿಯು ಮನದ ಪ್ರಥಮ ಸ್ತರದ ಕ್ರಿಯಾರೂಪದ ಸಾಕ್ಷೀ ಸತ್ತೆಯಾಗಿದೆ. 'ನಾನು ಇದ್ದೇನೆ' ಎಂಬುದನ್ನು ನಾನು ತಿಳಿಯುತ್ತೇನೆ. ಈ 'ನಾನು ಇದ್ದೇನೆ' ಇದರ 'ನಾನು', ಕರ್ತೃಕಾರಕದಲ್ಲಿದೆ. ಮತ್ತು ಇದುವೇ ಮನೋಭೂಮಿಯ ಆದಿಭ್ರೂಣವಾಗಿದೆ. ಪ್ರಥಮ ಸ್ತರವಾಗಿದೆ. ಈ ಯಾವ ಇದ್ದೇನೆ ಇಲ್ಲವೆ 'ಅಸ್ತಿ' ಇದೆಯೋ, ಇದರ ಸಾಕ್ಷಿಯು 'ನಾನು ತಿಳಿಯುತ್ತೇನೆ' ಇದರ ಕರ್ತೃ ಪದವಾದ 'ನಾನು'ವಿನಲ್ಲಿದೆ. ಹೀಗೆ ಸ್ಪಷ್ಟವಾಗಿ ಕಾಣಬರುವುದೇನಂದರೆ, ಆದಿಭ್ರೂಣದ ಸಾಕ್ಷಿ ಸತ್ತೆಯಾದ ಚಿತಿಸತ್ತೆಯು ಆದಿಭ್ರೂಣಕ್ಕಿಂತ ಸೂಕ್ಷ್ಮತರವಾಗಿರುತ್ತದೆ. ಮತ್ತು ಸಮಗ್ರ ರೂಪದಿಂದ ನೋಡಿದಾಗ ಸೂಕ್ಷ್ಮತಮ ಸತ್ತೆಯಾಗಿದೆ. ಮನದ ಸ್ತರದ ಅರ್ಥಾತ್ ಆದಿಭ್ರೂಣದ ಸಾಕ್ಷಿತ್ವವು ಚಿತಿಶಕ್ತಿಯಲ್ಲಿ ಇರಬಹುದು; ಇರಲಿಕ್ಕಿಲ್ಲ. ಸಾಕ್ಷಿತ್ವ ಇರುವುದಾದರೆ, ಸ–ಕಲ ಚಿತಿಸತ್ತೆಯಾಗುತ್ತದೆ; (manifested consciousness) ಸಾಕ್ಷಿತ್ವ ಇಲ್ಲವಾದರೆ, ನಿಷ್ಕಲ ಚಿತಿಸತ್ತೆಯಾಗುತ್ತದೆ.

ಈ ಸಕಲ ಚಿತಿಶಕ್ತಿಯು, ಸಾಕ್ಷಿತ್ವದಿಂದ ಉಪಹತವಾಗಿ ಒಂದು ತೆರನಾದ ಸೈದ್ಧಾಂತಿಕ ಬಂಧನಕ್ಕೊಳಪಡುವುದಾದರೂ, ತ್ರಿಗುಣಗಳಿಂದ ಪ್ರಭಾವಿತವಾಗುವುದಿಲ್ಲ. ಇಲ್ಲಿ ನಾನು ಸ್ಪಷ್ಟಪಡಿಸಬಯಸುವುದೆಂದರೆ, ಗುಣಮೈಕಲ್ಯವೇ ಇರುವುದಿಲ್ಲವಾದುದರಿಂದ ಬಂಧನವು ಬರೀ ಸೈದ್ಧಾಂತಿಕವಷ್ಟೇ ಹೊರತು ಇನ್ನೇನೂ ಅಲ್ಲ. ವಿರಾಟ ಸತ್ತೆಗೆ ಸಂಬಂಧಿಸಿದಂತೆ, ಯಾವಾಗ ಚಿತಿಶಕ್ತಿಯು ಸಾಕ್ಷೀ ಸತ್ತೆಯಾಗಿ ಕ್ರಿಯೆ ಮಾಡುವುದೋ ಆಗ ಅದಕ್ಕೆ ಪ್ರತ್ಯಗಾತ್ಮಾ ಎನ್ನುತ್ತಾರೆ. ಇದು ಗುಣಗಳಿಂದ ಉಪಹತವಾದಾಗ ಸ–ಕಲವೆನಿಸುತ್ತದೆ. ಗುಣಗಳಿಂದ ಉಪಹತವಾಗದಿರುವಾಗ ನಿಷ್ಕಲವೆನಿಸುತ್ತದೆ.

ಈ ಚಿತಿಶಕ್ತಿಯು, ಮನದ ಈ ಪರಮ ಜ್ಞಾತೃವು ಪ್ರಾಯೋಗಿಕ ಕ್ಷೇತ್ರದಲ್ಲಿ ಅದೆಂತು ಜ್ಞೇಯವಾಗಬಲ್ಲದು? ಏಕೆಂದರೆ, ಇದಾದರೋ, ಆದಿಭ್ರೂಣದ ಜ್ಞಾತೃವಾಗಿದೆ. ನಿಜ ಸಂಗತಿಯೆಂದರೆ, ಯಾವಾಗ ಮನದ ಪ್ರಥಮ ಸ್ತರವು, ಅರ್ಥಾತ್ ಆದಿಭ್ರೂಣವು, ಇಲ್ಲವೆ ಅಸ್ತಿತ್ವಿಕ 'ನಾನು', 'ನಾನು ತಿಳಿದಿದ್ದೇನೆ' ಇದರ ಕರ್ತೃವನ್ನು ಕುರಿತು ವಿಚಾರಿಸುವುದೋ, ಆಗ ಅದರ ಅಸ್ತಿತ್ವವು ಅತ್ಯಂತ ಸೂಕ್ಷ್ಮತಮವಾಗುತ್ತದೆ. ಮತ್ತು ಕೊನೆಯಲ್ಲಿ ಚಿತಿಶಕ್ತಿಯಲ್ಲಿ ಲೀನವಾಗುತ್ತದೆ.

"ಮಾಧವ, ಮಾಧವ ಅಣುಖಿನ ಸುಮರಿ
ರಾಧಿಕಾ ಮಾಧವ ಭೇಲಿ.

"ರಾಧಿಕಾ ಅರ್ಥಾತ್ ರಾಧೆಯು ನಿರಂತರವಾಗಿ ಮಾಧವನನ್ನು ನೆನೆನೆನೆದು, ತಾನೇ ಮಾಧವನಾದಳು."

ಈ ರೀತಿ, ನಾವು ನೋಡುತ್ತೇವೆ ಮತ್ತು ಮನಗಾಣುತ್ತೇವೆ. ಏನೆಂದರೆ, ಈ ಚಿತಿಶಕ್ತಿಯನ್ನು ತಿಳಿಯುವುದರ ಅರ್ಥವೆಂದರೆ, ಆ ಚಿತಿಶಕ್ತಿಯಲ್ಲಿಯೇ ಲೀನವಾಗಿ ಹೋಗುವುದು. ಉಪ್ಪಿನ ಗೊಂಬೆಯೊಂದು ಸಾಗರದ ಆಳವಳೆಯಲು ಯತ್ನಿಸುತ್ತದೆ. ಮತ್ತು ಆ ಕ್ರಮದಲ್ಲಿ ಸಾಗರದೊಂದಿಗೆ ಒಂದಾಗುತ್ತದೆ. ಅದು ಮರಳಿ ಬಾರದು. ಮತ್ತು ಇತರರಿಗೆ ಸಾಗರದ ಆಳವಳೆಯುವಾಗಿನ ತನ್ನ ಅನಿಸಿಕೆಗಳನ್ನು ತಿಳಿಸಲಾರದು.

ಸಾಗರದ ಆಳವಳೆಯಲು ಹೋಗಿ ಸಾಗರದೊಂದಿಗೆ ಒಂದಾದುದನ್ನೇ 'ಆತ್ಮಜ್ಞಾನ' ಎನ್ನುತ್ತಾರೆ. ಸೈದ್ಧಾಂತಿಕವಾಗಿ ಈ ಆತ್ಮಜ್ಞಾನವೊಂದೇ ನಿಜವಾದ ಜ್ಞಾನವು. ಇನ್ನಿತರ ಪ್ರಾಪಂಚಿಕ ಕ್ಷೇತ್ರದಲ್ಲಿಯ ಜ್ಞಾನವೆಲ್ಲ ನಿಜವಾದ ಜ್ಞಾನವಲ್ಲ. ಜ್ಞಾನದ ಅವಭಾಸವಷ್ಟೇ. ಇದಕ್ಕೆ ಸಾಮಾನ್ಯವಾಗಿ ವಿದ್ಯೆ ಇಲ್ಲವೆ ವೇದನಕ್ರಿಯೆ ಎಂದು ಕರೆಯುತ್ತಾರೆ. ಇದು ಜ್ಞಾನವಲ್ಲ. ಈ ಲೌಕಿಕವಾದ ತಥಾತಥಿತ ಜ್ಞಾನಕ್ಕೆ 'ವಿದ್' ಧಾತುವಿನ ಬಳಕೆಯೇ ಸರಿಯಾಗಿದೆ. ಅದು ಸಹ ಅನೇಕ ಭಾಗಗಳಲ್ಲಿ, ಅನೇಕ ಚರಣಗಳಲ್ಲಿ ವಿಭಜಿಸಲ್ಪಟ್ಟಿದೆ.

ಇದರ ಮುಖ್ಯ ವಿಭಜನೆಯೆಂದರೆ, ಪರಾವಿದ್ಯೆ ಮತ್ತು ಅಪರಾ ವಿದ್ಯೆ ಎಂದು. ಯಾವುದು ವಿಶ್ಲೇಷಣಾತ್ಮಕ ಅವರೋಹಣದಿಂದ, ಸಂಶ್ಲೇಷಣಾತ್ಮಕ ಅಧಿರೋಹಣದತ್ತ ಸಾಗುವುದೋ ಅದುವೇ ಪರಾವಿದ್ಯೆ. ಇದು ಆತ್ಮಜ್ಞಾನದ ಸುವರ್ಣ ರೇಖೆ ಮುಟ್ಟಲು. ಮಾನವನಿಗೆ ಸಹಾಯಕಾರಿಯಾಗಿದೆ. ಈ ಸುವರ್ಣ ರೇಖೆಯೇ ವಿದ್ಯೆ ಮತ್ತು ಆತ್ಮಜ್ಞಾನಗಳ ಅಭಿನ್ನ ರೇಖೆಯಾಗಿದೆ. ಮತ್ತು ಇಲ್ಲಿಂದ ಚಿತಿಶಕ್ತಿಯ ಸರ್ವಾನುಸ್ಯೂತ ಭಾವಮಯ ಮಾಧುರ್ಯವೇ ತುಂಬಿದೆ.

ಈ ಪರಾವಿದ್ಯೆಯೂ ಸಹ ವಿಭಿನ್ನ ಚರಣಗಳಲ್ಲಿ ವಿಖ್ಯಾತವಾಗಿದೆ. ಮೊದಲನೆಯ ಸ್ತರದಲ್ಲಿ ಮಾನಸಿಕ ಅನುಪಪತ್ತಿಯನ್ನು ದೂರಗೊಳಿಸಲು ಸರ್ವ ಚಿಂತನ ಧಾರೆಗಳ ಅಧ್ಯಯನವು ತುಂಬಾ ಅವಶ್ಯವಾಗಿದೆ. ಎರಡನೆಯ ಸ್ತರದಲ್ಲಿ, ಗಳಿಸಿದ ವಿದ್ಯೆಯ ಉಪಯೋಗ ಪಡೆಯಲಿಕ್ಕೆ ಬೇಕಾದ ಚರ್ವಿತ ಚರ್ವಣ, ಮತ್ತು ಬಹಿಃಕರಣದ ಮತ್ತು ಅಂತಃಕರಣದ ಭಾವ ನಿಯಂತ್ರಣ. ಇನ್ನು ಮೂರನೆಯ ಸ್ತರದಲ್ಲಿ, ಪರಿಪ್ರಶ್ನೆಯ ಮೂಲಕ ಈ ಪರಾವಿದ್ಯೆಯ ಭಿತ್ತಿಯ ಮೇಲೆ ಜೀವನಾದರ್ಶವನ್ನು ದೃಢೀಕರಿಸುವುದು ಮತ್ತು ಅದೇ ರೀತಿ ಚರಮ ಸ್ತರದಲ್ಲಿ 'ಜ್ಞ' ಸತ್ತೆಯಲ್ಲಿ ಆತ್ಮಸಮರ್ಪಣ ಮಾಡಿಕೊಳ್ಳುವುದು.

ಇನ್ನು ಅಪರಾ ವಿದ್ಯೆಯೂ ಸಹ ಅನೇಕ ಸ್ತರಗಳಲ್ಲಿ ವಿಖ್ಯಾತವಾಗಿದೆ. ಜಗತ್ತಿನ ಕಲ್ಯಾಣಕ್ಕೋಸುಗ, ಅನುಪಪತ್ತಿಯನ್ನು ಅರಿತುಕೊಂಡು, ವ್ಯಾಪಕ ಅಧ್ಯಯನ ನಡೆಸುವುದು. ಅದಾದ ಬಳಿಕ, ಆ ಗಳಿಸಿದ ವಿದ್ಯೆಯ ಚರ್ವಿತ ಚರ್ವಣ. ವಿಚಾರ ವಿಮರ್ಶೆ. ಮತ್ತು ಮೂರನೆಯ ಸ್ತರದಲ್ಲಿ ಸಂಪಾದಿಸಿದ ಅಪರಾ ವಿದ್ಯೆಯನ್ನು ಲೋಕ ಕಲ್ಯಾಣಕ್ಕೋಸುಗ, ಕಾರ್ಯಾನ್ವಯಗೊಳಿಸಲು ಹಾದಿ ಹುಡುಕುವುದು.

ನಿಜಾಂಶವೆಂದರೆ, ಪರಾವಿದ್ಯೆಯು ಇನ್ನೂ ಮುಂದಕ್ಕೆ ಅಂದರೆ ಕಾಮ, ಅರ್ಥ, ಧರ್ಮ, ಮೋಕ್ಷ ಎಂಬ ಚತುರ್ವರ್ಗಗಳಲ್ಲಿ ಕೊನೆಯದಾದ ಮೋಕ್ಷದ ಸುವರ್ಣ ದ್ವಾರದ ವರೆಗೂ ಕರೆದೊಯ್ಯುತ್ತದೆ. ಮತ್ತು ಒಂದು ಹೆಜ್ಜೆ ಮುಂದಿರಿಸಿದರೆ, ನೀನೇ ಸ್ವತಃ ಆತ್ಮಜ್ಞಾನದ ಮಧ್ಯೆ ನಿಲ್ಲುವೆ. ನನ್ನ ಅಧಿಕಾರ ಕ್ಷೇತ್ರವು ಇಲ್ಲಿಯತನಕ ಮಾತ್ರ' ಎಂದು ಹೇಳುತ್ತದೆ.

ಪರಾವಿದ್ಯೆಯು ಚತುರ್ವರ್ಗದಲ್ಲಿ ಇನ್ನೊಂದು ಧರ್ಮವನ್ನು ಮಾನವನ ಅಳವಿನಲ್ಲಿ ತರುತ್ತದೆ. ಆದರೆ ಇದರಲ್ಲಿ ಅಪರಾ ವಿದ್ಯೆಯ ಸ್ವಲ್ಪ ಪಾತ್ರವೂ ಇದೆ.

'ಆತ್ಮ ಮೋಕ್ಷಾರ್ಥಂ ಜಗತ್ ಹಿತಾಯ ಚ' ಎಂದು ಜನರು ಹೇಳುತ್ತಾರೆ. ಸಾಧಕರ, ತತ್ತ್ವಜ್ಞಾನಿಗಳ ಈ ಘೋಷಣೆಯಲ್ಲಿ, ವಿಷಯ ಜಗತ್ತಿನೊಂದಿಗೆ ವಿಷಯೀ ಜಗತ್ತಿನ ಮಧುರ ಸಮತೋಲನವಿದೆ. ಈ ಸಮತೂಕದ ಜೀವನಾದರ್ಶಗಳ 'ಆತ್ಮ ಮೋಕ್ಷಾರ್ಥಂ' ಭಾವದ ಅಂತಿಮ ಪರಿಣತಿಯಲ್ಲಿ, ಅರ್ಥಾತ್ ಆತ್ಮಜ್ಞಾನ ತಲುಪುವ ವರೆಗೆ, ಪರಾ ವಿದ್ಯೆಯ ಸಹಾಯವನ್ನು ಪಡೆದುಕೊಳ್ಳಲೇಬೇಕಾಗುತ್ತದೆ. ಇನ್ನು ಈ ಜೀವನಾದರ್ಶದ ಎರಡನೆಯ ಭಾಗವು ಅಂದರೆ 'ಜಗತ್ ಹಿತಾಯ ಚ' ಇದರ ಅನುಷ್ಠಾನದಲ್ಲಿ ಇದಕ್ಕೋಸುಗ ಪರಾವಿದ್ಯೆಯನ್ನು ಮತ್ತು ಅಪರಾವಿದ್ಯೆಯನ್ನು ಅವುಗಳ ಉಪಯೋಗಕ್ಕೆ ತಕ್ಕಂತೆ ಯಥಾಯೋಗ್ಯ ಬಳಕೆ ಮಾಡಬೇಕು.

ಕೇವಲ ಪರಾವಿದ್ಯೆಯನ್ನಷ್ಟೇ ಅನುಸರಿಸುತ್ತ, ಅಷ್ಟರಿಂದಲೇ ಆತ್ಮ ಜ್ಞಾನ ಪ್ರಾಪ್ತ ಮಾಡಿಕೊಳ್ಳುತ್ತೆವೆಂದು ಹೇಳುವವರು ತಪ್ಪು ಮಾಡುತ್ತಿದ್ದಾರೆ. ಏಕೆಂದರೆ, ಕೇವಲ 'ಆತ್ಮ ಮೋಕ್ಷಾರ್ಥಂ' ಗುರಿ ಸಾಧನೆಯಲ್ಲಿ ನಿರತರಾದಾಗ, ಸ್ವಾರ್ಥದ ಕ್ರಿಮಿಗಳು ಅವರ ಮನದಲ್ಲಿ ಹುಟ್ಟಿಕೊಳ್ಳುತ್ತವೆ. ಮತ್ತು ಅಂತಿಮವಾಗಿ ಮಾನವನ ಸರ್ವ ಸುಕುಮಾರ, ಸರ್ವ ಮಾಧುರ್ಯತೆಯ, ಸರ್ವ ಮಾನಸ-ವಿಸ್ತರಣೆಯನ್ನು ಚೂರು. ಚೂರು ಮಾಡಿ, ಅವನನ್ನು ಹಾಹಾಕಾರದ ಕೆಸರಿನಲ್ಲಿ ತಂದು ಚೆಲ್ಲುತ್ತವೆ. ಈ ಕಾರಣದಿಂದ, ಕೇವಲ 'ಆತ್ಮ ಮೋಕ್ಷಾರ್ಥಂ'ವು ಯಾವ ರೂಪದಲ್ಲಿಯೇ ಆದರೂ ಲೆಖ್ಖಿಕ್ಕೆ ಬಾರದು.

ಇನ್ನು, ಯಾರಾದರೂ ಒಂದುವೇಳೆ, ಕೇವಲ 'ಜಗತ್ ಹಿತಾಯ' ಅಂದರೆ ಜಗತ್ತಿನ ಕಲ್ಯಾಣಕ್ಕೋಸುಗವಷ್ಟೇ ಕಾರ್ಯಮಗ್ನರಾದರೆ, ಒಂದು ಮಾತು ನೆನಪಿಡಬೇಕು. ಏನೆಂದರೆ, ಸ್ವಾರ್ಥತ್ಯಾಗಿ ಸೇವೆ ಸಲ್ಲಿಸಬೇಕಾದರೆ, ಸಂಪೂರ್ಣ ಶುದ್ಧ ಮನಸ್ಸು ಬೇಕು. ಸಾಗರದಂಥ ಅಪಾರ ವಿಸ್ತಾರಬೇಕು. ನೀಲ ಗಗನದ ಪ್ರಶಾಂತತೆ ಬೇಕು. ಯಾವುದೋ ವಿಷಮ ಗಳಿಗೆಯಲ್ಲಿ, ಮನದಲ್ಲಿ ಸ್ವಾರ್ಥಪೂರ್ಣ ಆಸೆ ಮೊಳೆಯಬಹುದು. ಮತ್ತು ತತ್ಫಲವಾಗಿ ತನ್ನ ಕಾಲಮೇಲೆ ತಾನೇ ಕಲ್ಲು ಹಾಕಿಕೊಳ್ಳುವನಲ್ಲದೆ ವಿಶ್ವಕ್ಕೂ ಅಪಾಯವನ್ನೊಡ್ಡಬಹುದು. ಹೀಗೆ ಆತ್ಮ ಸಾಕ್ಷಾತ್ಕಾರದ ಗುರಿಯಿರಿಸಿಕೊಳ್ಳದವರು, ಜಗತ್ತಿನ ಕಲ್ಯಾಣವನ್ನೂ ಸಹ ಪೋಷಿಸಿ ಬೆಳೆಸಲಾರರು.

ಆದ್ದರಿಂದಲೇ ಶಿವನು, 'ಆತ್ಮ ಮೋಕ್ಷಾರ್ಥಂ ಜಗತ್ ಹಿತಾಯ ಚ' ಎಂದು ಪ್ರತಿಪಾದಿಸಿದ್ದಾನೆ. ಈ ಆತ್ಮ ಜ್ಞಾನಕ್ಕಾಗಿ ನಿರ್ಮಲ ಪರಾವಿದ್ಯೆಯ ಅಗತ್ಯವಿದೆ. ಮತ್ತು 'ಜಗತ್ ಹಿತಾಯ ಚ' ಇದಕ್ಕಾಗಿ, ಪರಾವಿದ್ಯೆಯೊಂದಿಗೆ ಹಿತಕರವಾದ ಅಪರಾ ವಿದ್ಯೆಯ ಮಣಿಕಾಂಚನದ ಸಂಯೋಗವೂ ಬೇಕು. ಜಗತ್ತಿನ ಬೇರೆ ಬೇರೆ ಪ್ರಯೋಜನಕಾರೀ ಕಾರ್ಯಗಳಲ್ಲಿ (ಇವುಗಳಿಗೆ ಕಾಮ ಎಂಬ ಶಬ್ದ ಬಳಸುತ್ತಾರೆ. ಕಾಮವೆಂದರೆ, ಲೈಂಗಿಕ ಒತ್ತಾಸೆ ಎಂದೇ ಯಾವಾಗಲೂ ಅರ್ಥವಲ್ಲ) ಮತ್ತು ಮಾನಸಿಕ ಸ್ಥೈರ್ಯವು ಅಗತ್ಯವಿರುವ ಪ್ರಯತ್ನಗಳಲ್ಲಿ, 'ಅರ್ಥ ವರ್ಗ'ವೂ ಅಗತ್ಯವಿದೆ. ಮತ್ತು ಅರ್ಥ ಪ್ರಾಪ್ತಿಗಾಗಿ ಅಪಾರವಿದ್ಯೆಯೂ ಅನಿವಾರ್ಯವೇ ಸರಿ.

ಹೀಗೆ ನಿಜವಾದ ಅರ್ಥದಲ್ಲಿ ಜ್ಞಾನವೆಂದರೆ ಆತ್ಮಜ್ಞಾನವೇ ಆಗಿದೆ. ಇತರೇತರ ಸಮಸ್ತ ಸಂಗತಿಗಳನ್ನು ನಾವು ತಪ್ಪಾಗಿ ಜ್ಞಾನವೆಂದೇ ಕರೆಯುತ್ತಿದ್ದರೂ, ಸಹ ಅವು

ವಿಶೇಷ ಪ್ರಕಾರದ ವಿದ್ಯೆಗಳಷ್ಟೇ. ಅವು ಪರಾವಿದ್ಯೆ ಇರಬಹುದು. ಇಲ್ಲವೆ ಅಪರಾ ವಿದ್ಯೆ ಇರಬಹುದು. ಯಾವುದೊಂದು ಜೀವಂತ ಸತ್ತೆಯ ದೃಷ್ಟಿಯಿಂದ ನೋಡಿದರೆ, ಅಪರಾ ವಿದ್ಯೆಯನ್ನು ಪೂರ್ಣ ವರ್ಜಿಸಲಾಗದು. ಇನ್ನು ಪರಾವಿದ್ಯೆಯಂತೂ ಜೀವ ಮಾತ್ರರಿಗೆಲ್ಲಿ, ಪರಾಗತಿಯೇ ಆಗಿದೆ. ಈ ಕಾರಣದಿಂದ, ಮನಃ ಪ್ರಾಣಗಳಿಂದ ಅಷ್ಟೇಕೆ ಅಸ್ತಿತ್ವದ ಸರ್ವಸತ್ತೆಗಳಿಂದ–ಪರ್ಯಾವಿದ್ಯೆಯ ಅನುಶೀಲನೆ ನಡೆಯಲೇಬೇಕು. ಆದರೆ ಅದೇ ವೇಳೆಗೆ, ನಡೆಯುವ ಪಥದಲ್ಲಿ ಪಥಿಕನು ಧರೆಯ ಧೂಳಿಯ ಮಲಿನತೆಯ ಕಠೋರತೆಗಳೊಂದಿಗೆ ಹೊಯ್ದಾಡುತ್ತ ಸಾಗಬೇಕಾಗುತ್ತದೆ. ಮತ್ತು ಇದಕ್ಕಾಗಿ ಅಪರಾ ವಿದ್ಯೆಯ ಬಳಕೆಯು ತುಂಬಾ ಅಗತ್ಯವಾಗಿದೆ. ಇತಿಹಾಸ, ಭೂಗೋಲ, ಇತ್ಯಾದಿ ಬೇರೆ ಬೇರೆ ಪ್ರಕಾರದ ಶಾಖೋಪಶಾಖೆಗಳು, ಮನೋವಿಜ್ಞಾನ, ಭೂವಿಜ್ಞಾನ, ಮತ್ತು ಇತರ ಮಾನವೀಯ ವಿದ್ಯೆ(Humanities)ಗಳೆಲ್ಲವನ್ನೂ ಪೋಷಿಸಬೇಕು. ಮಾನವ ಜಾತಿಯ ಜಾಗತಿಕ ಹಿತದ ಮಾತನ್ನು ಲಕ್ಷಿಸಿ, ಸಾಹಿತ್ಯ, ಕಾವ್ಯ, ಮನರಂಜನೆಯ ನಿರ್ದುಷ್ಟ ಸಲ್ಲಾಪ, ಇತ್ಯಾದಿ ಎಲ್ಲವುಗಳ ಉಪಯುಕ್ತ ಉತ್ಸಾಹದೊಂದಿಗೆ, ಮಾನವದ ಹೃಯವಂತಿಕೆಯ ಸರ್ವ ಭಾವನೆಗಳನ್ನು ಸದುಪಯೋಗಿಸಬೇಕು. ಇದರಿಂದ ಮಾತ್ರ ಒಳ್ಳೆಯ ಮನುಷ್ಯನ ನಿರ್ಮಾಣವಾಗುತ್ತದೆ. ಮತ್ತು ಆ ಸಜ್ಜನನ ಪರಾಗತಿಯೆಂದರೆ, ಪರಾಗತಿಯ ಸಹಾಯದಿಂದ, ಪರಮಶ್ರೇಯದತ್ತ ನಡೆಯುತ್ತ, ಆತ್ಮಜ್ಞಾನದಲ್ಲಿ ಪ್ರತಿಷ್ಠಿತವಾಗಿ, ಮಧುರತೆಯ ಸಾಗರದಲ್ಲಿ ಸದಾಕಾಲ ನಿತ್ಯಾನಂದದ ಪರಮಸ್ಥಿತಿ ಸಂಪಾದನೆಯೇ ಆಗಿದೆ. ಇದುವೇ ಮಾನವನ ಜೀವನ. ಇದುವೇ ಮಾನವನ ಜೀವನ ವೇದ.

ಈ ಆತ್ಮಜ್ಞಾನವನ್ನು ಬಿಟ್ಟು, ನಾವು ತಪ್ಪಾಗಿ ಯಾವುದನ್ನು ಜ್ಞಾನವೆಂದು ಕರೆಯುತ್ತೇವೆಯೋ, ಅದು, ವಿದ್ಯೆಯ ಪರಾ ಮತ್ತು ಅಪರಾ ಎಂಬ ಎರಡು ಶಾಖೆಗಳಾಗಿದೆ. ಜ್ಞಾನದ ಅವಭಾಸ (ಸಂಸ್ಕೃತದಲ್ಲಿ 'ಅವಭಾಸ' ಎಂದರೆ ನೆರಳು) ಆಗಿದೆ. ಅವಚ್ಛಾಯೆಯಾಗಿದೆ. ಯಾವುದೊಂದು ಜ್ಯೋತಿರ್ಮಯ ವಸ್ತುವಿನೆದುರು, ಅದಕ್ಕಿಂತ ಜಡತರ ವಸ್ತು ಇಲ್ಲವೆ ಅಲ್ಪ ಜ್ಯೋತಿರ್ಮಯ ವಸ್ತು ಬಂದರೆ, ಆ ವಸ್ತುವಿನ ನೆರಳು ಮೂಡುತ್ತದೆ. ಈ ನೆರಳನ್ನು ಕಂಡು, ವಸ್ತುವಿನ ಸರಿಯಾದ ಊಹೆ ಮಾಡಲಾರೆವು. ಒಂದು ಲೀಚೀ ಗಿಡವನ್ನು ನೋಡಿದಾಗ ಆ ಗಿಡದ ಬಗೆಗೆ ಯಾವ ಭಾವನೆಯುಂಟಾಗುವುದೋ, ಅದು, ಅದರ ನೆರಳನ್ನು ನೋಡಿದಾಗ ಆಗಲಾರದು. ಅಷ್ಟೇಕೆ? ಅದು ಲೀಚೀ ಗಿಡವೋ? ಲಿಂಬೆಯ ಗಿಡವೋ? ಮತ್ತಾವ ಗಿಡವೋ? ಎಂಬುದೂ ಸಹ ಗೊತ್ತಾಗದು.

ಇದು ನೆರಳಿನ ಮಾತಾಯಿತು. ನೆರಳು ಸಹ ಎರಡು ಪ್ರಕಾರದ್ದಿರುತ್ತದೆ. ಒಂದು ಪ್ರತಿಚ್ಛಾಯೆ (umbra), ಇನ್ನೊಂದು ಅವಚ್ಛಾಯೆ (penumbra). ಪ್ರತಿಚ್ಛಾಯೆಯನ್ನು ಕಂಡು ಚಿಕ್ಕಪುಟ್ಟ ಗ್ರಹಿಕೆಗಳನ್ನು ಮಾಡಿಕೊಳ್ಳಬಹುದು. ಆದರೆ ಅವಚ್ಛಾಯೆಯನ್ನು ಕಂಡಾಗ ಅಷ್ಟು ಮಾಡಲೂ ಸಾಧ್ಯವಾಗದು. ಮಹಾಕಾಶದಲ್ಲಿ ಸೂರ್ಯನೆದುರು, ಪೃಥ್ವಿಯಿರುವುದರಿಂದ, ಪೃಥ್ವಿಯ ಯಾವ ನೆರಳು (umbra) ಮಹಾಕಾಶದಲ್ಲಿ ಪ್ರತಿಫಲಿತವಾಗುವುದೋ ಅದನ್ನು ಜ್ಯೋತಿ ವಿಜ್ಞಾನದಲ್ಲಿ 'ರಾಹು'

ಎನ್ನುತ್ತಾರೆ. ಮತ್ತು ಯಾವ ಅವಚ್ಛಾಯೆಯು (penumbra) ಉತ್ಪನ್ನವಾಗುವುದೋ ಅದನ್ನು 'ಕೇತು' ಎನ್ನುತ್ತಾರೆ. ಈ ರಾಹು ಮತ್ತು ಕೇತುಗಳನ್ನು ಜ್ಯೋತಿವಿಜ್ಞಾನದಲ್ಲಿ ಛಾಯಾಗ್ರಹ ಎಂದು ಕರೆಯಲಾಗುತ್ತದೆ. ಅರ್ಥಾತ್ ಇವುಗಳ ಯಾವುದೇ ವಾಸ್ತವಿಕ ಅಸ್ತಿತ್ವವಿರುವುದಿಲ್ಲ. ಆದರೆ, ಇವು ಕೇವಲ ಎರಡು ಪ್ರಕಾರದ ಛಾಯೆಗಳು. ಛಾಯೆ ಮತ್ತು ಅವಚ್ಛಾಯೆ. ಆದ್ದರಿಂದಲೇ ಅವುಗಳನ್ನು ಒಂದರಿಂದ ಇನ್ನೊಂದನ್ನು ಸಪ್ತಮ ಗ್ರಹಗಳ ಅಂತರದ ಮೇಲೆ ಕುಂಡಲಿಯಲ್ಲಿ ಇರಿಸುತ್ತಾರೆ. ಸೌರಗಣನೆಯ ಮೇರೆಗೆ ಯಾವ ಮಾಸದಲ್ಲಿ ಅಥವಾ ಯಾವ ರಾಶಿಯಲ್ಲಿ ಪೂರ್ಣಚಂದ್ರನು ಅದರ ಸಪ್ತಮ ಗ್ರಹದಲ್ಲಿ ಬರುವನೋ, ಆಗ ಅದು ಛಾಯಾವೃತ ವಾಗುವುದು. ಆಗ ಆ ಕಪ್ಪು ಚಂದ್ರನನ್ನು ಕಂಡು 'ಚಂದ್ರಗಹಣ' ಎನ್ನುತ್ತಾರೆ.

ಜೇ ಜೇ ಮಾಸೇರ ಜೇ ಜೇ ರಾಶಿ;
ತಾ ರ ಸಪ್ತಮೇ ಥಾಕೇ ಶಶೀ
ಸೇ ಈ ದಿನ ಯದಿ ಹಯ ಪೂರ್ಣಮಾಸೀ
ಅವಶ್ಯ ಹೀ ರಾಹು ಗ್ರಾಸೇ ರಾಶಿ,

* * *

ಯಾವ ಮಾಸದಲಿ, ಯಾವ ರಾಶಿಯಲಿ
ಸಪ್ತಮದಲಿ ಇರುವ ಶಶೀ.
ಇರಲು ಅಂದು ಮತ್ತೆ, ಪೂರ್ಣಶಶೀ,
ಇರುವುದಂದೆ, ರಾಹುಗ್ರಸ್ತ ರಾಶಿ.

ನಾವು ದೇವಲ ಕೇತು ಇಲ್ಲವೆ ಅವಚ್ಛಾಯೆಯನ್ನು ಕಂಡು ಮೂಲ ವಸ್ತುವಿನ ಬಗೆಗೆ ಯಾವ ಆಭಾಸವನ್ನೂ ಪಡೆಯೆವು. ಇದನ್ನೇ ಅವಭಾಸವೆನ್ನುತ್ತಾರೆ. ಆತ್ಮಜ್ಞಾನವೊಂದನ್ನು ಬಿಟ್ಟು, ನಮಗೆ ಪರಿಚಯವಿರುವ ಇತರ ತಥಾಕಥಿತ ಜ್ಞಾನಗಳಾವವೂ ನಿಜವಾದ ಜ್ಞಾನಗಳಲ್ಲ. ಅವು ಜ್ಞಾನದ ಪ್ರತಿಛಾಯೆಗಳೂ ಅಲ್ಲ. ಅವೆಲ್ಲವೂ ಜ್ಞಾನದ ಕೇವಲ ಅವಚ್ಛಾಯೆ ಇಲ್ಲವೆ ಅವಭಾಸಗಳಾಗಿವೆ. ಅವು ವಸ್ತುಗಳ ಸರಿಯಾದ ಭಾವನೆಯನ್ನು ನೀಡಲಾರವು. ಮತ್ತು ವಸ್ತುವಿನ ಅವಸ್ಥಿತಿಯನ್ನು ಕುರಿತು ಸಹ ಸರಿಯಾದ ನಿರ್ದೇಶನವೀಯಲಾರವು.

"ಯಾ ಶಾಶ್ವತೀ ಕ್ಷೇಮಂಕರೀ ಸಾ ಸಾರಸತ್ತ್ವಾ" ಸ್ಥಾಯೀ ರೂಪದಿಂದ ಯಾವುದು ಜೀವರ ಕ್ಷೇಮ, ಅರ್ಥಾತ್ ಸರ್ವಾತ್ಮಕ ಕಲ್ಯಾಣ ಮಾಡುವುದೋ, ಅದನ್ನೇ ಸಾರಸತ್ತೆಯೆಂದು ಕರೆಯುತ್ತಾರೆ. ಯಾವುದು ಕಲ್ಯಾಣ ಮಾಡುತ್ತಿದ್ದರೂ, ಆ ಕಲ್ಯಾಣವು ಸ್ಥಾಯೀ ರೂಪದ್ದಿರದಿದ್ದರೆ, ಅದು ಸಾರಸತ್ತೆಯೆಂದು ಕರೆಯಲು ಯೋಗ್ಯವಲ್ಲ. ಆದರೆ ಆ ಸಮಸ್ತ ತತ್ತ್ವಗಳನ್ನು ಲೌಕಿಕ ದೃಷ್ಟಿಯಿಂದ 'ಸಾಮಯಿಕ ಸಾರಸತ್ತಾ' ಎಂದು ನಾವು ಕರೆಯಬಲ್ಲೆವಷ್ಟೇ.

ಹೊಲಗದ್ದೆಗಳ ಫಲವತ್ತತೆಯನ್ನು ವರ್ಧಿಸಲು ನಾವು ಹೊಲಗದ್ದೆಗಳಲ್ಲಿ ಬೆರೆಸುವ ವಸ್ತುಗಳೇನೂ ಸ್ಥಾಯೀ ರೂಪದಲ್ಲಿ ಆ ಹೊಲಗದ್ದೆಗಳ ಶಕ್ತಿಯನ್ನು ಹೆಚ್ಚಿಸುವುದಿಲ್ಲವೆಂದು ನಾವು ಅರಿತಿದ್ದರೂ, ನಾವು ಆ ವಸ್ತುಗಳನ್ನು 'ಸಾರ' ಎಂದು

ಕರೆಯುತ್ತೇವೆ. ಗಾಲಿಯ ಅಚ್ಚಿಗೆ, ಅರ್ಥಾತ್ ಚಕ್ರನಾಭಿಗೆ ಸಹ ನಾವು 'ಚಕ್ರಸಾರ' ಎನ್ನುತ್ತೇವೆ. ಯಾವುದಾದರೊಂದು ಭಾಷಣ ಇಲ್ಲವೆ ಪ್ರಬಂಧದ ಮೂಲ ತತ್ತ್ವಗಳ ಸಂಬಂಧದಲ್ಲಿ ಹೇಳುವಾಗ, ಇದುವೇ ಈ ಪ್ರಬಂಧದ ಸಾರ ಎಂದು ನುಡಿಯುತ್ತೇವೆ. ವ್ಹಿಟ್ಯಾಮಿನ ಇರುವ ಖಾದ್ಯವಸ್ತುಗಳಿಗೆ ಶ್ವೇತಸಾರ ಎನ್ನುತ್ತೇವೆ. ಯಾವುದೊಂದು ವಾಕ್ಯ ಇಲ್ಲವೆ ವಾಕ್ಯಾಂಶದ ವ್ಯಾಖ್ಯೆ ಮಾಡಿ ಹೇಳುವಾಗ ಇದುವೇ ಸಾರಾರ್ಥ ಎನ್ನುತ್ತೇವೆ. ಆದರೆ ಈ ಪ್ರಕಾರ, ಯಾವುದೇ ಒಂದು ಕ್ಷೇತ್ರದಲ್ಲಿ 'ಸಾರ' ಶಬ್ದವನ್ನು ಇದ್ದಕ್ಕಿದ್ದ ಹಾಗೆ ಬಳಸಲಾಗದು. ವ್ಯಕ್ತ ಜಗತ್ತಿನಿಂದ ಸಂಶ್ಲೇಷಣದ ಹಾದಿಹಿಡಿದು, ಊರ್ಧ್ವ ಗತಿಯಿಂದ ನಡೆದಾಗ, ಅಪ್ರಯೋಜನಕಾರಿಯಾದ ಮತ್ತು ಅತ್ಯಂತ ಸಾಮಯಿಕ ವಸ್ತುಗಳನ್ನು ತೊರೆದಾಗ ಮಾತ್ರ, ಅಸಾರವನ್ನು ಬಿಟ್ಟು ಸಾರದೆಡೆಗೆ ಮುನ್ನಡೆದಿದ್ದಾನೆನ್ನಬಹುದು. ಇದಾದನಂತರ ಮುದಿ, ಅವಸ್ಥೆಯಲ್ಲಿ, ಪುನಃ ಅಪ್ರಯೋಜನಕಾರಿ ವಸ್ತುಗಳನ್ನು ಬಿಟ್ಟುಕೊಟ್ಟು ಅಧಿಕತರ ಸಾರದತ್ತ ನಡೆಯುತ್ತಾನೆ. ಹೀಗೆ ಮೇಲು ಮೇಲಕ್ಕೆ ಹೋಗಿ, ಲೋಕಾಯತದ ಊರ್ಧ್ವ ಬಿಂದುವಿನಲ್ಲಿ ಬಂದು, ಸಾರ ಸತ್ತೆಯು ಭೂಮಾ ಮನದಲ್ಲಿದೆ ಮತ್ತು ಪರಾಪ್ರಕೃತಿಯಲ್ಲಿದೆ ಎಂದು, ಅರಿಯುತ್ತಾನೆ ಮತ್ತು ವಿಚಾರಿಸುತ್ತಾನೆ.

ಈ ಭೂಮಾ ಮಾನಸಿಕತೆಯು, ಮತ್ತು ಅದೇ ರೀತಿ, ಪರಮ ಪ್ರಕೃತಿಯಲ್ಲಿ ಬಂದು ಮುಟ್ಟಿದ್ದಕ್ಕಾಗಿ, ಪಾರ್ಥಿವ ಸತ್ತೆಯು ಯಾವ ಪ್ರಕಾರದಿಂದಲೂ ಸಹಾಯ ಮಾಡಲಾರದು. ಈ ಕ್ಷೇತ್ರದಲ್ಲಿಯ ಅವಲಂಬನೆಯೆಂದರೆ, ಗುಣಗಳಿಂದ ಉದಿಸಿದ ಅತಿಪಾಕೃತ ಶಕ್ತಿ ಮಾತ್ರವಾಗಿದೆ. ಈ ಶಕ್ತಿಯು ಲೋಕಾಯತ ಜ್ಞಾನದಲ್ಲಿ ಸಿಗದು. ಅದು ಲೋಕೋತ್ತರ ಸಾಧನೆಯಲ್ಲಿ ಮಾತ್ರ ಲಭ್ಯವಾಗಬಲ್ಲದು. ಪರಾಪ್ರಕೃತಿ ಮತ್ತು ಭೂಮಾಮಾನಸಿಕತೆಗಳ ಕ್ಷೇತ್ರದಲ್ಲಿಯೇ ಈ ಸ್ಥಿತಿ ಇದೆಯೆಂದಮೇಲೆ, ಈ ಅವಸ್ಥೆಯಲ್ಲಂತೂ ಪರಮತತ್ತ್ವವು ಉಪಲಬ್ಧವಾಗದು. ಈ ಕಾರಣದಿಂದಾಗಿಯೇ ವಿದಗ್ಧ ಸಾಧಕನು, ಮರ್ಮ-ಧೀ-ಮಹಾಪುರುಷನು, ಹೃದಯವಂತಿಕೆಯ ಮಹಾವೇತ್ತನು, ಈ ಪರಮ ತತ್ತ್ವವನ್ನು, ಗುರುಬ್ರಹ್ಮನನ್ನು, ತಾರಕಬ್ರಹ್ಮನನ್ನು, ಕೇವಲ 'ಸಾರ'ವೆಂದಿಷ್ಟೇ ಕರೆದು ಕೂಡ್ರದೆ, ಸಾರಾತ್ಸಾರ ಎನ್ನುತ್ತಾರೆ.

'ವಂದನಾ ಕರಿಬೊ ಆಮಿ ಗುರು ರೇ ಆಮಾರ,
ಜಿನಿ ಪೂರ್ಣ ಜಿನಿ ನಿತ್ಯ ಜಿನಿ ಸಾರಾತ್ಸಾರ'
ಆಮರ ಗುರುವಿಗೆ ಎನ್ನ ವಂದನಾ
ನಿತ್ಯ ಸಾರಾತ್ಸಾರ ಪೂರಣಾ ॥

ಈ ಸಾರಾತ್ಸಾರ ಸತ್ತೆಯನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದರೆ, ಆತ್ಮಜ್ಞಾನವೇ ಬೇಕು. ಆದರೆ ಈ ಆತ್ಮಜ್ಞಾನವು ಕೇವಲ ಜ್ಞಾನದ ಶುಷ್ಕ ಹಾದಿಯೇ? ಒಂದು ವೇಳೆ, ಯಾರಾದರೂ ಯಾವುದೊಂದು ಸತ್ತೆಯನ್ನು ಪಡೆಯಬೇಕಾದರೆ, ಅವನದನ್ನು ಜ್ಞಾನದಿಂದ ಪಡೆಯಬಲ್ಲನೇ? ಯಾವುದೇ ವಸ್ತು ಸಂಪಾದಿಸಬೇಕಾದರೆ, ಹೃದಯದ ಸರಸತೆಯೂ ಬೇಕು. ಮನೀಷೆಯ ಮಧುರತೆಯೂ ಬೇಕು ಮತ್ತು ಆವೇಗದ ಮುಕ್ತರಸವೂ ಬೇಕು. ಆದ್ದರಿಂದಲೇ ಸಾರಸತ್ತೆ, ಭೂಮಾಮಾನಸಿಕತೆ, ಇಲ್ಲವೆ

ಪರಮಪ್ರಕೃತಿಯನ್ನು ಪಡೆಯುವುದು, ಜ್ಞಾನದ ಸರ್ವಾನುಸ್ಯೂತ ವ್ಯಕ್ತೀಕರಣದ ಮೂಲಕ ಕೊಂಚ ಸಂಭವವಾಗಬಲ್ಲದು. ಆದರೆ ಸಾರಾತ್ಸಾರ ಕ್ಷೇತ್ರದಲ್ಲಿ ಜ್ಞಾನದ ಮಾತನ್ನು ಪೂರ್ಣವಾಗಿ ಬಿಟ್ಟೇಬಿಡಬೇಕಾಗುತ್ತದೆ. ಲೋಕೋತ್ತರ ಜಗತ್ತಿನ ಒಂದು ಧೂಳಿ ಕಣವನ್ನೂ ಸಹ ವಿದ್ಯೆಯ ದುಂದುವ್ಯಯದಿಂದ ಗಳಿಸಲಾರೆವು. ಈ ಸ್ವಲ್ಪ ಮೊದಲು, ನಾನು ಹೇಳಿದಂತೆ, ನಿಮ್ಮ ಮನದ ಮಧುರತೆಯನ್ನು ಮಧುರತಮ ಸತ್ತೆಯಲ್ಲಿ ಸೇರಿಸಿಯೇ, "ನೀನು ಇರುವೆ, ಕೇವಲ ನೀನೇ ಇರುವೆ." ತತ್ತ್ವದ ಸಾಕ್ಷಾತ್ಕಾರವು ದೃಢವಾಗಿ ಪ್ರತಿಷ್ಠಾಪಿತವಾಗುತ್ತದೆ. ಆ ಅಚಲ, ಉತ್ತುಂಗ, ಅಪರಿಮೇಯ ಸತ್ತೆಯಲ್ಲಿ ಅಭಿವೃದ್ಧಿಗೊಳ್ಳುತ್ತದೆ. ಇದರ ಹೊರತು ಬೇರಾವ ಮಾರ್ಗವೂ ಇಲ್ಲ. ಈ ಹೃದಯವಂತಿಕೆಯ ಮಧುರತಮ ನಿಷ್ಕರ್ಷೆಯೇ ಆತ್ಮಜ್ಞಾನವಾಗಿದೆ.

ಪಾಟಣಾ, ೨೫-೬-೧೯೮೨

ಪ್ರವಚನ ೧೩

ಶಿವಬೋಧೆ—೨

ಶಿವೋಪದೇಶ—೩

ನ ಮುಕ್ತಿರ್ತರ್ಪಣಾದ್ಧೋಮಾದುಪವಾಸ ಶತೈರಪಿ ।
ಬ್ರಹ್ಮೈವಾಹಮಿತಿ ಜ್ಞಾತ್ವಾ ಮುಕ್ತೋ ಭವತಿ ದೇಹಭೃತ್ ॥

(ಮುಕ್ತಿಯು ತಪಸ್ಸಿನಿಂದಾಗಲಿ, ಯಜ್ಞಾಚರಣೆಗಳಿಂದಾಗಲಿ, ಮತ್ತು ನೂರಾರು ಉಪವಾಸಗಳಿಂದಾಗಲಿ ಲಭ್ಯವಾಗದು. ದೇಹವಂತರು, 'ನಾನೇ ಬ್ರಹ್ಮ'ವೆಂದು ಅರಿತಾಗ ಮಾತ್ರ ಮುಕ್ತರಾಗುತ್ತಾರೆ.)

ಮುಚ್ ಧಾತುವಿಗೆ ಕ್ತಿನ್ ಪ್ರತ್ಯಯ ಹಚ್ಚಿ ಮುಕ್ತಿ ಶಬ್ದೋತ್ಪತ್ತಿಯಾಗಿದೆ. ಇದರ ಅರ್ಥವೆಂದರೆ 'ಬಿಡುಗಡೆಗೋಸ್ಕರ ಬಂಧನ ಬಿಡಿಸುವ ಆಂತಿಕ ಕಾರಣ'.ಬಂಧನ ಬಿಡಿಸುವ ಪ್ರಶ್ನೆಯು ಯಾರೆದುರು ಇದೆ? ಯಾರ ಕೈಕಾಲು ಕಟ್ಟಿಹಾಕಿದೆಯೋ, ಯಾರ ಅಷ್ಟಾಂಗಗಳು ಗತಿಹೀನವಾಗಿದೆಯೋ, ಯಾರ ಮಾತು ಕಟ್ಟಿಹೋಗಿದೆಯೋ, ಯಾರ ಹೃದಯದ ಭಾವನೆಗಳು ಅದುಮಲ್ಪಟ್ಟಿವೆಯೋ, ಯಾರ ಪ್ರಾಣ ಸಮೂಹವು ಜಗದ ಬಂಡೆಗಲ್ಲಿಗೆ ಜಜ್ಜಿ ಜಜ್ಜಿ ನಷ್ಟವಾಗಿಯೋ, ಯಾರ ಸ್ಥೂಲ ಅಸ್ತಿತ್ವವು ಕಾರಾಗೃಹದ ಸರಳುಗಳ ಹಿಂದೆ ಬದ್ಧವಾಗಿದೆಯೋ, ಯಾರ ಮಾನಸಿಕ ಸತ್ತೆಯು ಭಾವಜಡತೆಯ ಪಂಜರದಲ್ಲಿ ಬಂಧಿಯಾಗಿರುವುದೋ, ಯಾರ ಆತ್ಮವು ಮಧುರತೆಯ ಸುಧೆ ಸವಿಯದೆ ಶುಷ್ಕವಾಗಿದೆಯೋ, ಯಾರ ಋದ್ಧಿ ಪಥವು ಕಲ್ಲು-ಕಂದರಗಳಲ್ಲಿ ದಿಕ್ಕು ಕಾಣದೆ ಭ್ರಷ್ಟವಾಗಿದೆಯೋ, ಅವನೇ ಬದ್ಧ ಮತ್ತು ಅವನೆದುರು ಬಿಡುಗಡೆಯ ಪ್ರಶ್ನೆಯಿದೆ. ಆ ಸರ್ವಾತ್ಮಕ ಬಂಧನ ಬಿಡಿಸುವ ಪ್ರಯತ್ನವೇ ಸಾಧನೆಯಾಗಿದೆ.ಮತ್ತು ಈ ಪ್ರಯತ್ನವು ಯಾವುದರ ಮೂಲಕ ಸಿದ್ಧವಾಗುವುದೋ ಅದುವೇ ವಿಮೋಚನವಾಗಿದೆ.

ಬಂಧನವು ಮೂರು ಪ್ರಕಾರದ್ದಾಗಿದೆಯೆಂದು ಹೇಳುತ್ತಾರೆ. ಅಧಿಭೌತಿಕ, ಅಧಿದೈವಿಕ ಮತ್ತು ಆಧ್ಯಾತ್ಮಿಕ. ಜಾಗತಿಕ ಕ್ಷೇತ್ರದಲ್ಲಿ, ಸರ್ವ ಬಂಧನಗಳು ಅಂದರೆ ಶಾರೀರಿಕ, ಅರ್ಥನೈತಿಕ, ರಾಜನೈತಿಕ, ಸಾಮಾಜಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಅದೇ ರೀತಿ, ಕೃಷಿ, ಶಿಲ್ಪ, ವಾಣಿಜ್ಯ ಇತ್ಯಾದಿ ಸರ್ವ ಬಂಧನಗಳೂ ಅಧಿಭೌತಿಕ ಬಂಧನಗಳೇ ಆಗಿವೆ. ಅರ್ಥಾತ್ ಪಂಚ ಭೂತಾತ್ಮಕ ಜಗತ್ತನ್ನು ಹಿಡಿದು, ಬಂಧನದ ಯಾವ ಕ್ರಿಯಾ ಕಲಾಪಗಳಿವೆಯೋ, ಅವುಗಳಿಗೆ ವ್ಯಾಪಕ ಅರ್ಥದಲ್ಲಿ ಅಧಿಭೌತಿಕ

ಬಂಧನವೆನ್ನುತ್ತಾರೆ. ಮನೋವಿಕಲತೆ, ಮಾನಸಿಕ ಘಾತ ಪತ್ಯಾಘಾತಗಳು, ದ್ವಿಧಾ ದ್ವಂದ್ವ, ಸಂಶಯ ಪ್ರವೃತ್ತಿ, ಹತಮಾನ್ಯತೆ,ಅತಿಮಾನ್ಯತೆಗಳೇ ಮೊದಲಾದ ಮನವನ್ನು ಮುತ್ತಿದ ಎಲ್ಲ ಬಂಧನಗಳನ್ನು ಆಧಿದೈವಿಕ ಬಂಧನಗಳೆನ್ನುತ್ತಾರೆ. ಸಾಮಾನ್ಯವಾಗಿ ಪ್ರಾರಬ್ಧವೆಂದು ಕರೆಯುವ ಸಂಸ್ಕಾರ-ಜಾತ ಕರ್ಮಬಂಧನವೂ ಸಹ, ಆಧಿದೈವಿಕ ಬಂಧನವೇ ಆಗಿದೆ. ಇನ್ನು ಆತ್ಮ ಪರಮಾತ್ಮಗಳಿಗೆ ಸಂಬಂಧಿಸಿದ ಮತ್ತು ಚರಮ ಆಧ್ಯಾತ್ಮಿಕ ಸ್ಥಿತಿಯನ್ನು ಸಂಪಾದಿಸಲಿಲ್ಲವೆಂಬ ಆಂತರಿಕ ತಪಕದ, ಆಳವೇದನೆಗಳು ಆಧ್ಯಾತ್ಮಿಕ ಬಂಧನಗಳಾಗಿವೆ.

ಇವುಗಳಲ್ಲಿ ಅಧಿಭೌತಿಕ ಬಂಧನಗಳನ್ನು ಮುಖ್ಯವಾಗಿ ಮೂರು ಪ್ರಕಾರಗಳಲ್ಲಿ ವಿಭಜಿಸಲಾಗಿದೆ.

೧. ಭಾವಗತ ಬಂಧನ.

೨. ಕಾಲಗತ ಬಂಧನ.

೩. ಆಧಾರಗತ ಬಂಧನ.

ಭಾವಗತ ಬಂಧನವು ಮಾನವನಿಗೆ ಎಲ್ಲಕ್ಕಿಂತ ಹೆಚ್ಚು ಪೀಡೆ ನೀಡುತ್ತದೆ. ಒಂದು ವೇಳೆ ಯಾವುದೋ ಭಾವ ಇಲ್ಲವೆ ಭಾವಜಡತೆಯು (Dogma) ಮಾನವ ಮನದ ಮೇಲೆ ಬಂಡೆಯಂತೆ ಬಿದ್ದಾಗ ಮತ್ತು ಅದರ ಭಾರದಡಿಯಲ್ಲಿ ಸಿಕ್ಕು ತೊಳಲಾಡ ಹತ್ತಿದಾಗ, ಜನರಿಗೆ ತಮ್ಮ ಹಣೆಯ ಮೇಲೆ ಕಪ್ಪದಾಯಕವಾದ ಬಂಧನವಿರುವುದರ ಅರಿವಾಗುತ್ತದೆ. ಆ ಭಾವಜಡತೆಯೇ ತನ್ನನ್ನು ಅಲುಗದಂತೆ ಮಾಡಿದೆಯೆಂಬುದನ್ನು ಅವನು ಅರಿಯುತ್ತಾನೆ. ಈ ಭಾವಜಡತೆಯೇ ಅವನ ಗತಿಯಲ್ಲಿ ದ್ರುತಿಯ ಬದಲು ಅವದ್ರುತಿಯನ್ನು ಸೃಷ್ಟಿಸಿದೆಯೆಂಬುದನ್ನೂ ಅವನು ಅರಿಯುತ್ತಾನೆ. ತನ್ನ ಧರ್ಮ ವೆಂದು ತಾನು ಭಾವಿಸಿದುದೆಲ್ಲ ಕುಸಂಸ್ಕಾರಗಳ ಬಣ್ಣ ಬಣ್ಣದ ಮೆರವಣಿಗೆಯ ದೃಶ್ಯ ವಾಗಿತ್ತಷ್ಟೇ, ಎಂದೂ ಅವನು ಅರಿಯುತ್ತಾನೆ. ಆದ್ದರಿಂದ ಅವನು ಈ ಮರಳಿನ ಮೇಲೆ ಕಟ್ಟಿದ ಈ ರಟ್ಟಿನ ಮನೆಯನ್ನು ಧ್ವಂಸಗೊಳಿಸಬಾರದು ಮತ್ತು ಮೂಢ ನಂಬುಗೆಗಳ ವಿರುದ್ಧ ತಲೆಎತ್ತಿ ನಿಲ್ಲಬಾರದೆಂದೇ, ಕೆಲವೊಂದು ಮಾತುಗಳನ್ನು ಅವರ ಕಿವಿಗಳಲ್ಲಿ ಪಿಸುಗುಟ್ಟಲಾಗುತ್ತಿದೆ. "ಹೀಗೆ ಮಾಡಬೇಕು; ಹೀಗೆ ಮಾಡಬಾರದು, ಹಾಗೆ ಮಾಡುವುದು ಅಕರಣೀಯ. ಹೀಗೆ ಮಾಡಿದ್ದೇ ಆದರೆ ಸರ್ವನಾಶ ಖಂಡಿತ. ಹಾಗೆ ಮಾಡಿದರೆ ನರಕಕ್ಕೆ ಹೋಗುವುದು ಖಚಿತ, ಹೀಗೆ ಮಾಡಿದರೆ ನಿನ್ನ ನಾಲಗೆ ಸಿಡಿದು ಬೀಳುವುದು!" ಈ ಪ್ರಕಾರವಾಗಿ ಮಾನವನ ಮನದಲ್ಲಿ ಭೀತಮನ್ಯತೆ. (fear complex) ಹುಟ್ಟಿಸಿ, ಭಾವಜಡತೆಯ ವಿರುದ್ಧ ಅವನು ಬಾಯಿಬಿಡದಂತೆ ಮಾಡು ತ್ತಿರುವುದನ್ನೂ ಅವನು ಅರಿಯುತ್ತಾನೆ. ಅಂತೂ ಅವನನ್ನು ಶಗಣಿಯ ಗೊಂಬೆ ಯನ್ನಾಗಿ ತಯಾರಿಸುತ್ತಿದ್ದಾರೆ. ಹೀಗೆ ಉಪಯುಕ್ತ ಪ್ರೇರಣೆಯ ಅಭಾವದಿಂದ ಅವನು ಎಲ್ಲವನ್ನೂ ತಿಳಿದೂ ಸಹ ತಿಳಿಯದವನಾಗಿ, ಅವಿಶ್ರಾಂತವಾಗಿ, ವಿಧಿಯ ಬರೆಹದ ಮೇಲೆ ಕೈಯೂರಿ, ಎಲ್ಲವನ್ನು ಕೈಬಿಡುತ್ತಾನೆ. ಮತ್ತು ಅನಿಚ್ಛೆಯಿಂದ ಕಣ್ಣೀರು ಸುರಿಸುವುದೇ ಜೀವನಾಧಾರದ ಏಕಮಾತ್ರ ಸ್ಪಂದನವೆಂದು ತಿಳಿದು ಒಪ್ಪಿ ಕೊಳ್ಳುತ್ತಾನೆ.

ಕಾಲಿಕ ಬಂಧನವು ವಿಶೇಷ ಕಾಲದಲ್ಲಿ ಒಂದು ಅವಸ್ಥೆಯಲ್ಲಿದೆ.ಕಾಲ ಬದಲಾದಂತೆ ಎರಡನೇ ಅವಸ್ಥೆಯಲ್ಲಿ ಹೋಗುತ್ತದೆ. ಇನ್ನು ಆಧಾರಗತ ಬಂಧನವು ವಿಶೇಷ ಸ್ಥಾನದಲ್ಲಿ ಒಂದು ರೂಪದಿಂದ ಇರುತ್ತದೆ. ಎರಡನೆಯ ಸ್ಥಾನದಲ್ಲಿ ಹೋದಾಗ, ಅದರಲ್ಲಿ ರೂಪ ಪರಿವರ್ತನೆಯಾಗುತ್ತದೆ. ಜನರ ಭಾವನೆಗಳಿಂದ ಪ್ರಚಂಡ ಆಘಾತ ವಾದಾಗ, ಅವರು ಆ ಬಂಧನದಿಂದ ಪಾರಾಗಲು, ದೇಶ ತ್ಯಾಗ ಮಾಡುತ್ತಾರೆ, ಸಮಾಜ ತ್ಯಾಗ ಮಾಡುತ್ತಾರೆ; ರಾಷ್ಟ್ರ ತ್ಯಾಗ ಮಾಡುತ್ತಾರೆ, ಮತ್ತಾವ ತ್ಯಾಗ ಮಾಡುವ ಉಪಾಯಗಾಣದೆ, ಪೃಥ್ವಿಯ ತ್ಯಾಗವನ್ನೇ ಮಾಡುತ್ತಾರೆ. ಅರ್ಥಾತ್ ಆತ್ಮಹತ್ಯೆ ಮಾಡಿಕೊಳ್ಳಲು ಬಾಧ್ಯರಾಗುತ್ತಾರೆ.

ಅಧಿದೈವಿಕ ವೇದನೆಯು ವ್ಯಕ್ತಿಗತ ಜೀವನದಲ್ಲಿ ಬೃಹತ್ ಆದರ್ಶವನ್ನು ಗ್ರಹಣ ಮಾಡುತ್ತದೆ. ಮತ್ತು ತದನುಸಾರ ನಡೆದ ಮೇಲೆ ದೂರವಾಗುತ್ತದೆ. ಸಾಮೂಹಿಕ ಜೀವನದಲ್ಲಿ ಯಾವ ಸಮಸ್ತ ತತ್ತ್ವಗಳು ಮಾನವನ ಮನೋವೇದನೆಗೆ ಕಾರಣೀಭೂತವಾಗುವವೋ, ಅವುಗಳನ್ನು ವರ್ಜಿಸಬೇಕು. ಮತ್ತು ಅದೇ ಕಾಲಕ್ಕೆ ಸಾಮೂಹಿಕ ಜೀವನದೆದುರು ಎಲ್ಲರ ಮನಮುಟ್ಟುವ ವಿಶ್ವಭಾವವನ್ನು ಇರಿಸಬೇಕು.

ಆಧ್ಯಾತ್ಮಿಕ ಜೀವನದ ಬಂಧನವೆಂದರೆ–"ಪರಮ ಪುರುಷನು ನನ್ನ ಸ್ವಂತದ ಸೊತ್ತಾಗಿದ್ದರೂ ನನ್ನವನೇ ಆಗಿದ್ದರೂ, ನಾನೇಕೆ ನನ್ನ ಪ್ರಾಣ ಪ್ರಾಣವನ್ನು ವಿರಾಟನ ಪ್ರಾಣಗಳಲ್ಲಿ ಲೀನಗೊಳಿಸಲಾರೆ? ನಾನೇಕೆ ನನ್ನ ಹೃದಯವನ್ನು ಅವನ ಹೃದಯದೊಂದಿಗೆ ಜೋಡಿಸಲಾರೆ? ನಾನೇಕೆ ನನ್ನ ಆಸ್ತಿತ್ವಿಕ ಮಧು ರತೆಯನ್ನು ವಿಶ್ವಾತೀತ ಮಧುರತೆಯಲ್ಲಿ ಬೆರೆಸಿ, ಒಂದಾಗಿಸಿ ಪಡೆಯಲಾರೆ? ಹೀಗೆ ಪಡೆಯದಿರುವುದರ ಬಂಧನವನ್ನೇ ಆಧ್ಯಾತ್ಮಿಕ ಬಂಧನವೆನ್ನುತ್ತಾರೆ.

ಮಾನವನು ಈ ಮೂರು ಪ್ರಕಾರದ ಬಂಧನಗಳಿಂದ ಮುಕ್ತಿ ಪಡೆಯುವುದಕ್ಕಾಗಿ ಪ್ರಯತ್ನಿಸಿದಾಗ ಯಾವ ತಾತ್ಕಾಲಿಕ ಯಶ ಲಭಿಸುವುದೋ ಅದಕ್ಕೆ ಅರ್ಥವೆನ್ನುತ್ತಾರೆ. ತಾತ್ಕಾಲಿಕ ಯಶ ತಂದರೂ, ಬೃಹತ್ತರ ಪ್ರಮಾಣದಲ್ಲಿ ಇರದಿದ್ದರೆ, ಆಗ ಮಧ್ಯಾರ್ಥ ವೆನ್ನುತ್ತಾರೆ. ಇನ್ನು ಯಾವುದರ ಮೂಲಕ ಸ್ಥಾಯೀ ರೂಪದ ಯಶಸ್ಸು ಲಭಿಸು ವುದೋ ಅದಕ್ಕೆ ಪರಮಾರ್ಥವೆನ್ನುತ್ತಾರೆ.

ಹಸಿದು ಕಂಗಾಲಾದ ಮನುಷ್ಯನೊಬ್ಬನು ಹಸಿವೆಯಿಂದ ಚಡಪಡಿಸಹತ್ತಿದ್ದಾನೆ. ಒಂದು ವೇಳೆ ಯಾರಾದರೊಬ್ಬರು, ಅವನಿಗೆ ಸ್ವಲ್ಪ ರೂಪಾಯಿ ನೀಡಿದರೆ, ಆ ಹಸಿ ದವನು ಆ ರೂಪಾಯಿ ಕೊಟ್ಟು ತನ್ನ ಹಸಿವು ಹಿಂಗಿಸುವ ತಿಂಡಿ–ತಿನಿಸುಗಳನ್ನು ಪಡೆಯುತ್ತಾನೆ. ಮತ್ತು ತಾತ್ಕಾಲಿಕವಾಗಿ ಹಸಿವೆಯಿಂದ ಪಾರಾಗುತ್ತಾನೆ. ಆದ್ದರಿಂದ ರೂಪಾಯಿ ಅವನಿಗಾಗಿ 'ಅರ್ಥ'ದ ಸಮಾನವಾಗಿದೆ. (ಸಂಸ್ಕೃತದಲ್ಲಿ ರೂಪಾಯಿ ಪೈಸೆ ಗಳಿಗೆ ಅರ್ಥ ಎಂದು ಸಾರಲಾಗುತ್ತದೆ.) ಈ ರೂಪಾಯಿಗಳ ಬಳಕೆಯಿಂದ ಹಿಂಗಿದ ಅವನ ಹಸಿವೆಯ ಪರಿಹಾರವು ಸರ್ವಕಾಲಿಕವೇನೂ ಅಲ್ಲ. ನಾಳೆ ಮತ್ತೆ ಹಸಿವೆ ಯಾಗುತ್ತದೆ. ನಾಡಿದ್ದೂ ಹಸಿವೆ ಮರುಕಳಿಸುತ್ತದೆ. ಈ ಕಾರಣದಿಂದ ರೂಪಾಯಿ– ಪೈಸೆಗಳು ಅರ್ಥವಷ್ಟೇ ಹೊರತು, ಪರಮಾರ್ಥವೇನಲ್ಲ. ಒಂದುವೇಳೆ ಬಹಳಷ್ಟು

ರೂಪಾಯಿ ಸಿಕ್ಕರೂ ಸಹ, ಅದು ಮಧ್ಯಾರ್ಘವಾಗಬಹುದೇ ಹೊರತು, ಪರಮಾರ್ಥವಾಗಲಾರದು.

ಬರಗಾಲ ಪೀಡಿತ ಪ್ರದೇಶದಲ್ಲಿ ಆಹಾರಧಾನ್ಯ ಹಂಚಿದರೆ, ಆ ಜನರಿಗೋಸ್ಕರ ಆ ದಾನವು 'ಅರ್ಘ'ವಾಗುತ್ತದೆ. ಆದರೆ ಈ ಅರ್ಘವು ಅವರ ದುಃಖಗಳನ್ನು ಸ್ಥಾಯೀಭಾವದಿಂದ ದೂರಗೊಳಿಸುವುದಿಲ್ಲ. ಇಲ್ಲಿ, ಒಂದುವೇಳೆ, ಸ್ಥಾಯೀರೂಪದಿಂದ, ನೀರಾವರಿಯ ವ್ಯವಸ್ಥೆ ಮಾಡಿದರೆ, ಹೊಳೆ, ಹಳ್ಳ, ತೆರೆದ ಭಾವಿ, ಕೊಳವೆ ಭಾವಿ, ಯಾತ ನೀರಾವರಿ ವ್ಯವಸ್ಥೆಗಳನ್ನು ಮಾಡಿದರೆ, ಅವನ ದುಃಖವು ಬಹುಮಟ್ಟಿಗೆ ದೂರವಾಗುತ್ತದೆ. ಅವನು ಯಾರ ಕೃಪೆಯ ಮೇಲೂ ಬಹುದಿನಗಳ ವರೆಗೆ ಇರಬೇಕಾಗಿಲ್ಲ. ಇನ್ನು ಆಕಾಶದ ಮೋಡಗಳನ್ನು ನಿರುಕಿಸುತ್ತ ಕಾಲಕಳೆಯುವ ಅಗತ್ಯ ವಿರದು. ಹಣಿಗೆ ಕೈಹಚ್ಚಿಕೊಂಡು, ಯಾರೆದುರೂ ಭಿಕ್ಷಾಪಾತ್ರೆ ಹಿಡಿದು ನಿಲ್ಲಬೇಕಾಗಿಲ್ಲ. ಈ ಪ್ರಕಾರದ ಉತ್ತಮ ರೂಪದ ನೀರಾವರಿ ವ್ಯವಸ್ಥೆಯು ಮಧ್ಯಮ ಮಾರ್ಗವಾಗಿದೆ.

ಆದರೆ ಈ ಉತ್ತಮ ನೀರಾವರಿ ವ್ಯವಸ್ಥೆಯು ಸಹ ಬಹುದಿನಗಳ ವರೆಗೆ ಇರಲಾರದು. ಭೂಮಿಯಡಿಯಲ್ಲಿ ನಿಂತ ಜಲದ ಸ್ತರವು ಕೆಳಕ್ಕಿಳಿಯುವ ಸಂಭವವಿದೆ. ನದಿಯ ನೀರು ಸಹ ಒಣಗಬಹುದು. ನಮ್ಮ ಜಲಾಶಯ, ಸರಸಿಗಳನ್ನು ತುಂಬುವ ವಾಯು ಮಂಡಲದಲ್ಲಿರುವ ಭಾಷ್ಪೀಭೂತ ಜಲವೂ ಸಹ ಸಮಾಪ್ತಿಯಾಗಬಹುದು. ಹೀಗಾಗಿ ಕೊನೆಗೆ, ಆಹಾರ ಧಾನ್ಯಗಳನ್ನು ಹಂಚುತ್ತ ಸಾಗುವುದೇ, ಮತ್ತು ರೂಪಾಯಿ ನೀಡುತ್ತಾ ಸಾಗುವುದೇ, ಅರ್ಘವೆನಿಸುತ್ತದೆ. ಮತ್ತು ವಿವಿಧ ಪ್ರಕಾರದ ನೀರಾವರಿ ಕಾಮಗಿರಿಗಳನ್ನು ನಿರ್ಮಿಸುವುದು ಮತ್ತು ಕೃತ್ರಿಮ ಮಳೆ ತರಿಸುವುದು 'ಮಧ್ಯಾರ್ಘ'ವಾಗುತ್ತದೆ. ಹಲವಾರು ದೇಶಗಳು ಹೀಗೆ ಮಾಡುತ್ತಿವೆ.

ಮತ್ತು ಅದೇ ಕಾಲಕ್ಕೆ ನಾವು, "ಎಲೈ ಪರಮ ಪುರುಷ! ನೀನಿತ್ತ ಜಾಣ್ಮೆಯನ್ನೂ, ಬುದ್ಧಿಮತ್ತೆಯನ್ನೂ ಬಳಸಿ, ನಾವೀ ಅರ್ಘ ಮತ್ತು ಮಧ್ಯಾರ್ಘದ ವ್ಯವಸ್ಥೆಗಳನ್ನು ಮಾಡಿದ್ದೇವೆ, ಆದರೆ ಅಂತಿಮವಾಗಿ ಸಮಸ್ಯಾ ಪರಿಹಾರದ ಕೀಲಿಕೈ ನಿನ್ನ ಕೈಯಲ್ಲಿಯೇ ಇದೆ" ಎಂದು ಪ್ರಾರ್ಥಿಸಬೇಕು. ಹಾಗೆ ಹೇಳುವುದಾದರೆ, ಪರಮಾರ್ಥವಿಲ್ಲದೆ ಚರಮ ವ್ಯವಸ್ಥೆ ಏರ್ಪಡದು. ಮುಕ್ತಿಯ ವಿಷಯದಲ್ಲಿ ಪರಮಾರ್ಥವೇ ಕೊನೆಯ ಮಾತು. ಮುಕ್ತಿ ಶಬ್ದದ ನಿಜವಾದ ಅರ್ಥದಲ್ಲಿ ಪರಮಾರ್ಥದ ಹೊರತು ಬೇರಾವುದೂ ಮುಕ್ತಿಯೆನಿಸದು.

ಮುಕ್ತಿಯನ್ನು ಕುರಿತು ಇಷ್ಟು ಹೇಳಿದುದಾಯಿತು. ಈಗ 'ಪತನ' ಶಬ್ದ ಕುರಿತು ಆಲೋಚಿಸುವಾ. ತಪನ ಶಬ್ದ ತಪ್ ಧಾತುವಿಗೆ ಅನಟ್ ಪ್ರತ್ಯಯ ಸೇರಿ ಉತ್ಪತ್ತಿಯಾಗಿದೆ. ಆದರ ಉತ್ಪತ್ತಿಗತ ಭಾವ ರೂಢಾರ್ಥವೆಂದರೆ (ವಾಡಿಕೆಯ ಅರ್ಥವಾದರೋ ಉಷ್ಣವಾಗುವುದು ಮತ್ತು ಉಷ್ಣಗೊಳಿಸುವುದು.) ಉಷ್ಣವಾಗುವುದಾಗಲಿ, ಇಲ್ಲವೆ ಉಷ್ಣಗೊಳಿಸುವುದಾಗಲಿ, ಎರಡೂ ಆಯಾ ಸಮಯಕ್ಕೆ ಆವಶ್ಯಕವಾಗಿವೆ. ಆದರೆ ಪ್ರತಿ ಕಾಲದಲ್ಲಿಯೂ ಆವಶ್ಯಕತೆ ಇರುವುದೆಂದು ಹೇಳಲಾರೆವು. ಇದರ ಯೋಗಾರೂಢ ಅರ್ಥವೆಂದರೆ, ಶರೀರ ಮತ್ತು ಮನದ ಉಷ್ಣತೆಯು ಪ್ರಾಪ್ತಿ

ಯಾಗುವಂಥ ಏನನ್ನಾದರೂ ಮಾಡುವುದಾಗಿದೆ. ಈ ಉಷ್ಣತೆಯ ಪ್ರಾಪ್ತಿಯು ಇಬ್ಬಗೆಯಿಂದ ಸಂಭವನೀಯವಾಗಿದೆ. ಯಾವುದೊಂದು ಉಷ್ಣ ಜಡ ತತ್ತ್ವ ಇಲ್ಲವೆ ಉಷ್ಣ ಜಡ ಸಂವೇದನೆಯ ಬಳಿಸಾರಿ, ಇಲ್ಲವೆ ಸ್ವಯಂಕೃತ ಅಂಗಾಂಗಗಳ ಚಲನೆಯಿಂದ ಶರೀರ ಮತ್ತು ಮನವನ್ನು ಉಷ್ಣಗೊಳಿಸಿಕೊಳ್ಳಬಹುದು. ತಪಃ ಶಬ್ದದ ಮೂಲ ಧಾತು ಒಂದೇ ಇರಬಹುದು. ಆದರೆ, ತಪಃ ಶಬ್ದದ ಯೋಗ ರೂಢಾರ್ಥವು ಎರಡನೆಯವರ ಶಾರೀರಿಕ ಮತ್ತು ಮಾನಸಿಕ ಕ್ಲೇಶಗಳ ನಿವಾರಣೆಗೋಸುಗ, ತಾನೇ ಸ್ವಯಂ ಶಾರೀರಿಕ ಇಲ್ಲವೆ ಮಾನಸಿಕ ಕ್ಲೇಶಗಳನ್ನು ಅಪ್ಪಿಕೊಳ್ಳುವುದಾಗಿದೆ. ಹೀಗೆ ಮಾಡುವಾಗ ತನ್ನ ದೇಹ ಮನಗಳೇ ತಾಪಗೊಳ್ಳುತ್ತವೆ.

ಸಂಸ್ಕೃತದಲ್ಲಿ ಸೂರ್ಯನ ಒಂದು ಹೆಸರು 'ತಪನ' ಎಂದು. ಏಕೆಂದರೆ ಅವನು ಎರಡನೆಯವರನ್ನು ಉಷ್ಣಗೊಳಿಸುತ್ತಾನೆ. ಅವನು ತಾಪದ ವಿಕಿರಣ ಮಾಡುತ್ತಾನೆ. ಒಂದು ವೇಳೆ ಮಾನವನು ಸ್ಥೂಲ ರೂಪದಿಂದ ಯಾವುದೊಂದು ಉಷ್ಣ ವಸ್ತುವಿನ ಬಳಿಗೆ ಅಥವಾ ಬಿಸಿಲಿನಲ್ಲಿ ಬಂದರೆ, ಅವನ ಶರೀರವು ತಪಿಸುತ್ತದೆ. ಈ ಕ್ಲೇಶದಿಂದಾಗಿ, ಶರೀರದೊಳಗೆ ಒಂದು ಪ್ರತಿಕ್ರಿಯೆ ತೋರಿಬರುತ್ತದೆ. ಮತ್ತು ಬಹ್ವಂಶ ಲವಣದೊಂದಿಗೆ ಬೆಮರು ಹೊರಬರುತ್ತದೆ. ಇದೊಂದು ಪ್ರಕಾರದ ಕ್ಲೇಶ ಭೋಗವಾಗಿದೆ.

ಒಬ್ಬ ವ್ಯಕ್ತಿಯು ಭಾವಜಡತೆಯನ್ನಾಧರಿಸಿದ ಯಾವುದೇ ಭಾವುಕ ಮಾತನ್ನು ಪದೇ ಪದೇ ಕೇಳಿದರೆ, ಅವನ ಭಾವನೆಗಳೂ ಜಾಗೃತವಾಗುತ್ತವೆ. ಮತ್ತು ಶಬ್ದಗಳನ್ನೇ ಒಳ್ಳೇ ಸ್ಫುಟವಾಗಿ ನಿರರ್ಗಳ ವಾಗ್ವೈಖರಿಯಿಂದ ಜೋರಾಗಿ ಛಂದೋಬದ್ಧವಾಗಿ, ಕಂಪನಪೆಬ್ಬಿಸುವಂತೆ ಬಳಸಿದರೆ, ಆಗ ಸಹ ಮನಸ್ಸು ತಾಪಗೊಳ್ಳುತ್ತದೆ. ಹೀಗೆ ಉತ್ತಪ್ತವಾದ ಮನವು, ಸ್ನಾಯುಕೋಶಗಳಿಂದ, ಸ್ನಾಯು ತಂತುಗಳನ್ನು, ಭಾಗವತ ರೂಪದಲ್ಲಿ, ವಿಚ್ಛಿನ್ನಗೊಳಿಸುತ್ತದೆ. ಇದರ ಫಲವಾಗಿ ಮಾನವನು ಸ್ಥಿತ ಬುದ್ಧಿ ಇಲ್ಲವೆ ಸ್ಥಿರ ಬುದ್ಧಿಯನ್ನು ಕಳೆದುಕೊಂಡು ಮನದ ಚಂಚಲತೆಯನ್ನು ಭೋಗಿಸ ಬೇಕಾಗುತ್ತದೆ. ಮತ್ತು ಸ್ವಲ್ಪ ಸಮಯದ ವರೆಗಾದರೂ ವಿಕಾಗಲೊಲ್ಲದೇಕೆ? ಅಮಾನವೀಯ ಕಾರ್ಯ ಮಾಡಿ ಬಿಡುತ್ತಾನೆ. ಈ ರೀತಿಯ ಅಮಾನವೀಯ ಕಾರ್ಯವು ಯಾವ ಜನರಲ್ಲಿ ಭಾವಜಡತೆಯಿಂದಾಗಿ ಸ್ವಭಾವತಃ ರೂಢವಾಗಿದೆಯೋ, ಅವರೇ ಉಷ್ಣರಾಗಿ, ಉಷ್ಣ ಭಾಷೆಯಲ್ಲಿ, ಲೇಖಿನ ಮಿತ್ತಿತರ ವಿವಿಧ ಮಾಧ್ಯಮಗಳ ಮೂಲಕ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾರೆ.

ಯಾವಾಗ ಮಾನವನು ಸ್ವೇಚ್ಛೆಯಿಂದ ಯುಕ್ತಿಪೂರ್ಣವಾಗಿಯೋ, ಯುಕ್ತಿಕವಾಗಿಯೋ ತನ್ನ ಅಂಗ-ಪ್ರತ್ಯಂಗಗಳನ್ನು ಘರ್ಷಣೆಗೀಡು ಮಾಡುವನೋ ಆಗ ಅವನ ಶರೀರವು ಕಾಯ್ದುಹೋಗುತ್ತದೆ ಮತ್ತು ಬೆಮರು ಸುರಿಸುತ್ತದೆ. ಇದುವೇ ಶಾರೀರಿಕ ಕ್ಷೇತ್ರದಲ್ಲಿ ಸ್ವಯಂಕೃತ ತಾಪವಾಗಿದೆ. ಒಂದು ವೇಳೆ, ಯಾವನೊಬ್ಬನು ತಾಪದಾಯಕ ಸಂಗತಿ ಕುರಿತು ಹಚ್ಚು ದಿನಗಳ ವರೆಗೆ ಚಿಂತಿಸುವನೋ, ಯಾವಾಗ ಅವನು ಜಡಲೋಲುಪತೆಯತ್ತ ಹೊರಳಿ ಪ್ರಭಾವಿತನಾಗುವನೋ, ಆಗ ಅವನ ಮಾನಸ ದೇಹದಲ್ಲಿ ತಾಪವುಂಟಾಗುತ್ತದೆ. ಮತ್ತು ಅವನ ಸ್ನಾಯುಕೋಶದಿಂದ

ಸ್ನಾಯು ತಂತುಗಳು ತತ್ಕಾಲಕ್ಕೆ ಬೇರ್ಪಡುತ್ತವೆ. ಆ ಕಾಲಕ್ಕೆ ಆ ಮನುಷ್ಯನು ತನ್ನ ಮಾನಸಿಕ ಬೋಧೆಯನ್ನು ಕಳೆದುಕೊಳ್ಳುತ್ತಾನೆ. ಮತ್ತು ಇಂದ್ರಿಯ ಜೀವಿಯು ಜೀವದಲ್ಲಿ ಪರಿಣಮಿಸುತ್ತದೆ. ಇದುವೇ ಮಾನಸಿಕ ಕ್ಷೇತ್ರದಲ್ಲಿನ ಸ್ವಯಂಕೃತ ಉತ್ಪಾತನೆಯಾಗಿದೆ.

ಈ ಪ್ರಕಾರ, ತಪನವು ಪ್ರತಿಯೊಂದು ಕ್ಷೇತ್ರದಲ್ಲಿ ಒಂದು ಸಹಾಯಕ ಭಾವ ಇಲ್ಲವೆ ಒಂದು ಮಹಾನ್ ವ್ರತವೇನೂ ಅಲ್ಲವೆಂಬುದನ್ನು ನಾವು ಕಾಣುತ್ತೇವೆ. ಬಹು ಕಾಲದವರೆಗೆ ಕೈಗಳನ್ನು ಮೇಲಕ್ಕೆ ಎತ್ತಿ ಹಿಡಿದು, ಯಾವ ವ್ಯಕ್ತಿಯು ತಪಸ್ಸು ಮಾಡುವನೋ ಅವನ ರಕ್ತ-ಸಂಚಾಲನೆ, ಸ್ನಾಯುಗಳ ಕ್ರಿಯೆ, ಅಸ್ಥಿಸಂಸ್ಥಾನಗಳೆಲ್ಲವೂ ವಿಪರ್ಯಾಸಗೊಳ್ಳಬಹುದಾಗಿದೆ. ಇಂಥ ವ್ಯಕ್ತಿಗಳ ಶಾರೀರಿಕ ಕ್ಲೇಶಗಳು ಅವರ ಮನದ ಏಕಾಗ್ರತೆಯಲ್ಲಿ ಸಹಾಯಕವಾಗಬಲ್ಲವೇ? ಇಲ್ಲವೆ ಅವನ ಮನವು ಪುನಃ ಪುನಃ ಆ ಕ್ಲೇಶಗಳ ಕಡೆಗೇ ಧಾವಿಸುವುದೋ? ಯಾರು ಬಹಳ ಕಾಲದ ತನಕ ಕಾಲು ಮೇಲೆ, ತಲೆ ಕೆಳಗೆ ಮಾಡಿ, ಯಾವ ತಪಸ್ಸನ್ನು ಮಾಡುವನೋ, ಅವನೇನು ಆ ಅಸ್ವಾಭಾವಿಕ ಸ್ಥಿತಿಯಲ್ಲಿ ಮಾನಸಿಕ ಸಮತ್ವವನ್ನು ಕಾಯ್ದುಕೊಳ್ಳುವನೋ? ಯಾರು ತನ್ನ ಸುತ್ತು ಮುತ್ತು ಅಗ್ನಿಕುಂಡಗಳನ್ನಿರಿಸುತ್ತ ನಡುವೆ ಕುಳಿತು ಕಠೋರ ತಪವನ್ನಾಚರಿಸುವರೋ ಅವರು ಆ ಉರಿಯ ಝಳದಿಂದ ತಮ್ಮ ದೇಹ ಮತ್ತು ಮನಗಳ, ಸ್ವಾಭಾವಿಕತೆಯನ್ನು ಕಳೆದುಕೊಳ್ಳುವುದಿಲ್ಲವೇ? ಈ ಪ್ರಕಾರ ತಪನಕ್ರಿಯೆಯಿಂದ ಮುಕ್ತಿ ಮೋಕ್ಷಗಳ ಪ್ರಾಪ್ತಿಯಂತೂ ದೂರದ ಮಾತಾಯಿತು. ತಮ್ಮ ಸ್ವಾಭಾವಿಕ ಆರೋಗ್ಯ ಕಾಯ್ದುಕೊಳ್ಳುವ ಸಂಭವವೂ ಸಹ ಇಲ್ಲ.

ಕೆಲವರು 'ನಾನು ತಪನ ಗೆಯ್ದಿರುವೆ. ಅರ್ಥಾತ್ ಕಠೋರ ಸಾಧನೆ ಮಾಡಿರುವೆ. ಪರಮ ಪುರುಷನ ಪ್ರೀತಿ ಪಾತ್ರನಾಗುವೆ. ಇಲ್ಲವೆ ಸ್ನೇಹ ಪಡೆದು ಧನ್ಯನಾಗುವೆ,ಎಂದು ತಿಳಿದಿದ್ದರೆ, ಆ ನಿಲುಮೆಯು ತಪ್ಪು; ಎಂದು ಅವರು ಅರಿಯಲಿ; ಅವರು ಏನನ್ನೋ ಸಂಪಾದಿಸಬೇಕೆಂದು ಬಯಸುತ್ತಾರೆ. ಆದರೆ, ಅತ್ಯಂತ ಹೀನ ಸೋಲು ಅನುಭವಿಸುತ್ತಾರೆ. ಪರಮ ಪುರುಷನೆಂದೂ, ಜೀವನದ ಸಹಜತೆಯನ್ನು ಮುರಿಯೆಂದು ಮತ್ತು ಅಕರಾಳ ಮೂರ್ಖಿನಂತೆ ಅಸ್ವಾಭಾವಿಕವಾಗೆಂದು ಹೇಳಿಲ್ಲ; ಹೇಳುವುದೂ ಇಲ್ಲ. ಇವಕ್ಕೆ ಪ್ರತಿಯಾಗಿ, ಅವನು, 'ಕೂಡಿ ಹಾಡಿರಿ. ನಿಮ್ಮೆಲ್ಲ ಆಂತರಿಕ ಒತ್ತಾಸೆಗಳನ್ನು ಪರಮ ಪುರುಷನೆಡೆಗೆ ನಿರ್ದೇಶಿಸಿರಿ. ಇತರರ ನೋವು-ನಲಿವುಗಳನ್ನು ನಿಮ್ಮವೆಂಬಂತೆ ತಿಳಿಯಿರಿ.' ಎಂದು ಹೇಳಿದ್ದಾನೆ.

'ಸಂಗಚ್ಛಧ್ವಂ ಸಂವದಧ್ವಂ ಸಂವೋ ಮನಾಂಸಿ ಜಾನತಾಮ್'.

ಪರಮ ಪುರುಷನು ಈ ಸೃಷ್ಟ ಜಗತ್ತನ್ನು ಈ ರೀತಿಯ ಕಠೋರ ಸಾಧನೆ ಇಲ್ಲವೆ ಕಷ್ಟದಾಯಕ ತಪನಕ್ಕೋಸುಗ ಸೃಷ್ಟಿ ಮಾಡಿಲ್ಲ. ಇಲ್ಲವೆ ಜಗವನ್ನು ಈ ರೀತಿ ಪಾಲನ ಪೋಷಣೆ ಮಾಡುತ್ತಿಲ್ಲ. ಇಲ್ಲವೆ ಈ ವಿಧವಾಗಿ ಅದರ ಗಂತವ್ಯದತ್ತ ಮುನ್ನಡೆಸುತ್ತಿಲ್ಲ. ಪ್ರತಿಯಾಗಿ ಅವನು ಸಮಸ್ತ ಮಾನವರ ಮನೀಷೆಯ ಅಭಿಪ್ರಸಾರಿತ, ಭಾವಮಾಧುರ್ಯ, ಮಮತಾಮಯ ಸರ್ವಾನುಸ್ಯೂತ ಮತ್ತು ಸರ್ವಾನುಭಾವಿ ಮಧುರತೆಯಿಂದ ಮುನ್ನಡೆಸುತ್ತಿದ್ದಾನೆ.

ದುನಿಯಾಯ ಮೋರಾ ಸಬಾಈ ಭಾಈ
ಸುಖಿದುಃಖಿ ಸಮಭಾಗ ಕರೇ ನೋವ ಸಕಲೀ ತಾಈ
ಜಗದವರೆಲ್ಲರು ಸೋದರ-ಸೋದರಿ
ಸುಖದುಃಖಾದಿಯ ಸಮಭಾಗಿಸುತಾ ಪಾಲ್ಗೊಳ್ಳುವರು ಅರಿ

'ಯಮ-ನಿಯಮ'ದೆಲ್ಲಿ ತಪಸಾಧನೆ ಕುರಿತು ಹೇಳಿದುದು, ಇತರರ ಕಲ್ಯಾಣ ಇತರರ ಸುಖಶಾಂತಿಗೋಸ್ಕರ, ತಾವು ಸ್ವತಃ ಕ್ಲೇಶಗಳನ್ನು ಬರಮಾಡಿಕೊಳ್ಳುವ ಬಗೆಗಿದೆ. ಈ ರೀತಿಯ ಕ್ಲೇಶ ಸಹಿಷ್ಣುತೆಯಿಂದ ಮಾನವರ ಮಹತ್ವವು ಹೆಚ್ಚಾಗುತ್ತದೆ. ಮೃಣ್ಮಯ ಮಾನವನು ಚಿನ್ಮಯತೆಯನ್ನು ವೃದ್ಧಿಗೊಳಿಸಿ, ಪ್ರತಿಷ್ಠಿತನಾಗುತ್ತಾನೆ. ತಪಸ್ಸಿನಿಂದ ಶಾರೀರಿಕ ಶುದ್ಧಿಯಾಗುತ್ತದೆ. ಮಾನಸಿಕ ಶುದ್ಧಿಯೂ ಆಗುತ್ತದೆ. ಇದಕ್ಕಿಂತ ಹೆಚ್ಚಾಗಿ ಮಾನಸಿಕ ಪ್ರಸಾರವೂ ಆಗುತ್ತದೆ. ಅದೇ ಮೇರೆಗೆ ಸಾಧನೆಯಲ್ಲಿಯೂ ಉನ್ನತಿಯಾಗುವುದು. ಇದರಿಂದ ಮುಕ್ತಿಮೋಕ್ಷಗಳ ದ್ವಾರ ತೆರೆಯುತ್ತದೆ. ಆದ್ದರಿಂದ, ಅರ್ಥಹೀನ ಸಾಧನೆಯಿಂದ ಮತ್ತು ತಪನ ಕ್ರಿಯೆಯಿಂದ ಮುಕ್ತಿ ಲಭಿಸಲಾರದೆಂದು ಹೇಳಲಾಗಿದೆ. ಈ ಪಥದೊಂದಿಗೆ ಮುಕ್ತಿಯು ಯಾವ ಸಂಪರ್ಕವೂ ಇಲ್ಲ.

ಪ್ರಾಚೀನ ಕಾಲದಲ್ಲಿ 'ಹೋಮ' ಮತ್ತು 'ಹವನ'ಗಳನ್ನು ಬೇರೆ ಅರ್ಥದಲ್ಲಿ ಗ್ರಹಿಸಲಾಗಿತ್ತು. ಯಾವುದೇ ಪೂಜಾ-ಅನುಷ್ಠಾನ ಅಥವಾ ಯಾವುದೇ ಸಾಮಾಜಿಕ ಕರ್ಮಕಾಂಡವು ಸಮಾಪ್ತಿಗೊಂಡಿತೆಂದು ಘೋಷಿಸುವ ಕಾಲದಲ್ಲಿ, 'ಹೋಮ'ದ ಅನುಷ್ಠಾನವಿತ್ತು. ಅದರಲ್ಲಿ ಮುಖ್ಯವಾಗಿ 'ಸರ್ಪಿ-ಸಮಿಧಾ'ದ ಆಹುತಿ ಕೊಡುವುದೇ ಇತ್ತು. ಇನ್ನು ಹವನವು ಬೇರೊಂದು ರೀತಿಯಲ್ಲಿ ಕ್ರಿಯೆಯಾಗಿತ್ತು. ವಿಭಿನ್ನ ವೈದಿಕ ದೇವತೆಗಳ ತೃಪ್ತಿಗೋಸುಗ, ಈ ಕಾರ್ಯವನ್ನು ಮಾಡುತ್ತಿದ್ದರು. ಇದರಲ್ಲಿ ಸರ್ಪಿ-ಸಮಿಧಾದ ಆಹುತಿಯಲ್ಲದೆ, ಬೇರೆ ಬೇರೆ ಪ್ರಕಾರದ ಖಾದ್ಯಗಳ (ಅಕ್ಕಿ, ಗೋಧಿ ಪಕ್ವಾನ್ನ ಇತ್ಯಾದಿ) ಸುಗಂಧಿತ ದ್ರವ್ಯಗಳನ್ನು (ಚಂದನ-ಕಾಷ್ಠ, ಧೂಪ, ಧೂನಿ ಇತ್ಯಾದಿ) ಪಶುಮುಂಡ, ಪಶುರಕ್ತ, ಪಶುಮಾಂಸ, ಸೋತ ಮನುಷ್ಯನ ಶಿರ, ರಕ್ತ, ಮಾಂಸ, ಇತ್ಯಾದಿಗಳ ಆಹುತಿ ಕೊಡಲಾಗುತ್ತಿತ್ತು. ಹೋದುವು ಮುಖ್ಯವಾಗಿ ಅನುಷ್ಠಾನ ಸಮಾಪ್ತಿಯ ಪೋಷಕವಾಗಿತ್ತು. ಆದರೆ ಹವನವಾದರೋ, ದೇವತೆಗಳ ತೃಪ್ತಿ ವಿಧಾನ ಪೂರೈಸಿ, ವರದಾನ ಪಡೆಯಲೋಸುಗ- ಮಳೆದೇವನ ಕೃಪೆಯಿಂದ ಮಳೆ ತರಿಸಲು, ವರುಣ ದೇವನ ಕೃಪೆಯಿಂದ ಜಲಮಜ್ಜನ ಮೂಲಕ ಪರಿತ್ರಾಣ ಪಡೆಯಲು, ಇತ್ಯಾದಿಗೋಸ್ಕರ ನಡೆಯುತ್ತಿತ್ತು. ಕಾಲಕ್ರಮೇಣ ಹೋಮ-ಹವನಗಳ ಅರ್ಥದ ಪಾರ್ಥಕ್ಯವು ಇಲ್ಲವಾಗುತ್ತ ನಡೆಯಿತು. ಈಗಂತೂ ಜನರು ತಮತಮಗೆ ತಿಳಿದಂತೆ ಹೋಮ-ಹವನಗಳೆರಡೂ ಶಬ್ದಗಳನ್ನು ಬಳಸುತ್ತಾರೆ.

ಆ ಸಮಯದ ಜನರು ಈ ಹೋಮದ ಸುಗಂಧ ತುಂಬಿದ ಹೊಗೆಯು ಈ ಮರ್ತ್ಯದಿಂದ ಊರ್ಧ್ವ ಲೋಕಗಳಲ್ಲಿ ಹರಡುವುದೆಂದೂ, ಮತ್ತು ಆಕಾಶ ಮತ್ತು ವಾಯುಗಳ ಗಂಧಗಳಿಂದರೆ ಪರಿಪೂರ್ಣವಾಗುತ್ತಿವೆ ಮತ್ತು ಅದರಿಂದ ದೇವತೆಗಳು ತೃಪ್ತಿಗೊಳ್ಳುತ್ತಾರೆ,ಎಂದು ಯೋಚಿಸುತ್ತಿದ್ದರು. ಈ ಸುಗಂಧಯುತ ಹವೆ, ಸುವಾಸಿತ

ಹೊಗೆಗಳು ಸ್ವಾಸ್ಥ್ಯದ ಕಲ್ಯಾಣ ಗೆಯ್ಯುತ್ತವೆ ಮತ್ತು ಮಾನಸಿಕ ಉನ್ನತಿಗೊಳಿಸಿ, ಅವರನ್ನು ದೇವಲೋಕಕ್ಕೆ ತಲುಪಿಸುತ್ತವೆ ಎಂದು ತಿಳಿದಿದ್ದರು.

ಹೋಮದ ಸುಗಂಧಿತ ಹೊಗೆಯು ಮೂಗಿಗೆ ಸುಖ ನೀಡಬಹುದು. ಆದರೆ ಸ್ವಾಸ್ಥ್ಯಕ್ಕೆ ಅವರಿಂದ ಸುಖವೇನೂ ಇಲ್ಲ. ಹೊಗೆಯು ಅರೆಬರೆ ಸುಟ್ಟ ಅಂಗಾರದ ಅಂಶ (unburnt carbon particles) ಆಗಿದೆ. ಆ ಅರೆಬರೆ ಸುಟ್ಟ ಅಂಗಾರದ ಕಣಗಳು ಆರೋಗ್ಯಕ್ಕಾಗಿ ಯಾವ ಸ್ಥಿತಿಯಲ್ಲಿಯೂ ಸರಿಯಲ್ಲ. ಅದೇ ರೀತಿ, ಅವು ಪುಪ್ಪುಸವನ್ನು ಅಂಗಾರಿತ (carbonized) ಗೊಳಿಸುತ್ತವೆ. ಹೋಮದ ಸುಗಂಧವು ಸ್ವಲ್ಪ ಪ್ರಮಾಣದಲ್ಲಿದ್ದರೆ, ಅಷ್ಟೊಂದು ಹಾನಿಕಾರಕವಾಗಿಲ್ಲದಿರಬಹುದು. ಮತ್ತು ಅದು ಸ್ವಲ್ಪ ಮನೋರಂಜಕವೂ ಆಗಬಹುದು. ಆದರೆ ಆಧ್ಯಾತ್ಮಿಕ ಸಾಧನೆ ಇಲ್ಲವೆ ಪರಮಾರ್ಥ ಪ್ರಾಪ್ತಿಗೋಸುಗ ಅದರ ಕೊಡುಗೆಯಷ್ಟು? ವಾಯು ಮಾಲಿನ್ಯವನ್ನು ದೂರ ಮಾಡುವಲ್ಲಿ ಈ ಸುಗಂಧಕ್ಕಾವ ಬೆಲೆಯೂ ಇಲ್ಲ. ಪ್ರತಿಯಾಗಿ, ಈಗಿನ ಕೆಲವು ವಿಷನಾಶಕ ದ್ರವ ಪದಾರ್ಥಗಳು ಮತ್ತು ವಾಯುರೂಪಿ ವಸ್ತುಗಳು ಹೆಚ್ಚಾಗಿ ಸಹಾಯಕವಾಗಿವೆ. ಮುಂದೆ ಯಾವಾಗ ಮಾನವನು ಜಲಮಾಲಿನ್ಯ ಮತ್ತು ವಾಯು-ಮಾಲಿನ್ಯಗಳನ್ನು ದೂರಗೊಳಿಸಲೋಸುಗ, ಉನ್ನತ ಪ್ರಕಾರದ ವಿಷನಾಶಕ ವಸ್ತುಗಳನ್ನು ಆವಿಷ್ಕರಿಸುವನೋ, ಆ ಆವಿಷ್ಕಾರಗಳು ಮಾನವನಿಗೆ ಇನ್ನೂ ಹೆಚ್ಚು ಮಹತ್ವ ಪೂರ್ಣವಾಗುತ್ತದೆ. ಈ ತೆರದಿಂದ ಹೋಮದ ಸಹಾಯದಿಂದ ಇಲ್ಲವೆ ಹೋಮಾಗ್ನಿಯಲ್ಲಿ ವಿವಿಧ ಪ್ರಕಾರದ ಚರ್ವ್ಯ, ಚೂಷ್ಯ, ಪೇಯ-ಖಾದ್ಯಗಳನ್ನು ಅರ್ಪಣ ಮಾಡುವುದರಿಂದ ಯಾವ ಲಾಭವೂ ಇಲ್ಲ. ಖಾದ್ಯ ವಸ್ತುಗಳು ಸುಟ್ಟು ಭಸ್ಮವಾಗಿ, ಊರ್ಧ್ವ ಲೋಕ ತಲುಪಿ, ಅಲ್ಲಿ ದೇವತೆಗಳ ನಾಲಿಗೆಯ ರುಚಿಯನ್ನು ತೃಪ್ತಿಪಡಿಸುವವೆಂಬ ಯೋಚನೆಗಳೆಲ್ಲ ಅಸಂಗತವಾಗಿವೆ. ಹೀಗಾಗಿ ಖಾದ್ಯ ವಸ್ತುಗಳನ್ನು ಭಸ್ಮರೂಪದಲ್ಲಿ ಪರಿವರ್ತಿಸಿ, ಖಾದ್ಯವಸ್ತು ಪ್ರಪಂಚದಲ್ಲಿ ಇರುವ ಹಾಹಾಕಾರವನ್ನು ಹೆಚ್ಚಿಸುವುದರಿಂದ ಯಾವುದೇ ಕಲ್ಯಾಣವಾಗದು. ಮುಕ್ತಿ ಮೋಕ್ಷಗಳೊಂದಿಗೆ ಇದರ ಯಾವುದೇ ಸಂಬಂಧವಿರದು.

ಉಪ + ವಸ್ + ಘಞ್ ಪ್ರತ್ಯಯದಿಂದ ಉಪವಾಸ ಶಬ್ದೋತ್ಪತ್ತಿಯಾಗಿದೆ. ಉಪ ಎಂದರೆ 'ಸಮೀಪ'. ಉದಾಹರಣೆಗೆ: 'ಉಪನಗರೀ' (ನಗರವೇ ಅಲ್ಲ; ಆದರೆ ನಗರದ ಬಳಿ) ಉಪದೇವತಾ (ದೇವತೆಯೇ ಅಲ್ಲ; ದೇವತೆಯನ್ನು ಹೋಲುವ ಭೂತ ಇತ್ಯಾದಿ.) ಮಾನವನು ಈ ಸಂಸಾರದಲ್ಲಿ ಯಾವ ಪ್ರಕಾರ ಇರುತ್ತಾನೆ? ಮಾನವನ ಜೀವನದ ಏಕಮಾತ್ರ ಲಕ್ಷ್ಯವೆಂದರೆ, ಆಧ್ಯಾತ್ಮ ಸಾಧನೆ. ಈಶ್ವರ ಪ್ರಾಪ್ತಿ. ಆದರೆ ಅವನ ಪಾಂಚಭೌತಿಕ ಶರೀರವಾಗಲಿ, ಅದರೊಂದಿಗೆ ಸಂಶ್ಲಿಷ್ಟವಾದ ಮನವಾಗಲಿ, ಈ ಭೌತಿಕ ಜಗತ್ತಿನಲ್ಲಿಯೇ ಇರುತ್ತವೆ. ಈ ಕಾರಣದಿಂದ ಸ್ಥೂಲ ಜಗತ್ತನ್ನು ಬಿಟ್ಟು ಆಧ್ಯಾತ್ಮಿಕ ಸಾಧನೆಯ ಸಂಭವವಿಲ್ಲ. ಆದ್ದರಿಂದ ಮಾನವನು ತನ್ನ ಜಗತ್ತಿನ ಕಾರ್ಯಗಳನ್ನು ಸರಿಯಾಗಿ ನಿರ್ವಹಿಸುತ್ತ ಜೀವನದ ಪ್ರಧಾನ ಲಕ್ಷ್ಯವಾದ ಆಧ್ಯಾತ್ಮಿಕ ಸಾಧನೆಯನ್ನೂ ಸಹ ನಿರ್ವಿಘ್ನವಾಗಿ ಮಾಡುತ್ತ ನಡೆಯಬೇಕು. ಇದಕ್ಕೋಸುಗ ಮಾನವನಿಗೆ ಆಧ್ಯಾತ್ಮ ಸಾಧನೆಯನ್ನಂತೂ ಮಾಡಲೇಬೇಕಾಗುತ್ತದೆ. ಮತ್ತು ಅದೇ ಕಾಲಕ್ಕೆ

ತನ್ನ ಪ್ರಾಪಂಚಿಕ ಹೊಣೆಯನ್ನು ಸಹ ಈಶ್ವರನಿಂದ ನಿರ್ದಿಷ್ಟವಾದ ಕರ್ತವ್ಯವೆಂದು ತಿಳಿದು ಮಾಡತಕ್ಕದ್ದು.

ಮಾನವ-ಮನೋವೈಜ್ಞಾನಿಕತೆಯಂತೆ, ಅವನು ಪ್ರಾಪಂಚಿಕ ಕಾರ್ಯಗಳನ್ನು ಕೆಲಕಾಲ ಮಾಡುತ್ತ ಹೋದಂತೆ ತನ್ನ ಮೂಲ ಉದ್ದೇಶವನ್ನೇ ಮರೆತು ಬಿಡುತ್ತಾನೆ. ಮತ್ತು ಆಗಾಗ ಆ ಜಗತ್ತಿನ ಕಾರ್ಯಗಳನ್ನು ಈಶ್ವರ ನಿರ್ದಿಷ್ಟ ಕಾರ್ಯಗಳೆಂದು ಬಗೆಯದೆ, ವೈಯಕ್ತಿಕ ಅಭಿಪ್ರಾಯಗಳ ಸಿದ್ಧಿಯ ಮಾರ್ಗವೆಂದು ಬಗೆಯುತ್ತಾನೆ. ಈಗಲೇ ಅವನ ಬಾಳಿನಲ್ಲಿ ಪತನದ ಆರಂಭವಾಗುತ್ತದೆ. ಆಗ ಅವನ ಬಾಳಿನ ಮೇಲೆ ಸರ್ವವಿನಾಶದ ಕರಿ ಪರದೆ ಬೀಳುತ್ತದೆ.

ಆಗ ಉತ್ತರವೇನು? ಈ ಅವಸ್ಥೆಯಲ್ಲಿ ಪರಿತ್ರಾಣ ಪಡೆಯಲು ಪ್ರತಿದಿನ ವ್ರತ ರೂಪದಿಂದ ಆಧ್ಯಾತ್ಮ ಸಾಧನೆ ಮಾಡಲಿ. ಮತ್ತು ಜೊತೆಜೊತೆಗೆ ಈಶ್ವರ ನಿರ್ದಿಷ್ಟ ಕಾರ್ಯವೆಂದು ಬಗೆದು, ಈ ಜಾಗತಿಕ ಕಾರ್ಯಗಳನ್ನು ಮಾಡಲಿ. ಆದರೆ ಕೆಲವು ದಿನಗಳ ವರೆಗೆ (ದಿನಗಳನ್ನು ಪಂಚಾಂಗದ ಲೆಖ್ಖದಿಂದ ನೆನಪಿಡುವುದೇ ಹೆಚ್ಚು ಒಳ್ಳೆಯದು) ಜಡ ಪ್ರಾಪಂಚಿಕ ಕರ್ತವ್ಯಕ್ಕಿಂತ ಹೆಚ್ಚಿನ ಮಹತ್ವ ನೀಡಿ, ಆ ದಿನಗಳಂದು, ಆಧ್ಯಾತ್ಮಿಕ ಸಾಧನೆಯಲ್ಲಿ ಹೆಚ್ಚು ಕಾಲ ಕಳೆಯಬೇಕು. ಅರ್ಥಾತ್ ಜೀವನವನ್ನು ಜಾಗತಿಕ ಕರ್ತವ್ಯಗಳಿಗಿಂತ ಆಧ್ಯಾತ್ಮ ಸಾಧನೆಯಲ್ಲಿ ತೊಡಗಿಸಬೇಕು. ಈ ನಿರ್ದಿಷ್ಟ ದಿನಗಳನ್ನು ಉಪವಾಸ ದಿನಗಳೆಂದು ಕರೆಯುತ್ತಾರೆ. ಅರ್ಥಾತ್ ಮನದ ಭಾವವನ್ನು ಈಶ್ವರನ ಭಾವದ ಇನ್ನಷ್ಟು ಸಮೀಪಕ್ಕೆ ಒಯ್ಯುವುದು. ಇದರಿಂದ ಜೀವನದಲ್ಲಿ ಯಾವುದೇ ದಿನ ಪತನದ ಸಂಭವವಿರದು. ಮಾನವೀಯತೆಯ ವಿನಾಶದ ಕಪ್ಪು ನೆರಳು ಇಳಿದು ಬರದಿರಲಿ.

ಆದರೆ, ಕಾಲಕ್ರಮದಲ್ಲಿ ಈ ಉಪವಾಸದಲ್ಲಿಯೂ ಸಹ, ಭಾವಜಡತೆಯು (Dogma) ತನ್ನ ಜಾಲವನ್ನು ಪಸರಿಸಿತು. ಕೆಲ ಜನರು ಈ ಉಪವಾಸವು ಪುಣ್ಯ ಗಳಿಸುವ ಕ್ರಿಯೆಯೆಂದೂ, ಉಪವಾಸ ಮಾಡುವುದರಿಂದ ಅಕ್ಷಯವಾದ ಸ್ವರ್ಗ ಲಾಭವಾಗುವುದೆಂದೂ, ತಿಳಿಯತೊಡಗಿದರು. ಉಪವಾಸ ಮಾಡುವುದರಿಂದ ಪೊಮ್ಮಕ್ಕಳ ಪೊಮ್ಮಕ್ಕಳನ್ನು ಸಾಯುವ ಮುನ್ನ ನೋಡುತ್ತೇವೆಂದು ನಂಬಿದರು. ಇನ್ನು ಕೆಲವೊಂದು ವಿಶೇಷ ದಿನಗಳಂದು ಉಪವಾಸವಿರುವುದಕ್ಕೆ ಎಲ್ಲಿಲ್ಲದ ಮಹತ್ವ ನೀಡಲಾಯಿತು. ಆ ದಿನಗಳಂದು ಉಪವಾಸವಿದ್ದರೆ, ಕೇವಲ ತನ್ನ ವೈಯಕ್ತಿಕ ಜೀವನವಷ್ಟೇ ಅಲ್ಲ. ಅನೇಕ ಪೀಳಿಗೆಯ ವರೆಗೆ ಸ್ವರ್ಗ ಲಭಿಸುವುದೆಂದು ತಿಳಿಯಲಾಯಿತು.

ಶಯನ ಉತ್ಥಾನ ಪಾಶಪೋಡಾ
ತಾರ ಮಧ್ಯೇ ಭೀಮೇ ಭೋಡಾ
ಪಾಗಲಾರ ಚೌದ್ದ ಪಾಗಲೀರ ಆಠ
ಏಈ ನಿಏ ಕಾಲ ಕಾಟ
ಏ-ಓ ಯದಿ ನಾ ಕರತೇ ಪಾರಿಸ
ಭಗಾರ ಖಾದೇ ಡೂಬೇ ಯರಿಸ

ಅಂಥ ವಿಶೇಷ ದಿನಗಳೆಂದರೆ, ಶಯನ ಏಕಾದಶೀ, ಉತ್ಥಾನ ಏಕಾದಶೀ ಪಾರ್ಶ್ವ ಏಕಾದಶೀ, ಭೈಮೀ ಏಕಾದಶಿ, ಶಿವಚತುರ್ದಶೀ, ದುರ್ಗಾಷ್ಟಮೀ. ಇನ್ನು ಈ ದಿನಗಳಲ್ಲಿ ಉಪವಾಸ ವ್ರತಪಾಲಿಸಲು ಯಾರಿಗಾದರೂ ಶಕ್ಯವಾಗದಿದ್ದರೆ, ಅವರು ಗಂಗೆಯಲ್ಲಿ ಮುಳುಗಿ ಸತ್ತರೆ ಇನ್ನೂ ಹೆಚ್ಚು ಪುಣ್ಯ ಲಭಿಸುತ್ತದೆ. ಈ ರೀತಿ ಉಪವಾಸ ಶಬ್ದವನ್ನೆತ್ತಿ ಅದರ ಅಪಾರ್ಥ ಮಾಡುತ್ತ ಸಾಗಿದ್ದಾರೆ. ಭಾವ ಜಡತೆಯ ಜಾಲದಲ್ಲಿ ಸಿಲುಕಿಸಿ ಉಪವಾಸದ ಮರ್ಯಾದೆಯನ್ನು ಧೂಳೀಪಾಲು ಮಾಡಲಾಗುತ್ತಿದೆ.

ಉಪವಾಸವು ಶರೀರವನ್ನು ಸ್ವಚ್ಛವಾಗಿರಿಸುತ್ತದೆ. ಉಜ್ವಲವಾಗಿರಿಸುತ್ತಿದೆ. ಮತ್ತು ನಿರ್ಮಲವಾಗಿರಿಸುತ್ತದೆ. ಅದು ಮಾನವನ ಮನದ ಕಪ್ಪುಕಲೆಯನ್ನು ಅಳಿಸಿ ಹಾಕಿ, ಹಸನುಗೊಳಿಸಿ, ಸಾಧನೆಗೆ ಉಪಯುಕ್ತವಾಗಿಸುತ್ತದೆ. ಆದರೆ ಉಪವಾಸ ದಿಂದೇನೂ ಪುಣ್ಯದ ಗಳಿಕೆಯಾಗದು. ಯಾವ ಯುಕ್ತಿ ಹೂಡಿದರೂ ಇದು ಮುಕ್ತಿ–ಮೋಕ್ಷಗಳ ಬಾಗಿಲು ತೆರೆಯದು. ಪುಣ್ಯ–ಸಂಚಯಕ್ಕಾಗಿ ಎಂದಾಗಲಿ, ಮುಕ್ತಿ–ಮೋಕ್ಷ ಪ್ರಾಪ್ತಿಗೆಂದಾಗಲಿ, ಉಪವಾಸ ಮಾಡುವವರು ವ್ಯರ್ಥವಾಗಿ ಕ್ಲೇಶ ಬಿಡುತ್ತಾರೆ. ಇದರಿಂದ ವೈಯಕ್ತಿಕ ಜೀವನದಲ್ಲಾಗಲಿ, ಸಾಮಾಜಿಕ ಜೀವನದಲ್ಲಾಗಲಿ, ಯಾವುದೇ ಲಾಭವಿಲ್ಲ. ಉಪವಾಸವು ಮುಕ್ತಿಯ ಮಾರ್ಗವೇನೂ ಅಲ್ಲ. ಉಪವಾಸವನ್ನೇನೋ ಅವಶ್ಯವಾಗಿ ಮಾಡಲೇಬೇಕು. ಆದರೆ ಮುಕ್ತಿಗಳಿಸಲೆಂಬ ಹೇತುವಿನಿಂದ ಉಪವಾಸ ಮಾಡುವುದು ಭಸ್ಮದಲ್ಲಿ ತುಪ್ಪ ಸುರಿದಂತೆಯೇ ಸರಿ.

'ಭೃ' ಧಾತುವಿನಿಂದ 'ಭೃತ್' ಶಬ್ದ ಬಂದಿದೆ. ಇದರ ಅರ್ಥವೆಂದರೆ ಯಾರು ಇತರರಿಗೆ ಉಣಿಸುವರೋ ಅವರು. ಇನ್ನು 'ಭೃತ' ಶಬ್ದದ ಅರ್ಥವೆಂದರೆ ಎರಡನೆಯವರಿಂದ ಉಣ್ಣಿಸಲ್ಪಡುವವನು. ಹೀಗೆ ದೇಹಭೃತ್ ಎಂದರೆ, ದೇಹಕ್ಕೆ ಉಣಿಸುತ್ತ ಜೀವಿಸುವವನು. ಈ ರೀತಿ, ಈ ವಿಶ್ವದ ಪ್ರತಿರೊಂದು ಜೀವಿಯೂ ದೇಹಭೃತ್ ಆಗಿದೆ. ಇಲ್ಲಿರುವ ಪ್ರಶ್ನೆಯೆಂದರೆ, ದೇಹಭೃತ್ ಜೀವಿಯು, ಅದೆಂತು ಮೋಕ್ಷ ಹೊಂದುತ್ತಾನೆ? ಏಕೆಂದರೆ, ಜೀವಿಗೆ ಭೌತಿಕ ಬಂಧನಗಳಿರುತ್ತವೆ. ಮತ್ತು ಭೌತಿಕ ಬಂಧನಗಳಿರುವವರೆಗೆ ಮಾನಸಿಕ ಬಂಧನಗಳೂ ಇರುತ್ತವೆ. ಇನ್ನು ಮಾನಸಿಕ ಬಂಧನಗಳಿರುವಾಗ ಮೋಕ್ಷ ಪಡೆಯುವುದೆಂತು ಸಾಧ್ಯ? ಮರ್ತ್ಯ ಜೀವಿಗಳು ಕಠಿಣ ತಪಸ್ಸಿನಿಂದ ಮೋಕ್ಷ ಪಡೆಯಲು ಹಾತೊರೆಯುವರೆಂದು ಹೇಳುತ್ತಾರೆ. ಆದರೆ, ಯಾರೊಬ್ಬರೂ ಹೋಮಾಗ್ನಿಯಲ್ಲಿ ತುಪ್ಪ, ಅಕ್ಕಿ, ರಕ್ತ, ಗೋಧಿ ಮುಂತಾದವುಗಳನ್ನು ಆಹುತಿ ಕೊಟ್ಟು ಮುಕ್ತಿ ಮೋಕ್ಷಗಳನ್ನು ಪಡೆಯಲಾರರು. ಉಪವಾಸ ಮಾಡುವುದರಿಂದ ಮುಕ್ತಿ ಮೋಕ್ಷ ದೊರೆಯುವುವೆಂದು ಮನದಲ್ಲಿ ತಪ್ಪು ತಿಳಿದು, ನೂರಾರು ಉಪವಾಸ ಮಾಡಿದರೂ ಸಹ, ಏನೂ ದೊರೆಯದು.ಆಹುದು, ದೇಹಭೃತ್ ಜೀವವೂ ಸಹ ಮುಕ್ತಿ ಪಡೆಯಲಿಕ್ಕೋಸ್ಕರ, ತನ್ನ ಮನದ ಸಮಸ್ತ ಕಲ್ಪನೆಗಳನ್ನೂ, ಭಾವನಾತ್ಮಕ ಸಮಸ್ತ ಸ್ಪಂದನಗಳನ್ನೂ ಒಂದರತ್ತ ಪ್ರಭಾವಿತಗೊಳಿಸಲಿ.ಮತ್ತು ಆ ಚಂಚಲ ಮನವು ಒಂದು ಲಕ್ಷ್ಯದಲ್ಲಿ, ಒಂದು ಬಿಂದುವಿನಲ್ಲಿ, ಪರ್ಯವಸಾನಗೊಂಡು, ವಿರಾಟದ ಗುಣಾತೀತ 'ಜ್ಞ' ಸತ್ತೆಯಲ್ಲಿ ಸೇರಿ ಹೋಗಲಿ. ಕ್ಷುದ್ರ ಅಣುಸತ್ತೆ ಬೋಧವು, ವಿರಾಟ್ ಜ್ಞ ಸಮುದ್ರದಲ್ಲಿ, ಸೇರಿ, ಕ್ಷುದ್ರ 'ನಾನು'ವನ್ನು ಬೃಹತ್ 'ನಾನು'ವಿನಲ್ಲಿ

ರೂಪಾಂತರಗೊಳಿಸುತ್ತದೆ. ಕ್ಷುದ್ರ 'ನಾನು' ಬೋಧವು ಬೃಹತ್‌ದಲ್ಲಿ ಅಡಗಿ ಹೋಗುವುದರಿಂದಾಗಿ, ಕ್ಷುದ್ರತ್ವವೇ ಅಳಿದು ಹೋಗುತ್ತದೆ. ಕ್ಷುದ್ರ 'ನಾನು' ಬೃಹತ್ 'ನಾನು'ವಾಗಿ ಬಿಡುತ್ತದೆ. ಚಿಕ್ಕ 'ನಾನು', ದೊಡ್ಡ 'ನಾನು'ವಾಗಿ ಬಿಡುತ್ತದೆ. ಅರ್ಥಾತ್ ಸರ್ವಾತೀತ 'ಜ್ಞ' ಸತ್ತೆಯು ಆಗ ಕ್ಷುದ್ರ 'ನಾನು'ವನ್ನು ತನ್ನಲ್ಲಿ ಗ್ರಹಣ ಮಾಡಿಕೊಳ್ಳುತ್ತದೆ. ಪೂರ್ಣ ಆತ್ಮಸಮರ್ಪಣವು, ಜೀವಿಯ ಭಾಗ್ಯದಲ್ಲಿ ಪೂರ್ಣ ಸಂಪ್ರಾಪ್ತಿಯನ್ನು ತರುತ್ತದೆ. ಆ ಕಾಲಕ್ಕೆ ಅವನು, ಈ ವಿಶ್ವಬ್ರಹ್ಮಾಂಡದಲ್ಲಿ ಒಂದೇ 'ನಾನು' ಇದೆಯೆಂದು ಯೋಚಿಸುತ್ತಾನೆ. ಮೊದಲು ತನ್ನನ್ನೇ ತಾನು ಅಲ್ಪ 'ನಾನು' ಎಂದು ತಿಳಿಯುತ್ತಿದ್ದ. ಅವೇ ಅಸಂಖ್ಯ ಅಲ್ಪ 'ನಾನು'ಗಳು ಈ ಸರ್ವಾತೀತ ಮಹಾ ಸಾಗರದ ಅಣು ಭಗ್ನಾಂಶಗಳಷ್ಟೇ ಸರಿ. ಅತಿ ಕ್ಷುದ್ರ ಬುದ್ಬುಡಗಳಷ್ಟೇ.

ಇದುವೇ ಬ್ರಹ್ಮೈವಾಹಂ ಬೋಧೆ.ಇಲ್ಲವೆ 'ಅಹಂಬ್ರಹ್ಮಾಸ್ಮಿ' ಅವಸ್ಥೆಯಾಗಿದೆ. ಆದ್ದರಿಂದ, ದೇಹಭೃತ್ ಜೀವವು ಸಾಧನೆಯ ಮೂಲಕ ಬೃಹತ್ ಭಾವದಲ್ಲಿ ಆತ್ಮ ಸಮರ್ಪಣ ಮಾಡಲಿ; ಆ ದೇಹಗತ ಅವಸ್ಥೆಯಲ್ಲಿದ್ದುಕೊಂಡೇ ಮುಕ್ತಿ ಲಾಭವನ್ನು ಅವಶ್ಯವಾಗಿ ಪಡೆಯುವುದು ಎಂದು ಹೇಳುತ್ತಾರೆ. ಆದರೆ, ಅಸಂಖ್ಯ ಶಾಸ್ತ್ರಪಾಠ ಮಾಡಿ, ಅಸಂಖ್ಯ ಸಾಧನೆ ಗೆಯ್ದು, ಹೋಮಾಗ್ನಿಯ ಅಜಸ್ರ ಆಹುತಿ ನೀಡಿ,ಕೋಟಿ–ಕೋಟಿ ಬಾರಿ ಪುಣ್ಯ ಲೋಭಾತ್ಮಕವಾದ ಉಪವಾಸ ಮಾಡಿದರೂ ಸಹ, ಮುಕ್ತಿ-ಮೋಕ್ಷವು ದೂರದ ಮಾತಾಗಿಯೇ ಉಳಿಯುತ್ತದೆ. ಪರಮ ಪುರುಷನತ್ತ ಜೀವವು ಒಂದು ಹೆಜ್ಜೆ ಸಹ ಇಡಲಾರನು.

ಕುಲೀನ ಬಾಮುನ ಢಾಕಬೇ ಪೋಡೇ
ತರೇ ಯಾವೇ ಕಾಂಗಾಲ ಚಾಪಾ

ಪಾಟ್ನಾ : ೨–೭–೧೯೮೨

ಪ್ರವಚನ-೧೪

ಶಿವಬೋಧೆ-೨

ಶಿವೋಪದೇಶ–೪

ನ ಮುಕ್ತಿಃ ಶಾಸ್ತ್ರವ್ಯಾಖ್ಯಾನೇ ನ ಮುಕ್ತಿರ್ವಿಧಿ ಪೂಜನೇ,
ಕೇವಲಂ ಬ್ರಹ್ಮನಿಷ್ಠೋಯಃ ಮುಕ್ತೋ ನಾತ್ರ ಸಂಶಯಃ.

'ಶಾಸನಾತ್ ತಾರಯೇತ್ ಯಸ್ತು ಸಃ ಶಾಸ್ತ್ರಃ ಪರಕೀರ್ತಿತಃ'. ಸಮಸ್ತ–ಸಂರಚನೆಯು ಒಂದು ನಿಯಂತ್ರಕ ಸತ್ತೆಯು ಆಗತ್ಯವಾಗಿದೆ. ನಿಯಂತ್ರಕ ಸತ್ತೆಯು ಇರದಿದ್ದರೆ ಸಂರಚನೆಯ ವಿಭಿನ್ನ ಅಂಗ ಪ್ರತ್ಯಂಗಗಳು ಮೂಲದೇಹದಿಂದ ವಿಚ್ಛಿನ್ನವಾಗಿ ಹೋಗುತ್ತಿದ್ದವು. ಈ ಕಾರಣದಿಂದ ದೇಹದ ಅವಕ್ಷಯವು ತ್ವರಿತಗೊಳ್ಳುತ್ತಿತ್ತು. ಮತ್ತು ಕೊನೆಗೆ ಆಕಾಲ ಮೃತ್ಯುವಿಗೆ ತುತ್ತಾಗುತ್ತಿತ್ತು. ಈ ಮೂಲದೇಹದ ನಿಯಂತ್ರಕ ಶಕ್ತಿಯು, ಮೂರುಲೋಕಗಳಲ್ಲಿ, ಮೂರುಪ್ರಕಾರದ್ದಿದೆ. ಜಡಜಗತ್ತಿನ ನಿಯಂತ್ರಕ ಶಕ್ತಿಯು ಯಾವನೋ ಒಬ್ಬ ಜೀವಂತ ವ್ಯಕ್ತಿಯೋ, ಅಥವಾ ಅವನಿಂದ ನಿರ್ಮಿತವಾದ ಇಲ್ಲವೆ ನಿಯಂತ್ರಿತವಾದ ಒಂದು ಯಾಂತ್ರಿಕ ಸತ್ತೆಯೋ ಆಗಿರಬಹುದು. ಭಾವ ಜಗತ್ತಿನಲ್ಲಿ ಈ ನಿಯಂತ್ರಕ ಸತ್ತೆಯು ಒಂದು ವಾಸ್ತವಾಧಾರಿತ ಅಥವಾ ವಾಸ್ತವಧರ್ಮೀ ದರ್ಶನವಾಗಿರಬಹುದು. ಅದೇ ಮೇರೆಗೆ, ಆಧ್ಯಾತ್ಮಿಕ ಲೋಕದಲ್ಲಿ ಈ ನಿಯಂತ್ರಣ ಸತ್ತೆಯು ಈಶ್ವರಮುಖಿಯಾದ ಪ್ರಣಿಧಾನ ಆಗಿರಬಹುದು.

ಈ ಈಶ್ವರಮುಖೀ ಪ್ರಣಿಧಾನವಿರುವವರು ಮಾತ್ರ ಹೀಗೆ ಹೇಳಬಲ್ಲರು:

ಆಮರಾಈ ಜಯ, ಕರಿಜಲ, ಏಈ ಭುವನ
ರಣಮುಖೀ ನಯ ಹರಿಮುಖಿ ಕರಿವನ

ಜಿಯಿಪೆವು ನಾವ್ ಈ ಭುವನವ
ಅಲ್ಲ ರಣದಿ; ಹರಿಯ ದಯದಿ,

ಖಡ್ಗದಿಂದ ದೊರೆತ ವಿಜಯವು ಅಲ್ಪಕಾಲಮಾತ್ರ. ಆ ಖಡ್ಗಗಳಿಗೆ ಜಂಗು ಹತ್ತುವುದರಲ್ಲಿಯೇ ಆ ವಿಜಯವೂ ಶೂನ್ಯದಲ್ಲಿ ಮಾಯವಾಗುತ್ತದೆ. ಈ ಜಾಗತಿಕ ಲೋಕದಲ್ಲಿ ನಿಯಂತ್ರಕನ ಆಗತ್ಯ ಬೀಳುವುದೆಂದು ನಾನು ಹೇಳಹತ್ತಿದ್ದೆ. ಮತ್ತು ಆ ನಿಯಂತ್ರಕನು ವಿಶೇಷ ವ್ಯಕ್ತಿಯಾಗಿರಬಹುದು ಇಲ್ಲವೆ ವಿಶೇಷವ್ಯಕ್ತಿಯಿಂದ ನಿಯಂತ್ರಿತವಾದ ಯಾಂತ್ರಿಕ ಶಕ್ತಿಯಾಗಿರಬಹುದು. ವಿಶೇಷ ವ್ಯಕ್ತಿಯೂ ಅಲ್ಪಕಾಲಿಕವಾಗಿರುತ್ತಾನೆ. ಅಂತೆಯೇ ಯಾಂತ್ರಿಕ ಶಕ್ತಿಯೂ ಅಲ್ಪಕಾಲಿಕವಾಗಿರುತ್ತದೆ. ಆದ್ದರಿಂದ ಇವರಿಂದ ನಿಯಂತ್ರಿತವಾದ ಯಾವ ಸತ್ತೆಯೂ ದೀರ್ಘಕಾಲಿಕವಾಗಿರಲಾರದು.

ನಾನು ಇದೀಗ ಹೇಳಿದಂತೆ, ಖಡ್ಗದಿಂದಾಗಲಿ, ಇಲ್ಲವೆ ಇತರ ಸಮರಶಕ್ತಿಯಿಂದಾಗಲಿ, ಕಬ್ಬಿಣದ ಗೋಡೆಗಳನ್ನು ನಿಲ್ಲಿಸುವುದರಿಂದಾಗಲಿ, ಯಾವುದೊಂದು ಸಂರಚನೆಯನ್ನು ದೃಢವಾಗಿ ಇರಿಸುವ ಸಾಮರ್ಥ್ಯವು ವ್ಯಕ್ತಿಯದೂ ಅಲ್ಲ; ಯಂತ್ರದ್ದೂ ಅಲ್ಲ; ಸಮರಾಸ್ತ್ರಗಳದೂ ಅಲ್ಲ.

ಸ್ವರಾಜ ಶುದ್ಧ ಆತ್ಮ ಹೋತೇ ಇ ಅಂತರೇತೇ ಮುಕ್ತಿಛಾಇ,
ಅಸಿರ ಬಲೇ, ಮಸೀರ ಬಲೇ, ಪೇಶೀರ ಬಲೇ, ಮುಕ್ತಿನಾಇ.

ಕೇವಲ ಆಧ್ಯಾತ್ಮಿಕ ಮಾರ್ಗದಿಂದ ಮಾತ್ರ ಸ್ವರಾಜ್ಯ ಪಡೆಯಬಹುದು. ಏಕೆಂದರೆ ಸ್ವರಾಜ್ಯವು ಮನದಲ್ಲಿದೆ. ಸ್ವರಾಜ್ಯವನ್ನು ಖಡ್ಗದಿಂದಾಗಲಿ, ಲೇಖನಿಯಿಂದಾಗಲಿ, ಇಲ್ಲವೆ ನರಬಲದಿಂದಾಗಲಿ ಪಡೆಯಲಾರನು. ಈ ಕಾರಣದಿಂದಲೇ ನಾನು ಈ ಮುನ್ನ ಅನೇಕ ಸಲ ಹೇಳಿರುವೆ. ಈಗ ಮತ್ತೆ ಅದನ್ನೇ ಪುನರಪಿ ಹೇಳಬಯಸುವೆ. ಅದೇನೆಂದರೆ, ಪರಮಾಣು ಬಾಂಬುಗಳಿಗೆ ಮಾನವನು ಹೆದರಬೇಕಾಗಿಲ್ಲ. ಪರಮಾಣು ಬಾಂಬು ಮಾನವನು ನಿರ್ಮಿಸಿದ ಒಂದು ವಿಶೇಷ ಸತ್ತೆ ಮಾತ್ರ. ಕಾಲ ಪ್ರವಾಹದಲ್ಲಿ ಅದರ ನಾಶವಾಗುತ್ತದೆ. ಅದರ ಆಸ್ತಿತ್ವಿಕ ಮೂಲ್ಯವು, ಅದರ ಭೀಕರತೆಯು, ಒಂದು ದಿನ ಶೂನ್ಯವಾಗುತ್ತವೆ. ಈ ಬಾಂಬುಗಳನ್ನು ತಯ್ಯಾರಿಸಿದ ಮಾನವನ ಬುದ್ಧಿಯೇ ಒಂದು ದಿನ ಘಟನಾವಳಿಗಳ ಸಹಜ ಕ್ರಮನಲ್ಲಿ ಇದರ ವಿರುದ್ಧದ ಪ್ರಚಂಡ ಶಕ್ತಿಯನ್ನು ಆವಿಷ್ಕರಿಸುವುದು.

ಎಲ್ಲ ಅಸ್ತ್ರಗಳೂ ಕೆಲವೊಂದು ಜನರನ್ನು ನಾಶಗೊಳಿಸಬಲ್ಲವೆಂಬುದೇನೋ ನಿಜ. ಕೆಲವು ನೂರು ಜನರನ್ನು ಕೊಲ್ಲಬಹುದು; ಬೇರೆ ಕೆಲವು ಸಾವಿರ ಜನರನ್ನು ಕೊಲ್ಲಬಹುದು. ಇನ್ನು ಕೆಲವು ನೂರಾರು ಸಾವಿರ ಜನರನ್ನು ಕೊಲ್ಲಬಹುದು. ಒಂದು ಅಸ್ತ್ರದ ಮಾರಕ ಶಕ್ತಿಯನ್ನು ನಿರ್ಧರಿಸುವುದೇ ಹೀಗೆ. ಆದರೆ ಯಾವುದೇ ಅಸ್ತ್ರವು ಎಷ್ಟೇ ಭಯಾರವಹವಾಗಿರಲಿ, ಒಂದು ದಿನವಂತೂ ಅದರ ಪ್ರತಾಪವು ಶೂನ್ಯವಾಗಲೇಬೇಕು. ಮಾನವನು ಬಿಲ್ಲು-ಬಾಣಗಳಿಂದ ಭಯಪಡುವ ಒಂದು ಕಾಲವಿತ್ತು. ಈಗ ಬಿಲ್ಲು-ಬಾಣಗಳಿಂದ ಯುದ್ಧ ಮಾಡುತ್ತೇವೆಂದರೆ ಮಾನವನು ಒಳಗೊಳಗೇ ನಗುತ್ತಾನೆ.

ಈ ತೆರನಾಗಿ ಯುದ್ಧದಲ್ಲಿ ಯಾವುದೇ ಅಸ್ತ್ರವು ಅದೆಷ್ಟೇ ಪ್ರಖರವಾಗಿರಲೊಲ್ಲದೇಕೆ? ಇಲ್ಲವೆ ಯಾವುದೇ ಸಂರಚನೆಯ ನಿಯಂತ್ರಕನು ಎಷ್ಟೇ ಬಲಾಢ್ಯನಾಗಿರಲೊಲ್ಲನೇಕೆ? ಅವನ ನಿಯಂತ್ರಣ–ಲಗಾಮುಗಳು ಒಂದು ದಿನ ಶಿಥಿಲವಾಗಿ ಹೋಗುತ್ತವೆ. ಅದೇ ಮೇರೆಗೆ ಸಂರಚನೆಯು ಗೋಡೆಯು ಉಸುಕಿನಂತೆ ಜರಿಯುತ್ತ ಜರಿಯುತ್ತ ಒಂದು ದಿನ ಧೂಳಿಯಲ್ಲಿ ಸೇರಿಹೋಗುತ್ತದೆ.

ಆದರೆ ನಿಯಂತ್ರಕನ ಆವಶ್ಯಕತೆಯು ಜಡಜಗತ್ತಿನಲ್ಲಿ ಇದೆಯಷ್ಟೇ ಅಲ್ಲ; ಇನ್ನೂ ಅಧಿಕವಾಗಿದೆ. ಏಕೆಂದರೆ, ಈ ಜಡಜಗತ್ತಿನಲ್ಲಿಯೇ, ಪಶುವೃತ್ತಿಯು ಹುಚ್ಚು ನಾಯಿ

ಯಂತೆ, ಎರಡನೆಯವರ ತುತ್ತನ್ನು ಕಸಿಯುತ್ತದೆ. ಈ ಜಡಜಗತ್ತಿನಲ್ಲಿಯೇ ಈ ಮಾನವ ದೇಹಧಾರಿಯಾದ ಜೀವನು, ಭಾವಜಡತೆಯಿಂದ ಪ್ರೇರಿತನಾಗಿ ದುಃಖಿತಪ್ತ ವಿಧವೆಯ ಏಕಮಾತ್ರ ಸಂತಾನವನ್ನು ಹೊಡೆದು ಕೊಂದುಹಾಕುತ್ತಾನೆ. ಈ ಭೌತಿಕ ಕ್ಷೇತ್ರದಲ್ಲಿ ಹಣ-ಪಿಪಾಸುಗಳಾದ ರಕ್ಕಸರು, ಸರಳ, ನಿರಪರಾಧಿ, ಮತ್ತು ಅಸಂಘಟಿತ ಜನರು ಹಸಿವಿನಿಂದ ಬಳಲಿ ಕ್ರಮೇಣ ಸಾಯುವಂತೆ ಮಾಡುತ್ತಾರೆ. ಈ ಜಡಜಗತ್ತಿನಲ್ಲಿ ಬಲವಂತರು ಬಲಹೀನರ ನಾಲಗೆ ಸೀಳುತ್ತಾರೆ. ಅವರೆಂದೂ ಬಾಯಿ ಬಿಡದಂತೆ ಮಾಡುತ್ತಾರೆ. ತಮ್ಮ ಆಂತರಿಕ ಒತ್ತಾಸೆಗಳನ್ನು ವ್ಯಕ್ತಪಡಿಸುವ ಅವಕಾಶಗಳಿಂದ ಚ್ಯುತರಾಗುವಂತೆ ಮಾಡುತ್ತಾರೆ, ಆದ್ದರಿಂದ ಈ ಜಡಜಗತ್ತಿನಲ್ಲಿ ಅನ್ವಯಿಸಬಹುದಾದ ಕಠೋರ ಶಾಸ್ತ್ರದ ಅಗತ್ಯವಿದೆ. ಈ ಶಾಸ್ತ್ರವು ಯಾವಾಗಲೂ ಒಂದು ವಿಶೇಷ ಪುಸ್ತಕ ರೂಪದಲ್ಲಿಯೇ ಇರುವುದೆಂಬ ಮಾತೇನೂ ಇಲ್ಲ. ಓರ್ವ ಶುಭಕಾರಿಯಾದ ಭಾವೋದ್ದೀಪಿತ ವ್ಯಕ್ತಿಯೇ ಈ ಕ್ಷೇತ್ರದಲ್ಲಿ ಪುಸ್ತಕ ರೂಪದ ಶಾಸ್ತ್ರಕ್ಕಿಂತ ಹೆಚ್ಚಾಗಿ ಕಾರ್ಯ ಮಾಡಬಲ್ಲನು.

ಈ ಜಡಜಗತ್ತಿನಲ್ಲಿ, ಯಾವುದೊಂದು ಸಂರಚನೆಯನ್ನು ಬಹಳ ಕಾಲದ ವರೆಗೆ ಜೀವಂತವಿಡಲು ಸಾಧ್ಯವಾಗಲಾರದೆಂದು ನಾನು ಮೇಲಿಂದ ಮೇಲೆ ಹೇಳುತ್ತ ಬಂದಿದ್ದೇನೆ. ಅತಿ ಹೆಚ್ಚೆಂದರೆ, ಹೆಸರಿಗೆ ಮಾತ್ರ ಇರಿಸಿಕೊಳ್ಳಬಹುದು. ಕೇವಲ ಹೆಸರಿಗೆ ಮಾತ್ರ ಇರಿಸಿಕೊಳ್ಳುವುದ ಮೂಲರೂಪದಿಂದ ಬಹುದೂರವಾದಂತೆ. ಅರ್ಥಾತ್, ಒಂದು ವೇಳೆ, ಯಾವುದೇ ಸಂರಚನೆಯು ಅಸ್ತಿತ್ವವು, ಬಹು ದೀರ್ಘಕಾಲದ ವರೆಗೆ ಅದು ವಿವರ್ತನೆಯ ಮಧ್ಯೆ ಸಹ ಉಳಿದುಕೊಂಡು ಬಂದಿದೆಯೆಂಬುದನ್ನು ಮನಗಾಣಬಹುದು. ಒಂದು ವೇಳೆ ವಿವರ್ತನೆಯು ಬಾರದೆ ಹೋದರೂ ಸಹ, ಅದು ಜೀವಂತವಾಗಿ ಉಳಿಯಬಹುದು. ಆದರೆ ಹೀಗಾಗುವುದು ತೀರ ವಿರಳ. ಮತ್ತು ಆ ಅಸ್ತಿತ್ವವು ಉದ್ದೀಪಿತ ಮತ್ತು ಶಕ್ತಿಯುತ ಜನರ ಕೀರ್ತಿಶಾಲಿ ಅಸ್ತಿತ್ವದಂತಲ್ಲ. ಇಂಥ ಅಸ್ತಿತ್ವದ ಪರಿಪಾಲನೆಯು ಮಣ್ಣು-ಹುಳದಂತೆ ತೀರಾ ದೀನ ಮತ್ತು ದಲಿತವಾದುದು.

'ಶಾಸನಾತ್ ತಾರಯೇತ್ ಯಸ್ತು ಸಃ ಶಾಸ್ತ್ರಃ ಪರಿಕೀರ್ತಿತಃ'. ಶಾಸ್ತ್ರ ರೂಪಿ ಪುಸ್ತಕದ ಬದಲು ಒಂದು ವೇಳೆ, ಶುಭಕಾರಿಯಾದ ಮಾನವನೋರ್ವನ ಶಾಸನ ಮೂಲಕ ಸಂರಚನೆಯನ್ನು ಸಂರಕ್ಷಿಸಬಯಸುತ್ತಿದ್ದರೆ, ಅವನು ಸಹ ಶಾಸ್ತ್ರಕ್ಕೆ ಸಮಾನವಾಗಿಯೇ ಶುಭಕಾರಿಯಾಗಬೇಕಾಗುತ್ತದೆ. ಅರ್ಥಾತ್ ಎಲ್ಲಿ ಶುಭಾಶುಭದ ಪ್ರಶ್ನೆ ಇದೆಯೋ, ಅಲ್ಲಿ ಆದರ್ಶದಿಂದ ನಾವು ಎಂದೆಂದೂ ಎಳ್ಳಿನಿತೂ ಸರಿಯೆವು ಮತ್ತು ಯಾರನ್ನೂ ಸರಿಯಗೊಡೆವು. ಯಾರು ಯಾರು ನಿಂದಿಸುವರೋ ಇಲ್ಲವೆ ಸಂವಾದ ಪತ್ರದಲ್ಲಿ ಏನೇನು ಬರೆಯುವರೋ ಇಲ್ಲವೆ ಮತ ಪಡೆಯುವಲ್ಲಿ ಯಾವ ಪ್ರಕಾರದ ಪ್ರತಿಕ್ರಿಯೆಯನ್ನು, ಎದುರಿಸಬೇಕಾಗುವುದೋ? ಎಂದು ಯೋಚಿಸುತ್ತ ಕುಳಿತರೆ, ಕಲ್ಯಾಣ ಸಾಧ್ಯವಾಗದು.

ಮಾನಸಿಕ ಜಗತ್ತಿನ ಸಂರಚನೆಯು ವಿಶೇಷ–ಆದರ್ಶವನ್ನು ಆಧರಿಸಿ ನಿರ್ಮಾಣಗೊಳ್ಳುತ್ತದೆ. ಈ ಆದರ್ಶ ಶಬ್ದದ ನಿಜಾರ್ಥವೆಂದರೆ, ಮಾರ್ಗದರ್ಶಿ ರೇಖೆಗಳು ಇಲ್ಲವೆ ಯಾರನ್ನು ನೋಡಿ ನಾವು ನಡೆಯಬಲ್ಲೆವೋ, ಅವನು. ಆದರೆ ಕಾಲವಶದಲ್ಲಿ

ಏನಾಗುತ್ತದೆ?

ಆದರ್ಶವನ್ನು ಪೃಥಕ್ಕರಿಸಿ ನೋಡಿದರೆ, ನಾವು ಎರಡು ರೂಪಗಳನ್ನು ಕಾಣುತ್ತೇವೆ. ಒಂದು ಅದರ ಹೊರಗಿನ ರೂಪ. ಇನ್ನೊಂದು ಅದರ ಆಂತರಿಕ ರೂಪ. ಎಲ್ಲಿ ಆಂತರ್ಯದೊಂದಿಗೆ ಬಾಹ್ಯದ ಮಧುರ ಸಮನ್ವಯಕ್ಕಾಗಿ ಆದರ್ಶದ ಪ್ರಚಾರವಾಗುವುದೋ, ಅಲ್ಲಿ ಅಂತರ್ ಬಾಹ್ಯಗಳ ಅಭಿನ್ನತೆಯು ಕಾಲ-ಬಂಧನವನ್ನು ಜಯಿಸಿ ವಿಜಯಿಯಾಗುತ್ತದೆ. ಇಂದಿನ ಜಗತ್ತಿನಲ್ಲಿ ಕುಳಿತು ನಾವು ನೋಡಿದಾಗ, ಹಿಂದಿನ ಯುಗದ ಧರಾತಲದ ಮೇಲೆ ಈ ಪ್ರಕಾರದ ಯಾವ ಆದರ್ಶವೂ ಇರಲಿಲ್ಲ; ಹೀಗೆ ಹೇಳುವುದೇನೂ ತಪ್ಪಾಗಲಾರದು.

ಈ ಕಾರಣದಿಂದಾಗಿಯೇ ಯಾವುದೋ ಒಂದು ಆದರ್ಶವನ್ನು ರೂಪಿಸುವಾಗ, ಮಾನವನಿಗೆ ಕ್ಷಣಕ್ಷಣವೂ ಇದಿರೇಟನ್ನು ಎದುರಿಸಬೇಕಾಗುತ್ತದೆ. ಸಂಕಟದ ವಿರುದ್ಧ ಯಾವ ಬಾಧೆಗಳು ಬಂದು ನಿಲ್ಲುವವೋ, ಅವುಗಳ ವಿಷಯವಾಗಿ ನಾನು ಮಾತಾಡುತ್ತಿಲ್ಲ. ಆ ಬಾಧೆಗಳಾದರೋ ಸಹಾಯಕ ಶಕ್ತಿಗಳೇ ಆಗಿದೆ. ನಾನಿಲ್ಲಿ ಹೇಳಬಯಸುವುದೇನೆಂದರೆ, ತಥಾಕಥಿತ ಆದರ್ಶಗಳೇನಿವೆಯೋ, ಅವುಗಳೇ ಬಾಧಾಸ್ವರೂಪಿಯಾಗಿವೆ. ಅಹಿಂಸೆಯ ಇಂಥ ಅನೇಕ ಮೂರ್ತಪ್ರತೀಕಗಳನ್ನು, ಮಹಾನುಭಾವರನ್ನು ನಾವು ಈ ಧೂಳಿತುಂಬಿದ ಧರೆಯ ಮೇಲೆ ನೋಡಿದ್ದೇವೆ. ಅವರ ಮಾತುಗಳನ್ನು ಓದಿದಾಗ, ಇಲ್ಲವೆ ಕೇಳಿದಾಗ, ಈ ಮೃಣ್ಮಯ ಜಗತ್ತು ನಿಜವಾಗಿಯೂ ಚಿನ್ಮಯವಾಗುವುದೇನೋ ಎಂದು ಕಾಣಬರುತ್ತದೆ. ಮಾನವನು ತನ್ನೆಲ್ಲ ಮಧುರತೆಯನ್ನು, ತನ್ನೆಲ್ಲ ಶುಭ ಹಾರೈಕೆಗಳನ್ನು ಇಂಥ ಮಹಾನುಭಾವರ ಪಾದದ ಮೇಲೆ ಅರ್ಪಿಸಿಬಿಟ್ಟಿದ್ದಾರೆ. ಆದರೆ, ಅವರು ಮಾನವರನ್ನು ದುಃಖದ ಮಡುವಿನಲ್ಲಿ ತ್ಯಜಿಸಿಬಿಟ್ಟು, ಅನ್ಯ ಪ್ರಕಾರದ ಮಾತುಗಳನ್ನಾಡಹತ್ತಿದರು. ಹೀಗೆ ಬೇರೆ ಮಾತನಾಡಿ ತಮ್ಮ ನಾಲಗೆಯನ್ನು ಹೊಲಸುಮಾಡಿಕೊಂಡರಷ್ಟೇ. ಹೀಗಾಗಿ ಜನರು ದಿಕ್ಕುಗೆಟ್ಟು, ಯಾರಲ್ಲಿ ಆಸೆ ಇರಿಸಿದ್ದರೋ, ಅವರ ಬಗ್ಗೆ ಕಂಗಾಲಾಗಿ, ಹಾದಿಯ ತಿರುಕರಾದರು.

ಮಾನವನು ತನ್ನೊಳಗಿನ ಕಪ್ಪನ್ನು ದರ್ಶನವಾಣಿಯಿಂದ ಮುಚ್ಚಲು ಥಳಕಿನ ಭಾಷೆ ಬಟ್ಟೆ ಬಳಸುತ್ತಾನೆ. ಈ ಥಳಕಿನ ಪರದೆಯು ಸುವರ್ಣದ್ದಾಗಿರಬಹುದು; ಬೆಳ್ಳಿಯಂತಿರಬಹುದು; ಅಷ್ಟೇ ಏಕೆ, ಬಹುಬಗೆಯ ಬಣ್ಣದ್ದಾಗಿರಬಹುದು. ಮೊದ ಮೊದಲು ಹಾದಿ ತಪ್ಪಿದ ಜನರು, ಇಲ್ಲವೆ ಅಡ್ಡ ಹಾದಿ ತುಳಿದ ಜನರು, ಈ ಥಳಕಿನ ಬಣ್ಣಗಳಿಂದ ಆಕರ್ಷಿತರಾಗುತ್ತಾರೆ; ಏನೋ ಬಿಸಿಲ್ಗುದುರೆ ಬೆನ್ನು ಹತ್ತಿದವರಂತೆ. ಅನಂತರ ಅವರು ಎಲ್ಲವನ್ನೂ ಕಳೆದುಕೊಂಡು ಕೂಡ್ರುತ್ತಾರೆ. ಮತ್ತು ಕೊನೆಗೆ ಮಂಡೆ ಮುರಿದು, ಅವರು ಕುಪ್ಪಳಿಸುತ್ತಾರೆ ಮತ್ತು ನಿರಾಶೆಯ ನಿಟ್ಟುಸಿರಿನ ಬೇಗೆಯಲ್ಲಿ. ಬೆಂದು ಸಾವನ್ನಪ್ಪುತ್ತಾರೆ. ಕೆಲವೊಮ್ಮೆ ಕೊನೆಯುಸಿರೆಳೆಯುವ ಮುನ್ನವೇ ಅವರು ಮೃಗತೃಷ್ಣೆಯ ಮಿಥ್ಯೆಯನ್ನು ಕಂಡುಕೊಳ್ಳುತ್ತಾರೆ. ಆದರೆ ಬಹುತೇಕ ಪ್ರಸಂಗಗಳಲ್ಲಿ, ತಮ್ಮ ಕೊನೆಯುಸಿರೆಳೆಯುವ ಮುನ್ನವೇ ತಥ್ಯವನ್ನು ಕಂಡುಕೊಳ್ಳಲು ಅವರು ಸಮರ್ಥರಾಗದು. ಈ ದೋಷಪೂರ್ಣ ದರ್ಶನಗಳ ಮಾರಕ ಸ್ವಭಾವವು ಅವರಿಗೆ ಕೊನೆಯ ತನಕ ಗುಟ್ಟಾಗಿಯೇ ಉಳಿಯುತ್ತದೆ. ಮಾನಸಿಕ ಕ್ಷೇತ್ರದಲ್ಲಂತೂ ಇಂಥ

ಭಯಂಕರ ದರ್ಶನಗಳು ದುರಂತವನ್ನೇ ಉಂಟುಮಾಡಬಲ್ಲವು.

ಮಾನವನು ಮನಪ್ರಧಾನ ಜೀವಿಯಾಗಿದ್ದಾನೆ. ಭೌತಿಕ ಜಗತ್ತಿನ ಪ್ರಚೋದನೆಗಳಿಗಿಂತಲೂ ಹೆಚ್ಚಾಗಿ, ಭಾವ ಜಗತ್ತಿನ ಒತ್ತಾಸೆ ಮತ್ತು ಅಧ್ಯಯೋಗ (pre-occupations) ಅವನನ್ನು ಹೆಚ್ಚಾಗಿ ಪ್ರಭಾವಿತಗೊಳಿಸುತ್ತವೆ. ಮತ್ತು ಅವನಿಗೆ ಆತ್ಮ ಪ್ರಸಾರದ ಸುಯೋಗವನ್ನೂ ಒದಗಿಸುತ್ತವೆ. ಮತ್ತು ಯಾವ ಪ್ರಚೋದನೆ ಇಲ್ಲವೆ ಬಯಕೆಗಳು ಅವನ ಭಾವಜಗತ್ತನ್ನು ಕದಡುವವೋ, ಅವುಗಳಲ್ಲಿ ತೀರ ಸಾಮಾನ್ಯ ದೋಷವಿದ್ದರೂ ಸಹ, ಅವನು-ತನ್ನೊಬ್ಬನನ್ನೇ ಏಕೆ?–ಒಂದು ದೊಡ್ಡ ಜನಗೋಷ್ಠಿಯನ್ನೇ, ಅಲ್ಪಕಾಲದ ವರೆಗೇಕೆ, ಸುದೀರ್ಘ ಕಾಲದ ವರೆಗೆ ಹತಾಸೆಗೊಳಿಸಬಲ್ಲನು. ಇದನ್ನೆಲ್ಲ ಅರಿತುಕೊಂಡು, ಯಾವಾಗ ಅವನು ಎಲ್ಲವನ್ನು ಸಿಕ್ಕಿಸುವ ಜಾಲದಿಂದ ಪಾರಾಗುವ ಪ್ರಯತ್ನದಲ್ಲಿ ಹೆಜ್ಜೆ ಇರಿಸುವನೋ, ಮತ್ತು ಮೇಲೆ ಬರಲು ಪ್ರಯತ್ನಿಸುವನೋ ಆಗ, ಅವನು ಕೆಸರಿನಲ್ಲಿ ಮುಳುಗಿ ಹೋಗಿರುತ್ತಾನೆ. ಈ ಕಾರಣದಿಂದಾಗಿಯೇ, ಜಡ ಜಗತ್ತಿಗಿಂತಲೂ ಮಾನಸಿಕ ಮತ್ತು ಭಾವ ಜಗತ್ತಿನ ನಿಯಂತ್ರಣ ವ್ಯವಸ್ಥೆಯು ಇನ್ನಷ್ಟು ಒಳ್ಳೆಯದಾಗಬೇಕಾಗಿದೆ.

ಒಂದು ವೇಳೆ, ಯಾವನೊಬ್ಬನು ಮಾನವರಿಗೆ ಯೋಗ್ಯ ನಿರ್ದೇಶನ ನೀಡದಿದ್ದರೂ ಚಿಂತೆಯಿಲ್ಲ. ತಪ್ಪು ನಿರ್ದೇಶನವನ್ನಾದರೂ ನೀಡದಿರಲಿ. ಆವರ ಮನದ ವಿಚಾರದ ಮೆತ್ತನ್ನ ಮಣ್ಣನ್ನು ತುಳಿ ತುಳಿದು, ಅವರನ್ನು ಹಾದಿ ಬಿಡಿಸದಿರಲಿ, ಜಡ ಜಗತ್ತಿನಲ್ಲಿ ಶಾಸ್ತ್ರವೇ ಕಠೋರ ನಿಯಂತ್ರಕವಾಗಿರುವುದು ತುಂಬಾ ಅವಶ್ಯವಾಗಿದೆ. ಅದೇ ರೀತಿ, ಪುಸ್ತಕಕ್ಕಿಂತಲೂ ಓರ್ವ ಬಲಿಷ್ಠ ವ್ಯಕ್ತಿಯೇ ನಿಯಂತ್ರಕನಾಗಿರುವುದು ಇನ್ನೂ ಮೇಲು. ಆದರೆ ಮಾನಸಿಕ ಕ್ಷೇತ್ರದಲ್ಲಂತೂ, ಶಾಸ್ತ್ರವೂ ಬೇಕು. ಮತ್ತು ಅದನ್ನು ಎತ್ತಿ ಹಿಡಿಯುವ ವ್ಯಕ್ತಿಯೂ ಬೇಕು. ಉಪಯೋಗ ಮತ್ತು ವಾಸ್ತವಿಕ ಮೂಲ್ಯಗಳ ದೃಷ್ಟಿಯಿಂದ ಎರಡಕ್ಕೂ ಸಮಾನ ಮಹತ್ವವುಂಟು.

ಮಾನವನೆದುರು ಉತ್ಕೃಷ್ಟವಾದ ಮತ್ತು ಸರ್ವಸ್ಪರ್ಶಿಯಾದ ದರ್ಶನವಿರುವುದು ತುಂಬಾ ಅವಶ್ಯವಾಗಿದೆ. ಈ ದರ್ಶನದಲ್ಲಿ ಎಷ್ಟೊಂದು ಸಾಧ್ಯವೋ ಅಷ್ಟರ ಮಟ್ಟಿಗೆ, ಮನದ ಯಾವ ಭೂಮಿಕೆಯಲ್ಲಿಯೂ ಯಾವುದೇ ಕುಂದು ಇರಕೂಡದು. ಅದೇ ಮೇರೆಗೆ ಆ ದರ್ಶನವನ್ನು ಕಾರ್ಯರೂಪಕ್ಕಿಳಿಸಲು, ಓರ್ವ ದೃಢಚಿತ್ತದ, ಘನಪಂಡಿತ ಮಹಾಪುರುಷನ ಅಗತ್ಯವೂ ಇದೆ. ಒಂದು ವೇಳೆ, ದರ್ಶನದಲ್ಲಿ ದೋಷವಿದ್ದರೂ ಸಹ, ಆ ಅಗ್ರಪುರುಷನ ಜೀವಿತಕಾಲದಲ್ಲಿ,ದರ್ಶನದ ದೋಷಗಳಿಂದಾಗಿ ಜನಗೋಷ್ಠಿಗೆ ಯಾವುದೇ ಹಾನಿಯಾಗದು. ಆದರೆ ಯಾವಾಗ ಆ ಅಗ್ರಪುರುಷನು ಕಣ್ಮರೆಯಾಗುವನೋ ಆಗ, ದರ್ಶನದಲ್ಲಿ ದೋಷವಿರದಿದ್ದರೂ ಸಹ, ಅದನ್ನು ರೂಪಿಸುವ ಭಾರ ಹೊತ್ತ ವ್ಯಕ್ತಿಗಳು (ಅವರನ್ನು ಅಗ್ರಪುರುಷರೆಂದು ಕರೆಯಕೂಡದು) ದೋಷ-ಪೂರ್ಣರಾಗಿದ್ದರೆ, ಉನ್ನತ ಆದರ್ಶಗಳು ಕೇವಲ ಗ್ರಂಥಗಳಲ್ಲಿಯೇ ಉಳಿಯುತ್ತವೆ. ಸಮಾಜವು ದ್ರುತಗತಿಯಿಂದ ರಸಾತಳದತ್ತ ಧಾವಿಸುತ್ತದೆ. ಅದನ್ನು ಉಳಿಸುವವರಾರೂ ಇರರು. ಜನರ ಕರುಣಾರ್ದ್ರ ಕಂಬನಿಗಳು ಅವರ ಬಟ್ಟೆಯನ್ನು ತೊಯ್ಯಿಸುತ್ತವೆ.ಮಾನವರು ಮುಕ್ತಿಯ ಮುಚ್ಚಿದ ಬಾಗಿಲಿಗೆ ಹಣೆ ಜಜ್ಜಿಕೊಂಡು ಸತ್ತುಹೋಗುತ್ತಾರೆ. ಅವರಿಗೆ ಪಾರಾಗುವ ಹಾದಿಯೇ ಇರದು.

ಈ ಧರಾಪೃಷ್ಠದ ಮೇಲೆ, ಹಿಂದೆ ನೂರಾರು ದರ್ಶನಗಳು ಮೂಡಿಬಂದಿವೆ. ಈ ದರ್ಶನ ಶಾಸ್ತ್ರಗಳೇ ಮಾನವನ ಮಾನಸಿಕ ಸಂರಚನೆಯನ್ನು ನಿರ್ಮಿಸಿವೆ. ಚಿಂತನ ಜಗತ್ತಿನಲ್ಲಿಯೂ ಉನ್ನತಿಯ ಕಾರ್ಯ ಮಾಡಿವೆ. ಸಾಧಾರಣವಾಗಿ, ಮಾನವನು ಪ್ರಯತ್ನಪಟ್ಟರೂ ಸಹ, ಆ ದಾರ್ಶನಿಕ ಚಿಂತನದ ಪ್ರಭಾವವನ್ನು ದೂರವಿರಿಸಲಾರನು. ಆರ್ಥಾತ್, ಅವನ ಮನದಲ್ಲಿ ಮನೆಮಾಡಿದ ದರ್ಶನ ಸುತ್ತುಮುತ್ತು ಮಾತ್ರ ತಿರುಗುತ್ತಿರುತ್ತವೆ. ಆದ್ದರಿಂದ ಯಾವ ಜನರು ಮಾನವನಿಗೆ ಇಲ್ಲವೆ ಮಾನವ ಗೋಷ್ಠಿಗೆ ಯಾವುದೊಂದು ಹೊಸ ದಾರ್ಶನಿಕ ಜೋಧೆ ನೀಡುವರೋ ಅವರು ದೊಡ್ಡ ಹೊಣೆ ಹೊರಬೇಕಾಗುತ್ತದೆ. ಯಶಸ್ವಿಯಾಗಬೇಕಾದರೆ, ಅವರು ಗಾಢವಾದ ದಾರ್ಶನಿಕ ಜ್ಞಾನವನ್ನೂ ಮತ್ತು ಆಳವಾದ ಹೊಣೆಗಾರಿಕೆಯ ಭಾವವನ್ನೂ ಮತ್ತು ಮಾನವತೆಯನ್ನು ಕುರಿತು ನಿಷ್ಪಳಂಕ ಪ್ರೇಮವನ್ನೂ ಮೇಳವಿಸಬೇಕಾಗುತ್ತದೆ.

ಒಂದು ಕಾಲಕ್ಕೆ ಜನರಿಗೆ, ಈ ಪೃಥ್ವಿಯು ಮಾನವನ ಭೋಗಕ್ಕಾಗಿಯೇ ಇದೆ, ಎಂದು ಹೇಳಲಾಯಿತು. ಆದ್ದರಿಂದ, ಈ ಪೃಥ್ವಿಯ ಮೇಲಿನ ಉದ್ಭಿಜ, ಪಶು-ಪಕ್ಷಿಗಳಿಲ್ಲವುಗಳ ಅಸ್ತಿತ್ವವು ಮಾನವನ ಭೋಗದ ಉಪಕರಣ ರೂಪದಲ್ಲಿಯೇ ಉಂಟು. ಅವುಗಳ ಆಶೆ–ಆಕಾಂಕ್ಷೆಗಳು, ಅವುಗಳ ಜೀವನ ಏಷಣೆ, ಅವುಗಳ ಸುಖ–ದುಃಖ, ಪ್ರೀತಿ, ಅವುಗಳ ಮಾಯಾ–ಮಮತೆಗಳಿಂದ ತುಂಬಿದ ಕೌಟುಂಬಿಕ ಇಲ್ಲವೆ ಕುಲಜೀವನ ಇತ್ಯಾದಿಗಳಿಗೆಲ್ಲ ಯಾವ ಮೂಲ್ಯವೂ ಇಲ್ಲವೆಂದು ಹೇಳಲಾಗಿತ್ತು. ಆಡು–ಮರಿಗೆ ತಾನು ಜೀವಿಸಬೇಕೆಂಬ ಇಚ್ಛೆ ಎಷ್ಟೇ ಇರಲಿ, ಅದರ ಶರೀರದಲ್ಲಿ ಎಷ್ಟೊಂದು ಮಾಂಸವಿದೆ? ಎಂಬುದಷ್ಟೇ ವಿವೇಚನೆಯ ವಿಷಯವಾಗಿದೆ ಈ ದೋಷಪೂರ್ಣ ದರ್ಶನಗಳು ಮಾನವನನ್ನು ಹಿಂಸ್ರ ಪಶುವನ್ನಾಗಿಸಿವೆ. ಏಕೆಂದರೆ, ಶಾರ್ದೂಲ ಮೃಗವು ತಾನು ಉಳಿಯಬೇಕೆಂದು ಹೊಟ್ಟೆಯ ಹಸಿವು ಹಿಂಗಿಸಿಕೊಳ್ಳಲು ಜೀವಹತ್ಯೆ ಮಾಡುತ್ತದೆ. ಇತ್ತ ಮನುಷ್ಯನು ಆಸೆಯಿಂದ ಪ್ರಚೋದಿತನಾಗಿ ಜೀವಹತ್ಯೆ ಗೆಯ್ಯುತ್ತಾನೆ. ಅನೇಕ ವೇಳೆ ಮಾನವನು ತನ್ನ ಆಶಾವೃತ್ತಿಯನ್ನು ಮುಚ್ಚಿಕೊಳ್ಳಲು ಕಪಟಾಚಾರವನ್ನು ಆಶ್ರಯಿಸುತ್ತಾನೆ. ದೇವತೆಗಳನ್ನು ಪ್ರಸನ್ನಗೊಳಿಸುವ ನಾಟಕ ಹೂಡಿ, ತನ್ನ ನಾಲಗೆಯ ಚಪಲ ತೀರಿಸಿಕೊಳ್ಳುತ್ತಾನೆ. ಇದೆಲ್ಲವೂ ದೋಷಪೂರ್ಣ ದರ್ಶನದ ಫಲವೇ ಆಗಿದೆ.

ಕೆಲವೊಂದು ದರ್ಶನಗಳು ಕೆಲವು ಜನಗೋಷ್ಠಿಗಳಿಗೆ ಹೀಗೆ ಬೋಧಿಸುತ್ತವೆ: "ಈ ಮಾನವ ಗೋಷ್ಠಿಯು ಪರಮ ಪುರುಷನ ಆಶೀರ್ವಾದದಿಂದ ಧನ್ಯವಾಗಿದೆ. ಅವನ ಪ್ರಿಯ ಸಂತಾನವಾಗಿದೆ. ಇತರರೆಲ್ಲರೂ ಈಶ್ವರನ ಅಭಿಶಾಪಗ್ರಸ್ತ, ಅವಾಂಛಿತ ಜೀವರು" ಈ ದಾರ್ಶನಿಕ ದೋಷದಿಂದಾಗಿ, ಒಂದು ಗೋಷ್ಠಿಯ ಮನುಷ್ಯನು ಎರಡನೆಯ ಗೋಷ್ಠಿಯ ಮನುಷ್ಯನ ಹತ್ಯೆ ಮಾಡುವುದನ್ನೇ ಪುಣ್ಯಕಾರ್ಯವೆಂದು ಬಗೆಯುತ್ತಾನೆ. ಮತ್ತು ಸಮಾಜದ ಪಾಷಾಣದಂಥ ವೇದಿಕೆಯನ್ನು ಮನುಷ್ಯ ರಕ್ತದಿಂದ ರಂಜಿತಗೊಳಿಸುತ್ತಾನೆ. ಇದೆಂಥ ಭೀಕರ ಕೃತ್ಯ! ಮೂಲ ದರ್ಶನವು ಮನುಷ್ಯನಿಗೆ ಬೋಧಿಸಿರುವುದೇನಂದರೆ– "ಒಂದು ವೇಳೆ, ಬುದ್ಧಿಯ ಬಲದಿಂದ ಎರಡನೆಯವರ

ಕೋಷಣೆ ಮಾಡಿದರೆ, ಅದರಲ್ಲಾವ ದೋಷವೂ ಇಲ್ಲ. ಬುದ್ಧಿಯನ್ನು ಪ್ರಯೋಗಿಸುವುದೂ ಸಹ ಒಂದು ರೀತಿಯ ಪರಿಶ್ರಮವೇ ಸರಿ. ಬುದ್ಧಿಯ ಪ್ರಯೋಗ ಮಾಡುವುದೂ ಸಹ ನಮ್ಮ ಅಧಿಕಾರವೇ ಆಗಿದೆ." ಈ ಯುಕ್ತಿಯಿಂದ ಲಕ್ಷಾಂತರ ಜನರ ರಕ್ತ ಹೀರಿ, ಕೆಲವು ಪರಪುಷ್ಟ ಜೀವಿಗಳು ಉಬ್ಬಿದ ಹೊಟ್ಟೆಯವರಾಗಿದ್ದಾರೆ. ಇನ್ನೊಂದು ಕಡೆಗೆ ಜೀವಮಾತ್ರರು, ಸೊರಗಿ ಸೊರಗಿ ಅಸ್ಥಿಪಂಜರವಾಗಿದ್ದಾರೆ.

ಈ ಪ್ರಕಾರದ ತಪ್ಪು ದರ್ಶನವು, ಮಾನವರನ್ನು ನೈತಿಕ ಹಾದಿಯಿಂದ ಸರಿಸಿ, ನರಕದ ಕೀಡೆಗಳಲ್ಲಿ ಪರಿವರ್ತಿಸುತ್ತದೆ. ಅವರು ಕೇವಲ ಉದರ–ಉಪಸ್ಥ ಜೀವಿಗಳಾಗುತ್ತಾರೆ. ಧರ್ಮವಿಹೀನ ಪ್ರಾಣಿಗಳಾಗುತ್ತಾರೆ. ಇವು ಮಾನವನನ್ನು ಧರ್ಮದ ಉಪಯುಕ್ತ ಜ್ಞಾನವಿರಿಸಿ, ಧರ್ಮದ ವಿಕೃತ ವ್ಯಾಖ್ಯೆಯನ್ನು ಹೇರಿ, ಮಾನವ ಜಾತಿಗೆ ಪರಮ ಶತ್ರುವನ್ನಾಗಿ ಮಾಡುತ್ತಾರೆ. ಇವರೇ ಸರ್ವ ಮಾನವರನ್ನು ಸಂದೇಹದ ದೃಷ್ಟಿಯಿಂದ ನೋಡುವಂತೆ ಬೋಧಿಸುತ್ತಾರೆ. ಮಾನವನ ಕಲ್ಯಾಣದ ಕಾರ್ಯವನ್ನು ವಿಶೇಷ ಜನಗೋಷ್ಠಿಗಷ್ಟೇ ಸೀಮಿತಗೊಳಿಸಿ, ಉಳಿದ ಮಾನವರಿಗೆ ಸತ್ಯದ ಮಾತು ತಿಳಿಯದಂತೆ ಮಾಡುತ್ತಾರೆ. ಅವರು ಮಾನವರಿಗೆ, ನಿಜವಾಗಿ ಕಲ್ಯಾಣಕಾರಿಗಳೋ ಇಲ್ಲವೆ ಅಕಲ್ಯಾಣಕಾರಿಗಳೋ ಎಂಬುದನ್ನು ತಿಳಿಸಲಿಚ್ಛಿಸಲಿಲ್ಲ. ಜನರೆದುರು ಕಬ್ಬಿಣದ ಪರದೆ ನಿರ್ಮಿಸಿ, ಕರಾಳ ಅಜ್ಞಾನದ ಮುಸುಕು ಹಾಕಿ, ಜನತೆಗೆ ಕೆಲವೊಂದು ಆಯ್ದು, ಕಲಿಸಿದ ವಾಕ್ಯಗಳನ್ನು ಉಚ್ಚರಿಸಲು ಬೋಧಿಸಿದರು. ಅವರು ಜನರನ್ನು ಚಿಕ್ಕ ಕತ್ತಲು ಕೋಣೆಯಲ್ಲಿ ಒಳಹಾಕಿದರು. ಮತ್ತು ಅದರ ಕಿಡಕಿ-ಬಾಗಿಲುಗಳನ್ನೂ ಮುಚ್ಚಿದ್ದರು. ಹೀಗೆ ಜನರನ್ನು ಕಾರ್ಗತ್ತಲೆಯ ಗೂಗೆಗಳನ್ನಾಗಿ ಪರಿವರ್ತಿಸಲಾಯಿತು. ಆ ಮಿಥ್ಯಾತ್ಮಕ ದರ್ಶನಗಳ ಫಲವು ಹೀಗಾಗುವುದು ಅನಿವಾರ್ಯವಾಯಿತು. ಆದ್ದರಿಂದ ನಾನು ಈ ಮೊದಲೇ ಹೇಳಿದ್ದೇನೆ.ಈಗ ಇನ್ನೊಮ್ಮೆ ಪುನರುಕ್ತಿ ಮಾಡುವೆ. ಏನೆಂದರೆ, ಮಾನವ ಮನದ ಸಂರಚನೆಯ ನಿರ್ಮಾಣವೂ ಸರ್ವಸ್ಪರ್ಶೀ ದರ್ಶನದ ಮೂಲಕ ಆಗುತ್ತದೆ. ಇದರಲ್ಲಿ ಆಕಾಶದ ಉದಾರತೆಯೂ ಸಮುದ್ರದ ಸ್ಪಾಂದನಿಕ ವಿಶಾಲತೆಯೂ ಇರುತ್ತವೆ. ಯಾವ ದರ್ಶನದ ಮೂಲಕ ಹೀಗಾಗುವ ಸಂಭವವಿಲ್ಲವೋ, ಆ ದರ್ಶನವು ಮಾನವನನ್ನು ಭಾವಜಡತೆಯ ಅಂಧಕೂಪದಲ್ಲಿ ಕೆಡವಿ, ಅವನ ಐಹಿಕ, ಪಾರಮಾರ್ಥಿಕ ವಿಕಾಸದ ಹಾದಿಯನ್ನು ಸದಾ ಕಾಲ ಮುಚ್ಚಿಬಿಡುತ್ತದೆ. ಮಾನವನು, ಪ್ರಜ್ಞೆಯ ಅಬಾಧಿತವಾದ ಪ್ರಸಾರಶೀಲ ಮಾನವ–ಅಸ್ತಿತ್ವದ ಪ್ರಧಾನ ವೈಶಿಷ್ಟ್ಯವನ್ನೇ ಮರೆತು ಬಿಡುತ್ತಾನೆ. ಅವನು ತನ್ನ ವೈಶಿಷ್ಟ್ಯವನ್ನು ಮರೆತು ಉದರ–ಉಪಸ್ಥ ಜೀವಿಯಾಗಿ ಪರಿಣಮಿಸುತ್ತಾನೆ. ಮತ್ತು ಅವನು ಏನನ್ನೂ ಪಡೆಯದಿದ್ದರೂ, ಮಾನವನೆಂದು ಕರೆಯಲ್ಪಡುವ ಯೋಗ್ಯತೆಯನ್ನೇ ಸಂಪೂರ್ಣ ಕಳೆದುಕೊಳ್ಳುತ್ತಾನೆ. ಆದ್ದರಿಂದ, ಒಂದು ಸರ್ವಸ್ಪರ್ಶೀ ದರ್ಶನವನ್ನು ಅಂತರಾಳದಿಂದ ಮೆಚ್ಚಿ ಎರಡೂ ಭುಜಗಳನ್ನು ಚಾಚಿ ಹಿಡಿದುಕೊಳ್ಳಬೇಕಾದುದು ಅವನ ಕರ್ತವ್ಯವಾಗಿದೆ. ಈ ದರ್ಶನವು ಅವನನ್ನು ಯಾವುದೇ ಸ್ಥಿತಿಯಲ್ಲಿಯೂ ಸಹ ಮಾನವತೆಯ ವಿರುದ್ಧ ಹೋಗಲು ಹೇಳಲಾರದು.

ಈ ಮಾತು ಸರ್ವದೇಶಿಕ ಮತ್ತು ಸರ್ವಲೌಕಿಕ ಸತ್ಯವಾಗಿದೆ. ಏಕೆಂದರೆ

ಧರ್ಮವೇ ಜೀವನದ ಸ್ತೋತ್ರಧಾರೆಯಾಗಿದೆ. ಧರ್ಮದಿಂದಲೇ ಜೀವನ ನಡೆಯುವ ಶಕ್ತಿಯನ್ನು ಪಡೆಯುತ್ತಾನೆ. ಅವನಿಗೆ ಆ ಮಾರ್ಗದಲ್ಲಿಯ ಗಂತವ್ಯವು ದೊರೆಯುತ್ತದೆ. ಇದರೊಂದಿಗೆ ಅವನಿಗೆ ತನ್ನ ಹಾದಿಯ ದಿಕ್ಕು ಸಿಗುತ್ತದೆ. ಅರ್ಥಾತ್ ಧರ್ಮವು ಸಮಸ್ತ ಸತ್ತೆಗಳ ಅಸ್ತಿತ್ವ ಬೋಧಕವಾಗಿದೆ. ಕರಣದ ದೃಷ್ಟಿಯಿಂದ ಧರ್ಮವು ಸ್ಥಾವರದಲ್ಲಿ ಸ್ವಲ್ಪ ಅಪ್ರಕಟಿತವಾಗಿಯೇ ಇದೆ. ಆದರೆ ಜಂಗಮದಲ್ಲಾದರೋ ಸ್ವಲ್ಪ ಹೆಚ್ಚು ಪ್ರಕಟಗೊಂಡಿದೆ. ಜಂಗಮದಲ್ಲಂತೂ ಮನುಷ್ಯೇತರ ಧರ್ಮವು ಸ್ವಭಾವಸಿದ್ಧವಿದೆ ಮತ್ತು ಸಹಜಾತವಾಗಿದೆ. ಆದರೆ ಮಾನವನ ಧರ್ಮವು ಅದಕ್ಕಿಂತ ಹೆಚ್ಚಿನದಾಗಿದೆ. ಮಾನವನ ಜೀವನ ಧರ್ಮವು ಸರ್ವಪ್ರಸಾರಿಯಾಗಿದೆ. ಈ ಪ್ರಕಾರ ಧರ್ಮವು ಜಗತ್ತಿನ ದಿಶೆಗಳ ಪ್ರದರ್ಶಕ, ಪ್ರೇಕ್ಷಕ, ನಿಯಂತ್ರಕವಾಗಿವೆ. ಮತ್ತು ಓರ್ವ ಸ್ವಸ್ಥ ಸರ್ವಕಾಲಿಕ ತತ್ತ್ವವು ಆ ಧರ್ಮದ ಅಭಿಭಾವಕವಾಗಿದೆ. ಇದು ಮಾನವನ ದಿನಚರ್ಯೆಯಿಂದ ಆರಂಭಿಸಿ, ಸಮಾಜದ ನಡೆವಳಿ; ಸಮಾಜ ಪ್ರೇರಣೆ, ಹಾಗೆಯೇ ಈಶ್ವರನೊಂದಿಗೆ ಒಂದಾಗುವ ವರೆಗಿನ ಪ್ರತಿಯೊಂದು ವಿಷಯದ ನಿರ್ದಿಷ್ಟ ಮತ್ತು ಬಲಿಷ್ಠ ವ್ಯವಸ್ಥೆಯನ್ನು ನಿರ್ಮಿಸಿ, ಪ್ರತ್ಯೇಕ ಸಂಕೇತವನ್ನು ನೀಡುತ್ತದೆ. ಯಾವುದರಲ್ಲಿ ಇಂಥ ಕ್ಷಮತೆಯಿಲ್ಲವೋ, ಅದು ಅದು ಆಧ್ಯಾತ್ಮ, ಜಗತ್ತಿನಲ್ಲಿ ಶಾಸ್ತ್ರ ಪದದಿಂದ ಕರೆಯಲು ಯೋಗ್ಯವಾಗಿಲ್ಲ. 'ಶಾಸನಾತ್ ತಾರಯೇತ್ ಯಸ್ತ್ರ ಸಃ ಶಾಸ್ತ್ರ ಪರಿಕೀರ್ತಿತಃ'. ಈ ವ್ಯಾಖ್ಯೆಯ ಚೇತನಾದೀಪವು ಅದರಲ್ಲಿ ಇರಲಾರದು.

ಧರ್ಮ ಜಗತ್ತಿನಲ್ಲಿ ಇಲ್ಲವೆ ಆಧ್ಯಾತ್ಮಿಕ ಜಗತ್ತಿನಲ್ಲಿ, ಧರ್ಮಶಾಸ್ತ್ರ ಹೆಸರಿನ ವಾಸ್ತವಿಕ ಆದೇಶ, ಇಲ್ಲವೆ ಸಂಪದವು ಇದ್ದೇ ಇರುತ್ತದೆ ಎಂಬುದನ್ನು ನಾವು ನೆನಪಿಡಬೇಕು. ಇದರೊಂದಿಗೇನೇ, ಓರ್ವ ದೃಢ, ಅಭಿಭಾವಕನೂ ಇರುತ್ತಾನೆ. ಈ ಅಭಿಭಾವಕನು, ತನ್ನ ಜೀವನ ಕಾಲದಲ್ಲಿ ಶಾಸ್ತ್ರದ ಆದೇಶಕ್ಕನುಸಾರ, ಬಾಳುತ್ತಾನೆ. ಮತ್ತು ಎರಡನೆಯವರನ್ನು ಸಹ ಅಂಥ ಬಾಳು ಬಾಳಲು ಪ್ರೇರೇಪಿಸುತ್ತಾನೆ. ಅವನ ಬೋಧೆಯ ರೂಪದಲ್ಲಿ ಎಂದೆಂದಿಗೂ ಮುಂದರಿಯುತ್ತಾನೆ. ಈ ಬೋಧೆಯನ್ನು ಯಾವುದೊಂದು ವಿಶೇಷ ಯುಗದಲ್ಲಿ ನೀಡಲಾಗಿದ್ದರೂ ಬರುವ ಎಲ್ಲ ಕಾಲದಲ್ಲಿಯೂ ಅದು ನವಳಿಯ ನಿಯಮಾವಳಿಯಾಗಿರುತ್ತದೆ.

ಮಾನವ ಜೀವನದ ಪ್ರವೃತ್ತಿಪರ ಮತ್ತು ನಿವೃತ್ತಿಪರ ಕಾರ್ಯಗಳಿಗೆಲ್ಲ ಆಧ್ಯಾತ್ಮಿಕ ಜಗತ್ತೇ ಮೂಲವಾಗಿದೆ. ಮತ್ತು ಅದು ಸರ್ವ ನಡೆವಳಿ ನಿಯಮಾವಳಿಗಳಿಗೆ ಪ್ರಾಣ ಸಂಜೀವಿನಿಯಾಗಿದೆ. ಆದ್ದರಿಂದ ಆಧ್ಯಾತ್ಮಿಕ ಜಗತ್ತಿನಲ್ಲಿ ಸಂಶ್ಲೇಷಣೆಯ ಹಾದಿಯಿಂದ ಸರಿಸಿ ವಿಶ್ಲೇಷಣೆಯ ಹಾದಿಯತ್ತ ಕರೆದೊಯ್ಯುವ, ಅಥವಾ ಮಾನವನ ಸಾಮೂಹಿಕ ಜೀವನವನ್ನು ಹದಗೆಡಿಸಿ, ಮಾನವ-ಮಾನವರಲ್ಲಿ ಭೇದಭಾವಗಳನ್ನು ತುಂಬುವ ಯಾವುದೂ ಇರಕೂಡದು; ಅಂಥ ಯಾವುದನ್ನು ಇಟ್ಟುಕೊಳ್ಳಕೂಡದು. ಆಧ್ಯಾತ್ಮಿಕ ಜೀವನವನ್ನು ಸಾಮಾನ್ಯ ನಡೆವಳಿ ನಿಯಮಾವಳಿಗಳಿಂದ ಮೊದಲು ಮಾಡಿ, ಜೀವನದ ಸಾರ್ವತ್ರಿಕ ನಿತ್ಯ ತತ್ತ್ವಗಳ ವರೆಗೆ, ಸಂಕುಚಿತತೆಯ ಮಾಯಾಜಾಲದಲ್ಲಿ ಸಿಲುಕಿಸುವ ಯಾವುದೂ ಇರಕೂಡದು. ಇಲ್ಲವಾದರೆ, ಸರ್ವವನ್ನೂ ಕಬಳಿಸುವ

ಮಾಯೆಯು ಭೀಕರ ಪಂಜರದಿಂದ ಹರಿದು ತಿನ್ನಬಹುದು. ಆದ್ದರಿಂದ ಆಧ್ಯಾತ್ಮಿಕ ಆದೇಶಗಳನ್ನು ವಿಧಿಸುವ ಧರ್ಮಶಾಸ್ತ್ರಗಳು, ಸಂಪೂರ್ಣವಾಗಿ ದೋಷ ದೂರವಾಗಿರ ಬೇಕು. ಮತ್ತು ಸಂಚಾಲಕನಾದ ಆ ಅಗ್ರ ಪುರುಷನು ದೃಢ, ಶುಭಾಕಾಂಕ್ಷಿ, ಆದಮ್ಯ ಮನೋನಿರ್ಧಾರದವನಾಗಿರಬೇಕು.

ಮರಮರಳಿ ಒಂದು ಮಾತು ಬರುತ್ತದೆ. ಅದುವೇ 'ಶಾಸನಾತ್ ತಾರಯೇತ್ ಯಸ್ತು ಸಃ ಶಾಸ್ತ್ರಃ ಪರಿಕೀರ್ತಿತಃ' ಮಾನವನಿಗೆ ಚತುರ್ವರ್ಗದ ಪ್ರತಿಯೊಂದು ಭೂಮಿಯ ಮೇಲೆ ಶಾಸ್ತ್ರದ ತುಂಬು ಪ್ರಯೋಜನವಿದೆ. ಆಧ್ಯಾತ್ಮಿಕ ಭೂಮಿಯಲ್ಲಿ ಯಾವ ಶಾಸ್ತ್ರದ ಪ್ರಯೋಜನವಿದೆಯೋ ಅದು ಧರ್ಮಶಾಸ್ತ್ರವಾಗಿದೆ. ಇಲ್ಲವೆ ಉಪ ಸಂಪದ ಶಾಸ್ತ್ರವಾಗಿದೆ. ಅದೇ ರೀತಿ, ಗುರು ರೂಪಿ ಬ್ರಹ್ಮನು ಶಾಸ್ತ್ರದ ನಿಯಂತ್ರಕ ನಾಗಿದ್ದಾನೆ. ಇನ್ನು ಮೂರನೆಯ ಅಂಶವೆಂದರೆ, ಮನೋಜಗತ್ತಿನ ಶಾಸ್ತ್ರ ಅರ್ಥಾತ್ ದರ್ಶನಶಾಸ್ತ್ರ. ಈ ದರ್ಶನ ಶಾಸ್ತ್ರದೊಂದಿಗೆ ಒಂದು ವೇಳೆ ನಾಲ್ಕನೆಯ ಶಾಸ್ತ್ರ ಅರ್ಥಾತ್ ದರ್ಶನ ಪ್ರವಕ್ತಾ ರೂಪಿ ಪ್ರಶಿಕ್ಷಕನಿದ್ದರಂತೂ ಇನ್ನೂ ಒಳ್ಳೆಯದಾಗುತ್ತದೆ. ಏಕೆಂದರೆ ದರ್ಶನಶಾಸ್ತ್ರದ ವ್ಯಾಖ್ಯೆಯು ತಪ್ಪಾಗಿಯೂ ಇರಬಹುದು. ಉದಾಪರಣೆಗೆ ಶಾಸ್ತ್ರದಲ್ಲಿ "ವಿಧವಾ ಅಗ್ರೇ ಗಮಿಷ್ಯತಿ" ಎಂದು ಬರೆಯಲಾಗಿತ್ತು. ಇದಕ್ಕೆ ಬದಲಾಗಿ ಪಠಣ ದೋಷದಿಂದ ಶಾಸ್ತ್ರದ ವ್ಯಾಖ್ಯೆಯನ್ನು 'ವಿಧವಾ ಅಗ್ನೇ ಗಮಿಷ್ಯತಿ' ಎಂದು ಮಾಡಿಬಿಟ್ಟರು. ಈ ಕಾರಣದಿಂದ ಲಕ್ಷಾಂತರ ವಿಧವೆಯರು ಜೀವಂತ ಅವಸ್ಥೆಯಲ್ಲಿಯೇ ಚಿತಾಗ್ನಿಯಲ್ಲಿ ಸುಟ್ಟುಕೊಂಡು ಸತ್ತರು. ಆದ್ದರಿಂದ ದರ್ಶನವೇತ್ತರು, ಸುಪಂಡಿತರೂ ಪ್ರಶಿಕ್ಷಕರೂ ಆಗಿರುವುದು ತುಂಬಾ ಅಗತ್ಯವಾಗಿದೆ.

ಸಾಧಾರಣ ಭಾಷೆಯಲ್ಲಿ ದರ್ಶನ ಶಾಸ್ತ್ರವೆಂದು ಕರೆಯಲಾಗುವ ಈ ಮಾನಸಿಕ ಕ್ಷೇತ್ರದ ಶಾಸ್ತ್ರದಲ್ಲಿ, ಭಾವಜಡತೆಯ (Dogma) ತೀರ ಸಾಮಾನ್ಯ ಅಂಶವಿದ್ದರೂ ಸಹ, ತಪ್ಪಾಗಿ ಬಿಡುತ್ತದೆ. ಏಕೆಂದರೆ, ಈ ಪ್ರಕಾರದ ದರ್ಶನದ ಮೇಲೆ ಆಶ್ರಯ ಹೊಂದಿದ ಭಾವಜಡತೆಯು ಮಾನವನ ಮನೋಭೂಮಿಯಲ್ಲಿ ವಿಕೃತಿಯ ಪರಿಮಾಣ ವನ್ನು ಹೆಚ್ಚಿಸುತ್ತದೆ. ಮನದ ಜಗತ್ತಿನಲ್ಲಿ ಈ ಭಾವಜಡತೆಯು ಸೂಜಿಯ ಹಾಗೆ ಒಳಸೇರಿ, ಚೂರಿಯ ರೂಪ ತಾಳಿ ನಿಲ್ಲುತ್ತದೆ. ಆ ಕಾಲಕ್ಕೆ, ಒಂದು ವೇಳೆ ಅದನ್ನು ಕೆಡವಲು, ಇಲ್ಲವೆ ಸರಿಸಲು ಯತ್ನಿಸಿದರೆ,ಸಮಸ್ತ ಸತ್ತೆಯನ್ನೇ ವಿಧ್ವಸ್ತಗೊಳಿಸುತ್ತದೆ. ಹೇಗೆಂದರೆ, ಒಂದು ಸುಂದರ ಸೌಧದ ಒಂದು ಮೂಲೆಯಲ್ಲಿ ಆಲದ ಸಸಿಯೊಂದನ್ನು ನೆಟ್ಟರೆಂದು ತಿಳಿಯಿರಿ. ಮತ್ತು ಬಹಳ ಕಾಲ ಸಂದ ಬಳಿಕ, ಅದರ ಬೆಳವಣಿಗೆಯನ್ನು ನೀವು ಉಪೇಕ್ಷಿಸಿ ಬಿಟ್ಟರೆ, ಅದೊಂದು ವಿರಾಟ ವೃಕ್ಷವಾಗಿ ಬಿಡುತ್ತದೆ. ಒಂದು ವೇಳೆ ಆ ಅವಸ್ಥೆಯಲ್ಲಿ ಅದನ್ನು ಕಿತ್ತು ಹಾಕಲೆಳಸಿದರೆ, ಇಡೀ ಸೌಧವೇ ಬಿದ್ದು ನೆಲಸಮ ವಾಗುವ ಸಂಭವವಿದೆ.

ಜಡ ಜಾಗತಿಕ ಕ್ಷೇತ್ರದಲ್ಲಿ, ಮಾನವನ ಮಾನಸಿಕ, ರಾಜನೈತಿಕ, ಸಾಮಾಜಿಕ, ಅರ್ಥನೈತಿಕ, ಜೀವನದ ಏರುಪೇರುಗಳನ್ನು ವಿಧಿಪೂರ್ವಕ ನಿಯಂತ್ರಿಸಬಲ್ಲ ಶಾಸ್ತ್ರದ ಆವಶ್ಯಕತೆಯಿದೆ. ಇದರಿಂದ ಎಷ್ಟೂ ಅಡ್ಡ ಸರಿಯುವುದು ಉಚಿತವಾಗದು. ಹೇಗೆಂದರೆ, ಸ್ವಲ್ಪ ಬೇಸೂರ ಹಾಡಿದರೆ ತೀರಿತು. ಕವಿಗಳಿಗೆ ಕಟಕಟಿಯೆನಿಸುತ್ತದೆ.

ಅದೇ ರೀತಿ ಶಾಸ್ತ್ರದ ಅನುಸಾರವಾಗಿಯೇ ನಡೆಯುವುದು ತುಂಬಾ ಅವಶ್ಯವಾಗಿದೆ. ಈ ಜಡಜಗತ್ತಿನ ಶಾಸ್ತ್ರದೊಂದಿಗೆ ಸಹ, ಉನ್ನತ ಧೀಶಕ್ತಿಯ ಅಗ್ನಿಪುರುಷನ ಬಲಿಷ್ಠ ಕೈಯಾಡಿಸುವಿಕೆಯ ಅಗತ್ಯವಿದೆ. ಇಲ್ಲವಾದರೆ, ಕಷ್ಟಪಟ್ಟು ಗಳಿಸಿದ ಈ ಮಾನವ ಸಂಪದದ ಬೆಲ್ಲವನ್ನು ಸ್ವಾರ್ಥಲೋಲುಪ ಭೋಗದ ಇರುವೆಯ ಗುಂಪು ನುಂಗಿ ಹಾಕು ತ್ತವೆ. ಇಲ್ಲವಾದರೆ, ಮಾನವ ಜೀವಿಗಳ ಭಾವಜಗತ್ತಿನ ಹಸಿರು-ಎಳೆಯ ಸಸಿಗಳನ್ನು, ಕೊಳುಬಾಕ ದನಗಳು ಹಾದಿಯ ಬದಿಯ ಬೇಲಿಯ ಪೊದೆಯಲ್ಲಿ ಗೋಣು ಚಾಚಿ, ಕಬಳಿಸಿ ಬಿಡುತ್ತವೆ.

ಈ ನಿಯಂತ್ರಕ ಶಾಸ್ತ್ರವೆಂದರೆ ಸಮಾಜಶಾಸ್ತ್ರ ಮತ್ತು ಈ ಸಮಾಜಶಾಸ್ತ್ರವು ಮಾನವ ಮನಸ್ಸಿನಲ್ಲಿ, ಯಾವ ಉದ್ಬೋಧನೆಯನ್ನು ಜಾಗೃತಗೊಳಿಸುವುದೋ, ಅದುವೇ ಸಮಾಜ ಮಾನಸಿಕತೆ (spirit) ಯಾಗಿದೆ.

ಯಾವುದೊಂದು ವಿಶೇಷ ಶ್ಲೋಕ ಇಲ್ಲವೆ ಸೂತ್ರ ಇಲ್ಲವೆ ಯಾವುದೇ ಮಾತನ್ನು ವಿಶೇಷ ರೀತಿಯಿಂದ ಖ್ಯಾತಿ ಸಂಪನ್ನಗೊಳಿಸಿ, ಬಿಜ್ಞಾಸುವಿನೆದುರು ಇರಿಸಿದರೆ, ಅದಕ್ಕೆ ವ್ಯಾಖ್ಯಾನ ಇಲ್ಲವೆ ವ್ಯಾಖ್ಯೆ ಎನ್ನುತ್ತಾರೆ. ಒಂದು ಸೂತ್ರದಲ್ಲಿ ಕೆಲವೇ ಶಬ್ದಗಳಲ್ಲಿ ಏನನ್ನು ಹೇಳಲಾಗಿರುವುದೋ, ಅದರ ಗೂಢಾರ್ಥವನ್ನು ಬಹುಜನರು ತಿಳಿಯ ಲಾರರು. ಈ ಕಾರಣದಿಂದ, ಶ್ರೋತೃ ಇಲ್ಲವೆ ಪಾಠಕನಿಗೆ ತಿಳಿಯುವುದಕ್ಕೋಸುಗ ಸರಿಯಾಗಿ, ಭಾವಗಳನ್ನು ಅನ್ವಯಿಸುವ ಅಗತ್ಯ ಬೀಳುತ್ತದೆ. ಮತ್ತು ಇದಕ್ಕಾಗಿ ಟಿಪ್ಪಣಿಯೂ ಬೇಕು. ಜೊತೆಗೆ ಟೀಕೆಯೂ ಬೇಕು. ಯಾವ ಶಬ್ದವನ್ನು ಸ್ವಾಭಾ ವಿಕ ರೂಪದಲ್ಲಿ ಓದಲಾಗುತ್ತಿತ್ತೋ, ಅದನ್ನೇ ವಿಶೇಷ ರೀತಿಯಿಂದ ತಿಳಿಸಿಕೊಡಲಾಗು ತ್ತದೆ. ಮತ್ತು ಅದರ ಸರಿಯಾದ ಅರ್ಥವನ್ನು ಮತ್ತು ಅದರ ಉಪಯುಕ್ತ ಮೂಲ್ಯದ ಮರ್ಯಾದೆ-ಮಹತ್ವಗಳನ್ನು ಶ್ರೋತೃ ಇಲ್ಲವೆ ಪಾಠಕರಿಗೆ ತಲುಪಿಸುತ್ತಾರೆ. ಇದಕ್ಕೇ ವ್ಯಾಖ್ಯಾನ ನೀಡುವುದು, ವ್ಯಾಖ್ಯಾನಿಸುವುದು ಎನ್ನುತ್ತಾರೆ.

ನಾನು ಈ ಮುಂಚೆ ಹೇಳಿದ ಮೇರೆಗೆ, ಶಾಸ್ತ್ರವು, ಮಾನವನ ಜೀವನದ ವಿಭಿನ್ನ ಅಧಿಕ್ಷೇತ್ರಗಳಿಗನುಸರಿಸಿ, ವಿಭಿನ್ನ ಪ್ರಕಾರದ್ದಾಗಿರುತ್ತದೆ. ಹೀಗಾಗಿ ಶಾಸ್ತ್ರದಲ್ಲಿ ಏನನ್ನೇ ಹೇಳಿರಲಿ, ಅದನ್ನೆಲ್ಲ ಸಂಕ್ಷೇಪವಾಗಿ ಹೇಳಲಾಗಿರುತ್ತದೆ. ಬಹು ಕಡಿಮೆ ಕ್ಷೇತ್ರಗಳಲ್ಲಿ ಅದನ್ನು ವಿಸ್ತಾರವಾಗಿ ಹೇಳಿರುತ್ತಾರೆ. ಧರ್ಮ ಶಾಸ್ತ್ರವನ್ನು, ಧರ್ಮ ಗುರುವನ್ನು, ದರ್ಶನ ಶಾಸ್ತ್ರವನ್ನು, ದಾರ್ಶನಿಕ ಪ್ರವಕ್ತಾನನ್ನು, ಸಮಾಜ ಶಾಸ್ತ್ರವನ್ನು ಸಮಾಜ ಮುಖಂಡನನ್ನು, ಮತ್ತು ಸಮಾಜ ಆದರ್ಶವನ್ನು ಮಾನವನೆಂದರು ಸರಿಯಾದ ರೀತಿಯಲ್ಲಿ ಪ್ರಸ್ತುತಗೊಳಿಸುವ ಪ್ರಕ್ರಿಯೆಯನ್ನೇ ಶಾಸ್ತ್ರ ವ್ಯಾಖ್ಯಾನವೆನ್ನುತ್ತಾರೆ. ಒಂದು ವೇಳೆ, ಉಪಯುಕ್ತ ರೀತಿಯಿಂದ ವ್ಯಾಖ್ಯಾನಿಸಲು ತಪ್ಪಿದರೆ, ಶಾಸ್ತ್ರವು ಬಹುತೇಕ ದುರ್ಬೋಧೆಯಾಗುತ್ತದೆ. ಕೆಲವೊಮ್ಮೆ ಅಬೋಧ್ಯವೂ ಆಗಿಬಿಡುತ್ತವೆ. ಆದ್ದರಿಂದ, ಉಪಯುಕ್ತ ಪಂಡಿತ, ಉಪಯುಕ್ತ ದಾರ್ಶನಿಕ, ಉಪಯುಕ್ತ ಮರ್ಮಜ್ಞ ವ್ಯಕ್ತಿಯ ಮುಖಾಂತರ ಶಾಸ್ತ್ರದ ವ್ಯಾಖ್ಯೆಯಾಗಲೇಬೇಕು. ಕೇವಲ ಬುರುಗಿನ ಜ್ಞಾನ ದಿಂದ ಶಾಸ್ತ್ರ ವ್ಯಾಖ್ಯೆ ಮಾಡಿದರೆ, ಹಾಸ್ಯಾಸ್ಪದವಾಗುತ್ತದೆ. ಮತ್ತು ಶ್ರೋತೃಗಳು ವಿಮೂಢರಾಗಿ ಹೋಗುತ್ತಾರೆ.

ಕೆಲವು ಜನರು ಪಂಡಿತರೂ ಇರುವುದಿಲ್ಲ; ದಾರ್ಶನಿಕರೂ ಇರುವುದಿಲ್ಲ. ಇತ್ತ ಮರ್ಮಜ್ಞರೂ ಇರುವುದಿಲ್ಲ. ಆದರೆ ಕೇವಲ ಹೊಟ್ಟೆ ಹೊರೆಯಲು ಶಾಸ್ತ್ರದ ವ್ಯಾಖ್ಯೆ ಮಾಡುತ್ತ ಹೊರಟಿರುತ್ತಾರೆ. ಅವರೆಂದೂ ಶ್ರೋತೃಗಳಿದುರು, ಯಾವ ಸ್ಥಿತಿಯಲ್ಲಿಯೂ, ಸರಿಯಾವ ರೀತಿಯಿಂದ ಶಾಸ್ತ್ರ ವ್ಯಾಖ್ಯಾನಿಸಲಾರರು. ಈ ತರದ ಜನರು ಶಾಸ್ತ್ರ ವ್ಯಾಖ್ಯಾನದ ಹೆಸರಿನಲ್ಲಿ, ಹೊಟ್ಟೆ ಹೊರೆಯುವ ವ್ಯವಸ್ಥೆಯನ್ನೇನೋ ಮಾಡಿಕೊಳ್ಳುತ್ತಾರೆ; ಆದರೆ ಅವರ ಈ ಕ್ರಿಯೆಯಿಂದ ಜನಸಾಮಾನ್ಯರಿಗೆ ಉಪಕಾರವಾಗುವ ಬದಲು ಹೆಚ್ಚಾಗಿ ಹಾನಿಯೇ ಸಂಭವಿಸುತ್ತದೆ. ಇನ್ನು ಕೆಲವು ಜನರು, ತಮ್ಮ ಪಾಂಡಿತ್ಯವನ್ನು ಜಾಹೀರುಪಡಿಸಲೋಸುಗ, ಇಲ್ಲವೆ ತಮ್ಮ ವೈದೂಷ್ಯಕ್ಕೆ ಶಿಫಾರಸು ಪತ್ರ ಪಡೆಯಲೋಸುಗ, ಶಾಸ್ತ್ರ ವ್ಯಾಖ್ಯಾನದಲ್ಲಿ ತೊಡಗಿರುತ್ತಾರೆ. ಅವರು ಸಹ, ಶಾಸ್ತ್ರದ ಪ್ರಾಣಸತ್ತೆ, ಪ್ರಾಣಪುರುಷ ಇಲ್ಲವೆ ತೀರ್ಥಪತಿಯಿಂದ ಬಹುದೂರ ಉಳಿಯುತ್ತಾರೆ. ಈ ಕಾರಣದಿಂದಾಗಿ ಶಾಸ್ತ್ರವ್ಯಾಖ್ಯಾನದಿಂದ ಮುಕ್ತಿಯು ಹೇಗೆ ಲಭ್ಯ? ಪ್ರತಿಯಾಗಿ, ಶಾಸ್ತ್ರವ್ಯಾಖ್ಯಾನ ಮಾಡುತ್ತಾ ಮಾಡುತ್ತ ಆ ಜನರಲ್ಲಿ ಅಹಂ ಭಾವನೆಯು ವರ್ಧಿಸುತ್ತ ಹೋಗುತ್ತದೆ. ಮತ್ತು ಇಂಥ ಸ್ಥಿತಿಯಲ್ಲಿ ಅವರು ಜೀವನದ ಮೂಲ ಲಕ್ಷ್ಯದಿಂದಲೇ ದೂರವಾಗುತ್ತಾರೆ. ಇವರು ಅನೇಕ ವೇಳೆ ಸಾಧಾರಣ ಮನುಷ್ಯರ ಮಟ್ಟಕ್ಕಿಂತ ಕೆಳಗಿಳಿದು ಬಿಡುತ್ತಾರೆ. ಈ ಕಾರಣದಿಂದಾಗಿಯೇ "ನ ಮುಕ್ತಿಃ ಶಾಸ್ತ್ರ ವ್ಯಾಖ್ಯಾನೇ" ಎಂದು ಹೇಳಲಾಗಿದೆ.

ವಿಧಿ ಎಂದರೆ ನಿಯಮಬದ್ಧ ಅನುಶಾಸನ. ಅನುಶಾಸನವೆಂದರೇನು? 'ಹಿತಾರ್ಥೇ ಶಾಸನಂ ಇತಿ ಅನುಶಾಸನಮ್' ಸ್ವೇಚ್ಛಾಚಾರದ ವಿರೋಧವಾಗಿ, ನಿಯಮಾನುಸಾರ ವರ್ತಿಸುವ ಯಾವ ಶಾಸನವಿದೆಯೋ ಅದುವೇ ಅನುಶಾಸನ. ಉಚ್ಛೃಂಖಲೆಯಿಂದ ಶೃಂಖಲೆಗೆ, ಶೀಲಗೇಡಿತನದಿಂದ ಗೌರವ ನಡತೆಗೆ, ಅನೈತಿಕತೆಯಿಂದ ನೀತಿಮತ್ತೆಗೆ, ನೀಚತನದ ಮತ್ತು ವಿಶ್ಲೇಷಣಾತ್ಮಕ ಗತಿಯಿಂದ ಸರ್ವ ಪ್ರಗತಿಪರ ಮತ್ತು ಸಂಶ್ಲೇಷಣಾತ್ಮಕ ಗತಿಗೆ ಅನುಶಾಸನವೆನ್ನುತ್ತಾರೆ.

ಈ ಅನುಶಾಸನವು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನ ಭಿನ್ನವಾಗಿರುತ್ತದೆ. ಕೆಲವರು ಸಣ್ಣ ತಪ್ಪು ಮಾಡಿದರೂ ತೀವ್ರ ದಂಡಕ್ಕೆ ಗುರಿಯಾಗುತ್ತಾರೆ. ಇನ್ನು ಕೆಲವರು ಘೋರ ಅಪರಾಧವೆಸಗಿದರೂ ಸಹ ಲಘು-ದಂಡನೆಗೆ ಈಡಾಗುತ್ತಾರೆ. ಇವೆರಡೂ ಇಷ್ಟವಲ್ಲ. ಹೀಗೆ, ಯಾವಾಗ ಜಾಣರು, ಬುದ್ಧಿವಂತರು ಮತ್ತು ಸಮತೂಕದ ಬುದ್ಧಿಶಾಲಿಗಳು ನ್ಯಾಯವನ್ನಾಧರಿಸಿದ ಶಿಸ್ತು ನಿಯಮಾವಳಿಯನ್ನು ರೂಪಿಸುವರೋ, ಆಗ ಅದನ್ನು ವಿಧಿ (Decree) ಎನ್ನುತ್ತಾರೆ.

ಇನ್ನು ಕರ್ಮದ ಪ್ರತಿಕರ್ಮದ ಬಗ್ಗೆ ಕರ್ತೃತ್ವದ ಆತ್ಮ ಸಂಭಾವಿತತನ, ಕರ್ತೃತ್ವದ ಸಿಡುಕುತನಗಳ ಬಗ್ಗೆ ವಿದ್ವಾನ್ ಪಂಡಿತರು ಮತ್ತು ಜಾಣಜನರೂ ಕೂಡಿದರೂ ಸಹ ವಿಧಿನಿಯಮಗಳನ್ನು ತಯ್ಯಾರಿಸಲಾರರು. ಕೇವಲ ಪರಮ ಪುರುಷನು ಮಾತ್ರ ತಯ್ಯಾರಿಸಬಲ್ಲನು. ಇದುವೇ ಈಶ್ವರೀಯ ವಿಧಿಯಾಗಿದೆ. ಅರ್ಥಾತ್ ಕರ್ಮದ ಪ್ರತಿಕರ್ಮ ಇಲ್ಲವೆ, ಈಶ್ವರೀಯ ವಿಧಿಗಳೆರುವ ಬೇರೆ ವಸ್ತುಗಳನ್ನು ಸ್ವಯಂ ಪರಮ ಪುರುಷನೇ ನಿರ್ಮಿಸುತ್ತಾನೆ. ಇವುಗಳನ್ನು ಪರಮ ಪುರುಷನು ನೇರವಾಗಿ

ನಿಯಂತ್ರಿಸುವುದಿಲ್ಲ. ಆದರೆ, ತನ್ನ ಈಶ್ವರೀಯ ವಿಧಿಗಳ ಮೂಲಕ ನಿಯಂತ್ರಿಸುತ್ತಾನೆ. ಮೇಲಾಗಿ ಅವನು ಈ ವಿಷಯಗಳಲ್ಲಿ ಕೈ ಹಾಕುವುದೂ ಇಲ್ಲ. 'ವಿಧಿಲಿಪಿಃ ಅಖಿಂಡನೀಯಾ ವಿಧಾತಾಪಿ ಖಿಂಡನೇ ಅಸಮರ್ಥಃ'. (ವಿಧಿಲಿಪಿಯು ಅದಮ್ಯವಾದುದು; ಪರಮ ಪುರುಷನು ಸಹ, ಅದನ್ನು ಮೀರಲಾರನು.)

ಪರಮ ಪುರುಷನು ಈ ವಿಧಿಯ ವ್ಯವಸ್ಥೆ ಮಾಡಿದ್ದಾನೆ. ಇದರಿಂದ ಅವನ ಒಂದು ಪ್ರಚಲಿತ ಹೆಸರು 'ವಿಧಾತಾ' ಎಂದಿದೆ.

ಯಾವನೊಬ್ಬ ವ್ಯಕ್ತಿಯು ತನ್ನ ತಲೆಯನ್ನು ಕೈಯಿಂದ ಜಜ್ಜಿಕೊಳ್ಳುತ್ತ, ಅಳುತ್ತ, 'ಎಲೈ ಪರಮ ಪುರುಷ! ನಿನ್ನ ಮನದಲ್ಲಿ ಇದೇ ಇದ್ದಿತೇನೋ?" ಎಂದು ಹೇಳುವನೋ, ಅವನು ಪರಮಪುರುಷನನ್ನು ಕುರಿತು ಅವಿಚಾರ ಮಾಡುತ್ತಾನೆ. ಏಕೆಂದರೆ, ಬ್ರಹ್ಮಾಂಡದ ಸಮಸ್ತ ಅತಿ ಜಾಗತಿಕ ಕಾರ್ಯಗಳನ್ನು ಪರಮಪುರುಷನು ತಾನೇ ತಯ್ಯಾರಿಸಿದ ವಿಧಿಗಳ ಮೂಲಕವೇ ಸಂಚಾಲನೆಗೊಳಿಸುತ್ತಾನೆ. ಅವನು ತಾನೇ ಸ್ವತಃ ಏನನ್ನೂ ಮಾಡುವುದಿಲ್ಲ. ಅವನ ವಿಧಿಯಲ್ಲಿಯೇ ಅಗ್ನಿಯಲ್ಲಿಯು ಸುಡುವ ಶಕ್ತಿಯಿದೆ. ಆ ಅಗ್ನಿಯು ಒಬ್ಬ ತರುಣ ವ್ಯಕ್ತಿಯ ಕೈಯನ್ನು ಸುಡಬಲ್ಲನು. ಮತ್ತು ಒಂದು ನಿರ್ದೋಷ ಶಿಶುವಿನ ಕೈಯನ್ನು ಸಹ ಸುಡಬಲ್ಲದು. ಪರಮ ಪುರುಷನು ಯಾರ ಕೈಯನ್ನು ಸುಡುವುದಿಲ್ಲ. ಒಂದು ವೇಳೆ, ಅವನು ತನ್ನ ಮೂಲಕ ತಯ್ಯಾರಾದ ವಿಧಿಯನ್ನು ಉಲ್ಲಂಘಿಸಿದರೆ, ವಿಶ್ವಬ್ರಹ್ಮಾಂಡದ ಸಮಸ್ತ ವಿಧಿ ವ್ಯವಸ್ಥೆಯು, ಮುರಿದು ಬಿದ್ದು ಚೂರು-ಚೂರಾಗುತ್ತದೆ. ಆದ್ದರಿಂದ ಪರಮ ಪುರುಷನಿಗೆ ಹೀಗೆ ಮಾಡುವ ಸಾಮರ್ಥ್ಯವಿದ್ದರೂ ಅವನು ಮಾಡುವುದಿಲ್ಲ.

ಒಂದು ವೇಳೆ ಯಾವನೊಬ್ಬ ವ್ಯಕ್ತಿಯ ಕ್ಲೇಶಗಳನ್ನು ದೂರಗೊಳಿಸಲೋಸ್ಕರ, ಪರಮಪುರುಷನು ಅವನನ್ನು ಕ್ಷಮಿಸಬೇಕೆಂದು ಭಯಸಿದರೂ ಸಹ, ಆ ವ್ಯಕ್ತಿಯ ಮೂಲಕ, ಸತ್ಕಾರ್ಯಗಳನ್ನು ಮಾಡಿಸಿಯೇ ಆ ರೀತಿ ಮಾಡಬಲ್ಲನು. ಇನ್ನು ಬೇರಾವ ರೀತಿಯಿಂದಲೂ ಅಲ್ಲ. ಈ ಪ್ರಕಾರ ಪ್ರತಿಯೋರ್ವನು ತನ್ನ ಸತ್ಕರ್ಮದಿಂದ ಸತ್ಫಲವನ್ನೂ, ಅಸತ್ ಕರ್ಮದಿಂದ ಅಸತ್ಫಲವನ್ನೂ ಭೋಗಿಸಲು ಬಾಧ್ಯಸ್ಥನಾಗಿರುವುದೆಂಬುದನ್ನು ನೆನಪಿಡಬೇಕು. ಈ ನಿಯಮವನ್ನು ಯಾವ ಪ್ರಕಾರದಿಂದಲೂ ಬದಲಿಸಲು ಸಾಧ್ಯವಿಲ್ಲ. ಪರಮ ಪುರುಷನ ಕೃಪೆಯೊಂದಿದ್ದರೆ, ಆ ಕ್ಲೇಶಗಳನ್ನು ಸಹಿಸುವ ಶಕ್ತಿಯು ಅವನಲ್ಲಿ ಜಾಗ್ರತವಾಗುತ್ತದ. ಇದೇನು ಪರಮ ಪುರುಷನಿಂದ ದೊರೆತ ಮಹಾವರದಾನವಲ್ಲವೇ?

ಇದಲ್ಲದೆ, ಕ್ಲೇಶದ ಕಾಲಕ್ಕೆ ಯಾವಾಗ ಮಾನವನ ಹೃದಯವು ಅತ್ಯಂತ ದುಃಖಿಯಾಗುವುದೋ. ಮತ್ತು ತನ್ನನ್ನು ಶಾಂತವಾಗಿರಿಸಿಕೊಳ್ಳಲಾರದೋ, ಆ ಶೋಕ ವಿವ್ಹಲತೆಯ ಸ್ಥಿತಿಯಲ್ಲಿ ಮಾನವನು ಪರಮ ಪುರುಷನಿಗೆ ಒಂದು ಮಾತು ಹೇಳಬೇಕು.

"ಎಲೈ ನನ್ನ ಪರಮ ಪುರುಷ! ಎಲೈ ನನ್ನ ಪ್ರಾಣದ ಪ್ರಾಣ! ಎಲೈ ನನ್ನ ಕಣ್ಣು ಚುಕ್ಕೆಯೇ! ನನಗೆ ಸಹನ ಶಕ್ತಿ ನೀಡು."

ಪೂಜನ ಇಲ್ಲದೆ ಪೂಜೆ ಎಂದರೇನು? ಸಕಾಮ ಇಲ್ಲವೆ ನಿಷ್ಕಾಮ ಭಾವನೆಗಳನ್ನು ಗ್ರಹಿಸಿ, ಯಾವುದೋ ಬಹಿರಂಗದ (ಪುಷ್ಪ, ಬಿಲ್ವಪತ್ರ, ಚಂದನ, ಗಂಗಾಜಲ,ತುಲಸೀ

ಪತ್ರ, ಬಾಳೆಹಣ್ಣು, ಅಕ್ಕಿ ಇತ್ಯಾದಿ) ಉಪಕರಣಗಳಿಂದ ಇಲ್ಲವೆ ಇವುಗಳನ್ನು ಬಿಟ್ಟು ಯಾವುದೊಂದು ತತ್ತ್ವ ಇಲ್ಲವೆ ಸತ್ತೆಯನ್ನು ಕುರಿತು, ಅನನ್ಯ ಮನಸ್ಕ, ಶ್ರದ್ಧೆ–ನಿವೇದನೆಗಳೇ ಪೂಜನ ಇಲ್ಲವೆ ಪೂಜೆ ಎನಿಸುತ್ತವೆ. ಸಕಾಮ ಭಾವನೆಗಳನ್ನು ಹೊಂದಿ ಇಲ್ಲವೆ ಬಹಿರಂಗದ ಉಪಕರಣಗಳಿಂದ,ಯಾವ ವಿಶೇಷ ಪ್ರಕಾರದಪೂಜೆಯಾಗುವುದೋ ಅದಕ್ಕೆ ಅರ್ಚನೆ ಎನ್ನುತ್ತಾರೆ. ಸಕಾಮ ಇಲ್ಲವೆ ನಿಷ್ಕಾಮ ಭಾವನೆ ಹೊಂದಿದ್ದರೂ, ಬಹಿರಂಗದ ಉಪಕರಣಗಳ ಬಳಕೆಯಿಲ್ಲದೆ, ನಡೆಸುವ ಪೂಜೆಗೆ ಪ್ರಾರ್ಥನೆ ಎನ್ನುತ್ತಾರೆ. ಇನ್ನು ನಿಷ್ಕಾಮ ಭಾವನೆಯಿದ್ದು, ಬಹಿರಂಗದ ಉಪಕರಣಗಳನ್ನು ಹೊರತುಪಡಿಸಿದ ಪೂಜೆಗೆ ಬ್ರಹ್ಮಸದ್ಭಾವವೆನ್ನುತ್ತಾರೆ. ಈ ಪೂಜಾರ್ಚನೆಗಳನ್ನು ಕೆಲವು ನಿಯಮ ಬದ್ಧತೆಯಲ್ಲಿ ಕಟ್ಟಿಹಾಕಲಾಗುವುದು. ಹೇಗೆಂದರೆ, ಪೂಜೆ ಮಾಡುವ ಕಾಲಕ್ಕೆ, ಅಂಗ ನ್ಯಾಸ, ಕರನ್ಯಾಸ, ಆಚಮನ, ಶಿಖಾಬಂಧನ, ಆವಾಹನ, ಮೂಲ್ಯದಾನ, ತಿಲಕ ಧಾರಣ, ವಿಸರ್ಜನ ಇತ್ಯಾದಿಗಳಿದ್ದರೆ ಆ ಪೂಜೆಗೆ ವಿಧಿಬದ್ಧ ಪೂಜೆ ಎನ್ನುತ್ತಾರೆ.

ಇದನ್ನೆಲ್ಲ ತಿಳಿದುಕೊಳ್ಳಲು ಯಾವುದೇ ಬೆಟ್ಟವನ್ನು ಒಡೆಯುವ ಪ್ರಸಂಗವೇನೂ ಇಲ್ಲ. ಅಂದರೆ, ಇಂಥ ವಿಧಿಬದ್ಧ ಪೂಜೆಯ ಕಾಲಕ್ಕೆ, ಪೂಜಕನ ಮನಸ್ಸು ಇಷ್ಟದ ಕಡೆಗೆ ಹೋಗುವುದೇ ಇಲ್ಲ. ಇದಲ್ಲದೆ, ಬಹಳ ಸಲ, ಯಾವ ವಿಗ್ರಹವನ್ನೂ ಇಷ್ಟ ವೆಂದು ಭಾವಿಸುವನೋ, ಅದರ ಕಡೆಗೆ ಸಹ ಅವನ ಮನವು ಹೋಗುವುದಿಲ್ಲ. ಆ ಕಾಲಕ್ಕೆ ಮನಸ್ಸು ಪೂಜೆಯ ಒಂದು ಅಂಗದ ನಂತರ ಇನ್ನೊಂದು ಅಂಗದತ್ತ ಹೋಗು ತ್ತದೆ. ಒಂದು ವೇಳೆ ಪುರೋಹಿತನೊಬ್ಬನು ಒಂದು ಮುಂಜಾನೆ ಒಂದು ಅವಸ್ಥೆಯಲ್ಲಿ, ಹತ್ತು ಸಾರ್ವಜನಿಕ ಪೂಜಾ ಮಂಟಪಗಳಲ್ಲಿ ಹೋಗಿ ಪೂಜೆ ಮಾಡಬೇಕಾಗಿದ್ದರೆ, ಮೊದಲಿನ ಅವಸ್ಥೆಯಲ್ಲಿ ಅಲ್ಲದಿದ್ದರೂ ಕೊನೆಕೊನೆಯ ಅವಸ್ಥೆಯಲ್ಲಿಂತೂ, ಅವನ ಹೊಟ್ಟೆಯು ಒಂದೆಡೆಗೆ ಪಾಚಕಾಗ್ನಿಯ ಆಹುತಿ, ಇನ್ನೊಂದೆಡೆಗೆ ವಿಧಿಯ ಮಾತುಗಳ ಚಿಂತೆ ಇವೆರಡರ ಮಧ್ಯೆ ಎಳೆದಾಡತೊಡಗುತ್ತದೆ. ಹೀಗಾಗಿ ಪುರೋಹಿತನ ಇಲ್ಲವೆ ಪೂಜಕನ ಮನವು ಯಾವುದೇ ಅಡೆತಡೆಯಿಲ್ಲದೆ, ಹೊಟ್ಟೆಯ ಕಡೆಗೆ ಸೆಳೆಯಲ್ಪಡುತ್ತದೆ. ಈ ಕಾರಣದಿಂದ ಅಂತಿಮ ಪೂಜೆಯ ವೇಳೆಗೆ, ಅವನು ಪೂಜಾವಿಧಿಯನ್ನು ಮಾಡುತ್ತಿರು ವುದಿಲ್ಲವಷ್ಟೇ ಅಲ್ಲ; ತಥಾ ಕಥಿತ, ಸಾಧಾರಣ ಪೂಜೆಯನ್ನು ಸಹ ಮಾಡಲಾರದವ ನಾಗುತ್ತಾನೆ. ಆದ್ದರಿಂದ, ಇದು ನಿಜವಾದ ಪೂಜೆಯಾಗದು. ವಿಧಿಬದ್ಧ ಪೂಜೆ ಮಾಡುವ ಕಾಲದಲ್ಲಿ ಈ ರೀತಿಯ ಸಾಧಾರಣ ಅವಸ್ಥಾಪ್ರಾಪ್ತಿಯ ಸ್ಥಿತಿಯು ಮನೋ ವಿಜ್ಞಾನ ದೃಷ್ಟಿಯಿಂದ ತೀರ ಸ್ವಾಭಾವಿಕವಾಗಿದೆ. ವಿಧಿಬದ್ಧ ಪೂಜೆಗಾಗಿ ಕುಳಿತು, ಎಲ್ಲ ಉಪಕರಣಗಳು ಇವೆಯೋ ಇಲ್ಲವೋ ಎಂದು ಎಣಿಕೆ ಹಾಕುವಾಗಲೇ ಪುರೋ ಹಿತನ ಮನಸ್ಸು ಜಡ-ವಸ್ತುಗಳತ್ತ, ಧಾವಿಸುತ್ತದೆಯೇ ಹೊರತು ಇಷ್ಟದ ಕಡೆಗಲ್ಲ. ಆದ್ದರಿಂದಲೇ 'ನ ಮುಕ್ತಿಃ ವಿಧಿ ಪೂಜನೇ' (ವಿಧಿಬದ್ಧ ಪೂಜೆಯಿಂದ ಮುಕ್ತಿ ದೊರೆ ಯದು) ಎಂದು ಸರಿಯಾಗಿಯೇ ಹೇಳಿದ್ದಾರೆ.

ಬ್ರಹ್ಮ ಶಬ್ದದ ಭಾವಾರೂಢ ಅರ್ಥವೆಂದರೆ, ಬೃಹತ್‌ದಲ್ಲಿ ಪ್ರತಿಷ್ಠಿತನಾಗು ವುದು ಎಂದು. ಮತ್ತು ಅದರ ಯೋಗರೂಢ ಅರ್ಥವೆಂದರೆ, 'ಬೃಹತ್ವಾತ್ ಬ್ರಹ್ಮ, ಬೃಹನ್‌ತ್ವಾತ್ ಬ್ರಹ್ಮ' ಅಂದರೆ ಯಾವುದು ಬೃಹತ್ ಆಗಿದೆಯೋ ಅದುವೇ ಬ್ರಹ್ಮ

ವೆಂದು ಕರೆಯಲ್ಪಡುತ್ತದೆ. ಇದರೊಂದಿಗೇನೇ ಅದು ಇನ್ನೊಂದನ್ನು ಬೃಹತ್ತಾಗಿಸು ತ್ತದೆ. ಆದ್ದರಿಂದಲೂ ಅದನ್ನು ಬ್ರಹ್ಮವೆಂದು ಕರೆಯುತ್ತಾರೆ. ಈ ದೃಷ್ಟಿಯಿಂದ ಯಾವನು ತಾನು ದೊಡ್ಡವನಾಗಿರುವಾಗ, ಎರಡನೆಯವರನ್ನು ತನ್ನ ಕಾಲಕೆಳಗೆ ತುಳಿಯುವನೋ ಮತ್ತು ಅವರನ್ನು ಧ್ವಂಸಗೊಳಿಸುವನೋ, ಆ ವ್ಯಕ್ತಿಯು ಶಬ್ದಾರ್ಥ ದಲ್ಲಿ ಬೇಕಾದರೆ, ದೊಡ್ಡವನಿರಬಹುದು. ಆದರೆ, ಸಮ್ಯಾನಾರ್ಥದಲ್ಲಿ ದೊಡ್ಡವನೆಂದು ಹೇಳಲಾಗದು. ಯಾವನು ದೊಡ್ಡವನಾಗಿರುವನೋ, ಅವನು ಎರಡನೆಯವರ ವಿಕಾಸದ ಹಾದಿಯನ್ನು ನಿರ್ಮಿಸುತ್ತಾನೆ ಮತ್ತು ಅವರನ್ನು ದಲಿತ ಅವಸ್ಥೆಯಿಂದ ಮೇಲಕ್ಕೆತ್ತು ತ್ತಾನೆ. ಬ್ರಹ್ಮ ಶಬ್ದದಲ್ಲಿ ಅಡಕವಾದ ಭಾವವು ಇದೇ ಆಗಿದೆ. ಇತರರನ್ನು ಧ್ವಂಸ ಗೊಳಿಸುವ ಕಾಮನೆಯೇ ಅವನಿಗಿರದು ಅವನು ಸರ್ವರನ್ನೂ ವಿಸ್ತಾರದ ಉನ್ನತ ಸ್ಥಿತಿಯಲ್ಲಿ ಪ್ರತಿಷ್ಠೆಗೊಳಿಸಲು ಬಯಸುತ್ತಾನೆ. ಹೀಗೆ ವಿಶ್ವದ ಸರ್ವಸತ್ತೆಗಳಿಗೂ ಅವನು ಪೂರ್ಣಬ್ರಹ್ಮನೇ ಆಗಿದ್ದಾನೆ. ಅವನು ಮಾತ್ರ ಬ್ರಹ್ಮ. ಅವನು ಅತುಲ್ಯ; ಅವನು ಅನುಪಮನು.

'ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ.'

(ಇದು ಪೂರ್ಣ, ಅದೂ ಪೂರ್ಣ. ಪೂರ್ಣದಿಂದ ಪೂರ್ಣವು ಹೊರಹೊಮ್ಮಿದೆ. ಪೂರ್ಣದಿಂದ ಪೂರ್ಣವನ್ನು ತೆಗೆದರೂ ಸಹ ಶೇಷವು ಪೂರ್ಣವೇ ಆಗಿರುತ್ತದೆ.)

ಅವನು ಪೂರ್ಣನು. ಪೂರ್ಣ ಶಬ್ದಕ್ಕೆ ಎರಡು ಅರ್ಥಗಳುಂಟು. ಒಂದು ಅರ್ಥವೆಂದರೆ ನಿಷಾದ, ದೋಷರಹಿತ; ಇನ್ನೊಂದು ಅರ್ಥವೆಂದರೆ ಅಪರಿಮೇಯ; ಅಳತೆಗೆ ಮೀರಿದುದು. ಈ ಪೂರ್ಣಬ್ರಹ್ಮವು ಇಲ್ಲಿ, ಅಲ್ಲಿ, ಎಲ್ಲೆಲ್ಲಿಯೂ, ಇತ್ತ-ಅತ್ತ ಸರ್ವ ಲೋಕ ಮತ್ತು ಲೋಕಾತೀತಗಳಲ್ಲಿ, ತನ್ನ ಪೂರ್ಣತ್ವದಲ್ಲಿಯೇ, ಪ್ರತಿಷ್ಠೆ ಗೊಂಡಿದೆ. ಒಂದು ವೇಳೆ ಈ ಪೂರ್ಣಸತ್ತೆಯಿಂದ–ಕೇವಲ ತರ್ಕಕ್ಕಾಗಿಯೇ ಆಗಲಿ, –ಒಂದು ಎರಡು, ಅಷ್ಟೇಕೆ ಅಸಂಖ್ಯ ಪೂರ್ಣಸತ್ತೆಗಳನ್ನು ಪೃಥಕ್ಕರಿಸಿದರೂ ಸಹ,– ಕಳೆದರೂ ಸಹ–ಶೇಷವೇನಿರುವುದೋ ಅದೂ ಸಹ ಪೂರ್ಣವಾಗಿರುತ್ತದೆ. ಈ ಪೂರ್ಣ ಸತ್ತೆಯಿಂದಲೇ ಸರ್ವಸತ್ತೆಗಳು ಉದ್ಭವಿತವಾಗುತ್ತವೆ; ಸಂಸ್ಥಿತವಾಗುತ್ತವೆ; ಸ್ವಾಭಾವಿಕವಾಗಿ ಪರಿವರ್ತಿತವಾಗುತ್ತವೆ. ಅವನೂ ಕೇವಲ ವಿರಾಟಸತ್ತೆಯೇನಲ್ಲ. ಅವನು ಸರ್ವರನ್ನೂ ಪ್ರೇಮಮಯಗೊಳಿಸಿ, ತನ್ನ ನಿಕಟಕ್ಕೆ ಬರಮಾಡಿಕೊಳ್ಳುತ್ತಾನೆ. ಮತ್ತು ಅವರನ್ನೂ ಸಹ ವಿರಾಟರನ್ನಾಗಿಸುತ್ತಾನೆ (aggrondising entity). ಈ ಧರೆಯ ಮೇಲೆ ಜೀವನ ಯಾವುದಾದರೂ ಲಕ್ಷ್ಯವಿದ್ದರೆ, ಅವನು ಅದಾಗಿದ್ದಾನೆ. ಜೀವನದ ಸಮಸ್ತ ಹೃದಯಾವೇಗವು, ಸಮಸ್ತ ಮಾರ್ಮಿಕ ಸ್ಪಂದನದ ಅಗ್ರಲಕ್ಷ್ಯವು ಅವನೋರ್ವನೇ ಆಗಿದ್ದಾನೆ. ಅವನೇ ಪ್ರಥಮನಾಥನಾಗಿದ್ದಾನೆ. ಅವನೇ ಮನ್ಮಥ ನಾಥನಾಗಿದ್ದಾನೆ. ನಿಮ್ನ ಸ್ತರದಲ್ಲಿರುವ ಪಾಶಬದ್ಧನಾದ ಜೀವಿಗೆ ಅವನೋರ್ವನೇ ಪ್ರಾಣಕ್ಕಿಂತ ಹೆಚ್ಚಿನ ಶ್ರೇಯಸತ್ತೆಯಾಗಿದ್ದಾನೆ. ಮತ್ತು ಮಾನಸಿಕ ಸತ್ತೆಯ ಸಮ್ಯಕ್ ವಿಕಾಸದ ಯಾವ ಫಲಶ್ರುತಿಯಿದೆಯೋ, ಅದರ ಪ್ರಾಣಾಧಿಕ ಶ್ರೇಯಸತ್ತೆಯೂ ಇದೇ ಆಗಿದೆ.

ಬುದ್ಧಿವಂತ ಮನುಷ್ಯನು ತನ್ನೆಲ್ಲ ಭಾವನೆಗಳನ್ನೂ, ತನ್ನೆಲ್ಲ, ಪ್ರವೃತ್ತಿ ನಿವೃತ್ತಿಗಳನ್ನೂ ಯಾವಾಗ ಒಂದು ಶುಭ–ತತ್ತ್ವದತ್ತ ಕರೆದೊಯ್ಯುವನೋ, ಆಗ ಈ ಶುಭ ಕರವಾದ ಕರೆದೊಯ್ಯುವಿಕೆಗೆ ನಿಷ್ಠೆ ಎನ್ನುತ್ತಾರೆ. ಸ್ಥಿತಧೀ, ಮನ್ಮಧೀ, ಮತ್ತು ತತ್ವಧೀ ಆದವರು, ತಮ್ಮ ಈ ಶುಭಸಂಚಾಲನೆ ಮತ್ತು ನಿಷ್ಠೆಗಳನ್ನು, ಈ ಬ್ರಹ್ಮನತ್ತ ಮುನ್ನಡೆಸುತ್ತಾರೆ. ನಿಷ್ಠೆಯ ಪ್ರಥಮ ಹಂತದಲ್ಲಿ ಅವರು ಬ್ರಹ್ಮೋಪಾಸನೆಯಿಂದ ಪ್ರಾರಂಭಿಸುತ್ತಾರೆ. ಮತ್ತು ಅಂತಿಮ ಹಂತದಲ್ಲಿ, ಬ್ರಹ್ಮಸದ್ಭಾವನೆಯಲ್ಲಿ ಪ್ರತಿಷ್ಠಿತರಾಗುತ್ತಾರೆ. ಈ ಬ್ರಹ್ಮೋಪಾಸನೆಯಲ್ಲಿ ಸಹ, ಯಾವುದೇ ಬಹಿರಂಗದ ಉಪಕರಣಗಳ ಪ್ರಯೋಜನವಿಲ್ಲ.

"ಜಗತ್ ಜೇ ಮಾಯೇರ ಛೇಲೇ, ತಾರ ಕಿ ಆಛೇ ಪರ ಭಾವನಾ?
ತುಮಿ ತೃಪ್ತಕರತೇ ಚಾಓ ಮಾಯೇರೇ, ಹತ್ಯಾ ಕರೇ ಛಾಗಲ ಛಾನಾ?
ಪ್ರಸಾದ ಬಲೇ ಭಕ್ತಿ ಮಂತ್ರೇ ಸುಧುಞ ರೇ ತಾರ ಉಪಾಸನಾ
ತುಮಿ ಲೋಕ ದೇಖಾನೋ ಕರವೇ ಪೂಜಾ ಮಾ ತೋ
ಕಾರೋಘೂಸ ಖಾವೇ ನಾ
ಮನ ತೋಮಾರ ಏಈ ಭ್ರಮಗೇಲೋ ನಾ
ಕಾಲೀ ಕೇ ಮನ ತಾ ಚೇಯೇ ದೇಖಿರೇ ನಾ."

* * *

ಜಗವಿದೆಲ್ಲ ಕೋರ್ವ ಜನನಿ; ಸರ್ವವಳಿಗೊಂದೆ ರೀತಿ,
ಅವಳ ತೃಪ್ತಿಪಡಿಸಬಹುದೆ? ಯಜ್ಞಪಶುವ ಕಡಿದ ನೀತಿ?
ಪ್ರಸಾದ ನುಡಿಯಾಲಿಸಯ್ಯ! ಪೂಜೆಗಿನಿತು ಸಾಕು ಭಕ್ತಿ.
ಲೋಕ ನೋಡಲೆಂದು ಮಾಳ್ಪ, ಸಡಗರಾದಿ ಬುರುಗು ಪಂಕ್ತಿ
ಮನವೆ! ನೀನು ಭ್ರಮೆಯ ದೂರಗೊಳಿಸಲಾರೆ.
ಕಾಳಿ ಮಾತೆಯನ್ನು ಜೊಕ್ಕ ತಿಳಿದುಕೊಳ್ಳಲಾರೆ.

ಇಲ್ಲಿ ಕಾಲೀಮಾತೆಯೆಂದರೆ, ಪರಮ ಪುರುಷನೇ ಎಂದು ಸ್ಪಷ್ಟವಾಗಿ ಊಹಿಸಬಹುದಾಗಿದೆ. ಅರ್ಥಾತ್ ಕಾಲೀ ಶಬ್ದವನ್ನು ಪರಮಬ್ರಹ್ಮ ಎಂಬ ಅರ್ಥದಲ್ಲಿ ಬಳಸಲಾಗಿದೆ.

ಬ್ರಹ್ಮನಿಷ್ಠೆಯುಳ್ಳ ಸಾಧಕನು ಬ್ರಹ್ಮಸದ್ಭಾವದಲ್ಲಿಯೇ ಪ್ರತಿಷ್ಠಿತನಾಗಿರುತ್ತಾನೆ. ಈ ಸಿದ್ಧಾಂತದಲ್ಲಿ ಮತ್ತು ಈ ಶಿವೋಪದೇಶದಲ್ಲಿ ಎಳ್ಳುಕಾಳಿನಷ್ಟೂ ಸಹ ಸಂದೇಹವಿಲ್ಲ ಈ ಕಾರಣದಿಂದಾಗಿಯೇ,

'ಕೇವಂ ಬ್ರಹ್ಮ ನಿಷ್ಠೋ ಯಃ ಸಃ ಮುಕ್ತೋ ನಾತ್ರ ಸಂಶಯಃ' ಎಂದು ಹೇಳಿದ್ದಾರೆ.

ಪಾಟಣಾ, ೯–೭–೧೯೮೨

ಪ್ರವಚನ ೧೫

ಶಿವಬೋಧೆ-೨

ಶಿವೋಪದೇಶ–೫

ಯದ್ಭವತ್ ಯದ್ಭವತಿ, ಯದೇವ ಭವ್ಯಮಸ್ತಿ
ತೇಷಾಂ ವಿಲಕ್ಷಣಶ್ಚ ಸಾಕ್ಷೀ ಚಿನ್ಮಾತ್ರೋಹಂ ಸದಾಶಿವಾಃ

(ಯಾವುದು ಹಿಂದೆ ಸ್ಪಷ್ಟವಾಗಿದೆಯೋ, ಇಂದು ಇರುತ್ತಿದೆಯೋ, ಮತ್ತು ಮುಂದೆ ಸೃಷ್ಟಿಗೊಳ್ಳುವುದೋ, ಅದೆಲ್ಲಕ್ಕಿಂತ ವಿಲಕ್ಷಣನೂ ಸಾಕ್ಷಿಯೂ ಚಿನ್ಮಾತ್ರನೂ ಆದ ಸದಾಶಿವನೇ ನಾನು.)

'ಭೂ' ಧಾತುವಿನ ಅರ್ಥವೆಂದರೆ 'ಆಗುವುದು'. ಯಾವುದು ಆಗಹತ್ತಿದೆಯೋ ಅದೇ 'ಅಭವತ್'. ಈ 'ಆಗುವುದು' ಎಂದರೇನು? ವಿಶ್ವದ ಚಕ್ರನಾಭಿಯಿಂದ ಸರ್ವವೂ ಉತ್ಸಾರಿತವಾಗುತ್ತದೆ. ಆರೋಹ-ಅವರೋಹಾತ್ಮಕ ತರಂಗ ಮಾಲೆಯಲ್ಲಿ ದೂರದಿಂದ ಸುದೂರದ ವರೆಗೆ, ಇಹದಿಂದ ಇಹವು ಅಸ್ತವಾಗುವಲ್ಲಿಯವರೆಗೆ. ಬರು ಹೋಗುವುದು ನಡೆದೇ ಇದೆ. ಈ ತರಂಗಮಾಲೆಯ ದೀರ್ಘತೆ ಇಲ್ಲವೆ ಹ್ರಸ್ವತೆಗಳಿಗನುಸಾರವಾಗಿಯೇ, ಯಾವುದೊಂದು ಸತ್ತೆಯ ಅಣುತ್ವ ಇಲ್ಲದೆ ಬೃಹತ್ವವು ನಿರ್ಧಾರವಾಗುತ್ತದೆ. ಬೃಹತ್ತೇ ಬರು-ಬರುತ್ತ ತರಂಗಗಳ ಆಘಾತದಿಂದ ಚೂರು-ಚೂರಾಗಿ, ಅಣುತ್ವದಲ್ಲಿ ಪರಿವರ್ತಿತವಾಗುತ್ತದೆ. ತರಂಗಮಾಲೆಗಳ ಸಮಾರೋಹದಲ್ಲಿ, ಅಣುಗಳು ವಿಸ್ತರಿಸಿ, ಬೃಹದಾಕಾರ ತಾಳುತ್ತವೆ. ಹೀಗೆ ಸರ್ವಕಾಲದಲ್ಲಿ ಸರ್ವಸತ್ತೆಗಳು, ಬೃಹತ್ವದಿಂದ ಅಣುವಿನತ್ತ ಮತ್ತು ಅಣುವಿನಿಂದ ಬೃಹತ್ವದತ್ತ ಸಾಗುತ್ತವೆ. ಇದ್ದಂತಿರುವುದು, (status quo) ಈ ಸೃಷ್ಟ ಜಗತ್ತಿನ ಯಾವ ವಸ್ತುವಿನ ವಿಷಯದಲ್ಲಿಯೂ ಸಲ್ಲದು. ಮತ್ತು ಅಣುತ್ವ ಇಲ್ಲವೆ ಬೃಹತ್ವದಲ್ಲಿ ಪರ್ಯವಸಾನಗೊಳ್ಳುವುದೆಲ್ಲ ಆಂತರಿಕ ಇಲ್ಲವೆ ಬಾಹ್ಯಿಕ ತನ್ಮಾತ್ರೆಗಳ ಸ್ಥಿತ್ಯಂತರದಿಂದ ಘಟಿಸುತ್ತದೆ. ಈ ವಿಶ್ವವು ಸೃಷ್ಟಿಯಾದುದೇ ಹೀಗೆ. ಸೃಷ್ಟಿಲೀಲೆಯೇ ಇದು!

ಖೆಲೀಛೊಏ ವಿಶ್ವ ಲಯೆ, ಹೇ ವಿರಾಟ ಶಿಶು, ಆನ ಮನೇ
ಪ್ರಲಯ ಸೃಷ್ಟಿ ತವ ಪುತುಲ ಖೇಲಾ ನಿರಜನೇ ಪ್ರಭು ನಿರಜನೇ.

* * *

ವಿಶ್ವದೊಡನೆ ಆಡುತಿಹೆ ವಿರಾಟ ಶಿಶುವೆ ಏನನರಿಯದಂತೆ;
ನಿರ್ಜನ ನೆಲೆಯಲಿ ಸ್ಥಿತಿ ಪ್ರಲಯ ನಿನ್ನ ಗೊಂಬೆಯಾಟದಂತೆ.

ಈ ಯಾವ ಅನಂತ ದೇಹದಲ್ಲಿ ಅಸೀಮನ ಲೀಲೆಯಿದೆಯೋ, ಅಲ್ಲಿ, ಭೂಮತ್ವದ ದೃಷ್ಟಿಯಿಂದ ಕಾಲವೇ ಇಲ್ಲ. ವ್ಯಕ್ತಿ ಸತ್ತೆಯಾಗಲಿ, ವ್ಯಷ್ಟಿ ಸತ್ತೆಯಾಗಲಿ ಇಲ್ಲ. ದೇಶದ ಅಳತೆಯಾಗಲಿ, ಪರಿಮಾಣವಾಗಲಿ ಇಲ್ಲ. ಈ ಲೀಲೆಯು ಪಾತ್ರೋತ್ತರ, ಕಾಲೋತ್ತರ ಮತ್ತು ದೇಶೋತ್ತರವಾಗಿದೆ. ಈ ಲೀಲೆಯ ಪ್ರಾಣಪುರುಷನು ಲೀಲಾನಂದದ ಮಧ್ಯಮಣಿಯಾಗಿದ್ದಾನೆ. ಆವನನ್ನು ಮುಟ್ಟಲಾರೆವು. ಆವನನ್ನು ಹಿಡಿಯಲಾರೆವು.

ಈ ಲೀಲಾನಂದದ ನೃತ್ಯಧಾರೆಯಲ್ಲಿ ಜಡದೊಂದಿಗೆ ಚೇತನದ ಆಟ ನಡೆದಿದೆ. ಕ್ಷುದ್ರದೊಂದಿಗೆ ಬೃಹತ್ತಿನ, ಅಳತೆಗೊಳಗಾದುದರೊಂದಿಗೆ ಅಳತೆಗೆ ನಿಲುಕದುದರ ಆಟ ನಡೆದಿದೆ. ಈ ನೃತ್ಯಧಾರೆಯಲ್ಲಿ ಯಾವಾಗ ಜಡಸತ್ತೆಯೊಂದು ಅಣುಚೇತನವ ಸಂಸ್ಪರ್ಷದಲ್ಲಿ ಬರುವುದೋ, ಆಗ ಆ ವಸ್ತುವು ಅಣುಮನದ ಅಂತರಿಕ ಪರಿಕಲ್ಪನೆಯಲ್ಲಿ ಬರುತ್ತದೆ. ಇಲ್ಲವೆ ಬಾಹ್ಯ–ತನ್ಮಾತ್ರೆಗಳ ಇಂದ್ರಿಯ ಗ್ರಹಿಕೆಯಲ್ಲಿ ಬರುತ್ತದೆ. ಅಣುಚೇತನೆ ಇಲ್ಲವೆ ಅಣುಮಾನಸವು ಈ ತನ್ಮಾತ್ರೆಗಳನ್ನು ಘನಿಷ್ಠ ರೀತಿಯಲ್ಲಿ ತಿಳಿಯಲಾರವು. ಬಹಳವಾದರೆ ಮೇಲೆ ಮೇಲೆ ಮಾತ್ರ ತಿಳಿಯಬಹುದಷ್ಟೇ. ಈ ಪ್ರಕಾರ ಮೇಲೆ ಮೇಲಿನ ಅದರ ತಿಳಿವಳಿಕೆಯು ಅರ್ಥಾತ್ ಯಾರ ಯಾವಾಗ ತಾನ್ಮಾತ್ರಿಕ ಸಂಸ್ಪರ್ಶದಲ್ಲಿ ಬಂದರು? ಇಲ್ಲವೆ, ಯಾರು ಯಾವಾಗ ತಾನ್ಮಾತ್ರಿಕ ಸಂಸ್ಪರ್ಶದ ಹೊರಗೆ ಹೋದರು? ಮತ್ತು ಯಾವ ಸುದೂರವಾಣಿಯು ತನ್ನ ಇಂಗಿತದಂತೆ, ದೂರದ ಮಹಾಸಾಗರದ ಸ್ವರಸಂಕೇತವನ್ನು ನೀಡಿದೆ? ಈ ಎಲ್ಲವುಗಳನ್ನು ಕುರಿತು, ವಿಚಾರಿಸುವ ಕಾಲಕ್ಕೆ, ಆವನು ಕರ್ಮದ ಕ್ರಿಯಾಶೀಲತೆಯ ಮೇಲೆ ಮನದ ಯಾವ ಅಂದಾಜು ಅಳತೆ ಮಾಡಬಹುದೋ, ಅದಕ್ಕೆ **'ಕಾಲ'** ಎನ್ನುತ್ತಾರೆ. ಆದರೆ, ಈ ಮಾನಸಿಕ ಅಳತೆ ಇಲ್ಲವೆ ಕಾಲ ಬೋಧೆಯು ಕೇವಲ ಖಂಡಸತ್ತೆಗಾಗಿ ಇದೆ. ಅಖಂಡದ ವಿಷಯದಲ್ಲಿ ಅಲ್ಲ. ಕಾಲದ ಈ ಅಳತೆಯು ಒಂದು ಅವಿರಳ ತತ್ತ್ವವಲ್ಲ. ಇದರಲ್ಲಿ ಬಾರಿ ಬಾರಿಗೆ ಆಘಾತವಾಗುವುದುಂಟು. ಈ ವಿಚ್ಛಿನ್ನ ಕಾಲದ ಖಂಡಗಳನ್ನು ನಾವು ಒಂದು ಸೂತ್ರದಲ್ಲಿ ಪೋಣಿಸಿ, ಬೃಹತ್ತರ ಕಾಲದ ಸಂಪೂರ್ಣತೆಯನ್ನು ಅಂದಾಜಿಸಹತ್ತುವೆವು. ಯಾವ ಕಾಲದ ಅಂದಾಜಿನಿಂದ ಅಣು-ಚೈತನ್ಯವು ಇಲ್ಲವೆ ಅಣು ಮಾನಸವು ದೂರ ಸರಿಯುವುದೋ, ಅದಕ್ಕೇ ನಾವು 'ಭೂತ' ಎಂದು ಕರೆಯುತ್ತೇವೆ. ಇಲ್ಲವೆ ಅಭಿವತ್ ಎನ್ನುತ್ತೇವೆ. ಇದನ್ನೆ ನಾವು ಲಕ್ಷ್ಯಗೊಟ್ಟು ನೋಡಿದಾಗ, ನಮಗೆ ತಿಳಿದು ಬರುವುದೇನೆಂದರೆ—ವಿಶೇಷ ವ್ಯಕ್ತಿಯ ನಿಕಟದಲ್ಲಿ, ವಿಶೇಷ ದೈಶಿಕ ಸತ್ತೆಯ ನಿಕಟದಲ್ಲಿ, ಯಾವುದು 'ಭೂತ' ಕಾಲರೂಪವಾಗಿ ಪರಿಣಮಿಸಿದೆಯೋ, ಯಾವುದು ಗ್ರಹಿಕೆಯ ಆಚೆ ಸರಿದಿದೆಯೋ, ಅದು ಇನ್ನೊಂದೆರ್ವ ವ್ಯಕ್ತಿಯ ನಿಕಟದಲ್ಲಿ ಇಲ್ಲವೆ ಇನ್ನೊಂದು ದೈಶಿಕ ಸತ್ತೆಯ ನಿಕಟದಲ್ಲಿ 'ಭೂತ'ವಾಗಿಲ್ಲದಿರಬಹುದು. ಅಲ್ಲಿ ಅದಿನ್ನೂ ಸಂಪರ್ಕ ಯುಕ್ತವಾದ ನೃತ್ಯಶೀಲತೆಯೇ ಆಗಿದೆ. ಪೃಥ್ವಿಯ ಇತಿಹಾಸದಲ್ಲಿ ಯಾವ ವಸ್ತುಗಳು ದೂರ–ಭೂತದಲ್ಲಿ ಅಡಗಿ ಹೋಗಿವೆಯೋ, ಅವು ಲಕ್ಷಾಂತರ ಜ್ಯೋತಿ-ಸಂವತ್ಸರಗಳಷ್ಟು ದೂರವಿರುವ ಇತರೇತರ ಜ್ಯೋತಿಷ್ಯಗಳಿಗೆ ಇನ್ನೂ ಘನಿಷ್ಠ ಸಂಪರ್ಕಯುಕ್ತ ವರ್ತಮಾನವೇ ಆಗಿದೆ.

ಆದ್ದರಿಂದ ಯಾವುದನ್ನೂ 'ಅಭಿವತ್' ಎಂದು ಹಾರಿಸಿಬಿಡಲಾರೆವು. ಒಂದು ಸಾಮಾನ್ಯ ಮಾತು ಹೇಳಿ, ಯಾವುದೊಂದರ ಅಸ್ತಿತ್ವವನ್ನೂ 'ಇಲ್ಲವೆ' (ನಸ್ಯಾತ್) ಯಾಗಿ ಮಾಡಲಾರೆವು. ಈ ಅಭಿವತ್ ಒಂದು ಆಪೇಕ್ಷಿಕ ತತ್ತ್ವವಾಗಿದೆ. ಇದೊಂದು ಆಪೇಕ್ಷಿಕ ಮಾತಾಗಿದೆ.

'ಹೇ ಪೂರ್ಣ ತವ ಚರಣೇರ ಕಾಛೇ,
ಜಾಹಾ ಕಿಛೂ ಸಬ್ ಆಛೇ, ಆಛೇ, ಆಛೇ.
ನಾಈ ನಾಈ ಭಯ ಸೇ ಶುಧು ಆಮಾರೀ
ನಿಶಿದಿನ ಕಾರಿದಿ ತಾಈ".

ಪೂರ್ಣ ! ನಿನ್ನ ಚರಣದಿಹುದು
ಸರ್ವವಿಪ್ಪ ರೀತಿ ಇಹುದು.
ಕಳೆದು ಹೋಯಿತೆಂಬ ಭೀತಿ
ಯಿಂದ ಅಳುವೆ ಬರಿದೆ ಭ್ರಾಂತಿ.

ಮಾನವನ ಅಳವಿಗೆಟುಕದ ಯಾವುದೊಂದು, ಮಾನವತೆಯು ಕಳೆದುಕೊಂಡ ಯಾವುದೊಂದು, ಇನ್ನು ಅಸ್ತಿತ್ವದಲ್ಲಿರಲಾರದೆಂದು ನಾವು ಹೇಳಲಾರೆವು. ಪರಮ ಪುರುಷನಿಗೆ, ಆಪೇಕ್ಷಿಕತೆಯ ಬಂಧನವಿಲ್ಲ. ಹೀಗೆ ಸಾಪೇಕ್ಷ ಜಗದ, ಜನರಿಗೆ 'ಭೂತ' ಎನಿಸುವುದಿಲ್ಲ, ಸದಾಶಿವನ, ಪರಮ ಪುರುಷನ, ತೊಡೆಯ ಮೇಲೆ ಕೊನೆಯಿಲ್ಲದ ನಗೆ ಸೂಸುವ ಮಗುವಿನಂತೆ, ಎಂದೆಂದಿಗೂ ಪರಮಪಿತನ ತೊಡೆಯ ಮೇಲೆ ಕುಣಿಯುವ ಪ್ರೀತಿಯ ಕಂದನಂತೆ, ಸದಾ ಉಪಸ್ಥಿತವಿರುತ್ತದೆ. 'ಭೂತ'ದ ಶಿಶುವು ಎಂದೂ ಕಳೆದು ಹೋಗಿಲ್ಲ. ಕಳೆದು ಹೋಗುತ್ತಿಲ್ಲ. ಕಳೆದು ಹೋಗುವುದಿಲ್ಲ.

ಸೇ ಕಖಿನೋ ಹಾರಾಯ ನಿ
ಸೇ ಕಖಿನೋ ಹಾರಾಯ ನಾ
ಸೇ ಕಖಿನೋ ಹಾರಾವೆ ನಾ

ಕಾಲಜ್ಞಾನದ ದೃಷ್ಟಿಯಲ್ಲಿ ಆಪೇಕ್ಷಿಕ ತತ್ತ್ವರೂಪದಲ್ಲಿ ಭೂತ ಮತ್ತು ಭವಿಷ್ಯಗಳು ಎಷ್ಟು ಇವೆಯೋ, ವರ್ತಮಾನವು ಅಷ್ಟಾಗಿಲ್ಲ. ವಸ್ತು–ವಸ್ತುಗಳಲ್ಲಿ ಸಂಘರ್ಷ ಮತ್ತು ಸಮಿತಿಗಳು ಘಟಿಸುತ್ತಿರುವುದೆಲ್ಲ ಆ ವಿರಾಟ ಮಾನಸದ ಅನಾದಿ, ಅನಂತರ, ಗರ್ಭದಲ್ಲಿ ಘಟಿಸುತ್ತಿದೆ. ಯಾವ ಸತ್ತೆಗಳಿವೆಯೋ–ಅವು ಆತ್ಮಿಕವಿರಲಿ, ಮಾನಸಿಕ ವಿರಲಿ, ಇಲ್ಲವೆ ಜಡ–ಜಾಗತಿಕವಿರಲಿ, ಏನಾದರೂ ಇರಲಿ–ಒಂದು ಮತ್ತೊಂದರ ಇಲ್ಲವೇ ಒಂದಕ್ಕಿಂತ ಹೆಚ್ಚು ಸತ್ತೆಗಳ ಸಂಪರ್ಕದಲ್ಲಿ ಬರುತ್ತದೆ. ಹೀಗೆ ಆ ಸತ್ತೆಯು ಇಲ್ಲವೆ ಆ ಸಕಲ ಸತ್ತೆಗಳ ಉತ್ಸರಣ ಇಲ್ಲವೆ ಉತ್ತರಣಗಳನ್ನು ವರ್ತಮಾನವೆಂದು ಕರೆಯುತ್ತಾರೆ. ತನ್ಮಾತ್ರೆಗಳ ಗ್ರಹಣ–ವರ್ಜನಗಳು ಯಾವಾಗ ವಂದಾಗುವವೋ, ಇಲ್ಲವೆ ಅನನುಭೂತ ಅವಸ್ಥೆಯಲ್ಲಿ ಸಾಗುವವೋ, ಆಗ ಅದಕ್ಕೆ 'ಭೂತ' ಇಲ್ಲವೆ 'ಅತೀತ' ಎಂದು ಹೇಳುತ್ತಾರೆ. ಯಾವಾಗ ಅದು ತನ್ಮಾತ್ರೆಗಳ ಗ್ರಹಣ–ವರ್ಜನೆಗಳ ಅಳವಿನಲ್ಲಿ ಬರುವುದಿಲ್ಲವೋ, ಆಗ 'ಭವಿಷ್ಯ'ವೆನ್ನುತ್ತಾರೆ.

ವರ್ತಮಾನವು ಆಪೇಕ್ಷಿಕ ಸತ್ಯೆಯಾಗಿದೆ. ಈ ದೃಷ್ಟಿಯಿಂದ ಭೂತ ಮತ್ತು ಭವಿಷ್ಯಗಳಿಗಿರುವಷ್ಟು ಮಹತ್ವವು ವರ್ತಮಾನಕ್ಕಿಲ್ಲವೆಂದು ಇದೀಗ ಸ್ವಲ್ಪ ಮೊದಲು ನಾನು ಹೇಳಿದೆನಷ್ಟೇ. ಏಕೆಂದರೆ ವರ್ತಮಾನವು ನಿರಂತರ ಚಲಿಸುವ ಸತ್ಯೆಯಾಗಿದೆ. ಒಂದು ಕ್ಷಣ, ಅದು ಇರುವಂತೆ ತೋರುತ್ತದೆ. ಮರುಗಳಿಗೆಯಲ್ಲಿ ಅದು ಮಾಯವಾಗಿ ಬಿಟ್ಟಿರುತ್ತದೆ. ಒಂದು ಕ್ಷಣ ವರ್ತಮಾನವು ಇನ್ನೂ ಆಗಮಿಸಿಲ್ಲವೆಂಬಂತೆ ತೋರುತ್ತದೆ. ಮರುಕ್ಷಣ, ಅದು ಬಂದೇ ಬಿಟ್ಟಿರುತ್ತದೆ. ಅದು 'ಭೂತ'ದ ಗರ್ಭ ಸೇರುವ ಮುನ್ನ ನಾವು ಅದರ ಅಲ್ಪಾಂಶವನ್ನು ಮಾತ್ರ ಕಾಣಬಲ್ಲೆವು. ಯಾವುದೊಂದು ಘಟನೆಯು ಸಂಭವಿಸಿಲ್ಲವೆಂದು ಒಬ್ಬನು ಚಿಂತಿಸುತ್ತಿರುವಂತೆಯೇ ಅದು ಆಕಸ್ಮಾತ್ತಾಗಿ ತೋರಿಬರುತ್ತದೆ, ಮತ್ತು ಮರುಕ್ಷಣವೇ ಅದು ಕಾಲಗರ್ಭದಲ್ಲಿ ಮರೆಯಾಗುತ್ತದೆ. ಹೀಗೆ ಸೂಕ್ಷ್ಮವಾಗಿ ವಿವೇಚಿಸಿ ನೋಡಿದರೆ, ನಾವು ವರ್ತಮಾನವೆಂದು (ಭವತಿ) ತಿಳಿಯುದೆಲ್ಲ. ಅಂಶತಃ ಭವಿಷ್ಯದ ಗರ್ಭದಲ್ಲಿ ಇರುತ್ತದೆ; ಅಂಶತಃ ಭೂತದ ಗರ್ಭದಲ್ಲಿ ಇರುತ್ತದೆ. ಭೂತ ಇಲ್ಲವೆ ಭವಿಷ್ಯಗಳ ಯಾವ ಭಾಗವನ್ನು ವ್ಯಕ್ತಿಯು ಸಂಪರ್ಕಿಸಬಲ್ಲನೋ, ಅದನ್ನು ವರ್ತಮಾನವೆನ್ನುತ್ತಾರೆ. ಹೀಗಾಗಿ ವರ್ತಮಾನವು ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ ಬೇರೆಯಾಗಿರುತ್ತದೆ.

ಓರ್ವನು ಹೇಳುತ್ತಾನೆ "ಕೇಳಿ; ಆ ಗಾಯಕನು ಆಶಾವರಿಯ ಸ್ವರವನ್ನು ಹೀಗೆ ಎಳೆದು ಹಾಡಿದ," ಕೂಡಲೇ ಇನ್ನೋರ್ವನು, "ಇಲ್ಲ ಬಿಡಿ, ನಾನಂತೂ ಕೇಳಿಯೇ ಇಲ್ಲ." ಎಂದು ಹೇಳುತ್ತಾನೆ. ಇಲ್ಲಿ ಗಾಯಕನೂ ಒಬ್ಬ. ಕಾಲವೂ ಅದೇ. ರಾಗವೂ ಒಂದೇ; ಓರ್ವನು ಕೇಳಬಲ್ಲ; ಇನ್ನೋರ್ವನು ಕೇಳಲಾರ. ಕೇಳಬಲ್ಲವನಿಗೆ ಸಂಗೀತವು ವರ್ತಮಾನದಲ್ಲಿವೆ. ಕೇಳಲಾರದವನಿಗೆ ಸಂಗೀತವು ಆಗಲೇ 'ಭೂತ'ವಾಗಿದೆ.

ಅಹುದು. ಇಷ್ಟು ಹೊತ್ತಿನವರೆಗೆ ನಾನು ಹೇಳುತ್ತಿದ್ದುದೇನಂದರೆ, 'ಭವತಿ' ಇದರ ಪಾರಮಾರ್ಥಿಕ ಮೂಲ್ಯ (absolute value) ವೇನೂ ಇಲ್ಲ. ಆದರೆ ಅದರ ಆಪೇಕ್ಷಿಕ ಮೂಲ್ಯವಾದರೂ ಎಷ್ಟು? ಎಂಬ ಬಗ್ಗೆ ವಿಚಾರಿಸುವಾ: ಆದರೆ, ನಾನಿಲ್ಲಿ ಒಂದು ಮಾತನ್ನು ಹೇಳಬಯಸುವೆ. ಏನೆಂದರೆ, ನಾವು ವಾಸಿಸುವ ಆಪೇಕ್ಷಿಕ ಜಗತ್ತಿನಲ್ಲಿ, ಭೂತ ಇಲ್ಲವೆ ಭವಿಷ್ಯವು ಬಹುದೊಡ್ಡ ಮೂಲ್ಯವನ್ನು ಹೊಂದಿದೆ. ಈ ಕಾರಣದಿಂದ, ವರ್ತಮಾನಕ್ಕೇನೂ ಬೆಲೆಯಿಲ್ಲವೆಂದು ಹೇಳುವೆನಾದರೆ, ದಾರ್ಶನಿಕ ಕೂಟ ಯುಕ್ತಿ ಜಾಲದಲ್ಲಿ ಸಿಲುಕಿ, ಆ ಮಾತನ್ನು ಒಪ್ಪಬಹುದಾಗಿದೆ. ಆದರೆ ವಾಸ್ತವ ದಲ್ಲಿ ಆ ಮಾತನ್ನು ಒಪ್ಪಬೇಕಾಗಿಲ್ಲ. ಹೀಗಾಗಿ ಈಧರಾತಲದ ಧೂಳಿಯ ಸಂತಾನವಾದ ಮಾನವನು ವರ್ತಮಾನವನ್ನು ಸ್ವೀಕರಿಸದೆ ಇರಲಾರ. ಆದ್ದರಿಂದ ವಾಸ್ತವವಾದಿಯಾದ ಶಿವನು 'ವರ್ತಮಾನೇಷು ವರ್ತತೇ'ಎಂದು ಹೇಳಿದ್ದಾನೆ.

ಈ ಭೂತ ಮತ್ತು ಭವಿಷ್ಯದ ಸಮೀಕರಣದ ಫಲವಾಗಿ ನಾವು ಯಾವ 'ವರ್ತಮಾನ' ಇಲ್ಲವೆ 'ಭವತಿ'ಯನ್ನು ಪಡೆಯುತ್ತೇವೆಯೋ, ಅದೂ ಸಹ ವಿರಾಟನ ಗರ್ಭದಲ್ಲಿ ತರಂಗ ಮಾಲೆಯ ಉತ್ಥಾನ-ಪತನ ಎಂದು ಕರೆಯಿಸಿಕೊಂಡು, ಸ್ವೀಕೃತವಾಗಿದೆ. ಯಾವ ವಿರಾಟನ ಭೂಗರ್ಭದಲ್ಲಿ ಈ ತಥಾಕಥಿತ ಉತ್ಥಾನ-ಪತನಗಳು ಆಗಹತ್ತಿವೆಯೋ, ಆ ವಿರಾಟ ಚೈತನ್ಯಯ ಸತ್ಯೆಯು ಈ ಉತ್ಥಾನ-ಪತನಗಳ ಪ್ರತಿ

ಸ್ತರವನ್ನು ಈಕ್ಷಿಸುತ್ತಿದ್ದಾನೆ; ತಿಳಿಯುತ್ತಿದ್ದಾನೆ; ಮತ್ತು ಅವನ ಪರಮ ಪವಿತ್ರ ಸಾಕ್ಷಿತ್ವದ ಮೂಲಕ, ಅವುಗಳ ಅಸ್ತಿತ್ವವನ್ನು ಮಧುಮಯವಾಗಿ ಮಾಡುತ್ತಿರುತ್ತಾನೆ. ಶಿವನು ಚಿನ್ಮಾಯತ್ವದ ಮರ್ಮಭೂಮಿಯಾಗಿದ್ದಾನೆ. ಅವನು ಯಾವುದು ಆಗಿ ಹೋಗಿದೆಯೋ ಅದನ್ನು ತಿಳಿಯುತ್ತಾನೆ; ಯಾವುದು ಆಗಹತ್ತಿದೆಯೋ ಅದನ್ನೂ ಸಹ ಅವನು ತಿಳಿಯುತ್ತಾನೆ.

ಭವ್ಯಮ್ ಇದರ ಅರ್ಥವೆಂದರೆ, 'ಭವಿತವ್ಯಮ್'-ಯಾವುದು-ವಿಧಿ ಇಲ್ಲವೆ ವಿಧಾತನ ನಿರ್ದಿಷ್ಟ ಕಾರ್ಯವಾಗಿದೆಯೋ ಕಾರಣ ತತ್ತ್ವದ ಫಲಶ್ರುತಿಯನ್ನು ಹೊತ್ತು ತರುವುದಾಗಿದೆ. ಬೆಂಕಿಯಲ್ಲಿ ಕೈ ಇಕ್ಕುವ ಮುನ್ನವೇ ಕೈ ಸುಟ್ಟು ಹೋಗುವುದೆಂಬ ಸಂಗತಿಯು ಜನರಿಗೆ ಗೊತ್ತಿದೆ. ಆದರೆ ಚಿಕ್ಕ ಮಗುವಿಗೆ ಸುಡುವ ಶಕ್ತಿಯ ಬಗೆಗೆ ತಿಳಿದಿಲ್ಲ. ಅದು ಅನಭಿಜ್ಞವಾಗಿದೆ. ಆ ಮಗು ಬೆಂಕಿಯಲ್ಲಿ ಯಾವಾಗ ಕೈಯಿಕ್ಕುವುದೋ ಆಗ ಅದರ ಕೈ ಸುಟ್ಟುಹೋಗುವುದು. ಆದ್ದರಿಂದ ಇದು ಆ ಮಗುವಿನ ತಪ್ಪೇನಲ್ಲ; ಆದರೆ ಅದರ ಅಜ್ಞತೆಯಷ್ಟೇ.

ವೈಜ್ಞಾನಿಕ ಕ್ಷೇತ್ರದಲ್ಲಿಯೂ ಸಹ ಮಾನವನು ಅನೇಕ ಜಡ ಮತ್ತು ಚೇತನ, ಸ್ಥಾವರ ಮತ್ತು ಜಂಗಮ, ಸ್ವಭಾವಗಳೊಂದಿಗೆ ಹೆಚ್ಚು ಕಡಿಮೆ ಪರಿಚಿತವಾಗಿರುತ್ತಾನೆ. ಈ ಕಾರಣದಿಂದಾಗಿಯೇ ಅವನು ಹೊಸ ಹೊಸ, ಸಂಶೋಧನಗಳ ಮೂಲಕ, ಹೊಸ ಔಷಧಿಗಳನ್ನೂ, ಹೊಸ ವಸ್ತುಗಳನ್ನೂ ಆವಿಷ್ಕಾರ ಮಾಡುವಲ್ಲಿ ಸಕ್ಷಮನಾಗುತ್ತಾನೆ. ಏಕೆಂದರೆ ಆ ವಿಜ್ಞಾನಿಯು ಆಯೆಲ್ಲ ಉಪಾದಾನಗಳ ಕಾರ್ಯಕಾರಣ ತತ್ತ್ವಗಳ ಪರಿಣಾಮವನ್ನೂ ಮತ್ತು ಫಲಶ್ರುತಿಯನ್ನೂ ಅರಿತುಕೊಂಡಿರುತ್ತಾನೆ. ಮಾನವ ನೆಷ್ಟು ತಿಳಿಯಬಲ್ಲನು? ಬಹು ಕಡಿಮೆಯಷ್ಟೇ? ಆದರೂ ಸಹ ಅವನು ವೈಜ್ಞಾನಿಕ ಸಂಶೋಧನೆಗಳಿಂದ ನಿತ್ಯನೂತನ ವಸ್ತುಗಳ ಉದ್ಭಾವನೆಯನ್ನು ಮಾಡುತ್ತಲೇ ಇರುತ್ತಾನೆ. ಅವನು ಅಸಂಖ್ಯ ಶುಭಕರವಾದ, ಅಸಂಖ್ಯ ಮೋಹಕ ವಸ್ತುಗಳ ಆವಿಷ್ಕಾರವನ್ನು ಮಾಡುತ್ತಲೇ ಇರುತ್ತಾನೆ. ತನ್ನ ಮೂಲಕವೇ ನಿರ್ಮಿತವಾದ ಶುಭಕಾರಿ ವಸ್ತುಗಳನ್ನು ಕಂಡು, ಅವನು ಪ್ರಸನ್ನಗೊಳ್ಳುತ್ತಾನೆ. ಮತ್ತು ವಿನಾಶಕಾರಿ ವಸ್ತುಗಳನ್ನು ಕಂಡು, ಅವನು ಪ್ರಸನ್ನಗೊಳ್ಳುತ್ತಾನೆ. ಮತ್ತು ವಿನಾಶಕಾರಿ ವಸ್ತುಗಳನ್ನು ಕಂಡು ಭಯದಿಂದ ಸಂತ್ರಸ್ತನಾಗಿ ಬಿಡುತ್ತಾನೆ. ಪುನಃ ಅವನು ಎಷ್ಟೊಂದು ತಿಳಿಯಬಲ್ಲದು?

ಯಾವುದೇ ಯೌಗಿಕ ಇಲ್ಲವೆ ಮೌಲಿಕ ವಸ್ತುವನ್ನು ಮಾನವನು ಪೂರ್ಣ ರೀತಿಯಿಂದ ತಿಳಿಯಲಾರನು. ಅವನು ಅದರ ಒಂದಂಶವನ್ನೂ ಸಹ ತಿಳಿಯಲಾರನು. ಇತರ ವಿಷಯಗಳ ಮಾತಿರಲಿ, ಅವನು ತನ್ನನ್ನು ತಾನು ಎಷ್ಟು ಮಟ್ಟಿಗೆ ತಿಳಿದಿದ್ದಾನೆ? ಅವನಿಗೆ ಅತ್ಯಂತ ನಿಕಟ ವಸ್ತುವೆಂದರೆ 'ಸ್ವಯಂ' ತಾನೆ? ಆ ತನ್ನನ್ನೇ ಮಾನವನು ಅತಿಕಡಿಮೆ ಅರಿತಿದ್ದಾನೆ. ಏಕೆಂದರೆ, ಅವನು 'ಸ್ವಯ'ವನ್ನು ಪೂರ್ಣ ರೀತಿಯಿಂದ ತಿಳಿದುಕೊಂಡಿಲ್ಲ. ಈ ಕಾರಣದಿಂದ ಅಧಿಕಾಂಶ ಕ್ಷೇತ್ರಗಳಲ್ಲಿ ಅವನಲ್ಲಿ ಆತ್ಮಜ್ಞಾನದ ಅಭಾವವಿರುತ್ತದೆ. ಆದ್ದರಿಂದ ಆತ್ಮವಿಶ್ವಾಸದ ಅಭಾವವೂ ಇರುತ್ತದೆ. ಆದರೆ ಯಾವ ವಿರಾಟಸತ್ಯೆಯ ಗರ್ಭದಲ್ಲಿ ಪ್ರತಿಯೊಂದು ಖಂಡವಸ್ತುವಿನ ಸೃಷ್ಟಿ, ಸ್ಥಿತಿ,

ಲಯಗಳ ಕ್ರಮವು ನಡೆದಿರುವುದೋ ಅವನು ಆ ಪ್ರತಿವಸ್ತುವನ್ನು ಪೂರ್ಣರೀತಿಯಿಂದ ಅರಿತಿರುತ್ತಾನೆ. ಆ ವಸ್ತುವು ತನ್ನನ್ನು ತಾನು ತಿಳಿಯದಿರಬಹುದು; ಇಲ್ಲವೆ ಒಂದು ಕ್ಷುದ್ರ ಅಂಶವನ್ನಷ್ಟೇ ತಿಳಿದಿರಬಹುದು. ಆದರೆ ಆ ವಿರಾಟ್‌ಸತ್ತೆಯು ಮಾತ್ರ ನೂರಕ್ಕೆ ನೂರರಷ್ಟು ತಿಳಿಯಬಲ್ಲದು.

ಮಾನವನು ತಾನೊಂದು ಚಿಕ್ಕ ಮಾರಕಾಸ್ತ್ರದ ಆವಿಷ್ಕಾರ ಮಾಡಿದ್ದೇನೆಂದು ಉಬ್ಬಿ, ಈ ಧರೆಯನ್ನು ತನ್ನ ಕಾಲಿನ ಕೆಳಗೆ ಹಾಕಿ ಮೆಟ್ಟಿಬಿಡುತ್ತೇನೆಂದು ಭಯ ತೋರಿಸಿ, ಅದನ್ನು ಅಲ್ಲಾಡಿಸುತ್ತಾನೆ. ಆದರೆ ಅವನ ನಿಜ ಅಸ್ತಿತ್ವವೇ ಅತಿ ಕಿಂಚಿತ್ ಇದೆಯೆಂಬುದನ್ನವನು ನೆನಪಿಡಲಿ. ಅದೇ ರೀತಿ, ಅವನಿಂದ ಆವಿಷ್ಕೃತವಾದ ಮಾರ ಕಾಸ್ತ್ರಗಳ ಮೂಲ್ಯವಂತೂ ಇನ್ನೂ ಕಡಿಮೆಯಾಗಿರುತ್ತದೆ. ಅವುಗಳ ಭಯ ತೋರಿಸಿ, ಅವನು ಮಾನವರ ಜನ್ಮಾಜಾತ ಸಂಪದವಾದ ಆತ್ಮೋನ್ನತಿಯನ್ನು ತಡೆಯಲಾರನು. ಅಷ್ಟೇಕೆ ಬಹುಕಾಲ ಅದುಮಿ ಇಡಲೂ ಆರನು.

ಕಾರ್ಯಕಾರಣ ತತ್ತ್ವದ ಫಲಶ್ರುತಿಯನ್ನು ಹೊತ್ತೊಯ್ಯುವುದರ ಮೇಲೆ, ಯಾವುದಾದನಂತರ ಏನಾಗುತ್ತದೆ? ಇಲ್ಲವೆ, ಏನಾಗುವುದು? ಎಂಬುದನ್ನು ಕೇವಲ ಆ ವಿರಾಟಸತ್ತೆಯೊಂದೇ ತಿಳಿಯುತ್ತದೆ. ಆ ವಿರಾಟನ ಗರ್ಭದಲ್ಲಿಯೇ ಸಮಸ್ತ ಅಸ್ತಿತ್ವಗಳ ಛಂದಾಯಿತ ಪ್ರಗತಿ ಮತ್ತು ಅದೇ ಮೇರೆಗೆ ಛಂದಪತನಗಳು ಆಗುತ್ತಿದ್ದವು; ಆಗುತ್ತಿವೆ; ಅದೇ ಮುಂದೆಯೂ ಆಗುತ್ತ ಹೋಗುವವು.

ಆದ್ದರಿಂದಲೇ 'ಯದೇವ ಭವಾವಸ್ತಿ' ಎಂದಿಲ್ಲಿ ಹೇಳಲಾಗಿದೆ. ಅಂದರೆ ಸ್ವಲ್ಪ ಏನಾಗುವುದೋ, ವಿಧಿಲಿಪಿ ಏನಿದೆಯೋ ನಮ್ಮ ಬಾಗ್ಯದಲ್ಲಿ ಏನು ಬರೆದಿದೆಯೋ ಅದೆಲ್ಲವನ್ನೂ ಚಿತ್‌ಸತ್ತೆಯಾದ ಸದಾಶಿವನ ಜ್ಞಾನದಲ್ಲಿದೆ. ಇದೆಲ್ಲವೂ ತೀರ ಸ್ವಾಭಾವಿಕವಾಗಿ ಅವನಿಗೆ ಗೋಚರವಾಗುತ್ತದೆ. ಏಕೆಂದರೆ ಅವನ ಸಿಂಹಾವ ಲೋಕನದ ಆಚೆ ಬೇರಾವುದೂ ಇಲ್ಲ. ಯಾವ ವ್ಯಕ್ತಿಯಲ್ಲಿ ಎಷ್ಟೊಂದು ಶಕ್ತಿ–ಸಾಮರ್ಥ್ಯಗಳಿವೆಯೆಂಬುದು ಅವನಿಗೆ ಗೊತ್ತು. ಇದು ಅನೇಕ ಜನರಿಗೆ ತಿಳಿದಿಲ್ಲ.

ಕತಟುಕೂ ಬಲ ಧರೇ ಏ ಮಾನವ
ಕತ ಬಲ ಧರೇ ವಿಧಾತಾ ತಾರ.
ಮಾನುಜ! ನಿನ್ನದೆನಿತು ಬಲವೋ?
ವಿಧಾತ ಬಲ ಕಾವ ಸಮವೋ?

'ಅಭವತ್' ಎಂದರೆ ಭೂತ, ಭವತಿ ಎಂದರೆ ವರ್ತಮಾನ, ಭವ್ಯಮ್ ಎಂದರೆ ಭವಿಷ್ಯ–ಈ ಮೂರರಲ್ಲಿ ಯಾವುದೂ ಒಂದರಿಂದೊಂದು ಬೇರೆಯವಲ್ಲ;ಸ್ಪಷ್ಟವೂ ಅಲ್ಲ. ಯಾವುದೂ ಒಮ್ಮೆಲೆ ತೋರುವುದಿಲ್ಲ. ಒಮ್ಮೆಲೇ ಮರೆಯಾಗುವುದಿಲ್ಲ. ಸರ್ವ ಸತ್ತೆಗಳೂ ವಿಧಿನಿಯಮಗಳನ್ನು ಶಿಸ್ತುಬದ್ಧವಾಗಿ ಪಾಲಿಸುತ್ತವೆ. ಮತ್ತು ಈ ದೃಶ್ಯ ಮಾನ ಸೃಷ್ಟಿ ಚಕ್ರದಲ್ಲಿ ಭವಿಷ್ಯದಿಂದ ಇನ್ನೂ ದೂರದ ಭವಿಷ್ಯದತ್ತ ಸಾಗುತ್ತವೆ. ಈ ವಿರಾಟ ಧಾರೆಯ ಗತಿಯನ್ನಾರೂ ತಡೆಯಲಾರರು. ಅದನ್ನಾರೂ ಹಿಡಿದಿರಿಸ ಲಾರರು. ಅದನ್ನಾರೂ ಅದುಮಿಡಲಾರರು.

ಮಾನವನ ಇತಿಹಾಸದಲ್ಲಿ ಸತ್ಯಗಳೂ ಇವೆ. ಮಿಥ್ಯೆಗಳೂ ಇವೆ. ಮಹಾ

ಪುರುಷರ ಚರಿತ್ರೆಗಳ ಮಹತಿಯನ್ನು ಕುಂದಿಸುವ ಪ್ರಯತ್ನವೂ ನಡೆದಿವೆ. ಇತಿಹಾಸದ ಪುಟಗಳಿಂದ ಅವರನ್ನು ಅಳಿಸಿಹಾಕುವ ಯತ್ನವೂ ನಡೆದಿದೆ. ಇನ್ನು ಅನೇಕ ಬಾರಿ, ಕೆಲಸಕ್ಕೆ ಬಾರದ ಜನರಿಗೆ ಅವಾಸ್ತವ ಮಹತ್ವ ನೀಡಿ ಚಿತ್ರಿಸಲಾಗಿದೆ. ಆದರೆ ಈ ಪ್ರಯತ್ನಗಳಾವವೂ ಯಶಸ್ವಿಯಾಗಿಲ್ಲ. ಪ್ರತಿಯೊಂದನ್ನು ನಿತ್ಯಕಾಲದ ಪುಟಗಳಲ್ಲಿ ಯಥಾವತ್ತಾಗಿ ಬರೆಯಲಾಗಿದೆ. ಹೀಗೆ ನಿತ್ಯಕಾಲದ ವಿಶಾಲ ಪರದೆಯ ಮೇಲೆ, ಅಲ್ಪಮಾನವರ ಈ ಸ್ವಾರ್ಥಪೂರ್ಣ, ಒಣ ಪ್ರಯತ್ನಗಳು ಘೃಣಾಪೂರ್ಣ ಅನುಕಂಪದ ಮತ್ತು ಹಾಸ್ಯಾಸ್ಪದ ಸಂಗತಿಗಳಾಗಿ ಉಳಿದಿವೆಯಷ್ಟೇ.

ಉಡಿಫೇ ತೋಮಾರ ಧ್ವಜಾ ಮೇಘರಂಧ್ರಚ್ಯುತ ತಪನೇರ
ಜ್ವಲದರ್ಜಿರೇಖಾ;
ಕರ್ಜೋನೇ ಜೇಯೇ ಆಧಿ ಊರ್ಧ್ವಮುಖೇ–ಪಡಿತೇ ಜಾನಿ ನಾ ಕೀ
ತಾಹಾತೇ ರೇಖಾ.

* * *

ಮೇಘರಂಧ್ರದಿಂದ ತೂರಿಬಂದ
ರವಿಯ ಬೆಳಕಿನಂತೆ ಹಾರುತಿಪುದು; ತವಧ್ವಜ.
ಕರವ ಮುಗಿದು ಮುಖವನೆತ್ತಿ ಕೂಡ,
ಕಾಣೆ ನಾನು ಅದರೊಳಿರುವ ಬರೆಹವಾವುದು, ಇದು ನಿಜ.

ಈ ಯಾವ ಇತಿಹಾಸದ ಸುಂದರ ಸಮಾರೋಹಗಳಿವೆಯೋ, ಈ ಯಾವ ಇತಿ ಕಥೆಯ ತಿಳಿದುಬಾರದ ಚಿತ್ರಗಳಿವೆಯೋ, ಈ ಯಾವ ಇತಿವೃತ್ತದ ಬಣ್ಣಬಣ್ಣದ ಚಿತ್ರ ಗೃಹಗಳಿವೆಯೇ, ಇವೆಲ್ಲವೋ ನಿತ್ಯತೆಯ ಗರ್ಭದಲ್ಲಿ ಕ್ಷಣಕ್ಷಣಕ್ಕೆ ಏರುತ್ತ ಇಳಿಯುತ್ತ ಇರುತ್ತವೆ.

ಇತಿಹಾಸವು ಕಾಲದ ಬಂಡಿಯ ಮೇಲೆ ಹಾಕಿದ ಸೌಮ್ಯ ವಿಟಿನಂತಿದೆ; ಅಸ್ತಿತ್ವದ ಮೆತ್ತನೆಯ ಸ್ಪಂದನವಾಗಿದೆ. 'ತೇಷಾಂ ವಿಲಕ್ಷಣೋ ಸಾಕ್ಷೀ' ಎಂದು ಹೇಳಲಾಗಿದೆ. ಅಂದರೆ, ಈ ಯಾವ ಭೂತ, ವರ್ತಮಾನ ಮತ್ತು ಭವಿಷ್ಯಗಳ ಮೇಲೆ ಅವಲಂಬಿಸಿದ ಇತಿಕಥೆಯ ಅಂಕಿತ ದೃಶ್ಯಸಮೂಹವಿದೆಯೋ ಅದರೊಂದಿಗೆ ಚಿತ್‌ಸತ್ತೆಯಾದ ಪರಮ ಶಿವನಿದ್ದಾನೆ. ಅವನು ಇದರ ನಿರ್ಲಿಪ್ತ ಸಾಕ್ಷೀ ರೂಪಿಯಾಗಿದ್ದಾನೆ. ಪರಮತತ್ತ್ವವು ಕೇವಲ ಸಾಕ್ಷಿಯಷ್ಟೇ ಅಲ್ಲ; ಅದರೆ, ಇನ್ನೂ ಬಹಳಷ್ಟು ಆಗಿದ್ದಾನೆ. ಆದರೆ ಘಟನಾ ಪರಂಪರೆಯ ದೃಷ್ಟಿಯಿಂದ ಅವನು ನಿರ್ಲಿಪ್ತ ಸಾಕ್ಷೀ ಆಗಿದ್ದಾನೆ. ಅವನು ಇತಿಹಾಸಕ್ಕೆ ಕಲಂಕ ಹಚ್ಚುವುದಿಲ್ಲ. ಮತ್ತು ಯಾವುದೇ ಸತ್ತೆಗೆ ಇಲ್ಲವೆ ವಸ್ತುವಿಗೆ ಅವಾಸ್ತವ ಮಹತ್ವವನ್ನೂ ಕೊಡುವುದಿಲ್ಲ. ಅವನು ಕಾರ್ಯಕಾರಣ ತತ್ತ್ವದಾಚೆಗಿದ್ದಾನೆ. ಹೀಗಾಗಿ ಅವನು ಎಲ್ಲ ಘಟನೆಗಳಿಗೆ ವಿಲಕ್ಷಣನಾಗಿದ್ದಾನೆ. 'ವಿಲಕ್ಷಣ' ಶಬ್ದವನ್ನು ಎರಡು ಅರ್ಥಗಳಲ್ಲಿ ಬಳಸುತ್ತಾರೆ. ಒಂದು ಅರ್ಥವೆಂದರೆ ವಿಪರೀತ ಲಕ್ಷಣ; ಇನ್ನೊಂದು ಅರ್ಥವೆಂದರೆ ವಿಶೇಷ ಲಕ್ಷಣ. ಬಂಗಾಳೀ ಭಾಷೆಯಲ್ಲಿ ಈ ಎರಡನೆಯ ಅರ್ಥವೇ ಪ್ರಚಲಿತವಿದೆ. ಈ ಅವನು ವಿಪರೀತ ಲಕ್ಷಣಯುಕ್ತ ಸಾಕ್ಷೀ ಆಗಿದ್ದಾನೆ. ಅವನ ಈ ಸಾಕ್ಷಿತ್ವವು ಅವನನ್ನು ಯಾವುದೇ ಘಟನೆಗಳಲ್ಲಿ ತೊಡಗಿಸುವುದಿಲ್ಲ.

'ಕ್ಲೇಶ ಕರ್ಮ ವಿಪಾಕಾಶಾಯೈರ ಪರಾಮೃಷ್ಟಃ ಪುರುಷ ವಿಶೇಷ ಈಶ್ವರಃ' ಪರಮ ಪುರುಷ ಶಿವನು ಅಂದರೆ ಈ ಸದಾಶಿವನು ಜಾಗತಿಕ ಸಮಸ್ತ ಘಟನೆಗಳ ವಿಪರೀತ ಲಕ್ಷಣಯುಕ್ತ ಅರ್ಥಾತ್ ನಿರ್ಲಿಪ್ತ ಸಾಕ್ಷೀ ಆಗಿದ್ದಾನೆ. ನಿರಪೇಕ್ಷತೆಗಾಗಿಯೇ ಅವನ ಈ ಅದ್ಭುತ ಸಾಕ್ಷಿತ್ವದ ಪ್ರತೀಕರೂಪದಲ್ಲಿ 'ಮೂರನೆಯ ಕಣ್ಣು' ಶಬ್ದದ ಬಳಕೆ ಮಾಡುತ್ತಾರೆ.

ಪಾಟಣಾ, ೧೬–೭–೧೯೮೨

ಪ್ರವಚನ ೧೬

ಶಿವಬೋಧೆ-೨

ಶಿವೋಪದೇಶ–೬

"ಮನಸಾ ಕಲ್ಪಿತಾ ಮೂರ್ತಿಃ ನೃಣಾ ಚೇನ್ಮೋಕ್ಷಸಾಧನೀ
ಸ್ವಪ್ನಲಬ್ಧೇನ ರಾಜ್ಯೇನ ರಾಜಾನಾ ಮಾನವಾಸ್ತಥಾ.

(ಮಾನವ ಮನಸ್ಸಿನಿಂದ ಕಲ್ಪಿತವಾದ ಮೂರ್ತಿಯು ಅದೆಂತು ಮೋಕ್ಷಸಾಧನ ವಾಗಬಲ್ಲದು? ಸ್ವಪ್ನದಲ್ಲಿ ಪಡೆದ ರಾಜ್ಯದಿಂದ ಯಾವ ಕನಸುಗಿಯೂ ನಿಜವಾದ ರಾಜನಾಗಲಾರ.)

ಮನದ ಧರ್ಮವು ಮುಖ್ಯವಾಗಿ ಎರಡು ವಿಧವಾಗಿದೆ. ಸ್ಮರಿಸುವುದು ಮತ್ತು ಚಿಂತಿಸುವುದು. ಈ ಚಿಂತನವು ಸಹ ಅನೇಕ ಬಗೆಯದಾಗಿದೆ. ಮೊದಲನೆಯದೆಂದರೆ, ವರ್ತಮಾನದ ಪರಿಸರಕ್ಕೆ ಸಂಬಂಧಿಸಿದ ಚಿಂತನ. ಎರಡನೆಯದೆಂದರೆ, ಭೂತದೊಂದಿಗೆ ಸಂಬಂಧಿಸಿದ ಚಿಂತನ. ಇನ್ನು ಮೂರನೆಯದೆಂದರೆ, ಪರಿಸರವರ್ಜಿತ ಚಿಂತನ. ನಾಲ್ಕನೆಯದೆಂದರೆ, ಉದ್‌ಭಟ (fantastic) ಚಿಂತನ. ವರ್ತಮಾನ ಪರಿಸರಕ್ಕೆ ಸಂಬಂಧಿಸಿದ ಚಿಂತನವೆಂದರೆ, ಯಾವನೊಬ್ಬ ಮಾನವನು ಇಲ್ಲವೆ ಜೀವಿಯು, ವರ್ತ ಮಾನದಲ್ಲಿ ಯಾವ ಪರಿಸರದಲ್ಲಿ ಜೀವಿಸುತ್ತಿರುವನೋ, ಅಂದರೆ, ಮಣ್ಣು, ಸಸ್ಯ, ಗಿಡ-ಗಂಟಿ, ಕಲ್ಲು, ಶತ್ರು-ಮಿತ್ರರ ಸಂಬಂಧ ಹೊಂದಿದ ಚಿಂತನ. ಈಗ ಒಬ್ಬನು ಸ್ವಲ್ಪ ದೂರದಲ್ಲಿ ಹಾವೊಂದನ್ನು ನೋಡುತ್ತಾನೆ. ಆಗ ಅವನು ಇತರ ಎಲ್ಲ ಮಾತುಗಳನ್ನೂ ಬದಿಗಿಟ್ಟು ಕೇವಲ ಹಾವನ್ನು ಕುರಿತು ಮಾತ್ರ ಚಿಂತಿಸುತ್ತಾನೆ. ಒಂದು ಚಿಗರಿಯು ದೂರದಲ್ಲಿ ಹುಲಿಯನ್ನು ಕಾಣುತ್ತದೆ. ಅದು ಹುಲಿಯನ್ನು ಕುರಿತು ಚಿಂತಿಸತೊಡಗು ತ್ತದೆ. ಯಾವಳೊಬ್ಬ ಸ್ತ್ರೀ ಅಡುಗೆ ಮಾಡುವಾಗ, ಅಡುಗೆ ಮಾಡುವ ವಿಷಯದಲ್ಲಿ, ಅಂದರೆ ಉಪ್ಪು, ಎಣ್ಣೆ, ಖಾರ ಇತ್ಯಾದಿ ವಿಷಯ ಕುರಿತು ಚಿಂತಿಸುತ್ತಾಳೆ. ಪರೀಕ್ಷಾ ಲಯದಲ್ಲಿ ಕುಳಿತ ವಿದ್ಯಾರ್ಥಿಯು ಪ್ರಶ್ನೆ ಪತ್ರಿಕೆಯನ್ನು ಕುರಿತು ಮಾತ್ರ ಚಿಂತಿಸು ತ್ತಾನೆ. ಇದನ್ನೇ ವರ್ತಮಾನ–ಸಂಬಂಧೀ ಚಿಂತನವೆನ್ನುತ್ತಾರೆ.

ಇನ್ನು ಎರಡನೆಯನೆಂದರೆ, ಭೂತಕಾಲದ ಪರಿಸರಕ್ಕೆ ಸಂಬಂಧಿಸಿದ ಚಿಂತನವಾಗಿದೆ. ಯಾವನೋ ಒಬ್ಬ ರಾಜನ ಮಗನು ಒಂದು ದುರ್ಘಟನೆಯ ಜಾಲದಲ್ಲಿ ಬಿದ್ದು ಹಳಸಿದ ಅನ್ನ ಮತ್ತು ಹುಳಿಸುಟ್ಟ ಸಾರನ್ನು ಸೇವಿಸುತ್ತಾನೆ. ಆಗ ಅವನು ತನ್ನ ಅರಮನೆಯ ರಾಜಭೋಗ-ಪಕ್ವಾನ್ನಗಳ ಚಿಂತನೆ ಮಾಡುತ್ತಾನೆ. ಅವನು ತನ್ನ ಬಾಲ್ಯವನ್ನು ಯಾವ ಐಷಾರಾಮಿನಲ್ಲಿ ಕಳೆದಿದ್ದನೋ, ಆಯೆಲ್ಲ ಸುಖಪ್ರದ ಪ್ರಸಂಗಗಳು. ದುಃಖಿದ ಕಾಲದಲ್ಲಿ ನೆನಪಾಗುತ್ತವೆ. ಯಾವನೊಬ್ಬ ವಿದ್ಯಾರ್ಥಿಯು ಯಾವುದೋ ಕ್ಲಾಸಿನಲ್ಲಿ ಸರ್ವೋತ್ತಮ ವಿದ್ಯಾರ್ಥಿಯಾಗಿದ್ದರೆ, ಇಂದು ಪರೀಕ್ಷೆಯಲ್ಲಿ ವಿಫಲನಾದರೆ, ಆ ಭೂತಕಾಲದ ಸಫಲತೆಗಳನ್ನೇ ಚಿಂತಿಸತೊಡಗುತ್ತಾನೆ. ಇದೆಲ್ಲ ಭೂತಕಾಲಕ್ಕೆ ಸಂಬಂಧಿಸಿದ ಚಿಂತನೆಯಾಗಿದೆ.

ಮೂರನೆಯದೆಂದರೆ ಪರಿಸರ-ವರ್ಜಿತ ಚಿಂತನೆ. ಯಾವನೊಬ್ಬ ಮನುಷ್ಯನು ಯಾವಾಗ ತಾನಿಷ್ಟಪಡದ ಅವಸ್ಥೆಯಲ್ಲಿದ್ದರೆ, ದುಃಖ ಕಷ್ಟಗಳಲ್ಲಿ ದಿನಗಳೆಯುತ್ತಿದ್ದರೆ, ಆಗ ಅವನ ಮನದ ಆಕಾಶದಲ್ಲಿ ಕಲ್ಪನೆಯಬುಗ್ಗೆ ಚಿಮ್ಮಿ, ಅವನು ಬಣ್ಣಬಣ್ಣದ ಸ್ವಪ್ನಗಳನ್ನು ನೋಡತೊಡಗುತ್ತಾನೆ. ಸೌಂದರ್ಯದ ಛಾಯೆಯಿಂದ ಅವನ ಕಲ್ಪನಾ ಲೋಕವು ಉಲ್ಲಸಿತವಾಗುತ್ತದೆ.

ರಂಗೀನ ನಿಮೇಷ ಧೂಲಾರ ದುಲಾಲ.
ಪರಾನೇ ಛಡಾಯ ಆಬೀರ ಗುಲಾಲ.
ಓಡನಾ ಓಡಾಯ ಶ್ರಾವಣೀರ ಮೇಘೇ, ಸಂಚರಮಾನ ನೃತ್ಯ.
ಹಠಾತ್ ಆಲೀರ ಝುಲಕಾನಿ ಲೇಗೆ ಝುಲಮಲ ಕರೇ ಚಿತ್ತ.

* * *

ಧೂಳಿಯ ಕಂದರ ಬಣ್ಣದ ನಿಮಿಷ
ಸುಗಂಧ ಗುಲಾಲ ಉಗ್ಗಿದ ಹರುಷ.
ಗಗನಕೆ ಹಾರಿವೆ ಶ್ರಾವಣ ಮೇಘ, ನಡೆದಿದೆ ಸಂಚರ ಮಾನದ ಆಟ.
ಒಮ್ಮೆಗೆ ಮಿನುಗುವ ಬೆಳಕಿನ ದೃಶ್ಯ, ಕಾಣುವ ಮನಕದು
ಝಗಝಗಿಪಾಟ.

ಇನ್ನೂ ಒಂದು ಪ್ರಕಾರದ ಚಿಂತನವಿದೆ. ಅದಕ್ಕೆ ಉದ್ಭಟಚಿಂತನವೆನ್ನಬಲ್ಲೆವು. ಯಾವುದೊಂದು ಚಿಂತನದ ಉಪಕರಣವು ವಾಸ್ತವಿಕ ಜಗತ್ತಿನೊಂದಿಗೆ ಬೇರ್ಪಟ್ಟಿಲ್ಲ. ಅರ್ಥಾತ್ ಮಾನವನು ತನ್ನ ಕಲ್ಪನೆಯಲ್ಲಿ ಏನೊಂದಿನಿತು ನೋಡುವನೋ, ಇಲ್ಲವೆ ಅವನು ಏನನ್ನು ಯೋಚಿಸುವನೋ, ಅವನಿಗಾಗಿ ಅದೆಲ್ಲವೂ ಬಾಹ್ಯ ಜಗತ್ತಿನಿಂದ ಸಾಮಗ್ರಿಯನ್ನು ಸಂಗ್ರಹಿಸುತ್ತದೆ. ಅರ್ಥಾತ್ ಅವನು ಯಾವ ವಿಷಯಗಳನ್ನು ಎಂದೂ ನೋಡಿಲ್ಲವೋ, ಇಲ್ಲವೆ ಬೇರಾವುದೇ ಇಂದ್ರಿಯ ಮಾಧ್ಯಮದಿಂದ ಗ್ರಹಿಸಲ ಸಾಧ್ಯವೋ, ಆ ವಸ್ತುವಿನ ವಿಷಯದಲ್ಲಿ ಅವನು ಚಿಂತನ ಮಾಡಲಾರನು. ಇದುವೇ ಅಣುಮನದ ಎಲ್ಲಕ್ಕಿಂತ ದೊಡ್ಡ ಅಸಂಪೂರ್ಣತೆಯಾಗಿದೆ.

ಈ ಅಣುಮಾನಸದೊಂದಿಗೆ ಭೂಮಾಮಾನಸದ ಅನೇಕ ಗುಣಗತ ಪಾರ್ಥಕ್ಯವುಂಟು. ಇವುಗಳಲ್ಲಿ ಅತಿ ದೊಡ್ಡ ಪಾರ್ಥಕ್ಯವೆಂದರೆ, ಭೂಮಾ ಮಾನಸವ ಎಲ್ಲ

ಚಿಂತಾಧಾರೆಗಳೂ ಮೂಲಕ್ಕೆ ಸಂಬಂಧಿಸಿವೆ. ಮತ್ತು ಪ್ರತಿಯೊಂದು ಚಿಂತನಧಾರೆಯೂ ನವೀನತಮವಾಗಿದೆ. ಅದು ಇಂದ್ರಿಯ ಮಾಧ್ಯಮದಿಂದ ಹೊರಗಿನಿಂದ ಏನನ್ನೂ ಗ್ರಹಿಸಬೇಕಾಗಿಲ್ಲ. ಅದರ ಚಿಂತನಧಾರೆಯು ಪ್ರತಿಯೊಂದು ಕ್ಷುದ್ರತಮ ಭಗ್ನಾಂಶವು ಸಹ, ಅತಿ ಹೊಸ ಮತ್ತು ಅಭಿನವವಾಗಿದೆ. (ಭಾವಾತೀತ ಅಭಿನವ ದೇಹಿ ಪದಮ್)

ಈ ಪೃಥ್ವಿಯ ಮೇಲೆ ಯಾರಿಬ್ಬರ ಮುಖ ಚಿಹರೆಗಳು ಏಕವಾಗಿಲ್ಲ. ಯಾವುದೇ ಎರಡು ಸತ್ತೆಗಳು ಯಾವುದೊಂದು ವಿಷಯದಲ್ಲಿ ಪೂರ್ಣ ರೀತಿಯಿಂದ ಒಂದೇ ತೆರನಾಗಿಲ್ಲ. ಭೂಮಾ ಮಾನಸದ ಈ ಸರ್ವಮೌಲಿಕತ್ವದ ಕಾರಣದಿಂದಾಗಿಯೇ ನಾವು ಈ ಪೃಥ್ವಿಯಲ್ಲಿ ಪೂರ್ಣವಾಗಿ ಒಂದೇ ತೆರನಾದ ವಸ್ತುವನ್ನು ಪಡೆಯಲಾರೆವು. ನಮಗೆ ಇಂಥ ಏನಾದರೂ ದೊರೆತರೆ, ನಾವು ಅಲ್ಲಿ ಹೋಲಿಕೆ ಇದೆಯೆಂದು ಹೇಳಬಲ್ಲೆವು. ಯಾವಾಗ ಮಾನವನು ಚಿಂತನ ಕಾಲದಲ್ಲಿ, ಇಂದ್ರಿಯ ಗ್ರಹೀತ ಅಲ್ಪಾಂಶವನ್ನಾಗಲಿ ಇಲ್ಲವೆ ಪೂರ್ಣಾಂಶವನ್ನಾಗಲಿ, ತನ್ನವೇ ಆದ ಇಂದ್ರಿಯ ಮೂಲಕ ಗ್ರಹಿಸಿದ ಬೇರೊಂದರ ಕ್ಷುದ್ರಾಂಶ ಇಲ್ಲವೆ ಪೂರ್ಣಾಂಶದೊಂದಿಗೆ ಮಾನಸಿಕವಾಗಿ ಹೊಂದಿಸಿ ನೋಡಿದಾಗ, ಮತ್ತು ಬಳಿಕ, ಮಗುದೊಂದು ಸತ್ತೆಯ ಅಲ್ಪಾಂಶ ಇಲ್ಲವೆ ಪೂರ್ಣಾಂಶ ದೊಂದಿಗೆ ಹೊಂದಿಸಿ ನೋಡಿದಾಗ ಮತ್ತು ಈ ಎಲ್ಲವುಗಳನ್ನೂ ಸೇರಿಸಿ ಹೊಸದೊಂದು ವಸ್ತುವಿನ ಕಲ್ಪನೆ ಮಾಡಿದಾಗ, ಅದಕ್ಕೇ ಉದ್ಭಟ ಚಿಂತನೆಯೆನ್ನುತ್ತಾರೆ.

ಹಾಸ ಆರ, ಸಜಾರೂ ವ್ಯಾಕರಣ ಮಾನಿನಾ
ಹವಿ ಗೈಲೋ ಹಾಸ ಜಾರೂ ಕೇಮನೇ ತಾ ಜಾನಿನಾ,

* * *

ಹಂಸ ಸಜಾರೂ ವ್ಯಾಕರಣವೇನೊ ತಿಳಿಯೆ.
ಹಂಸ ಜಾರೂ ಆದುದೆಂತೋ? ನಾನು ಅರಿಯೆ.

ಈಗ ಒಬ್ಬನು ಚಿತ್ರ ರೇಖಿಸಬೇಕಾದರೆ, ಈ ವರ್ತಮಾನದ ಪರಿಸರ, ಅಥವಾ ಭೂತದ ಪರಿಸರ ಅಥವಾ ಪರಿಸರವರ್ಜಿತ ಇಲ್ಲವೆ ಉದ್ಭಟ ಚಿಂತನಗಳ ಮೂಲಕವೇ ತನ್ನ ಕಲ್ಪನೆಯ ಸಾಮಗ್ರಿಯನ್ನು ಗ್ರಹಿಸುತ್ತಾನೆ.

ಮಾನವನು ಹೆಚ್ಚಾಗಿ, ಭಯದ ಪೆಟ್ಟಿನಿಂದ, ಕೆಲವೊಮ್ಮೆ ಸುಖಪ್ರಾಪ್ತಿಯ ಆಶೆಯಲ್ಲಿ, ಮತ್ತು ಬಹಳಷ್ಟು ಸಲ, ಪಾಪದಿಂದ ಪರಿತ್ರಾಣ ಪಡೆಯಲೋಸುಗ, ಇಲ್ಲವೆ ರೋಗ ಮುಕ್ತನಾಗಲು, ಅನೇಕ ಪ್ರಕಾರದ ಪರಿಸರವರ್ಜಿತ ಮತ್ತು ಉದ್ಭಟ ಚಿಂತನೆಯನ್ನು ಆಶ್ರಯಿಸುತ್ತಾನೆ. ಹುಲಿಯ ಭೀತಿಯಿಂದ ಅವನು ಹುಲಿಯನ್ನು ದೇವತೆಯನ್ನಾಗಿ ಕಲ್ಪಿಸುತ್ತಾನೆ. ಮೊಸಳೆಯ ಭೀತಿಯಿಂದ ಅವನು ಕೂರ್ಮ-ದೇವತೆಯನ್ನು ಕಲ್ಪಿಸಿದನು. ಅರಣ್ಯದ ಎಪತ್ತಿನಿಂದ ಪಾರಾಗಲು ಅವನು ವನದೇವಿಯನ್ನು ಕಲ್ಪಿಸಿದನು. ಉಷ್ಣ ಮತ್ತು ಆರ್ದ್ರ ಪ್ರದೇಶಗಳಲ್ಲಿ ಹಾವುಗಳ ಸಂಖ್ಯೆಯು ಬಹಳ ಹೆಚ್ಚಾಗಿತ್ತು. ಅವುಗಳ ಭಯದಿಂದ ಮುಕ್ತನಾಗಲು ಅವನು ಸರ್ಪದೇವನ ಕಲ್ಪನೆ ಮಾಡಿದನು. ನಾನೀಗಾಗಲೇ ಹೇಳಿದಂತೆ, ಈ ತರದ ಕಲ್ಪನೆಗಳನ್ನು ಅವನು ಭಯದ ವೃತ್ತಿಯಿಂದ ಆಘಾತ ಹೊಂದಿ ಮಾಡುತ್ತಾನೆ.

ಲೋಭಿ ವ್ಯಕ್ತಿಗಳಾದವರು, ಧನ ಪಡೆಯುವ ಇಚ್ಛೆಯೊಂದಿಗೆ, ಅರ್ಥಸಂಗ್ರಹದ ಲೋಭದಿಂದಾಗಿ, ಧನದೇವಿಯ ಕಲ್ಪನೆ ಮಾಡಿದರು. ಯಾವ ವಿದ್ಯಾರ್ಥಿಗಳು,

ಪರಿಶ್ರಮ ಮೂಲಕ ಓದು–ಬರಹ ಮಾಡುವುದಿಲ್ಲವೋ, ಅವನು ಪರೀಕ್ಷೆಯಲ್ಲಿ ಸಫಲ ರಾಗಬಯಸುತ್ತಾರೆ. ಆ ಜನರು ಶ್ರಮವಿಲ್ಲದೆ ತಮ್ಮ ಗುರಿ ತಲುಪುವುದಕ್ಕೋಸುಗ ವಿದ್ಯಾದೇವಿಯ ಕಲ್ಪನೆ ಮಾಡುತ್ತಾರೆ. ಮಾನವನು ವಿಭಿನ್ನ ಕಲ್ಪಿತ ದೇವ-ದೇವಿಯ ರಿಂದ ಮುಕ್ತಿ ದೊರೆಯುವುದೆಂಬ ಆಶೆ ಇರಿಸಿಕೊಳ್ಳುತ್ತಾನೆ. ಏಕೆಂದರೆ, ಮುಕ್ತಿ ಮೋಕ್ಷಗಳಿಗೋಸ್ಕರ, ಮಾನವನು ವ್ಯಕ್ತಿಗತ ಪ್ರಯತ್ನ ಮಾಡುವುದು ತುಂಬಾ ಅಗತ್ಯ ವಾಗಿದೆ. ಸರಳತೆ, ನಿಷ್ಠೆ ಮತ್ತು ಏಕಾಂತಕತೆಯು ಅಗತ್ಯವಾಗಿದೆ. ಮತ್ತು ಹೀಗೆ ಮಾಡದಿರುವುದರಿಂದ ಮಾನವನು ಆ ದೇವಿ–ದೇವತೆಯರಿಂದ ಮೂರು–ನಾಲ್ಕು ಮಂತ್ರ ಪಾಠ ಮಾಡಿ, ಮೂರು–ನಾಲ್ಕು ರೀತಿಯಿಂದ ಪೂಜೆ-ಅರ್ಚನೆ ಮಾಡಿ, ಮುಕ್ತಿ ಮೋಕ್ಷ ಪಡೆಯುವ ಆಶೆ ಇರಿಸುತ್ತಾನೆ.

ಮಾನವನ ಕಲ್ಪನೆಯು ಬಾಹ್ಯ ಪಾಂಚಭೌತಿಕ ಜಗತ್ತಿನ ಮೂಲಕ ದೊರಕಿದ ಉಪಾದಾನಗಳ ಪ್ರತಿಫಲವಾಗಿದೆ. ಈ ಪಾಂಚಭೌತಿಕ ಜಗತ್ತಿನ ಹೊರಗೆ ಯಾವ ವಸ್ತುಗಳು ಇರುವುದಿಲ್ಲವೋ, ಅವನು ಅವುಗಳ ಚಿಂತನೆಯನ್ನು ಮಾಡಲಾರನು. ಇದಕ್ಕೆ ಮೌಲಿಕ ಚಿಂತನೆ ಎಂದು ಕರೆಯುತ್ತಾರೆ. ಮೌಲಿಕ ಚಿಂತನೆಯನ್ನು ಕೇವಲ ವಿರಾಟ ಪುರುಷನು ಮಾತ್ರ ಮಾಡಬಲ್ಲನು. ಈ ಕಾರಣದಿಂದ, ಮಾನವನು ಯಾವ ಮೂರ್ತಿಗಳ ನಿರ್ಮಾಣವನ್ನು ತನ್ನ ಕಲ್ಪನೆಯಿಂದ ಮಾಡಿದನೋ, ಅದನ್ನು ಭಯದ ಕಾರಣದಿಂದ ಮಾಡಿರಲಿ, ಇಲ್ಲವೆ ಲೋಭದ ಕಾರಣದಿಂದ ಮಾಡಿರಲಿ–ಅದಾವುದೂ ಮೌಲಿಕವಲ್ಲ. ಅವುಗಳಲ್ಲಿಂದ ಯಾವುದೂ ಸಹ ತಾನ್ಮಾತ್ರಿಕ ಅಸ್ತಿತ್ವವಂತೂ ಅಲ್ಲ. ಇದರ ಪಾಂಚಭೌತಿಕ ಅಸ್ತಿತ್ವವೂ ಇರದು. ಇವುಗಳಲ್ಲಿಯ ಯಾವುದೊಂದು ಪರಮ ಪುರುಷನಿಂದ ಕಲ್ಪಿತವಾಗಿದ್ದರೆ, ಅದರ ಪಾಂಚಭೌತಿಕ ಅಸ್ತಿತ್ವವೂ ಆಗತ್ಯವಾಗಿರು ತ್ತದೆ. ಆ ಸ್ಥಿತಿಯಲ್ಲಿಯೂ ಸಹ, ಅದರ ಪರಮಾರ್ಥಿಕ ಅಸ್ತಿತ್ವವಿರದು. ಏಕೆಂದರೆ ಪರಮಾರ್ಥಿಕ ಅಸ್ತಿತ್ವವು ಕೇವಲ ಆ ವಿರಾಟ ಪುರುಷನದಷ್ಟೇ ಆಗಿರಬಲ್ಲದು. ಇತರ ಎಲ್ಲವೂ ಅವನ ಪ್ರತಿಭೂ ಮಾತ್ರ ಆಗಿದೆ. ಇನ್ನು ಕೆಲವು ಪ್ರತಿಭೂ (ನಕಲ) ವಿನ ಪ್ರತಿಭೂ ಆಗಿವೆ. ಆದ್ದರಿಂದ ಈ ಶ್ಲೋಕ ಪ್ರಾರಂಭದಲ್ಲಿಯೇ 'ಮನಸಾ ಕಲ್ಪಿತಾ ಮೂರ್ತಿಃ' ಎಂದು ಹೇಳಿದ್ದಾರೆ.

ಮಾನವನು ಹಗುರಾಗಿ ಪಾರಾಗಲು ಬಣ್ಣ ಬಣ್ಣದ ಜಾಲವನ್ನು ಹಬ್ಬಿಸುತ್ತಿರುವನೆಂದು ನಾನು ಮೊದಲೇ ಹೇಳಿಬಿಟ್ಟಿದ್ದೇನೆ. ಮತ್ತು ಈ ರೀತಿ ಅವನು ಈ ಧರೆಯ ಮಣ್ಣಿನ ಅನುಭವದಿಂದ ದೂರ ಬಹು ದೂರ ಹೋಗುತ್ತಾನೆ. ಮತ್ತು ನೀಲಗಗನದಲ್ಲಿ ತನ್ನ ಗರಿಗೆದರಿ ಹಾರಬಯಸುತ್ತಾನೆ. ಮತ್ತು ಕೊನೆಗೊಂದು ದಿನ ತಾನು ಈ ಧೂಳು ಮುತ್ತಿ ಧರೆಗೇ ಮರಳುವೆನೆಂಬುದನ್ನು ಅವನು ಮರೆತುಬಿಡು ತ್ತಾನೆ. ಮಾನವನು ಈ ಲೌಕಿಕ ಜಗತ್ತಿನಲ್ಲಿ ಏನಾದರೂ ಸ್ವಲ್ಪ ಪಡೆಯುವದಕ್ಕೋಸುಗ ಮುಕ್ತಿ ಮೋಕ್ಷಗಳನ್ನೇ ಬಯಸುತ್ತಾನೆ. ಸಾಮಾನ್ಯವಾಗಿ ಯಾವುದೊಂದು ಕಾರ್ಯವನ್ನು ಮಾಡಿಸಿಕೊಳ್ಳಬೇಕಾದರೆ, ಮಾನವನು ಇತರರೆದುರು ಕೈಕಾಲು ಜೋಡಿಸಿ ನಿಲ್ಲಬೇಕಾಗುತ್ತದೆ. ಅವನು ಮುಕ್ತಿ ಮೋಕ್ಷಗಳನ್ನು ಪಡೆಯಲಿಕ್ಕೋಸುಗವೇ ಅದೇ ರೀತಿಯ ಪ್ರಯತ್ನದಲ್ಲಿ ನಿರತನಾಗುತ್ತಾನೆ. ಆದರೆ ಮುಕ್ತಿ ಮೋಕ್ಷಗಳು ತೀರ ಬೇರೆ

ಪ್ರಕಾರದ ವಸ್ತುಗಳೆಂಬುದನ್ನು ಅವನು ಅರಿಯದಾಗುತ್ತಾನೆ.

ಸಮಸ್ತ ಜೀವಿಗಳಿಗೂ ಮನವಿದೆ. ಕೆಲವರ ಮನವು ಸುಪ್ತವಾಗಿದೆ. ಕೆಲವರ ಮನವು ಅಸ್ಫುಟವಾಗಿದೆ. ಬೇರೆ ಹಲವರ ಮನವು ಸ್ಫುಟತರವಾಗಿದೆ. ಮತ್ತೆ ಹಲವರ ಮನವು ಅತಿಸ್ಫುಟವಾಗಿದೆ. ಮಾನವನು ಈ ಅತಿಸ್ಫುಟ ಮಾನಸಿಕತೆಯ ಅಧಿಕಾರಿ ಯಾಗಿದ್ದಾನೆ. ಮನವು ಎಷ್ಟೇ ಸ್ಫುಟವಾಗಿರಲಿ; ಇಲ್ಲವೆ ಅಭಿವ್ಯಾಪ್ತವಾಗಿರಲಿ, ಅದು ಅಣುಮಾನಸವೇ ಆಗಿದೆಯಷ್ಟೇ. ಪರಮಪುರುಷನ ಅಭಿವ್ಯಕ್ತ ಮನವು ಭೂಮಾ ಮನಸ್ಸಾಗಿದೆ.

ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ
ಬಂಧಸ್ತು ವಿಷಯಾಸಂಗೀ ಮುಕ್ತೋ ನಿರ್ವಿಷಯಂ ತಥಾ
ಮನಃ ಕರೋತಿ ಕರ್ಮಾಣಿ ಮನಃ ಲಿಪ್ಯತೇ ಪಾತಕೈಃ
ಮನಶ್ಚ ತನ್ಮನಾ ಭೂತ್ವಾ ಪುಣ್ಯೈಃ ನ ಚ ಪಾತಕೈಃ".

(ಮನವೇ ಮಾನವನ ಬಂಧನಕ್ಕೂ ಮತ್ತು ಮೋಕ್ಷಕ್ಕೂ ಕಾರಣವಾಗಿದೆ, ಬಂಧನವೆಂದರೆ, ವಿಷಯಾಸಕ್ತಿ, ಮತ್ತು ಮೋಕ್ಷವೆಂದರೆ, ಆಸಕ್ತಿಯಿಂದ ಸ್ವತಂತ್ರ ನಾಗಿರುವುದು.

* * *

ಮನವೇ ಕರ್ಮ ಮಾಡುತ್ತದೆ; ಮನವೇ ಪಾಪದಿಂದ ಲೇಪಿತವಾಗುತ್ತದೆ. ಆ ಪರಮಾತ್ಮನಲ್ಲಿ ಮನವು ಮಗ್ನವಾಗಿ ಬಿಟ್ಟರೆ, ಆಗ ಪಾಪವೂ ಇಲ್ಲ, ಪುಣ್ಯವೂ ಇಲ್ಲ.)

ಮನವೇ ಸುಖದುಃಖಗಳ ಭಾರವನ್ನು ಹೊರುತ್ತದೆ. ದುಃಖದ ಕಪ್ಪು ಪರದೆಯು ಈ ಮನದ ಮೇಲೆ ಬೀಳುತ್ತದೆ. ಮತ್ತು ಆ ಕಪ್ಪು ಪರದೆಯನ್ನು ಭೇದಿಸಿ, ಕ್ಷಣಿಕ ಪ್ರಕಾಶವೂ ಸಹ ಈ ಮನದ ಮೇಲೆಯೇ ಬೀಳುತ್ತದೆ. ಹೀಗೆ ಮನದ ಈ ಕ್ಲೇಶ, ವ್ಯಥೆ, ವೇದನೆ, ವಿಕಾರ, ಅನುಭೂತಿಗಳೆಲ್ಲ, ಅಣುಮಾನಸವಿರುವ ವರೆಗೆ ಅರ್ಥಾತ್ ಅದರ ಹೊರಗಿನ ಸತ್ತೆಗಳಿರುವ ವರೆಗೆ ಆಗುತ್ತವೆ. ಅದೇ ಪ್ರಕಾರ ಆ ಸತ್ತೆಯೊಂದಿಗೆ, ಬೇರೆ ಪ್ರಕಾರದ ಚಿಂತನೆಯ, ಸಂಘಾತ ಮತ್ತು ಬೇರೆ ಪ್ರಕಾರದ ಜಡ–ಜಾಗತಿಕ ಸಂಘಾತಗಳಿಂದ ಈ ಪ್ರಕಾರದ ಸುಖ ಮತ್ತು ದುಃಖ ರೂಪದ ಬುದ್ಬುದಗಳ ಜನನ ಮತ್ತು ವಿಲಯನಗಳಾಗುತ್ತವೆ. ಮಾನವನು ತನ್ನ ಸಾಧನೆಯ ಮೂಲಕ ತನ್ನ ಅಣುಮನವನ್ನು ಪರಮಪುರುಷನ ಭೂಮಾ ಮನದೊಂದಿಗೆ ಸೇರಿಸಿ, ಏಕಾಕಾರಗೊಳಿಸುತ್ತಾನೆ. ಆಗ ಅವನ ಮನವೂ ಸಹ ಭೂಮಾ ಮನವಾಗುತ್ತದೆ. ಅವನ 'ನಾನು–ತನ'ವು 'ಭೂಮಾ–ನಾನು' ತನದೊಂದಿಗೆ ಸೇರಿಹೋಗುತ್ತದೆ. ಆಗ ಅವನ ಹೊರಗೆ ಬೇರಾವ ವಸ್ತುಗಳೂ ಇರಲಾರವು. ಯಾವುದೇ ಭಿನ್ನ ಮಾನಸಿಕತೆ ಯೊಂದಿಗೆ ಸಂಘಾತವಾಗಲಿ ಇಲ್ಲವೆ ಯಾವುದೇ ಜಡಜಾಗತಿಕ ವಸ್ತುವಿನೊಂದಿಗೆ ಸಂಘಾತವಾಗಲಿ ಇರಲಾರದು. ಆ ಕಾಲಕ್ಕೆ ಎಲ್ಲ ಸತ್ತೆಯು, ಎಲ್ಲ ಭಾವಸೃಷ್ಟಿಯು, ತನ್ನ ಮಾನಸಿಕತೆಯಲ್ಲಿಯೇ ಹುಟ್ಟುತ್ತವೆ. ಈ ಅವಸ್ಥೆಗೆ ಮುಕ್ತಿಯ ಅವಸ್ಥೆ

ಎನ್ನುತ್ತಾರೆ.

ಪ್ರಪಂಚದ ಸುಖ ಇಲ್ಲವೆ ದುಃಖದಿಂದ ಬಹು ಮೇಲೆ ಇರುವ ಮುಕ್ತಿಯು ಆ ಅವಸ್ಥೆಯೇ ಲೀಲಾನಂದದ ಅವಸ್ಥೆಯಾಗಿದೆ.

ಜೀವದ ಯಾವ ಅಣುಮಾನಸವಿದೆಯೋ, ಆ ಅಣುಮಾನಸದ ಸಾಕ್ಷಿತ್ವದಲ್ಲಿಯೇ ಜೀವ ಚೈತನ್ಯವಿದೆ. ಈ ಜೀವ ಚೈತನ್ಯಕ್ಕೆ ಚಿತಿಶಕ್ತಿಯೆನ್ನುವುದಿಲ್ಲ. ಏಕೆಂದರೆ, ಈ ಅಣುಮಾನಸವು ಅಣುಮನದ ಮೇಲೆ ಚಿತಿಶಕ್ತಿಯ ಪ್ರತಿಫಲನ ಮಾತ್ರವಾಗಿದೆ. ಆಧ್ಯಾತ್ಮಿಕ ಸಾಧಕರು ಈ ಚಿತಿಶಕ್ತಿಗೆ ಯಾವಾಗ ತಮ್ಮನ್ನು ಪೂರ್ಣಾಹುತಿ ನೀಡುವರೋ, ಆಗ ತಾಂತ್ರಿಕ ಅಭಿಷೇಕ ಕ್ರಿಯೆಯ ಮೂಲಕ ಚಟುವಟಿಕೆ ಗತಿಯಿಂದ ತನ್ನ ಅಣುಚೈತನ್ಯವನ್ನು ಪರಮಪುರುಷನ ಭೂಮಾ ಚೈತನ್ಯದಲ್ಲಿ ಅರ್ಥಾತ್ ಚಿತಿಶಕ್ತಿಯಲ್ಲಿ ಸೇರಿಸುತ್ತಾನೆ. ಆಗ ಇರಬಹುದಾದ ಸಂಕಲ್ಪ–ವಿಕಲ್ಪ ರಹಿತವಾದ ಅವಸ್ಥೆಗೆ ಮೋಕ್ಷದ ಅವಸ್ಥೆ ಎನ್ನುತ್ತಾರೆ.

ಮಾನವನ ಅಣುಮನವು ಅವನ ವರ್ತಮಾನ ಪರಿಸರಕ್ಕೆ ಸಂಬಂಧಿಸಿದ, ಇಲ್ಲವೆ ಭೂತ ಪರಿಸರಕ್ಕೆ ಸಂಬಂಧಿಸಿದ, ಇಲ್ಲವೆ ಪರಿಸರ ವರ್ಜಿತವಾದ ಇಲ್ಲವೆ ಉದ್ಭಟ ಭಾವಾತ್ಮಕ ಚಿಂತನದಿಂದ ಯಾವ ಸಮಸ್ತ ಮೂರ್ತಿಗಳ ನಿರ್ಮಾಣವಾಗಿದೆಯೋ, ಅವೆಲ್ಲವುಗಳ ಚಲನವಲನ, ಗಾಡಿ–ಮೋಡಿಗಳಲ್ಲಿ ಅಣುಮಾನಸದ ಪರಿಧಿಯ ಎಲ್ಲೆಯಲ್ಲಿಯೇ ನಡೆದಿರುತ್ತದೆ. ಅರ್ಥಾತ್ ಅಣುಮಾನಸದ ಇಚ್ಛೆಯಲ್ಲಿಯೇ ಅವುಗಳ ಅಸ್ತಿತ್ವವಿನೆ. ಮತ್ತು ಅಣುಮಾನಸಕ್ಕೆ ಬೇಡವಾದಲ್ಲಿ ಅವು ನಷ್ಟ ಹೊಂದುತ್ತವೆ. ಅರ್ಥಾತ್ ಈಯೆಲ್ಲ ಮೂರ್ತಿಗಳು ತಮ್ಮ ಅಸ್ತಿತ್ವಕ್ಕಾಗಿ ಸಂಪೂರ್ಣ ಮಾನವನ ಅಣು ಮಾನಸವನ್ನೇ ಅವಲಂಬಿಸಿವೆ. ಅವೆಲ್ಲವೂ ಮಾನವನ ಮೂಲಕ ಸೃಷ್ಟವಾಗಿವೆ, ಮಾನವನಲ್ಲಿಯೇ ಸ್ಥಿತವಾಗಿವೆ. ಮತ್ತು ತಮ್ಮ ಚರಮಾವಸ್ಥೆಯಲ್ಲಿ ಮಾನವನಲ್ಲಿಯೇ ಸಂಲೀನವಾಗಿವೆ. ಈ ಕಾರಣದಿಂದ, ಈ ಮಾನವನಿಗೇನು ಕ್ಷುದ್ರ ಮಾನಸಿಕ ಬಂಧನದಿಂದ ಮುಕ್ತಗೊಳಿಸಿ, ಭೂಮಾ ಮಾನಸದಲ್ಲಿ ಪ್ರತಿಷ್ಠಿಸಿ, ಮುಕ್ತಿ ನೀಡಬಹುದೇ? ಮಾನವನನ್ನು ಸಂಕಲ್ಪ-ವಿಕಲ್ಪಗಳಿಂದ ಮುಕ್ತಗೊಳಿಸಿ, ಅಣುಚೈತನ್ಯವನ್ನು ಚಿತಿಶಕ್ತಿಯಲ್ಲಿ ಸಂಲೀನಗೊಳಿಸಬೇಕೇ?

ಓರ್ವ ವ್ಯಕ್ತಿಯು ತನ್ನ ಸ್ವಪ್ನದಲ್ಲಿ ಒಂದು ರಾಜ್ಯವನ್ನು ನಿರ್ಮಿಸಿದನೆಂದು ಹೇಳಲಾಗಿದೆ. ಸ್ವಪ್ನವೆಂದರೇನು? ಸ್ವಪ್ನವೆಂದರೆ ನಿದ್ರೆಯಲ್ಲಿಯೇ ಚಿಂತನ ಮಾಡುವುದು. ಈ ಚಿಂತನವೂ ಸಹ, ಭೂತ ಪರಿಸರದ ಚಿಂತನ, ವರ್ತಮಾನ ಪರಿಸರದ ಚಿಂತನ, ಪರಿಸರ ವರ್ಜಿತದ ಚಿಂತನ ಮತ್ತು ಉದ್ಭಟ ಕಲ್ಪನೆಯನ್ನು ಆಶ್ರಯಿಸಿದ ಚಿಂತನ (fantastic thoughts) ಎಂದು ನಾಲ್ಕು ಪ್ರಕಾರದವಾಗಿರಬಲ್ಲವು, ಆದರೆ ಸುಪ್ತಾವಸ್ಥೆಯಲ್ಲಿ ವಾಸ್ತವದ ಕಠೋರ ಸಂಸ್ಪರ್ಶವಿರದಿರುವ ಕಾರಣ, ಆ ಕಲ್ಪನೆಗಳು ಸತ್ಯವೆನಿಸುತ್ತವೆ. ಆದ್ದರಿಂದ ಜಾಗ್ರತಿ ಅವಸ್ಥೆಯಲ್ಲಿ, ಆ ಕಲ್ಪನೆಗಳಿಂದ ಮಾನವನಿಗೆ ಬಹಳಷ್ಟು ಭಯ, ಕ್ರೋಧ ಇಲ್ಲವೆ ಅನ್ಯವೃತ್ತಿಗಳ ಮೂಲಕ ಏಟು ಬೀಳುವುದಿಲ್ಲ. ಆದರೆ, ಸ್ವಪ್ನದ ಅವಸ್ಥೆಯಲ್ಲಿ ಅರ್ಥಾತ್ ನಿದ್ರಿತ ಅವಸ್ಥೆಯಲ್ಲಿ ಕಲ್ಪನೆಗಳಲ್ಲಿ ಅವನು ಬಹುಮಟ್ಟಿಗೆ ಹೊಡೆತದ ಅನುಭವ ಪಡೆಯುತ್ತಾನೆ. ಇದರ ಕಾರಣವನ್ನು ನಾನು ಈ ಮೊದಲೇ ಹೇಳಿದ್ದೇನೆ. ಏನೆಂದರೆ, ಜಾಗೃತ ಅವಸ್ಥೆಯಲ್ಲಿ ಕಲ್ಪನೆಯನ್ನು ಮಾಡುತ್ತಿರುತ್ತಾನೆ. ಆದರೆ ನಿದ್ರಿತ ಅವಸ್ಥೆಯಲ್ಲಿ ಕಲ್ಪನೆಯು ಕಾಲಕ್ಕೆ ತಾನು ಕೇವಲ ಕಲ್ಪಿಸುತ್ತಿರುವೆನೆಂಬ ಅರಿವು ಅವನಿಗಿರುವುದಿಲ್ಲ. ಈ ಕಾರಣದಿಂದ ಸ್ವಲ್ಪ ಕಾಲದವರೆಗೆ, ಆ ಕಲ್ಪನೆಯ ಸ್ವಪ್ನವು ಕಠೋರ ವಾಸ್ತವಿಕತೆಯ ರೂಪದಲ್ಲಿ ಎದುರಾಗುತ್ತದೆ.

ಜಾಗೃತ ಅವಸ್ಥೆಯಲ್ಲಿ ಯಾವ ಕಾರಣದಿಂದ, ಹೆಜ್ಜೆ ಹೆಜ್ಜೆಗೂ, ವಾಸ್ತವಿಕತೆಯ ಪ್ರತಿರೋಧ ಉಂಟಾಗುವುದೋ, ಆ ಕಾರಣದಿಂದ ಕಲ್ಪನೆಯಲ್ಲಿ ಬಹಳ ಹೆಚ್ಚು ದ್ರುತಿಯಾಗಲಿ, ಗತಿಯಾಗಲಿ ಇರಲಾರದು. ಆದರೆ ನಿದ್ರಿತ ಅವಸ್ಥೆಯಲ್ಲಾದರೋ, ವಾಸ್ತವಿಕತೆಯ ಯಾವುದೇ ಪ್ರತಿರೋಧವಿಲ್ಲದ ಕಾರಣ, ಕಲ್ಪನೆಯಲ್ಲಿ ಹೆಚ್ಚಿನ ಪರಿಮಾಣದಲ್ಲಿ ಗತಿಯೂ ಉಂಟು; ದ್ರುತಿಯೂ ಉಂಟು. ಒಂದೇ ಕ್ಷಣದಲ್ಲಿ ಮಾನವನು ವಿರಾಟ ಮಹಾಭಾರತದ ಕಲ್ಪನೆ ಮಾಡಬಲ್ಲನು. ನಿದ್ರಿತ ಅವಸ್ಥೆಯಲ್ಲಿ ಮಾನವನು ಯಾವಾಗ ಕಲ್ಪನೆ ಮಾಡುವನೋ, ಅರ್ಥಾತ್ ಸ್ವಪ್ನದಲ್ಲಿ ಯಾವಾಗ ಮಾನವನು, ಕ್ರೋಧ, ಲೋಭ ಇಲ್ಲವೆ. ಇತರ ಯಾವುದೇ ವೃತ್ತಿಗಳ ಮೂಲಕ ಅತಿಶಯವಾಗಿ ಪೀಡಿತನಾಗಿ, ಕೈಕಾಲುಗಳನ್ನು ಅಲುಗಾಡಿಸುವನೋ, ಆಗ ಆ ಅಂಗವು ಪೃಥ್ವಿಯ ಯಾವುದೊಂದು ಕಠೋರ ವಸ್ತುವಿನ ಸಂಸ್ಪರ್ಶದಲ್ಲಿ ಬಂದು, ಬಡಿದು, ಕಲ್ಪನೆಯಲ್ಲಿಯೇ, ಸ್ವಪ್ನದಲ್ಲಿ ತಡೆಯೊಡ್ಡುತ್ತದೆ. ಕಠೋರ ಪೃಥ್ವಿಯ ಯಾವುದೊಂದು ವಸ್ತುವಿನೊಂದಿಗೆ ಯಾವಾಗ ಅವನ ಯಾವುದೊಂದು ಅಂಗಕ್ಕೆ ಪೆಟ್ಟು ಬೀಳುವುದೋ, ಆಗ ಅವನ ನಿದ್ರೆ ಭಂಗವಾಗುತ್ತದೆ. ಇದರ ಜೊತೆಗೆ ಕಲ್ಪನೆಯ ಜಾಲವನ್ನು ನಿರ್ಮಿಸುವ ಅವನ ಸ್ವಪ್ನ ಜಗತ್ತು ಸಹ ಸಮಾಪ್ತವಾಗುತ್ತದೆ.

ಸ್ವಪ್ನ ಯದಿ ಮಧುರ ಏ ಮನ
ಹೋಕೆ ಸೇ ಮಿಛೇ ಕಲ್ಪನಾ
ಜಾಗಿ ಓ ನಾ ಆಮಾಯ ಜಾಗಿಯೋ ನಾ.

* * *

ಮಧುರ ಕನಸು ಇರಲು, ಹೇಮನ!
ಇದ್ದರಿರಲಿ ಮಿಥ್ಯ ಕಲ್ಪನ.
ಎಚ್ಚರಿಸದಿರೆನ್ನ; ಹೇಮನ!

ಯಾವನೋರ್ವ ವ್ಯಕ್ತಿಯು ಸ್ವಪ್ನದಲ್ಲಿ, ಮನದಾಳದಲ್ಲಿಯೇ ಒಂದು ರಾಜ್ಯವನ್ನು ನಿರ್ಮಿಸುತ್ತಾನೆ. ಮತ್ತು ಮನದಾಳದಲ್ಲಿಯೇ ಆ ರಾಜ್ಯದಲ್ಲಿ ನಾಲ್ಕು ಭವ್ಯ ರಾಜಗೃಹಗಳಲ್ಲಿ ಮನದಿಂದ ನಿರ್ಮಿತವಾದ ಒಂದು ಸುಂದರ ಸಿಂಹಾಸನದ ಮೇಲೆ ಕೂಡ್ರುತ್ತಾನೆ. ಆ ಸ್ಥಾನದಲ್ಲಿ ಸ್ವಪ್ನದ ಆ ರಾಜನು ಸತ್ಯವಾಗಿದ್ದಾನೆ.ಆದರೆ ನೈಜವಾಗಿ ಅವನು ರಾಜನೇನು? ನಿದ್ರೆ ಭಂಗವಾದ ಮೇಲೆ, ತಾನು ಹರಿದ ಚಾಪೆಯ ಮೇಲೆ ಹರಿದ ಚಾದರನ್ನು ದೇಹದ ಮೇಲೆ ಹೊದೆದುಕೊಂಡು ಮಲಗಿರುವುದನ್ನೂ ಕಾಣುತ್ತಾನೆ.

ಯಾವ ರೀತಿ, ಸ್ವಪ್ನ ರಾಜ್ಯದ ರಾಜನಾಗುವುದು, ಒಂದು ಉದ್ಭಟ (fantastic) ಅವಾಸ್ತವಿಕತೆಯಾಗಿದೆಯೋ, ಸರಿಯಾಗಿ ಅದೇ ರೀತಿ, ಅಣುಮಾನಸ ಕಲ್ಪಿತ ಮೂರ್ತಿಯ ಬಳಿ, ಮುಕ್ತಿ ಮೋಕ್ಷ ಪಡೆಯುವ ಆಶೆಯು ದುರಾಶೆಯೇನೂ ಅಲ್ಲ; ಆದರೆ ಕೇವಲ ಹತಾಶೆ ಮಾತ್ರವಾಗಿದೆ. ಈ ಕಾರಣದಿಂದಲೇ ಶಿವನು "ಸ್ವಪ್ನ ಲಬ್ಧೇನ ರಾಜ್ಯೇನ ರಾಜಾನಃ ಮಾನವಾಸ್ತಥಾ" ಎಂದು ಸ್ಪಷ್ಟ ಶಬ್ದಗಳಲ್ಲಿ ಹೇಳಿದ್ದಾನೆ.

ಪ್ರವಚನ ೧೬

ಶಿವಬೋಧೆ—೨

ಶಿವೋಪದೇಶ–೭

"ಮೃಚ್ಛಿಲಾ ಧಾತು ದಾರವಾದಿ ಮೂರ್ತ್ಯಾವೀಶ್ವರೌ ಬುದ್ಧ್ಯೋ,
ಕ್ಲೇಶ್ಯಂತಸ್ತಪಸಾ ಜ್ಞಾನಂ ವಿನಾ ಮೋಕ್ಷಂ ನ ಯಾಂತಿ ತೇ"

(ಈಶ್ವರನು ಮಣ್ಣು, ಶಿಲೆ, ಧಾತು ಮತ್ತು ಕಟ್ಟಿಗೆಗಳಿಂದ ಮೂಡಿದ ಮೂರ್ತಿಗಳಲ್ಲಿ ಇರುವನೆಂದು ತಿಳಿದಿರುವವರು, ತಪದಿಂದ ತಮ್ಮ ದೇಹಗಳನ್ನು ವ್ಯರ್ಥವಾಗಿ ಕ್ಲೇಷಕ್ಕೀಡು ಮಾಡುತ್ತಾರೆ, ಆದರೆ ಅವರೆಂದೂ ಮೋಕ್ಷ ಪಡೆಯರು.)

ಈ ಮೊದಲಿನ ಶ್ಲೋಕದಲ್ಲಿ, ಜನರು ತಮ್ಮ ಇಷ್ಟಪೂರ್ತಿಗಾಗಿ ಮತ್ತು ಕಾರ್ಯ ಸಿದ್ಧಿಗಾಗಿ, ಯಾವ ಪ್ರಕಾರದ ಮೂರ್ತಿಗಳನ್ನು ಕಲ್ಪಿಸಿ ಅದರ ಪೂಜೆಗೆ ತೊಡಗುತ್ತಿದ್ದರೆಂಬ ಬಗೆಗೆ ಹೇಳಲಾಗಿದೆ. ಈ ಶ್ಲೋಕದಲ್ಲಿ, ಮಾನವನು ಎಲ್ಲ ಕಲ್ಪಿತ ಮೂರ್ತಿಗಳನ್ನು, ತನ್ನ ಮನದಲ್ಲಿಯೇ ಇರಿಸಿಕೊಳ್ಳುವನೆಂದೇನೂ ಅಲ್ಲ; ಆದರೆ ಅವುಗಳಿಗೆ ಪಾಂಚಭೌತಿಕ ಉಪಾದಾನಗಳಿಂದ ರೂಪ ಸಹ ನೀಡುತ್ತಾನೆ. ಇದಕ್ಕಾಗಿ ಅವನು ಕೆಲವೊಮ್ಮೆ ಮಣ್ಣನ್ನು, ಕೆಲವೊಮ್ಮೆ ಶಿಲೆಯನ್ನು, ಕೆಲವೊಮ್ಮೆ ಬೇರೆ ಬೇರೆ ಪ್ರಕಾರದ ಧಾತುಗಳನ್ನು ಮತ್ತೊಮ್ಮೆ ಬಂಗಾರ, ಮುತ್ತು–ಹವಳಗಳ ಬಳಕೆಯನ್ನೂ ಮಾಡುತ್ತಾನೆ, ಇನ್ನೊಮ್ಮೆ ಕಟ್ಟಿಗೆಯನ್ನು ಬಳಸುತ್ತಾನೆ. ಈ ಎಲ್ಲ ಮೂರ್ತಿಗಳ ನಿರ್ಮಾಣಕ್ಕಾಗಿ ಅವನು ಬಹಳಷ್ಟು ವೆಚ್ಚದ ಭಾರ ಹೊರುತ್ತಾನೆ. ಈ ಪೂಜೆಯನ್ನೇ ಕೇಂದ್ರವಾಗಿರಿಸಿಕೊಂಡು, ಇಲ್ಲಿ ಪುರೋಹಿತ ತಂತ್ರವೇ ಎದ್ದು ನಿಲ್ಲುತ್ತದೆ. ಯಾವ ಪರಮ ಪುರುಷನು ಎಲ್ಲ ವಸ್ತುಗಳನ್ನು ಸೃಷ್ಟಿಸಿರುವನೋ, ಅವನನ್ನೇ ಮಣ್ಣು, ಕಲ್ಲು, ಕಟ್ಟಿಗೆ, ಕಬ್ಬಿಣಗಳಲ್ಲಿ ಬದ್ಧನನ್ನಾಗಿಸಿ, ಸ್ನಾನ ಮಂತ್ರದ ಮೂಲಕ ಸ್ನಾನ ಮಾಡಿಸಿ, ಭೋಗರಾಗಾದಿ ಹಾಡಿ ಉಣ್ಣಿಸಿ, ಅವನಿಗಾಗಿ ಹೂವಿನ ಹಾಸುಗೆ ಹಾಸಿ ಮಲಗಿಸಿ, ಬೇರೆ ಬೇರೆ ಉತ್ಸವಗಳ ಕಾಲಕ್ಕೆ ಅವನಿಗೆ ರಾಜವೇಷ ಉಡಿಸಿ, ಬೇರೆ ಬೇರೆ ಪ್ರಕಾರದ ತಿಂಡಿ ತಿನಿಸುಗಳನ್ನು— ರಾಜ ಭೋಗವನ್ನೋ, ಸಾಮ್ರಾಟ ಭೋಗವನ್ನೋ, ಘೃತೋದನ (ತುಪ್ಪ–ಅನ್ನ) ಭೋಗವನ್ನೋ— ನೀಡಿ ತೃಪ್ತಿಬಡಿಸುವ ವ್ಯವಸ್ಥೆಯನ್ನು ಮಾಡಲಾಗುತ್ತದೆ.

ಪುನಃ ಬೇರೆ ಬೇರೆ ಸ್ಥಾನಗಳಲ್ಲಿ ಆ ಎಲ್ಲ ಭೋಗಗಳ ಉಪಕರಣಗಳನ್ನು ಬೇರೆ ಬೇರೆ ಬೆಲೆಗೆ ಮಾರುತ್ತಾರೆ. ರಾತ್ರಿಯ ಹೊತ್ತಿಗೆ ಅವನನ್ನು ಮಲಗಿಸಿ, ಅಗಳಿಯಿಂದ ಬಾಗಿಲು ಬಂದು ಮಾಡುತ್ತಾರೆ. ದೇವತೆಯು ಇನ್ನೂ ಮಲಗಿದ್ದಾನೆ ಎಂದು ಹೇಳುತ್ತಾರೆ. ದೇವತೆಯು ಮಲಗುವನೇ! ಪರಮ ಪುರುಷನು ಗಡದ್ದಾಗಿ ನಿದ್ರಿಸುವನೇ! ಆಗ ಜಗತ್ತಿನ ಕಾರ್ಯವೆಂತು ಸಾಗಬಲ್ಲದು? ಅರ್ಥಾತ್ ಕಲ್ಪನೆಯಲ್ಲಿಯೂ ಸಹ ಮೋಸಗಾರಿಕೆ ಇದೆ. ಮೂರ್ತಿಯ ಕಲ್ಪನೆಯಂತೆಯೇ ಭಾವನಾ ಜಗತ್ತಿನಲ್ಲಿಯೂ ಕಳಪೆ ನಡೆದಿರುತ್ತದೆ. ಈ ಮೂರ್ತಿ ಬುದ್ಧಿಯಲ್ಲಿ, ಈಶ್ವರನನ್ನು ಕಲ್ಲು, ಕಟ್ಟಿಗೆ, ಕಬ್ಬಿಣ–ಮಣ್ಣುಗಳ ಸಂರಚನೆಯಲ್ಲಿ ಬಂಧಿಸಿಡುವುದರ ಹೊರತು ಬೇರೇನೂ ಇಲ್ಲ. ಇದರೊಂದಿಗೆ, ಈ ಮೂರ್ತಿ ಬದ್ಧ ದೇವತೆಗೋಸ್ಕರ, ಸಕಲ ಮಾನವರು ಎಷ್ಟೊಂದು ಸಂಕಟವನ್ನೆದುರಿಸಬೇಕಾಗುತ್ತದೆ? ಎಷ್ಟೊಂದು ತೀರ್ಥ–ಯಾತ್ರೆಗೋಸುಗ ಹಣ ವ್ಯಯಿಸಬೇಕಾಗುತ್ತದೆ? ಆದರೆ, ಈ ಎಲ್ಲ ತಪ್ಪುಗಳ ಹಿಂದೆ ಏನಿದೆ? ಅದೆಂದರೆ, ಮಾನವನ ಕಲ್ಪಿತ ಮೂರ್ತಿ ಭಾವನೆ. ಮತ್ತು ಅದೇ ಮೇರೆಗೆ ಆ ಭಾವನೆಯ ಮೇಲೆ ಈಶ್ವರ ಬುದ್ಧಿಯನ್ನು ಆರೋಪಿಸಿ, ಬೇರೆ ಬೇರೆ ಪ್ರಕಾರದ ಕ್ಲೇಶಗಳನ್ನು ಭೋಗಿಸುವುದೇ ಆಗಿದೆ.

ಈ ವಿಶ್ವದಲ್ಲಿ ಯಾವುದೂ ವ್ಯರ್ಥವಾಗಿಲ್ಲವೆಂದು ಹೇಳಿದ್ದಾರೆ. ಅಂದ ಮೇಲೆ ಮಣ್ಣಿನ ಮೂರ್ತಿಗೋಸುಗ ಕ್ಲೇಶಗಳನ್ನು ಭೋಗಿಸುವುದೆಲ್ಲ ವ್ಯರ್ಥವಲ್ಲವೇ? ಇಲ್ಲ; ಇಲ್ಲ. ಇದೂ ಸಹ ವ್ಯರ್ಥವಲ್ಲ. ಯಾವ ದಿವಸ ಮಾನವನು ಒಂದು ಬೆಳಗಿನಲ್ಲೆದ್ದು, ಒಮ್ಮಿಂದೊಮ್ಮೆ, ಈ ಪ್ರಕಾರದ ದುಃಖಭೋಗಕ್ಕೆ ಯಾವುದೇ ಪಾರಮಾರ್ಥಿಕ ಮೂಲ್ಯವಿಲ್ಲ ಎಂದು ಅರಿತುಕೊಳ್ಳುವನೋ, ಆ ದಿನವೇ ಅವನು ತೀವ್ರವಾಗಿ ಭಾವ ಜಡತೆಯ (Dogma) ವಿರುದ್ಧ ಸಿಡಿದೇಳುತ್ತಾನೆ. ಯಾವ ದಿನ ಅವನು ಪರಿಸ್ಥಿತಿಯ ಒತ್ತಡದಿಂದಾಗಿ ಭಾವಜಡತೆಯ ವಿರುದ್ಧ ಕಾರ್ಯ ಮಾಡುವ ಸುಯೋಗವನ್ನು ಪಡೆಯುವುದಿಲ್ಲನ್ನೋ, ಆದರೂ ಸಹ, ಮನವ ಒಳಗೊಳಗೆ ಆರ್ತನಾದದಿಂದ, 'ಪರಮ ಪುರುಷ' ಈಗಂತೂ ನನ್ನ ತಪ್ಪು ದೂರವಾಗಿದೆ. ಈಗ ನೀನು ನನ್ನನ್ನು ನಿನ್ನೆಡೆಗೆ ಕರೆದುಕೋ!

ಈ ಪ್ರಕಾರದ ಸ್ವಲ್ಪ ಸಾಧನಗಳಿಂದ ಮುಕ್ತಿ–ಮೋಕ್ಷಗಳನ್ನು ಪಡೆಯುವುದು, ದೂರದ ಮಾತಾಯಿತು. ಕೊಂಚ ಆಧ್ಯಾತ್ಮಿಕ ಉನ್ನತಿಯೂ ಸಹ ಆಗಲಾರದು. ಪ್ರತಿಯಾಗಿ ಮನಸ್ಸು ಸಂಕೀರ್ಣದಿಂದ ಸಂಕೀರ್ಣತರವಾಗುತ್ತ ಸಾಗುತ್ತದೆ. ಮೋಕ್ಷ ಪಡೆಯುವ ಒಂದು ಪಥವಿದೆ. ಆ ಪಥವೇ ಆತ್ಮಜ್ಞಾನ ಪಡೆಯುವುದು. ಈ ಆತ್ಮ ಜ್ಞಾನವನ್ನು ಪಡೆಯಲೋಸ್ಕರ, ಹೊರಗಿನ ಜೀವನದಲ್ಲಿ, ಶುದ್ಧ ಆಚಾರ, ಮಾನಸಿಕ ಜೀವನದಲ್ಲಿ ಶುದ್ಧ ಚರಿತ್ರೆ ಮತ್ತು ಆಧ್ಯಾತ್ಮಿಕ ಜಗತ್ತಿನಲ್ಲಿ ಸಪ್ತಾಶ್ರಯವಾದ ಪರಮ ಸತ್ತೆಯನ್ನು ಜೀವನದ ಏಕಮಾತ್ರ ಧ್ರುವತಾರೆಯೆಂದು ತಿಳಿದು, ದೃಢವಾಗಿ ಹಿಡಿದು ಕೊಂಡಿರಬೇಕು.

"ಜಗತ ಕೇ ಸಾಜಾಬ್ಹೇನ ಜೇ ಮಾ
ದಿಯೇ ಕತ ರತ್ನ ನಾನಾ

ತುಮೀ ಸಾಜಾತೇ ಚಾಓ ಸೇಇ ಮಾಯೇರೇ
ದಿವಿ ಛಾಡ ಡಾಕೇರ ಗಹನಾ
ಜಗತಕೇ ಖಾಓಯಾಚ್ಛೇನ ಜೇ ಮಾ
ದಿಯೇ ಕತ ಖಾದ್ಯ ನಾನಾ
ತೂಮಿ ಖಾಓಯಾತೇ ಚಾಓ ಸೇಇ ಮಾಯೇರೇ
ಆಲೋಚಾಲ ಆರ ಬೂಟ ಭಿಜಾನಾ

* * *

ತ್ಯಾಜಿಬ ಸಬ ಭೇದಾ ಭೇದ
ಘೂಚೇ ಜಾಬೇ ಮನೇರ ಖೇದ
(ಓಮಾ) ಶತಶತ ಸತ್ಯವೇದ
ತಾರಾ ಆಮಾರ ನಿರಾಕಾರ

* * *

ನಾನಾ ರತ್ನವ ನೀಡುತ ಜಗವನು
ಅಂದಾಗಿಸುವಳು ಆ ನಮ್ಮಮ್ಮನು
ಅವಳಿಗೆ ಉಡುಪನು ಉಡಿಸುವ ಈ ಛಲ,
ಬಿಡುಬಿಡು ಈ ಭ್ರಮೆ ಇರಬಹುದೇ ಫಲ?
ನಾನಾ ವಿಧವಿಧದನ್ನವ ಧರತಿಗೆ,
ನೀಡುವಳಾ ನಮ್ಮಮ್ಮನು ಬಹುಬಗೆ.
ಕೊಡುವೆಯ; ಪಾಯಸ ಅನ್ನವನವಳಿಗೆ?
ಅವಳೇ ನೀಡುವಳಲ್ಲವೆ, ಭೂಮಿಗೆ?

ತ್ಯಜಿಸುವೆನೀಗಳೆ ಭೇದಾಭೇದವ
ತೊಡೆಯುವೆನೆನ್ನಯ ಮಾನಸ ಖೇದವ;
ತಾರೆ ನಿರಾಕಾರೆಂಬುದು ಸತ್ಯವು.
ಅದನೇ ಹೇಳುವುದಲ್ಲವೆ ವೇದವು?

(ಇಲ್ಲಿ ಅಮ್ಮ, ತಾರಾ ಪದಗಳು ಬ್ರಹ್ಮವನ್ನೇ ಸೂಚಿಸುತ್ತವೆ.)

ಮಧ್ಯಯುಗದಲ್ಲಿ ವಿವಿಧ ದೇವ–ದೇವತೆಗಳನ್ನು ಕುರಿತು ಅನೇಕ ಪುರಾಣಗಳನ್ನು ರಚಿಸಿದರು. ಈ ಪುರಾಣ ಕರ್ತರಲ್ಲೆಲ್ಲ ವ್ಯಾಸದೇವನೇ ಅಗ್ರಗಣ್ಯ. ಈ ವಿಷಯದಲ್ಲಿ ಅವನು ಸಹ ತನ್ನ ತಪ್ಪನ್ನರಿತು, ಈ ಶಬ್ದಗಳಲ್ಲಿ ಕ್ಷಮೆ ಯಾಚಿಸಿದ್ದಾನೆ.

"ರೂಪಂ ರೂಪವಿವರ್ಜಿತಸ್ಯ ಭವತೋ ಯದ್ಧ್ಯಾನೇನ ವರ್ಣಿತಮ್
ಸ್ತುತ್ಯಾ ನಿರ್ವಚನೀಯತಾಖಿಲೋ ಗುರೋ ದೂರೀಕೃತಾಯನ್ಮಯಾ ।
ವ್ಯಾಪಿತ್ವಂ ಚ ನಿರಾಕೃತಂ ಭಗವತೋ ಯತ್ತೀರ್ಥ ಯಾತ್ರ ದಿನಾ
ಕ್ಷಂತವ್ಯಂ ಜಗದೀಶೋ ತದ್ವಿಕಲತಾದೋಷತ್ರಯಂ ಮೃತ್‌ಕೃತಮ್ ॥

[ರೂಪವರ್ಜಿತನಾದ ನಿನಗೆ, ನೀನು ಧ್ಯಾನದಿಂದ ಮಾತ್ರ ಪಡೆಯಬೇಕಾದವ ನಾಗಿದ್ದರೂ, ನಾನು ರೂಪವನ್ನು ಆರೋಪಿಸಿದೆ.

ನೀನು ಅನಿರ್ವಚನೀಯನಾಗಿದ್ದರೂ ನಾನ್ನು ನನ್ನ ಸ್ತುತಿವಚನಗಳಿಂದ ನಿನ್ನನ್ನು ಸೀಮಾಬದ್ಧಗೊಳಿಸಲು ಯತ್ನಿಸಿದೆ.

ನೀನು ಸರ್ವ ವ್ಯಾಪ್ತನಾಗಿದ್ದರೂ, ನಾನು ನಿನ್ನನ್ನು ಹಲಕೆಲವು ತೀರ್ಥಕ್ಷೇತ್ರ ಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದೆ.

ಎಲೈ ಜಗದೀಶ, ನನ್ನ ಈ ಮೂರು ದೋಷಗಳಿಗಾಗಿ ನನ್ನನ್ನು ಕ್ಷಮಿಸು.]

ಯಾವನು ಸಮಸ್ತ ಜಗತ್ತಿನ ಅಸ್ತಿತ್ವವಾಗಿರುವನೋ, ಸಮಸ್ತ ಭಾವಗಳ ಮಧ್ಯಮಣಿಯಾಗಿರುವನೋ, ಅವನಿಗೆ ನಾವು ನಮ್ಮ ಆತ್ಮವನ್ನು ನಿವೇದಿಸಿಕೊಳ್ಳ ಬೇಕು. ಹಾಗಾದರೆ ಅವನು ನಮಗೆ ಎಲ್ಲಕ್ಕಿಂತ ಪ್ರಿಯ ವಸ್ತುವಾದ ಅಸ್ತಿತ್ವ ಬೋಧೆಯ ಸಾರಸತ್ತೆಯನ್ನು ಕೊಡುತ್ತಾನೆ. 'ನಿವೇದಯಾಮಿ ಚಾತ್ಮಾನಂ ತ್ವಂ ಗತಿಃ ಪರಮೇಶ್ವರಃ' ಎಂದು ಹೇಳಲೇಬೇಕು. 'ತನ್ನತನ'ದ ಭಾವವನ್ನು ನಿವೇದಿಸಿ, ಪರಮ ಪುರುಷನ ಭಾವವನ್ನು ಆತ್ಮಸ್ಥಗೊಳಿಸುವ ಯಾವ ಸಾಧನೆಯಿದೆಯೋ ಅದುವೇ ಆತ್ಮಜ್ಞಾನದ ಸಾಧನೆಯಾಗಿದೆ. ಮೋಕ್ಷವು ಕೇವಲ ಆ ಸಾಧನೆಯಿಂದ ಮಾತ್ರ ಸಂಭವಿಸಬಹುದಾಗಿದೆ.

ಭಾವನೆಯ ಕ್ಷೇತ್ರದಲ್ಲಿ ಕಳವು ಮಾಡಿ ಯಾವನೂ ವೈತರಣಿಯನ್ನು ದಾಟಲಾರ. ಅವನಾವ ಪಾಪದಿಂದಲೂ ಮುಕ್ತಿ ಪಡೆಯಲಾರ.

ಜೀವನದ ಎಲ್ಲ ಸ್ತರಗಳಲ್ಲಿ ಅರ್ಥಾತ್ ಕೇವಲ ಜಾಗತಿಕ ಕ್ಷೇತ್ರದಲ್ಲಿಯಷ್ಟೇ ಅಲ್ಲ. ಜಾಗತಿಕ ಮತ್ತು ಮಾನಸಿಕ ಕ್ಷೇತ್ರದಲ್ಲೂ ಸಹ, ಇದುವೇ ಸಾರಕಥೆಯಾಗಿದೆ. ಎಲ್ಲ ಕಥೆಗಳಲ್ಲಿ ಇದುವೇ ಪ್ರಧಾನಕಥೆಯಾಗಿದೆ.

ಶಿವೋಪದೇಶ–೮

ಜಾಗೃತ ಸ್ವಪ್ನ ಸುಷುಪ್ತ್ಯಾದಿ ಚೈತ್ಯನ್ಯಂ ಯದ್ ಪ್ರಕಾಶತೇ,
ತದ್ ಬ್ರಹ್ಮಾಹಮಿತಿ ಜ್ಞಾತ್ವಾ ಸರ್ವಂ ಜಂಘೈಃ ಪ್ರಮುಚ್ಯತೇ

[ಜಾಗೃತ, ಸ್ವಪ್ನ ಮತ್ತು ಸುಷುಪ್ತಿ ಮುಂತಾದ ಅವಸ್ಥೆಗಳನ್ನು ಚೈತನ್ಯವು ಪ್ರಕಾಶಪಡಿಸುತ್ತದೆ.

ಅದೇ ಬ್ರಹ್ಮವೆಂದು ಯಾವನು ಸಾಕ್ಷಾತ್ಕರಿಸಿಕೊಳ್ಳುವನೋ, ಅವನು ಸರ್ವ ಬಂಧನಗಳಿಂದ ಬಿಡುಗಡೆ ಹೊಂದುತ್ತಾನೆ.]

ಮನಸ್ಸಿನ ಅವಸ್ಥೆಗಳು ನಾಲ್ಕು. ಜಾಗೃತ, ಸ್ವಪ್ನ, ಸುಷುಪ್ತಿ ಮತ್ತು ಅದೇ ರೀತಿ ತುರೀಯ. ಇವುಗಳಲ್ಲಿ ಜಾಗೃತ, ಸ್ವಪ್ನ ಮತ್ತು ಸುಷುಪ್ತಿಗಳು ಪರಮ ಪುರುಷನ ಇಚ್ಛೆಯಿಂದ ಪ್ರಕಾಶಿತವಾಗುತ್ತವೆ. ಮತ್ತು ಅಭಿವ್ಯಕ್ತವಾಗುತ್ತವೆ. ಯಾವಾಗ ಜೀವಮಾನಸವು ಅತ್ಯಧಿಕ ಈಶ್ವರಾನುರಕ್ತಿಯಲ್ಲಿ ತನ್ನ ಸಮಸ್ತ ಅಸ್ತಿತ್ವ ಬೋಧೆಯನ್ನು, ಮಾಧುರ್ಯಪೂರ್ಣ ಸಮಸ್ತ ದ್ಯೋತನೆಯನ್ನು, ಛಂದೋಬದ್ಧವಾದ ಸಮಸ್ತ ಭಾವಸತ್ತೆಯನ್ನು ಪರಮಸತ್ತೆಯ ನಿತ್ಯಾನಂದದಲ್ಲಿ ಸೇರಿಸಿ, ತಾತ್ಕಾಲಿಕ

ರೂಪದಲ್ಲಾಗಲಿ, ನಿತ್ಯರೂಪದಲ್ಲಾಗಲಿ, ಮಾನಸಿಕ ಸಂಕಲ್ಪ ವಿಕಲ್ಪಗಳಿಲ್ಲದ ಅವಸ್ಥೆಯನ್ನು ತಲುಪುವುದೋ, ಆ ಪ್ರಜ್ಞಾಸ್ಥಿತಿಗೆ, ಚಿತ್‌ಶಕ್ತಿಯಲ್ಲಿನ ಆ ಸಂಸ್ಥಿಗೆ ತುರೀಯ ಅವಸ್ಥೆಯೆನ್ನುತ್ತಾರೆ. ತುರೀಯ ಅವಸ್ಥೆಯು ನಿತ್ಯಾನಂದದ ಅವಸ್ಥೆಯಾಗಿದೆ. ಈ ಕಾರಣದಿಂದ ಅದಕ್ಕಾವ ಹೊರಗಿನ ಅಭಿವ್ಯಕ್ತಿಗಳೂ ಇರವು.

ಜಾಗ್ರತ ಅವಸ್ಥೆಯೆಂದರೆ, ಯಾವಾಗ ಚೇತನ ಮನವು ಆಜ್ಞಾನಾಡಿ ಮತ್ತು ಸಂಜ್ಞಾನಾಡಿಗಳ ಮಾಧ್ಯಮದಿಂದ, ಇಂದ್ರಿಯ ಸಮೂಹಗಳ ಸಹಾಯದಿಂದ, ಪಂಚ ಭೌತಿಕ ಜಗತ್ತಿನಿಂದ, ಭಾವಗಳ ಗ್ರಹಣ, ವರ್ಜನ, ಪ್ರಕ್ಷೇಪ, ಮತ್ತು ನಿಕ್ಷೇಪಗಳನ್ನು ಮಾಡುವುದೋ ಅಥವಾ ಇಂದ್ರಿಯ ವರ್ಜಿತ ಭಾವದಲ್ಲಿ ಇಲ್ಲವೆ ನಾಡೀ–ವರ್ಜಿತ ಭಾವದಲ್ಲಿ ಸ್ನಾಯುಕೋಶದ ಸ್ಪಂದನಗಳನ್ನು ಸ್ಮರಿಸುವುದೋ ಅದೇ ಆಗಿದೆ. ಈ ಜಾಗ್ರತಾವಸ್ಥೆಯಲ್ಲಿ ಮನುಷ್ಯನ ಜೀವನದಲ್ಲಿನ ಪ್ರತಿಯೊಂದು ಏಟು-ಇದಿರೇಟುಗಳು, ಪ್ರತಿಕ್ಷಣವೂ, ಅವನ ಆಜ್ಞಾನಾಡಿ ಮತ್ತು ಸಂಜ್ಞಾನಾಡಿಗಳ ಮಾಧ್ಯಮದಿಂದ ಸ್ನಾಯುಗಳಿಗೆ ಪೆಟ್ಟು ಕೊಡುತ್ತವೆ. ಕೆಲವೊಮ್ಮೆ ದುಃಖ ನೀಡುತ್ತವೆ; ಕೆಲವೊಮ್ಮೆ ಸುಖ ನೀಡುತ್ತವೆ.

ಈ ಕಾರಣದಿಂದಾಗಿಯೇ, ಈ ಸ್ಥಿತಿಯಲ್ಲಿ ವಾಸ್ತವಿಕ ಜಗತ್ತಿನ ತನ್ಮಾತ್ರಿಕ ಸ್ಪರ್ಶ ಇಲ್ಲವೆ ಮಧುರತೆಯನ್ನು ಇಲ್ಲವೆ ಕಠೋರತೆಯನ್ನು–ಬಿಟ್ಟು, ಅವನು ಒಂದರೆಕ್ಷಣವಾದರೂ ಇರಲಾರನು. ಈ ಕಾರಣ, ಆ ಕ್ಷಣದಲ್ಲಿ ಅವನು ಕೇವಲ ಸ್ನಾಯುಕೋಶದ ಸ್ಪಂದನಗಳಿಂದ ಮತ್ತು ಉದಿಸಿದ ಭಾವನೆ-ನೆನಹುಗಳ ಕಾರ್ಯಗಳನ್ನು ಪೂರ್ಣಭಾವನೆ ಮತ್ತು ನೆನಪುಗಳ ಕಾರ್ಯಗಳೆಂದು ಯೋಚಿಸುತ್ತಾನೆ.

ಆಜ್ಞಾನಾಡಿ ಮತ್ತು ಸಂಜ್ಞಾನಾಡಿಗಳ ಅನುಭೂತಿಯು ಆಗ ಅವನಿಗೋಸ್ಕರ ಎಷ್ಟೊಂದು ಪ್ರಬಲವಾಗಿರುವವೋ, ಸ್ನಾಯುಕೋಶದ ಭಾವನೆ ಮತ್ತು ಸ್ಮರಣೆ ಕಾರ್ಯಗಳ ಪ್ರಭಾವವು ಅಷ್ಟೊಂದು ಹೆಚ್ಚು ಪ್ರಬಲವಾಗಿರುವುದಿಲ್ಲ. ಸಮಯದ ದೃಷ್ಟಿಯಿಂದ ಬೇಕಾದರೆ ಸ್ವಲ್ಪ ಮಾನಸಿಕ ಏಕಾಗ್ರತೆ ಹೆಚ್ಚಾಗಬಹುದು. ಇಲ್ಲವೆ, ಸ್ವಲ್ಪ ಹೆಚ್ಚು ಅಂತರ್ಮುಖಿಯಾಗಬಹುದು. ಇನ್ನು ಪಾಂಚಭೌತಿಕ ಜಗತ್ತಿನ ಸುಖ-ದುಃಖಗಳ ಪೀಡಾದಾಯಕ ಇಲ್ಲವೆ ಸುಖಾತ್ಮಕ ಅನುಭೂತಿಗಳ ಪ್ರಭಾವವು ಸಾಮಯಿಕ ರೂಪದಿಂದ ಬಹು ಕಡಿಮೆಯಾಗಬಹುದು. ಆ ಕಾಲಕ್ಕೆ ಅವನ ಸ್ನಾಯಕೋಶದಿಂದ ಉಂಟಾದ ಸ್ಪಾಂದನಿಕ ಭಾವನೆಗಳ ಮತ್ತು ಸ್ಮರಣಕಾರ್ಯಗಳ ಪ್ರಭಾವವು ಸಹ ಪೆಚ್ಚುತ್ತದೆ. ಈ ಸ್ಥಿತಿಯಲ್ಲಿ, ಮಾನವನು ಸ್ವಲ್ಪ ಅಭ್ಯಾಸ ಮಾಡಿದರೆ, ಮತ್ತು ಮಾನಸಿಕ ಬಲದಿಂದ ಸಾಮಯಿಕ ರೂಪದಲ್ಲಿ, ಇನ್ನೊಬ್ಬರ್ವನ ಆಜ್ಞಾನಾಡಿ ಮತ್ತು ಸಂಜ್ಞಾನಾಡಿಗಳನ್ನು ಸ್ತಂಭಿತಗೊಳಿಸಿ ತನ್ನ ಇಚ್ಛಾಶಕ್ತಿಯ ಪ್ರಭಾವವನ್ನು ಸ್ತಂಭಿತ ನಾಡಿಯ ಆ ವ್ಯಕ್ತಿಯ ಗತಿ, ಭಾವನೆ ಮತ್ತು ಸ್ಮರಣೆಗಳ ಮೇಲೆ ಬೀರುತ್ತಾನೆ ಇಲ್ಲವೆ ಬೀಳಬಲ್ಲನು. ಇದನ್ನೇ ಸಮ್ಮೋಹನ ಕ್ರಿಯೆ (hypnotising) ಎನ್ನುತ್ತಾರೆ. ಈ ಸಮ್ಮೋಹನ ಕ್ರಿಯೆಯ ಸಹಾಯದಿಂದ ಯುರೋಪಿನ ಶ್ರೇಷ್ಠ ಮನೋವೈಜ್ಞಾನಿಕ ಡಾಕ್ಟರ ಮೆಸ್ಮರರು ರೋಗಗಳ ಚಿಕಿತ್ಸೆಯನ್ನು ಮಾಡುವ ಒಂದು ಪದ್ಧತಿಯ ಪ್ರವರ್ತನೆ ಮಾಡಿದನು. ಆ ಪದ್ಧತಿಯೇ ಇಂದಿನ ಕಾಲದಲ್ಲಿ ಮೆಸೇರಿಜಂ ಎಂದು ಪ್ರಸಿದ್ಧವಾಗಿದೆ.

ಮಾನವ ಮನದ ಅಭಿವ್ಯಕ್ತಿಯ ಮೂರು ಅವಸ್ಥೆಗಳಲ್ಲ, ಜಾಗ್ರತ ಅವಸ್ಥೆಯಲ್ಲಿಯೇ ಮನದ ಅತಿ ಹೆಚ್ಚಿನ ಉಪಯೋಗವಿದೆ. ಈ ಅವಸ್ಥೆಯಲ್ಲಿಯೇ ಮಾನವನು ತನ್ನ ಕಲ್ಪನೆಗೆ ವಾಸ್ತವಿಕತೆಯನ್ನು ನೀಡಿ, ಅದನ್ನು ಸಮಾಜದ ಕಲ್ಯಾಣಕ್ಕೋಸ್ಕರ ಬಳಕೆಯಲ್ಲಿ ತರಬಲ್ಲನು, ಇಲ್ಲವೆ ತರುತ್ತಾನೆ. ಸುಶಿಕ್ಷಿತನಾದ ವ್ಯಕ್ತಿಗೆ ಈ ಜಾಗ್ರತ ಅವಸ್ಥೆಯು ತುಂಬಾ ಸುಂದರ ಅವಸ್ಥೆಯಾಗಿದೆ. ಈ ಕಾರಣದಿಂದ ಮಾನವನು, ಆರೋಗ್ಯವನ್ನು ಕೆಡಿಸಿಕೊಳ್ಳದೆ, ಹೆಚ್ಚು ಕಾಲದವರೆಗೆ ಈ ಅವಸ್ಥೆಯಲ್ಲಿಯೇ ಇರಬಲ್ಲನು. ಆದ್ದರಿಂದ ಪ್ರತಿ–ಮಾನವನೂ ಸಚೇಷ್ಟನಾಗಿರಬೇಕು. ಈ ಪಾಂಚಭೌತಿಕ ಜಗತ್ತಿನಿಂದ ಜ್ಞಾನ ಗಳಿಸುವ ಪೂರ್ಣ ಕ್ಷಮತೆಯನ್ನು ಸಹ ಮಾನವನು ಈ ಜಾಗ್ರತ ಅವಸ್ಥೆಯಲ್ಲಿಯೇ ಪಡೆಯುತ್ತಾನೆ. ಮತ್ತು ಅದೇ ತೆರನಾಗಿ, ಈ ಪಾಂಚಭೌತಿಕ ಜಗತ್ತಿನಲ್ಲಿ ಜ್ಞಾನಾತ್ಮಕ ಅನುಭೂತಿಯ ಉತ್ತರಣವೂ ಸಹ ಇದೇ ಜಾಗ್ರತ ಅವಸ್ಥೆಯಲ್ಲಿ ಆಗುತ್ತದೆ.

ಯಾವ ಜನರು ಬಹಳ ನಿದ್ರಿಸುವವರಿರುವರೋ, ಅವರ ಕಣ್ಣುಗಳು ಯಾವಾಗಲೂ ನಿದ್ರೆಯ ಗುಂಗಿನಲ್ಲಿ ಮುಚ್ಚಿರುತ್ತವೆ. ಆ ವ್ಯಕ್ತಿಯು ತನ್ನ ಶಾರೀರಿಕ ಮತ್ತು ಮಾನಸಿಕ ಅಸ್ತಿತ್ವವನ್ನು ಬಹಳಷ್ಟು ಕಡಿಮೆ ಅಂಶದಲ್ಲಿ ಕಾರ್ಯದಲ್ಲಿ ಉಪಯೋಗಿಸುತ್ತಾರೆ. ಇದರಿಂದಾಗಿಯೇ ಹೀಗೆ ಹೇಳಲಾಗಿದೆ:

ಷಡ್‌ದೋಷಾಃ ಪುರುಷೇಣೇಹ ಇಂತವ್ಯಾಃ ಭೂತಿಮಿಚ್ಛತಾ।
ನಿದ್ರಾ ತಂದ್ರಾ ಭಯಂ ಕ್ರೋಧ ಆಲಸ್ಯಂ ದೀರ್ಘ ನಿದ್ರತಾ।

ಯಾವ ಮಾನವನು ಉನ್ನತಿಯನ್ನು ಬಯಸುವನೋ, ಅವನು ದೋಷಗಳನ್ನು ದೂರಗೊಳಿಸಬೇಕಾಗುತ್ತದೆ. ಆ ದೋಷಗಳೆಂದರೆ–ನಿದ್ರೆ, ತಂದ್ರಾ, ಆಲಸ್ಯ, ಭಯ, ಕ್ರೋಧ, ಮತ್ತು ದೀರ್ಘಸೂತ್ರತೆ. (ನಾಳೆ ಆಗುತ್ತದೆ; ನಾಡಿದ್ದು ಆಗುವುದು; ಹೀಗೆ ಯೋಚಿಸುವುದು.) ಮಾನವನು ಈ ಜಾಗ್ರತ ಅವಸ್ಥೆಯನ್ನು ಪರಮ ಪುರುಷನ ಇಚ್ಛೆ ಇಲ್ಲವೆ ಅವನ ಕೃಪೆಯ ಕಣದೊಂದಿಗೆ ಸೇರಿಸಬಯಸುತ್ತಾನೆ. ಇದಕ್ಕಾಗಿ ದೊಡ್ಡ ದೊಡ್ಡ ಮಾತುಗಳನ್ನಾಡುವ ಅಧಿಕಾರವು ಯಾವ ಮನುಷ್ಯನಿಗೂ ಇರದು.

ಸ್ವಪ್ನದಲ್ಲಿ, ನಿದ್ರಿಸುತ್ತಿರುವಾಗಲೇ ಚಿಂತನೆಗೆಯ್ಯುವ ಅವಸ್ಥೆಯನ್ನು ಕುರಿತು ಸ್ವಲ್ಪ ಕಾಲ ಮೊದಲೇ ಹೇಳಲಾಗಿದೆಯಷ್ಟೇ. ಈ ವಿಷಯದಲ್ಲಿ ಮೊದಲೇ ಯಾವ ಪ್ರಶ್ನೆಯೆಂದರೆ, ಪ್ರತಿಯೊಂದು ಸಮಯದಲ್ಲಿಯೂ ಮಾನವನು ನಿದ್ರಿಸುತ್ತಿರುವಾಗ ಏಕೆ ಚಿಂತನೆ ಮಾಡುವುದಿಲ್ಲ ಮತ್ತು ಸ್ಮರಿಸುವುದಿಲ್ಲ? ಎಚ್ಚತ್ತ ಅವಸ್ಥೆಯಲ್ಲ ಮಾತ್ರ ಯೋಚಿಸುತ್ತಾನೆ ಮತ್ತು ಸ್ಮರಿಸುತ್ತಾನೆ. ಇದು ಎಲ್ಲಿಯವರೆಗೆ ಎಂದರೆ, ಎಚ್ಚರದ ಅವಸ್ಥೆಯಲ್ಲಿ ಯಾವಾಗ ಮಾನವನು ಸಾಧನೆ ಮಾಡುವನೋ, ಆ ಕಾಲಕ್ಕೂ ಸಹ, ಪರಮಪುರುಷನ ಬಗೆಗೆ ಯೋಚಿಸುತ್ತಾನೆ. ಮತ್ತು ಅವನನ್ನು ಸ್ಮರಿಸುತ್ತಾನೆ. ಮನಸ್ಸು ಜಾಗ್ರತ ಅವಸ್ಥೆಯಲ್ಲಿ ನಿಷ್ಕ್ರಿಯವಾಗಿರಲಾರದು. ಆದರೆ ನಿದ್ರೆಯ ಸಮಯಕ್ಕೆ ಅದು ಒಮ್ಮೆಲೇ ಸ್ವಪ್ನವನ್ನೇಕೆ ಕಾಣದು?

ಇದಕ್ಕೆ ಉತ್ತರ ದೂರವಿಲ್ಲ. ನಿದ್ರಾಸಮಯವೆಂದರೇನೇ ಮನಸ್ಸಿಗೆ ವಿಶ್ರಾಂತಿ ನೀಡುವ ಅವಸ್ಥೆ ಎಂದು. ಆದರೆ ನಿದ್ರಿಸುವುದಕ್ಕಿಂತ ಸ್ವಲ್ಪ ಕಾಲ ಮೊದಲು, ಇಲ್ಲವೆ

ತತ್ಕಾಲದಲ್ಲಿ, ಅವನು ದುಃಖದಿಂದ ದಣಿದು ಹೋಗಿದ್ದರೆ, ಇಲ್ಲವೆ, ಅತಿ ಸುಖದಿಂದ ಎಲ್ಲವನ್ನೂ ಮರೆತು ಕುಳಿತಿದ್ದರೆ, ಇಲ್ಲವೆ ರೋಗದ ಕಾರಣ ನೋವಿನಿಂದ ಆತುರನಾಗಿದ್ದರೆ, ಇಲ್ಲವೆ ಮುಂಬರಲಿರುವ ಯಾವುದೋ ಸುಖ ಇಲ್ಲವೆ ದುಃಖದಿಂದ ಬಹಳ ಚಿಂತಿತನಾಗಿದ್ದರೆ, ಆಗ ಅವನ ನಿದ್ರಿತ ಅವಸ್ಥೆಯಲ್ಲಿ ವಾಯುವಿನ ಗತಿಯು ಸ್ವಲ್ಪ ಊರ್ಧ್ವವಾಗಿದ್ದರೆ, ಅವನ ಸ್ನಾಯುಕೋಶದಲ್ಲಿ ಸ್ಪಂದನಗಳೇಳುತ್ತವೆ. ಅವನು ನಿದ್ರಿಸುತ್ತಿರುವಾಗಲೇ ಚಿಂತಿಸತೊಡಗುವನು. ಈ ಕಾರಣದಿಂದ ಮನುಷ್ಯನು ನಿದ್ರಿಸುವ ಪ್ರತಿಯೊಂದು ಸಮಯದಲ್ಲಿಯೂ ಸ್ವಪ್ನವನ್ನು ಕಾಣುವುದಿಲ್ಲ.

ಏಷ್ಟೋ ಸಲ, ಯಾವ ಕಾರಣದಿಂದಾದರೂ ಆಗಲೊಲ್ಲದೇಕೆ, ಮನುಷ್ಯನ ಚಿಂತನದಲ್ಲಿ, ಸ್ವಲ್ಪ ಏಕಾಗ್ರತೆಯುಂಟಾದರೆ, ನಿದ್ರಿತ ಅವಸ್ಥೆಯಲ್ಲಿ ಸ್ನಾಯುಕೋಶಗಳಲ್ಲಿ ಅದಕ್ಕೆ ಸಂಬಂಧಿಸಿದ ಸ್ಪಂದನಗಳೇಳುತ್ತವೆ. ಸರ್ವಜ್ಞ–ಅಚೇತ ಮನದಿಂದ (unconociousness) ಅವನ ತನ್ನ ಚಿಂತನೆಯೊಂದಿಗೆ ಜೋಡಿಸಿದ ಪ್ರಶ್ನೆಗಳ ಉತ್ತರ ಪಡೆಯುತ್ತಾನೆ. ಆದರೆ ಈ ಪ್ರಕಾರದ ಉತ್ತರವನ್ನು ಮಾನವನೆಂದೂ ಹರಿದುಹಂಚಿಹೋದ ಚಿಂತನದ ಮೂಲಕ ಪಡೆಯಲಾರನು. ಈ ಕ್ಷೇತ್ರದಲ್ಲಿ ಇನ್ನೊಂದು ಮಾತನ್ನು ನೆನಪಿಡುವುದು ಅನಿವಾರ್ಯವಾಗಿದೆ. ಅದೆಂದರೆ, ಸರ್ವಜ್ಞಾನದ ಆಧಾರವಾದ ಅಚೇತನ ಮನದಿಂದ ಯಾವ ಜಿಜ್ಞಾಸೆಯ ಉತ್ತರವನ್ನು ಪಡೆಯಬಲ್ಲನೋ, ಅವನ್ನು ಮುಖ್ಯವಾಗಿ ಸ್ವಪ್ನಾವಸ್ಥೆಯಲ್ಲಿಯೇ ಪಡೆಯಬಲ್ಲನು. ಇನ್ನು ಜಾಗೃತ ಅವಸ್ಥೆಯಲ್ಲಿ ಗೌಣರೂಪದಲ್ಲಿ ಮಾತ್ರ ದೊರೆಯುತ್ತದೆ. ಮುಖ್ಯವಾಗಿ ಸ್ವಪ್ನಾವಸ್ಥೆಯಲ್ಲಿ ಜ್ಞಾನ ಪ್ರಾಪ್ತಿಯಾದರೂ ಸಹ, ಅದರ ಅಧಿಕಾಂಶ ಭಾಗವನ್ನು ಮಾನವನು ಸ್ವಪ್ನವು ಸಮಾಪ್ತಿಯಾದೊಡನೆ, ಮರೆತುಬಿಡುತ್ತಾನೆ. ಕೆಲವೊಮ್ಮೆ ನಿದ್ರಾಭಂಗವಾದಾಗ ಬಹು ಸ್ವಲ್ಪ ಜನರಿಗೆ ಅದರ ಸ್ಮರಣೆ ಉಳಿಯುತ್ತದೆ. ಅಚೇತನ ಮನದ (unconscious mind) ಜ್ಞಾನವು ಗೌಣರೂಪದಲ್ಲಿ, ಜಾಗ್ರತಾವಸ್ಥೆಯಲ್ಲಿ ಮಾನವನ ಅವಚೇತನ ಮನದಲ್ಲಿ (subconscious mind) ಬರುತ್ತದೆ. ಆದರೆ ಬಹಳಷ್ಟು ಕ್ಷೇತ್ರಗಳಲ್ಲಿ ಅದು ಅವಚೇತನ ಮನದಲ್ಲಿಯೇ ಉಳಿಯುತ್ತದೆ. ಮತ್ತು ಅಲ್ಲಿಂದ ಸಹಜ ರೂಪದಲ್ಲಿ ಚೇತನ ಮನದಲ್ಲಿಯೂ ಬರುತ್ತದೆ.

ರೋಗ–ರುಜಿನುಗಳಿಂದ ಬಹಳಷ್ಟು ಕ್ಲೇಶಕ್ಕೆ ಈಡಾದ ಕೆಲವರು, ತಮ್ಮ ಕ್ಲೇಶ ನಿವಾರಣೆಗೋಸ್ಕರ ಯಾವು-ಯಾವುದೋ ದೇವಿ-ದೇವತೆಯರ ಪೂಜೆಗಿಳಿಯುತ್ತಾರೆ. ಈ ಸಮಯವಲ್ಲಿಯೂ ಸಹ ಮಾನವನು ಪ್ರತಿಯೊಂದು ಕಾಲದಲ್ಲಿಯೂ ತನ್ನ ರೋಗ ಮತ್ತು ಅದರ ನಿವಾರಣೆಯ ಸಾಧನೆಯ ಸಾಧನೆಗಳನ್ನು ಅರಸುತ್ತಿರುತ್ತಾನೆ. ಈ ಕಾರಣದಿಂದ ಅವನ ಮನದಲ್ಲಿ ಒಂದು ರೀತಿಯ ಸಾಮಯಿಕ ಏಕಾಗ್ರತೆ ಉಂಟಾಗುತ್ತದೆ. ಈ ಅವಸ್ಥೆಯಲ್ಲಿ ಸ್ವಲ್ಪ ಕಾಲವಿದ್ದ ಬಳಿಕ, ತಂದೆಯಿಂದ ಜಡವಾಗುತ್ತದೆ. ಆ ಕಾಲಕ್ಕೆ ಅವನ ಜ್ಞಾನಗರ್ಭವು, ಅಚೇತನದಿಂದ ಅವಚೇತನ ಮನದಲ್ಲಿ ಇಳಿದು ಬರುತ್ತದೆ. ಏಕೆಂದರೆ ಆ ಸ್ಥಿತಿಯಲ್ಲಿ, ಆ ವ್ಯಕ್ತಿಯು ಇತ್ತ ಅನಿದ್ರೆಯ ಸ್ಥಿತಿಯಲ್ಲಿಯೂ ಇರುವುದಿಲ್ಲ; ಅತ್ತ ಸ್ವಪ್ನಸ್ಥಿತಿಯಲ್ಲಿಯೂ ಇರುವುದಿಲ್ಲ; ಮತ್ತು ಅದೇ ಮೇರೆಗೆ ಜಾಗೃತ ಸ್ಥಿತಿಯಲ್ಲಿಯೂ ಇರುವುದಿಲ್ಲ. ಈ ಕಾರಣದಿಂದ ಸಹಜವಾಗಿಯೇ, ಅವನ

ಅವಚೇತನ ಮನದಲ್ಲಿ ಯಾವ ಉತ್ತರ ಸಿಕ್ಕುವುದೋ, ಅದು ಅವಚೇತನ ಮನದಿಂದ ಚೇತನ ಮನದಲ್ಲಿ ಬಂದಿರುತ್ತದೆ. ಇಂಥ ಇಂಥ ದೇವತೆಯ ಬಾಗಿಲ ಬಳಿ ಬಲಿ ಕೊಡುವುದರ ಫಲಸ್ವರೂಪವಾಗಿಯೇ ಅವನಿಗೆ ಲಾಭವಾಗುವುದೆಂದು ಮಾನವನು ಯೋಚಿಸುತ್ತಾನೆ. ಆದರೆ ವಾಸ್ತವದಲ್ಲಿ ಅಂಥ ಯಾವುದೂ ಇರದು.

ಮಾನವನಲ್ಲಿ, ಸ್ಥಾಯೀ ಇಲ್ಲವೆ ಸಾಮಯಿಕ, ಏಕಾಗ್ರತಿಯು ಐದು ಅವಸ್ಥೆಗಳಲ್ಲಿ ಉಂಟಾಗುತ್ತದೆ. ಅವುಗಳೆಂದರೆ—(೧) ಕ್ಷಿಪ್ತ (೨) ಮೂಢ (೩) ವಿಕ್ಷಿಪ್ತ (೪) ಏಕಾಗ್ರತೆ ಮತ್ತು (೫) ನಿರೋಧ. ಯಾವ ಜನರು ದೇವ-ದೇವಿಯರ ಬಾಗಿಲ ಬಳಿ ಬಲಿ ನೀಡುವರೋ, ಅವರು ಸಾಮಯಿಕ ಏಕಾಗ್ರತೆಯ ರೂಪದಲ್ಲಿ, ತಮ್ಮ ಅಚೇತನ ಮನದಿಂದ, ಅವಚೇತನ ಮನದಲ್ಲಿ, ಸೇರಿದ ಜ್ಞಾನದ ಉತ್ತರಣೆಗೆಯ್ಯುತ್ತಾರೆ. ಇದುವೇ ನಿಜವಾದ ಸಂಗತಿ.

ಸ್ವಪ್ನಾವಸ್ಥೆಯು ಒಂದು ಅದ್ಭುತ ಪ್ರಕಾರದ ಅವಸ್ಥೆಯಾಗಿದೆ. ಬೇಕಾದರೆ, ೯೫% ಅವಸ್ಥೆಗಳಲ್ಲಿ ಸತ್ಯವಿರದಿದ್ದರೂ ಸಹ, ೫% ಅವಸ್ಥೆಯಲ್ಲಿ ಸ್ವಪ್ನವು ಕಠೋರ ಸತ್ಯವಾಗಿ ಪರಿಣಮಿಸುತ್ತದೆ. ಹರಿದ ಹಳೆಯ ಕೌದಿಯ ಮೇಲೆ ಮುದುಡಿಕೊಂಡು ಮಲಗಿದ ಭಿಕ್ಷುಕನೂ ಸಹ, ಸ್ವಪ್ನದಲ್ಲಿ ತನ್ನನ್ನು ತಾನು ರಾಜನೆಂದು ಕಂಡುಕೊಳ್ಳುತ್ತಾನೆ. ಇತ್ತ ನಿಜವಾದ ರಾಜನೊಬ್ಬನು, ಸ್ವಪ್ನದಲ್ಲಿ ತಾನು ಧೂಳು ಪೆತ್ತಿದ ಹಾಸುಗೆಯ ಮೇಲೆ ಮಲಗಿದ ತಿರುಕನೆಂಬಂತೆ ಕಂಡುಕೊಳ್ಳುತ್ತಾನೆ. ಸ್ವಪ್ನದಲ್ಲಿ ಮಾನವನು ಹಾಹಾಕಾರ ಗೆಯ್ದು ಅಳುತ್ತಾನೆ. ಸ್ವಪ್ನದಲ್ಲಿಯೇ ಮಾನವನು ಸುಖ ಸಂತೋಷ ಪ್ರಾಪ್ತಮಾಡಿಕೊಂಡು ಆನಂದ ತುಂದಿಲನಾಗುತ್ತಾನೆ.

ಕಾಲ ರಾತೀರ ಸ್ವಪ್ನ ಆಮೀ
ಆಧೊ ಅಲೊ ಜೊ ಭೋನಾಯ್
ಸೇ ಏಕ ನೋತೂನ ದೇಶಾ
ದೇಖೀ ಛೀಣೋ ನಿರಾತಾಯ್

ಸೇಥಾ ಕೋಣ ಪೂಲ ಪೋಟಿಗೋ
ಬಲಕೋಣ ಚಾಂದ ಉಠೇಗೋ
ಸೇಥಾ ಕುಸುಮೇ ನಾಹಿಕ ಕಾಂಟಾ
ಸೇಥಾ ಜೀ ಬನೇ ನಾಹಿಕ ಭಾಂಟಾ.

ಸೇಥಾ ಪೂಲೇರ ಕಾಸನೇ ಕುಸುಮ ಕರೀರಾ
ಕಭೂ ನಾಹಿ ಮುರಛಾಯ
ದೇಖೀ ಛೀಣೋ ದೇಖೀ ಛೀಣೋ ನಿರಾಲಯ!

ಯಾವ ಮನುಷ್ಯನು ಸ್ವಪ್ನದಲ್ಲಿ ಪರಮ-ಪುರುಷನಿಗೆ ಸಂಬಂಧಿಸಿದ ವಸ್ತುಗಳನ್ನು ಕಾಣುವನೋ ಅವನ ಅಸ್ತಿತ್ವವು ಸಾರ್ಥಕವಾಗಿದೆ.

ಸ್ವಪ್ನೇ ತಾರ ದೇಖೀ ಛೀನು
ಸ್ವಪ್ನೇ ಹೊಲೊ ಪರಿಚಯ

ಸ್ವಪ್ನೇ ಭಾಲೊ ಬೇಸೇ ಛೀನೂ
ಡೇಕೆ ಛೀನೂ ಪ್ರೇಮಮಯ.

ಅನೇಕ ಮನುಷ್ಯರ ಜೀವನದಲ್ಲಿ, ಬರುವ ಪ್ರಸಂಗಗಳು ಎಂಥವಿರುವವೆಂದರೆ, ಆಗ ಅವನು ದಿನದ ಕಾಲವನ್ನು ಕಷ್ಟ ನೀಡುವ ಮುಳ್ಳಿನ ಸಮಾನವೆಂದು ಬಗೆಯುತ್ತಾನೆ. ರಾತ್ರಿಯ ಸಮಯದಲ್ಲಿ ಅವನು ಸ್ವಪ್ನದಲ್ಲಿ ಸುಖದುಃಖದ ಸೀಮೆಯಾಚೆ ಹೋಗಿಬಿಡುತ್ತಾನೆ. ಆ ಕಾಲದಲ್ಲಿ ಅವನು ತನ್ನ ಇಷ್ಟದೊಂದಿಗೆ ಆನಂದ ಸಾಗರದಲ್ಲಿ ಮೈಮರೆಯುತ್ತಾನೆ. ಅವನ ಅಸ್ತಿತ್ವವು ಚಿಕ್ಕ ದೊಡ್ಡ, ಏಟು ಇದಿರೇಟುಗಳು, ಬಣ್ಣಿಸಲಸದಳವಾದ ಆನಂದ ಸಾಗರದಲ್ಲಿ ವಿಲೀನವಾಗುತ್ತವೆ. ಯಾರು ಈ ರೀತಿಯ ಸ್ವಪ್ನಗಳನ್ನು ನೋಡುವರೋ, ಅವರು ಮಹಾ ಭಾಗ್ಯವಂತರು. ಅವರು ಮಾತ್ರ ಹೀಗೆ ಹೇಳಬಲ್ಲರು.

ಚೊಖೇ ದೇಖಾ ಪಾಈ ನಾಕ
ದೇಖಾ ಹೋಯ್ ಮನೇಮನೇ
ಸೇ ಮಿಲನ ಸುಂದರ

* * *

ಸಕಲ ದುಃಖಿಹರ
ಸ್ವಪ್ನೇ ಬಾಂಚಿಯಾಥಾಕೀ
ಭೂಲ ಢಾಕೀ ಜಾಗರಣೇ.

ಜಾಗೃತ ಅವಸ್ಥೆಯಲ್ಲಿಯೂ ಸಹ ಅವರು ತಮ್ಮ ಅಸ್ತಿತ್ವವನ್ನು ಒಂದು ತಂದ್ರಾವಸ್ಥೆಯ ಪರಿಸರದ ಸ್ವಪ್ನಮಯ ಮಾಧುರ್ಯದಿಂದ ಅಭಿಷೇಕಿಸುತ್ತಿರುತ್ತಾರೆ. ಆ ಅವಸ್ಥೆಯಲ್ಲಿ ಅವರ ಜೀವನದಲ್ಲಿ ಒಂದು ಸ್ವಪ್ನವೇ ವಾಸ್ತವ ಸತ್ಯವಾಗಿ ಬಿಡುತ್ತದೆ. ಈ ಕಾರಣದಿಂದ ಯಾವುದು ಜಾಗ್ರತ ಅವಸ್ಥೆಯಾಗಿರುವುದೋ ಅದು ಅವರಿಗೋಸ್ಕರ ಅರ್ಥರಹಿತವಾಗುತ್ತದೆ.

ಹಾಗಾದರೆ, ಆ ಸ್ವಪ್ನದ ಗುಂಗಿನಲ್ಲಿರುವ ಮಾನವನು ಜಗತ್ತಿನ ಕಲ್ಯಾಣವನ್ನು ಮಾಡಲಾರನೇನು? ನಿಶ್ಚಯವಾಗಿಯೂ ಮಾಡಬಲ್ಲನು. ಅವನು ಬಹಳಷ್ಟು ಒಳ್ಳೆಯ ರೀತಿಯಿಂದ ಕಲ್ಯಾಣ ಮಾಡಬಲ್ಲನು. ಆವನ ಆ ಸ್ವಪ್ನದ ಗುಂಗಿನ ಅವಸ್ಥೆಯು ಜಡತೆಯೇನಲ್ಲ. ಇದು ಜಾಗರಾವಸ್ಥೆಯಲ್ಲಿ, ಜೀವನಾವಸ್ಥೆಯಲ್ಲಿ ತಾರಕ ಬ್ರಹ್ಮನ ಚರಣ ಸ್ಪರ್ಶದಿಂದ ತನ್ನ ಪ್ರಾಪಂಚಿಕ ಅಸ್ತಿತ್ವವನ್ನು ಪೂರ್ಣರೂಪದಿಂದ ಕಾರ್ಯದಲ್ಲಿ ತೊಡಗಿಸುವ ಸದವಕಾಶವಾಗಿದೆ.

ಮನುಷ್ಯನಲ್ಲಿ ಯಾವ ವೃತ್ತಿಗಳು, ಜಡ ಪ್ರಪಂಚದಲ್ಲಿ, ವಿಶೇಷ ರೂಪದಿಂದ ಕಾರ್ಯ ಮಾಡುವವೋ ಅವುಗಳ ಸಂಖ್ಯೆ ಐದು. ಆಹಾರ, ನಿದ್ರಾ, ಭಯ, ಮೈಥುನ ಮತ್ತು ಧರ್ಮಸಾಧನೆ. ಇವುಗಳಲ್ಲಿ ಮೊದಲಿನ ನಾಲ್ಕು, ಪಶುಗಳಲ್ಲಿಯೂ ಉಂಟು. ಈ ಐದು ವೃತ್ತಿಗಳಲ್ಲಿ ಒಂದು ಅದ್ಭುತ ಸ್ವಭಾವವಿದೆ. ಏನೆಂದರೆ ಇವುಗಳಿಗೆ ಸ್ವಲ್ಪ ಉತ್ತೇಜನ ನೀಡಿದರೆ ಸಾಕು. ಇವು ಬಹಳಷ್ಟು ವರ್ಧಿಸುತ್ತವೆ. ಮತ್ತು ಸ್ವಲ್ಪ

ಹೆಚ್ಚು ಪ್ರಯತ್ನದಿಂದ ಇವುಗಳನ್ನು ನಿಯಂತ್ರಣಕ್ಕೊಳಪಡಿಸಬಹುದು. ಆದರೆ ಆರಂಭದಲ್ಲಿ ಸ್ವಲ್ಪ ಹೋರಾಟ ಹೂಡಬೇಕಾಗುತ್ತದೆ.

ಈ ವೃತ್ತಿಗಳಲ್ಲಿ ಮೊದಲಿನ ನಾಲ್ಕು, ಮುಖ್ಯವಾಗಿ ಜಡ ಪ್ರಚಂಚದ ಮತ್ತು ಗೌಣ ದೃಷ್ಟಿಯಿಂದ ಮಾನಸಿಕವಾಗಿವೆ. ಈ ಮೇರೆಗೆ, ಐದನೆಯದು, ಸರಿಯಾಗಿ ವಿಚಾರಿಸಿ ತಿಳಿದರೆ, ಜಾಗತಿಕ, ಮಾನಸಿಕ, ಮತ್ತು ಆಧ್ಯಾತ್ಮಿಕವಾಗಿದೆ. ಮನುಷ್ಯನ ಶಾರೀರಿಕ ಮತ್ತು ಮಾನಸಿಕ ವಿಕಾಸಕ್ಕೋಸ್ಕರ, ಮೊದಲಿನ ನಾಲ್ಕರ ಪ್ರಯೋಜನವು ಎಲ್ಲಕ್ಕಿಂತ ಕನಿಷ್ಠವಾಗಿದೆ. ಆದರೆ ಐದನೆಯದಾದ ಧರ್ಮಸಾಧನದ ಅಗತ್ಯವು ಅತ್ಯಂತಿಕವಾಗಿದೆ. ಎಷ್ಟು ಹೆಚ್ಚಾಗಿದೆಯೋ ಅಷ್ಟು ಒಳ್ಳೇದು. ಮೊದಲಿನ ನಾಲ್ಕನ್ನು, ಒಂದು ವೇಳೆ ಮನುಷ್ಯನು ಒಂದನ್ನು ಇನ್ನೊಂದರಲ್ಲಿ ಉದಾತ್ತೀಕರಿಸಿದ್ದರೆ ಇನ್ನಷ್ಟು ಒಳ್ಳೇದು. ಅರ್ಥಾತ್ ಆ ಅವಸ್ಥೆಯಲ್ಲಿ ಯಾವುದೊಂದರ ಅವಶ್ಯಕತೆಯೂ ಸಹ ಒಮ್ಮೆಲೇ ಇರದು.

ಇಲ್ಲಿ ನಾವು ನಿದ್ರೆಯ ವಿಚಾರ ಕುರಿತು ಆಲೋಚಿಸುತ್ತಿದ್ದೇವೆ. ಜಾಗೃತ ಅವಸ್ಥೆಯಲ್ಲಿ ಹೆಚ್ಚಿನ ಪರಿಶ್ರಮದ ಕಾರಣವಾಗಿ, ಸ್ನಾಯು ತಂತು, ದಣಿಯುತ್ತವೆ. ಮತ್ತು ಅವುಗಳಿಗೆ ವಿಶ್ರಾಮದ ಪ್ರಯೋಜನವು ಹೆಚ್ಚಾಗುತ್ತದೆ. ಜಾಗೃತ ಅವಸ್ಥೆಯಲ್ಲಿ ಚಿಂತನೆ ಮತ್ತು ಸ್ಮರಣೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಬೇಕಾಗುತ್ತದೆ. ಈ ಕಾರಣದಿಂದ, ಸ್ನಾಯು ಕೋಶಗಳು ದಣಿದು ಹೋಗುತ್ತವೆ. ಈ ಕಾರಣದಿಂದ, ಶಾರೀರಿಕ ಮತ್ತು ಮಾನಸಿಕ ಸ್ವಾಸ್ಥ್ಯಕ್ಕಾಗಿ, ನಿದ್ರೆಯ ಅಗತ್ಯವಿದೆ. ದಣಿದ ಸ್ನಾಯು ಕೋಶ ಮತ್ತು ಸ್ನಾಯು ತಂತುಗಳು, ತಮ್ಮಷ್ಟಕ್ಕೆ ತಾವು ನಿದ್ರೆಯ ಉಡಿಲಲ್ಲಿ ಬೀಳುತ್ತವೆ. ಯಾವ ಜನರು ಶಾರೀರಿಕ ಪರಿಶ್ರಮ ಮಾಡುವರೋ, ಅವರ ಪರಿಶ್ರಮದಿಂದ ಸ್ನಾಯುತಂತುಗಳು ಬಹಳ ಹೆಚ್ಚಾಗಿ ದಣಿಯುತ್ತವೆ. ಇದರಿಂದ ಅವರು ಹಾಸುಗೆಯ ಮೇಲೆ ಹೊರಳುತ್ತಲೇ ನಿದ್ರೆ ಹೋಗುತ್ತಾರೆ.

ಯಾವ ಜನರು ಹೆಚ್ಚಾಗಿ ಮಿದುಳಿನ ಉಪಯೋಗ ಮಾಡುವರೋ, ಅವರು ಸಹ, ಕೊಂಚ ಶಾರೀರಿಕ ಶ್ರಮ ಮಾಡಿದರೂ ಸಹ, ಅವರ ಸ್ನಾಯುಕೋಶಗಳ ದಣಿವಿನ ಕಾರಣ, ಅಡ್ಡಾಗುವುದೇ ತಡ ನಿದ್ರೆ ಹೋಗುತ್ತಾರೆ. ಆದರೆ ಯಾರು ಮಿದುಳಿನ ಬಳಕೆಯನ್ನು ಅತಿಕಡಿಮೆ ಮಾಡುವರೋ, ಮತ್ತು ಆ ಮಾನದಿಂದ ಸ್ನಾಯುತಂತುಗಳ ಕಾರ್ಯವು ಸಹ ಬಹಳಷ್ಟು ಕಡಮೆ ಇರುವುದೋ, ಅವರು ಸಹ, ನಿದ್ರಾ ಹೀನತೆಯ ವ್ಯಾಧಿಯಿಂದ ಬಳಲುತ್ತಾರೆ. ಇದು ಎಲ್ಲಿಯ ವರೆಗೆ ಮುಟ್ಟುವುದೆಂದರೆ, ಆ ಜನರು ನಿದ್ರಿಸಲೋಸ್ಕರ ಔಷಧಿ ಇಲ್ಲವೆ ಚುಚ್ಚುಮದ್ದಿಗೆ ಶರಣಾಗಬೇಕಾಗುತ್ತದೆ. ಈ ಉಪಚಾರದಿಂದ ಅವರ ಸ್ನಾಯು ಕೋಶ ಮತ್ತು ಸ್ನಾಯು ತಂತುಗಳು ತಮ್ಮ ಕಾರ್ಯವನ್ನು ನಿಲ್ಲಿಸಲು ಬಾಧ್ಯವಾಗುತ್ತವೆ. ಈ ರೀತಿ ಈ ಪ್ರಕಾರದ ಔಷಧಿ ಇಲ್ಲವೆ ಚುಚ್ಚುಮದ್ದುಗಳ ಪ್ರಯೋಗವು ಎಷ್ಟೊಂದು ಹಾನಿಕಾರಕವಾಗಿಯೆಂಬುದನ್ನು ಸಹಜವಾಗಿ ಅಂದಾಜಿಸಬಹುದಾಗಿದೆ.

ಶಾರೀರಿಕ ಮತ್ತು ಮಾನಸಿಕ ಸ್ವಾಸ್ಥ್ಯಕ್ಕೋಸುಗ, ಪ್ರಯೋಜನೆ ಬೀಳುವ ದೃಷ್ಟಿಯಿಂದ, ನಿದ್ರೆಯು ನಿಂದನೀಯವಲ್ಲ. ಆದರೆ, ಇತರ ನಾಲ್ಕು ವೃತ್ತಿಗಳಂತೆ,

ನಿದ್ರೆಗೂ ಸಹ ಉತ್ಸಾಹ ನೀಡಿದರೆ,ಮಾನವನು ದಿನದ ೨೪ ಘಂಟೆಗಳಲ್ಲಿ ೨೩, ಘಂಟೆಗಳ ವರೆಗೆ ಮಲಗಿರುತ್ತಾನೆ. ಈ ರೀತಿ ನಿದ್ರೆಯು ಮೃತ್ಯುವಿನ ಇನ್ನೊಂದು ಹೆಸರೇ ಸರಿ. ಮಾನವನು ಈ ಧರೆಯ ಮೇಲೆ ಕಾರ್ಯಗೈಯ್ಯಲು ಬಂದಿದ್ದಾನೆ. ಒಂದು ವೇಳೆ, ಅವನು ಹೆಚ್ಚಿನ ವೇಳೆಯನ್ನು ಮಲಗಿಕೊಂಡೇ ಕಳೆದರೆ, ಅವನು ತನ್ನ ಕಾರ್ಯ ಮಾಡಿ ಮುಗಿಸುವುದು, ಯಾವಾಗ? ಅವನ ಜೀವನದ ಬಹು ಭಾಗವಂತೂ ನಿದ್ರೆಯಲ್ಲಿಯೇ ಕಳೆದು ಹೋಗುತ್ತದೆ. ಇದು ನಿದ್ರೆಯ ಬೇರೊಂದು ಹೆಸರಲ್ಲದೇ ಮತ್ತೇನು?

ಜ್ಞಾನ ಶಾಸ್ತ್ರ ವಿನೋದನ
ಕಾಲಂ ಗಚ್ಛತಿ ಧೀಮತಾಮ್
ವ್ಯಸನೇನ ಚ ಮೂರ್ಖಾನಾಮ್
ನಿದ್ರಯಾ ಕಲಹೇನ ವಾ.

[ಧೀಮಂತ ಜನರು, ಜ್ಞಾನ ಶಾಸ್ತ್ರಗಳನ್ನು ಪಠಿಸುವುದರಲ್ಲಿ ತಮ್ಮ ಕಾಲವನ್ನು ಕಳೆಯುತ್ತಾರೆ. ಇತ್ತ ಮೂರ್ಖರು, ವ್ಯಸನಗಳಲ್ಲಿಯೇ, ನಿದ್ರೆಯಲ್ಲಿಯೇ, ಮತ್ತು ಕಲಹದಲ್ಲಿಯೇ ತಮ್ಮ ಕಾಲ ಕಳೆಯುತ್ತಾರೆ.]

ನಿದ್ರೆ ಮತ್ತು ಮೃತ್ಯುಗಳ ಕರಾಳ ಗಹ್ವರದಿಂದ ಬೆಳಕಿನತ್ತ ಮುನ್ನಡೆಯಲು, ಕತ್ತಲೆಯ ಗರ್ಭವನ್ನು ಭೇದಿಸಿ ಸುಂದರ ಪ್ರಕಾಶದತ್ತ ಮುನ್ನಡೆಯಲು, ಮಾನವನು ಬಯಸುತ್ತಾನೆ. ಕರ್ಮಪ್ರಧಾನ ಜೀವನವೇ ಆ ಸುಂದರ ಪ್ರಕಾಶವಾಗಿದೆ. ಇದನ್ನು ಮಾನವನು ಜಾಗ್ರತ ಅವಸ್ಥೆಯಲ್ಲಿ ಮಾತ್ರ ಪಡೆಯಬಲ್ಲನು. ಯಾವ ಮನುಷ್ಯನು ಸುಖ-ದುಃಖ, ಆಶೆ-ಹತಾಶೆಗಳ ಉಯ್ಯಾಲೆಯಲ್ಲಿ ಜೀಕುತ್ತಿರುವನೋ, ಅವನು ಈ ಸ್ಪಂದನದ ಅನುಭವ ಪಡೆಯುತ್ತಾನೆ. ಅವನೇಕೆ ಹೀಗೆ ಹೇಳುತ್ತಾನೆ?

ಆಮಿ ಆಂಧಾರೇ ವೆಂಧೇಛಿ ಘರ
ಆರೋರ ದೇಶೇರ ಪಾರೇ
ಛಾಯಾ ದಿಯೇ ಘೇರಾ ಸೇಜೇ
ಮರಣ ನದೀರ ಧಾರೇ

ನಾಈ ಠಿಕಾನಾ ಕೂಲ ಕಿನಾರಾ
ಚಲತೇ ಗಿಏ ದಿಶಾ ಹಾರಾ
ಆಂಧಾರ ರಾತೇರ ಆನಾಗೋನಾ
ಪಥ ಕೀ ಸುಧಾಈ ಜಾರೇ ತಾರೇ.

* * *

ನಿಂದುದೆನ್ನ ಮನೆಯು ಅಂಧಕಾರದಿ,
ಜ್ಯೋತಿ ಲೋಕದಾಚೆ ದಡದ ತಾಣದಿ;
ಛಾಯೆ ಮತ್ತೆ ಸುತ್ತಲೆಲ್ಲ ಮಸುಕಿದೆ
ಮರಣ ನದಿಯು ಬಳಿಯೆ ಹರಿದಿದೆ.

ದಂಡೆ ದಡಗಳಿಲ್ಲವಾಗಿದೆ;
ನಡೆಯುವಾಗ ಹಾದಿ ತಪ್ಪಿದೆ.
ಕಾಳ ರಾತ್ರಿ ಮರಳಿ ಬಂದು ಹೋಹುದು;
ಯಾರ ಕೇಳಿದಾಗ ಹಾದಿ ಸಿಗುವುದು?

ಈ ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿ ಅವಸ್ಥೆಗಳ ಪ್ರಕಾಶಕನೆಂದರೆ ಆ ಪರಮ ಪುರುಷನೇ ಸರಿ. ಈ ಕಾರಣದಿಂದ ಅವನು ಮಾತ್ರ ಜೀವಮನದ ಜಾಗ್ರತ, ಸ್ವಪ್ನ, ಸುಷುಪ್ತಿ ಮತ್ತು ತುರೀಯ ಅವಸ್ಥೆಗಳನ್ನು ತಲುಪಲು ಸಕ್ಷಮರಾಗುತ್ತಾರೆ. ಇದೆಲ್ಲವೂ ಅವನ ಕೃಪೆಯ ಫಲವಾಗಿದೆ; ಅವನ ಲೀಲಾನಂದದ ಸ್ಫೂರ್ತಿಯ ವೈಭವವಾಗಿದೆ. ಯಾವ ಪರಮಬ್ರಹ್ಮನ ಕೃಪೆಯಿಂದ, ಆಬ್ರಹ್ಮಸ್ತಂಬ— ಬ್ರಹ್ಮನಿಂದ ಹಿಡಿದು ಹುಲ್ಲು ಕಡ್ಡಿಯ ವರೆಗೆ— ಸ್ಪಂದಿತವಾಗುವುದೋ, ತೂಗಾಡುವುದೋ, ಆ ಪರಮ ಬ್ರಹ್ಮನ ಕೃಪೆಯ ಕಣದಲ್ಲಿ ಜೀವರ ಅಸ್ತಿತ್ವ ಬೋಧೆಯಿದೆ; ಅವರ 'ನಾನು–ತನ'ದ ಸಾರ ಸತ್ತೆಯು ಅಡಗಿದೆ.

ಮಾನವನು ಯಾವಾಗ ಸಾಧನೆಯಲ್ಲಿ ಆತ್ಮಜ್ಞಾನ ಪಡೆಯುವನೋ, ಆಗ ಅವ ನಿಗೆ ಅನುಭವವಾಗುತ್ತಿದೆ: "ಎಲೈ ಪರಮಪುರುಷ! ನೀನು ವಿರಾಟ ಪುರುಷನಾಗಿ ರುವೆ. ನೀನು ಅಳತೆಯ ಅಳವಿನಾಚೆಗಿರುವಿ." ನಾನು ಕ್ಷುದ್ರನು; ನಾನು ಅಳತೆಯ ಅಳವಿನಲ್ಲಿರುವೆ. ಆದರೆ ನಾನು ಅಳತೆಯ ಅಳವಿನಾಚೆಯ ಸತ್ತೆಯ ಅಂದರೆ ಅಪರಿಮೇ ಯದ ಕ್ಷುದ್ರ, ತುಚ್ಛ ಭಗ್ನಾಂಶನಾಗದ್ದೇನೆ. ನಾನು ನನ್ನ 'ನಾನು–ತನ'ದ ಸಂಕಲ್ಪಾ ತ್ಮಕ ಮತ್ತು ವಿಕಲ್ಪಾತ್ಮಕ ಭಾವಾನುಭೂತಿಗಳನ್ನು ನಿನ್ನಲ್ಲಿ ಸಮರ್ಪಿಸಿ, 'ನನ್ನ-ನಿನ್ನ' ಅಂತರವನ್ನು ಇಲ್ಲವಾಗಿಸುವೆ.

ಈ 'ನನ್ನ-ನಿನ್ನ' ಭೇದವು ಯಾವಾಗ ಸರಿದುಹೋಗುವುದೋ, ಆಗ ಮಾನ ವನು ಸಮಸ್ತ ಬಂಧನಗಳಿಂದ ಮುಕ್ತನಾಗುತ್ತಾನೆ.

ಮಾನವನ ಬಂಧನವಾದರೋ ಅನೇಕ ಪ್ರಕಾರದ್ದಿದೆ, ಮಾನವನು ಮುಖ್ಯವಾಗಿ ಮೂರು ರೀತಿಯ ಬಂಧನಗಳಿಂದ ಬದ್ಧನಾಗುತ್ತಾನೆ. ಅವುಗಳೆಂದರೆ ಆಧಿಭೌತಿಕ, ಆಧಿದೈವಿಕ ಮತ್ತು ಆಧ್ಯಾತ್ಮಿಕ. ಪರಮಪುರುಷನನ್ನು ಸ್ಮರಿಸಿ, ಯಾರು ತಮ್ಮ ಸಮಸ್ತ ಆಸ್ತಿತ್ವಿಕ ಮಾಧುರ್ಯವನ್ನು ಅವನಲ್ಲಿಯೇ ಸಮರ್ಪಿಸುವರೋ, ಅವರು ಈ ಮೂರೂ ಬಂಧನಗಳಿಂದ ಅತ್ಯಂತಿಕ ನಿವೃತ್ತಿ ಅರ್ಥಾತ್ ಮೋಕ್ಷವನ್ನು ಪಡೆಯುತ್ತಾರೆ. ಆದ್ದರಿಂದ ಶಿವನು, "ಈ ಅವಸ್ಥೆಯಲ್ಲಿ ಮಾನವನು ಸರ್ವ ಪಾಶಗಳನ್ನು ಹರಿದು ಹಾಕಿ ನಿತ್ಯಾನಂದದಲ್ಲಿ ಸಂಸ್ಥಿತಿಯ ಲಾಭ ಪಡೆಯುತ್ತಾನೆ, ಎಂದು ಹೇಳಿದ್ದಾನೆ.

ಪಾಟಣಾ: ೨೨–೭–೧೯೮೨

ಪ್ರವಚನ ೧೭

ಶಿವಬೋಧೆ—೨

ಶಿವೋಪದೇಶ–೯

"ಆತ್ಮಜ್ಞಾನಮಿದಂ ದೇವೀ ಪರಂ ಮೋಕ್ಷೈಕ ಸಾಧನಮ್
ಸುಕೃತಮ್ಮಾನವೋ ಭೂತ್ವಾ ಜ್ಞಾನೀ ಚೇನ್ಮೋಕ್ಷಮಾಪ್ನುಯಾತ್ ?"

(ಪಾರ್ವತೀ! ಈ ಆತ್ಮಜ್ಞಾನವೊಂದೇ ಮೋಕ್ಷ ಸಂಪಾದನೆಯ ಸಾಧನೆಯಾಗಿದೆ. ಪುಣ್ಯಕರ್ಮದ ಫಲದಿಂದ ಮಾನವನಾಗಿ ಜನಿಸಿದ ಮೇಲೆ ಮೋಕ್ಷ ಸಂಪಾದನೆಗಾಗಿ ಆತ್ಮಜ್ಞಾನ ಪಡೆಯಲೇಬೇಕು.)

ಪ್ರಾಚೀನ ಕಾಲದಲ್ಲಿ ಮಾನವನ ಪರಿಪ್ರಶ್ನೆಯ 'ಪ್ರತಿಭೂ'ಆಗಿದ್ದಳು,ಪಾರ್ವತಿ. ಮಾನವನ ಮನದಲ್ಲಿ ಯಾವ ಚಿರಂತನ ಜಿಜ್ಞಾಸೆ ಇದ್ದಿತೋ, ಅದನ್ನೆಲ್ಲ ಮಾನವರ ಪ್ರತಿನಿಧಿಯ ರೂಪದಿಂದ, ಪಾರ್ವತಿಯು ಶಿವನನ್ನು ಕುರಿತು ಪ್ರಶ್ನಿಸುತ್ತಿದ್ದಳು. ಸದಾ ಶಿವನ ಉತ್ತರಗಳಂತೂ ಎಂದೆಂದಿಗೂ, ಕಣ್ಣಿಗೂ ಮತ್ತು ಮನಸ್ಸಿಗೂ ಪ್ರಿಯಕರ ರತ್ನದಂತಿದ್ದವು. ಆದರೆ ಪಾರ್ವತಿಯ ಪ್ರಶ್ನೆಯೂ ಸಹ, ಅಷ್ಟೇ ಸುಂದರವಾಗಿತ್ತು. ಅವುಗಳನ್ನು ಕೇಳಿ ಯಾವುದೇ ಬಿಂದು ಬಾಡಿದ ವ್ಯಕ್ತಿಯು 'ಇವು ನನ್ನ ಮನದ ಪ್ರಶ್ನೆ ಗಳೇ ಆಗಿವೆಯಲ್ಲ!' ಎಂದುಕೊಳ್ಳುತ್ತಿದ್ದನು. ಈ ಕಾರಣದಿಂದ ಪಾರ್ವತಿಯ ಪ್ರಶ್ನೆಗಳು ಸಹ ಸುಂದರವಾಗಿ ಸಜ್ಜುಗೊಳಿಸಿ ಇಡಲಿಕ್ಕೆ ಯೋಗ್ಯವಾಗಿವೆ. ಪಾರ್ವತಿಯ ಈ ಬಹುಮೂಲ್ಯದ ಪ್ರಶ್ನೆಗಳ ಒಟ್ಟಾರೆ ಹೆಸರೇ 'ನಿಗಮ ಶಾಸ್ತ್ರ' ಎಂದು. ಈ ನಿಗಮ ಶಾಸ್ತ್ರವು ಒಂದು ಉನ್ನತ ಕೋಟಿಯ ಪರಿಪ್ರಶ್ನೆಯ ಸಮಾಹಾರವಾಗಿದೆ. ಶಿವನ ಉತ್ತರವೇನೋ ದಾರ್ಶನಿಕ ಬೆಳಕಿನಿಂದ ರುಗಮಗಿಸುತ್ತಿರಬಹುದು. ಆದರೆ ಅವುಗಳ ವ್ಯಾವಹಾರಿಕ ಮೂಲ್ಯವು ದಾರ್ಶನಿಕ ಮೂಲ್ಯವನ್ನು ಮುಚ್ಚಿದೆ. ಇನ್ನಷ್ಟು ಒಳ್ಳೇ ರೀತಿಯಿಂದ ಹೇಳುವುದಾದರೆ, ಶಿವನ ದಾರ್ಶನಿಕ ವ್ಯಾಖ್ಯೆಯು ವ್ಯಾವಹಾರಿಕ ಮೂಲ್ಯದಿಂದ ಉಜ್ಜ್ವಲವಾಗಿದೆ.

ಪಾರ್ವತಿಯ ಪ್ರಶ್ನೆಯು ನಿಗಮ. ಮತ್ತು ಶಿವನ ಉತ್ತರವು ಆಗಮ. ತಂತ್ರ ದಲ್ಲಿ ಇವೆರಡನ್ನೂ ಹಂಸದ ಎರಡು ರೆಕ್ಕೆಗಳೆಂದು ಮನ್ನಿಸಿ ಕರೆಯುತ್ತಾರೆ. ಹೇಗೆಂ ದರೆ, ಒಂದೇ ರೆಕ್ಕೆಯುಳ್ಳ ಪಕ್ಷಿಯು ಹಾರಲಾರದು; ತಂತ್ರವು ಸಹ ಅದೇ ರೀತಿ,

ಆಗಮ–ನಿಗಮಗಳೆರಡರಿಂದ ಸ್ವಯಂಪೂರ್ಣವಾಗಿದೆ. ಒಂದನ್ನು ಬಿಟ್ಟರೆ, ತೀರಿತು; ತಂತ್ರದ ಮೂಲ ಸತ್ತೆಗೇ ಪೆಟ್ಟುಬೀಳುತ್ತದೆ.

ಈ ಶ್ಲೋಕದಲ್ಲಿ ಪಾರ್ವತಿಯ ಪ್ರಶ್ನೆಗೆ ನೀಡಿದ ಉತ್ತರದಲ್ಲಿ ಶಿವನು ಹೇಳುವುದೇನೆಂದರೆ––ಉಪಯುಕ್ತ ಅನುಶೀಲನೆಯ ಮೂಲಕ ಆತ್ಮಜ್ಞಾನ ಪಡೆಯುವುದೇ ಮೋಕ್ಷ ಸಾಧನೆಯ ಏಕಮಾತ್ರ ಹಾದಿಯಾಗಿದೆ. ಆತ್ಮಜ್ಞಾನವಾವುದು? ಎಂಬುದನ್ನು ಸ್ವಲ್ಪ ಮೊದಲು ವಿಶದವಾಗಿ ಹೇಳಿದ್ದೇನೆ. (ಶಿವೋಪದೇಶ–೨) ಇಲ್ಲಿ, ಆತ್ಮಜ್ಞಾನದ ಸಾಧನೆಯ ಹೊರತು ಮೋಕ್ಷ ಪ್ರಾಪ್ತಿಯು ಅಸಾಧ್ಯ ಎಂದು ಹೇಳಲಾಗಿದೆ. ಕೆಲವರೇನೋ ಹೇಳುತ್ತಾರೆ: ಆತ್ಮಜ್ಞಾನ ಸಂಪಾದನೆಗೋಸ್ಕರ ಭಕ್ತಿಮಾರ್ಗವೇ ಸರ್ವೋತ್ಕೃಷ್ಟವೆಂದು. ಆದರೆ ಇಲ್ಲಿ ಭಕ್ತಿ ಶಬ್ದದ ಬಳಕೆಯೇ ಇಲ್ಲ. ಹೀಗಿರುವುದಕ್ಕೆ ಮುಖ್ಯ ಕಾರಣವೆಂದರೆ, ಶೈವ ಜಗತ್ತಿನ ಆರಂಭದಲ್ಲಿ, ಸಾಧನಾ ಮಾರ್ಗದಲ್ಲಿ 'ಭಕ್ತಿ' ಶಬ್ದದ ಬಳಕೆಯೇ ಇರುತ್ತಿರಲಿಲ್ಲ. ಇದು ಅನಂತರದ ಕಾಲದಲ್ಲಿ ಬಳಕೆಯಾಗಪತ್ತಿತು. ಸಾಧನ ಮಾರ್ಗಕ್ಕಾಗಿ ಒಳ್ಳೇ ಮೂಲ್ಯವಾದ ಉಪದೇಶವು ಹೀಗಿದೆ:

"ಮೋಕ್ಷ ಕಾರಣ ಸಾಮಗ್ರ್ಯಯಾಂ ಭಕ್ತಿ ರೇವಗರಿಯಸೀ"

ಈ ಉಪದೇಶವು ಅಂದಾಜು ಹದಿನೈದು ನೂರು ವರ್ಷ ಮೊದಲಿನದಾಗಿದೆ. ಅರ್ಥಾತ್ ಶಿವನ ಕಾಲದಿಂದ ಬಹು ಕಾಲಾನಂತರದ್ದಾಗಿದೆ.

ಇಲ್ಲಿ ಶಿವನು ಹೇಳುವುದೇನಂದರೆ, ಆತ್ಮಜ್ಞಾನವೇ ಮೋಕ್ಷಪ್ರಾಪ್ತಿಯ ಹಾದಿಯಾಗಿದೆ. ಇದಕ್ಕಿಂತ ಮೊದಲು ಬಹಳಷ್ಟು ಒಳ್ಳೇ ರೀತಿಯಿಂದ ಹೇಳಲಾಗಿದೆ ಮತ್ತು ತಿಳಿಸಲಾಗಿದೆಯಷ್ಟೇ. ಅದೆಂದರೆ—ಆತ್ಮಜ್ಞಾನ ಸಂಪಾದಿಸಲು ಸಾಧನೆ ಮತ್ತು ನಿಷ್ಠೆಗಳು ಅತ್ಯಂತ ಆವಶ್ಯಕವಾಗಿದೆ. ಇದಲ್ಲದೆ ಸರ್ವವನ್ನೂ ತೊರೆದು 'ಏಕ'ದತ್ತ ತನ್ನ ಸಮಸ್ತ ಮಾಧುರ್ಯವನ್ನು ಪರಮಶಿವನ ಮಧುರ ಮಮತೆಯಲ್ಲಿ ಪೂರ್ಣಾಂಜಲಿ ನೀಡುವುದರಿಂದ, ಮಾನವನಿಗೆ ಪರಮ ಶ್ರೇಯಸ್ಸಿನ ಪ್ರಾಪ್ತಿಯಾಗುವುದೆಂದೂ ತಿಳಿಸಲಾಗಿದೆ. ಮತ್ತು ಆಗ ಮಾತ್ರ ಆತ್ಮಜ್ಞಾನ ದೊರೆಯುತ್ತದೆ. ಇದಕ್ಕಿಂತ ಮಧುರವಾದ ಮತ್ತು ಗಂಭೀರವಾದ ಭಕ್ತಿ ತತ್ತ್ವದ ವ್ಯಾಖ್ಯೆಯು ಬೇರಾವುದಿರಬಹುದು?

ಆದರೆ ಇದನ್ನಾರು ಮಾಡಬಲ್ಲರು? ಈ ಆತ್ಮಜ್ಞಾನದ ಅಧಿಕಾರಿ ಯಾರಾಗಬಲ್ಲರು? ಎಂದು ಶಿವನು ಹೇಳುತ್ತಾನೆ. ಶಿವನು ಜಾತಿಭೇದ, ಗೋತ್ರ ಭೇದ ಮತ್ತು ವರ್ಣ ಭೇದ ಇತ್ಯಾದಿ ಯಾವುದನ್ನೂ ಮನ್ನಿಸುವುದಿಲ್ಲ. ಆದ್ದರಿಂದ ಅವನು ಅಧಿಕಾರ ಭೇದದ ನಿರ್ಧಾರವನ್ನು, ಯಾವ ರೀತಿ ಮಾಡಿದನು? ಯಾವಾಗ ಜೀವನು ಜನ್ಮ ಜನ್ಮಾಂತರದ ಸ್ವೀಕೃತಿಯಿಂದ ಮಾನವತ್ವವನ್ನು ಪಡೆಯುವನೋ, ಮನುಷ್ಯತ್ವದ ಅಭಿಜ್ಞಾನವನ್ನು ಪಡೆದುಕೊಳ್ಳುವನೋ, ಆಗಲೇ ಅವನು ಆತ್ಮಜ್ಞಾನ ಪ್ರಾಪ್ತ ಮಾಡಿಕೊಳ್ಳುವ ಅಧಿಕಾರಿಯಾಗಿ ಎಣಿಸಲ್ಪಡುತ್ತಾನೆ.

ಈ ಒಂದು ಪ್ರಶ್ನೆ ಏಳುತ್ತದೆ. ಅದೆಂದರೆ–ಪ್ರತಿ ಸಂಚರ ಧಾರೆಯಲ್ಲಿ, ಬೇರೆ ಬೇರೆ ಜೀವಿಗಳು ಒಂದುದಿನ ಸ್ವಾಭಾವಿಕ ನಿಯಮಾನುಸಾರ, ಮಾನವತ್ವದ ಪರಿಧಿಯಲ್ಲಿಯಂತೂ ಬಂದೇ ಬರುತ್ತವೆ. ಮರಳಿ ಮಾನವತ್ವ ಪ್ರಾಪ್ತಿಗಾಗಿ ಬಹು ಜನ್ಮ ತಳೆಯುವ ಮಾತೆಲ್ಲ ಬರುತ್ತದೆ. ನಿಜವಾಗಿ ಪ್ರತಿಸಂಚರ ಧಾರೆಯು ಜೀವಿಯಲ್ಲಿ,

ಬೇರೆ ಬೇರೆ ಬೇರೆ ಸ್ತರದ ಮೇಲೆ, ಒಂದು ವಿಶಿಷ್ಟ, ಸುವ್ಯವಸ್ಥಿತ ಪದ್ಧತಿಯ ಹಾದಿಯಿಂದ ಮುನ್ನಡೆಯುತ್ತದೆ. ಯಾವ ಜೀವವು ಪ್ರತಿಸಂಚರ ಧಾರೆಯಲ್ಲಿ ಎಲ್ಲಕ್ಕಿಂತ ಉನ್ನತವಾಗಿರುವುದೋ, ಅದು ಮುಂದಿನ ಸ್ತರದಲ್ಲಿ ಆವಶ್ಯವಾಗಿ ಮಾನವಜನ್ಮವನ್ನು ಪಡೆಯುತ್ತದೆ. ಮತ್ತು ಅವನನ್ನು ಮನುಷ್ಯನೆಂದೂ ಕರೆಯುತ್ತಾರೆ. ಇದಕ್ಕೆ ಕಾರಣವೇನೆಂದರೆ, ಅವನ ಶರೀರವು ಮನುಷ್ಯನ ಶರೀರದಂತೆಯೇ ಇದೆ. ಆದರೆ ಅವನ ಆವಸ್ಥಿತಿಯು ಪಶುತ್ವ ಮತ್ತು ಮನುಷ್ಯತ್ವಗಳ ಸೀಮಾರೇಖೆಯಲ್ಲಿದೆ. ಈ ಕಾರಣದಿಂದ ಬೇಕಾದರೆ ಶರೀರವು ಮನುಷ್ಯನ ಶರೀರದಂತಿರಲಿ; ಆದರೆ ಚಿಂತನೆ, ಸ್ಮರಣೆ ಮತ್ತು ಆಚರಣೆಗಳಲ್ಲಿ ಅವನು ಹೆಚ್ಚು ಕಡಿಮೆ ಮನುಷ್ಯನಂತಿರಲಿ; ಆದರೆ ಪಶು ಜೀವನದ ಸಂಸ್ಕಾರಗಳು ಅವನ ಸರ್ವಸತ್ತೆಯಲ್ಲಿ ತುಂಬಿ ತುಳುಕುತ್ತವೆ. ಮತ್ತು ಅವನಲ್ಲಿ ಆಧ್ಯಾತ್ಮ–ಜೀತನೆಯು ಅರಳುವಿಕೆಯು ಬಹುಕಡಿಮೆ ಇರುತ್ತದೆ. ಅವನು ಹೆಚ್ಚಾಗಿ ಪಶುಗಳಿಗೆ ಸುಲಭ ಸಾಧ್ಯವಾದ ವೃತ್ತಿಗಳತ್ತ ಧಾವಿಸುತ್ತಾನೆ. ಅವನು ಒಳ್ಳೆಯ ಮಾತುಗಳನ್ನು ಕೇಳಲು ಇಷ್ಟಪಡುವುದೇ ಇಲ್ಲ. ಒಂದು ವೇಳೆ ಕೇಳಿದರೂ, ತಿಳಿದುಕೊಳ್ಳಲಿಚ್ಛಿಸುವುದಿಲ್ಲ. ಒಂದು ವೇಳೆ,ತಿಳಿಯಲಪೇಕ್ಷಿಸಿದರೂ ತಿಳಿದುಕೊಳ್ಳಲು ಸಮರ್ಥನಾಗುವುದಿಲ್ಲ.

ಈ ಪ್ರಕಾರ ಮಾನವನು ಶಾರೀರಿಕ ದೃಷ್ಟಿಯಿಂದೇನೋ ಮನುಷ್ಯನಾಗಿರಬಹುದು. ಆದರೆ ಬೌದ್ಧಿಕ ದೃಷ್ಟಿಯಿಂದ ಪೂರ್ಣವಾಗಿ ಮನುಷ್ಯನಾಗಿರಲಾರನು. ಅವನು ಸ್ವಲ್ಪ ಸ್ವಲ್ಪ ಮನುಷ್ಯತ್ವದ ಸ್ತರದಲ್ಲಿರುತ್ತಾನೆ. 'ಧರ್ಮವು ವಿಷದಂತಿನೆ. ಧರ್ಮವನ್ನು ಬಿಟ್ಟರೂ ಸಹ ಜೀವನ ನಡೆಯುತ್ತದೆ, ಎಂದು ಆ ಜನರು ತಪ್ಪಾಗಿ ಅಜ್ಞಾನವಶರಾಗಿ ಹೇಳುತ್ತಾರೆ. ಆ ಜನರು ಯಾವ ಪಾಪವನ್ನೂ ಪಾಪವೆಂದು ಹೇಳುವುದಿಲ್ಲ. ಎಲ್ಲ ಕಾಲದಲ್ಲಿಯೂ ಗೋಷ್ಠಿ–ಸ್ವಾರ್ಥವನ್ನೋ ಇಲ್ಲವೆ ವ್ಯಷ್ಠಿ–ಸ್ವಾರ್ಥವನ್ನೋ ಹಿಡಿದುಕೊಂಡು ಗುಂಗಿನಲ್ಲಿರುತ್ತಾರೆ. ಅವರು ಮನುಷ್ಯನನ್ನು ಪರಿಚಯಿಸುವ ಕೆಲವೇ ಅಂಶಗಳನ್ನು ಮಾತ್ರ ಹೊಂದಿರುತ್ತಾರೆ. ಏಕೆಂದರೆ, ಮನುಷ್ಯನೆಂದು ಗುರುತಿಸಲು ಯಾವ ವೈದೂಷ್ಯದ ಅಗತ್ಯವಿದೆಯೋ, ಅದು ಅವರಲ್ಲಿ ಇರದು. ಈ ಪ್ರಕಾರದ ಮನುಷ್ಯನು ಜನ್ಮ ಜನ್ಮಾಂತರದ ವರೆಗೆ, ಯಾವ ಪುಣ್ಯವನ್ನಾಚರಿಸುವನೋ, ಆ ಕಾರಣದಿಂದ ಅವನು ಉನ್ನತ ಬುದ್ಧಿಶಾಲಿಯಾಗುತ್ತಾನೆ. ಮತ್ತು ಸ್ಥಿರ ಬುದ್ಧಿಯ ಮನುಷ್ಯರಲ್ಲಿ ಪರಿಣಮಿಸುತ್ತಾರೆ.

ಇಂಥ ಉನ್ನತಧೀ ಮತ್ತು ಸ್ಥಿರಧೀ ಹೊಂದಿದ ಮನುಷ್ಯರಲ್ಲಿ, ಲೌಕಿಕ ದೃಷ್ಟಿಯಿಂದ ಮನ್ನಿಸಲ್ಪಡುವ ವಿದ್ಯಾಬುದ್ಧಿಗಳಿರಬಹುದು; ಇರಲಿಕ್ಕಿಲ್ಲ. ಆದರೆ ಅವರು ಆತ್ಮಜ್ಞಾನದ ಅಧಿಕಾರಿಗಳೆಂದು ಗಣಿಸಲ್ಪಡುತ್ತಾರೆ. ಅನೇಕ ಜನರು ಉನ್ನತ ಪ್ರಾರಬ್ಧದಿಂದಾಗಿ, ಅತಿ ಚಿಕ್ಕ ವಯಸ್ಸಿನಲ್ಲಿಯೇ ಧರ್ಮ ಜಗತ್ತಿನ ಮರ್ಮವನ್ನು ಮುಟ್ಟುತ್ತಾರೆ. ಆದ್ದರಿಂದ, ಯಾರ ಅಸ್ತಿತ್ವವು ಪುಣ್ಯಕರ್ಮದಿಂದ ಸಾರ್ಥಕವಾಗಿದೆಯೋ, ಆ ಮನುಷ್ಯನೇ ಈ ಆತ್ಮಜ್ಞಾನ ಪಡೆಯಲು ಅಧಿಕಾರಿಯಾಗಿದ್ದಾನೆ. ಮತ್ತು ಈ ಆತ್ಮಜ್ಞಾನ ಸಂಪಾದನೆಯೇ ಮೋಕ್ಷವಾಗಿದೆ. ಏಕೆಂದರೆ, ಆತ್ಮಜ್ಞಾನದ ಪ್ರಾಪ್ತಿಯೊಂದಿಗೇನೇ, ಮಾನವನು ಈ ವಿವಿಧ ಬಂಧನಗಳ ಜ್ವಾಲೆಯಿಂದ ಸ್ಥಾಯೀ ರೂಪ

ದಿಂದ ಮುಕ್ತಿ ಪಡೆಯಬಲ್ಲನು. ಈ ಸ್ಥಾಯೀ ಮುಕ್ತಿಯೇ ಮೋಕ್ಷವಾಗಿದೆ.

ಶಿವೋಪದೇಶ–೦೦

"ಆತ್ಮಸ್ಥಿತಂ ಶಿವಂ ತ್ಯಕ್ತ್ವಾ ಬಹಿಸ್ಥಂ ಯಃ ಸಮರ್ಚಯೇತ್
ಹಸ್ತಸ್ಥಂ ಪಿಂಡಮುತ್ಸೃಜ್ಯ ಭ್ರಮತೇ ಜೀವಿತಾಶಯಾ."

(ತನ್ನ ಆತ್ಮದಲ್ಲಿಯೇ ಅಡಗಿದ ಶಿವನನ್ನು ಬಿಟ್ಟು, ಯಾರು ಹೊರಗಿರುವುದರ ಅರ್ಚನೆಯಲ್ಲಿ ತೊಡಗಿರುವರೋ, ಅದರಃ ಕೈಯಲ್ಲಿರುವ ಪಿಂಡವನ್ನು ಬಿಟ್ಟು, ಜೀವ ಹಿಡಿಯಲು ಅನ್ನಕ್ಕಾಗಿ ಪರಿದಾಡುವವನಂತೆಯೇ ಸರಿ.)

ಈ ವಿಶ್ವದಲ್ಲಿ ಯಾರೂ ಒಂಟಿಗರಾಗಿದ್ದಿಲ್ಲ; ಒಂಟಿಗರಾಗಿಲ್ಲ; ಮತ್ತು ಒಂಟಿಗರಾಗಿರುವುದೂ ಇಲ್ಲ.ಆದಿಯಿಂದ ಅನಂತದ ವರೆಗೆ ಹಬ್ಬಿದ ಈ ಭೌಮದ ಗರ್ಭದಲ್ಲಿ ಎಲ್ಲ ಸತ್ತೆಗಳೂ ಯಾವ ಪ್ರಕಾರ ಗತಿಶೀಲವಾಗಿಯೇ ಇದೆಯೋ, ಅದೇ ರೀತಿ, ಎಲ್ಲ ಸತ್ತೆಗಳೊಂದಿಗೇ ವಜ್ರಕ್ಕಿಂತ ಕಠೋರನಾದ,ಸರ್ವನಿಯಂತ್ರಕ ಕಠೋರ ಪುರುಷನ ಕೋಮಲ ಹಸ್ತಗಳ ಸ್ಪರ್ಶವಿದೆ. ಯಾವ ಪ್ರಕಾರ ಅವನು ಪ್ರೋತಯೋಗದಲ್ಲಿ, ತನ್ನನ್ನು ತಾನೇ, ಒಳಗೆ ಮತ್ತು ಹೊರಗೆ, ಎರಡೂ ಕ್ಷೇತ್ರಗಳಲ್ಲಿ, ಸಜ್ಜುಗೊಳಿಸಿಕೊಂಡಿರುವನೋ, ಅದೇ ಪ್ರಕಾರ, ಓತಯೋಗದಲ್ಲಿ ಜೀವರ ಮನ-ಮನದಲ್ಲಿ, ವಿಕಾಂತಿಕ ಮೂಲೆಗಳಲ್ಲಿ ಕಾಂತಿ ಪೂರ್ಣ ಮಣಿಯಂತೆ ಹೊಳೆಯುತ್ತಾನೆ.

ಬಾಹ್ಯ ಆಕಾಶವು ಅವನ ಜ್ಯೋತಿಯಿಂದ ಉದ್ಭಾಸಿತವಾಗಿದೆ. ಇತ್ತ ಹೃದಯದ ಆಕಾಶವೂ ಸಹ, ಅವನ ಪ್ರಕಾಶದಿಂದಲೇ ರುಗಮಗಿಸುತ್ತದೆ.

"ನತತ್ರ ಸೂರ್ಯೋಭಾತಿ; ನ ಚಂದ್ರ ತಾರಕಮ್,
ನೇಮಾ ವಿದ್ಯುತೋ ಭಾಂತಿ ಕುತೋಽಯಮಾಗ್ನಿಃ

ಯಾರ ಜ್ಯೋತಿಯಿಂದ ಬಾಹ್ಯ ಜಗತ್ತು ಉದ್ಭಾಸಿತವಾಗಿದೆಯೋ, ಅವನ ಜ್ಯೋತಿಯಿಂದಲೇ ಸಮಸ್ತ ಜ್ಯೋತಿಷ್ಕಗಳು ಉದ್ಭಾಸಿತವಾಗುತ್ತವೆ. ಅವನನ್ನು ಬಿಟ್ಟು ಬೇರಾರದೂ ನಿಜವಾದ ಜ್ಯೋತಿಯಲ್ಲ. ಇತರರೆಲ್ಲರ ಜ್ಯೋತಿಗಳು ಅವನ ಜ್ಯೋತಿಯ ಪ್ರತಿಫಲನವಾಗಿವೆ. ಆ ಜ್ಯೋತಿಯ ಕಾಂತಿಯೆದುರು ಸೂರ್ಯನ ಪ್ರಕಾಶವು ಸಹ ಕತ್ತಲೆಯಿಂದ ಸುತ್ತುವರಿದಂತಾಗುತ್ತದೆ; ಹೊಳೆಯುವ ಚಂದ್ರನು ಕರಿಪರದೆಯಿಂದ ಮುಚ್ಚಿದಂತಾಗುತ್ತಾನೆ. ತೊಳಗುವ ಮಿಂಚುಗಳು ಕುರುಡುಗತ್ತೆಯಲ್ಲಿ ಅಡಗಿಹೋಗುತ್ತವೆ. ಇನ್ನು ಈ ಉರಿಯುವ ಅಗ್ನಿಯ ಮಾತೇನು? ಅವನು ಜ್ಯೋತಿರ್ಮಯನಾಗಿದ್ದಾನೆ; ಈ ಕಾರಣದಿಂದಲೇ ಸರ್ವವೂ ಜ್ಯೋತಿರ್ಮಯವಾಗಿದೆ. ಅವನ ಜ್ಯೋತಿಯಿಂದ ಸರ್ವವೂ ಧನ್ಯವಾಗುತ್ತದೆ; ಉದ್ಭಾಸಿತವಾಗುತ್ತದೆ; ವರೇಣ್ಯವಾಗುತ್ತದೆ. ಈ ಯಾವ ವಿರಾಟ ಸತ್ತೆ ಇಲ್ಲವೆ ವಿರಾಟಪುರುಷನಿರುವನೋ, ಅವನ ಬಳಿ ಯಾವುದೂ ಹೇಯವಲ್ಲ. ಯಾವುದೂ ತುಚ್ಛತೆಗೆ ಪಾತ್ರವಲ್ಲ. ಅವನು ಸರ್ವ ಅಸ್ತಿತ್ವದ ಮಧ್ಯಮಣಿಯಾಗಿದ್ದಾನೆ. ಅವನು ಎಲ್ಲರಲ್ಲಿರುವ ಪ್ರಕಾಶಮಯನಾದ ಮಿನುಗುವ ಸತ್ತೆಯಾಗಿದ್ದಾನೆ. ತನ್ನ ಪ್ರಾಣಕ್ಕಿಂತ ಪ್ರಿಯವಾದ ಸಂತಾನವನ್ನು

ಆನಂದದಿಂದ ತುಂಬಲೋಸುಗವೇ ಅವನು ಸರ್ವರಲ್ಲಿ ಚರಮ ಪ್ರಕರ್ಷ ರೂಪದಲ್ಲಿ ತಾನು ಅಡಗಿಕೊಂಡಿದ್ದಾನೆ. ಮತ್ತು ಕಂದರೊಂದಿಗೆ ಕಣ್ಣು–ಮುಚ್ಚಾಲೆಯಾಟ ಆಡುತ್ತಿದ್ದಾನೆ.

ಬೃಹಚ್ಚ ತದ್ದಿವ್ಯಮಚಿಂತ್ಯ ರೂಪಮ್ ಸೂಕ್ಷ್ಮಾಚ್ಚ ತಂ
ಸೂಕ್ಷ್ಮತರಂ ವಿಭಾತಿ ।
ದೂರಾತ್ ಸುದೂರೇ ತದಿಹಾಂತಿಕೇ ಚ ಪಶ್ಯತ್-ಸ್ವಿಹೈವ
ನಿಹಿತಂ ಗುಹಾಯಾಂ ॥

(ಆ ಬೃಹತ್ತಾದ, ದಿವ್ಯವಾದ, ಅಚಿಂತ್ಯವಾದ, ಸೂಕ್ಷ್ಮಕ್ಕಿಂತಲೂ ಸೂಕ್ಷ್ಮತರವಾದ, ದೂರಕ್ಕಿಂತಲೂ ದೂರವಾದ, ಸನಿಹಕ್ಕಿಂತಲೂ ಅತಿ ಸನಿಹವಾದ, ಅವನನ್ನು ತನ್ನ ಹೃದಯದಲ್ಲಿ ಅಡಗಿರುವಂತೆ ಮಾತ್ರ ಕಾಣಬಹುದು.)

ಸತ್ತಾಬೋಧವು ರತ್ನದ ಪೆಟ್ಟಿಗೆಯಲ್ಲಿ ಸುರಕ್ಷಿತವಾಗಿದೆ. ಅದನ್ನು ಪಡೆಯಲು ಅಲ್ಲಿ ಇಲ್ಲಿ ಅಲೆದು ಹಾದಿಯಲ್ಲಿ ಧೂಳೆಬ್ಬಿಸಬೇಕಾಗಿಲ್ಲ. ಸ್ವಲ್ಪ ಮಾತ್ರ ಕೈಚಾಚಿ ಇಲ್ಲವೆ ಕಣ್ಣು ತರೆದು ನೋಡುವುದರಿಂದ ಅವನನ್ನು ಪಡೆಯಬಹುದು. ಯಾರು ಅಂತರ್ಲೋಕದ ಈ ಉಜ್ವಲ ಮಣಿಯನ್ನು ಮರೆತು, ಹೊರ-ಜಗತ್ತಿನಲ್ಲಿ ಆ ಜ್ಯೋತಿ ಕಾಂತಿಯನ್ನು ಅರಸುವ ಪ್ರಯತ್ನ ಮಾಡುವನೋ, ಅವನು ಪಡುವ ಶ್ರಮವೆಲ್ಲ ಪಶುವಿನ ಶ್ರಮವಲ್ಲದೆ ಬೇರೇನು? ಶಿವನು ಹೀಗೆ ಹೇಳಿದ್ದಾನೆ: "ಮಾನವನು ಈ ಪ್ರಕಾರ ಪಶುವಿನಂತೆ ಏಕೆ ದಣಿಯಬೇಕು? ಮಾನವನೇಕೆ ತನ್ನ ಕೈಯಲ್ಲಿಯ ತುತ್ತನ್ನು ದೂರ ಚೆಲ್ಲಿ ಮನೆಮನೆಗೆ ತಿರುಕನಾಗಿ ಅಂಡಲೆಯುತ್ತಿದ್ದಾನೆ? ಆದ್ದರಿಂದಲೇ ಶಿವನು, ಒಳಲೋಕದತ್ತ ನಡೆ; ಇನ್ನೂ ಒಳಗೆ, ಇನ್ನಷ್ಟು ಒಳಗೆ" ಎಂದು ಹೇಳಿದ್ದಾನೆ.

ಶಿವೋಪದೇಶ–೦೧

"ಇದಂ ತೀರ್ಥಮಿದಂ ತೀರ್ಥಂ ಭ್ರಮಂತಿ ತಾಮಸಾಃಜನಾಃ
ಆತ್ಮ ತೀರ್ಥಂ ನ ಜಾನಾತಿ ಕಥಂ ಮೋಕ್ಷಂ ವರಾನನೇ"

(ತಾಮಸಿಕ ಜನರು ಒಂದು ತಾಣದಿಂದ ಇನ್ನೊಂದು ತಾಣಕ್ಕೆ ಯಾತ್ರಾರ್ಥಿಗಳಾಗಿ ಅಂಡಲೆಯುತ್ತಾರೆ. ಆಗ ತಮ್ಮ ಹೃದಯದಲ್ಲಿ ಆ ಯಾತ್ರೆಯ ತೀರ್ಥವನ್ನು ಕಂಡುಕೊಳ್ಳದೆ, ಅವರೆಂತು ಮೋಕ್ಷ ಪಡೆಯಬಹುದು?)

ಸಾಮಾನ್ಯ ಮಾನವರಲ್ಲಿ ತೀರ್ಥಗಳನ್ನು ಕುರಿತು ಅದಮ್ಯ ಆಕರ್ಷಣೆಯುಂಟು. ಸ್ತ್ರೀಯರಂತೂ ತೀರ್ಥದ ಹೆಸರು ಕೇಳುತ್ತಲೇ ತಮ್ಮ ಒಡವೆ-ವಸ್ತುಗಳನ್ನೆಲ್ಲ ಮಾರಲು ಉದ್ಯುಕ್ತರಾಗುತ್ತಾರೆ. ಇನ್ನು ವಯಸ್ಕರಾದವರು ತಮ್ಮ ಹೊಲ-ಮನೆ ಮಾರಿ ತೀರ್ಥ ಯಾತ್ರೆಗೆ ಹೊರಡಲು ತಯ್ಯಾರಾಗುತ್ತಾರೆ. ಯಾರಲ್ಲಿ ನಡೆಯುವ ಸಾಮರ್ಥ್ಯ ಹಿಂಗಿದೆಯೋ ಅವರು ಮೇಣೆಯ ಮೇಲೆ ಕುಳಿತು ತೀರ್ಥಯಾತ್ರೆಗೆ ಹೊರಡುತ್ತಾರೆ. ಇನ್ನು ಕಣ್ಣು ಕಾಣದ ಗಾವಿಲರು ಪಂಡನ ಹೆಗಲ ಮೇಲೆ ಕೈಯೂರಿ, ತೀರ್ಥಯಾತ್ರೆಗೆ ಸಿದ್ಧರಾಗುತ್ತಾರೆ. ಒಂದು ವೇಳೆ ಪಂಡನು ಯಾವುದೋ ಮೂರ್ಖನ ದುಪ್ಪಟಿಯನ್ನು

....ತೋರಿಸಿ ಇದೇ ನಾರಾಯಣ ಎಂದು ಹೇಳಿದರೆ, ಅವನು ಅದೇ ದುಪ್ಪಟಿಯನ್ನು ನಾರಾಯಣನೆಂದು ಭ್ರಮಿಸಿ, ಸಿರ ಮಣಿಸಿ ಮಣಿಸಿ ಪೂಜಿಸುತ್ತಾನೆ. ಎಂದಿನಿಂದ ಈಶ್ವರ ಭಾವನೆಯು ಒಂದು ಕ್ಷುದ್ರ ಭಗ್ನಾಂಶರೂಪದಲ್ಲಿ ಮಾನವನಲ್ಲಿ ಅಂಕುರಿಸಿತೋ, ಅಂದಿನಿಂದ ಆ ತೀರ್ಥಯಾತ್ರೆಯ ಅದಮ್ಯ ಬಯಕೆಯು ಮಾನವನ ಮನದಲ್ಲಿ ಮೂಡಿಬಂದಿದೆ. ಆದರೆ ತೀರ್ಥವೆಂದರೆ ಏನು? ಎಂಬ ಮಾತು ಸಹ ಮಾನವನ ಮನದಲ್ಲಿ ಸ್ವಾಭಾವಿಕವಾಗಿಯೇ ಉಂಟಾಗುತ್ತದೆ.

ತೀರ + ಸ್ಥ + ದ=ತೀರ್ಥ: ಹೀಗೆ ತೀರ್ಥ ಶಬ್ದೋತ್ಪತ್ತಿಯಾಗಿದೆ. ಇದರ ಅರ್ಥವೆಂದರೆ 'ತೀರ ಸ್ಥಿತ' ಎಂದು. ಈ ತೀರವು (ದಂಡೆಯು) ಯಾವುದರ ತೀರ? ಯಾವ ಅಭಿನ್ನ ರೇಖೆಯಿಂದ ಜಲಾಶಯದ ಜಲರಾಶಿಯು ಸ್ಥಲ-ಭಾಗದ(ನೆಲವನ್ನು) ತಳವನ್ನು ಸ್ಪರ್ಶಿಸುವುದೋ ಅದಕ್ಕೆ ತೀರ್ಥವೆನ್ನುತ್ತಾರೆ. ಈ ತೀರದೊಂದಿಗೆ ಸಂಪರ್ಕಿತವಾದ ಸ್ಥಲದ ಇಳಿಜಾರು ಭಾಗಕ್ಕೆ 'ಬೀಚ್' (Beach) ಎನ್ನುತ್ತಾರೆ. ಇದು ತೀರವಾಗಿದೆ. ಏಕೆಂದರೆ ಅದು ಜಲ ಮತ್ತು ಸ್ಥಲದ ಅಭಿನ್ನ ರೇಖೆಯಾಗಿದೆ. ಈ ಕಾರಣದಿಂದ ಮಾನವನು ಬೀಚಿನತ್ತ ಒಂದು ಹೆಜ್ಜೆ ಇರಿಸಿದರೆ, ಒಣ ತಟದ ಮೇಲೆ ಬರುತ್ತಾನೆ. ಮತ್ತು ಆ ಹೆಜ್ಜೆಯನ್ನು ಜಲದತ್ತ ಇರಿಸಿದರೆ ಅವನು ನೀರಿನಲ್ಲಿ ಬಿದ್ದು ಬಿಡುತ್ತಾನೆ. ಈ ತೀರವೇ ಲೌಕಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರದಲ್ಲಿ ತೀರ್ಥದ ಮರ್ಯಾದೆಯನ್ನು ಸೂಚಿಸುತ್ತದೆ. ಅರ್ಥಾತ್ ಯಾವ ಸ್ಥಾನದಿಂದ ಮನುಷ್ಯನು ಒಂದು ಹೆಜ್ಜೆಯನ್ನು ಜಗತ್ತಿನತ್ತ ಇರಿಸಿದರೆ, ಅವನು ಜಾಗತಿಕ ಮೋಹದಲ್ಲಿ ಸಿಲುಕಿಬಿಡುತ್ತಾನೆ. ಮತ್ತು ಒಂದು ಹೆಜ್ಜೆಯನ್ನು ಜಲದತ್ತ ಇರಿಸಿದರೆ, ಜಲದ ತರಂಗಗಳೊಂದಿಗೆ, ಹೋಗುವ ಭಾವ ತಾಳುತ್ತಾನೆ. ಈ ಅಭಿನ್ನ ರೇಖೆಯ ಮೇಲೆ ಯಾರ ಸ್ಥಿತಿ ಇದೆಯೋ ಅವರು ಜಾಗತಿಕತೆಯೊಂದಿಗೆ ಆಧ್ಯಾತ್ಮಿಕತೆಯ ಯೋಗ-ಸೂತ್ರವನ್ನು ರಕ್ಷಿಸುತ್ತಾರೆ. ಇದುವೇ ತೀರ್ಥವಾಗಿದೆ. 'ತೀರಸ್ಥಂ ತೀರ್ಥಮಿತ್ಯಾಹುಃ'.

ಮಾನವನು ಜೀವನದ ಅಧಿಕಾಂಶ ಕ್ಷೇತ್ರದಲ್ಲಿ ಪ್ರತಿಯೊಂದು ವಸ್ತುವನ್ನು ಅನಾಯಾಸವಾಗಿ ಪಡೆಯಬಯಸುತ್ತಾನೆ. ಆಧ್ಯಾತ್ಮಿಕ ಜಗತ್ತಿನಲ್ಲಿ ಉಪಯುಕ್ತ ಸಾಧನೆಯನ್ನು ಮಾಡದೆ, ಜಡಜಗತ್ತಿನಲ್ಲಿ ತನ್ನ ಕರ್ತವ್ಯವನ್ನು ಯಥಾ ಯೋಗ್ಯತೆಯಿಂದ ನಿರ್ವಹಿಸದೆ, ಮಾನವನು ಯಾವಾಗ ಪುಣ್ಯಾರ್ಜನೆ ಮಾಡಲು ಬಯಸುವನೋ, ಆಗ ಅವನು ತಥಾಕಥಿತ ತೀರ್ಥಗಳಿಗೆ ಶರಣುಹೋಗುತ್ತಾನೆ. ಮತ್ತು ಪಾಪದಿಂದ ಮುಕ್ತನಾಗುವ ಪ್ರಯತ್ನ ಮಾಡುತ್ತಾನೆ. ಕರುವಿನ ಬಾಲ ಹಿಡಿದು ವೈತರಣಿಯನ್ನು ದಾಟುವ ಪ್ರಯತ್ನದಂತೆ ಇದಾಗಿದೆ. ಯಾರು ತೀರ್ಥದ ವ್ಯಾಪಾರದಲ್ಲಿ ತೊಡಗಿರುವರೋ ಅವರು ಮಾನವನ ಈ ದುರ್ಬಲತೆಯನ್ನು ಚೆನ್ನಾಗಿ ಅರಿತಿರುತ್ತಾರೆ ಮತ್ತು ಇದೇ ಕಾರಣಕ್ಕಾಗಿಯೇ ಅವನು ಅವರನ್ನೆಲ್ಲ ಒಳ್ಳೇ ರೀತಿಯಿಂದ ಶೋಷಿಸುತ್ತಾನೆ. ತತ್ಫಲವಾಗಿ, ಯಾತ್ರಾರ್ಥಿಗಳು ಯಾವುದನ್ನು ಮಾಡಬೇಕೋ ಅದನ್ನು ಮಾಡದೆ, ಈ ವ್ಯಾಪಾರಿಗಳಿಂದ ತಪ್ಪು ಮಾರ್ಗದರ್ಶನಕ್ಕೆ ಗುರಿಯಾಗಿ, ಅವರ ಮೋಸ ಜಾಲದಲ್ಲಿ ಸಿಲುಕಿ ಒಂದು ತೀರ್ಥದಿಂದ ಇನ್ನೊಂದು ತೀರ್ಥಕ್ಕೆ ಹೋಗುತ್ತಾರೆ. ಓಡಾಡುತ್ತ ಬಿಸಿಲು-ಬೇಗೆಯಲ್ಲಿ ಬೇಯುತ್ತಾರೆ. ಆದರೆ, ಅವನ ಹಸಿವು ಯಾವ ಪ್ರಕಾರದಿಂದಲೂ

ಹಿಂಗುವುದಿಲ್ಲ. ಮತ್ತು ಅವನು ತನ್ನ ಪಾಪಗಳ ವಿನಾಶವಾಗಲಿಲ್ಲವೆಂದು ಸಹ ಅನುಭವಿಸುತ್ತಾನೆ.

ಕತ್ತಲೆ ಮುತ್ತಿದ ಮಾನಸಿಕತೆಯ ಜೀವ ಇಲ್ಲವೆ ಮನುಷ್ಯನು ಇದೇ ಪ್ರಕಾರ ತೀರ್ಥದಿಂದ ತೀರ್ಥಾಂತರಕ್ಕೆ ಓಡಾಡಿ, ದಣಿಯುತ್ತಾನೆ. ಮತ್ತು ತನ್ನ ಮೂಲ್ಯವಾದ ಸಮಯವನ್ನೂ, ಪರಿಶ್ರಮವನ್ನೂ ಮತ್ತು ಹಣವನ್ನೂ ಅಪವ್ಯಯ ಮಾಡಿಕೊಳ್ಳುತ್ತಾನೆ.

ನಿಜವಾದ ತೀರ್ಥವೆಲ್ಲಿದೆ? ಮತ್ತು ಹೇಗಿದೆ? ಮಾನವನ ಮಾನಸಿಕ ಸಂಕಲ್ಪ-ವಿಕಲ್ಪಗಳು ಎಲ್ಲಿಂದ ಉದಿಸುವವೋ ಮತ್ತು ಯಾವ ಸುವರ್ಣ ರೇಖೆಯಲ್ಲಿ ಮಧುರ ಆಧ್ಯಾತ್ಮಿಕ ಆನಂದದಲ್ಲಿ ಸ್ಪರ್ಶಿಸುವವೋ, ಅದುವೇ ನಿಜವಾದ ತೀರ್ಥವಾಗಿದೆ. ಈ ಅಭಿನ್ನ ಬಿಂದುವಿನ ಮೇಲೆ ಯಾರು ಸ್ಥಿತರಾಗಿರುವರೋ, ಅವರೇ ತೀರಸ್ಥರು. ಅಥವಾ ತೀರ್ಥರು. ಮತ್ತು ಅಲ್ಲಿ ತೀರ್ಥ ಮತ್ತು ತೀರ್ಥಪತಿ ಒಂದಾಗುತ್ತಾರೆ. ಪ್ರತಿಯೊಬ್ಬ ಮಾನವನ ಅಂತಸ್ಥಲದಲ್ಲಿ ಯಾವ ತೀರ್ಥಪತಿಯು ಶಾಸ್ವತವಾದ, ಪ್ರಶಾಂತಿಯಲ್ಲಿ, ಚಿರಜಾಗ್ರತನಾಗಿ, ಗಾಳಿಯಿಲ್ಲದ ಜಾಗದಲ್ಲಿಯ ದೀಪಶಿಖೆಯಂತೆ, ಸರ್ವಕಾಲಿಕ ಸತ್ತೆಯ ರೂಪದಲ್ಲಿ ಇರುವನೋ, ಅವನನ್ನೇ ಮರೆತು, ಒಂದು ವೇಳೆ ತಾಮಸ ಗುಣದಿಂದ ಆವೃತರಾದ ಜೀವರು, ಲೌಕಿಕ ಜಗತ್ತಿನಲ್ಲಿ ತೀರ್ಥವನ್ನು ಹುಡುಕುವುದರಲ್ಲಿ ಅಂಡಲೆದರೆ ಅವನೆಂತು ಮೋಕ್ಷ ಸಂಪಾದಿಸಬಲ್ಲ? "ಆಗದಾಗದು. ಈ ಪ್ರಕಾರದ ಮಾನವನಿಗೆ ಮೋಕ್ಷ ಲಾಭವಾಗಲಾರದು" ಎಂದು ಶಿವನು ಪಾರ್ವತಿಗೆ ಹೇಳುತ್ತಾನೆ.

ಶಿವೋಪದೇಶ–೧೨

ಮಯ್ಯೇವ ಸಕಲಂ ಜಾತ ಮಯಿ ಸರ್ವಂ ಪ್ರತಿಷ್ಠಿತಮ್
ಮಯಿ ಸರ್ವಂ ಲಯಂ ಯಾತಿ ತದ್ಬ್ರಹ್ಮಾದ್ವಯಮಸ್ಮ್ಯಹಮ್.

(ಸಕಲವೂ ನನ್ನಿಂದ ಉದಿಸುತ್ತದೆ. ಸರ್ವವೂ ನನ್ನಲ್ಲಿ ಸ್ಥಿತವಾಗಿರುತ್ತದೆ. ಕೊನೆಗೆ ಸರ್ವವೂ ನನ್ನಲ್ಲಿ ಲಯಿಸುತ್ತದೆ. ನಾನೇ ಆ ಬ್ರಹ್ಮ; ಅದ್ವಯನು.)

ಚಿದ್ಘನ ಸತ್ತೆಯಾದ ಶಿವನು, ಹೀಗೆ ಹೇಳಿದ್ದಾನೆ: ಪರಮಪುರುಷನ ನಾಭಿ ಕೇಂದ್ರವೇ ಅವನ ವಿರಾಟ ದೇಹದ ಅರ್ಥಾತ್ ವಿಶ್ವಬ್ರಹ್ಮಾಂಡದ ನಿಯಂತ್ರಕ ಬಿಂದುವಾಗಿದೆ. ಪರಮಪುರುಷನ ನಾಭಿಕೇಂದ್ರದಿಂದಲೇ ಸರ್ವವೂ ಉತ್ಸಾರಿತವಾಗುತ್ತದೆ. ಮತ್ತು ಅವನ ವಿರಾಟ ದೇಹದಲ್ಲಿಯೇ ತಮ್ಮ ತಮ್ಮ ಸಂಸ್ಕಾರಗಳಿಂದ, ಛಂದಗಳಿಂದ, ಯುಗಯುಗಗಳಿಂದ, ಬಹು ದೂರ ಪರಿಕ್ರಮಿಸಿ ಅನಂತರ ಅದೇ ಮೂಲ ಬಿಂದುವಿನಲ್ಲಿ ಲಯಗೊಳ್ಳುತ್ತವೆ. ಈ ಉತ್ಸಬಿಂದುವೇ ಈ ನಾಭಿಕೇಂದ್ರವೇ ಪುರುಷೋತ್ತಮನಾಗಿದ್ದಾನೆ. ಈ ಯಾವ ನಾಭಿಕೇಂದ್ರವಿದೆಯೋ, ಈ ಯಾವ ಸಾಮಗ್ರಿಕ ಸತ್ತಾ ಬೋಧೆಯ ಮೂಲ ಉತ್ಸ ವಿದೆಯೋ, ಅದರಿಂದ ಸರ್ವವೂ ಉದ್ಭೂತವಾಗುತ್ತದೆ, ಎಂದಿಷ್ಟೇ ಅಲ್ಲ. ವಿರಾಟ ಪುರುಷನ ವಿರಾಟ ದೇಹದಲ್ಲಿ ಪರಿಕ್ರಮಿದ ಪ್ರಾಣ ಶಕ್ತಿ ಮತ್ತು ಅದ ಕಾಲಿಕ ಛಂದಗಳು ಸಹ ಆ ಪರಮ ಕೇಂದ್ರದಿಂದಲೇ ಬಂದಿವೆ.

ಅಂದರೆ ಈ ಕೇಂದ್ರವು ಉತ್ಪಾರಣೆಯ ಮೂಲವಷ್ಟೇ ಅಲ್ಲ; ಆದರೆ ಸಂಭಾವ್ಯ ಅಭಿವ್ಯಕ್ತಿಯ ಹಿಂದಿನ ಏಕಮೇವಾದ್ವಿತೀಯ ಸಂಪ್ರೇಷಕ ಶಕ್ತಿಯೂ ಆಗಿದೆ.

ಇದು ಬಾಲಕನೊಬ್ಬನು ಪಟ ಹಾರಿಸುವಂತಿದೆ. ಮೊದಲನೆಯ ಸ್ತರದಲ್ಲಿ ಅವನು ಚಕ್ರದಿಂದ ದಾರವನ್ನು ಬಿಡುತ್ತಾನೆ. ಸ್ವಲ್ಪ ಸಮಯಾನಂತರ, ಪಟವನ್ನು ಗಗನದಲ್ಲಿ ಬಿಟ್ಟು ತನ್ನಷ್ಟಕ್ಕೆ ತಾನು ಹಾರುವಂತೆ ಮಾಡುತ್ತಾನೆ. ಇಷ್ಟರಿಂದಲೇ ಪಟವು, ತಾನು ಸ್ವಾಧೀನದಲ್ಲಿದ್ದೇನೆ; ಪರವಾಯಿಲ್ಲ. ದೂರ ದೂರ ನೀಲ ಗಗನದಲ್ಲಿ ಹಾರಾಡಬಲ್ಲೆ, ಎಂದು ತಿಳಿಯುತ್ತದೆ. ಇದಾದ ಬಳಿಕ, ದಾರ ಸುತ್ತುವಿಕೆ ಶುರುವಾಗುತ್ತದೆ. ಒಮ್ಮೆ, ದಾರ ಎಳೆದಾಗ, ಪಟವು ಚಕ್ರದತ್ತ ಬರುತ್ತದೆ. ಮತ್ತು ಕೊನೆಯಲ್ಲಿ ಚಕ್ರದಲ್ಲಿಯೇ ಬರುತ್ತದೆ.

ಚಿದ್ಘನ ಸತ್ತೆಯಾದ ಸದಾಶಿವನು ಹೇಳುವುದೇನೆಂದರೆ–ಇರುವುದೆಲ್ಲವೂ ನನ್ನಿಂದ ಉದಿಸುತ್ತದೆ. ಅವರಿನ್ನೂ ಹೇಳುವುದೇನೆಂದರೆ—ಸರ್ವವೂ ನನ್ನಲ್ಲಿಯೇ ಇದೆ. ಸರ್ವವೂ ವಿರಾಟ ಪುರುಷನ ವಿರಾಟ ದೇಹದಲ್ಲಿ ಆಟವಾಡುತ್ತಿರುತ್ತದೆ. ಕೆಲವರಿದನ್ನು ತಿಳಿಯುತ್ತಾರೆ; ಕೆಲವರಿದನ್ನು ತಿಳಿಯುವುದಿಲ್ಲ. ಕೆಲವರಿದನ್ನು ತಿಳಿದರೂ ಸಹ ಮರೆತುಬಿಡಲು ಬಯಸುತ್ತಾರೆ. ಯಾವನ ಆಚೆಗೆ ದೇಶವಿಲ್ಲವೋ, ಕಾಲವಿಲ್ಲವೋ, ಪಾತ್ರವಿಲ್ಲವೋ, ಅವನಿಂದ ಸೃಷ್ಟವಾದ ಜೀವಗಳು ಸೃಷ್ಟಿಯ ನಂತರ ಎಲ್ಲಿಗೆ ಹೋಗಬೇಕು? ಅವರು ಸೃಷ್ಟಿಕರ್ತನ ವಿರಾಟ ದೇಹದೊಳಗೇ, ಚಲಿಸಬೇಕು, ಅಲೆದಾಡಬೇಕು, ಓಡಾಡಬೇಕು, ಏಳಬೇಕು ಮತ್ತು ಬೀಳಬೇಕು.

ಯಾರಲ್ಲಿ ಸರಳತೆಯಿದೆಯೋ, ಋಜುತ್ವವಿದೆಯೋ, ಸತ್ಯ ನುಡಿಯುವ ಸತ್ಸಾಹಸವಿದೆಯೋ, ಅವರು ಸಾಹಸದಿಂದ ಎದೆ ತಟ್ಟಿ ಹೇಳುವುದೇನಂದರೆ—"ನಾನು ಆ ಅಸೀಮ–ಪುರುಷನ ವಿರಾಟ ದೇಹದಲ್ಲಿ ಆಶ್ರಯ ಪಡೆದಿರುವೆ. ಇದರ ಹೊರತು, ನನಗೆ ಬೇರಾವ ಆಶ್ರಯವೂ ಇಲ್ಲ." ಇನ್ನು ಯಾರು ಅಂಜುಗುಳಿಗಳೋ, ಕೀಳು ಜನರೋ, ಮತ್ತು ಸತ್ಯ ಹೇಳಬೇಕಾದರೆ ಯಾರ ನಾಲಗೆಯು ನಿಂತುಹೋಗುವುದೋ, ಅವರು "ನಾನು ಯಾರ ಆಶ್ರಯ ಪಡೆದಿರುವೆನೋ, ನಾನು ಯಾರ ಸ್ನೇಹದ ನೆರಳಲ್ಲಿ ಲಾಲನೆ ಪಾಲನೆ ಹೊಂದಿರುವೆನೋ. ಅವನನ್ನು ಒಪ್ಪಿಕೊಳ್ಳಲಾರೆ" ಎನ್ನುತ್ತಾರೆ. ಶಿವನು ಹೇಳುವುದೇನೆಂದರೆ–"ನನ್ನ ಸ್ನೇಹಪೂರ್ಣ ಸಂತಾನವು ಯಾವಾಗಲೂ ನನ್ನ ಎದೆಯಲ್ಲಿಯೇ ಇದೆ. ಮತ್ತು ಇರುತ್ತದೆ. ಯಾವನೊಬ್ಬ ವ್ಯಕ್ತಿಯು ಎಷ್ಟೇ ದೊಡ್ಡ ಪಾಪಿಯಾಗಿರಲಿ, ಎಷ್ಟೇ ಕುಕೃತಿ ಮಾಡಿರಲಿ; ಎಷ್ಟೇ ದುರ್ವಿನೀತನಾಗಿರಲಿ ಇಲ್ಲವೆ, ಎಷ್ಟೇ ದೊಡ್ಡ ಮಹಾ-ಪಂಡಿತನಾಗಿರಲಿ ನಾನು ನನ್ನ ಸಂತಾನವನ್ನು ನನ್ನ ಉಡಿಲಿನಾಚೆಗೆ ತಳ್ಳಲಾರೆ." 'ಮಯಿ ಸರ್ವಂ ಲಯಂ ಯಾತಿ'. ಶಿವನು "ಜಾಗತಿಕ ಕರ್ತವ್ಯವನ್ನು ಸಮಾಪ್ತಗೊಳಿಸಿದ ಮೇಲೆ ಜೀವನು ಪರಮಪುರುಷನಿಂದ ಪಡೆದ ಪ್ರಾಣಶಕ್ತಿಯಿಂದ ಪ್ರೇಷಿತನಾಗಿ ಅವನ ಆ ಉತ್ಸಬಿಂದುವಿಗೇ ಮರಳುತ್ತಾನೆ. ಅವನೊಂದಿಗೇ ಸೇರಿ ಒಂದಾಗುತ್ತಾನೆ. ಅವನ ದ್ವಿತ್ವಭಾವದ ಆನಂದ ಮಯ ಪರಿಸಮಾಪ್ತಿಯಾಗುತ್ತದೆ.

ಚಿದ್ಘನ ಸತ್ತೆಯಾದ ಶಿವನು ಇನ್ನೂ ಹೇಳುವುದೇನೆಂದರೆ—ಈ ಯಾವ ಜೀವ

ಸೃಷ್ಟಿ ಇದೆಯೋ, ಈ ಯಾವ ಜೀವಿಯ ಮಾಧುರ್ಯಮಯ ಅಸ್ತಿತ್ವವಿದೆಯೋ, ಈ ಯಾವ ಜೀವನ ಪ್ರಾಣೋಚ್ಛಲ ಕರ್ಮೋಷಣೆ ಮತ್ತು ಕರ್ಮತತ್ಪರತೆ ಇದೆಯೋ, ಮತ್ತು ಈ ಯಾವ ಜೀವನ ಪ್ರತಾಂತಿಮಯ ವಿಶ್ರಾಮವಿದೆಯೋ, ಈ ಎಲ್ಲವೂ ನನ್ನನ್ನೇ ಕೇಂದ್ರವಾಗಿರಿಸಿಕೊಂಡಿದೆ. ಮತ್ತು ನಾನೇ ಅದ್ವಯ ಬ್ರಹ್ಮನಾಗಿದ್ದೇನೆ.

ಅದ್ವಯ ಎಂದೇಕೆ ಹೇಳಲಾಗಿದೆ? ವಿಶ್ವ ಬ್ರಹ್ಮಾಂಡದಲ್ಲಿ ಪರಮಪುರುಷನು ಏಕಾಕಿ ಸತ್ತೆಯಾಗಿದ್ದಾನೆ. ಅಲ್ಲಿ ದ್ವಿತ್ವ ಎಂದು ಹೇಳಬೇಕಾದುದೇನೂ ಇಲ್ಲ. ಸಾಧನೆಯಲ್ಲಿ ಪರಮಪುರುಷನ ಕೃಪೆಯಿಂದ ಯಾವ ಮೋಕ್ಷವು ಲಭಿಸುವುದೋ, ಅದು ಕೇವಲ ತನ್ನ ಕ್ಷುದ್ರ 'ನಾನು'ವನ್ನೇ ನೀಗುತ್ತದೆ. ಬೇರೇನನ್ನೂ ಅಲ್ಲ. ಅವನ ಈ ಕ್ಷುದ್ರ ನಾನು— ಅವನ, ನಾನು–ಕೇಂದ್ರಿಕ ಕ್ಷುದ್ರತ್ವವು, ಬೃಹತ್ವದಲ್ಲಿ ಪರ್ಯವಸಾನ ಗೊಳ್ಳುತ್ತಿದೆ. ಜಗತ್ತಿನಲ್ಲಿ ಎಷ್ಟೊಂದು ಜೀವರಿರುವರೋ, ಅಷ್ಟೊಂದು ಬೇರೆ ಬೇರೆ ಚಿಕ್ಕ ಚಿಕ್ಕ 'ನಾನು'ಗಳಿರುತ್ತವೆ. ಆದರೆ 'ಭೂಮಾ–ನಾನು' ಸರ್ವರಿಗಾಗಿ ಒಂದೇ ಇರುತ್ತದೆ. 'ಅಲ್ಪ ನಾನು'ವಿನಲ್ಲಿ ದ್ವಿತ್ವ–ಭಾವವಿದೆ. 'ಭೂಮಾ–ನಾನು'ವಿನಲ್ಲಿ ಅದಿಲ್ಲ. ಈ ಕಾರಣದಿಂದಾಗಿಯೇ 'ಭೂಮಾ–ನಾನು' ಅದ್ವಯವಾಗಿದೆ.

ಯಾರು ಮೋಕ್ಷವನ್ನು ಸಂಪಾದಿಸುವರೋ, ಅವರ 'ಅಲ್ಪ–ನಾನು' ವಿರಾಟ ಪುರುಷನ 'ಭೂಮಾ–ನಾನು'ವಿನಲ್ಲಿ ಸೇರಿ ಒಂದಾಗುತ್ತದೆ. ಗಿರಿ–ಗಹ್ವರಗಳಿಂದ ಪೊರವಂಟ ಬೆಟ್ಟದ ನದಿಯು ಬಹಳಷ್ಟು ಕೊಳ್ಳ–ಕಂದರಗಳನ್ನೂ ಹಸಿರುಮುರಿಯುವ ಸ್ವರ್ಣವರ್ಣದ ಬಯಲು ಸೀಮೆಗಳನ್ನು ದಾಟಿ, ಕೊನೆಗೆ ಸಾಗರದ ನೀಲ–ಜಲದಲ್ಲಿ ಸೇರಿಹೋಗುತ್ತದೆ. ಆಗ ಹರಿವ ಆ ಜಲಧಾರೆಯ ಮರಣವಾಗುವುದೇ? ಇಲ್ಲ. ಹಾಗಾಗದು. ಅದರ ಮರಣ ಘಟಿಸದು. ಯಾರಿಗೂ ಚಿರಮೃತ್ಯುವೆಂಬುದಿಲ್ಲ. ನದಿಯ ಛಂದೋಮಯ ಮಧುರತೆಯು ಮಹಾಸಮುದ್ರದ ತರಂಗ ರಾಶಿಯಲ್ಲಿ ಎಂದೆಂದಿಗೂ ಜೀವಂತವಾಗಿರುತ್ತದೆ. ಮಾನವನು ಈ ತಥ್ಯವನ್ನು ತಿಳಿದರೂ ಸಹ, ಮರೆತು ಬಿಡಲು ಬಯಸುತ್ತಾನೆ. ಮರೆತು ಬಿಡಲು ಬಯಸುವನಾದುದರಿಂದಲೇ ಕಳೆದುಕೊಂಡು ದುಃಖದಿಂದ ಕಾತರನಾಗುತ್ತಾನೆ.

ನಿಜವಾಗಿ ಸಮಸ್ತ ಸತ್ತೆಗಳೇ ಅನಾದಿ ಕಾಲದಿಂದ ಅನಂತಕಾಲದ ವರೆಗೆ ಆ ವಿರಾಟ ಪುರುಷನ ಎದೆಯಲ್ಲಿಯೇ ಪರಮ ಶಾಂತಿಯಿಂದ ಚಿರಕಾಲದ ವರೆಗೆ ಸೇರಿ ಕೊಂಡಿರುತ್ತವೆ. ಯಾವುದೂ ಲೋಪವಾಗದು. ಗುಪ್ತವಾಗಿಲ್ಲ. ಮತ್ತು ಗುಪ್ತವಾಗುವುದೂ ಇಲ್ಲ.

ದರ್ಶನದ ಬೆಳಕಿನಲ್ಲಿ ಶಿವ–೧

ಶಿವನ ಸಮಯದಲ್ಲಿ ಲಿಪಿಯ ಆವಿಷ್ಕಾರವಾಗಿರಲಿಲ್ಲವೆಂಬುದನ್ನು ನಾನು ಈ ಮೊದಲೇ ಹೇಳಿದ್ದೇನೆ. ವರ್ಣಮಾಲೆಯೇನೋ ಇತ್ತು. ಆದರೆ ಲಿಪಿಯಾಗಿರಲಿಲ್ಲ. ಅದೊಂದು ಅದ್ಭುತ ಪರಿಸ್ಥಿತಿ ಇತ್ತು. ಮನುಷ್ಯನಿಗೆ ಪ್ರತಿ ಉಚ್ಚಾರಣೆಯೊಂದಿಗೆ ವರ್ಣಮಾಲೆಯನ್ನೂ ಕಲಿಯಬೇಕಾಗುತ್ತದೆ. ಹದಿನಾರು ಸ್ವರಗಳೂ ಮತ್ತು ಮೂವತ್ತುನಾಲ್ಕು ವ್ಯಂಜನಗಳೂ ಇದ್ದವು. ಇವೆಲ್ಲ ಸೇರಿ ಐವತ್ತು ಅಕ್ಷರಗಳಿದ್ದವು.

ಗುರುಗಳ ಮುಖದಿಂದ ಸರ್ವವನ್ನು ಕಲಿಯಬೇಕಾಗುತ್ತದೆ. ಕವಿಯಿಂದ ಕೇಳಿ ಕಲಿಯಬೇಕಾಗಿತ್ತು. ಮತ್ತು ಸರಿಯಾದ ಉಚ್ಚಾರಣೆಯೊಂದಿಗೆ ನೆನಪಿಡಬೇಕು ಮತ್ತು ಕಂಠಸ್ಥಗೊಳಿಸಬೇಕು.

ಶಿವನ ಸಮಯದ ನಂತರ, ಸ್ವಲ್ಪ ಕಾಲ ಕಳೆದ ಮೇಲೆ, ಅಜಮಾಸು ಆರು ಸಾವಿರ ವರ್ಷ ಮುಂಚೆ, ಚೀನದಲ್ಲಿ ಮೊತ್ತಮೊದಲು ಚಿತ್ರಲಿಪಿಯ ಉದ್ಭವವಾಯಿತು. ಅದೇ ಸಮಯಕ್ಕೆ, ಅಥವಾ ಅನಂತರ ಸ್ವಲ್ಪ ಕಾಲಾನಂತರ ಭಾರತದಲ್ಲಿ ದ್ರಾವಿಡ ಚಿತ್ರಲಿಪಿ ಇಲ್ಲವೆ ಸೈಂಧವೀ ಲಿಪಿಯ ಉದ್ಭವವಾಯಿತು. (ಮಹೆಂಜೋ ದಾಡೋ ಲಿಪಿ) ಚೀನದ ಮೊತ್ತಮೊದಲಿನ ಲಿಪಿಯು ಚೀನದ ಆಧುನಿಕ ಚಿತ್ರಲಿಪಿಯ ರೂಪ ತಾಳಿತು. ಭಾರತದ ದ್ರಾವಿಡ ಚಿತ್ರಲಿಪಿಯಲ್ಲಿ ರೂಪಕಾಧಾರದ ಮಾಧ್ಯಮದಿಂದ ಮೂರು ಸ್ತರಗಳಲ್ಲಿ ಭಾರತೀಯ ಅಕ್ಷರ ಲಿಪಿಯ ರೂಪವನ್ನು ಗ್ರಹಿಸಲಾಯಿತು. (ಬ್ರಾಹ್ಮೀ ಮತ್ತು ಖರೋಷ್ಠೀ) ಈ ಪ್ರಾಚೀನ ಭಾರತೀಯ ಅಕ್ಷರ ಲಿಪಿಯು ಸಮಗ್ರ ಪಶ್ಚಿಮ ಮತ್ತು ದಕ್ಷಿಣ, ಏಶಿಯಾ, ತಿಬೇಟ, ಲಂಕಾ ಮತ್ತು ಅದೇ ರೀತಿ, ದಕ್ಷಿಣ ಪೂರ್ವ ಏಶಿಯಾಗಳಲ್ಲಿ ಬಳಕೆಯಲ್ಲಿತ್ತು. ಚೀನದ ಚಿತ್ರಲಿಪಿಯ ಬಳಕೆಯು ಸೈಬೇರಿಯಾ, ಮಂಗೋಲಿಯಾ, ಬಹಿರ್ಮಂಗೋಲಿಯಾ, ಕೋರಿಯಾ, ಜಪಾನ, ತೈವಾನ ಮತ್ತು ಉಕಿನಹಾವಾ ದ್ವೀಪ–ಪುಂಜದಲ್ಲಿತ್ತು.

ಶಿವನ ಕಾಲಕ್ಕಿಂತ ಬಹು ಪೂರ್ವದಲ್ಲಿಯೇ ಶಿವನ ಜನ್ಮವಾಗಿತ್ತು. ವೇದದ ಅನುಷಂಗಿಕ ಆರು ಅಂಗಗಳಾದ ಛಂದ, ಕಲ್ಪ, ವ್ಯಾಕರಣ,ನಿರುಕ್ತ, ಜೋತಿಷ್ಯ ಮತ್ತು ಆಯುರ್ವೇದ (ಮತಾಂತರದಿಂದ ಧನುರ್ವೇದ)ಗಳಿದ್ದವು. ಇವುಗಳ ಉದ್ಭವವು ಋಗ್ವೇದದಷ್ಟು ಪ್ರಾಚೀನವಾಗಿರಲಿಲ್ಲ. ಆದರೂ ಸಹ, ಅವು ಬಹಳಷ್ಟು ಹಿಂದಿನವಾಗಿವೆ. ಅದೇ ಪ್ರಕಾರ ಅವು ಶಿವನ ಸಮಯದಲ್ಲಿದ್ದವು. ಆರ್ಥಾತ್ ಶಿವನ ಸಮಯದಲ್ಲಿ, ಅಕ್ಷರಗಳಿರದಿದ್ದರೂ, ಬಹಳಷ್ಟು ಶಾಸ್ತ್ರಗಳಿದ್ದವು. ಮತ್ತು ಈ ಶಾಸ್ತ್ರಗಳನ್ನು ಕವಿಯ ಸಹಾಯದಿಂದ, ಗುರುಮುಖದಿಂದ ಕೇಳಿ, ಕಲಿಯಬೇಕಾಗಿತ್ತು. ಮತ್ತು ಅವುಗಳನ್ನು ಯತ್ನಮೂಲಕ ಸ್ಮರಿಸಿಕೊಂಡು ಕಂಠಸ್ಥಗೊಳಿಸಿಕೊಳ್ಳಬೇಕಾಗಿತ್ತು.

ಏಕೆಂದರೆ, ಸಮಸ್ತ ಶಾಸ್ತ್ರಗಳ ಅಸ್ತಿತ್ವ ಮತ್ತು ಸ್ಥಿತಿಯು, ಸ್ಮರಣ ಶಕ್ತಿಯನ್ನೇ ಅವಲಂಬಿಸಿತ್ತು. ಈ ಕಾರಣದಿಂದ, ಯಾವನೊಬ್ಬ ವಿದ್ವಾಂಸನಿಗೆ ಒಂದಕ್ಕಿಂತ ಹೆಚ್ಚು ಶಾಸ್ತ್ರಗಳ ಜ್ಞಾನವಿರುವುದು ತುಂಬಾ ಕಷ್ಟಸಾಧ್ಯವಿತ್ತು. ಅದ್ದರಿಂದ ಆ ಕಾಲದಲ್ಲಿ, ಒಂದಕ್ಕಿಂತ ಹೆಚ್ಚು ಶಾಸ್ತ್ರಗಳಲ್ಲಿ ಪಾರಂಗತನಾದ ವ್ಯಕ್ತಿಗೆ ಸಮಾಜದಲ್ಲಿ ಬಹಳಷ್ಟು ಮಾನ–ಸನ್ಮಾನ ನೀಡುತ್ತಿದ್ದರು. ಅವರು ವೇದದ ಷಡಂಗಗಳಾದ ಛಂದ, ವ್ಯಾಕರಣ, ಕಲ್ಪ, ಇತ್ಯಾದಿಗಳಲ್ಲಿ ಪಾರಂಗತನಿದ್ದರೆ ಅವನಿಗೆ ಪಂಡಿತಗಣವು ಸಮ್ಮಾನಪೂರ್ವಕ ಷಡಂಗೀ ಅಭಿಜ್ಞಾನ ಪತ್ರ ನೀಡುತ್ತಿದ್ದರು. ಯಾವನೊಬ್ಬ ವ್ಯಕ್ತಿಯು ಒಂದು ವೇದದಲ್ಲಿ ಪಾರಂಗತನಾಗಿದ್ದರೆ, ಆ ವೇದವನ್ನು ಕಂಠಪಾಠ ಮಾಡುತ್ತಿದ್ದನು. ಅವನು ಪಂಡಾ, ಇಲ್ಲವೆ ಪಾಂಡೇಯ (ಪಾಂಡೆ) ಎಂಬ ಹೆಸರಿನಿಂದ ಪ್ರಸಿದ್ಧನಾಗುತ್ತಿದ್ದನು. ಯಾರು ಎರಡು ವೇದಗಳನ್ನು ಕಂಠಸ್ಥ ಮಾಡಿಕೊಂಡಿರುವರೋ ಅವರನ್ನು ದ್ವಿವೇದಿ (ದುಬೆ) ಎಂಬ ಹೆಸರಿನಿಂದ ಪರಿಚಯಿಸುತ್ತಿದ್ದರು. ಯಾರು ಮೂರು ವೇದಗಳನ್ನು

ಕಂಠಸ್ಥಗೊಳಿಸಿಕೊಂಡಿದ್ದರೋ, ಅವರು ತ್ರಿವೇದಿ ಇಲ್ಲವೆ ತಿವಾರಿ ಹೆಸರಿನಿಂದ ಪರಿಚಿತರಾಗಿದ್ದರು. ಇನ್ನೂ ಯಾವ ಜನರು ಮೂರು ವೇದಗಳನ್ನು ಜನರಿಗೆ ಒಳ್ಳೇ ರೀತಿಯಿಂದ ತಿಳಿಸುತ್ತಿದ್ದರೋ, ಅವರನ್ನು ತ್ರಿಪಾಠೀ ಎಂದು ಕರೆಯುತ್ತಿದ್ದರು. ಯಾರು ನಾಲ್ಕು ವೇದಗಳನ್ನು ನೆನಪಿಟ್ಟುಕೊಳ್ಳಬಲ್ಲರೋ ಅವರನ್ನು ಚತುರ್ವೇದಿ ಎನ್ನುತ್ತಿದ್ದರು. ಆರ್ಥಾತ್ ಚೌಬೇ ಎಂದು. ವೇದಗಳನ್ನು ಋಕ್, ಯಜುರ್ ಮತ್ತು ಅಥರ್ವ ಎಂದು ವಿಭಜಿಸಿರುವುದು,ಕೇವಲ ಲಿಪಿಯ ವಿಕಾಸಾನಂತರ; ಎಂಬುದನ್ನು ಅವಶ್ಯವಾಗಿ ನೆನಪಿಡಬೇಕು.

ಆ ಕಾಲದಲ್ಲಿ ತಾವೇ ಯಾವ ವೇದವನ್ನು ಮುಖಪಾಠ ಮಾಡದ ಇಂಥ ಅನೇಕ ವ್ಯಾಖ್ಯಾನಕಾರರೂ, ಟೀಕಾಕಾರರೂ ಇದ್ದರು. ಆದರೆ ಆ ವೇದಗಳನ್ನು ಯಾರು ಮುಖಪಾಠ ಮಾಡಿದ್ದರೋ, ಅವರಿಂದ ಕೇಳಿಕೊಂಡು ಅವುಗಳನ್ನು ವ್ಯಾಖ್ಯಾನಿಸುತ್ತಿದ್ದರು. ಯಾರು ಕಂಠಸ್ಥ ಮಾಡಿಕೊಂಡಿದ್ದರೋ ಅವರು, ಆ ಶಾಸ್ತ್ರಗಳ ವ್ಯಾಖ್ಯೆಯನ್ನಾಗಲಿ, ಅರ್ಥವನ್ನಾಗಲಿ, ಸ್ವಲ್ಪವೂ ತಿಳಿದಿರಲಿಲ್ಲ. ಅದ್ದರಿಂದ ಆ ಕಾಲದಲ್ಲಿ ಪ್ರಚಲಿತ ಕಥನವೊಂದಿತ್ತು.

"ಆವೃತಿಃ ಸರ್ವ ಶಾಸ್ತ್ರಾಣಾಂ ಬೋಧಾದಪಿ ಗರೀಯಸಿ."

ಶಿವನ ಕಾಲದಲ್ಲಿ ಯಾವುದೇ ಶಾಸ್ತ್ರವಿದ್ದಿರಲಿ, ಆ ಕಾಲಕ್ಕೆ ಎಷ್ಟೇ ಶಾಸ್ತ್ರಗಳಿದ್ದಿರಲಿ: ಅವೆಲ್ಲವೂ ಅಲಿಖಿತವಾಗಿದ್ದವು. ಮತ್ತು ದರ್ಶನ ಶಾಸ್ತ್ರವೆಂಬ ಯಾವುದೂ ಇರಲಿಲ್ಲ. ದರ್ಶನ ಶಾಸ್ತ್ರವನ್ನು ಮೊಟ್ಟ ಮೊದಲು ಬರೆದವನೆಂದರೆ, ಮಹರ್ಷಿ ಕಪಿಲ. (ಅಷ್ಟು ಹೊತ್ತಿಗೆ ಲಿಪಿಯ ವಿಕಾಸವಾಗಿತ್ತು.) ಮಾನವನು ಅವರ ಪಾಂಡಿತ್ಯಕ್ಕೆ ಮಾರುಹೋದನು. ಸಮಾಜದ ಸಮಸ್ತ ಪಂಡಿತರು ಅವನನ್ನು ದರ್ಶನಗಳ ಪ್ರಪ್ರಥಮ ಪ್ರವಕ್ತಾ ಎಂಬ ದೃಷ್ಟಿಯಿಂದ 'ಆದಿ–ವಿದ್ವಾನ' ಎಂದು ಕರೆದರು. ಮತ್ತು ಅವರ ಶಿರದ ಮೇಲೆ ಸಮ್ಮಾನದ ಮುಕುಟವೇರಿಸಿದರು. ರಾಢದ ಈ ಸಾರಸ್ವತ ಪುರುಷರು ಸೃಷ್ಟಿ ರಹಸ್ಯದ ಸೂಕ್ಷ್ಮ ಕಾರಣಗಳನ್ನು ಸಂಖ್ಯಾಬದ್ಧಗೊಳಿಸಿ ವಿದ್ವಜ್ಜನರೆದುರು ಮಂಡಿಸಿದನು.

ಜಗತ್ತು ಏನಿನೆ? ಇದು ಮಾನವರ ಸರ್ವಕಾಲೀನ ಪ್ರಶ್ನೆಯಾಗಿದೆ. ಜೀವವು ಯಾವುದು? ಈಶ್ವರನಾರು? ಇದರೊಂದಿಗೇ ಜಗತ್ತಿನೊಂದಿಗೆ ಜೀವ, ಜೀವದೊಂದಿಗೆ ಈಶ್ವರ, ಅದೇ ಮೇರೆಗೆ ಈಶ್ವರನೊಂದಿಗೆ ಜಗತ್ತಿನ ಸಂಬಂಧವೇನಿದೆ?

"ಮಾಗೋ ಆಮಾರ ಏಇ ಭಾವನಾ
ಆಮಿ ಕೋಥಾಯ ಛಿತಾಮ ಕೋಥಾಯ ಏಲಾಮ
ಕೋಥಾಯ ಜಾಬೋ ನಾಈ ಠಿಕಾನಾ

ತಾಯೆ! ಎನ್ನ ಮನದೊಳೊಂದೆ ಭಾವನೆ,
ಎಲ್ಲಿ ಇದ್ದೆ ನಾನು; ಎಲ್ಲಿ ಇರುವೆನೆ?
ಎಲ್ಲಿ ಹೋಗುತ್ತಿಪ್ಪೆ? ಆರಿಯ ಬಲ್ಲೆನೆ?

ಈ ಚಿರಂತನ ಪ್ರಶ್ನೆಗೆ ಸಂತೋಷಜನಕ ಉತ್ತರವೀಯುವುದು, ಸಾಧಾರಣ

ಆಟವೇನೂ ಅಲ್ಲ. ಕಪಿಲ ಮಹರ್ಷಿಯು ತತ್ತ್ವ ಮತ್ತು ತಥ್ಯದ ವಿಶ್ಲೇಷಣ ಮಾಡಿ, ಯಾವ ಮೌಲಿಕ ಕಾರಣಗಳನ್ನು ಪಡೆದರೋ ಮತ್ತು ಅವುಗಳನ್ನೆಲ್ಲ ಹೊಂದಿಸಿ, ಹೇಳಿದರೋ, ಈ ಸಂಖ್ಯೆಯ ಭಿತ್ತಿಯ ಮೇಲೆ ಜೀವ ಮತ್ತು ಜಗತ್ತನ್ನು ಕಂಡು ಕೊಳ್ಳಬೇಕು. ಮಹರ್ಷಿ ಕಪಿಲರು ಈಶ್ವರನ ಸಂಬಂಧವಾಗಿ ಸ್ಪಷ್ಟವಾಗಿ ಏನನ್ನೂ ಹೇಳಲಿಲ್ಲ. ಆದರೆ ಓರ್ವನಿದ್ದಾನೆ. ಅವನು ಎಲ್ಲವನ್ನೂ ನಿಯಂತ್ರಿಸುತ್ತಾನೆ. ಈ ಕಾರಣದಿಂದ ಅವನನ್ನು 'ಜನ್ಯ ಈಶ್ವರ' ಎಂದು ಹೇಳಿ ಸ್ವೀಕರಿಸಬೇಕು. ಇದನ್ನು ಕಪಿಲರೂ ಮನ್ನಿಸಿದ್ದರು. ಈ ಜನ್ಯ ಈಶ್ವರನೊಂದಿಗೆ, ಜೀವ ಮತ್ತು ಜಗತ್ತಿನ ಯಾವ ಸಂಪರ್ಕ ಮತ್ತು ಸಂಬಂಧವಿದೆಯೋ, ಅದನ್ನು ಸ್ಪಷ್ಟವಾಗಿ ಹೇಳುವುದಂತೂ ದೂರವೇ ಉಳಿಯಿತು. ಅವರು ಆ ಕುರಿತು ಸ್ಥೂಲವಾಗಿಯೂ ಹೆಚ್ಚು ಹೇಳಿಲ್ಲ. ಈಶ್ವರನನ್ನು ಪ್ರತ್ಯಕ್ಷೀಭೂತ ತತ್ತ್ವದ ರೂಪದಲ್ಲಿ ಪಡೆಯದಿರುವ ಕಾರಣ, ಅವರು ಅದನ್ನು ಸ್ಪಷ್ಟ ರೂಪದಲ್ಲಿ ಸ್ವೀಕರಿಸಲಿಲ್ಲ. ಸಮಸ್ತ ಜೀವಂತ ಸತ್ತೆಗಳಲ್ಲಿ ಆತ್ಮ ಇಲ್ಲವೆ ಪುರುಷನಿರುವನೆಂದು ಕಪಿಲ ಮಹರ್ಷಿ ಹೇಳಿದ್ದಾರೆ. ಈ ಕಾರಣ ಪುರುಷರು ಅನೇಕರಿದ್ದಾರೆ; ಅಜಸ್ರ ಪುರುಷರಿದ್ದಾರೆ. ಆದರೆ ಮೂಲ ಪ್ರಕೃತಿ ಒಂದೇ ಇದೆ. ಜಗತ್ತಿನ ಸೃಷ್ಟಿಯ ಮೂಲ ಉಪಾದಾನವು ಈ ಮೂಲ ಪ್ರಕೃತಿಯೇ ಆಗಿವೆ. ಪ್ರಕೃತಿಯು ಪಾತ್ರವೇ ಪ್ರಧಾನವಾದುದು. ಆದ್ದರಿಂದ ಸಾಂಖ್ಯದಲ್ಲಿ ಪ್ರಕೃತಿಗೆ 'ಪ್ರಧಾನ' ಎಂಬ ಹೆಸರೂ ಇದೆ."

ಕಪಿಲರು ಜಗತ್ತಿನೊಂದಿಗೆ ಪ್ರಕೃತಿಯ ಸಂಬಂಧವನ್ನು ಜೋಡಿಸಿದರು. ಪ್ರತಿ ಅಣುಸತ್ತೆಯಲ್ಲಿ ಪುರುಷನ ಅರ್ಥಾತ್ ಆತ್ಮನ ಅಸ್ತಿತ್ವವನ್ನು ಒಪ್ಪಲಾಗಿದೆ. ಆದರೆ ಈಶ್ವರನು ಒಂದು ಪ್ರಕಾರ ಬೇರೆಯಾಗಿಯೇ ಇದ್ದಾನೆ. ಮಾನವನು ಸಾಧನೆಯ ಮೂಲಕ, ಬಂಧನದಿಂವ ಮುಕ್ತನಾಗಬಲ್ಲನು. ಅದೇ ಆ ಮುಕ್ತ ವ್ಯಕ್ತಿಯೇ ಮುಕ್ತ ಪುರುಷನು. ಮುಕ್ತಿಯ ನಂತರ ಸಹ ಪುರುಷನ ಭಿನ್ನತೆಯು ಉಳಿಯುತ್ತದೆ. ಅರ್ಥಾತ್ ಅನೇಕ ಪುರುಷರು ಉಳಿಯುತ್ತಾರೆ. ಮುಕ್ತಿಯು ನಿಜ ರೂಪದಲ್ಲಿ ಏನಾಗಿದೆ? ಅದನ್ನವರು ಸ್ಪಷ್ಟವಾಗಿ ಹೇಳಿಲ್ಲ. ಮನವ ಸಂಕಲ್ಪ–ವಿಕಲ್ಪಾತ್ಮಾಕ ಅವಸ್ಥೆಗಳ ಸಂಬಂಧದಲ್ಲಿ ಸ್ವಲ್ಪ ಹೆಚ್ಚಾಗಿ ಹೇಳಿದ್ದರೂ ಸಹ, ಮಾನವನ ಮನದಲ್ಲಿ ಎಷ್ಟು ಹೇಳಿದರೆ, ಮುಕ್ತಿ ಮತ್ತು ಮೋಕ್ಷಗಳ ಬಗೆಗೆ ಒಂದು ಸ್ಪಷ್ಟ ಧಾರಣೆ ಮೂಡ ಬಹುದೋ, ಅಷ್ಟೊಂದು ತಿಳಿಸಿ ಹೇಳಿಲ್ಲ.

ಶಿವನು ಓರ್ವ ಪ್ರಚಂಡ ಪುರುಷನಾಗಿದ್ದನು. ಸಾಂಖ್ಯ ದರ್ಶನದ ಅಧಿಕ್ಷೇತ್ರದಲ್ಲಿ ಈ ಪ್ರಕಾರದ ಪುರುಷನ ವ್ಯಾಖ್ಯೆ ನೀಡಿರಲಿಲ್ಲ. ಶಿವನು ಏನೇನು ಹೇಳಿರುವನೋ ಅದರೊಂದಿಗೆ ಸಾಂಖ್ಯ ದರ್ಶನದಲ್ಲಿ ತಾಳಮೇಳವಿರದಿರಬಹುದು. ಜಗತ್ತಿನ ಉತ್ಪತ್ತಿಯು ಒಂದು ಚಿನ್ಮಯ ಸತ್ತೆಯಂತಿದೆ, ಎಂದು ಶಿವನು ಸ್ಪಷ್ಟ ಶಬ್ದಗಳಲ್ಲಿ ಹೇಳಿದ್ದಾನೆ. ಒಂದು ಚಿನ್ಮಯ ಸತ್ತೆಯ ವಿರಾಟ ದೇಹದಲ್ಲಿಯೇ, ಅದರ ಅವಸ್ಥಿತಿ ಇದೆ. ಮತ್ತು ಅದೇ ಚಿನ್ಮಯ ಸತ್ತೆಯ ಸ್ವರೂಪದಲ್ಲಿ ಅದರ ಚರಮಸ್ಥಿತಿ ಇದೆ ಶಿವನ ವಿರಾಟತ್ವವು ಸಾಂಖ್ಯ ದರ್ಶನದ ವಾದ–ಜಲ್ಪ–ವಿತಂಡವೆಂಬ ಮೂರನ್ನೂ ಸ್ತಂಭಿತಗೊಳಿಸಿತ್ತು.

ಸರ್ವಾತ್ಮಕ ದರ್ಶನದ ಅಸ್ತಿವಾರವು ವಾದ–ಜಲ್ಪ–ವಿತಂಡಗಳ ಮೇಲೆ ನಿಂತಿರುತ್ತದೆ. ಆ ಅಸ್ತಿವಾರವು ದೃಢವಾಗಿರದಿದ್ದರೆ, ಅದರ ಅಸ್ತಿತ್ವವು ತಾಳಲಾರದು. ಸಾಂಖ್ಯ ದರ್ಶನವು ತನ್ನ ಯುಕ್ತಿಜಾಲದಿಂದ, ತನ್ನ ವಾದ–ಜಲ್ಪ–ವಿತಂಡಗಳ ಆಯುಧಗಳ ಬಲದ ಮೇಲೆ ಅನಂತರದ ಅನೇಕ ದರ್ಶನಗಳನ್ನೂ ಸಹ ಹಿಮ್ಮೆಟ್ಟಿಸಿದೆ. ಇಂದಿಗೂ ಸಹ ಹಿಮ್ಮೆಟ್ಟುತ್ತದೆ. ಏಕೆಂದರೆ ಅದು ತನಗಿಂತ ಬಹು ಪುರಾತನನಾದ ಶಿವನ ಮಹಿಮೆ ಇಲ್ಲವೆ ಜ್ಯೋತಿ ಪ್ರಜ್ವಲತೆಯಿಂದ ಎಷ್ಟೊಂದು ಪರಾಜಿತರಾಗಿದ್ದರೆಂದರೆ. ಅವರು ಶಿವನನ್ನು ಕುರಿತು ಮಾನವರಿಗೆ ಯಾವುದೇ ಧಾರಣೆಯನ್ನು ನೀಡದಾದರು. ಅವರ ಕಣ್ಣುಗಳೇ ಕುಕ್ಕಿದವು.

ದರ್ಶನಕ್ಕೆ ಮೂರು ಆಯುಧಗಳಿವೆಯೆಂದು ಹೇಳಹತ್ತಿದ್ದೆನಷ್ಟೇ. ಅವುಗಳೆಂದರೆ, ವಾದ, ಜಲ್ಪ, ವಿತಂಡ. ಇವುಗಳಲ್ಲೊಂದಾದ ವಾದವು,ಯುಕ್ತಿಯ ಬಲದ ಮೇಲೆ ತನ್ನನ್ನು ತಾನು ಶಕ್ತಿಶಾಲಿಯಾಗಿ ಮಾಡಿಕೊಳ್ಳುತ್ತದೆ. ಎರಡನೆಯದು, ತರ್ಕಶಕ್ತಿಯಿಂದ, ಎರಡನೆಯ ದರ್ಶನ ಇಲ್ಲವೆ ಮತವಾದವನ್ನು ಪರಾಜಿತಗೊಳಿಸುತ್ತದೆ. ಮತ್ತು ಮೂರನೆಯದಾದ ವಿತಂಡವು, ಪರಾಜಿತ ದರ್ಶನದ ಬೌದ್ಧಿಕ ದುರ್ಗವನ್ನು ವಶಪಡಿಸಿಕೊಳ್ಳುತ್ತದೆ. ಆದರೆ ಶಿವನ ವಾಸ್ತವ ಅಸ್ತಿವಾರದ ವಿರಾಟ ಪೌರುಷವನ್ನು ಸಾಂಖ್ಯರು ದೂರದಲ್ಲಿಯೇ ಕೈಬಿಟ್ಟರು.

ಸಾಂಖ್ಯರ ಪ್ರಕೃತಿಯನ್ನು ಪಾರ್ವತಿಯೊಂದಿಗೆ ಮತ್ತು ಸಾಂಖ್ಯರ ಪುರುಷನನ್ನು ಶಿವನೊಂದಿಗೆ ಹೋಲಿಸುವುದು ಕೇವಲ ಹಾಸ್ಯಾಸ್ಪದವಾಗಿದೆ. ಏಕೆಂದರೆ, ಶಿವನು ಅಸಂಖ್ಯ ಪುರುಷರಲ್ಲಿ ಓರ್ವ ಪುರುಷನೆಂದು ಗಣಿಸಲ್ಪಡುವವನಲ್ಲ. ಇದರ ಮರ್ಮ ಹೀಗೆ.

ತೋಮಾರೇ ಪಾಛೇ ಸಹಜೇ ಬುಝಿ ತಾಈ ಕಿ ಏತ ಲೀಲಾರ ಛಲ।
ಬಾಹಿರೇ ಜಬೇ ಹಾಸಿರ ಛಟಾ ಭಿತರೇ ಥಾಕೇ ಚೋಖೇರ ಜಲ
ಬೂಝಿಗೋ ಆಮಿ ಬುಝಿ ಗೋ ತಬ್ ಛಲನಾ
ಜೇ ಕಥಾ ತೂಮಿ ಬೋಲತೇ ಚಾಓ ಸೇ ಕಥಾ ತೂಮಿ ಬಲೋನಾ.
ತೋಮಾರೇ ಪಾಛೇ, ಸಹೆಜೇ ಧರಿ, ಕಿಛುರ ಈ ತಬ ಕಿನಾರಾ ನಾಈ
ದಶೇರ ದಲೇ ಫೇಲೀ ಗೋ ಪಾಛೇ, ವಿಮುಖ ತುಮಿ ವಿರೂಪ ತಾಈ.
ಬುಝಿಓ ಗೋ ಆಮಿ ಬುಝಿ ಗೋ ತಬ ಛಲನಾ
ಯೋ ಪಥೇ ತುಮಿ ಚಲಿತೇ ಚಾಓ ಸೇ ಪಥೇ ತುಮಿ ಚಲೋನಾ
ಸವಾರ ಚೇಯೇ ಅಧಿಕ ಚಾಹ, ತಾಈ ತುಮಿಕೀ ಫಿರಿಯಾ ಚಾಓ.
ಹೇಲಾರ ಭರೇ ಖೇಲಾರ ಮತ ಭಿಕ್ಷಾ ರ್ಝುಲಿ ಭಾಸಾಯೇ ದಾಓ
ಬುಝೆಓಛಿ ಆಮಿ, ಬುಝೆಓಛಿ ತಬ ಛಲನಾ,
ಸಬಾರ ಚಾಹೇ ತೃಪ್ತಿ ಹೋಲೋ,ತೋಮಾರ ತಾಹೇ ಹೋಲೋ ನಾ.

ನಿನ್ನ ಸಹಜ ತಿಳಿಯಲೆಳಸಿ, ಲೀಲೆಯಾಡಿ ಅಡಗಿಕೊಳ್ಳುವೆ.
ಹೊರಗೆ ನಗೆಯ ಸೂಸುತಿರಲು, ಒಳಗೆ ಅಶ್ರು ಧಾರೆ ತುಂಬುವೆ.
ಅಹುದು; ನಾನು ತಿಳಿಯಬಲ್ಲೆ, ತಿಳಿಯುತಿರುವೆ ನಿನ್ನ ನೆಪಗಳ,
ನಿನ್ನ ಮರ್ಮವೇನು ಎಂದು, ಹೇಳದಿರಲು ತಿಳಿವೆನವುಗಳ.

ಸಹಜ ತಿಳಿದುಕೊಂಬೆವೆಂದು ನೀನು ನಿಜ ಅನಂತನಾದೆಯ?
ನೀನು ಒಬ್ಬ ಸರ್ವರಲ್ಲಿ;ಎಂದು ಎಣಿಸೆ ಕೋಪಗೊಂಡೆಯ?

ಅಹುದು, ನಾನು ತಿಳಿಯಬಲ್ಲೆ ತಿಳಿಯುತಿರುವೆ ನಿನ್ನ ನೆಪಗಳ

ಈ ತಿರುಕನ ಜೋಳಿಗೆಯು ಎಂದೂ ತುಂಬುವುದೇ ಇಲ್ಲ. ಆ ತಿರುಕನು ಯಾರಿಂದಲೂ ಯಾವುದೇ ಪ್ರಕಾರದ ಬೇಡಿಕೆಯನ್ನು ಕೇಳುವುದಿಲ್ಲ. ಅವನು ಅವರನ್ನೇ ಕೇಳವನಲ್ಲದೆ ಅವರೀಯುವ ಭಿಕ್ಷೆಯನ್ನಲ್ಲ. ಆ ಅದ್ಭುತ ಪುರುಷನನ್ನು ಸಾಂಖ್ಯಿರ ಅಸಂಖ್ಯ ಪುರುಷರಲ್ಲಿ ಒಬ್ಬನೆಂದು ಎಣಿಸಲಿಕ್ಕಾಗದು. ಅರ್ಥಾತ್ ಹತ್ತರ ಪೈಕಿ ಹನ್ನೊಂದನೆಯವನೆಂದು ಎಣಿಸಲಿಕ್ಕಾಗದು. ಈ ಪುರುಷನು ವಿಮುಖಿ ಇಲ್ಲವೆ ವಿರೂಪನಾಗುವನೋ ಇಲ್ಲವೋ? ಅವನು ಯಾವ ಪ್ರಕಾರದಿಂದ ವಿರೂಪನಾಗುವನೆಂಬ ಬಗ್ಗೆ ಅನಂತರ ಹೇಳುತ್ತೇನೆ.

ದರ್ಶನದ ಬೆಳಕಿನಲ್ಲಿ ಶಿವ–೨

ಸಾಂಖ್ಯ ದರ್ಶನ ಮೂರ್ತರೂಪ ತಾಳಿ ಬಹು ಕಾಲ ಗತಿಸಿದ ಬಳಿಕ ರಾಧ ನಾಡಿನಿಂದಯೇ ಇನ್ನೋರ್ವ ಸಾರಸ್ವತ ಪುರುಷ ಬಂದನು. ಅವನೇ ಪಾತಜಂಲ ಮಹರ್ಷಿ. ಅವನು ಸಾಂಖ್ಯದರ್ಶನದ ಬಹಳಷ್ಟು ದೋಷಗಳನ್ನು ದೂರಗೊಳಿಸಿದನು. ಆದರೊಂದಿಗೇ, ಅನೇಕ ವಿಷಯಗಳಲ್ಲಿ ಸಾಂಖ್ಯ ದರ್ಶನಕ್ಕಿಂತ ಹಿಂದೆ ಉಳಿದನು. ಇವನ ದರ್ಶನವನ್ನು 'ಪಾತಂಜಲ ಯೋಗದರ್ಶನ' ಇಲ್ಲವೆ 'ಯೋಗ ಸೂತ್ರಮ್' ಇಲ್ಲವೆ 'ಸೇಶ್ವರ ಸಾಂಖ್ಯ' ಎನ್ನುತ್ತಾರೆ. ಇದರಲ್ಲಿ ವೈದೂಷ್ಯ ಮತ್ತು ಬೌದ್ಧಿಕತೆಯ ಪರಿಚಯವಿದೆ. ಕೆಲವೊಂದು ಮಾತುಗಳನ್ನು ಮನೋವೈಜ್ಞಾನಿಕ ಪದ್ಧತಿಯೆಂದು ತಿಳಿಸಲಾಗಿದೆ. ಸರ್ವ ನಿಯಂತ್ರಕನಾದ ಈಶ್ವರನನ್ನು ಸ್ಪಷ್ಟವಾಗಿ ಸ್ವೀಕರಿಸಲಾಗಿದೆ. ಆದರೆ ಕಪಿಲರ ಸಾಂಖ್ಯದರ್ಶನದಲ್ಲಿ ಯಾವ ವಿಶ್ಲೇಷಣಾತ್ಮಕ ವಿಸ್ತೃತಿ ಇದೆಯೋ, ಅದು ಇಲ್ಲಿ ಇಲ್ಲ. ಪಾಂತಜಲ ದರ್ಶನದ ಇನ್ನೊಂದು ಗುಣವೂ ಇದೆ. ಅದೆಂದರೆ, ಇದರ ಮೂಲಕ ಸಾಧಕನು ತನ್ನ ಸಾಧನೆಯ ಹಾದಿಯ ಅಲ್ಪಸ್ವಲ್ಪ ಇಂಗಿತವನ್ನು ಪಡೆಯುತ್ತಾನೆ.

ಈ ದರ್ಶನದ ದೋಷವೊಂದಿದೆ; ಅದು ಸರ್ವರನ್ನೂ ವಂಚಿಸಿದೆ. ಅದೆಂದರೆ, ಈಶ್ವರನೊಂದಿಗೆ ಜೀವರ ಸಂಪರ್ಕವನ್ನು ಬಹು ಸ್ಪಷ್ಟ ಭಾಷೆಯಲ್ಲಿ ವ್ಯಕ್ತಪಡಿಸಿಲ್ಲ. ಯಾವ ಪ್ರಕಾರ ಈಶ್ವರನು ಸ್ರತಿಯೊಂದು ವಸ್ತುವನ್ನೂ ನಿಯಂತ್ರಿಸುತ್ತಿರುವನೋ ಅದನ್ನು ಸಹ ಸ್ಪಷ್ಟಗೊಳಿಸಿಲ್ಲ. ಮಾನವನೇಕೆ ಯೋಗ ಸಾಧನೆ ಮಾಡಬೇಕು? ಮತ್ತು ಅವನೇಕೆ ಚಿತ್ತವೃತ್ತಿಯನ್ನು ನಿರೋಧಿಸಬೇಕು? ಇದನ್ನು ಸಹ ಸರಿಯಾದ

ಶಬ್ದಗಳಲ್ಲಿ ತಿಳಿಸಿ ಹೇಳಿಲ್ಲ. ಪಾತಂಜಲ ದರ್ಶನದಲ್ಲಿ ಯಾವ ಈಶ್ವರನಿರುವನೋ, ಅವನೊಂದಿಗೆ ಸಹ,ಶಿವನ ಮೌಲಿಕ ಪಾರ್ಥಕ್ಯವನ್ನೂ ಲಕ್ಷಿಸುವುದು ಯೋಗ್ಯವಾಗಿದೆ.

ಶಿವನು ಜಗತ್ತನ್ನು ಸಂತಾನ-ರೂಪದಲ್ಲಿ ನೋಡಿದ್ದಾನೆ. ಸಂತಾನರೂಪದಲ್ಲಿಯೇ ತನ್ನ ಸ್ನೇಹದ ನೆರಳಿನಲ್ಲಿ ಅವರ ಲಾಲನೆ–ಪಾಲನೆ ಮಾಡಿದ್ದಾನೆ. ಮತ್ತು ಲೌಕಿಕ ಜೀವನದ ಅಂತ್ಯದಲ್ಲಿಯೂ ಸಹ, ತನ್ನ ಉಡಿಯಲ್ಲಿಯೇ ಬರಸೆಳೆದುಕೊಳ್ಳುತ್ತಾನೆ. ಶಿವನ ಆದರ್ಶದ ಈ ಮಾಧುರ್ಯತೆಯ ಒಂದು ಕಣವೂ ಸಹ ಪಾತಂಜಲ ದರ್ಶನದಲ್ಲಿ ನಮಗೆ ಕಾಣಸಿಗದು. ಇದೊಂದು ನೀರಸ, ಶುಷ್ಕ, ಯೋಗ ಸಾಧನೆಯಾಗಿದೆ. ಇದರಲ್ಲಿ ಯೋಗಿಯ ಹೃದಯವು ಸರಸತೆಯಿಂದ ತುಂಬಿ ಬರದು. ಯೋಗಿಯ ಹೃದಯದಲ್ಲಿ ಭಕ್ತಿಯ ಬೀಜ ಬಿದ್ದರೂ ಸಹ, ಅಲ್ಲಿ ಸರಸತೆಯ ಅಭಾವವಿರುವುದರಿಂದ, ಆ ಬೀಜವು ಅಂಕುರಿಸದು. ನಿಜವಾದ ಸಂಗತಿಯೆಂದರೆ–ಭಕ್ತಿ ತರಂಗಗಳ ದ್ಯೋತನೆಯಿಂದ ಮತ್ತು ಪ್ರೇರಣೆಯಿಂದ ಜೀವವು ಈಶ್ವರ–ಸಂಬೋಧಿಯ ಲಾಭ ಪಡೆಯುತ್ತಾನೆ. ಅಂಥ ಆನಂದಪ್ರದ ಭಕ್ತಿರಸದ ಅಭಾವದಿಂದಾಗಿ, ಪಾತಂಜಲ ದರ್ಶನವು ಭಕ್ತರ ದೊಡ್ಡ ಬಳಗವನ್ನು, 'ಹರಿಪರಿ ಮಂಡಲ'ವನ್ನು ನಿರ್ಮಿಸಲಿಲ್ಲ.

ಹೂವಿನ ಸುರಭಿಯು ಕೇವಲ ದೇವತೆಗಳಿಗಷ್ಟೇ ಕಾಮ್ಯವೆಂದೇನೂ ಅಲ್ಲ. ಭಕ್ತನು ಸಹ ತನ್ನ ಹೃದಯದ ಸುರಭಿಯಿಂದ ತನ್ನ ಇಷ್ಟಕ್ಕೋಸುಗ ಮಾಲೆಯನ್ನು ಹೆಣೆಯುತ್ತಾನೆ. ಹೂವಿನಲ್ಲಿ ಸುರಭಿ ಇಲ್ಲವಾದರೆ ಆ ಹೂವಿಗೆ ಭಕ್ತನಿಗೋಸುಗ ಯಾವ ಬೆಲೆಯೂ ಇಲ್ಲ. ಹೂವಿನ ಸುರಭಿ ಮತ್ತು ಭಕ್ತನ ಹೃದಯದ ಕೋಮಲ ಮಾಧುರ್ಯಗಳೆರಡೂ ಸೇರಿ ಒಂದು ಸುಂದರ ಜೋಡಿಯಾಗುವುದೆಂಬುದನ್ನು ನೆನಪಿಡಬೇಕು.

ಇಲ್ಲಿ ಹೂವಿನ ಸುರಭಿ ಯಾವುದು? ಜಗತ್ತಿನ ಕಾರ್ಯಗಳಲ್ಲಿ ಭಕ್ತನ ಪ್ರಾಣ ಮಿಶ್ರಿತ ಪ್ರೇಮವೇ ಸುರಭಿಯಾಗಿದೆ. ಮತ್ತು ಇಷ್ಟದತ್ತ ಇರುವ ಪ್ರೇಮವೇ ಭಕ್ತ ಹೃದಯದ ಮಾಧುರ್ಯವಾಗಿದೆ. ಇವೆರಡರ ಮೇಳದಿಂದಲೇ ಭಕ್ತನ ಮೂಲಕ ಹೆಣೆದ ಮಾಲೆಯುಂಟು. ಒಂದು ವೇಳೆ ಹೂವಿನಲ್ಲಿ ಪರಿಮಳವಿರಬಹುದು. ಆದರೆ ಭಕ್ತನ ಹೃದಯದಲ್ಲಿ ಪರಿಮಳವಿರದಿದ್ದರೆ, ಇಷ್ಟಕ್ಕೋಸುಗ ಮಾಲೆಯನ್ನು ಹೊಳೆಯಲಾಗದು. ಆದ್ದರಿಂದ ಮಾಲೆಯನ್ನು ಧರಿಸುವ ಪ್ರಶ್ನೆಯೇ ವಿಳದು. ಈ ಕಾರಣದಿಂದ ಬುಟ್ಟಿಯಲ್ಲಿ ಬಹಳಷ್ಟು ಹೂವಿರಬಹುದು. ಆದರೆ ರಸವಿರಹಿತವಾದುದರಿಂದ ಮತ್ತು ಅಸ್ವೀತೃಕವಾದ ಬಳಲಿಕೆಯಿಂದ ಆ ಹೂವು ಬಾಡಿ ಹೋಗುತ್ತವೆ. ಯಾರನ್ನು ಪ್ರೀತಿಸಿಲ್ಲವೋ, ಒಂದು ವೇಳೆ, ಅವನು ಮಾಲೆಯನ್ನು ಗ್ರಹಿಸದಿದ್ದರೆ ಬುಟ್ಟಿ ತುಂಬಿದ ಹೂವುಗಳು ಅತ್ತು ಅತ್ತು ಹೇಳುವುದರ ಅರ್ಥವೇನು?

ಭರಾ ಸಾಜಿ ಕಿ ಗೋ
ಹೇ ಮೋರ ದೇವತಾ
ಏಮನಿ ಭರಿಯಾ ರಫೇ

* * *

ಈ ಎನ್ನ ಹೂಗಳ ಬುಟ್ಟಿ;
ಓ ದೇವ; ಪ್ರೇಮದ ಘಟ್ಟಿ!
ಎಂದೆಂದು; ತುಂಬಿ ಉಳಿವುದೆ?

ಪಾತಂಜಲ ದರ್ಶನವು ಶಿವನನ್ನು ಈಶ್ವರನೆಂದು ಸ್ವೀಕರಿಸಿತಾದರೂ, ನಿಜವಾಗಿ ಅವನನ್ನು ಹೃದಯದ ಒಡೆಯನೆಂದು ಒಪ್ಪಲಿಲ್ಲ. ನಿಜವಾಗಿಯೂ ಇದು ಶಿವನಿಗೆ ಮಾಡಿದ ಮಹಾ ಅನ್ಯಾಯ. ಏಕೆಂದರೆ, ಅವನು ಮಾನವ ಹೃದಯದ ಪರಮ ಪ್ರಭುವಾಗಿದ್ದಾನೆ. ಈ ಕಾರಣದಿಂದ, ಪಾತಂಜಲ ಯೋಗದರ್ಶನದ ಬೆಳಕಿನಲ್ಲಿ, ಶಿವನ ಮಹಿಮೆಯು ಸರಿಯಾದ ರೀತಿಯಲ್ಲಿ ಪ್ರತಿಫಲಿತವಾಗಿಲ್ಲ. ಅದೆಂತು ಸಾಧ್ಯವಾದೀತು? ಏಕೆಂದರೆ ಪಾತಂಜಲ ಯೋಗ ದರ್ಶನದ ಪ್ರಕಾಶವು ಮಧ್ಯಮ ತರಗತಿಯದಾಗಿದೆ. ಶಿವನ ಅಸಾಮಾನ್ಯ ಬೆಳಕಿನೆದುರು, ಅವನ ವಿದ್ಯುಲ್ಲೋಕದ ಪ್ರಕಾಶದೆದುರು, ಪಾತಂಜಲ ದರ್ಶನವು ಮಿಂಚು–ಹುಳದ ಬೆಳಕಿಗಿಂತಲೂ ಕಡಿಮೆಯೇ ಸರಿ.

ಪಟಣಾ:
೩೦–೭–೧೯೮೨

ಪ್ರವಚನ ೧೮

ದರ್ಶನದ ಬೆಳಕಿನಲ್ಲಿ ಶಿವ–೩

ದಾರ್ಶನಿಕ ಜಗತ್ತಿನಲ್ಲಿ ಮಹರ್ಷಿ ಕಣಾದರು ತಮ್ಮ ವೈಶೇಷಿಕ ದರ್ಶನ-ಶಾಖೆಯನ್ನು ಪ್ರಸ್ತುತಪಡಿಸಿ, ಒಂದು ಹೊಸ ಗಾಳಿಯನ್ನೇ ಎಬ್ಬಿಸಿದರು. ಆ ಕಾಲದ ವೈಚಾರಿಕ ಲೋಕದಲ್ಲಿ, ಇದೊಂದು ಹೊಸ ಗಾಳಿಯ ಕಾರಣವೇ ಆಗಿತ್ತು. **'ಕಾರಣ ಭಾವಾತ್ ಕಾರ್ಯಭಾವಃ'** ಎಂದವರು ಘೋಷಿಸಿದರು. ಅಂದರೆ ಕಾರಣ ಇಲ್ಲವಾದ ಮೇಲೆ ಕಾರ್ಯವೂ ಇರಲಾರದು. ಅರ್ಥಾತ್ ಪ್ರತಿಯೊಂದು ಕಾರ್ಯದ ಹಿಂದೆ, ಒಂದು ಕಾರಣವಿದೆ. ನಾವು ಆ ಕಾರಣವನ್ನು ತಿಳಿದಿರಬಹುದು; ತಿಳಿಯದಿರಬಹುದು. ಈ ಅಣು–ಪರಮಾಣು-ವ್ರಸರೇಣುಗಳ ರೂಪದಲ್ಲಿ ಅಭಿವ್ಯಕ್ತಗೊಂಡ ಈ ಸಂವೃತ್ತಿಗಳನ್ನೊಳಗೊಂಡ ಭೂಮಾ ಚಿತ್ತಕ್ಕೂ ಕಾರಣವಿರಬೇಕು, ಎಂದವನು ಘೋಷಿಸಿದನು. ಕಾರಣವನ್ನು ಒಪ್ಪದಿರುವುದೆಂದರೆ, ಮೂರ್ಖತನದ ಪರಮಾವಧಿ! ಮತ್ತು ಈ ಅಣು-ಪರಮಾಣ–ವ್ರಸರೇಣುಗಳ ಸಂಶ್ಲೇಷಣೆಯ ಸ್ತರದಲ್ಲಿ ಯಾರ ನಿಯಂತ್ರಣವಿದೆಯೋ ಅವನೇ ಈಶ್ವರನಾಗಿದ್ದಾನೆ. ಕಣಾದರು ಚಿಂತನ ಜಗತ್ತಿನಲ್ಲಿ ಒಂದು ವಿರಾಟ ವಿಪ್ಲವ ತಂದರು. ಗಾಂಧಾರ ಭೂಮಿಯ (ಕಂದಹಾರ ಅಂದರೆ ಇಂದಿನ ಅಪಘಾಣಿಸ್ತಾನ) ಈ ವಿರಾಟ ಸಾರಸ್ವತ ಪುರುಷನು ವಿಜ್ಞಾನಿಯೂ ಆಗಿದ್ದ ಮತ್ತು ದಾರ್ಶನಿಕನೂ ಆಗಿದ್ದ. ಆ ಯುಗದ ದಾರ್ಶನಿಕ ಜಗದ ಕಾರ್ಯಕಾರಣ ತತ್ತ್ವವು ವೈಚಾರಿಕ ಜಗತ್ತಿನಲ್ಲಿ ಒಂದು ಅಭಿನವ ವಸ್ತುವೆನಿಸಿತ್ತು. ಎಂಬದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಕಾರ್ಯಕಾರಣ ತತ್ತ್ವದ ಚಕ್ರ ಹಿಡಿದುಕೊಂಡು ನಡೆದಾಗ ನಾವು ಯಾವ ಕಾರ್ಯ ಇಲ್ಲವೆ ಯಾವ ಕಾರಣವನ್ನು ಪಡೆಯುವೆವೋ, ಅದರ ಉತ್ಸ ಇಲ್ಲವೆ ಮೂಲ ಬಿಂದುವಿನ ಸಾಧನೆಯನ್ನೂ ಸಹ ಮಾಡಲೇಬೇಕಾಗುತ್ತದೆ. ವೈಶೇಷಿಕ ದರ್ಶನವು ಸುಸ್ಪಷ್ಟ ಭಾಷೆಯಲ್ಲಿ ಈಶ್ವರನನ್ನು ಒಪ್ಪಿದೆ. ಈ ಕಾರಣದಿಂದ, ಒಂದು ವೇಳೆ, ಈ ಕಾರ್ಯಕಾರಣ ತತ್ತ್ವದ ಆದಿಕಾರಣ ಇಲ್ಲವೆ ಆದಿ ಕಾರ್ಯವು ಈಶ್ವರನಿಂದಲೇ ಬಂದಿದೆಯೆಂದು ಹೇಳಿದರೂ ಸಹ, ಒಂದು ಪ್ರಶ್ನೆಯು ಹಾಗೆಯೇ ಉಳಿಯುತ್ತದೆ. ಅದೆಂದರೆ ದಾರ್ಶನಿಕ ವಿಶ್ಲೇಷಣೆಯಲ್ಲಿ ಈ ಈಶ್ವರನ ಗ್ರಹಿಕೆ ಬಂದುದು ಹೇಗೆ? ಮತ್ತು ಈ ಈಶ್ವರನು ದೃಕ್‌ಸತ್ತೆಯೇ? ದಾರ್ಶನಿಕ ಸತ್ತೆಯೇ? ಅವನು ಕಾರಣ ಸತ್ತೆಯೇ ಇಲ್ಲವೆ ಕೃತ ಸತ್ತೆಯೇ? ವೈಶೇಷಿಕ ದರ್ಶನ

ಶಾಖೆಯು ಈ ಎಲ್ಲ ಅಂಶಗಳಲ್ಲಿ ಸುಸ್ಪಷ್ಟವಾಗಿಲ್ಲ.

ಇದಲ್ಲದೆ, ಅಣು-ಪರಮಾಣು-ವ್ಯಸರೇಣುಗಳೊಂದಿಗೆ ಈಶ್ವರನ ಯಾವ ಸಂಬಂಧವಿದೆ? ಯಾವ ಸಂಪರ್ಕದ ಶಕ್ತಿಯ ಮೇಲೆ ಅವನು ಅವುಗಳನ್ನು ನಿಯಂತ್ರಿಸುತ್ತಿದ್ದಾನೆ? ಇದನ್ನು ಸಹ ಹೇಳುವುದು ಅಗತ್ಯವಾಗಿದೆ. ಅದನ್ನು ಹೇಳದಿದ್ದರೆ, ವೈಶೇಷಿಕ ದರ್ಶನವು ಸ್ಪಷ್ಟ ರೂಪದಿಂದ ದ್ವೈತವಾದಿಯಾಗಿಬಿಡುತ್ತದೆ. ಅದ್ವೈತವ ಒಂದು ಚೂರು ಸಹ ಇದರಲ್ಲಿ ಸಿಗದಂತಾಗುತ್ತದೆ. ಒಂದು ವೇಳೆ ದ್ವೈತವೇ ಆದರೂ, ಒಂದು ಸತ್ತೆಯು ಎರಡನೆಯದರೊಂದಿಗೆ ಯಾವ ಪ್ರಕಾರದ ಸಂಪರ್ಕದಲ್ಲಿ ಬರುತ್ತದೆ? ವೈಶೇಷಿಕ ದರ್ಶನದ ದೃಷ್ಟಿಯಲ್ಲಿ ಈ ಪ್ರಕಾರ ಶಿವನನ್ನು ಗ್ರಹಿಸಲಾಗಲಿಲ್ಲ. ವೈಶೇಷಿಕ ದರ್ಶನದ ಅಸ್ತವ್ಯಸ್ತ, ಬಹುಫಲಿತ ಬೆಳಕಿನಲ್ಲಿ ಗೊಂದಲವಾಗಿದೆ. ಆದರೆ ಆ ಗೊಂದಲದಿಂದಾಗಿ ಜನರು ತಮ್ಮ ಲಕ್ಷ್ಯವನ್ನೂ ತಲುಪದಾದರು. ಮತ್ತು ಹಾದಿ ತಪ್ಪಿದರು. ಇದರಿಂದ ಕಣ್ಣುಕಾಣದ ಗಾವಿಲರಾಗಿ ಕೊನೆಯಂಚಿಗೆ ಬಂದು ಬಂಡೆಗೆ ತಲೆ ಜಜ್ಜಿಕೊಳ್ಳುತ್ತ "ಪ್ರಭೂ, ನಾನು ನಿನ್ನ ಯಾನ ವ್ಯಾಖ್ಯೆ ಪಡೆದೆನೋ, ಅದರಿಂದ ನಿನ್ನನ್ನು ತಿಳಿಯದಾದೆ. ನಿನ್ನ ಪರಿಚಯವು ನನಗೆ ಸಿಕ್ಕಲಿಲ್ಲ. ನೀನು ನನ್ನ ಪ್ರಾಣದ ಪ್ರಾಣನಾಗಿರುವೆ. ಇದನ್ನು ತಿಳಿದರೂ ಸಹ, ದಾರ್ಶನಿಕ ತತ್ತ್ವವು ಈ ಮಾತನ್ನು ತಿಳಿಯಲಿಲ್ಲ. ಈ ದಾರ್ಶನಿಕ ತತ್ತ್ವವು ನನ್ನ ಮೂಕ ಹೃದಯದಲ್ಲಿ ಕೇವಲ ಅಳುವಿನ ಮಾಲೆಯನ್ನೇ ಹೆಣೆಯಿತು. ಈ ಮೂಲ್ಯವಾದ ಮಾನವ ಆಧಾರವನ್ನು ಪಡೆದರೂ ಸಹ, ನಾನು ಸದಾಕಾರ ಅತ್ತುಕರೆದು ಹೀಗೆ ಹೇಳಬೇಕಾಗುವುದೇ?"

ಪಾಷಾಣ ದೇವತಾ ಪೂಜಿಬೋ ಬಲಿಯಾ
ಬಹುದೂರ ಹೋತೇ ವಿಸೇಖಿ ಚಲಿಯಾ.
ದಿಓನಾ ದಿಓನಾ ಚರಣೇ ಠೇಲಿಯಾ
ಕಪಾಲ ಆಮಾರ ಮಂದ
ಮಾನವೇರ ಪ್ರಾಣೇ ಕಾಮನಾ ಅಪಾರ
ಭಯನಾ ಈ ಪ್ರಭು ಫಿರಾಇಓ ನಾ ಆರ
ಸುಧಾ ಇಬೇ ಸುಧು ಕೀ ದೋಷ ಆಮಾರ
ಧೂಚೇ ಜಾಬೇ ದ್ವಿಧಾ ದ್ವಂದ್ವ

ದೂರದಿಂದ ಬಂದೆ ನಾನು
ಶಿಲೆಗೆ ದೇವನೆಂದು ಭಜಿಸಲು
ನೂಕಬೇಡ; ಚರಣದಿಂದ
ದೈವ ಕೆಟ್ಟದೆನ್ನದಾಗಲು.
ಮನುಜ ಪ್ರಾಣ ಬಯಕೆಗಿಲ್ಲ ಪಾರವು.
ಅಂಜಿ ದೇವ! ಆಶೆ-ಭಂಗ ಹೊಲ್ಲವು.
ಹೇಳು ಸಾಕು! ನನ್ನ ದೋಷವಾವುದು?
ನಾನು ದ್ವಂದ್ವವಳಿವ ಪರಿಯು ಯಾವುದು?

ದೋಷಪೂರ್ಣ ದರ್ಶನವು ಜನರನ್ನು ದೋಷಪೂರಿತ ಹಾದಿಗೊಯ್ಯುತ್ತದೆ. ನಾನು ಈಗಾಗಲೇ ಇದನ್ನು ಹೇಳಿದ್ದೇನೆ. ಮತ್ತು ವೈಶೇಷಿಕ ದರ್ಶನಕ್ಕೆ ಸಂಬಂಧಿಸಿದಂತೆ ನಾನು ಅದನ್ನು ಮತ್ತೊಮ್ಮೆ ಹೇಳುವೆ.

ದರ್ಶನದ ಬೆಳಕಿನಲ್ಲಿ ಶಿವ–೪

ದಾರ್ಶನಿಕ ಯುಗದ ಮಧ್ಯಭಾಗದಲ್ಲಿ ಮೀಮಾಂಸಕರ ಯುಗವು ಬಂದಿತ್ತು. ಸೃಷ್ಟಿ ಮತ್ತು ಸೃಷ್ಟಾ ಇವರ ಸಂಬಂಧದಲ್ಲಿ ಸಾಧಾರಣ ಮನುಷ್ಯರಿಗೆ ಅಸಾಮಂಜಸ್ಯವು ಕಾಣಬರುತ್ತಿತ್ತು. ಈ ಮೀಮಾಂಸಕರು ಅದನ್ನು ನಿರಾಕರಿಸಿದರು. ಸೃಷ್ಟಿಯಲ್ಲಿ ಹೇಗೆ ಪೂರ್ಣಚ್ಛೇದವಿಲ್ಲವೋ, ಅದೇ ರೀತಿ ಸೃಷ್ಟಾನಲ್ಲಿಯೂ ಸಹ ಪರಿಚ್ಛೇದವಿಲ್ಲ. ಕೆಲವರು ಈ ಮೂಲತತ್ತ್ವವನ್ನು ಪೂರ್ಣ ಒಪ್ಪಿದ್ದರು. ಕೆಲವರು ಅಂಶತಃ ಒಪ್ಪಿದ್ದರು. ಕೆಲವರು ಒಪ್ಪಿರಲೇ ಇಲ್ಲ. ತಮ್ಮ ತಮ್ಮ ಬುದ್ಧಿಗನುಸಾರ, ಅವರು ಸೃಷ್ಟಾನ ಅಸೀಮತೆಗೆ–ಸಕಾರಣವಾಗಿಯೋ, ಅಕಾರಣವಾಗಿಯೋ–ವಿವಿಧ ಸಂಕೋಚಗಳನ್ನೂ, ಸೀಮೆಗಳನ್ನೂ ಹೇರಿದರು.

ಹಲವು ದಾರ್ಶನಿಕರು ಕೇವಲ ಓದುಗರ ತೃಪ್ತಿಗಾಗಿ, ತಮ್ಮ ತತ್ತ್ವಗಳನ್ನು ಪ್ರತಿಪಾದಿಸಿದರು. ಬೇರೆ ಹಲವರು ತಮ್ಮ ಸಿದ್ಧಾಂತಗಳನ್ನು, ಜಗತ್ತಿನಲ್ಲಿ ಆಕಸ್ಮಿಕವಾಗಿ ಮೂಡಿ ಕಣ್ಣು ಕೋರೈಸಿ, ಜನರಿಗೆ ಮನಮೋಹಕ ದೃಶ್ಯ ನೀಡಿ ಬೆಳ್ಳಿಮೋಡದ ಹಿಂದೆ ಮರೆಯಾಗುವ ಬಣ್ಣ ಬಣ್ಣದ ಕಾಮನಬಿಲ್ಲಿನಂತೆ, ತರ್ಕಭೂಮಿಯಲ್ಲಿ ಝಗರ್ಝುಗಿಸುವಂತೆ ಮಂಡಿಸಿದರು. ಆದರೆ ಒಂದು ಸಾಮಾನ್ಯ ಅಂಶವು ಎದ್ದುಕಾಣುತ್ತಿದೆ. ಅದೆಂದರೆ ಅವರ ವಾಗ್ವೈಖರಿ ಮತ್ತು ಅವರ ತರ್ಕ ನೈಪುಣ್ಯತೆ!

ಮೀಮಾಂಸಕರಲ್ಲಿ ಎಲ್ಲರಿಗಿಂತ ಹೆಚ್ಚಿನ ಪ್ರತಿಷ್ಠೆ ಪಡೆದವರು ಮತ್ತು ಸರ್ವಶ್ರೇಷ್ಠರಾದವರೆಂದರೆ ಉತ್ತರ ಮೀಮಾಂಸ ದರ್ಶನದ ಆಚಾರ್ಯ ಬಾದರಾಯಣ ವ್ಯಾಸ, ಆಚಾರ್ಯ ಗೌಡಪಾದ, ಆಚಾರ್ಯ ಗೋವಿಂದಪಾದ, ಮತ್ತು ಶ್ರೀಮಾನ್ ಶಂಕರಾಚಾರ್ಯ. ಪೂರ್ವ ಮೀಮಾಂಸಕರ ಖ್ಯಾತಿವೆತ್ತ ದಾರ್ಶನಿಕನೆಂದರೆ ಆಚಾರ್ಯ ಜೈಮಿನಿ.

ಮೀಮಾಂಸ ದರ್ಶನದ ವ್ಯಾಖ್ಯಾನಕಾರರು, ಟೀಕಾಕಾರರು, ಮತ್ತು ಟಿಪ್ಪಣಿಕಾರರು ಬಹಳಷ್ಟು ವೇಳೆ ಒಬ್ಬರಿಂದ ಇನ್ನೊಬ್ಬರು ನೂರು ಯೋಜನ ದೂರವಿರುತ್ತಿದ್ದರು. ಆದರೆ ಅವರೆಲ್ಲರೂ ಮೂಲಸತ್ತೆಯ ರೂಪದಲ್ಲಿ ಬ್ರಹ್ಮನನ್ನು ಸ್ವೀಕರಿಸುತ್ತಿದ್ದರು. ಕೆಲವರು ಸೃಷ್ಟಜಗತ್ತನ್ನೂ ಒಪ್ಪಿದ್ದರು; ಬೇರೆ ಕೆಲವರು ಅರ್ಧಂಬರ್ಧ ಒಪ್ಪಿದ್ದರು. ಕೆಲವರು ಇದರ ಕಾರಣವನ್ನು ಒಪ್ಪದಿದ್ದರೆ ದೋಷ ತಟ್ಟುವುದೇನೋ ಎಂದು ಒಪ್ಪಿದ್ದರು. ಕೆಲವರು ಒಪ್ಪಿರಲೂ ಇಲ್ಲ. ಅವರು, ಇದೆಲ್ಲ ಕೇವಲ ಭ್ರಮೆ; ಭ್ರಾಂತಿಯ ಸಮಾರೋಹ ಎಂದು ಹೇಳುತ್ತಿದ್ದರು. ಈ ಜಗತ್ತೆಂದು ತೋರುವುದು ಒಂದು ದೋಷ. ಮತ್ತು ಯಾರಿಗೆ ಅದು ತೋರುವುದೋ, ಅವರ ಮನವು ಸಹ ದೋಷಪೂರ್ಣವಾಗಿದೆ. ಇರುವುದು, ಬ್ರಹ್ಮ ಒಂದೇ. ಬೇರಾವುದೂ ಇಲ್ಲ. ಮಾಯೆ ಎಂಬ ಕಾಲ್ಪನಿಕ ಸತ್ತೆಯೇ ಎಲ್ಲವನ್ನೂ ಮಾಡಿಸುತ್ತದೆ. ಮಾಯೆಯು ಮಿಥ್ಯಾ

ಸ್ವಭಾವಿಯಾಗಿದೆ. ಆದ್ದರಿಂದ ಅದು ವಾಸ್ತವದಲ್ಲಿ ಏನೂ ಅಲ್ಲ. ಅದೇ ಮಾಡುತ್ತಿದೆಯೆಂದು ತಿಳಿದುಬರುತ್ತದೆ. ಏಕೆಂದರೆ ಮಾಯೆಯು ಮಿಥ್ಯಾಸ್ವಭಾವಿಯಾಗಿದೆ. ಈ ಕಾರಣದಿಂದ ಅದರ ಅಸ್ತಿತ್ವವೂ ಮಿಥ್ಯೆಯಾಗಿದೆ. ಅದು 'ಅಘಟನ-ಘಟನ ಪಟೀಯಸಿ'. ಅಂದರೆ ಯಾವುದು ಇಲ್ಲವೋ ಅದು ಇದೆಯೆಂದು ತೋರಿಸುತ್ತಿರುತ್ತದೆ. ಅರ್ಥಾತ್ ಆ ಮಾಯೆಯೂ ಸಹ ವಾಸ್ತವದಲ್ಲಿ ಇಲ್ಲ. ಇರುವುದೆಂದರೆ ಕೇವಲ ಬ್ರಹ್ಮವೊಂದೇ.

"ಅಷ್ಟ ಕೂಲಾಚಲ ಸಪ್ತ ಸಮುದ್ರಾಃ ಬ್ರಹ್ಮ ಪುರಂದರ ದಿನಕರ ರುದ್ರಾಃ
ನ ತ್ವಂ ನಾಹಂ ನಾಯಂ ಲೋಕಃ ವ್ಯರ್ಥ ಕಿಮಪಿ ಕ್ರಿಯತೇ ಶೋಕಃ

ಎಂಟು ಮಹಾದೇಶಗಳೂ, ಈ ಮಹಾ ಮಹಾ ಸಪ್ತ ಸಮುದ್ರಗಳೂ, ಈ ಬ್ರಹ್ಮ, ಇಂದ್ರ, ಸೂರ್ಯ, ರುದ್ರ ಈ ಯಾವವೂ ಇಲ್ಲ. ಅಬ್ಬಾ! ನೀನೂ ಇಲ್ಲ! ನಾನೂ ಇಲ್ಲ! ಅಂದ ಮೇಲೆ ಯಾರು ಏಕೆ ಇದು ನನ್ನದು; ಇದು ನಿನ್ನದು ಎಂದು ಮಿಥ್ಯಾ ಸಂಸಾರದಿಂದ ಮಾಯೆಯನ್ನು ಬೆಳೆಸುತ್ತಿದ್ದಾರೆ?

ಅವರು ಮಿಥ್ಯೆ-ಮಾಯೆಗಳ ಜಗತ್ತಿನಲ್ಲಿ ದೊಡ್ಡ ದೊಡ್ಡ ಮತಗಳನ್ನು ಕಟ್ಟಿದ್ದಾರೆ. ಈ ಮಿಥ್ಯಾ-ಮಾಯೆ ತುಂಬಿದ ಜಗತ್ತಿನಿಂದ ಬಹಳಷ್ಟು ಧನ ಸೆಳೆದಿದ್ದಾರೆ. ಮತ್ತು ಮಿಥ್ಯೆ–ಮಾಯೆಯ ತಾಳೆ ಪತ್ರ ಇಲ್ಲವೆ ಭೂರ್ಜ ಪತ್ರಗಳ ಮೇಲೆ ದೊಡ್ಡ ದೊಡ್ಡ ಪೋಥಿಗಳನ್ನು ಬರೆದಿದ್ದಾರೆ. ಮತ್ತು ಈ ಮಿಥ್ಯೆ–ಮಾಯೆ ತುಂಬಿದ ಜಗತ್ತಿನಲ್ಲಿ ತಮ್ಮ ಮಿಥ್ಯೆ–ಮಾಯಾವಾದದ ಪ್ರಚಾರಕ್ಕೋಸುಗ, ಟೊಂಕಕಟ್ಟಿ ಸರ್ವಶಕ್ತಿ ಪ್ರಯೋಗ ಮಾಡಿದ್ದಾರೆ.

ಒಂದು ವೇಳೆ, ಈ ಜಗತ್ತು ಮಿಥ್ಯೆಯೇ ಆಗಿದ್ದರೆ, ಸೃಷ್ಟ ಜಗತ್ತಿಗೆ ಯಾವ ಬೆಲೆಯೂ ಇರುತ್ತಿರಲಿಲ್ಲ. ಸೃಷ್ಟಿಕರ್ತನ ಬೆಲೆಯೂ ಇರುತ್ತಿರಲಿಲ್ಲ. ಒಂದು ವೇಳೆ ಸೃಷ್ಟಿಯೇ ಇರದಿದ್ದರೆ, ಸೃಷ್ಟಾನ ಅಸ್ತಿತ್ವವು ಸಹ ಇಲ್ಲವಾಗುತ್ತಿರಲಿಲ್ಲವೇ?

ಶಿವನಾದರೋ, ಈ ಸೃಷ್ಟ ಜಗತ್ತನ್ನು ತನ್ನ ಪ್ರಾಣಪಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದನು. ಶಿಕ್ಷಣ, ಚಿಕಿತ್ಸೆ, ರಾಜನೀತಿ, ನೃತ್ಯ, ಗೀತ, ವಾದ್ಯ, ಆಧ್ಯಾತ್ಮಿಕ ಸಾಧನೆ, ಈಯೆಲ್ಲವನ್ನು ಅವನು ತನ್ನ ಸ್ನೇಹಪೂರ್ಣ ಸಂತಾನಕ್ಕೆ, ತನ್ನ ಎದೆಯಲ್ಲಿ ಇರಿಸಿಕೊಂಡು, ಪ್ರೀತಿಯಿಂದ ಕಲಿಸಿದನು. ಒಂದುವೇಳೆ, ಅವನು ಜಗತ್ತನ್ನು ಮಿಥ್ಯೆಯೆಂದು ತಿಳಿದಿದ್ದರೆ, ಅವನು ಅದನ್ನು ಉಪೇಕ್ಷಿಸಿ ಬಿಡುತ್ತಿದ್ದನು. ಆಗ ಅದು ಶಿವನ ಪರಿಚಯವನ್ನು ನೀಡುತ್ತಿರಲಿಲ್ಲ. ಅದು ಶವರೂಪವಾಗಿ ಬಿಡುತ್ತಿತ್ತು.

ಉತ್ತರ ಮೀಮಾಂಸಾ ದರ್ಶನದ ಇತರ ಭಾಷ್ಯಗಳಿಗಿಂತ ಶ್ರೇಷ್ಠ ಭಾಷ್ಯೆಯಾದ ಮಾಯಾವಾದವು, ಶಿವನ ಅಸ್ತಿತ್ವದ ಮಾತನ್ನೇ ಬಹುಶಃ ಮರೆತುಬಿಟ್ಟಿತು. ಆದ್ದರಿಂದ ಅದು ಶಿವ–ವಿಜ್ಞಾನದ ಮೂಲಕ್ಕೇ ಕೊಡಲಿ ಏಟು ಹಾಕಿ, ತನ್ನನ್ನೇ ಪ್ರತಿಷ್ಠಿಸಿಕೊಳ್ಳುವ ವ್ಯರ್ಥ ಪ್ರಯತ್ನ ಮಾಡಿತು. ಇನ್ನೂ ಮೋಜಿನ ವಿಷಯವೆಂದರೆ, ಮಾಯಾವಾದದ ಪುರಸ್ಕರ್ತರಾದ ಶ್ರೀಮದ್ ಶಂಕರಾಚಾರ್ಯರನ್ನು ಶಿವನ ಅವತಾರ ರೂಪದಲ್ಲಿಯೇ ಕಲ್ಪಿಸಿದ್ದಾರೆ; ಬಣ್ಣಿಸಿದ್ದಾರೆ. ಉತ್ತರ–ಮೀಮಾಂಸ ದರ್ಶನವು, ಶಿವನ ವಿರಾಟತ್ವ ಮತ್ತು ವ್ಯಾಪಕತ್ವದೆದುರು, ತನ್ನ ಸೋಲನ್ನೊಪ್ಪಿತು. ಈ ಕಾರಣದಿಂದ, ಯಾವುದೇ ವಾಕ್ಯಾತುರ್ಯ ಮತ್ತು ವಾಗ್ವೈಖರಿಗಳ ಮೂಲಕವೂ ಸಹ,

ಅವರು, ಪೃಥ್ವಿಯ ಮೇಲೆ ಯಾವನೊಬ್ಬ ವಿರಾಟ ವ್ಯಕ್ತಿತ್ವದ ಕರ್ಮಸ್ಪಂದನವು ದಾರ್ಶನಿಕ ಸಮರ್ಥನೆಯಿಂದ ಸ್ಪಂದಿತವಾಗಬಹುದಾದ ಗುರುತು ನಿಲ್ಲಿಸಲು ಸಮರ್ಥರಾಗಲಿಲ್ಲ. ಈ ಮಾಯಾವಾದದ ಅಸ್ತಿವಾರದ ಮೇಲೆ, ಅನಂತರ ರಚಿತವಾದ ಇನ್ನಿತರ ಶಾಸ್ತ್ರಗಳು, ಪ್ರಪಂಚದ ವಿಷಯದಲ್ಲಿ, ಮಾನವ ಮನದಲ್ಲಿ, ನಿರುತ್ಸಾಹವನ್ನು ಹುಟ್ಟಿಸಿದವಷ್ಟೇ. ಆದರೆ, ಇದೆಲ್ಲ ಶೈವ–ಆದರ್ಶಕ್ಕೆ ಪೂರ್ಣ ವಿರೋಧಿಯಾಗಿದೆ. ಉತ್ತರ ಮೀಮಾಂಸ ದರ್ಶನವಾಗಲಿ, ಮಾಯಾವಾದವಾಗಲಿ, ಕಠಿಣ ಕಲ್ಲು ಬಂಡೆಗೆ ಜಜ್ಜಿ ಜಜ್ಜಿ ತಲೆ ಒಡೆದುಕೊಂಡರೂ ಅದು ಶಿವನ ಮಹತ್ವವನ್ನು ತಿಳಿಯಲಾರದು.

ದರ್ಶನದ ಬೆಳಕಿನಲ್ಲಿ ಶಿವ–ಜ

ಇಂದಿನಿಂದ ಸುಮಾರು ಎರಡೂವರೆ ಸಾವಿರ ವರುಷ ಮೊದಲು, ಯಾವಾಗ ಆರ್ಷಧರ್ಮಸೂರ್ಯನು ಮುಳುಗಹತ್ತಿದ್ದನೋ, ಆಗ ಭಕ್ತಿಹೀನ, ಮಮತಾಹೀನ ಮತ್ತು ಆದರ್ಶಹೀನ, ಕೆಲವು ಯಜ್ಞ ಮತ್ತು ತೋರಿಕೆಯೇ ತುಂಬಿದ ಅನುಷ್ಠಾನಗಳಲ್ಲಿಯೇ, ಧರ್ಮವು ಸೀಮಿತವಾಗಿತ್ತು. ಆ ಯುಗದಲ್ಲಿ ವಿವೇಚನೆಯುತ ಬುದ್ಧಿವಂತ ಮತ್ತು ಸಜ್ಜನರಲ್ಲಿ ಒಂದು ವಿಕ್ಷೋಭವು ಜನ್ಮ ತಳೆಯಹತ್ತಿತ್ತು. ತನ್ನ ಆ ವಿಕ್ಷೋಭಕ್ಕೆ ಅವರು ರೂಪ ನೀಡುವ ಯಾವುದೇ ಹಾದಿಯನ್ನು ಪಡೆಯಲಿಲ್ಲ. ಅದುಮಿದ ಭಾವನೆಗಳನ್ನು ಸ್ಪಷ್ಟ ಭಾಷೆಯಲ್ಲಿ ಉದ್ಘೋಷಿಸಲಾರದಾಗಿದ್ದರು. ಆಗ ಧರ್ಮವು ಸಾರಶೂನ್ಯವಾಗಿತ್ತು; ಮಾನವ ಹೃದಯದ ಆಳವಾದ ಹಸಿವನ್ನು ಹಿಂಗಿಸಲು ಬೇಕಾದ ತಿರುಳೇ ಇಲ್ಲದ ಹಣ್ಣಿನಂತಾಗಿತ್ತು. ಇದನ್ನು ಕುರಿತು ಅವರಲ್ಲಿ ಕ್ಷೋಭೆ ಮೂಡಿತ್ತು. ಕೆಲವೇ ಕೆಲವರು ಲೋಭವೃತ್ತಿಯಿಂದ ಪ್ರೇರಿತರಾಗಿ, ಭಾವಜಡತೆ (Dogma) ಯನ್ನು ಬೆಳೆಸಿ, ಸಾಧಾರಣ ಜನರನ್ನು ಶೋಷಿಸುತ್ತ ಸಾಗಿದ್ದರು.

ಈ ಜಲವಿಲ್ಲದ, ರಾಡಿ ತುಂಬಿದ, ಸಮಾಜ ಸರೋವರದಲ್ಲಿ ಜೀವನದ ಸ್ಪಂದನ ಹೆಬ್ಬಿಸಲು, ಬಹುಜನರು ಹೆಚ್ಚು ಕಡಿಮೆ ಪ್ರಯತ್ನವನ್ನೂ ಸಹ ಮಾಡಿದ್ದಾರೆ. ಆದರೆ ಇಪರಲ್ಲಿ ವಿಶೇಷವಾಗಿ ಕೇಳಿಬರುವ ಹೆಸರುಗಳಲ್ಲಿ ಒಂದನೆಯದೆಂದರೆ, ಮಹರ್ಷಿ ಬೃಹಸ್ಪತಿಯದು. (ಚಾರ್ವಾಕ) ಎರಡನೆಯದೆಂದರೆ ವರ್ಧಮಾನ ಮಹಾವೀರನದು. ಇನ್ನು ಮೂರನೆಯದೇ ಗೌತಮ ಬುದ್ಧನದು.

ಗೌತಮ ಬುದ್ಧನು ಅನುಷ್ಠಾನಪೂರ್ಣ ಧರ್ಮವನ್ನು ಸ್ಪಷ್ಟ ಭಾಷೆಯಲ್ಲಿ ವಿರೋಧಿಸಿದನು. ಅವನು ಮಾನವರಿಗೆ ನೀತಿಮಾರ್ಗ ಹಿಡಿದು ಸಾಗಲು ಪರಾಮರ್ಶಿಸಿದನು. 'ನಿಮ್ಮನ್ನು ತಯ್ಯಾರಿಗೊಳಿಸಿರಿ. ಯಾವುದು ಸತ್ವವೋ ಅದು ತಂತಾನೇ ನಿಮ್ಮೆದುರು ಸ್ಪಷ್ಟವಾಗಿ ನಿಲ್ಲುತ್ತದೆ, ಎಂದನು. ಏಕೆಂದರೆ ಬುದ್ಧನು ಈಶ್ವರನನ್ನು ಕುರಿತು ಏನನ್ನೂ ಹೇಳಿರಲಿಲ್ಲ. ಆತ್ಮ ಕುರಿತು ಅವನ ಹೇಳಿಕೆಯು ಅಸ್ಪಷ್ಟವಾಗಿತ್ತು. ಮತ್ತು ಅವನು ಸ್ಪಷ್ಟವಾಗಿ ವೇದಗಳ ಸಮರ್ಥನೆಯನ್ನಂತೂ ಮಾಡಲಿಲ್ಲ. ಈ ಮೂರು ಕಾರಣಗಳಿಂದ, ಬುದ್ಧನ ದರ್ಶನವನ್ನು ನಾಸ್ತಿಕ ಮತವಾದ ರೂಪದಲ್ಲಿ ಗಣಿಸಲಾಗಿದೆ. ಈಶ್ವರನನ್ನು ಕುರಿತಂತೂ ಬುದ್ಧನು ಸ್ಪಷ್ಟವಾಗಿ ಏನನ್ನೂ ಹೇಳಲಿಲ್ಲ ಎಂಬ ಈ ಮಾತೇನೋ ಸರಿಯಾಗಿದೆ. ಆದರೆ ಅವನು ಸಯುಕ್ತಿಕವಾಗಿ ಇಲ್ಲವೆ ಯುಕ್ತಿರಹಿತ

ವಾಗಿ ಈಶ್ವರನ ವಿರುದ್ಧವಾಗಿಯೂ ಏನನ್ನೂ ಹೇಳಿಲ್ಲ. ಅವನಿಗೆ ಒಂದು ಪ್ರಶ್ನೆ ಕೇಳಿದರು: 'ಕಿಂ ಭಗವತ್ ಅತ್ಥಿ?" ಆಗ ಬುದ್ಧನು ಯಾವುದೇ ಉತ್ತರ ನೀಡಲಿಲ್ಲ. ಆ ಬಳಿಕ ಅವನನ್ನು ಕುರಿತು 'ಕಿಂ ಭಗವತ್ ನಾತ್ಥಿ?' ಎಂದು ಕೇಳಿದರು. ಆಗಲೂ ಸಹ ಬುದ್ಧನು ಯಾವುದೇ ಉತ್ತರ ನೀಡಲಿಲ್ಲ. ಇದರಿಂದ ಮೂರು ಶ್ರೇಣಿಯ ಮಾನವರು ಬುದ್ಧನ ವಿಷಯವಾಗಿ ಮೂರು ಪ್ರಕಾರದ ಧಾರಣೆಯನ್ನು ನಿರ್ಮಿಸಿ ಕೊಂಡರು. ಒಂದು ಗುಂಪು, ಬುದ್ಧನು 'ಕಿಂ ಭಗವತ್ ಅತ್ಥಿ?' ಎಂಬ ಪ್ರಶ್ನೆಗೆ ಉತ್ತರ ನೀಡಿಲ್ಲವಾದ್ದರಿಂದ, ಅವನು 'ನಾಸ್ತಿಕ'ನಿದ್ದಿರಬಹುದೆಂದು ಭಾವಿಸಿದರು. ಎರಡನೆಯ ಗುಂಪಿನವರು, ಬುದ್ಧನು 'ಕಿಂ ಭಗವತ್ ನಾತ್ಥಿ? ಎಂಬುದನ್ನು ಉತ್ತರಿಸಿಲ್ಲ ವಾದ್ದರಿಂದ, ಅವನು ನಿಶ್ಚಯವಾಗಿಯೂ ಆಸ್ತಿಕನಾಗಿದ್ದಾನೆಂದರು. ಮತ್ತೆ ಕೆಲವು ಜನರು, ಈಶ್ವರನ ಅಸ್ತಿತ್ವವು ಮನದ ಸಂಕಲ್ಪ–ವಿಕಲ್ಪಗಳೆರಡರ ಆಚೆಗಿದೆಯಾದ್ದರಿಂದ ಅವನು 'ಅಸ್ತಿ–ನಾಸ್ತಿ'ಗಳಾಚೆ ಇದ್ದಾನೆ. ಈ ಕಾರಣದಿಂದಾಗಿ ಬುದ್ಧನು ಮೌನವಾಗಿ ದ್ದನು, ಹೇಳಿದರು.

ಜಾ ತೇಈ ಬು ತೇ ತವಿ ತಾಲ
ಗುರು ಬೋಬ ಸೇ ಶಿಷಾ ಕಾನಲ
ಭಣಿ ಕಾಹೂ ಜಿನ ರಅನ ಬಿಕೈಸಾ
ಕಾಲೇ ಬೋಬ ಸಂಬೋಹಿಅ ಜೈಸಾ

ಬುದ್ಧನು ಜೀವಾತ್ಮನ ಸಂಬಂಧವಾಗಿ, ಜೀವಾತ್ಮ, ಇಲ್ಲವೆ ಅಂಥ ಬೇರಾದ ಶಬ್ದವನ್ನೂ ಬಳಸಲಿಲ್ಲ. ಆದರೆ, "ಅತ್ತಾಹಿ ಅತ್ತಾನಂನಾಥ" ವಾಕ್ಯ ಬಳಸಿದನು. ಇದಕ್ಕೆ ಎರಡು ಅರ್ಥಗಳುಂಟು. ಒಂದು ಅರ್ಥವೆಂದರೆ, 'ತಾನೇ ತನ್ನ ಅಧೀಶ್ವರ' ಎಂದು. ಇನ್ನೊಂದು ಅರ್ಥವೂ ಇದೆ. 'ಆತ್ಮವೇ ಆತ್ಮದ ಅಧೀಶ್ವರ' ಎಂದು. ಎರಡನೆಯ ಅರ್ಥವೇ ಸಂಗತವಾಗಿದೆ. ಏಕೆಂದರೆ, ಪ್ರಾಕೃತದಲ್ಲಿ 'ಅಪ್ಪನ್' ಶಬ್ದವನ್ನು 'ಸ್ವಯಂ' ಇಲ್ಲವೆ 'ತಾನು' ಎಂದು ಸೂಚಿಸಲು ಬಳಸುತ್ತಾರೆ. ಇನ್ನು 'ಅತ್ತ' ಶಬ್ದವನ್ನು ಮುಖ್ಯವಾಗಿ 'ಆತ್ಮನ್' ಎಂಬುದನ್ನು ಸೂಚಿಸಲು ಬಳಸುತ್ತಾರೆ. ಹೀಗೆ ಬುದ್ಧನು ಆತ್ಮದ ಅಸ್ತಿತ್ವವನ್ನು ಒಪ್ಪಲಿಲ್ಲವೆಂದು ಯಾರೂ ನಿರ್ಣಯಿಸಿಲ್ಲ. ಈ ವಿಷಯದಲ್ಲಿ ಚರ್ಚೆಗೆ ಸಾಕಷ್ಟು ಅನುವು ಇದೆ.

ಬುದ್ಧನು ವೇದಗಳನ್ನು ಸಮರ್ಥಿಸಲಿಲ್ಲವೆಂಬುದೇನೋ ನಿಜ. ಆದರೆ ತನ್ನ ದರ್ಶನವನ್ನು ಬೋಧಿಸುವಾಗ ಅವನು 'ಏಷ ಧಮ್ಮ ಸನಾತನ.' ಇದುವೇ ಸನಾತನ ಧರ್ಮ ಎಂದು ಹೇಳಿದ್ದಾನೆ.

ಬುದ್ಧನು ಅತ್ಯಂತ ಸ್ಪಷ್ಟವಾಗಿ ಮತ್ತು ದೃಢವಾಗಿ ಪುನರ್ಜನ್ಮ ಸಿದ್ಧಾಂತವನ್ನು ಸಮರ್ಥಿಸಿದ್ದಾನೆ. ನಿಜ ಸಂಗತಿಯೆಂದರೆ, ಪುನರ್ಜನ್ಮ ಸಿದ್ಧಾಂತ ಕುರಿತು ಅವನಿಗಿಂತ ಮೊದಲಿನ ಯಾವ ದರ್ಶನ ಮತವಾದಗಳಲ್ಲಿಯೂ ಜನ್ಮಾಂತರವಾದ ಕುರಿತು ಇಷ್ಟೊಂದು ಮಹತ್ವವನ್ನು ನೀಡಿರಲಿಲ್ಲ. ಯಾರು ಜನ್ಮಾಂತರವಾದವನ್ನು ಒಪ್ಪುವರೋ, ಅಪರು ಆತ್ಮವನ್ನು ಸಹ ಒಪ್ಪಲು ಬಾಧ್ಯಸ್ಥರಾಗಿದ್ದಾರೆ. ಆತ್ಮವನ್ನೇ ಒಪ್ಪದಿದ್ದರೆ, ಜನ್ಮಾಂತರವು ಯಾರಿಗೆ ಆಗುತ್ತದೆ?

ಬುದ್ಧನ ನಿರ್ವಾಣ ಇಲ್ಲವೆ ಮಹಾನಿರ್ವಾಣ ಕುರಿತು ನಾನಿಲ್ಲಿ ಏನನ್ನೂ ಹೇಳ ಬಯಸುವುದಿಲ್ಲ. ಏಕೆಂದರೆ, ಅದು ಇಲ್ಲಿ ಆಲೋಚಿಸುತ್ತಿರುವ ವಿಷಯದ ಹೊರಗಿದೆ.

ಅದೇನೇ ಇರಲಿ; ಇಲ್ಲಿ ಬುದ್ಧನ ನಾಸ್ತಿಕವಾದದ ವಿಷಯದಲ್ಲಿಯ ಸಂಶಯ ಕುರಿತು ಮಾತ್ರ ನಾನು ಪ್ರಸ್ತಾಪಿಸಿದ್ದೇನಷ್ಟೇ. ನಾವಿಲ್ಲಿ ಶಿವಾದರ್ಶ ಮತ್ತು ಬೌದ್ಧ ಮತವಾದಗಳ ಸಂಬಂಧ ಮತ್ತು ಸಂಪರ್ಕ ಕುರಿತು ಚರ್ಚಿಸೋಣ.

ಬುದ್ಧನ ಆಸ್ತಿಕತೆಯ ಸಂಬಂಧದಲ್ಲಿ ಸ್ವಲ್ಪ ಮತಭೇದವಿದೆ. ಇದೇನೋ ಸರಿ. ಆದರೆ, ಬುದ್ಧನ ನೀತಿವಾದಿತ್ವ ಕುರಿತು ಯಾವುದೇ ಮತಭೇದವಿಲ್ಲ. ಬುದ್ಧನ ಮಾತು ಮಾತಿನಲ್ಲಿಯೂ ನೀತಿವಾದದ ಕುಲುಷರಹಿತ ಪ್ರಕಾಶವು ಹಬ್ಬಿದೆ. ಬುದ್ಧನಿಗಿಂತ ಮೊದಲಿನವರಾರೂ, ಈ ಪ್ರಕಾರದ ನೀತಿವಾದದ ಉಜ್ವಲ ಶಿಖೆಯಿಂದ ಮಾನವ ಮನವನ್ನು ಬೆಳಗಿರಲಿಲ್ಲ. ಪ್ರಗತಿ ಸಾಧಿಸಲು ಬುದ್ಧನು ನಿರ್ದೇಶಿಸಿದ ಅಷ್ಟಾಂಗ ಮಾರ್ಗವೂ ಸಹ ಪಶುತ್ವದಿಂದ ಮಾನವತ್ವದತ್ತ ಉನ್ನತಿ ಸಾಧಿಸುವಲ್ಲಿ ಸಹಾಯ ಸಲ್ಲಿಸಿದೆ. ಬುದ್ಧನು ಬೋಧಿಸಿದ ಎಂಟು ಅಂಗಗಳೆಂದರೆ— ೧) ಸಮ್ಯಕ್ ದರ್ಶನ ೨) ಸಮ್ಯಕ್ ಸಂಕಲ್ಪ ೩) ಸಮ್ಯಕ್ ವಾಕ್ ೪) ಸಮ್ಯಕ್ ಆಜೀವ ೫) ಸಮ್ಯಕ್ ವ್ಯಾಯಾಮ ೬) ಸಮ್ಯಕ್ ಕರ್ಮಾಂತ ೭) ಸಮ್ಯಕ್ ಸ್ಮೃತಿ ೮) ಸಮ್ಯಕ್ ಸಮಾಧಿ. ಈ ಪ್ರಕಾರದ ಧಾರೆಯಲ್ಲಿ ಮುನ್ನಡೆಯಬೇಕು. ಈ ಮಾತುಗಳು ನೀತಿವಾದದ ಕಠೋರ ವೇದಿಕೆಯನ್ನು ನಿರ್ಮಿಸಲೋಸುಗ ಒಂದು ದೃಢವಾದ ಹೆಜ್ಜೆ ಎಂಬುದರಲ್ಲಿ ಸಂದೇಹವೇ ಇಲ್ಲ.

ನೀತಿವಾದವು ಸಾಧನೆ–ಮಾರ್ಗದ ಆಸ್ತಿವಾರವೇ ಆಗಿದೆ.ಆದರೂ ಸಹ ಚಲಿಸುವ ಪಥದ ಗಂತವ್ಯ ಕುರಿತು ಯಾವ ಸಾಧನೆಯಿದೆಯೋ, ಅದು ಪಥಿಕನ ಮನದಲ್ಲಿ ಪ್ರಾಣ ರಸದ ಸೃಷ್ಟಿ ಮಾಡಬಲ್ಲದೇ ಹೊರತು, ನೀತಿವಾದ ಮಾತ್ರದಿಂದ ಇದು ಕೈಗೂಡದು. ನೀತಿವಾದವೇ ಜೀವನದ ಲಕ್ಷ್ಯವೇನಲ್ಲ. ಬೌದ್ಧ ಮತವಾದದ ಆಸ್ತಿಕ ನಾಸ್ತಿಕ ಪ್ರಶ್ನೆಗಳನ್ನು ಎತ್ತದೆ, ಅದೊಂದು ನೀತಿಸಾಮ್ಯತ ಜೀವನಧಾರೆಯೆಂದು ಮಾತ್ರ ಹೇಳ ಬಲ್ಲೆವು.

ಮಾನವನು ಚಲಿಸುತ್ತ ಬಂದಿದ್ದಾನೆ. ಚಲಿಸಹತ್ತಿದ್ದಾನೆ, ಚಲಿಸುತ್ತ ಸಾಗುವನು. ಚಲನೆಯಲ್ಲಿ ಯಾವುದೇ ವಿರಾಮ ಚಿಹ್ನೆಯಿಲ್ಲ; ಯಾವುದೇ ಯತಿಚಿಹ್ನೆಯಿಲ್ಲ. ಚಲನೆಯಲ್ಲಿ ಒಂದೇ ಲಕ್ಷ್ಯವಿರುವುದು ಅನಿವಾರ್ಯವಾಗಿದೆ. ಇದಲ್ಲದೆ ತನ್ನ ಪರಿಸರದೊಂದಿಗೆ ಸಹ ಒಂದು ಸಂಬಂಧವನ್ನು ಅವನು ಸ್ಥಾಪಿಸಿಕೊಳ್ಳಬೇಕು. ಲಕ್ಷ್ಯವಂತೂ ಇರಲೇಬೇಕು. ಏಕೆಂದರೆ ಲಕ್ಷ್ಯವೇ ಜನರನ್ನು ತನ್ನತ್ತ ಆಕರ್ಷಿಸುತ್ತದೆ. ಮತ್ತು ಅವರ ಗತಿಯ ಪಥದಲ್ಲಿ ಅವಶ್ಯಕ ಪ್ರೇರಣೆ ನೀಡಲು, ತಕ್ಕ ಪರಿಸರವೂ ಇರತಕ್ಕದ್ದು. ಬೌದ್ಧ ದರ್ಶನದಲ್ಲಿ ಇದರ ಅಭಾವವು ಎದ್ದು ಕಾಣುತ್ತದೆ. ಬೌದ್ಧ ದರ್ಶನವು ಜಗತ್ತಿನ ಸಂಬಂಧವಾಗಿ, ಮಾನವನನ್ನು ನೀತಿವಾದಿಯಾಗಿ ನಿರ್ಮಿಸುವುದೇನೋ ಸರಿಯೇ. ಆದರೆ, ಸರ್ವರಲ್ಲಿ 'ಅನಿಹಾ' ಅಂದರೆ ಉದಾಸೀನತೆಯನ್ನು ಉಂಟು ಮಾಡುತ್ತದಲ್ಲದೆ 'ನಿನಿಕತನ'ವನ್ನೂ ಬೆಳೆಸುತ್ತದೆ. ಶೂನ್ಯವಾದದ ಶೂನ್ಯವನ್ನು ಪರಮ ತತ್ತ್ವವೆಂದು ಒಂದು ವೇಳೆ, ಒಪ್ಪಿದರೆ, ಆ ಕ್ಷೇತ್ರದಲ್ಲಿಯೂ ಸಹ, ಬಲಿಷ್ಠ

ಜೀವನಾದರ್ಶದ ಛಂದಮಯ ಸಾಮಂಜಸ್ಯವನ್ನು ಕಂಡುಕೊಂಡಮೇಲೆ ಸಹ, ಅದು ಪ್ರಾಪ್ತಿಯಾಗದೆಂದು ಹೇಳುತ್ತಾರೆ.

'ಯಥಾ ಶೂನ್ಯವಾದಿನಾಂ ಶೂನ್ಯಂ, ಬ್ರಹ್ಮ ಬ್ರಹ್ಮವಿದಾಸ್ತಥಾ' ಶೂನ್ಯವಾದಿಗಳಾದ ಬೌದ್ಧರಿಗೆ ಶೂನ್ಯವು ಹೇಗೆ ಇರುವುದೋ, ಅದೇ ರೀತಿ ಬ್ರಹ್ಮವಾದಿಗಳಿಗೆ ಬ್ರಹ್ಮವಿದೆ. ಮಾಯಾವಾದದ ಪ್ರತಿಪಾದಕರು, ಈ ಶಬ್ದಗಳಲ್ಲಿ ಬೌದ್ಧವಾದವನ್ನು ತಮಗೆ ತೋಚಿದಂತೆ ಅರ್ಥೈಸಿದರಲ್ಲದೆ ಬ್ರಹ್ಮವನ್ನು ಬೆಲೆಯಿಲ್ಲದ ಶೂನ್ಯಕ್ಕೆ ಹೋಲಿಸಿ, ಮಾನವ ಜೀವನದ ಸಾರಸತ್ವವನ್ನೇ ಅಲ್ಲಗಳೆದರು.

ಬೌದ್ಧ ಮತವಾದದಲ್ಲಿ ಆರ್ಯಮತವೆಂದು ಘೋಷಿತವಾದ ನಾಲ್ಕು ಸತ್ಯಗಳು (ಚತುರಾರ್ಯ ಸಚ್ಚಮ) ಇಂತಿವೆ— ೧) ದುಃಖ ೨) ದುಃಖದ ಕಾರಣ ೩) ದುಃಖದ ನಿವೃತ್ತಿ ೪) ದುಃಖದ ನಿವೃತ್ತಿಯ ಉಪಾಯ.

ಒಂದು ವೇಳೆ, ದುಃಖವೇ ಒಂದು ಮೂಲ ತತ್ತ್ವವಾಗಿದ್ದರೆ, ಮತ್ತು ದುಃಖದ ಮೂಲ ಕಾರಣವು ಅವಿದ್ಯೆಯೇ ಆಗಿದ್ದರೆ, ಅದರ ಸೃಷ್ಟಾ ಯಾರು? ಈ ಪ್ರಶ್ನೆಗೆ ಉತ್ತರ ದೊರೆಯದೇ ಉಳಿಯುತ್ತಿದೆ. ಮನೋವೈಜ್ಞಾನಿಕ ತತ್ತ್ವದಲ್ಲಿ ಸುಖ–ದುಃಖಗಳೆರಡೂ ವಿಶೇಷ ಪ್ರಕಾರದ ಮಾನಸಿಕ ಅವಸ್ಥೆಗಳಾಗಿವೆ. ಮನವು ಇಲ್ಲದಾಗ, ಸುಖವು ಹೇಗೆ ಇರಲಾರದೋ, ಅದೇ ರೀತಿ ದುಃಖವು ಸಹ ಇರಲಾರದು. ಈ ಕಾರಣದಿಂದ ಮನವನ್ನು ಬಿಟ್ಟು, ಸುಖವನ್ನು ಬಿಟ್ಟು, ಕೇವಲ ದುಃಖವನ್ನಷ್ಟೇ ಆರ್ಯ ಮತವು ಯಾವ ರೀತಿ ಒಪ್ಪಬಲ್ಲದು? ಇದೇನು ಜೀವನದ ಸಂಬಂಧದಲ್ಲಿ ನೇತಿವಾದದ (negative thought) ವಿಚಾರಧಾರೆಯಾಗಲಿಕ್ಕಿಲ್ಲವೇ?

ಶಿವನ ಉಗುರಿನಿಂದ ಮೊದಲು ಮಾಡಿ, ಅವನ ಶಿರದ ಜಡೆಯವರೆಗೆ ಸರ್ವವೂ 'ಇತಿ' ವಾದಿಗಳಾಗಿದೆ. ಸರ್ವವು ಅಸ್ತಿತ್ವದ ಬೆಳಕಿನಿಂದ ಝಗಝಗಿಸುತ್ತಿವೆ. ಸರ್ವವು ಕಠೋರವೂ, ಕೋಮಲವೂ ಆದ ಮಾಧುರ್ಯಮಯ ಸ್ಪರ್ಶದಿಂದ ಜೀವನವನ್ನು ಓತಪ್ರೋತಗೊಳಿಸಿ, ತುಂಬಿ–ತುಳುಕಿಸಿ, ಉಲ್ಲಾಸಿತಗೊಳಿಸುತ್ತದೆ. ದುಃಖವಾದದ ಕನ್ನಡಿಯಲ್ಲಿ ಆ ಬೆಳಕಿನ ಕಾಂತಿ, ಆ ಪ್ರಕಾಶಗಳು ಕಾಣಬರುವುದಿಲ್ಲ. ಶಿವನ ಪರಿಮಂಡಲದಲ್ಲಿ ಯಾವ ಬೆಳಕು ಮೂಡಿದೆಯೋ, ಆ ಬೆಳಕಿನಲ್ಲಿ ದುಃಖವಾದವು ತನ್ನ ಅಸ್ತಿತ್ವವನ್ನೇ ಕಳೆದುಕೊಂಡು ಬಿಟ್ಟಿದೆ. ಈ ಕಾರಣದಿಂದ, ಶಿವನ ಮಹಿಮೆಯನ್ನು ದುಃಖವಾದದ ಮೂಲಕ ಗ್ರಹಿಸಲಾರೆವು.

ದರ್ಶನದ ಬೆಳಕಿನಲ್ಲಿ ಶಿವ–೬

ಬೌದ್ಧ ಮತವಾದವು ಯಾವ ರೀತಿ, ಶುಷ್ಕ ವ್ರತನೇಮಗಳ ವಿರುದ್ಧ ಜನರಲ್ಲಿ ವಿಕ್ಷೋಭವನ್ನು ಹರಡಿತ್ತೋ, ಅದೇ ರೀತಿ, ಜೈನ ಮತವಾದವೂ ಸಹ ಹರಡಿತ್ತು. ಇವೆರಡೂ ವೈದಿಕ ಕರ್ಮಕಾಂಡದ ವಿರುದ್ಧ ಸ್ಪಷ್ಟ ರೂಪದಿಂದ ವಿದ್ರೋಹವೆಸಗಿದವು. ಅವರು ವೈದಿಕ ಜ್ಞಾನ ಕುರಿತು ಅಷ್ಟೇನೂ ಹೇಳಲಿಲ್ಲ. ಏಕೆಂದರೆ ಜ್ಞಾನ ಕಾಂಡವು ಸಾಧಕರ ಮನದಲ್ಲಿ ತುಂಬಾ ಜನಪ್ರಿಯವಾಗಿತ್ತು. ಅದೇ ರೀತಿ ಈ ಸಾಧನ–ಮಾರ್ಗವು ಜನಸಾಮಾನ್ಯರಲ್ಲಿ ಪ್ರಚಲಿತವಿರಲಿಲ್ಲ. ಎಂದು ಸಹ ಹೇಳಬಹುದಾಗಿದೆ. ಅವರು ವೈದಿಕ ವ್ರತನೇಮಗಳಿಂದ ಸಂತುಷ್ಟರಾಗಿದ್ದರು. ಅದೂ ಸಹ ವಿಶಿಷ್ಟ ಶ್ರೇಣಿಯ ಜನರ ಮಾರ್ಗದರ್ಶನದಲ್ಲಿ. ಹೀಗೆ ಅವರು ಇದುವೇ ಧರ್ಮ ಮಾರ್ಗವೆಂದು ತಪ್ಪಾಗಿ ಒಪ್ಪಿಬಿಟ್ಟರು. ಬುದ್ಧ ಮತ್ತು ವರ್ಧಮಾನ ಮಹಾ ವೀರರೀರ್ವರೂ ವಿಶೇಷವಾಗಿ ಪಶುಬಲಿ ಮತ್ತು ವ್ರತನೇಮಗಳ ಯಜ್ಞ–ಯಾಗಗಳನ್ನು ಕಟುವಾಗಿ ವಿರೋಧಿಸಿದರು. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಯಾವುದೇ ನೀತಿ ವಿರೋಧಿ ಆಚಾರಗಳನ್ನು ಅವರು ವಿರೋಧಿಸಿದರು. ಆದರೆ ಬುದ್ಧನು ನೀತಿವಾದಕ್ಕೆ ವಿಶೇಷ ಪ್ರಾಶಸ್ತ್ಯ ನೀಡಿದನು. ಅವನು ಅಹಿಂಸೆಯನ್ನು ಸಹ ಪರಮ ಧರ್ಮವೆಂದು ಒಪ್ಪಿದನು. ವರ್ಧಮಾನ ಮಹಾವೀರನು ಅಹಿಂಸೆಗೆ ಅಧಿಕ ಪ್ರಾಶಸ್ತ್ಯ ನೀಡಿದನು. ನೀತಿವಾದದ ಬಗೆಗೆ ಅವನು ಅಷ್ಟೊಂದು ಒತ್ತಿ ಹೇಳಲಿಲ್ಲ.

ದಾರ್ಶನಿಕ ವಿಚಾರದಲ್ಲಿ ಇಬ್ಬರೂ ನಿರ್ವಾಣ-ತತ್ತ್ವವನ್ನು ಒಪ್ಪಿದ್ದರು. ಆದರೆ ಇವರೀರ್ವರ ನಿರ್ವಾಣದಲ್ಲಿ ಸ್ವಲ್ಪ ಅಂತರವಿದೆ. ಬುದ್ಧನ ನಿರ್ವಾಣವು ಜ್ಞಾನ ನಿರ್ವಾಣವಾಗಿತ್ತು. ಇತ್ತ ಮಹಾವೀರನ ನಿರ್ವಾಣವು ಕಾರ್ಯ ನಿರ್ವಾಣವಾಗಿದೆ. ಈರ್ವರೂ ಮಾನವನರನ್ನು ಜೊತೆಗೆ ಕರೆದೊಯ್ಯಲು ಬಯಸುತ್ತಿದ್ದರು. ಆದರೆ ಬುದ್ಧನು ತನ್ನ ಕರುಣಾಪೂರಿತ ಕರೆಯಿಂದ ಮಾನವರಲ್ಲಿ ಮೂಡಿಸಿದ ಭಾವನೆಯನ್ನು ವರ್ಧಮಾನ ಮಹಾವೀರನು ಆ ಮಟ್ಟದಲ್ಲಿ ಮೂಡಿಸದಾದನು. ಅವನು ಜಗತ್ತನ್ನು ಅಸ್ವೀಕಾರ ಮಾಡಿದ್ದನೆಂದೇನೂ ಅಲ್ಲ; ಆದರೆ, ಅವನು ವಾಸ್ತವಿಕ ಜಗತ್ತಿನಿಂದ ಕೊಂಚ ದೂರ ಹೋದನು. ಜೈನ ಮತವಾದವು ತ್ಯಾಗ ತಿತಿಕ್ಷೆಗಳ ಅಡಿಪಾಯದ ಮೇಲೆ ನಿಂತಿದೆ. ಈ ಕಾರಣದಿಂದಾಗಿಯೇ ಅವರು ವಾಸ್ತವಿಕ ಜಗತ್ತಿನಲ್ಲಿ ಪಾಂಚ ಭೌತಿಕ ಸುಖ–ದುಃಖಗಳಿಂದ ತುಂಬಿದ ಮಾನವ ಜೀವನದ ಬಗೆಗೆ ಸ್ವಲ್ಪ ಉಪೇಕ್ಷಿಸಿದರು. ಆದರೆ ಶಿವನಾದರೋ ಇದಕ್ಕೆ ವಿಪರೀತ. ಅವನು ಜೀವನದ ಸಮಸ್ತ ಅಧಿಕ್ಷೇತ್ರಗಳಲ್ಲಿ ಮಾನವರನ್ನು ಮುನ್ನಡೆಸುವ ಪ್ರೇರಣೆ ಮತ್ತು ಪ್ರೇಕ್ಷಣೆ ನೀಡಿದನಲ್ಲದೆ, ಸಕ್ರಿಯ ರೂಪದಲ್ಲಿ ಮುನ್ನಡೆದು ತೋರಿಸಿದನು.

ದರ್ಶನದ ಬೆಳಕಿನಲ್ಲಿ ಶಿವ–೭

ಬೌದ್ಧ ಮತ್ತು ಜೈನ ಮತಗಳು ಒಳ್ಳೆಯವೋ? ಕೆಟ್ಟವೋ? ಆಸ್ತಿಕವೋ? ನಾಸ್ತಿಕವೋ? ಇವು ನಮ್ಮ ಈಗಿನ ಚರ್ಚೆಯ ವಿಷಯಗಳಲ್ಲ. ಆದರೆ, ಅವು ಸತ್ ನೀತಿ ಹಿಡಿದು ಸಾಗಿವೆಯೆಂಬುದು ಮಾತ್ರ ನೂರಕ್ಕೆ ನೂರರಷ್ಟು ಸತ್ಯ. ಅವು ಆ ಕಾಲದ ಶುಷ್ಕ ವ್ರತನೇಮದ ಧರ್ಮಗಳನ್ನು ವಿರೋಧಿಸಿದುದೇನೋ ನಿಜ. ಆದರೆ ಅವುಗಳೆಂದೂ ನೀತಿಯ ಗೆರೆಯನ್ನು ಮೀರಲಿಲ್ಲ. ಅವು ನೀತಿ ನಿಯಮಗಳಿಗೆ ಅಂಟಿಕೊಂಡೇ ಉಳಿದವು. ಆದರೆ ಚಾರ್ವಾಕನ ಜಡ ದರ್ಶನವು ಶುಷ್ಕ ವ್ರತನೇಮಗಳ ಧರ್ಮಾಚರಣೆಯನ್ನು ವಿರೋಧಿಸುವುದರೊಂದಿಗೆ ನೀತಿಯನ್ನಾಗಲಿ, ಮಾನವೀಯ ಮೂಲ್ಯ ಬೋಧೆಯನ್ನಾಗಲಿ ಸ್ವೀಕರಿಸಲಿಲ್ಲ.

ಯಾವಜ್ಜೀವೇತ್ ಸುಖಂ ಜೀವೇತ್
ಋಣಂ ಕೃತ್ವಾ ಘೃತಂ ಪಿಬೇತ್.

(ನೀವು ಜೀವಿಸಿರುವ ವರೆಗೆ ಸುಖವಾಗಿ ಜೀವಿಸಿರಿ. ಸಾಲ ಮಾಡಿದರೂ ಚಿಂತೆಯಿಲ್ಲ; ತುಪ್ಪ ತಿನ್ನಿರಿ.)

ಇದೆಂಥ ಹೇಳಿಕೆ? ಈ ಪ್ರಕಾರದ ಮಾತು ಮಾನವನನ್ನು ಪಶುತ್ವದ ಗಹ್ವರದಲ್ಲಿ ನೂಕಿಬಿಡುತ್ತವೆ. ಪ್ರತಿಯೋರ್ವ ಮಾನವನು ಇನ್ನೋರ್ವನನ್ನು ಕುರಿತು ಅವಿಶ್ವಾಸ ವ್ಯಕ್ತಪಡಿಸುತ್ತಾನೆ. ಸಂದೇಹ ವ್ಯಕ್ತಪಡಿಸುತ್ತಾನೆ. ಶೋಷಣವಾದವು ತನ್ನ ರಥವನ್ನು ಮಾನವನ ಅಸ್ಥಿಪಂಜರದ ದೇಹದ ಮೇಲೆ ನಡೆಸುತ್ತದೆ. ಈ ಪ್ರಕಾರದ ಜಡವಾದರೋ, ಮಾನಸಿಕ ಕ್ಷೇತ್ರದಲ್ಲಾಗುತ್ತದೆ ಮತ್ತು ಪಾಂಚಭೌತಿಕ ಕ್ಷೇತ್ರದಲ್ಲಿ ಶೋಷಣವಾದವೆನಿಸುವುದಲ್ಲದೆ ಬೇರೇನೂ ಅಲ್ಲ.ಕೇವಲ ಇಷ್ಟೇ ಅಲ್ಲದೆ,ಈ ಪ್ರಕಾರದ ಮತವಾದವು, ಮನುಷ್ಯನನ್ನು ಭೋಗಪಿಪಾಸುವಾಗಿಸುತ್ತದಲ್ಲದೆ, ಅವನೊಳಗಿನ ಸಂಪದದ ಪ್ರತಿಯೊಂದು ವಸ್ತುವನ್ನೂ ಧ್ವಂಸಗೊಳಿಸುತ್ತದೆ. ಮಾನವನು ತನ್ನ ಮಾನವತ್ವದ ಅಡಿಪಾಯವನ್ನೇ ಕಳೆದುಕೊಳ್ಳುತ್ತಾನೆ.

ಯಾವಜ್ಜೀವಂ ಸುಖಂ ಜೀವಂ ನಾಸ್ತಿ ಮೃತ್ಯೋರ ಗೋಚರಃ ।
ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ ॥

(ನೀವು ಈ ಭೂಮಿಯ ಮೇಲೆ ಜೀವಿಸಿರುವತನಕ ಸುಖವಾಗಿ ಜೀವಿಸಿರಿ. ಮರಣಾನಂತರ ಏನೊಂದೂ ಇಲ್ಲ.

ಸುಟ್ಟು ಭಸ್ಮವಾದ ದೇಹವು ಅದೆಂತು ಮರಳಿ ಬರುವುದು?

ವೇದದಲ್ಲಿ ಕರ್ಮಕಾಂಡ (ಮಂತ್ರ ಮತ್ತು ಬ್ರಾಹ್ಮಣ) ಮತ್ತು ಜ್ಞಾನಕಾಂಡ (ಆರಣ್ಯಕ ಮತ್ತು ಉಪನಿಷತ್) ಗಳೆರಡೂ ಇವೆ. ಬೇಕಾದರೆ ಕರ್ಮಕಾಂಡವನ್ನು ಅಜ್ಞತೆಯೆಂದೋ ಇಲ್ಲವೆ ಶೋಷಕರ ಚೂರಿಯೆಂದೋ ತಿಳಿಯಬಹುದು. ಆದರೆ, ಜ್ಞಾನಕಾಂಡವನ್ನು ಮಾತ್ರ ಆ ರೀತಿ ಬಿಡಲಾರೆವು. ಮಾನವೀಯ ಮೂಲ್ಯಬೋಧದ ಬಹಳಷ್ಟು ಅಂಶಗಳು ಅವುಗಳಲ್ಲಿವೆ. ಇದರ ಹೊರತು, ದಾರ್ಶನಿಕ ಮತಭೇದವನ್ನು ದಾರ್ಶನಿಕ ಸ್ತರದ ಮೇಲೆ, ತರ್ಕದ ಮೂಲಕ, ಮುಕ್ತಿಯ ಮೂಲಕ, ವಾದ-ಜಲ್ಪ-ವಿತಂಡಗಳ ಮೂಲಕ, ಪ್ರತಿಷ್ಠಿತಗೊಳಿಸಬೇಕಾಗುತ್ತದೆ. ಆದರೆ, ಯಾರೊಬ್ಬರ ವಿರೋಧವಾಗಿ ಒರಟು ಇಲ್ಲವೆ ಅಸಭ್ಯ ಭಾಷೆಯ ಬಳಕೆ ಸಲ್ಲದು.

"ತ್ರಯ್ಯೋ ವೇದಸ್ಯ ಕರ್ತಾರಃ ಭಂಡ-ಧೂರ್ತ-ನಿಶಾಚರಃ"

(ಮೂರು ವೇದಗಳ ಕರ್ತರು, ಭಂಡರು, ಧೂರ್ತರು, ನಿಶಾಚರರು.)

ಇದೆಂಥ ಅಸಭ್ಯ ಭಾಷೆ? ಶುಷ್ಕ ವ್ರತನೇಮಗಳ ಧರ್ಮಾನುಷ್ಠಾನವನ್ನು ನಿಂದಿಸುವ ಭರದಲ್ಲಿ ತನ್ನನ್ನು ತಾನು ಬಹಳಷ್ಟು ನೀಚಮಟ್ಟಕ್ಕಿಳಿಸಿಕೊಂಡಿದ್ದಾನೆ,ಚಾರ್ವಾಕ.

ಬಹಳ ಸಹಜ ಯುಕ್ತಿಯಿಂದ ಪ್ರಮಾಣಿತವಾಗಿರುವುದೇನೆಂದರೆ–ಜಡ-ಜಗತ್ತು ಪಂಚಭೂತಗಳ ಸಂಯೋಗದಿಂದಾಗಿದೆ. ಆದರೆ ಯುಕ್ತಿಯ ಕ್ಷೇತ್ರದಲ್ಲಿ, ಅವರು ವೈೀಮತತ್ತ್ವವನ್ನು ಸ್ವೀಕರಿಸಿಲ್ಲ. ಆದರೆ ಇಂದಿನ ವಿಜ್ಞಾನ ಮತ್ತು ಪ್ರಯುಕ್ತಿ ವಿದ್ಯೆಯಿಂದ ಈ ವಿಚಾರವು ತಪ್ಪೆಂದು ಸಿದ್ಧವಾಗುತ್ತದೆ. ಚಾರ್ವಾಕನು ಹೀಗೆ ಹೇಳಿದ್ದಾನೆ.

ಚತುರ್ಭ್ಯ ಏಲು ಭೂತೇಭ್ಯಃ ಚೈತನ್ಯಮುಪಜಾಯತೇ
ಕಿಂ ವಾದಿಭ್ಯಃ ಸಮತೇಭ್ಯಃ ದ್ರವ್ಯೇಭ್ಯಃ ಮದ ಶಕ್ತಿವತ್.

ಅರ್ಥಾತ್ ಜೀವ ಮನ ಇಲ್ಲವೆ ಜೀವ ಚೇತನವು ಕ್ಷಿತಿ, ಜಲ, ತೇಜ, ಮರುತ್ ಎಂಬೀ ನಾಲ್ಕು ಭೂತಗಳ ಮಿಶ್ರಣದ ಫಲವಾಗಿ ಉದ್ಭೂತವಾದ ಐದನೆಯ ತತ್ತ್ವವಾಗಿದೆ. ಇದು ಹೇಗಿದೆಯೆಂದರೆ, ಕೆಲವೊಂದು ವಸ್ತುಗಳನ್ನು ಹಾಕಿದಾಗ ಕೆಲವು ಪದಾರ್ಥಗಳು ಹುಳಿಸತೊಡಗುತ್ತವೆ. ಮತ್ತು ನಿಶೆಯುಂಟು ಮಾಡುತ್ತವೆ.ಹೀಗೆ ಮಾದಕತೆಯು ಹೆಚ್ಚಾಗುತ್ತ ಹೋಗುವುದಾಗಿದೆ. ಹೀಗೆ ಅವರು 'ಖದಿರ–ಚೂರ್ಣ ಸಂಯೋಗೇ ರಕ್ತಿಮಾಭಾವಾತ್'.ಅರ್ಥಾತ್ ಕಾಚಿನೊಂದಿಗೆ ಸುಣ್ಣ ಬೆರೆಸಿದರೆ ಅದರಿಂದ ತುಟಿಗಳಿಗೆ ರಂಗು ತರಿಸುವ ಕೆಂಪು ಬಣ್ಣವು ಉಂಟಾಗುತ್ತದೆ, ಮತ್ತು ಈ ಕೆಂಪು ಬಣ್ಣವು ಹೊಸ ವಸ್ತು, ಎಂದವರು ವಿಚಾರಿಸಿದರು. ಆದರೆ ನಾಲ್ಕು ಭೂತ ತತ್ತ್ವಗಳ ಮೇಳದಿಂದ ಚೈತನ್ಯದ ಉತ್ಪತ್ತಿಯಾಗುತ್ತಿದ್ದರೆ, ಚೈತನ್ಯ ಸಂಭಾವನೆಯು ಅಲ್ಪ ಮಟ್ಟಿಗಾದರೂ ಆ ನಾಲ್ಕು ತತ್ತ್ವಗಳಲ್ಲಿಯೇ ಅಡಗಿರಬಲ್ಲದೆಂಬುದನ್ನೂ ಮತ್ತು ಅವುಗಳ ಮಿಶ್ರಣದ ಫಲವಾಗಿಯೇ ಅದು ವಿಕಸಿಸುವುದೆಂಬುದನ್ನೂ ಅವರು ಮರೆತುಬಿಟ್ಟರು. ಕಾಚು–ಸುಣ್ಣಗಳ ಮಿಶ್ರಣದಿಂದ ಯಾವ ಕೆಂಪು ವರ್ಣ ಬಂದಿತೋ, ಅದು ಆ ಕಾಚು ಸುಣ್ಣಗಳಲ್ಲಿಯೇ ಇದ್ದಿತು. ಅವುಗಳ ಮಿಶ್ರಣದಿಂದಾಗಿ ಅದು ವ್ಯಕ್ತವಾಯಿತು. ಆಕಸ್ಮಿಕವಾಗಿ,'ಇಲ್ಲವೆ' ಯಿಂದ 'ಇರುವೆ'ಯು ಆಗಲಿಲ್ಲ.

ಚಾರ್ವಾಕ ದರ್ಶನದಲ್ಲಿ ದಂಭಾಚಾರದ ಮತವಾದಗಳನ್ನು ಯುಕ್ತಿಸಂಗತವಾಗಿ ಎದುರಿಸದೆ, ಕೇವಲ ಯುಕ್ತಿವರ್ಜಿತ ಶಬ್ದಜಾಲದಿಂದ ಮೇಲುಗೈ ಪಡೆಯುವ ಒಣ ಯತ್ನ ಮಾಡಲಾಗಿದೆ.

ವಿವೇಚನಾಯುಕ್ತ ವ್ಯಕ್ತಿಯು, ಮೂರು ಜ್ಞಾನಕ್ಕೆ ಪ್ರಮಾಣಗಳಿವೆಯೆಂಬುದನ್ನು ತಿಳಿದಿರುತ್ತಾನೆ. 'ಪ್ರತ್ಯಕ್ಷ ಅನುಮಾನ–ಆಗಮಾ ಪ್ರಮಾಣಾನಿ'. ಈ ಮೂರು ಪ್ರಮಾಣಗಳು. ಈ ಪ್ರಮಾಣಗಳ ಮೂಲಕ ಮಾನಸಿಕ ಶಾಸ್ತ್ರ,ವಿಜ್ಞಾನ ಮತ್ತು ಪ್ರಯುಕ್ತ ವಿದ್ಯೆಗಳ ಜ್ಞಾನಗಳು ಮುನ್ನಡೆದಿವೆ. ಮತ್ತು ಇನ್ನೂ ಮುಂದೆ ನಡೆಯುವುವು. ಆದರೆ ಚಾರ್ವಾಕ ಮತವಾದರೋ, ಪ್ರತ್ಯಕ್ಷ ಪ್ರಮಾಣವನ್ನು ಹೊರತುಪಡಿಸಿ ಬೇರಾವ ಪ್ರಮಾಣವನ್ನೂ ಒಪ್ಪವುದಿಲ್ಲ.

'ಪತ್ಯಕ್ಷೈಕ ಪ್ರಮಾಣವಾದಿತಯಾ
ಅನುಮಾನಾದ ಅನಂಗೀಕಾರೇಣ ಪ್ರಮಾಣ್ಯಾಭಾವಾತ್.'

ಅಂದರೆ, ಇಂಥ ದಾರ್ಶನಿಕರು, ತಮ್ಮ ತಂದೆಯನ್ನೇನೋ ಪ್ರತ್ಯಕ್ಷವಾಗಿ ನೋಡಿರುತ್ತಾರೆ. ಆದರೆ ತಾತನನ್ನು ನೋಡಿರುವುದಿಲ್ಲ. ಕಾರಣ, ತಾತ ಇದ್ದನೆಂಬುದನ್ನು ಒಪ್ಪರು. ಯಾರು ಭಾರತದ ಹೊರಗೆ ಹೋಗಲಿಲ್ಲವೋ ಅವರು ಲಂಡನ್ ನಗರದ ಅಸ್ತಿತ್ವವನ್ನೇ ಒಪ್ಪರು. ಯಾರು 'ವೇದ' ಎಂಬ ಪುಸ್ತಕವನ್ನೇ ನೋಡಿಲ್ಲವೋ ಅವರು ವೇದವೆಂಬ ಗ್ರಂಥಗಳನ್ನು ಸ್ವೀಕರಿಸುವುದಿಲ್ಲವೆಂದಾಯಿತು. ಇದೆಂಥ ಮಾತು? ಇಂಥ ಮಾತುಗಳನ್ನು ಕೇಳಿ ಹಾದಿಹೋಕ ಗೂಳಿಗಳೂ ಸಹ ಬೊಳ್ಳೆಂದು ನಗಬಹುದು.

ಜಡವಾದದಿಂದ ಮಾನವನು ಮಾನಸಿಕ ಮತ್ತು ಆಧ್ಯಾತ್ಮಿಕ ಉನ್ನತಿಯ ಆಶೆಯನ್ನಿರಿಸಿಕೊಳ್ಳದಿರಬಹುದು. ಆದರೆ, ಜಡ ಜಾಗತಿಕ ವಿಷಯದಲ್ಲಿಯಾದರೂ ಸ್ವಲ್ಪ ಆಶೆಯಿರಿಸಿಕೊಳ್ಳಬಹುದಾಗಿದೆ. ಮಾನವನ ಜಡಜಾಗತಿಕ ಪ್ರಯೋಜನಗಳಾದ ಅನ್ನ, ವಸ್ತ್ರ, ವಾಸಸ್ಥಾನ, ಚಿಕಿತ್ಸೆ ಮತ್ತು ಜಡಜಾಗತಿಕ ಕ್ಷೇತ್ರಗಳಲ್ಲಿಯ ಶಿಕ್ಷಣ ಇತ್ಯಾದಿಗಳನ್ನಾದರೂ ಪಡೆಯಬಹುದಾಗಿತ್ತು. ಆದರೆ ಅವುಗಳನ್ನೂ ಸಹ ಅವನು ಪಡೆಯುತ್ತಿಲ್ಲ. ಏಕೆಂದರೆ, ಯಾವ ಜನರ ಮೇಲೆ ಇವುಗಳನ್ನು ಪೂರೈಸುವ ಹೊಣೆ ಇದೆಯೇ, ಅವರೇ ನೀತಿಯ ಪಾಠ ಕಲಿಯದಿದ್ದರೆ, ಮತ್ತು ಅವರ ಕಾಲ ಕೆಳಗಿನ ಭೂಮಿಯು ನೈತಿಕತೆಯ ಮೇಲೆ ಪ್ರತಿಷ್ಠಿತವಾಗದಿದ್ದರೆ, ಮಾನವನು ಜಡಜಗತ್ತಿನ ಆವಶ್ಯಕತೆಗಳನ್ನೆಂತು ಪೂರೈಸಬಲ್ಲನು? ಮಾನವರಿಗೆ ಸೇವೆಸಲ್ಲಿಸುವ ಸಮಯದಲ್ಲಿಯೂ ಸಹ, ಅವನ ಮನದ ಯಾವುದೋ ಒಂದು ಮೂಲೆಯಲ್ಲಿ ಸ್ವಾರ್ಥಪರತೆಯು ಎದ್ದೇಳುತ್ತದೆ. ಪ್ರತಿ ವೇಳೆಯಲ್ಲಿಯೂ, ಯಾರೋ ಹಿಂದೆ ಮರೆಗೆ ನಿಂತು ತನ್ನ ಕೈಯಿಂದ ಕ್ಷಮತೆಯನ್ನು ಕಸಿಯುತ್ತಿರುವರೇನೋ ಎಂದು ಅವನಿಗೆ ಅನ್ನಿಸುತ್ತದೆ. ಇದಲ್ಲದೆ ತನ್ನ ಕುಕರ್ಮಗಳ ಸೇಡು ತೀರಿಸಿಕೊಳ್ಳುವರೋ ಎಂದು ಸಹ ಅವನಿಗೆ ಭಾಸವಾಗುತ್ತದೆ. ಈ ಕಾರಣದಿಂದ, ಜಡವಾದಿಗಳು, ಮಾನವನು ಜಡಜಾಗತಿಕ ಆವಶ್ಯಕತೆಗಳನ್ನು ನಿವಾರಿಸುವಲ್ಲಿ ಸಕ್ಷಮರಾಗುವುದಿಲ್ಲವಷ್ಟೇ ಅಲ್ಲ; ಮೇಲಾಗಿ ಮಾನವನ ಮನದಲ್ಲಿ ಸಂದೇಹ, ಅವಿಶ್ವಾಸ ಮತ್ತು ಹಿಂಸೆಗಳ ಬೀಜವನ್ನು ಊರಿ, ಬಯಲಿನ ವಾತಾವರಣವನ್ನು ಸಹ ಕಲುಷಿತಗೊಳಿಸುತ್ತಾರೆ. ವಿಷದ ಧೂಳಿಯಿಂದ ಮಾನವನ ಉಸಿರು ಕಟ್ಟಿ ಹೋಗುತ್ತದೆ.

ಯಾರಿಗಾದರೂ ಒಂದಿಷ್ಟು ಒಳಿತು ಬಗೆಯಲು ಆದರ್ಶವಾದಿ ಮನವು ತುಂಬಾ ಅಗತ್ಯವಾಗಿದೆ. ಒಂದು ವೇಳೆ, ಮನವು ಜಡಕ್ಕಿಂತ ಶ್ರೇಷ್ಠವೆಂದು ಒಪ್ಪದಿದ್ದರೆ, ಮನದ ಈ ಮಹತ್ವಪೂರ್ಣ ಹೊಣೆಗಾರಿಕೆಯ ಪಾತ್ರವನ್ನು ಆ ಜನರು ಅದೆಂತು ಸ್ವೀಕರಿಸುತ್ತಾರೆ? ಈ ಕಾರಣದಿಂದ, ಯಾವುದೇ ಯುಕ್ತಿಯಿಂದಾಗಲಿ, ಯಾವುದೇ ಸೈದ್ಧಾಂತಿಕ ತತ್ತ್ವದಿಂದಾಗಲಿ, ಇಲ್ಲವೆ ಯಾವುದೇ ವ್ಯಾವಹಾರಿಕ ಪ್ರಯೋಗದಿಂದಾಗಲಿ, ಜಡವಾದವು. ಮಾನವನಿಗೆ ಎಳ್ಳು ಕಾಳಿನಷ್ಟು ಒಳಿತು ಮಾಡಿಲ್ಲ. ಆದ್ದರಿಂದ, ಒಂದು ವೇಳೆ, ಜಡವಾದಿಯು ಕ್ಷಮತೆಯನ್ನು ಕೈವಶ ಮಾಡಿಕೊಂಡರೆ, ಅವನು ತನ್ನ ಪಿಶಾಚ ನೃತ್ಯದಿಂದ ಸಾಮಾನ್ಯ ಮಾನವರ ಮನದಲ್ಲಿ, ಆತಂಕ ಮೂಡಿಸಿ, ಕೆಲಕಾಲ ಭಯದ ಆಳ್ವಿಕೆಯನ್ನು ಹಬ್ಬಿಸುತ್ತಾನೆ. ಮಾನವರು ಕುಸುಮ ಕೋಮಲ ಅಂಶಗಳನ್ನು ದದ್ದುಳಿತಕ್ಕೊಳಪಡಿಸಿ, ಮಾನವರನ್ನು ಜೀವಂತ ಹೆಣಗಳನ್ನಾಗಿಸುತ್ತದೆ. ಮಾನವನು ಪಂಜರದ ಗಿಳಿಯಂತೆ, ಸಾಕು ಪ್ರಾಣಿಯಂತೆ ನಿರ್ವೀರ್ಯನಾಗುತ್ತಾನೆ. ಅಲ್ಲಿ ಅವನಿಗೆ ಹೊಟ್ಟೆ-ತುಂಬ ಉಣ್ಣಲು ದೊರೆಯುತ್ತದೆ. ಉಪವನದ ಬೇಲಿಯೊಳಗೆ ತಿರುಗಾಡಬಲ್ಲ; ಮನರಂಜನೆಗಾಗಿ ಯಾರದೋ ಬಂಧಿತ ಸ್ವರದ, ಬಂಧಿತ ತಾಳದ ಗೀತೆ ಹಾಡುವ ಸುಯೋಗ ಪಡೆಯಬಲ್ಲ. ಆದರೆ ತಂತಾನೇ ಗಂಟಲು ಬಿಚ್ಚಿ ಹಾಡು ಹಾಡುವ ಸುಯೋಗವು ಅವನಿಗೆಂದೂ ದೊರೆಯದು. ಹದ್ದಿನ ಬೇಲಿಯನ್ನು ದಾಟಿ ಹಸಿರುಮುರಿಯುವ ಸೌಂದರ್ಯ–ಸೌರಭಗಳನ್ನು ಆಸ್ವಾದಿಸುವ ಸುಯೋಗವು ಅವನಿಗೆಂದೂ ಪ್ರಾಪ್ತವಾಗದು. ಈ ರೀತಿಯ ಪಂಜರದ ಪಶುವಾಗಲು ಯಾರು ಬಯಸಬಹುದು?

ತಮಗೆಷ್ಟೇ ಉತ್ತಮ ಆಹಾರ ದೊರೆಯಲಿ; ಸುರಕ್ಷಿತ ಜೀವನದ ಆಶ್ವಾಸನೆ ದೊರೆಯಲಿ; ಎಳೆಯ ಪ್ರಾಣಿಗಳು ಮಾತ್ರ ಇಂಥ ಪ್ರಾಣಿಸಂಗ್ರಹಾಲಯದ ಜೀವನದಿಂದ ತೃಪ್ತವಾಗಲಾರವು. ಅವಕಾಶ ಸಿಗುವುದೊಂದೇ ತಡ, ಅವು ಬೇಲಿ ಜಿಗಿದು ಪಾರಾಗುತ್ತವೆ. ಭರ್ಚಿಯ ಬೆದರಿಕೆ ತೋರಿಸಿ ಅವುಗಳನ್ನು ಬೇಲಿಯೊಳಗೆ ಇರಿಸ ಬೇಕಾಗುತ್ತದೆ. ಇಲ್ಲವಾದರೆ ಅವುಗಳಿಂದೂ ಒಳಗುಳಿಯಲಾರವು.

ಆದರೆ ಜಡವಾದವು ಮನದ ವಿಸ್ತಾರವನ್ನು ಅದುಮಲು ಯತ್ನಿಸಿದಾಗ, ಸ್ಥೂಲದಿಂದ ಸೂಕ್ಷ್ಮದತ್ತ ರೂಪಾಂತರಗೊಳ್ಳುವಿಕೆಗೆ ಅಡ್ಡಿಯೊಡ್ಡಿದಾಗ, ಮನದ ಸುಂದರ ಸೌಂದರ್ಯದಿಂದ ಆತ್ಮದ ಆಧ್ಯಾತ್ಮಿಕ ಮಧುರತೆಯತ್ತ ಸಾಗಿದ ಮಾನವನ ಅಭಿವೃದ್ಧಿಯ ಹಾದಿಯನ್ನು ಅಡ್ಡಗಟ್ಟಿದಾಗ, ಜಡವಾದವು ತುಂಬಾ ವಿಪತ್ಕಾರಿಯಾಗುತ್ತದೆ. ಸ್ಥೂಲ ಭೌತಿಕ ದೇಹ ಮತ್ತು ಪ್ರಾಣಶಕ್ತಿಗಳಷ್ಟೇ ಮಾನವನ ಅಸ್ತಿತ್ವದ ಸಾರ ಸರ್ವಸ್ವವಲ್ಲವೆಂಬುದನ್ನೂ ಮತ್ತು ಮಾನವ ಜೀವಿಗಳ ಅತ್ಯಮೂಲ್ಯ ಸೊತ್ತೆಂದರೆ, ಅವರ ಮಾನಸಿಕ ಸಂಪದ, ಅವರ ಆಧ್ಯಾತ್ಮಿಕ ಸಂಪದ ಮತ್ತು ಅವರ ನಿಕಟತಮ ಪ್ರಿಯತಮ ಸತ್ತೆಯಾದ ಪ್ರಾಣಪುರುಷ, ಪ್ರಾಣದೇಪತೆಯಾದ ಪರಮಪುರುಷ, ಎಂಬುದನ್ನು ಜಡವಾದವು ಮರೆಯುತ್ತದೆ.

ಮೋರ ನಯ ಸುಧು ಮಾತ್ರ ಪ್ರಾಣ.
ಸರ್ವ ವಿತ್ತ ರಿಕ್ತ ಕರಿ ಜಾರ ಹಯಯಾತ್ರಾ ಅವಸಾನ
ಜಾಹಾ ಪುರಾ ಇಲೇ ದಿನ ಶೂನ್ಯ ಅಸ್ಥಿ ದಿಪ ಶೋಧೇ.
ಅದಾರ ನಿದ್ರಾ ಶೇಷ ಋಣ.
ಭೇಬೇಳಿ ಜೇನೇಳಿ ಜಾಹಾ ಬತೀಳಿ ಸುನೇಳಿ ಜಾಹಾ ಕಾನೇ.
ಸಹಸಾ ಗೇಯೇಳಿ ಜಾಹಾ ಗಾನೇ.
ಧರೇನಿ ತಾ ಮರನೇರ ಬೇಡಾ ಘೇರಾ ಪ್ರಾಣೇ.
ಜಾ ಪೆಯೇಳಿ ಜಾ ಕರೇಳಿ ದಾನ
ಮರ್ತ್ಯ ತಾರ ಕೋಥಾ ಪರಿಮಾಣ
ಆಮಾರ ಮನೇರ ನೃತ್ಯ ಕತಬಾರ ಜೀವನ ಮೃತ್ಯುರೇ.
ಲಾಂಧಿಯಾ ಚಲಿಯಾ ಗೇಛೇ ಚಿರ ಸುಂದರೇರ ಸುರಪುರೇ
ಚಿರಕಾಲ ತರೇ ಸೇ ಕಿ ಥೇಮೇ ಜಾಬೇ ಕಷೇ,
ಕಂಕಾಲೇರ ಸೀಮಾನಾಯ ಏಸೇ.
ಜೇ ಆಮಾರ ಸತ್ಯ ಪರಿಚಯ
ಮಾಸೇ ತಾರ ಪರಿಮಾಪ ನಯ
ಪದಾಘಾತೇ ಜೀರ್ಣ ತಾಹಾ ನಾಹಿ ಕರೇ ದಂಡ ಪಲಗುಲಿ
ಸರ್ವಸ್ವಾಂತ ನಾಹಿ, ಕರೇ ಪಥ ಪ್ರಾಂತೇ ಧೂಲಿ.
ಆಮಿ ಜೇ ರೂಪೇರ ಪದ್ಮೇ ಕರೇಳಿ ಅರೂಪ ಮಧುಪಾನ
ದುಖೇರ ಬಕ್ಷೇರ ಮಾರೆಖೇ ಆನಂದೇರ ಪೇಯೆಛೇ ಸಂಧಾನ.

ಅನಂತ ಮೌನೇರ ವಾಣಿ ಸುನೇಳಿ ಅಂತರೇ
ದೇಖೇ ಛಿ ಜ್ಯೋತಿರ ಪಥ ಶೂನ್ಯಮಯ ಅಂಧಾರ ಪ್ರಾಂತರೇ.
ನಹಿ ಆಮಿ ವಿಧಾತಾರ ಬೃಹತ್ ಪರಿಹಾಸ
ಅಸೀಮ ಐಶ್ವರ್ಯ ದಿಯೇ ರಚಿತ ಮಹತ್ ಸರ್ವನಾಶ.

ಜಡವಾದವು ಆತ್ಮಘಾತಕವಾದ ಸರ್ವನಾಶದ ಪ್ರವೃತ್ತಿಯಾಗಿದೆ. ಯಾವ ದರ್ಶನಗಳು ದೋಷ ಪೂರ್ಣವಾಗಿದ್ದರೂ, ನೀತಿ ವರ್ಜಿತವಾಗಿಲ್ಲವೋ, ಅವುಗಳೆಲ್ಲ ಶಿವನನ್ನು ದೂರದಿಂದಲೇ ಓರ್ವ ರಹಸ್ಯಮಯ ಪುರುಷನ ರೂಪದಲ್ಲಿ ಕಂಡಿವೆ.ಆದರೆ, ಜಡವಾದರೋ ದೋಷ ಪೂರ್ಣವೂ ಆಗಿದೆ; ಮತ್ತು ನೀತಿ ವರ್ಜಿತವೂ ಆಗಿದೆ. ಈ ಕಾರಣದಿಂದ, ಅದು ಶಿವನನ್ನು ತಿಳಿಯಲಿಲ್ಲ. ತಿಳಿಯುವುದೂ ಇಲ್ಲ. ಮತ್ತು ಎಂದೂ ತಿಳಿಯಲಾರದು. ಕಣ್ಣಿನೆದುರು ಕಂಡರೂ ಸಹ, ಶಿವನು ಏನಿರುವುವೆಂಬುದನ್ನು ತಿಳಿದು ಕೊಳ್ಳಲಾರದು.

ಪಾಟ್ನಾ: ೮-೮-೧೯೮೨

ಪ್ರವಚನ ೧೯

ಶಿವಗೀತೆಯಲ್ಲಿ ಶಿವ

ಜಯ ಶುಭ್ರ ವಜ್ರಧರ ಶುಭ್ರ ಕಲೇವರ
ವ್ಯಾಘ್ರಾಂಬರ ಹರ ದೇಹಿ ಪದಮ್
ಜಯ ವಿಷಾಣ ವಿನಾದಕ ಕ್ಲೇಶ ವಿವ್ಹಲ
ಸರ್ವಧೀಧಾರಕ ದೇಹಿ ಪದಮ್
ಜಯ ಆದಿ ಪಿತಾ ಆದಿ ದೇವ ಮಂತ್ರೇಶ ಮಹಾದೇವ
ಭಾವಾತೀತ ಅಭಿನವ ದೇಹಿ ಪದಮ್
ರಜತ ಗಿರಿನಿಭ ಮಧುಮಯ ದುರ್ಲಭ
ಆನಂದ ಅಮಿತಾಭ ದೇಹಿ ಪದಮ್
ಜಯ ಸತ್ಯ ಸನಾತನ ಪರಮ ಪದಮ್.

(ಬಿಳಿಯ ದೇಹದ, ಗುಡುಗನ್ನು ಪಳಗಿಸುವ, ಆತನಿಗೆ ಜಯವಾಗಲಿ;
ಹುಲಿಯ ಚರ್ಮ ಹೊದೆದವನೇ ನಿನ್ನ ಪಾದದಲ್ಲಿ ಶರಣು ನೀಡು;
ದೀರ್ಘ ಕೊಂಬು-ಕಹಳೆಯೂದುವವನೇ, ಕ್ಲೇಶಗಳನ್ನು ನಿವಾರಿಸುವವನೇ,
ಸಕಲ ಧೀಶಕ್ತಿಗೆ ಆಧಾರವಾಗಿರುವವನೇ ನಿನ್ನ ಪದದಲ್ಲಿ ಶರಣು ನೀಡು.
ಆದಿಪಿತನಿಗೆ, ಆದಿದೇವನಿಗೆ, ಮಂತ್ರದ ಪ್ರಭುವಿಗೆ, ದೇವರ ದೇವನಿಗೆ ಜಯವಾಗಲಿ.

ಭಾವದ ಆಚೆಯವನೇ, ನಿತ್ಯನೂತನನೇ ನಿನ್ನ ಪಾದದಲ್ಲಿ ಶರಣು ನೀಡು.
ಬೆಳ್ಳಿಯ ಬೆಟ್ಟದಂತಿರುವವನೇ, ಮಧುಮಯನೇ, ದುರ್ಲಭನೇ,
ಆನಂದಪೂರ್ಣನೇ, ಅಮಿತವಾಗಿ ಬೆಳಗುವವನೇ ನಿನ್ನ ಪಾದದಲ್ಲಿ ಶರಣು ನೀಡು.

ಸನಾತನ ಸತ್ಯನೂ, ಪರಮ ಪದನೂ ಆಗಿರುವನವನಿಗೆ ಜಯವಾಗಲಿ.)

೧. ವಜ್ರ: ಶಿವನು ಆವಿಷ್ಕರಿಸಿದ ಮತ್ತು ಬಳಸಿದ ಒಂದು ಪ್ರಕಾರದ ಶಕ್ತಿಶಾಲಿ ಅಸ್ತ್ರವಾಗಿದೆ. ಈ ಅಸ್ತ್ರವನ್ನು ಶಿವನು ಸತ್ ಮತ್ತು ಧಾರ್ಮಿಕ ವ್ಯಕ್ತಿಗಳನ್ನು ಹಾಗೂ ಪಶುಪಕ್ಷಿಗಳನ್ನು ಕಾಪಾಡಲು ಹಾಗೂ ಮಾನವತೆಯನ್ನು ವಿರೋಧಿಸುವ

ಹಿಂಸ ಮತ್ತು ಕ್ರೂರ ವ್ಯಕ್ತಿಗಳ ವಿರುದ್ಧ ಬಳಸುತ್ತಿದ್ದನು. ಶಿವನು ಜೀವನದ ಸರ್ವ ಕ್ಷೇತ್ರಗಳಲ್ಲಿ ಸಂಯಮಿಯಾಗಿದ್ದನು; ಸಂಯತನಾಗಿದ್ದನು. ಆದ್ದರಿಂದ ಅವನು ಅಸ್ತ್ರಗಳ ವ್ಯವಹಾರವನ್ನು ಕ್ವಚಿತ್ತಾಗಿ ಮಾಡುತ್ತಿದ್ದನು. ಅವನೆಂದೂ ಸದ್ವ್ಯಕ್ತಿಗಳ ವಿರುದ್ಧ ಇವನ್ನು ಬಳಸಿದ ಬಗೆಗೆ ಇತಿಹಾಸದಲ್ಲಿ ಯಾವುದೇ ನಿದರ್ಶನ ದೊರೆಯುವುದಿಲ್ಲ. ವಿಪತ್ತಿಗೊಳಗಾದ ವ್ಯಕ್ತಿಗಳು ಮತ್ತು ಜೀವಜಂತುಗಳು, ತಮ್ಮ ದುಃಖವನ್ನು ಹೊತ್ತು ಶಿವನೆಡೆಗೆ ಓಡುತ್ತಿದ್ದರು, ಶಿವನು ಅವರಿಗೆ ಆಶ್ರಯ ನೀಡಿದನು. ಅವರಿಗೆ ಒಳಿತಿನ ಹಾದಿ ಹಿಡಿಯಲು ಹಚ್ಚಿದನು. ಅನೇಕ ಸಲ ಅನುನಯ–ವಿನಯಗಳಿಂದ ಅವನು ಅವರಿಗೆ ತಮ್ಮ ಸ್ವಭಾವವನ್ನು ತಿದ್ದಿಕೊಳ್ಳಲು ಆಗ್ರಹಿಸಿದನು. ಯಾರು ತಮ್ಮ ಸ್ವಭಾವವನ್ನು ಯಾವ ರೀತಿಯಿಂದಲೂ ಪರಿವರ್ತಿಸಿಕೊಳ್ಳಲಿಲ್ಲವೋ, ಮತ್ತು ಪ್ರತಿಯಾಗಿ, ಶಿವನ ಮೇಲೆಯೇ ಸಿಟ್ಟಾಗಿ ತಮ್ಮ ಸ್ವಾರ್ಥ ವೃತ್ತಿಯನ್ನೇ ಪೂರ್ಣಗೊಳಿಸುವ ಪ್ರಯತ್ನವನ್ನು ಮುಂದುವರಿಸಿದರೋ, ಅವರ ಮೇಲೆ ಮಾತ್ರ ಶಿವನು ಈ ಅಸ್ತ್ರವನ್ನು ಪ್ರಯೋಗಿಸಿದನು. ಇದು ಕೇವಲ ಜೀವ–ಮಾತ್ರರ ಕಲ್ಯಾಣಕ್ಕಾಗಿ ಇತ್ತು. ಶುಭ ಪ್ರಯೋಜನಕ್ಕಾಗಿ ಮಾತ್ರ ಬಳಸುತ್ತಿದ್ದರು. ಆದ್ದರಿಂದಲೇ ಇದಕ್ಕೆ ಶುಭ ವಜ್ರ ಎಂದು ಕರೆದರು.

ಮನುಷ್ಯರ ಬಗೆಗಿರುವಂತೆಯೇ ಪಶುಗಳನ್ನು ಕುರಿತು ಸಹ, ಶಿವನ ಹೃದಯದಲ್ಲಿ ಅಗಾಧ ಮಾತ್ಸಲ್ಯ ತುಂಬಿತ್ತು. ಈ ಕಾರಣದಿಂದಲೇ ಅವನಿಗೆ ಪಶುಪತಿ ಎಂಬ ಖ್ಯಾತಿಯಿತ್ತು. ಆದ್ದರಿಂದ ಈ ವಜ್ರಕ್ಕೆ ಪಾಶುಪತ ವಜ್ರ ಎಂಬ ಇನ್ನೊಂದು ಹೆಸರಾಗಿತ್ತು. ಕೆಲವು ಸತ್ ಮತ್ತು ಧಾರ್ಮಿಕ ವ್ಯಕ್ತಿಗಳಿಗೆ, ಶಿವನ ಕೃಪೆಯಿಂದ ಈ ಅಸ್ತ್ರದ ಬಳಕೆಯ ಮರ್ಮ ತಿಳಿದಿತ್ತು. ಯಾರ ವಜ್ರವು ಯಾವಾಗಲೂ ಶುಭ ಕಾರ್ಯದಲ್ಲಿ ಬಳಕೆಯಾಗುವುದೋ, ಅವನೇ ಶುಭ ವಜ್ರಧರ.

೨. ಆ ಕಾಲದಲ್ಲಿ ಆರ್ಯರು ಗೌರವರ್ಣದವರಾಗಿರುತ್ತಿದ್ದರು. ಅನಾರ್ಯರು ಕೃಷ್ಣವರ್ಣ ಇಲ್ಲವೆ ಶ್ಯಾಮವರ್ಣದವರಾಗಿರುತ್ತಿದ್ದರು. ಇನ್ನು ಮಂಗೋಲಿಯನ್ನರು ಹಳದಿ ವರ್ಣದವರಾಗಿರುತ್ತಿದ್ದರು. ಶಿವನಾದರೋ ಶುಭ್ರ ವರ್ಣದವನಾಗಿದ್ದನು. ಅವನ ಮನದ ಶುಭ್ರತೆಯೊಂದಿಗೆ, ಶರೀರದ ಶುಭ್ರತೆಯು ಸರಿಯಾಗಿ ಮೇಳವಿಸಿತ್ತು. ಈ ಸಂಬಂಧದಲ್ಲಿ 'ಕುಂದೇಂದು-ಹಿಮ-ಶಂಖಿಶುಭ್ರ' ಅರ್ಥಾತ್ ಶಿವನು ಕುಂದ ಪುಷ್ಪದಂತೆ ಶುಭ್ರನಾಗಿದ್ದ; ಚಂದಿರನಂತೆ ಶುಭ್ರನಾಗಿದ್ದ. ತುಷಾರದಂತೆ ಶುಭ್ರನಾಗಿದ್ದ ಮತ್ತು ಶಂಖಿದಂತೆ ಶುಭ್ರನಾಗಿದ್ದ, ಎಂದು ಹೇಳಲಾಗಿದೆ. ಆದ್ದರಿಂದಲೇ 'ಶುಭ್ರ ಕಲೇವರ' ಎಂದು ಹೇಳಲಾಗಿದೆ.

೩. ಯೋಗಾಭ್ಯಾಸದ ಪ್ರಾರಂಭದಿಂದ ಯೋಗಿಗಳು ತಮ್ಮ ಆಸನಕ್ಕೋಸುಗ ಉಷ್ಣತೆ ಮತ್ತು ವಿದ್ಯುತ್ತುಗಳ ವಾಹಕವಲ್ಲದ ವಸ್ತುಗಳನ್ನು ಬಳಸುತ್ತಿದ್ದರು. ಆ ಕಾಲದ ಯೋಗಿಯು ಪಶುಚರ್ಮದ ಮೇಲೆ ಕುಳಿತುಕೊಳ್ಳುತ್ತಿದ್ದ; ಮತ್ತು ಅನೇಕ ಬಾರಿ ಪಶುಚರ್ಮವನ್ನೇ ಉಟ್ಟುಕೊಳ್ಳುತ್ತಿದ್ದ. ಆ ಮುಂದೆ ಪಶುಚರ್ಮದ ಅಭಾವ ಕಂಡುಬಂದಮೇಲೆ, ಆಸನಕ್ಕೋಸುಗ ಕಂಬಳಿಯನ್ನು ಬಳಸಹತ್ತಿದರು. ಶಿವನು ಹುಲಿಯ ಚರ್ಮದ ಮೇಲೆ ಕುಳಿತು ಸಾಧನ ಮಾಡುತ್ತಿದ್ದನು. ಮತ್ತು ವಸ್ತ್ರದ

ರೂಪದಲ್ಲಿ ಹುಲಿಯ ಚರ್ಮವನ್ನು ಉಟ್ಟುಕೊಳ್ಳುತ್ತಿದ್ದನು. ದಿಗಂಬರ ಜೈನ ಮತದ ಪ್ರಭಾವದಿಂದ ಅನಂತರ ಕಾಲದಲ್ಲಿ–ಅಂದರೆ ಶಿವನ ನಂತರ ನಾಲ್ಕಾವರೆ ಸಾವಿರ ವರ್ಷಗಳ ನಂತರ–ಶಿವನನ್ನು ದಿಗಂಬರನೆಂದು ಕರೆಯಲಾಯಿತು. ಶಿವನೇನೂ ದಿಗಂಬರ ರೂಪದಲ್ಲಿ ಇರುತ್ತಿರಲಿಲ್ಲ. ಅವನು ಬೋಳೇ ವ್ಯಕ್ತಿಯಾಗಿದ್ದನೆಂಬುದೇನೋ ಸರಿ. ಆದರೆ ಅವನೆಂದೂ ನಿರ್ಲಜ್ಜನಾಗಿರಲಿಲ್ಲ. ಶಿವನ ಧ್ಯಾನಮಂತ್ರದಲ್ಲಿ ಶಿವನನ್ನು ಎಂದೂ ದಿಗಂಬರ ಎಂದು ಕರೆದಿಲ್ಲ. ಅವನನ್ನು ಬೂದಿ ಬಳಿದುಕೊಂಡವನೆಂದು ಎಂದೂ ಕರೆದಿಲ್ಲ. ಇದಲ್ಲದೆ ಅವನು ಗಾಂಜಾ-ಬಡಕನೆಂದೂ ಹೇಳಿಲ್ಲ. ಈ ಎಲ್ಲ ಉಕ್ತಿಗಳು ಅನಂತರ ಕಾಲದ ಅರ್ವಾಚೀನ ಕಪೋಲಕಲ್ಪಿತ ಸಂಗತಿಗಳಾಗಿವೆ. ಆದ್ದರಿಂದಲೇ ಶಿವಗೀತೆಯಲ್ಲಿ ಶಿವನನ್ನು 'ವ್ಯಾಘ್ರಾಂಬರ ಹರ' ಎಂದು ಬಣ್ಣಿಸಲಾಗಿದೆ.

೪. 'ಹರತಿ ಪಾಪಾನ್ ನಿತ್ಯರ್ಥೇ ಹರಿಃ' 'ಹರತಿ ಬಂಧನ ಇತ್ಯರ್ಥೇ ಹರ' ಯಾರು ತೋರಿದ ಮಾರ್ಗದಲ್ಲಿ ನಡೆದು ಮಾನವನು ಪ್ರತಿಯೊಂದು ರೀತಿಯ ಬಂಧನದಿಂದ ಬಿಡುಗಡೆಯ ಹಾದಿ ಹಿಡಿಯುವನೋ, ಅರ್ಥಾತ್ ಯಾವ ವ್ಯಕ್ತಿತ್ವವು ಮಾನವನ ಬಂಧನದ ಹರಣದ ವ್ಯವಸ್ಥೆಯನ್ನು ಹೇಳುವನೋ, ಅವನನ್ನು ಹರ ಎನ್ನದೆ ಬೇರಾರಿಗೆನ್ನಬೇಕು?

೫. ಪರಮಪುರುಷನ ಬಳಿಗೆ ಹೋಗಬೇಕಾದರೆ ನಿಷ್ಕಾಮಭಾವದಿಂದ ಹೋಗಬೇಕು. ಯಾವ ಇಚ್ಛೆಯನ್ನೂ ಇಟ್ಟುಕೊಳ್ಳತಕ್ಕದ್ದಲ್ಲ. ಮನುಷ್ಯನಿಗೆ ಯಾವುದರ ಪ್ರಯೋಜನವಿದೆ? ಯಾವುದರ ಪ್ರಯೋಜನವಿಲ್ಲ? ಎಂಬುದು ಮಾನವನಿಗಿಂತ ಚೆನ್ನಾಗಿ ಪರಮಪುರುಷನಿಗೇ ಗೊತ್ತಿರುತ್ತದೆ. ಮಗುವಿಗೆ ಯಾವ ವಸ್ತುವಿನ ಎಷ್ಟೊಂದು ಅಗತ್ಯವಿದೆಯೆಂಬುದು ಆದರ ತಾಯಿ ತಿಳಿದಷ್ಟು ಆ ಮಗು ತಿಳಿಯದು. ಈ ಕಾರಣದಿಂದ, ಪರಮಪುರುಷನಿಂದ ಏನೊಂದನ್ನೂ ಬೇಡದ, ಆದರೆ ಕೇವಲ ಪರಮಪುರುಷನನ್ನೇ ಬೇಡುವ ಸಾಧಕನೇ ನಿಜವಾದ ಸಾಧಕನು. ಆದ್ದರಿಂದ, ಇಲ್ಲಿ 'ದೇಹಿ ಪದಮ್' ಎಂದು ಹೇಳಲಾಗಿದೆ. ಅರ್ಥಾತ್ "ಹೇ ಪರಮಪುರುಷ! ನಿನ್ನ ಚರಣದಲ್ಲಿ ನನಗೆ ಆಶ್ರಯ ನೀಡು."

೬. ಪ್ರಾಚೀನ ಕಾಲದಲ್ಲಿ, ಶೋಷಿತ ಮಾನವರು, ಅವಹೇಳನೆಗೀಡಾದವರು, ಪೀಡಿತರು, ಬಲಗುಂದಿ ನಡೆಯುತ್ತಿದ್ದ ದೀನ ಮಾನವರು ಶಿವನನ್ನೇ ತಮ್ಮ ಆಶ್ರಯವೆಂದು ಭಾವಿಸಿದ್ದರು. ಶಿವನು ಶೋಷಿತರ ಶೋಷಣೆಯನ್ನು ತನ್ನ ವಜ್ರಹಸ್ತದಿಂದ ದಮನಗೊಳಿಸುತ್ತಿದ್ದನು. ಡಾಂಭಿಕ ವ್ಯಕ್ತಿಗಳ ಡಂಭವನ್ನು ತನ್ನ ತ್ರಿಶೂಲದಿಂದ ಘಾತಿಸುತ್ತಿದ್ದನು. ಅನಾಚಾರ, ಅವಿಚಾರವನ್ನವನು ಸುಟ್ಟುಹಾಕುತ್ತಾನೆ. ಆರ್ತ ಮಾನವರನ್ನು ಕಂಡು ಅವನು ತನ್ನ ಬಳಿ ಕುಳ್ಳಿರಿಸಿಕೊಳ್ಳುತ್ತಾನೆ. ಮತ್ತು ಅವರ ಸಾಂಸಾರಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಕಷ್ಟ-ಕಾರ್ಪಣ್ಯಗಳನ್ನು ದೂರೀಕರಿಸಲೋಸುಗ, ಸರಿಯಾದ ಮಾರ್ಗದರ್ಶನ ಮಾಡುತ್ತಿದ್ದನು. ಶಿವನು ಬೆಟ್ಟದ ನಾಡಿನಲ್ಲಿ ವಾಸಿಸುತ್ತಿದ್ದನು. ದೂರದೂರದಿಂದ ಜನರು ಅವನೆಡೆಗೆ ಓಡಿಬರುತ್ತಿದ್ದರು. ಅವನು ಅವರನ್ನು ತನ್ನ ದೀರ್ಘ ಕೊಂಬಿನಿಂದ ಅಂದರೆ ವಿಷಾಣದ ವಜ್ರಘೋಷದಿಂದ ವಿಷಾಣದ ನಿನಾದದಿಂದ ಕರೆಯುತ್ತಿದ್ದನು. ಇದರಿಂದಾಗಿ ಜನರು ಅವನನ್ನು ಅವನ ವಿಷಾಣ

ದಿಂದ ಬೇರ್ಪಡಿಸಿ ತಿಳಿಯದಂತಾಗಿದ್ದರು. ಅವರು ಅವನನ್ನು ವಿಷಾಣ-ನಿನಾದಕ ಎಂದು ಕರೆದರು. ಅವನು ಅವಹೇಳನೆಗೀಡಾದ, ಪೀಡಿತರಾದ, ಯಾರ ಕಣ್ಣಂಚಿನಲ್ಲಿ ಎಷ್ಟೇ ಪ್ರಯತ್ನಿಸಿದರೂ ಐಶ್ವರ್ಯದ ಕಾಂತಿ-ಇರಲಿಲ್ಲವೋ, ಯಾರ ದೇಹದ ಚರ್ಮವು ಒಣಗಿಹೋಗಿದ್ದಿತೋ, ಮತ್ತು ಕಾಣಲು ಅಸ್ಥಿ ಚರ್ಮದ ಹಂದರವಾಗಿದ್ದರೋ, ಯಾರ ವಿಶ್ರಾಂತಿಗಾಗಿ ಹೂವಿನ ಹಾಸುಗೆ ಇರಲಿಲ್ಲವೋ, ಯಾರು ಅನಾಚಾರದಿಂದ ಕೊರಗಿ ಜೀರ್ಣರಾಗಿ, ಹಸಿವೆಯಿಂದ ಬಳಲಿ ಕಂಗಾಲರಾಗಿ, ಸುಂದರರಾಗಿರಲಿಲ್ಲವೋ. ಅಂಥ ಜನರಾಗಿದ್ದರು. ಇನ್ನು ಅವಹೇಳನಕ್ಕೆ ಈಡಾದುದರಿಂದ ಅವರು ಇನ್ನಷ್ಟು ವ್ಯಾಧಿತ ರಾಗಿ ತೋರಿಬರುತ್ತಿದ್ದರು. ಆ ವ್ಯಕ್ತಿಗಳನ್ನು ಅತ್ಯಾಚಾರಿ ಜನರು ಭೂತ-ಪ್ರೇತ ಗಳೆಂದು ಕರೆಯುತ್ತಿದ್ದರು. ಶಿವನೊಂದಿಗೆ ಇದ್ದರೆನ್ನಲಾದ ಭೂತಪ್ರೇತ ದಳಗಳು, ವಾಸ್ತವದಲ್ಲಿ, ಆ ಕಾಲದ ಹಸಿದ, ಪೀಡಿತ ಮಾನವತೆಯ ಪ್ರತಿನಿಧಿಗಳಾಗಿದ್ದರು. ಅವರೇನೂ ಭೂತ-ಪ್ರೇತಗಳಾಗಿರಲಿಲ್ಲ. ಶಿವನ ಈ 'ಗಣ'ಗಳೇ ದಕ್ಷಯಜ್ಞವನ್ನು ನಾಶಗೊಳಿಸಿದರು.

೭. ಕ್ಲೇಶಕರ್ಮ ವಿಪಾಕಾಶಯೈರಪರಾಮೃಷ್ಟಃ ಪುರುಷ ವಿಶೇಷ ಈಶ್ವರ– ಯಾವ ಪುರುಷನು ಕ್ಲೇಶಗಳ ಮೂಲಕ, ಕರ್ಮಬಂಧನಗಳ ಮೂಲಕ, ಮತ್ತು ಪರಿಸರದ ಮೂಲಕ ಪ್ರಭಾವಿತನಾಗುವುದಿಲ್ಲವೋ, ಆ ಪುರುಷನೇ ಈಶ್ವರನೆನಿಸುತ್ತಾನೆ. ಶಿವನು ತನ್ನ 'ಆಶ್ರಿತಗಣ'ವನ್ನು ತನ್ನ ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದನು. ಮತ್ತು ಆ 'ಗಣ' ಇಲ್ಲವೆ ಶಿವಭಕ್ತರು ಸಾಧನೆಯ ಮೂಲಕ ಈಶ್ವರತ್ವವನ್ನು ಪಡೆಯಲೆಂದು ಇಚ್ಛಿಸುತ್ತಿದ್ದನು. ಆದ್ದರಿಂದ ಅವನು ಅವರಿಗೆ ತಾನೇ ಸ್ವತಃ ಸಾಧನಾಪದ್ಧತಿಯನ್ನು ಬೋಧಿಸುತ್ತಿದ್ದನು. ಸಾಧನೆಯ ಮೂಲಕ ಕ್ಲೇಶ-ನಿವಾರಣೆಯ ಪದ್ಧತಿಯನ್ನಂತೂ ಅವನು ಕಲಿಸುತ್ತಲೇ ಇದ್ದ. ಜೊತೆಗೆ ಜಾಗತಿಕ ಮತ್ತು ಸಾಮಾಜಿಕ ಜೀವನದಲ್ಲಿ, ಯಾರು ಕ್ಲೇಶಮುಕ್ತರಾಗಬಲ್ಲವರಾಗಿದ್ದರೋ, ಅವರು ಸರ್ವಭಾವದಿಂದ ಪ್ರಯತ್ನ ಮಾಡುತ್ತಿದ್ದರು. ಯಾರ ಕಣ್ಣಂಚಿನಲ್ಲಾ ವರೂ ಕಂಬನಿ ಸುರಿಯುವುದನ್ನು ಕಂಡು ಶಿವನು ಸುಮ್ಮನೆ ಕೂಡ್ರುತ್ತಿರಲಿಲ್ಲ. ಅವನ ವಿಶಾಲ ಹೃದಯದ ಆರ್ದ್ರತೆ ಮತ್ತು ಹೂವಿನಂತಹ ಮಾರ್ದವತೆಯು ಎಲ್ಲ ಮಾತುಗಳನ್ನೂ ತಿಳಿಯುತ್ತಿತ್ತು. ಎಲ್ಲಿಯ ವರೆಗೆಂದರೆ, ಕೆಲವು ದುಷ್ಟ ಜನರು ಅವನ ಹೃದಯವಂತಿಕೆ ಪೂರ್ಣಲಾಭ ಗಿಟ್ಟಿಸುತ್ತಿ ದ್ದರು. ಆದರೆ ಅದನ್ನೆಲ್ಲ ಕಂಡರೂ ಶಿವನಲ್ಲಿ ಯಾವ ವಿಕೃತಿಯೂ ಉಂಟಾಗುತ್ತಿರಲಿಲ್ಲ. ಅವನೆಂದೂ, 'ಈ ಮನುಷ್ಯನನ್ನು ಕ್ಷಮಿಸಿ, ಈ ಮನುಷ್ಯನಿಗೆ ಸಹಾಯ ನೀಡಿ,... ಈ ಮನುಷ್ಯನಿಗೆ ವರದಾನ ನೀಡಿ, ನಾನು ತಪ್ಪು ಮಾಡಿದೆ' ಎಂದು ಹೇಳುತ್ತಿರಲಿಲ್ಲ. ವಿಶ್ವಬ್ರಹ್ಮಾಂಡದ ಕ್ಲೇಶ ವಿದೂರಕನು ಈ ಕಾರಣಕ್ಕಾಗಿಯೇ 'ಆಶುತೋಷ' (ಅಲ್ಪ ದಿಂದ ಸಂತುಷ್ಟಗೊಳ್ಳುವವ) ಎಂದು ಪ್ರಸಿದ್ಧನಾಗಿದ್ದಾನೆ.

೮. ಭೂಮಾಸತ್ತೆಯ ನಿಕಟದಲ್ಲಿ ಅಣುಸತ್ತೆಯು ಅತ್ಯಂತ ಮಹತ್ವಹೀನವೆನಿ ಸುತ್ತದೆ. ಅದೇ ಮೇರೆಗೆ ಭೂಮಾದ ಬೌದ್ಧಿಕ ವೈಭವದ ನಿಕಟದಲ್ಲಿ ಅಣುವಿನ ಬೌದ್ಧಿಕ ವೈಭವವು ಸಹ, ತುಚ್ಛವೆನಿಸುತ್ತದೆ. ಯಾವ ರೀತಿ, ದಿನದ ಕಾಲದಲ್ಲಿ ಸೂರ್ಯನ ಬೆಳಕಿನೆದುರು, ಜಗತ್ತಿನ ಬೆಳಕೇಕೆ, ಚಂದ್ರನೂ ಸಹ ತನ್ನ ಕಾಂತಿ ಕಳೆದು

ಕೊಂಡು ಕೂಡ್ರುತ್ತಾನೆ. ಆದ್ದರಿಂದ, ರಾತ್ರಿಯ ಕತ್ತಲೆಯಲ್ಲಿ ಚಂದ್ರ–ತಾರೆಗಳು ಮತ್ತು ಮಿಂಚು ಹುಳುಗಳು ತಮ್ಮ ಬೆಳಕಿನ ಬಗ್ಗೆ ಅಭಿಮಾನ ತಾಳುತ್ತವೆ. ಅದೇ, ಪ್ರಕಾರ, ಎಲ್ಲಿಯ ವರೆಗೆ ಮಾನವನು ಪರಮಪುರುಷನನ್ನು ಮರೆತು ಇರುವನೋ, ಅಲ್ಲಿಯ ವರೆಗೆ ತನ್ನ ಬುದ್ಧಿಯ ಬಗೆಗೆ ಅಭಿಮಾನ ತೋರ್ಪಡಿಸುತ್ತಾನೆ. ಕೆಲವರು ತಿಳಿದಿರುವುದೇ ಇಲ್ಲ. ಕೆಲವರು ತಿಳಿದಿರುತ್ತಾರೆ. ಇನ್ನು ಕೆಲವರು ತಿಳಿದಿದ್ದರೂ ತಿಳಿಯದವರಂತೆ ಸೋಗು ಹಾಕುತ್ತಾರೆ. ಮರೆವು ಪ್ರತಿಯೊಂದು ಅಣುಮಾನಸದ ತತ್ತ್ವವೇ ಆಗಿದೆ. ಸ್ವಭಾವದಿಂದಾಗಿಯೇ, ಅಣುಸತ್ತೆಯ ಬೌದ್ಧಿಕತೆಯ ಏಕಮಾತ್ರ ಆಧಾರವು ಭೂಮಾ ಸತ್ತೆಯಾಗಿದೆ. ಅಣುಮಾನಸದ ಹಾರಾಟ–ಏರಾಟಗಳೇನೇ ಇರಲಿ, ಅವೆಲ್ಲ ವಿರಾಟ ಮಾನಸದ ಗರ್ಭದಲ್ಲಿಯೇ ಇರುತ್ತವೆ. ಆದ್ದರಿಂದ ಯಾರ ಗರ್ಭದಲ್ಲಿ ಸಮಸ್ತ ಧೀ ಆಶ್ರಿತವಾಗಿದೆಯೋ ಅವನು ಮಾತ್ರ 'ಸರ್ವಧೀ ಧಾರಕ'ನೆಂದ ಅತ್ಯಂತ ಸಂಗತವಾಗಿಯೇ ಹೇಳಲಾಗಿದೆ.

೯. ಈ ವಿಶ್ವದಲ್ಲಿ ಮೊತ್ತಮೊದಲು ವಿವಾಹಿತ ಪುರುಷನೆಂದರೆ ಶಿವ.ಅವನಿಗಿಂತ ಮೊದಲು ಯಾವ ಪುರುಷನೂ ವಿವಾಹಿತನಾಗಿರಲಿಲ್ಲ. ಆದ್ದರಿಂದ ಯಾವ ಪುರುಷನೂ ಕೌಟುಂಬಿಕ ಹೊಣೆಗಾರಿಕೆಯ ಭಾರವನ್ನು ವಹಿಸುತ್ತಿರಲಿಲ್ಲ. ಇಲ್ಲವೆ ಪಶುಗಳಂತೆ ಅಲ್ಪ ಸ್ವಲ್ಪ ಹೊಣೆ ಹೊರುತ್ತಿದ್ದರು.ಆದರೆ ಮೊತ್ತಮೊದಲಿನ ವಿವಾಹಿತ ಪುರುಷನೆಂದು ಶಿವನಿಗೆ ಆದಿಪಿತ ಎಂಬ ಸಂಜ್ಞೆ ನೀಡಲಾಯಿತೆಂಬ ಮಾತೇನೂ ಇಲ್ಲ; ಆದರೆ ಶಿವನು ತಮ್ಮ ಹಡೆದ ತಂದೆಗೆ ಸಮಾನವಾಗಿ, ಕೇವಲ ಮನಕುಲಕ್ಕಷ್ಟೇ ಅಲ್ಲದೆ ಪಶುಕುಲಕ್ಕೂ ಸಹ ಆಶ್ರಯ ನೀಡಿದ ಓರ್ವ ವಿರಾಟ ಪುರುಷನಾಗಿದ್ದ ಶಿವ. ಅವನು, ಹಸಿವು ಹಿಂಗಿ ಸಲು ಅನ್ನ ಒದಗಿಸಿದನು. ಶೀತದಿಂದ ರಕ್ಷಿಸಲು ಉಷ್ಣ ಸ್ಪರ್ಶವೊದಗಿಸಿದನು. ಶೋಕಗ್ರಸ್ತರಿಗೆ ಸಾಂತ್ವನ ನೀಡಿದನು, ಮತ್ತು ಅಸ್ತಿತ್ವ ಬೋಧದ ಉಷ್ಣ ಅನುಭೂತಿ ಯನ್ನೂ ನೀಡಿದನು. ಅವನಿಗಿಂತ ಮುಂಚೆ ಮಾನವನು ಅರ್ಧ–ಮಾನವ ಮತ್ತು ಅರ್ಧ ಪಶುವಾಗಿದ. ಸಮಾಜ ಚೇತನೆ ಇಲ್ಲದ, ಪಾರಂಪರಿಕ ಮಮತೆಯಿಲ್ಲದ, ಆ ಮಾನವರು, ಶಿವನನ್ನು ಕೇಂದ್ರವಾಗಿಸಿಕೊಂಡು, ಸ್ನೇಹದ ಮಮತಾಮಯ ಪರಿಸರ ವನ್ನು ನಿರ್ಮಿಸಿದರು. ಅವರೊಂದು ಶಾಂತಿಮಯವಾದ ತಂಪು ಛಾಯೆಯ ಆಶ್ರಯ ವನ್ನು ನಿರ್ಮಿಸಿದರು. ಮನುಷ್ಯನು, ನಾನು ಮನುಷ್ಯನೆಂದು ಅರಿಯಲು ಕಲಿತನು. ಮನುಷ್ಯನು ನಾನು ಮನುಷ್ಯನಿದ್ದೇನೆ ಎಂದು ಹೇಳಲು ಕಲಿತುಕೊಂಡನು. ಶಿವನ ಪ್ರೇರಣೆಯಿಂದ ಅವನ ಮೂಕ ಭಾಷೆಯು ಮುಖ ಭಾಷೆಯಾಯಿತು. ಅವನು ನಗು-ನಗುತ್ತ ಹೀಗೆ ಹೇಳಹತ್ತಿದನು.—

'ಹರ ಮೇ ಪಿತಾ, ಗೌರೀ ಮಾತಾ ಸ್ವದೇಶ ಭುವನತ್ರಯಮ್'

(ಶಿವನು ನನ್ನ ತಂದೆ; ಪಾರ್ವತಿಯು ನನ್ನ ತಾಯಿ. ಮತ್ತು ಮೂರು ಲೋಕ ಗಳು ನನ್ನ ಸ್ವದೇಶ.)

ಅವನಿನ್ನೂ ಮುಂದುವರೆದು,

"ಆತ್ಮ ಗೋತ್ರಂ ಪರಿತ್ಯಜ್ಯ ಶಿವಗೋತ್ರಂ ಪ್ರವಿಶಂತು"

(ನಿನ್ನ ಚಿಕ್ಕ ಗೋತ್ರವನ್ನು ತೊರೆದು ಶಿವನ ಗೋತ್ರವನ್ನು ಪ್ರವೇಶಿಸು) ಎಂದೂ ಘೋಷಿಸಿದರು.

ಇಂದಿನಿಂದ ನಮ್ಮಲ್ಲಿ ಯಾವುದೇ ಭೇದ–ವಿಭೇದಗಳಿರಲಾರವು. ಇನ್ನು ಗೋತ್ರ ಗೋತ್ರಗಳಲ್ಲಾಪ ಸಂಘರ್ಷಗಳಿರವು. ನಮ್ಮಲ್ಲಿ, ಬಿಳಿ, ಕಪ್ಪು, ಹಳದಿ ಚರ್ಮದ ಯಾವ ಭೇದವಿರದು; ನಾವು ಎಲ್ಲರೂ ಶಿವನ ಸಂತಾನ. ನಮ್ಮೆಲ್ಲರದೂ ಶಿವಗೋತ್ರ. ಇತಿಹಾಸ ಪೂರ್ವದ ಮಾನವನು, ಶಿವನ ಪಿತೃತ್ವದ ಬಂಧನದಲ್ಲಿ, ಆಬದ್ಧನಾಗಿ, ಮಾನವ–ಮಾತೃರಲ್ಲಿ ಭ್ರಾತೃತ್ವದ ಸಂಪರ್ಕವನ್ನು ದೃಢಪಡಿಸಿದನು. ತಮಗೆ ಶಿವನಂಥ ತಂದೆ ದೊರೆತದ್ದರಿಂದಲೇ ತಮಗೆ ಛಂದೋಬದ್ಧವಾದ ಜೀವನ ಪ್ರಾಪ್ತವಾಗಿದೆ ಎಂದವರು ಅನುಭವಿಸಿದರು. ಈ ಕಾರಣದಿಂದಾಗಿಯೇ, ಶಿವನು ಆದಿಪಿತನೆನಿಸಿದನು.

೧೦. 'ದಿವ್' ಧಾತುವಿನಿಂದ 'ದೇವ' ಶಬ್ದದ ಉತ್ಪತ್ತಿಯಾಗಿದೆ. ಯಾವ ಸತ್ತೆಯು ಆಧ್ಯಾತ್ಮಿಕ ದ್ಯುತಿಯಿಂದ ಬೆಳಗುವುದೋ ಅದುವೇ ದೇವ ಎಂದು ಅರ್ಥ. ಈ ಜಗತ್ತಿನಲ್ಲಿ ಯಾವುದು, ಜ್ಯೋತಿರ್ಮಯ ಸತ್ತೆಯಾಗಿದೆಯೋ, ಯಾವುದು ಕಲ್ಯಾಣಕಾರಿಯಾಗಿದೆಯೋ, ಯಾವುದು ಸೌಮ್ಯ ಸೌಂದರ್ಯದ ಪ್ರತಿಭೂ ಆಗಿದೆಯೋ, ಅದೆಲ್ಲವೂ 'ದೇವ'. ಮಾನವನು ಈ ದೇವ ತತ್ತ್ವವನ್ನು ಹೃದಯಂಗಮಗೊಳಿಸಿ, ಶಿವನನ್ನು ಕಂಡನು. ಮತ್ತು ಅವನ ವಿರಾಟ ಹೃದಯದ ಕೋಮಲ ಸ್ಪರ್ಶ ಪಡೆದನು. ಈ ಕಾರಣದಿಂದ, ಶಿವನನ್ನೇ ಅವರು 'ಆದಿದೇವ' ಎಂದು ಕೂಗಿ ಕರೆದರು.

೧೧. ಮಾನವನು ಬಹಳ ದಿನಗಳಿಂದ ಯಾಗ–ಯಜ್ಞ ಮಾಡುವುದನ್ನು ಕಲಿತಿದ್ದನು. ಮಾನವನು ಈಶ್ವರನಿದ್ದಾನೆಂಬುದನ್ನು ಸೈದ್ಧಾಂತಿಕವಾಗಿ ಅರಿತಿದ್ದನಾದರೂ ಅವನನ್ನು ಪಡೆಯುವ ರೀತಿ ಯಾವುದು? ಯಾವ ರೀತಿ ಈಶ್ವರನನ್ನು ಪ್ರಾಪ್ತಿ ಮಾಡಿಕೊಳ್ಳುವ ಚೇತನವನ್ನು ಉದ್ದೀಪಿಸಿಕೊಳ್ಳಬೇಕು? ಮತ್ತು ಅದನ್ನು ಯಾವ ರೀತಿ ಬೆಳೆಸಿಕೊಳ್ಳಬೇಕು? ಯಾವ ರೀತಿ ತನ್ನನ್ನೇ ತಾನು ಈಶ್ವರನನ್ನು ಪ್ರಾಪ್ತಿಸುವ ಆಧಾರದ ಮೇಲೆ ರೂಪಿಸಿಕೊಳ್ಳಬೇಕು? ಇವೆಲ್ಲವನ್ನೂ ತಿಳಿಯಲಾರದವನಾಗಿದ್ದನು. ಶಿವನು ಸಾಧನಾ–ಮಾರ್ಗವನ್ನು ಸಿದ್ಧಗೊಳಿಸಿದನು. ಮಂತ್ರಗಳ ಸಹಾಯದಿಂದ ಮನವನ್ನೆಂತು ನಿರ್ಮಿಸಬಹುದೆಂಬುದನ್ನು ಶಿವನು ತಿಳಿಸಿದನು. 'ಮನನಾತ್ ತಾರಯೇತ್ ಯಸ್ತು ಸಃ ಮಂತ್ರ ಪರಿಕೀರ್ತಿತಃ',ಮಂತ್ರಯೋಗ, ರಾಜಯೋಗ, ಮತ್ತಿತರ ರಾಜಾಧಿರಾಜ ಯೋಗಗಳ ಮೂಲಕ ಆಧ್ಯಾತ್ಮಿಕ ಸ್ತರದ ಮೇಲೆ ಉನ್ನತಿ ಸಾಧಿಸಬಹುದಾಗಿದೆ. ಮಾನವನಿಗೆ ಈ ಶಿಕ್ಷೆಯನ್ನೂ ಸಹ ಶಿವನೇ ನೀಡಿದನು. ಹೀಗಾಗಿ ಜನರು ಶಿವನನ್ನು 'ಮಂತ್ರಾಧಿಪತಿ'; ಮಂತ್ರೇಶ ಎಂದು ಒಪ್ಪಿಕೊಂಡರು. ಶಿವನು ಮಾನವ ಮತ್ತು ಪಶುಗಳೀರ್ವರಿಗೂ ಸಮಾನ ರೂಪದಿಂದ ಸ್ನೇಹವನ್ನು ನೀಡಿದನು. ಪಶುಗಳಿಗೆ ಆಶ್ರಯ ನೀಡಿದವನಾದುದರಿಂದ ಅವನು 'ಪಶುಪತಿ'ಯೆಂದು ವಿಖ್ಯಾತನಾದನು. ಆಧ್ಯಾತ್ಮಿಕ ಜಗತ್ತಿನಲ್ಲಿ ವೀರ ಸಾಧಕರ ಆಶ್ರಯದಾತನ ರೂಪದಲ್ಲಿ ಅವನು 'ವೀರೇಶ್ವರ'ನೆಂಬ ಹೆಸರಿನಿಂದ ವಿಖ್ಯಾತನಾದನು. ಇನ್ನು ಉನ್ನತ ಸ್ವಭಾವದ ಉನ್ನತ ಧೀಸಾಧಕ ಕುಲದ ರಕ್ಷಕನ ರೂಪದಲ್ಲಿ ಅವನು 'ಮಹಾದೇವ'

ಎಂಬ ಹೆಸರಿನಿಂದ ಪರಿಚಿತನಾದನು. ಅವನು ದೇವಾನಾಂ ದೇವ ಅರ್ಥಾತ್ ಮಹಾದೇವನಾದನು. ಯುಗ ಯುಗಗಳಿಂದ ಯಾರನ್ನು ದೇವ ಎನ್ನುತ್ತಿದ್ದರೋ, ಅವರು ಶಿವನಿಗೋಸ್ಕರ ಹೀಗೆ ಹೇಳಿದರು.

ತವ ತತ್ತ್ವಂ ನ ಜಾನಾಮಿ ಕೀದೃಶೋಸಿ ಮಹೇಶ್ವರ
ಯದೃಶೋऽಸಿ ಮಹಾದೇವ, ತದೃಶಾಯ ನಮೋನಮಃ

ಎಲೈ ಮಹೇಶ್ವರ! ನಿನ್ನನ್ನು ತಿಳಿಯುವುದು, ನಿನ್ನನ್ನು ಗುರುತಿಸುವುದು, ನಿನ್ನನ್ನು ಅಳೆಯುವುದು, ಅಣುಮಾನಸದ ಎಲ್ಲಿಯಾಚೆಯ ಮಾತು! ಯಾವಾಗ ನಿನ್ನ ಗಂಭೀರತೆಯನ್ನು ಅಳೆಯುವ ಪ್ರಯತ್ನ ಮಾಡುವೆನೋ, ಆಗ ಅದರ ಬುಡ ದೊರೆಯದು. ಆ ಕಾರಣ, ನೀನು ಹೇಗಿರುವೆಯೆಂಬುದನ್ನು ಅರಿಯೆನು. ಆದರೆ, ನೀನು ಹೇಗಾದರೂ ಇರಲೊಲ್ಲೆಯೇಕೆ? ನಿನಗೆ ಪುನಃ ಪುನಃ ನಮಸ್ಕರಿಸುವೆ.

೧೨. ಮಾನವನು ಮನದ ಉಚ್ಚ–ವಿಭಾಗದಲ್ಲಿ ಯಾವ ಸಂರಚನೆಯನ್ನು ನಿರ್ಮಿಸಿಟ್ಟಿರುವನೋ, ಆ ಸಂರಚನೆಯು ಚಿಂತನದ ವ್ಯಾವಹಾರಿಕ ಅಂಶವನ್ನು ಪ್ರೇರೇಪಿಸುತ್ತದೆ. ಆ ಸಂರಚನೆಯೇ ಮಾನವನ ವ್ಯಕ್ತಿತ್ವವನ್ನು ನಿರ್ಮಿಸುತ್ತದೆ. ಆ ಸಂರಚನೆಗೇ ಭಾವ ಎನ್ನುತ್ತಾರೆ.

ಶುದ್ಧ ಸತ್ವ ವಿಶೇಷಾದ್ವಾ ಪ್ರೇಮ ಸೂರ್ಯಾಂಶೂ ಸಾಮ್ಯ ಭಾಕ್
ರುಚಿಭಿಶ್ಚಿತ್ತಮಾಸೃಣ್ಯ ಕೃದ ಸೌ ಭಾವ ಉಚ್ಯತೇ.

(ಯಾವುದು ಓರ್ವನನ್ನು ವಿಶೇಷವಾಗಿ ಶುದ್ಧ ಸತ್ವನನ್ನಾಗಿಸುವುದೋ ಮತ್ತು ಪ್ರೇಮ ಸೂರ್ಯನು ಬೆಳಗುವಂತೆ ಮಾಡುವುದೋ, ಯಾವುದು ಮನವನ್ನು ಭಕ್ತಿ ಕರಣಗಳಿಂದ ಮೃದುವಾಗಿ ಮತ್ತು ಜಾಜ್ವಲ್ಯವಾಗಿ ಮಾಡುವುದೋ ಅದಕ್ಕೆ ಭಾವ ಎನ್ನುತ್ತಾರೆ.)

ಪರಮ ತತ್ತ್ವವಾದ ಪರಮಪುರುಷನು ಅವಾಙ್ಮನಸ ಗೋಚರನಾಗಿದ್ದಾನೆ. ಅವನು ವಾಕ್ಪಥಾತೀತನಾಗಿದ್ದಾನೆ. ಈ ಕಾರಣದಿಂದಾಗಿಯೇ ಅವನು ಭಾವಾತೀತನಾಗಿದ್ದಾನೆ. ಶಿವನು ಸಹ ಸಾಧಾರಣ ಬುದ್ಧಿಯ ಹಿಡಿತದಾಚೆಗಿದ್ದಾನೆ. ಪಾಂಚಭೌತಿಕ ಶರೀರದಲ್ಲಿ ಅವನು ಪ್ರಪಂಚಾತೀತನಾಗಿದ್ದಾನೆ. ಅವನ ಗುಣಗಳ ಮಾತನ್ನು ಮಾನವನು ಎಷ್ಟೊಂದು ಯೋಚಿಸುವುನೋ, ಅವನು ಅಷ್ಟೊಂದು ಮೂಕವಿಸ್ಮಿತನಾಗುತ್ತಾನೆ. ಅಷ್ಟೊಂದು ತನ್ಮಯನಾಗುತ್ತಾನೆ. ಯಾವುದೇ ದೃಷ್ಟಿಕೋನದಿಂದ ನೋಡುವ ಪ್ರಯತ್ನ ಮಾಡಿದರೂ ಸಹ, ಅವನು ನೂತನಕ್ಕಿಂತ ಹೆಚ್ಚು ನೂತನಕರ ಮತ್ತು ನೂತನತಮನಾಗುತ್ತಾನೆ. ಅವನು ಅಭಿನವನಾಗುತ್ತಾನೆ. ಈ ಕಾರಣದಿಂದಲೇ ಅವನನ್ನು 'ಭಾವಾತೀತ ಅಭಿನವ' ಎಂದು ಹೇಳಲಾಗಿದೆ.

೧೩. ಶಿವಗೀತೆಯಲ್ಲಿ ಮತ್ತು ಅದೇ ಮೇರೆಗೆ ಶಿವನ ಧ್ಯಾನಮಂತ್ರದಲ್ಲಿ, ಅವನು 'ರಜತ ಗಿರಿನಿಭ' ಎಂದು ಹೇಳಲಾಗಿದೆ. ಅರ್ಥಾತ್ ಶಿವನನ್ನು ನೋಡಿದರೆ ಒಂದು ಬೆಳ್ಳಿಯ ಬೆಟ್ಟದೆದುರು ನಿಂತಂತೆ ಭಾಸವಾಗುತ್ತದೆ. ಶಿವನ ಹೊರ

ಬಣ್ಣವು 'ರಾಪ್ಯ ಪರ್ವತಸಮ' ಆಗಿದೆಯೆಂದಷ್ಟೇ ಅಲ್ಲ. ಆದರೆ ಅವನ ಮನವೂ ಸಹ ಶುಭ್ರ ಶ್ವೇತವರ್ಣದ್ದಾಗಿದೆ. ಹೀಗೆ ನಾವ ತನು, ಶುಭ್ರ ತನುವಿನ ಶಿವನ ಒಳ ಹೊರಗುಗಳಲ್ಲಿ ಯಾವ ಅಂತರವೂ ಇರಲಿಲ್ಲ. ಮಹಾಜ್ಞಾನಿಯಾದ, ಮಹಾಯೋಗಿಯಾದ, ಮಹಾ ತಪಸ್ವಿಯಾದ ಶಿವನು ತನ್ನ ಅಂತರಂಗ-ಬಹಿರಂಗಗಳನ್ನು ಸೇರಿಸಿ, ಸರ್ವರ ಆಶ್ರಯ ಹಾಗೂ ವಿಶ್ವಾಸಕ್ಕೆ ಪಾತ್ರನಾಗಿದ್ದನು.

೧೪. ಈ ಭೂಮಿಯ ಮೇಲೆ ನಾವಿರಾರು ಪ್ರಕಾರದ ಮಾನವರಿರುತ್ತಾರೆ. ಪ್ರತಿಯೋರ್ವನೂ ತನ್ನ ಸಂಸ್ಕಾರಗಳನ್ನು ಹೊತ್ತುಕೊಂಡು ದೂರ ಭೂತದಿಂದ ಸುದೂರ ಭವಿಷ್ಯದಲ್ಲಿ ಸಾಗುತ್ತಿದ್ದಾನೆ. ಆದರೆ ಒಬ್ಬ ಮಾನವನಂತೆ ಇನ್ನೊಬ್ಬ ಮಾನವನನ್ನು ನಾವೆಷ್ಟು ಸಂಖ್ಯೆಯಲ್ಲಿ ಕಾಣುತ್ತೇವೆ? ಯಾರ ಮೇಲೆ ನಂಬಿಗೆಯಿರಿಸಬಲ್ಲೆವೋ, ಅಂಥ ಎಷ್ಟು ಮಾನವರನ್ನು ಪಡೆಯುತ್ತೇವೆ? ಯಾರೊಡನೆ ಸುಖ-ದುಃಖದ ಮಾತನ್ನಾಡಬಲ್ಲೆವೋ, ಯಾರೆದುರು ನಮ್ಮ ಮನದ ಎಲ್ಲ ಮಾತುಗಳನ್ನು ಹೇಳಿ ನಿಶ್ಚಿಂತರಾಗಬಲ್ಲೆವೋ, 'ಎಲ್ಲಿ ನಲ್ಲ; ನೀನೆಲ್ಲವನ್ನೂ ತಿಳಿಯುವೆ. ನಿನ್ನಿಂದ ಬಚ್ಚಿಡುವಂಥ ಯಾವುದೂ ಇಲ್ಲ' ಎಂದು ಯಾರನ್ನು ಕುರಿತು ಹೇಳಬಲ್ಲೆವೋ, ಇಂಥ ಎಷ್ಟು ಮನುಷ್ಯರು ಸಿಕ್ಕುತ್ತಾರೆ? ಅಂಥವರು ಬಹುಶಃ ಸಿಗುವುದೇ ಇಲ್ಲ. ಇಂಥ ಜನರು ದುರ್ಲಭವಷ್ಟೇ ಅಲ್ಲ; ಅವರು ಮಧುರರಾಗಿರುತ್ತಾರೆ; ಸಿಹಿಕರರಾಗಿರುತ್ತಾರೆ. ಇಂಥ ಮಾನವನ ಸಂಪರ್ಕದಲ್ಲಿ ಒಂದು ಸಲ. ಬಂದರೆ ತೀರಿತು; ಮನವು ಅವನಿಗಾಗಿ ಅಳತೊಡಗುತ್ತಿದೆ. ಅವನ ಸೆಳೆತದಿಂದ ಮಾನವನು ಸೆಳೆಯಲ್ಪಡುತ್ತಾನೆ. ಅವನ ಆಕರ್ಷಣೆಯಿಂದ ಆಕರ್ಷಿತನಾಗದೆ ಉಳಿಯುವುದು ಅವನಿಗೆ ಸಾಧ್ಯವಾಗದು. ಹೊರ ಜಗತ್ತಿನಲ್ಲಿ, ಹುಚ್ಚು ನಾಯಿಯಂತೆ, ಅವನನ್ನು ಹುಡುಕುತ್ತ ಅಂಡಲೆಯಬಹುದು. ಆದರೆ ಅವನನ್ನು ಹುಡುಕಿದರೂ ಅವನು ಸಿಗಲಾರನು. ಆ ಪರಮ ಸ್ನೇಹ ಪಾತ್ರನನ್ನು ಒಳಗಿನ ಅಂತಃಸ್ಥಲದಲ್ಲಿ, ಮನದ ವಿಕಾಂತಿಕತೆಯ ರತ್ನಪೆಟ್ಟಿಗೆಯಲ್ಲಿ ಹುಡುಕಬೇಕಷ್ಟೇ.

೧೫. ಈ ವಿಶ್ವವು ಬ್ರಹ್ಮಾತ್ಮದಿಂದ ಉದ್ಭವಿಸಿದ, ಒಂದು ಆನಂದ ಘನ ದ್ಯೋತನೆಯಿಂದಾಗಿದೆ.

"ಆನಂದಾದ್ಧ್ಯೇವ ಖಲ್ವಿಮಾನಿ ಭೂತಾನೀ ಜಾಯಂತೇ.
ಆನಂದೇನ ಜಾತಾನಿ ಜೀವಂತಿ. ಆನಂದಂ ಪ್ರಯಂತ್ಯಭಿಜಾಯಂತೇ".

(ಆನಂದದಿಂದ ಸಕಲ ಜೀವಿಗಳು ಉದಿಸುತ್ತವೆ. ಆನಂದದಲ್ಲಿಯೇ ಇರುತ್ತವೆ; ಅಂತೂ ಕೊನೆಗೆ ಆನಂದದಲ್ಲಿಯೇ ಲಯಿಸುತ್ತಿವೆ.)

ಈ ಆನಂದ, ಆನಂದ-ಘನ-ಸತ್ತೆ ಮತ್ತು ಆನಂದಮಯ ಪುರುಷ ಈ ಮೂರೂ ಒಂದೇ ಆಗಿವೆ. ಒಂದು ಮೂರಾಗಿದೆ. ಈ ಆನಂದಮಯ ಪುರುಷನು ತನ್ನ ದ್ಯುತಿಯಿಂದ ವ್ಯಕ್ತ ಮತ್ತು ಅವ್ಯಕ್ತವಾದ ಸರ್ವ ತತ್ತ್ವಗಳನ್ನು ಬೆಳಗಿಸುತ್ತಾನೆ. ಸಮಸ್ತ ತತ್ತ್ವಗಳನ್ನು ಅವನು ಸ್ಪಂದಿಸುತ್ತಾನೆ. ಮತ್ತು ಆ ಮೂಲಕ ಅವುಗಳ ಅಸ್ತಿತ್ವವನ್ನು ಸಿದ್ಧಪಡಿಸುತ್ತಾನೆ. ಹೀಗೆ ಅವನು 'ಆನಂದ' ಮತ್ತು 'ಅಮಿತಾಭ'ನಾಗಿದ್ದಾನೆ.

೧೬. ಯಾವ ತತ್ತ್ವವು ಹಿಂದೆ ಇದ್ದಿತೋ, ಇಂದು ಇರುತ್ತದೆಯೋ, ಮುಂದೆಯೂ ಇರುವುದೋ ಅದಕ್ಕೆ ಸನಾತನವೆನ್ನುತ್ತಾರೆ. ಈ ಸತ್ತೆಯು ಕೇವಲ ಋತ (ವಾಸ್ತವವಾಗಿ ಇರುವುದು)ವಷ್ಟೇ ಅಲ್ಲ; ಅದು ಸತ್ಯವೂ (ಕಲ್ಯಾಣಕ್ಕೋಸುಗ ಇರುವುದು) ಆಗಿದೆ. ಅರ್ಥಾತ್ ಇದರ ಅಸ್ತಿತ್ವವು ಕಲ್ಯಾಣಮುಖವಾಗಿದೆ. ಮತ್ತು ಕಲ್ಯಾಣಮಧುರವಾಗಿದೆ. ಈ ಮಧುರ ಕಲ್ಯಾಣದ ಸ್ಪರ್ಶದಿಂದ ಸನಾತನ ತತ್ತ್ವವಾದ ಪರಮಪುರುಷನು, ಚಿರಮಧುರನಾಗಿದ್ದಾನೆ; ಚಿರಸುಂದರನಾಗಿದ್ದಾನೆ.

ಯದಿ ಚಿರಸುಂದರ ನಾಹಿ ಹೋಬೇ ಗೋ.
ಕೇನ ಚಂದ್ರ ಸೂರ್ಯ ಗ್ರಹ ತಾರಾ ಸಬ
ಚರಣೇ ಲುಟಾಯೇ ರಬೇ ಗೋ

ಕುಸುಮ ಬಿತರೇ ತವ ಮಧುರಿಮಾ
ಸಮೀರಣ ಬಹೇ ತೋಮಾರಿ ಸುಷಮಾ
ನದ ನದೀ ಗಿರಿ ವನ ಉಪವನ
ಮಹಿಮಾ ತೋಮಾರ ಈ ಪ್ರಚಾರೇ ಗೋ.

ಮಹಾನ ಹಇತೇ ತುಮಿ ಸುಮಹಾನ
ಅನಾಥೇರ ನಾಥ ಜಗತೇರ ಪ್ರಾಣ
ಪರಶೇ ತೋಮಾರ ದೂರೇ ಜಾಯ ಜ್ವಾಲಾ.
ಶಾಂತಿ ಪರಾನ ಪಾಇ ಗೋ

ತಾಈ ಅಹರಹ ಸಹಿಯಾ ವಿರಹ
ತೋಮಾರೇಈ ಸವೇ ಚಾಹೇ ಗೋ.

ಆದ್ದರಿಂದ ಈ ಸತ್ಯವೇ ಸನಾತನವಾಗಿದೆ. ಸನಾತನಸತ್ಯವಾಗಿದೆ.

೧೭. ಈ ಯಾವ ಪರಮ-ತತ್ತ್ವವಿದೆಯೋ, ಈ ಯಾವ ಮಾಧುರ್ಯದ್ಯೋತನೆಯಿಂದ ಸ್ಪಂದಿತವಾದ ಪರಮ ತತ್ತ್ವವಿದೆಯೋ, ಅದು ಎಲ್ಲಕ್ಕಿಂತ ಚರಮ ತತ್ತ್ವವಾಗಿದೆ; ಶ್ರೇಷ್ಠ ತತ್ತ್ವವಾಗಿದೆ. ಎಲ್ಲಕ್ಕಿಂತ ಮೇಲಿದೆ. ಅದು ಉಪಮಾತೀತವಾಗಿದೆ. 'ತುಲಾ ವಾ ಉಪಮಾ ಶಿವಸ್ಯ ನಾಸ್ತಿ'. ಅವನ ಅಸ್ತಿತ್ವ, ಅವನ ಸ್ಥಿತಿ, ಅವನ ಆನಂದ ಘನತೆಯೇ ಪರಮವಾಗಿದೆ. ಈ ಪರಮ ಪದದಿಂದ ಏನ್ನೊಂದನ್ನೂ ಬೇಡಬಾರದು, ಕೇವಲ ಈ ಪರಮ ಪದದಲ್ಲಿ ಪರಮ ಸ್ಥಿತಿಯನ್ನು ಮಾತ್ರ ಬೇಡಬೇಕು. ಇದಕ್ಕಿಂತ ಹೆಚ್ಚೂ ಅಲ್ಲ; ಕಡಿಮೆಯೂ ಅಲ್ಲ.

ಪಟ್ಣಾ : ೮-೮-೧೯೮೨.

ಪ್ರವಚನ ೨೦

ಧ್ಯಾನಮುಂತ್ರದಲ್ಲಿ ಶಿವ

ಧ್ಯಾಯೇನ್ನಿತ್ಯಂ ಮಹೇಶಂ ರಜತಗಿರಿನಿಭಂ ಚಾರುಚಂದ್ರಾವತಾಂಸಮ್
ರತ್ನಾಕಲ್ಪೋಜ್ಜ್ವಲಾಂಗ ಪರಶು–ಮೃಗ–ವರಾಮೀತಿಹಸ್ತ
ಪ್ರಸನ್ನಮ್
ಪದ್ಮಾಸೀನಃ ಸಮಂತಾ ಸ್ತುತಮಮರಗನೇರ್ವ್ಯಾಘ್ರಾಕೃತಿ ವಸಾನ
ವಿಶ್ವಾದ್ಯಂ ವಿಶ್ವಬೀಜಂ ನಿಖಿಲಭಯಹರಂ ಪಂಚವಕ್ತ್ರಂ ತ್ರಿನೇತ್ರಂ.

[ಬೆಳ್ಳಿ ಬೆಟ್ಟದಂತಿರುವ, ಸುಂದರ ಚಂದಿರನು ಆಭರಣವಾಗಿರುವ ಆ ಮಹೇಶನನ್ನು ನಿತ್ಯವೂ ಧ್ಯಾನಿಸಬೇಕು.

ಯಾರ ಅಂಗಾಂಗಗಳು ರತ್ನಗಳ ಉಜ್ಜ್ವತೆಯಿಂದ ಹೊಳೆಯುತ್ತಿರುವವೋ, ಯಾರ ಕೈಯಲ್ಲಿ ಕೊಡಲಿ, ಮೃಗಗಳಿವೆಯೋ, ಯಾರ ಕೈಯಿಂದ ವರಪ್ರದಾನ ನಡೆದಿದೆಯೋ, ಆ ನಿತ್ಯ ಪ್ರಸನ್ನನನ್ನು,

ಯಾವನು ಕಮಲದ ಮೇಲೆ ಕುಳಿತಿರುವನೋ, ಹುಲಿಯ ಚರ್ಮ ಉಟ್ಟಿರುವನೋ, ಸಕಲ ದೇವತೆಗಳಿಂದ ಪೂಜಿತನಾಗಿರುವನೋ,

ಯಾವನು ವಿಶ್ವದ ಮೂಲನೋ, ವಿಶ್ವದ ಬೀಜನೋ, ಎಲ್ಲ ಭಯನಿವಾರಕನೋ, ಐದು ಮುಖಿಗಳುಳ್ಳವನೋ, ಮೂರು ಕಣ್ಣುಳ್ಳವನೋ (ಅವನನ್ನು ನಿತ್ಯವೂ ಧ್ಯಾನಿಸಬೇಕು).]

ಸಂಸ್ಕೃತ ಭಾಷೆಯಲ್ಲಿ ನಿಯಂತ್ರಕನಿಗೆ ಈಶ ಎನ್ನುತ್ತಾರೆ. ಪೃಥ್ವಿಯ ಹಿರಿಕಿರಿಯ ಸಕಲ ವ್ಯಾಪಾರಗಳಲ್ಲಿ ಬೇರೆ ಬೇರೆ ಮಟ್ಟದ ಮತ್ತು ಬೇರೆ ಬೇರೆ ಮರ್ಯಾದೆಯ ನಿಯಂತ್ರಕರಿರುತ್ತಾರೆ. ಯಾರ ಮನವು ಪೌರುಷದಿಂದ ಕಾಂತಿಯುತವಾಗಿದೆಯೋ, ಯಾರ ಮಾನಸಿಕತೆಯು ಪ್ರಜ್ಞಾ ಸಮೃದ್ಧವಾಗಿದೆಯೋ, ಯಾರ ಹೃದಯವು ಮಮತೆಯಿಂದ ತುಂಬಿದೆಯೋ, ಅವನು ಮಾತ್ರ ಚಿಕ್ಕ, ದೊಡ್ಡ ಮತ್ತು ಮಧ್ಯಮ ಮಟ್ಟದ ನಿಯಂತ್ರಕರ ನಿಯಂತ್ರಕನಾಗಬಲ್ಲ.

ತಮೀಶ್ವರಾಣಾಂ ಪರಮಂ ಮಹೇಶ್ವರಂ
ತ್ವಂ ದೇವತಾನಾಂ ಪರಮಂ ಚ ದೇವತಮ್.

ಪತಿಂ ಪತೀನಾಂ ಪರಮಂ ಪರಸ್ತಾದ್,
ವಿಶಂ ದೇವಂ ಭುವನೇಶಮೀಡ್ಯಂ.

"ನೀನು ಈಶ್ವರರ ಅರ್ಥಾತ್ ನಿಯಂತ್ರಕರ ಮಹೇಶ್ವರನಾಗಿರುವಿ. ನೀನು ದೇವತೆಗಳ ಮಹಾದೇವನಾಗಿರುವಿ. ನೀನು ಅಧಿಪತಿಗಳಲ್ಲಿ ಮಹಾಧಿಪತಿಯಾಗಿರುವಿ. ನೀನು ಸಮಸ್ತ ವಿಶ್ವದಲ್ಲಿ ಪೂಜನೀಯನಾಗಿರುವಿ. ಈ ಕಾರಣದಿಂದ ಎಲೈ ಶಿವನೇ, ನಿನ್ನನ್ನು ನಾನು ಅರಿಯಲಿ; ಅರಿಯದಿರಲಿ, ನೀನು ಸರ್ವರ ಈಶನಾಗಿರುವಿ; ಮಹೇಶನಾಗಿರುವಿ."

ತುಷಾರ ಶುಭ್ರ ರೈವತಕ ಪರ್ವತವು ಹೇಗೆ ಬೆಳಗುತ್ತಿದೆಯೋ ಹಾಗೆಯೇ ಶುಭ್ರತನುವಿನ ಶಿವನು ಸಹ ಪ್ರಕಾಶಮಾನನಾಗಿದ್ದಾನೆ. ರೌಪ್ಯಗಿರಿಗೆ ಸಮನಾದ ಜ್ಯೋತಿಷ್ಮಾನನಾಗಿದ್ದಾನೆ.

ಶಿವನ ಹಣೆಯಲ್ಲಿ ನಿಜವಾಗಿಯೂ ಚಂದ್ರನ ಕಲೆಯಿದ್ದಿತೇ? ಈ ವಿಷಯದಲ್ಲಿ ನಾಲ್ಕಾರು ಮಾತು ಹೇಳಬೇಕಾಗಿದೆ. ಮಾನವನ ಶರೀರದಲ್ಲಿ ಬೇರೆ ಬೇರೆ ಸ್ನಾಯು ತಂತುಗಳಿಂದ (ಚಕ್ರ ಇಲ್ಲವೆ ಪದ್ಮದಲ್ಲಿ) ಬೇರೆ ಬೇರೆ ಪ್ರಕಾರದ ಗ್ರಂಥಿಗಳು ಇಲ್ಲವೆ ಉಪಗ್ರಂಥಿಗಳು ಆಗುತ್ತವೆ. ಅವುಗಳಿಂದ ಬೇರೆ ಬೇರೆ ಪ್ರಕಾರದ ಗ್ರಂಥಿ ರಸಗಳು ಒಸರುತ್ತವೆ. ಅವು ಬೇರೆ ಬೇರೆ ರೀತಿಯಿಂದ ಮಾನವನ ಶರೀರ ಮತ್ತು ಮನ ಮತ್ತು ವೃತ್ತಿಸಮೂಹವನ್ನು ನಿಯಂತ್ರಿಸುತ್ತವೆ. ಮಾನವ ಶರೀರದ ಒಂಭತ್ತು ಚಕ್ರಗಳಲ್ಲಿ ಈ ವೃತ್ತಿಗಳು ನೆಲೆಗೊಂಡಿರುತ್ತವೆ. ಇವು ಸಂಖ್ಯೆಯಲ್ಲಿ ಮುಖ್ಯವಾಗಿ ಐವತ್ತು ಉಂಟು.

ಇವುಗಳ ಪ್ರತಿಯೊಂದಕ್ಕೂ ಬೇರೆ ಬೇರೆ ವೃತ್ತಿಗಳಿವೆ; ಬೇರೆ ಬೇರೆ ವರ್ಣಗಳಿವೆ; ಬೇರೆ ಬೇರೆ ಧ್ವನಿಗಳಿವೆ. ಈ ವರ್ಣ ಮತ್ತು ಧ್ವನಿಗಳು ಅಂಗಾಂಗಗಳ ಭಾವಗಳಿಂದ ಸಂಯುಕ್ತವಾಗಿವೆ. ಈ ಕಾರಣದಿಂದ ಐವತ್ತು ಸಂಸ್ಕೃತ ಅಕ್ಷರಗಳಿಗೆ ಅರ್ಥಾತ್ ಮೂಲ ಐವತ್ತು ಧ್ವನಿಗಳಿಗೆ ವರ್ಣಗಳೂ ಇರುತ್ತವೆ (ಸ್ವರವರ್ಣ, ವ್ಯಂಜನವರ್ಣಗಳಂತೆ). ಇನ್ನಿತರ ಸಮಸ್ತ ಮಿಶ್ರ ಧ್ವನಿಗಳು ಈ ಮೂಲ ವರ್ಣಗಳಿಂದಲೇ ಬಂದಿವೆ. ಈ ಕಾರಣ ಈ ಐವತ್ತು ವರ್ಣಗಳನ್ನು ಮಾತೃಕಾವರ್ಣ ಎನ್ನುತ್ತಾರೆ (causal matrix). ಹೆಚ್ಚು ಹೆಚ್ಚಾಗಿ ಊರ್ಧ್ವಸ್ಥ ಚಕ್ರ ಇಲ್ಲವೆ ಕಮಲದಿಂದ ಯಾವ ಗ್ರಂಥಿರಸ (harmones) ಸ್ರವಿಸುವುದೋ ಅದರೊಂದಿಗೆ ಸಂಶ್ಲಿಷ್ಟವಾದ ಧ್ವನಿ ಇಲ್ಲವೆ ವರ್ಣವು ಕೆಳ-ಕೆಳಗಿನ ಚಕ್ರಗಳನ್ನು ಪ್ರಭಾವಿತಗೊಳಿಸುತ್ತದೆ. ಎಲ್ಲಕ್ಕಿಂತ ಮೇಲೆ ಸಹಸ್ರಾರು ಚಕ್ರವುಂಟು (ಇದು ಒಂದು ಸಾವಿರ ವೃತ್ತಿಗಳಿಂದ ಕೂಡಿದೆ). ಇದು ಕೆಳಗಿನ ಎಲ್ಲ ಚಕ್ರಗಳನ್ನೂ ಪ್ರಭಾವಿತಗೊಳಿಸುತ್ತದೆ. ಈ ಸಹಸ್ರಾರು ಚಕ್ರದಿಂದ (pineal glond) ಗ್ರಂಥಿರಸವು ಸ್ರವಿಸುತ್ತದೆ. ಇಲ್ಲವೆ ಸುಧಾರಸವು ಮಾನವನ ಶರೀರದಲ್ಲಿ, ಪ್ರಾಣದಲ್ಲಿ, ಮನದಲ್ಲಿ, ಒಂದು ಅವರ್ಣನೀಯ, ಆಧ್ಯಾತ್ಮಿಕ ಅನುಭೂತಿಯನ್ನು ಒಂದು ಭಾವಾತೀತ ಸ್ಥಿತಿಯನ್ನು ಉಂಟುಮಾಡುತ್ತದೆ. ಈ ಸುಧಾರಸ (Divine nector) ಸಕಲ ಮಾನವರ ಸಹಸ್ರಾರ ಚಕ್ರದಿಂದ ಸದಾ ಸ್ರವಿಸುತ್ತಿರುತ್ತದೆ. ಆದರೆ ಮನದಲ್ಲಿ ಜಡಾಭಿಮುಖೀ ಭಾವನೆಗಳಿರುವ ಕಾರಣ, ಈ ಸುಧಾರಸವು

ಆ ಮಾನಸಿಕತೆಯ ಸಂಸ್ಪರ್ಶದಲ್ಲಿ ಬಂದ ಮೇಲೆ ಸುಟ್ಟು ಹೋಗುತ್ತದೆ. ಸುಧೆಯು ಸ್ರವಿಸುವ ಕಾಲಕ್ಕೆ ಒಂದು ವೇಳೆ ಯಾವನೊಬ್ಬ ಮನುಷ್ಯನು, ಆಧ್ಯಾತ್ಮಿಕ ಚಿಂತನೆಯಲ್ಲಿ ನಿರತನಾದರೆ, ಅವನು ಆ ಕ್ಷುಧೆಯ ಸ್ಪರ್ಶವನ್ನು ಅನುಭವಿಸುತ್ತಾನೆ. ಮತ್ತು ಒಂದು ರೀತಿಯ ಭಾವಸ್ಥಿತಿಯಲ್ಲಿ ಉಳಿಯುತ್ತಾನೆ. ಹೊರಗಿನಿಂದ ನೋಡುವವರಿಗೆ ಆ ಮನುಷ್ಯನಿಗೆ ನಿಶೆಯೇರಿದೆಯೇನೋ ಎಂಬಂತೆ ಕಾಣುತ್ತದೆ. ಶಿವನು ಸಹ ಅನೇಕ ಬಾರಿ ಈ ರೀತಿಯ ಮಸ್ತಿಯಲ್ಲಿ ಇರುತ್ತಿದ್ದನು. ಆದ್ದರಿಂದ ಕುಡುಕರು, ಗಾಂಜಾ ಸೇದುವವರು ತಮ್ಮಂತೆಯೇ ಶಿವನು ನಿಶೆಯಲ್ಲಿ ಅಲೆದಾಡುತ್ತಿದ್ದನೆಂದು ತಿಳಿದರು.

ಸುರಾಪಾನ ಕರಿ ನೇ ಆಮಿ, ಸುಧಾ ಖಾಈ 'ಜಯಕಾಲೀ' ಚಲೇ
ಮನ ಮಾತಾಲೇ ಕರೇ ಮದ ಮಾತಾಲೇ ಮಾತಾಲೇ ಬಲೇ

* *

*

ಸುರೆಯ ಕುಡಿಯದಿರುವೆ.
ಸುಧೆಯ ಸವಿಯುತಿರುವೆ.
'ಜಯ ಕಾಳಿ' ಎಂದು.

ಮನದ ಮಸ್ತ ಇರವ
ಕಂಡು ಕುಡುಕ ನುಡಿವ
'ಇವ ಕುಡುಕ' ಎಂದು.

ಆ ಸಮಯದ ಮಾನವನು ಚಂದ್ರನಲ್ಲಿ ಇರುವ ಹದಿನಾರು ಕಲೆಗಳಲ್ಲಿ ಚತುರ್ದಶಿಯಂದು ಹದಿನಾಲ್ಕು ಕಲೆಗಳು ಕಾಣಬರುವವೆಂದೂ, ಹುಣ್ಣಿಮೆಯಂದು ಹದಿನೈದು ಕಲೆಗಳು ಕಾಣಬರುವವೆಂದೂ, ತಿಳಿದಿದ್ದನು. ಚಂದ್ರನು ಸ್ವಲ್ಪ ವಕ್ರ ಸ್ಥಿತಿಯಲ್ಲಿರುವುದರಿಂದ ಹದಿನಾರನೆಯ ಕಲೆಯನ್ನು ನಾವು ಕಾಣಲಾರೆವು. ಆ ಯುಗದ ಮಾನವನು ಆ ಹದಿನಾರನೆಯ ಕಲೆಯಿಂದ ಸುಧಾರಸವು ಹನಿಸುತ್ತದೆ ಎಂದೂ ತಿಳಿದನು. ಇದೇ ಕಾರಣದಿಂದ ಅವನು ಆ ಹದಿನಾರನೆಯ ಕಲೆಯನ್ನು 'ಅಮಾಕಲಾ' (ಕಪ್ಪು ಪಂತ) ಎಂದು ಕರೆದನು.

ಶಿವನು ಸದಾಕಾಲ ಆಧ್ಯಾತ್ಮಿಕ ಸುಧಾರಸದಲ್ಲಿ ಮಗ್ನನಾಗಿರುತ್ತಿದ್ದನು. ಇದರಿಂದ ಬಹಳ ಜನರು, ಚಂದ್ರನಲ್ಲಿ ಯಾವ ಹದಿನಾರನೆಯ ಕಲೆಯನ್ನು ನಾವು 'ಅಮಾಕಲೆ' ಯೆಂದು ಕರೆದೆವೋ, ಮತ್ತು ಕಾಣದಿದ್ದೆವೋ, ಅದು ಶಿವನ ಮಸ್ತಕದಲ್ಲಿಯೇ ಇದೆ ಯೆಂದು ಯೋಚಿಸಿದರು. ಈ ಸುಧಾರಸವೇ ಶಿವನನ್ನು ಭೋಲಾನಾಥನನ್ನಾಗಿಸಿ ಬಿಟ್ಟಿತು. ಆದ್ದರಿಂದಲೇ 'ಚಾರೊ ಚಂದ್ರ ವಾತಾಂಸಮ್' ಎಂದು ಹೇಳಲಾಗಿದೆ. ಶಿವನು ಕೇವಲ ಶುಭ್ರತನುವಷ್ಟೇ ಆಗಿದ್ದನೆ? ಇಲ್ಲವೆ ಸುಧಾರಸದ ಪ್ರಕಾಶದಿಂದ ಅವನ ದೇಹವೆಲ್ಲ ದ್ಯುತಿಮಾನವಾಗಿತ್ತೋ? ಅವನು ಹಿಮದ ಸಮೂಹದ ಮೇಲೆ ಸೂರ್ಯನ ಕಿರಣದ ಪ್ರತಿಫಲನದಂತಿದ್ದನೆಂದು ತಿಳಿಯಬಹುದು. ಅಜ್ಞಾನದ ಈ ಜಗತ್ತಿನಲ್ಲಿ ಆಕರ್ಷಕ ಕಾಂತಿಯುತ ರತ್ನದ ಹರಳಿನಂತಿದ್ದನು. ವಿವಿಧ ರತ್ನ-ವೈಢೂರ್ಯಗಳಿಂದ ಚಕಮಕಿಸುವ ಯಾವ ಹೊಳಪು ಹೊರಹೊಮ್ಮುವುದೋ, ಶಿವನ ಶುಭ್ರದೇಹದಿಂದ ಸಹ ಅದೇ ಪ್ರಕಾರದ ಹೊಳಪು ಹೊರಹೊಮ್ಮುತ್ತಿತ್ತು. ಆದ್ದರಿಂದಲೇ 'ರತ್ನ ಕಲ್ಪೋಜ್ವಲಾಂಗ' ಎಂದು ಬಣ್ಣಿಸಲಾಗಿದೆ. ಶಿವನ ಮಾಧುರ್ಯಮಯ, ಸುಗಂಧಮಯ ಕೋಮಲ ಶರೀರವು ಈ ವರ್ಣದ ಉಜ್ಜ್ವಲತೆಯಿಂದ ಮತ್ತಷ್ಟು ಹೆಚ್ಚು ಮನೋರಮವಾಗಿತ್ತು; ಮನೋಹರವಾಗಿತ್ತು.

ಅಪೂರ್ವ ತಾಂರ ದೇಹೇರ ಸುವಾಸ ಮಮತಾಮಯ ಅಂಖಿ ದೂತಿ,
ಅಪೂರ್ವ ತಾಂರ ಮಧುರ ವಾನೀ
ಅಪೂರ್ವ ತಾಂರ ಆನನ ಖಾನಿ
ಅಪೂರ್ವ ತಾಂರ ಕೋಮಲ ತನು ಮನಮಾತಾನೋ ಸೇಈ ಹಾಂಸಿಟೇ

* * *

ಅಪೂರ್ವ ವಾಸನೆ ಶರೀರದಲ್ಲಿ;
ನಲ್ಮೆಯು ಸೂಸಿದೆ ನಯನಗಳಲ್ಲಿ.

ಅಬ್ಬಾ ವಾಣಿಯ ಸುಮಧುರದಿಂಪು.
ಏನಾ ಮುಖದಲಿ ಮಿನುಗುವ ಪೆಂಪು।

ಅಪೂರ್ವವಾಸನೆ ಕೋಮಲ ತನುವು;
ಮನವನು ತಣಿಸುವ ಮೋಹಕ ನಗುವು॥

ಅತ್ಯಾಚಾರಿಗಳ ಔದ್ಧತ್ಯವನ್ನು ಸದೆಬಡಿಯಲು ಅವನು ಕೈಯಲ್ಲಿ ಕೊಡಲಿ ಹಿಡಿದಿದ್ದನು. ಶಿವನು, ಮಾನವರನ್ನು, ಪಶುಗಳನ್ನು ಉದ್ಭಿಜಗಳನ್ನು ಮತ್ತು ಸರ್ವರನ್ನು ಸಮಾನವಾಗಿ ಕಂಡು ತನ್ನ ಸಂತಾನವೇ ಎಂದು ಬಗೆದು, ಪಾಲನೆ-ಪೋಷಣೆ ಮಾಡಿದನು. ಮತ್ತು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸಿದನು. ಇದರಿಂದ ಶಿವನ ಬಳಿ ಮೃಗಗಳ ತಂಡಗಳು ನಿರ್ಭಯವಾಗಿ ಬರುತ್ತಿದ್ದವು. ಸಂಸ್ಕೃತ ಭಾಷೆಯಲ್ಲಿ ಮೃಗ ಎಂದರೆ ಜಿಂಕೆಯಷ್ಟೇ ಎಂದೇನೂ ಅಲ್ಲ. ಆ ಕಾಲದಲ್ಲಿ ರಾಜನು 'ಮೃಗಯಾ' ದೆಸೆಯಿಂದ ಹೊರಡುತ್ತಿದ್ದನು. ಇದರ ಅರ್ಥವೆಂದರೆ ಅವನು ಕೇವಲ ಜಿಂಕೆಗಳನ್ನಷ್ಟೇ ಬೇಟೆಯಾಡುತ್ತಿದ್ದನೆಂದೇನೂ ಅಲ್ಲ. ಅವನು ಯಾವುದಾದರೂ ಪಶುವಿನ ಬೇಟೆಗಾಗಿ ಹೊರಡುತ್ತಿದ್ದನು. ಇದರಿಂದಾಗಿ ಸಕಲ ಪಶುಗಳು ಶಿವನ ಬಳಿ ಆಶ್ರಯ ಕೋರಿ ಬರುತ್ತಿದ್ದವು. ಆರ್ತ ಮನುಷ್ಯರು ಇಲ್ಲವೆ ಆರ್ತ ಪಶುಗಳು, ಭಯಭೀತರಾಗಿ, ಸಂತ್ರಸ್ತರಾಗಿ ಶಿವನ ಬಳಿ ಆಶ್ರಯ ಕೋರಿ ಬಂದಾಗ, ಆ ಶಿವನು ಅವರಿಗೆಲ್ಲ ಅಭಯ ನೀಡುತ್ತಿದ್ದನು. ಅವರ ಕಲ್ಯಾಣಕ್ಕೋಸುಗ ಅವನು ವರದಾನ ನೀಡುತ್ತಿದ್ದನು. ಬೋಳೇಶಂಕರನು ದುಷ್ಟರ ಕಣ್ಣೀರು ಕಂಡು ಸುಮ್ಮನಿರಲಾಗದೆ ಕನಿಕರಿಸುತ್ತಿದ್ದನು. ಅವರಿಗೂ ವರ ನೀಡಿ ಅವರು ತಮ್ಮ ಆತ್ಮ ಸಂಶೋಧನೆ ಮಾಡಿಕೊಳ್ಳುವಂತೆ ಹಾದಿ ತೋರುತ್ತಿದ್ದನು.

ಎಂಥ ಪ್ರಸಂಗವಿರಲಿ, ಶಿವನು ತನ್ನ ಮಾನಸಿಕ ಸಾಮ್ಯವನ್ನೆಂದೂ ಕಳೆದುಕೊಳ್ಳುತ್ತಿರಲಿಲ್ಲ. ಘೋರ ವಿಪತ್ತಿನ ಕಾಲದಲ್ಲಿಯೂ ಸಹ ಅವನ ಮನದ ಕಳೆಯಲ್ಲಿಯ ನಗು ಹಿಂಗುತ್ತಿರಲಿಲ್ಲ. ಅತ್ತು-ಕರೆಯುವಂಥ ಪ್ರಸಂಗಗಳಲ್ಲಿಯೂ ಅವನು ನಗುತ್ತಿರು

ತ್ತಿದ್ದನು. ವಿಶ್ವದ ಇತಿಹಾಸದಲ್ಲಿಯೇ ಈ ಪ್ರಕಾರ ಸದಾ ಪ್ರಸನ್ನತೆಯ ಕಳೆಯು ಅತ್ಯಂತ ವಿರಳವಾಗಿದೆ. ಅವನು ಕುಳಿತುಕೊಳ್ಳುವಾಗಲೆಲ್ಲ ಪದ್ಮಾಸನದಲ್ಲಿಯೇ ಕುಳಿತುಕೊಳ್ಳುತ್ತಿದ್ದನು. ಆಸನಕ್ಕೆ ಪದ್ಮಾಸನವೆಂದು ಕರೆಯುವುದೇಕೆಂದರೆ–ಅರಳಿದ ಕಮಲದ ಬೇರು–ಕಾಂಡಗಳೆಲ್ಲ ನೀರಿನ ಕೆಳಗಡೆ ಇರುತ್ತವೆ; ಮೇಲೆ ಕೇವಲ ಎಲೆಗಳು ಮಾತ್ರ ಅರಳಿದ ಕಮಲದೊಂದಿಗೆ ತೇಲಾಡುತ್ತಿರುತ್ತವೆ. ಯಾವ ರೀತಿ ಕಮಲವು ನೀರೊಳಿದ್ದು ನೀರಿನ ಮೇಲೆ ತೇಲುವುದೋ, ಕೆಸರಿನೊಳಿದ್ದು ಆಗಸದ ಜ್ಯೋತಿಷ್ಕದ ಸ್ನೇಹ ಪಡೆದಿರುವುದೋ, ಅದೇ ರೀತಿ, ಪ್ರಪಂಚದ ಮನುಷ್ಯನು ಜಗತ್ತಿನಲ್ಲಿದ್ದು, ಈ ಪದ್ಮಾಸನದಲ್ಲಿ ಕುಳಿತುಕೊಂಡು, ಮನವನ್ನು ಈ ಜಡಜಗತ್ತಿನಿಂದ, ಮೇಲಕ್ಕೆ ಸಾಗಿಸಬಲ್ಲವನಾಗಿದ್ದಾನೆಂದು ಯೋಗಿಗಳು ಹೇಳುತ್ತಾರೆ. ಆದ್ದರಿಂದ ಸಾಧನ–ಮಾರ್ಗದಲ್ಲಿ ಈ ಆಸನದ ಮೂಲ್ಯ ಮತ್ತು ಮರ್ಯಾದೆಗಳು ಅಸೀಮವಾಗಿವೆ. ಪದ್ಮಾಸನದಲ್ಲಿ ಕುಳಿತ ಶಿವನು, ಸಮಸ್ತ ಜಗತ್ತಿನ, ಜಾಗತಿಕ ಮತ್ತು ಮಾನಸಿಕ ಹೊಣೆಯನ್ನು ಹೊತ್ತುಕೊಂಡು ಸಹ, ಅರಳಿದ ಕಮಲದಂತೆಯೇ, ಎಲ್ಲ ದೋಷಗಳ, ಎಲ್ಲ ಕೆಸರಿನ ಮೇಲಿನಿಂದ, ಜಡ ಮತ್ತು ಮಾನಸಿಕ ಜಗತ್ತನ್ನು ಆಧ್ಯಾತ್ಮಿಕ ಜಗತ್ತಿನೊಂದಿಗೆ ಸಂಪರ್ಕಿಸುತ್ತಾನೆ. ಪ್ರತಿ ಸಮಯದಲ್ಲಿಯೂ ಆಧ್ಯಾತ್ಮಿಕ ಜಗತ್ತಿನೊಂದಿಗೆ ಯೋಗ ಸೂತ್ರದ ರಕ್ಷಣೆ ಮಾಡುತ್ತಾನೆ.

ಈ ವಿಶ್ವದಲ್ಲಿ ನಿರ್ಮಾಣಗೊಂಡಿರುವುದೆಲ್ಲ ವಿಕಾಸಶೀಲವೇ ಆಗಿದೆ. ಈ ಮಾತು ಎಷ್ಟು ಸತ್ಯವೋ ಅಷ್ಟೇ ಸತ್ಯವಾಗಿ ಪರಮಪುರುಷನ ನಾಭಿಕೇಂದ್ರದಿಂದ ಉತ್ಸಾರಿತವಾದ ಎಲ್ಲ ದೈವೀಕಂಪನಗಳು, ಎಲ್ಲ ಭಾವತರಂಗಗಳು (ಇವುಗಳನ್ನು ದೇವ ಶಬ್ದದಿಂದ ಕರೆಯುತ್ತಾರೆ.) ಅಪರಿಮೇಯವಾದ ನೀಲ ಗಗನದತ್ತ ಸಾಗುತ್ತಿರುತ್ತವೆ. ಸುದೂರ ಭವಿಷ್ಯದತ್ತ ಸಾಗುತ್ತಿರುತ್ತವೆ. ಆದ್ದರಿಂದ, ಈ ದ್ಯುತಿಕಣಗಳನ್ನು ನಾವು ಅಮರ ಎಂದೂ ಕರೆಯಬಹುದು. ಇವು ಹತ್ತಿರ ಹತ್ತಿರ ಬಂದರೂ ಸಹ, ಅನೇಕ ಬೆಳಕಿನ ವರ್ಷಗಳಷ್ಟು ದೂರ ಹೋಗಿಬಿಡುತ್ತವೆ. ಅವುಗಳಿಗಾವ ಲೆಕ್ಕವೇ ಇಲ್ಲ.

ಇವರು ಅಮರರಾದರೂ ಸಹ, ದೇವರ ದೇವನಾದ ಮಹಾದೇವನ ಚರಣಕ್ಕೆ ಶಿರಬಾಗುತ್ತಾರೆ. ಯಾರಲ್ಲಿ ಸಾಮರ್ಥ್ಯವಿದೆಯೋ, ಅವರು ತಮಗಿಂತ ಹೆಚ್ಚು ಸಮರ್ಥರಾದವರನ್ನು ಕಂಡಾಗ ಸ್ತುತಿಸುವುದು ನಿಯಮವೇ ಆಗಿದೆ. ಜಗತ್ತಿನ ಎಲ್ಲ ದೇವರು, ಎಲ್ಲ ಜ್ಯೋತಿಷ್ಕಗಳು, ಎಲ್ಲ ದ್ಯುತಿ ಸುರಭಿಗಳು ಶಿವನೆದುರು ತೀರ ಅಲ್ಪರು, ಏನೂ ಅಲ್ಲ. ಈ ಕಾರಣದಿಂದ ಅವರು ಶಿವನನ್ನು ಸ್ತುತಿಸುತ್ತಾರೆ. ಈ ದ್ಯುತಿ ಕಣಗಳು, ಒಂದು ವೇಳೆ ಚರಮ ರೂಪದಿಂದ ಗುಣಭರಿತವಾಗಿದ್ದರೂ ಸಹ, ಶಿವನ ಬಳಿ ಗಣನೆಗೆಬಾರರು. ಇದರ ಕಾರಣವಿಷ್ಟೇ. ಇವರು ಗುಣಾನ್ವಿತರಾಗಿದ್ದಾರೆ. ಶಿವನಾದರೋ ಗುಣಾತೀತನು. ಯಾರು ಗುಣಾನ್ವಿತರಾಗಿರುವರೋ ಅವರು ಪ್ರತಿವೇಳೆ, ಗುಣಾತೀತನ ಆಶ್ರಯವನ್ನು ಬಯಸುತ್ತಾರೆ.

"ಪ್ರಭುಮೀಶನೀಶಮಶೇಷ ಗುಣಂ
ಗುಣಹೀನಮಹೇಶ ಗುಣಾಭರಣಮ್"

ಎಲೈ ಪ್ರಭುವೇ! ಶಿವನೇ! ನೀನೆಲ್ಲರ ಈಶನು; ನೀನು ಮಹೇಶನು. ಆದರೆ, ನೀನು ಸ್ವಯಂ ಅನೀಶನಾಗಿರುವಿ. ಅಂದರೆ ನಿನಗಾವ ಈಶನೂ ಇರನು. ಎಲೈ ಶಿವನೇ! ಗುಣಗಳ ವಿಚಾರ ಮಾಡುವಾಗ, ಗುಣಗಳ ಗಂಭೀರತೆಯನ್ನು ಅಳೆಯುವಾಗ, ನಮಗೆ ನಿನ್ನ ಅಳವೇ ಸಿಗದು! ಏಕೆಂದರೆ ನೀನು ಅಶೇಷಗುಣಿಯಾಗಿರುವೆ. ಎಲೈ ಶಿವನೇ, ತಮ್ಮ ಉಜ್ಜ್ವಲತೆಯನ್ನು ಹೆಚ್ಚಿಸಿಕೊಳ್ಳಲೋಸುಗ, ತಮ್ಮನ್ನು ಹೆಚ್ಚು ಹೆಚ್ಚಾಗಿ ಪ್ರಕಾಶಮಯಗೊಳಿಸಿಕೊಳ್ಳಲೋಸುಗ, ಬೇರೆ ಬೇರೆ ದೇವತೆಗಳ ಕಿವಿಗಳಲ್ಲಿ, ಕೊರಳಿನಲ್ಲಿ, ತೋಳುಗಳಲ್ಲಿ, ನಡುವಿನಲ್ಲಿ ಅಸಂಖ್ಯ ಪ್ರಕಾರದ ಅಲಂಕಾರಗಳೂ ಮತ್ತು ಮಣಿಗಳ ಹಾರಗಳೂ ಇರುತ್ತವೆ. ಆದರೆ ನಿನ್ನ ಬಳಿ ಸ್ವಲ್ಪವೂ ಸಹ ಇಲ್ಲ. ನಿನ್ನ ನಲ್ಮೆಯ ಭಕ್ತ ಗಣವೇ ನಿನ್ನ ಅತ್ಯಂತ ಪ್ರಿಯಗಣವಾಗಿದೆ. ನಿನ್ನ ಪ್ರಾಣಕ್ಕಿಂತ ಪ್ರಿಯವಾದ ಸಂತಾನವೇ ನಿನ್ನ ಅಲಂಕಾರವಾಗಿವೆ. ಇವರೇ ನಿನ್ನ ಮಣಿಹಾರ. ಇವರಿಂದಲೇ ನಿನ್ನ ಗೌರವವಿದೆ. ಇವುಗಳನ್ನು ಕುರಿತು ಯೋಚಿಸಿಯೇ ನೀನು ದಿನಗಳೆಯುತ್ತಿರುವೆ.

ಎಲೈ ಶಿವನೇ! ನಿನ್ನ ಗುಣಗಳನ್ನು ವರ್ಣಿಸುವುದು ಮಾನವನ ಸಾಮರ್ಥ್ಯದ ಅಳವಿನಾಚೆಯದು!

"ಅಸಿತ ಗಿರಿಸಮಂ ಸ್ಯಾತ್ ಕಜ್ಜ್ವಲಂ ಸಿಂಧು ಪಾತ್ರೇ
ಸುರತರುವರ ಶಾಖಾ ಲೇಖನೀ ಪತ್ರಮೂರ್ವೀ
ಲಿಖಿತಿ ಯದಿ ಗೃಹಿತ್ವಾ ಸಾರದಾ ಸರ್ವಕಾಲೇ
ತಥಾಪಿ ತವ ಗುಣಾನಾಮೀಶ ಪರಂ ನ ಯಾತಿ.

ಎಲೈ ಪರಮ ಪಿತ, ಆದಿದೇವ, ಎಲೈ ಮಂತ್ರೇಶ, ಮಹಾದೇವ; ನಿನ್ನ ಗುಣಗಳನ್ನು ಬಣ್ಣಿಸುವುದು ಅಸಂಭವನೀಯ. ಒಂದು ವೇಳೆ, ವಿರಾಟ ಹಿಮಾಲಯಕ್ಕೆ ಸಮನಾದ ಒಂದು ದೊಡ್ಡ ಮಸಿಗುಳಿಗೆಯನ್ನು, ಸಮುದ್ರದಂಥ ವಿರಾಟ ಮಸಿ–ದೌತಿಯಲ್ಲಿ ಹಾಕಿ, ಸ್ವರ್ಗದ ಕಾಲ್ಪನಿಕ ಪಾರಿಜಾತ ವೃಕ್ಷಗಳ ರೆಂಬೆ–ಕೊಂಬೆಗಳನ್ನು ಲೇಖನಿಯಾಗಿ ಹಿಡಿದುಕೊಂಡು, ಈ ವಿಪುಲ ಧರಣಿಯನ್ನೇ ಕಾಗದವನ್ನಾಗಿಸಿ, ಸ್ವತಃ ವಿದ್ಯೆಯ ಅಧಿಷ್ಠಾತ್ರಿಯಾದ ಸಾರದೆಯೇ ಸದಾ ಕಾಲ ಬರೆಯಹತ್ತಿದರೂ ಸಹ ನಿನ್ನ ಗುಣರಾಶಿಯನ್ನು ಬರೆದು ಸಮಾಪ್ತಗೊಳಿಸುವುದು ಅಸಾಧ್ಯ.

ಈ ಕಾರಣದಿಂದ, ಗುಣಗಳ ಚರಮ ಸಮಾಹಾರನಾದ ಶಿವನು ಗುಣಾತೀತನಾಗಿದ್ದಾನೆ; ಅವನು ಗುಣಹೀನನಾಗಿದ್ದಾನೆ; ಎಂದು ಹೇಳಬೇಕಾಗುತ್ತದೆ. ಈ ಗುಣಾತೀತತ್ವ ಮತ್ತು ಗುಣಹೀನತ್ವದಿಂದಾಗಿ ಸ್ವರ್ಗ, ಮರ್ತ್ಯ ಮತ್ತು ರಸಾತಲದ ಸರ್ವಸತ್ತೆಗಳು ಅವನೆದುರು ಬಾಗುತ್ತವೆ. ಸರ್ವರೂ ಒಂದೇ ಮಾತಿನಲ್ಲಿ ಹೇಳುತ್ತಾರೆ. 'ನೀನು ನಮ್ಮ ತಂದೆಯಾಗಿರುವೆ. ನೀನು ನಮ್ಮ ಆದಿ ಪಿತನಾಗಿರುವೆ. ನೀನು ನಮ್ಮ ತಾರಕ ಬ್ರಹ್ಮನಾಗಿರುವೆ. ನೀನೇ ನಮಗೆ ಎಲ್ಲವೂ ಆಗಿರುವೆ. ನಿನ್ನ ಚರಣದಲ್ಲಿ ನಾನು ಪ್ರಣಾಮ ಮಾಡುವೆ.'

ಜೈನ ಯುಗದಲ್ಲಿ ಕೆಲವರು ಇತ್ತೀಚಿನ ವ್ಯಕ್ತಿಗಳು, ಶಿವನು ದಿಗಂಬರನಿದ್ದನೆಂದು ಹೇಳುತ್ತಿದ್ದರು. ಅದೆಲ್ಲ ಅವರ ವಿಚಾರಧಾರೆಯ ಮೇಲೆ ದಿಗಂಬರ ಜೈನಮತದ

ಪ್ರಭಾವವಷ್ಟೇ ಸರಿ. ಧ್ಯಾನ ಮಂತ್ರದಲ್ಲಿ ಸ್ಪಷ್ಟವಾಗಿ ಶಿವನು ವ್ಯಾಘ್ರಾಸೀನನೆಂದೂ, ವ್ಯಾಘ್ರಾಂಬರನೆಂದೂ ಹೇಳಲಾಗಿದೆ. ಶಿವನು ವ್ಯಾಘ್ರ ಚರ್ಮವನ್ನು ಉಡುತ್ತಿದ್ದನು. ಈ ಕಾರಣದಿಂದಾಗಿಯೇ ಅವನನ್ನು 'ಕೃತ್ತಿವಾಸ'ನೆಂದೂ ಹೆಸರಿಸಲಾಗಿದೆ. ಆ ಯಾವ ಗಂಭೀರ ಶಿವ ತತ್ತ್ವವಿದೆಯೋ, ಆ ಯಾವ ಚಿದ್ಘನಸತ್ತೆಯಾದ ಪರಮ ಪುರುಷನಿರುವನೋ, ಅವನೇ ನಮ್ಮ ಸಮೀಪದ ಮನುಷ್ಯರಲ್ಲೊಬ್ಬನಾಗಿ ಹೋಗುತ್ತಾನೆ. ಆದಿ ಪುರುಷ ಮತ್ತು ಆದಿಸೃಷ್ಟಾನ ರೂಪದಲ್ಲಿ ಪರಮ ಬ್ರಹ್ಮನ ಯಾವ ಪಾತ್ರವಿದೆಯೋ, ಆ ಪಾತ್ರದ ಎಲ್ಲ ಗುಣಗಳ ಅಭಿವ್ಯಕ್ತಿಯನ್ನು ನಾವು ಶಿವನಲ್ಲಿ ಪಡೆಯುತ್ತೇವೆ. ಈ ಕಾರಣದಿಂದ, ಯಾವುದೇ ಆತಂಕವಿಲ್ಲದೆ, ನಾವು ಶಿವನು 'ಮರ್ಯಾದಾ (ತದ್ರೂಪ) ಆದಿ ಪಿತಾ' ಎಂದು ಹೇಳಬಲ್ಲೆವು. ಅವನು 'ಮರ್ಯಾದಾ ಪುರುಷೋತ್ತಮ'ನಾಗಿದ್ದನು. ಅನನನ್ನು ಆದಿಪುರುಷನೆಂದು ಕೂಗಿ ಕರೆಯಬಲ್ಲೆವು. ಅವನನ್ನು 'ಆದಿ ಶಿವ' ಎಂದು ಕರೆದು ಕೂಗಬಲ್ಲೆವು. ಈ ಅರಿವಿನ ಬೆಳಕಿನಲ್ಲಿ ಸ್ಪಷ್ಟವಾಗಿ, ಅವನು ವಿಶ್ವಾದ್ಯನೆಂದು ಹೇಳಬಹುದಾಗಿದೆ.

ಸೃಷ್ಟಿಯ ಮೂಲ ಕಾರಣವು ಆದಿ ಪುರುಷನಲ್ಲಿ, ಆದಿ ಶಿವನಲ್ಲಿ, ನೆಲೆಸಿದೆ. ಆದಿ ಶಿವನು ಆ ಕಾರಣವನ್ನು ಸೃಷ್ಟಿಯ ಇಚ್ಛೆಯ ಮಾಧ್ಯಮದಿಂದ ನಿಷ್ಕಲತ್ವದಿಂದ ಸಕಲತ್ವದಲ್ಲಿ. ಪರಿಣಮಿಸಹಚ್ಚುತ್ತಾನೆ. ಬೀಜವು ಅಂಕುರದ ರೂಪ ತಳೆಯುತ್ತದೆ. ಪರಮ ಶಿವನ ಇಚ್ಛೆಯ ಹೊರತು, ಆದಿಶಕ್ತಿಯು ಆ ರೂಪಗಳನ್ನು ಗ್ರಹಿಸುವಲ್ಲಿ ಸಕ್ಷಮವಾಗುವುದಿಲ್ಲ. ಆದ್ದರಿಂದ ಮೂಲ ಶಕ್ತಿಯು ಆದಿಶಕ್ತಿಯೇನಲ್ಲ. ಅದು ಆದಿ ಶಿವ ಇಲ್ಲವೆ ಆದಿ ಪುರುಷನೇ ಸರಿ. ಈ ಕಾರಣದಿಂದ ಧ್ಯಾನಮಂತ್ರದಲ್ಲಿ ಅವನನ್ನು ಸ್ಪಷ್ಟ ಭಾಷೆಯಲ್ಲಿ 'ವಿಶ್ವ ಬೀಜ' ಎನ್ನಲಾಗಿದೆ.

ಯಾವುದಕ್ಕೆ ಬಂಧನಗಳಿಲ್ಲವೋ, ಯಾವುದು ಬಾಧಾ ರಹಿತವಾಗಿದೆಯೋ, ಅದಕ್ಕೆ ನಿಖಿಲ ಇಲ್ಲವೆ ಅಖಿಲ ಎಂದು ಕರೆಯುತ್ತಾರೆ. ಜಗತ್ತಿನ ಬೇರೆ ಬೇರೆ ರಂಗಗಳಲ್ಲಿ, ಮನನದ ಬೇರೆ ಬೇರೆ ಸ್ತರಗಳಲ್ಲಿ, ಮಾನಸಿಕತೆಯ ಬೇರೆ ಬೇರೆ ಭೂಮಿಗಳ ಮೇಲೆ ಬೇರೆ ಬೇರೆ ಪ್ರಕಾರದ ಭಯಗಳಿಂದ ಮಾನವನು ಭೀತನಾಗುತ್ತಾನೆ. ಹೇಗೆ ಆರಣ್ಯದ ಪಶುವು ಸದಾಕಾಲ ಸಂತ್ರಸ್ತವಾಗಿರುವುದೋ, ಹಾಗೆ ಬೇರೆ ಬೇರೆ ಪ್ರಕಾರದ ಶತ್ರುಗಳ ಭಯದಿಂದ, ಮಾನವರ ಬಾಳು ಒಂದು ಕಾಲದಲ್ಲಿ ಇತ್ತು. ಇಂದಿನ ಮಾನವನಿಗೆ ಸ್ಥೂಲ ಜಗತ್ತಿನಲ್ಲಿ ಭಯದ ಮೊತ್ತವು ಸ್ವಲ್ಪ ಕಡಿಮೆಯಾಗಿದೆ. ಆದರೆ ಮಾನಸಿಕ ಜಗತ್ತು ಮತ್ತು ಮನನತೆಯಲ್ಲಿ, ಭಯದ ಮೊತ್ತವು ಹೆಚ್ಚುತ್ತಿದೆ. ಇಂದು ಚಿಕ್ಕ ಪುಟ್ಟ ಅಸ್ತ್ರಗಳಿಂದೇನೂ ಮಾನವನು ಭೀತನಾಗಿಲ್ಲ. ಜೀವನದಲ್ಲಿ ಭಯ ಹೀನತೆಯು ಹೆಚ್ಚಿದೆಯಾದರೂ ಆ ದೊಡ್ಡ ದೊಡ್ಡ ಅಸ್ತ್ರಗಳಿಂದ (ಅಣುಬಾಂಬು) ಭಯದ ಮೊತ್ತವು ಹೆಚ್ಚಿದೆ. ಮಾನವರನ್ನು ಮತ್ತು ಅದೇ ರೀತಿ ಜೀವಕುಲವನ್ನು ಎಲ್ಲ ರೀತಿಯ ಭಯದಿಂದ ಪಾರುಮಾಡಲು ಶಿವನು ಬಿಡುವಿಲ್ಲದೆ ಪ್ರಯತ್ನಿಸಿದನು. ಇದಕ್ಕಾಗಿ ಅವನು ಬೇರೆ ಬೇರೆ ಪ್ರಕಾರಗಳಿಂದ ಮಾನವರಿಗೆ ಮತ್ತು ಪಶುಗಳಿಗೆ ಸಹಾಯ ನೀಡಿದನು. ಪ್ರಾಣ ಭಯದಿಂದ ಪಾರು ಮಾಡಲು ಅವನು ವೈದ್ಯಕ ಶಾಸ್ತ್ರವನ್ನು ಪ್ರವರ್ತಿಸಿದನು. ಶತ್ರುಗಳ ಭಯದಿಂದ ಪಾರಾಗಲು ಅವನು ಅನೇಕ ಅಸ್ತ್ರ

ಗಳನ್ನು ಆವಿಷ್ಕರಿಸಿದನು. ಮಾನಸಿಕ ಭಯವನ್ನು ದೂರೀಕರಿಸಲು ಅವನು ವಿದ್ಯೆಗಳ ಆವಿಷ್ಕಾರ ಮಾಡಿದನು. ಆಧ್ಯಾತ್ಮಿಕ ಭಯವನ್ನು ದೂರ ಮಾಡಲು ಅವನು ತಂತ್ರ ಯೋಗವನ್ನು ಪ್ರವರ್ತಿಸಿದನು. ಪಶುಗಳಿಗೆ ಆಶ್ರಯ ನೀಡಿದನು. ಪಶು ಮತ್ತು ಉದ್ಭಿಜಗಳ ಪಾಲನೆ–ಪೋಷಣೆ ಮಾಡಲೆಂದು ಅವನು ಪಶುಗಳಿಗೆ ಕಲಿಸಿದನು. ಇದರಿಂದಾಗಿ ಅವನನ್ನು 'ನಿಖಿಲ ಭಯಹರಮ್' ಎಂದು ಕರೆಯಲಾಗಿದೆ.

'ಪಂಚವಕ್ತ್ರಮ್' ಇದರ ಅರ್ಥವೆಂದರೆ ಪಂಚಮುಖಿ ಎಂದು–ಪಂಚಾನನ ಎಂದು. ಶಿವನಿಗೆ ನಿಜವಾಗಿಯೂ ಐದು ಮುಖಗಳಿದ್ದವೇನು? ಹಾಗೇನೂ ಅಲ್ಲ. ಈ ಜಡ ಪಾಂಚಭೌತಿಕ ಶರೀರದಲ್ಲಿ ಯಾರಿಗೂ ಐದು ಮುಖಗಳಿರಲಾರವು. ಶಿವನಿಗೆ ಐದು ಮುಖಗಳಿದ್ದುವೆನ್ನುವುದು ಸಹ ಒಂದು ರೂಪಕವಷ್ಟೇ. ಇದರ ಅರ್ಥವಿಷ್ಟೇ. ಏನೆಂದರೆ, ಮುಖದ ನಾಲ್ಕು ಬಗೆಯ ಅಭಿವ್ಯಕ್ತಿಗಳಿದ್ದವು. ಶಿವನ ಮಧ್ಯಸ್ಥಿತ ಮುಖ ಅಂದರೆ ನಿಜವಾದ ಮುಖಕ್ಕೆ 'ಕಲ್ಯಾಣ ಸುಂದರಂ' ಎಂದು ಹೆಸರು. ಎಲ್ಲಕ್ಕಿಂತ ಬಲದ ಮುಖದ ಹೆಸರು ದಕ್ಷಿಣೇಶ್ವರ. ಕಲ್ಯಾಣ ಸುಂದರ ಮತ್ತು ದಕ್ಷಿಣೇಶ್ವರ ಮುಖಗಳ ನಡುವಿನ ಮುಖಕ್ಕೆ 'ಈಶಾನ' ಎನ್ನುತ್ತಾರೆ. ಎಲ್ಲಕ್ಕಿಂತ ಎಡದ ಮುಖಕ್ಕೆ 'ವಾಮದೇವ' ಎಂದು ಹೆಸರು. 'ಕಲ್ಯಾಣ ಸುಂದರಂ' ಮತ್ತು 'ವಾಮದೇವ' ಮುಖಗಳ ನಡುವಿನ ಮುಖಕ್ಕೆ 'ಕಾಲಾಗ್ನಿ' ಎಂದು ಹೆಸರು.

ದಕ್ಷಿಣೇಶ್ವರದ ಬಳಕೆಯು ಮೃದು ಕಠೋರವಾಗಿದೆ. ಈಶಾನವು ಅತಿ ಮೃದು ಕಠೋರವಾಗಿದೆ. ಕಾಲಾಗ್ನಿಯು ಭೀಷಣವಾಗಿದೆ. ವಾಮದೇವ ಮುಖವು ಅತಿ ಭೀಷಣವಾಗಿದೆ. ಕಲ್ಯಾಣ ಸುಂದರಂ ಮುಖದಲ್ಲಾದರೋ, ಸ್ವಲ್ಪಾದರೂ ಕಠೋರತೆಯಿಲ್ಲ. ಕಲ್ಯಾಣ ಸುಂದರಂ' ಮುಖವು ಸದಾ ನಗುವಿನಿಂದ ತುಂಬಿರುತ್ತದೆ. ನಾನೀ ಮಾತನ್ನು ತಿಳಿಸಲು ಪ್ರಯತ್ನಿಸುತ್ತಿದ್ದೇನೆ. ಯಾರಾದರೂ ಏನಾದರೂ ಅನ್ಯಾಯ ಮಾಡಿದರೆ, ದಕ್ಷಿಣೇಶ್ವರನು, "ಏನಿಂಥ ಕಾರ್ಯ ಮಾಡಿಬಿಟ್ಟೆ. ಇದಕ್ಕಾಗಿ ನೀನು ದಂಡ ತೆತ್ತಬೇಕಾಗುವುದು." ಎಂದು, ಆದರೆ ಈಶಾನನು "ತಪ್ಪನ್ನೇಕೆ ಎಸಗಿದೆ? ಇದಕ್ಕಾಗಿ ನೀನು ದಂಡ ನೀಡಿದರೆ ನಿನಗೆ ಒಳ್ಳೀದಾಗುವುದು." ಎಂದು, ಇತ್ತ ಅದೇವ್ಯಕ್ತಿಗೆ ಕಾಲಾಗ್ನಿಯು, "ತಪ್ಪನ್ನೇಕೆ ಮಾಡಿದೆ? ಇದಕ್ಕಾಗಿ ನಾನು ನಿನಗೆ ಕಠೋರವಾಗಿ ದಂಡಿಸುವೆ. ನಾನು ತಪ್ಪ ಕಾರ್ಯವೆನಿತೇ ಇರಲಿ; ಸಹಿಸಲಾರೆ, ನನ್ನ ಬಳಿ ಯಾವುದೇ ಪ್ರಕಾರದ ಅನುನಯ ವಿನಯಗಳ ಆಟ ಸಾಗದು." ಎಂದು. ಇನ್ನು ವಾಮದೇವನಾದರೋ, "ಇಂಥ ಮಹಾ ದುಷ್ಟನಿದ್ದೀ. ನಾನು ನಿನ್ನನ್ನು ಧ್ವಂಸಗೊಳಿಸುವೆ. ಸುಟ್ಟು ಬೂದಿ ಮಾಡುವೆ." ಕೊನೆಗೆ ಕಲ್ಯಾಣ ಸುಂದರಮ್ ನಸು ನಗುತ್ತ ಹೇಳುವುದೇನೆಂದರೆ- "ಇಂಥ ಕಾರ್ಯಗಳನ್ನು ಮಾಡಕೂಡದು. ಇದರಿಂದ ನಿನ್ನದೇ ಹಾನಿಯಾಗುತ್ತದೆ." ಎಂದು. ಈ ಪ್ರಕಾರ ಇದ್ದಿತೇ ಹೊರತು, ಶಿವನಿಗೆ ನಿಜವಾಗಿ ಐದು ಮುಖಗಳೇನೂ ಇರಲಿಲ್ಲ. ಆದರೆ ಒಂದೇ ಮುಖದ ಇದು ಪ್ರಕಾರದ ಅಭಿವ್ಯಕ್ತಿಗಳಿದ್ದವು. ಈ ಕಾರಣದಿಂದ ಅವನನ್ನು ಪಂಚವಕ್ತ್ರನೆನ್ನುತ್ತಿದ್ದರು.

ಅಚೇತನ ಮನವೇ ಎಲ್ಲ ಗುಣಗಳ ಮತ್ತು ವಿದ್ಯೆಗಳ ಆಧಾರವಾಗಿದೆ. ಮಾನವನು ತನ್ನ ಸಾಮರ್ಥ್ಯಕ್ಕನುಸಾರವಾಗಿ, ಜಾಗ್ರತ ಅವಸ್ಥೆ ಇಲ್ಲವೆ ಸ್ವಪ್ನಾವಸ್ಥೆ

ಯಲ್ಲಿ ಅಚೇತನ ಮನದ, ಎಂದೂ ಕೊನೆಗೊಳ್ಳದ, ಜ್ಞಾನದ ಸ್ವಲ್ಪ ಅಂಶವನ್ನು ಅವಚೇತನಮನದಲ್ಲಿ ಮತ್ತು ಅಲ್ಪ ಅಂಶವನ್ನು ಚೇತನ ಮನದಲ್ಲಿ ತರಬಲ್ಲನು. ಅಚೇತನ ಮನದ ಅಸೀಮ ಜ್ಞಾನಭಾಂಡಾರದ, ಸಂಪೂರ್ಣ ಜ್ಞಾನವನ್ನೇ, ಅವನು ಚೇತನ ಇಲ್ಲವೆ ಅವಚೇತನ ಮನದಲ್ಲಿ ತರಲಾರನು. ಒಂದು ವೇಳೆ, ಯಾರಾದರೂ ಹೀಗೆ ಮಾಡಲು ಶಕ್ತರಾದರೆ, ಆಗ ಜ್ಞಾನಚಕ್ಷುವಿನ ಮೂಲಕ ಜ್ಞಾನ–ಸಂದರ್ಶನ ಮಾಡುವುದು ಎನ್ನುತ್ತಾರೆ. ಈ ಜ್ಞಾನ–ಚಕ್ಷುವಿಗೆ ಮೂರನೆಯ ಕಣ್ಣು ಎಂದು ಕರೆಯಲಾಗುತ್ತದೆ. ಶಿವನಲ್ಲಿ ಆ ಕ್ಷಮತೆಯಿತ್ತು. ಈ ಕಾರಣದಿಂದ ಅವನು ಅಸೀಮ ಜ್ಞಾನದ ಆಧಾರವಾಗಿದ್ದನು. ಆದ್ದರಿಂದ ಅವನ ಜ್ಞಾನ ಚಕ್ಷು ಇಲ್ಲವೆ ಮೂರನೆಯ ಕಣ್ಣು ಅತ್ಯಂತ ಪುಷ್ಟವಾಗಿತ್ತೆಂದು ಕಲ್ಪಿಸುತ್ತಾರೆ. ಅದು ತ್ರಿಕಾಲದರ್ಶಿಯಾಗಿತ್ತು, ಸರ್ವಜ್ಞವಾಗಿತ್ತು. ಆದ್ದರಿಂದಲೇ ಧ್ಯಾನ ಮಂತ್ರದಲ್ಲಿ ಅವನನ್ನು ಕುರಿತು,"ತ್ರಿನೇತ್ರಂ; ತ್ರಿಲೋಚನಂ" ಎಂದು ಹೇಳಿದ್ದಾರೆ.

ಪ್ರಣಾಮ ಮಂತ್ರದಲ್ಲಿ ಶಿವ

"ನಮಸ್ತುಭ್ಯಂ ವಿರೂಪಾಕ್ಷ ನಮಸ್ತೆ ದಿವ್ಯ ಚಕ್ಷುಷೇ ।
ನಮಃ ಪಿನಾಕ ಹಸ್ತಾಯ ವಜ್ರ ಹಸ್ತಾಯ ವೈ ನಮಃ !

ನಮಃ ತ್ರಿಶೂಲ ಹಸ್ತಾಯ ದಂಡ ಪಾಶಾಸಿ ಪಾಣಯೇ
ನಮಸ್ತೆ ಲೋಕನಾಥಾಯ ಭೂತಾನಾಂ ಪತಯೇ ನಮಃ
ನಮಃ ಶಿವಾಯ ಶಾಂತಾಯ ಕಾರಣತ್ರಯ ಹೇತವೇ.
ನಿವೇದಯಾಮಿ ಚಾತ್ಮಾನಂ ತ್ವಂ ಗತಿಃ ಪರಮೇಶ್ವರಃ ।"

(ವಿರೂಪಾಕ್ಷ ! ನಿನಗೆ ನಮನ; ದಿವ್ಯ ಚಕ್ಷುವುಳ್ಳವನೇ ನಿನಗೆ ನಮನ; ಕೈಯಲ್ಲಿ ಪಿನಾಕ ಡಮರು ಹಿಡಿದವನೇ ನಿನಗೆ ನಮನ. ಕೈಯಲ್ಲಿ ಗುಡುಗು ಹಿಡಿದವನೇ ನಿನಗೆ ನಮನ.

ಕೈಯಲ್ಲಿ ತ್ರಿಶೂಲ ಹಿಡಿದವನೇ ನಿನಗೆ ನಮನ; ದಂಡ ಪಾಶಗಳನ್ನು ಹಿಡಿದವನೇ ನಿನಗೆ ನಮನ.

ಶಾಂತನಿಗೆ ನಮನ; ಶಿವನಿಗೆ ನಮನ; ಮೂರು ಲೋಕಗಳ ಕಾರಣನಿಗೆ ನಮನ. ನಿನಗೆ ನನ್ನನ್ನೇ ನಿವೇದಿಸಿಕೊಳ್ಳುವೆ. ಎಲೈ ಪರಮೇಶ್ವರ! ನೀನೇ ನನಗೆ ಪರಮ ಗತಿಯಾಗಿರುವೆ.)

ವಿರೂಪಾಕ್ಷ ಶಬ್ದಕ್ಕೆ ಎರಡು ಅರ್ಥಗಳಿವೆ. ಯಾರ ಅಕ್ಷಿ ಇಲ್ಲವೆ ಕಣ್ಣು ವಿರೂಪಗೊಂಡಿದೆಯೋ ಇಲ್ಲವೆ ಅಸಂತುಷ್ಟವಾಗಿದೆಯೋ ಅವನು ವಿರೂಪಾಕ್ಷ. ಇನ್ನು ಎರಡನೆಯ ಅರ್ಥವೆಂದರೆ, ಯಾವ ವ್ಯಕ್ತಿಯು ವಿಶೇಷ ರೂಪದಿಂದ, ವಿಶೇಷ ಕರುಣೆ ಮತ್ತು ಕಲ್ಯಾಣ ಮಧುರ ದೃಷ್ಟಿಯಿಂದ ಸರ್ವವನ್ನೂ ನೋಡುವನೋ ಅವನು ವಿರೂಪಾಕ್ಷ. ಇಲ್ಲಿ, ಯಾರು ಪಾಪಾಚಾರಿಗಳೋ ಅವರಿಗೆ ಶಿವನು ಮೊದಲನೆಯ ಅರ್ಥದಲ್ಲಿ ವಿರೂಪಾಕ್ಷನಾಗಿದ್ದಾನೆ. ಇನ್ನು ಯಾವ ಜನರು ಧರ್ಮನಿಷ್ಠರಾಗಿರುವರೋ ಅವರಿಗೆ ಎರಡನೆಯ ಅರ್ಥದಲ್ಲಿ ವಿರೂಪಾಕ್ಷನಾಗಿದ್ದಾನೆ.

ಯಾರಲ್ಲಿ ದಿವ್ಯ ದೃಷ್ಟಿಯಿದೆಯೋ, ಅವರನ್ನು ದಿವ್ಯ ಚಕ್ಷು ಎಂದು ಕರೆಯುತ್ತಾರೆ. ಅರ್ಥಾತ್ ಯಾರು ಪ್ರತಿಯೊಂದು ವಸ್ತುವಿನ ಮೂಲ ಕಾರಣವಾದ ಗುಪ್ತ ಹೇತುವನ್ನು ತಿಳಿಯುವರೋ, ಯಾರಲ್ಲಿ ದೂರದೃಷ್ಟಿ ಇದೆಯೋ, ಯಾರು ತ್ರಿಕಾಲ ದರ್ಶಿಗಳೋ, ಅವರನ್ನು ಕುರಿತು 'ದಿವ್ಯಚಕ್ಷುಷೇ" ಎಂದು ಹೇಳುತ್ತಾರೆ. ಡಮರು

ಬಾರಿಸಿ ಸರ್ವರ ಶರೀರವನ್ನು ರೋಮಾಂಚನಗೊಳಿಸುವನೋ, ಯಾರು ಸರ್ವರ ಮನ
ದಲ್ಲಿ ಜಾಗೃತಿಯುಂಟು ಮಾಡುವರೋ, ಸರ್ವರ ಆತ್ಮವನ್ನು ಸ್ಪಂದಿಸುವನೋ, ಅಂಥ
ಪಿನಾಕ ಪಾಣಿಯೇ ಸದಾಶಿವ. ದುಷ್ಟರ ದಮನ ಮತ್ತು ಒಳ್ಳೆಯ ವ್ಯಕ್ತಿಗಳ ಪಾಲನೆ
ಗೋಸ್ಕರ, ಪ್ರತಿ ಕಾಲದಲ್ಲಿಯೂ ಅಸ್ತ್ರಗಳ ಬಳಕೆಯಾಗುತ್ತಿತ್ತು. ಇಂದಿಗೂ ಆಗುತ್ತ
ನಡೆದಿದೆ. ಶಿವನು ತನ್ನ ಭಯಂಕರ ಆಯುಧವನ್ನು ಧರಿಸಿರುತ್ತಾನೆ. ಅದನ್ನು
ಯಾವಾಗಲೂ ಒಳಿತಿಗೋಸ್ಕರವೇ ಬಳಸುತ್ತಾನೆ. ಈ ಕಾರಣದಿಂದ ಅವನು ಕೇವಲ
ವಜ್ರಧರನಷ್ಟೇ ಅಲ್ಲ. ಶುಭ ವಜ್ರಧರನಾಗಿದ್ದಾನೆ.

ಯಾವ ಅಸ್ತ್ರವು ಪಾಪಿಗಳನ್ನು ಮೂರು ಬದಿಯಿಂದ ಇರಿಯುವುದೋ ಅದಕ್ಕೆ
'ತ್ರಿಶೂಲ'ವೆನ್ನುತ್ತಾರೆ. ಶಿವನ ಕೈಯಲ್ಲಿ ತ್ರಿಶೂಲವಿದೆ. ಅವನು ತ್ರಿಶೂಲ ಪಾಣಿ
ಯಾಗಿದ್ದಾನೆ. ಏಕೆಂದರೆ, ಪಾಪಿಗಳ ಮನದಲ್ಲಿ ಭಯವನ್ನು ಹುಟ್ಟಿಸುವುದಕ್ಕೋಸುಗ
ಮತ್ತು ಹಾಗೆ ಮಾಡಿ, ಪಾಪ ಮಾಡುವುದನ್ನೇ ನಿಲ್ಲಿಸುವುದಕ್ಕೋಸುಗ, ಮತ್ತು ಸಜ್ಜ
ನರಿಗೆ ಶಾಂತಿಯಿಂದ ಬಾಳಗೊಡುವುದಕ್ಕೋಸುಗ ಅವನು ತ್ರಿಶೂಲಪಾಣಿಯಾಗಿದ್ದಾನೆ.
ಪಾಪಿಗಳನ್ನು ನಿಯಂತ್ರಿಸಲೋಸುಗ ಮತ್ತು ಅವರನ್ನು ಕಠೋರ ಬಂಧನದಲ್ಲಿ ಕಟ್ಟಿ
ಹಾಕಲೋಸುಗ ಶಿವನ ಕೈಯಲ್ಲಿ ದಂಡವಿದೆ. ಮತ್ತು ಪಾಶವಿದೆ. (ಕೋಲು ಇದೆ; ಹಗ್ಗ
ವಿದೆ) ಸ್ವರ್ಗ, ಮರ್ತ್ಯ ಮತ್ತು ರಸಾತಳಗಳ ಪ್ರಾಣಿಗಳೆಲ್ಲ ಯಾವ ಮಾನಸಿಕತೆಯ
ಬಲದ ಮೇಲೆ ದೃಢವಾಗಿ ಮತ್ತು ಪುಷ್ಟವಾಗಿ ಇರುವರೋ, ಆ ಮಾನಸಿಕ ಜಗತ್ತನ್ನು
ಅವನು ಜಯಿಸಿದ್ದಾನೆ. ಈ ಕಾರಣದಿಂದ ಅವನು ತ್ರಿಲೋಕನಾಗಿದ್ದಾನೆ.

ಈ ಪಾಂಚಭೌತಿಕ ಜಗತ್ತಿನಲ್ಲಿ ಪ್ರತಿಯೊಂದು ಭೂತದಸ್ವಭಾವ ಮತ್ತು ಆಚಾರ
ವಿಧಿಗಳ ಬಗೆಗೆ ಅವನಿಗೆ ಪೂರ್ಣ ತಿಳಿದಿದೆ. ಆದ್ದರಿಂದ ಅವನು ಭೂತಾನಾಂ ಪತಿ...
ಆದ್ದರಿಂದ ಅವನು ಭೂತನಾಥನಾಗಿದ್ದಾನೆ. ಪ್ರಮಥನಾಥನಾಗಿದ್ದಾನೆ. ತನ್ನನ್ನು ತಾನು,
ಆಂತರ್ಯದಲ್ಲಿ ಮತ್ತು ಬಾಹ್ಯ ಅವಸ್ಥೆಗಳೆರಡಲ್ಲೂ ಸಂಯತಗೊಳಿಸಿಕೊಂಡ ಏಕಮಾತ್ರ
ಪುರುಷನಾಗಿದ್ದಾನೆ. ಆದ್ದರಿಂದಲೇ ಅವನನ್ನು ಶಾಂತ ಎನ್ನುತ್ತಾರೆ. ಈ ಶಾಂತ
ಪುರುಷನೇ ಪ್ರತಿಯೊಂದು ವಸ್ತುವಿನ ಮೇಲೆ ನಿಯಂತ್ರಣ ಪಡೆಯುವ ಅಧಿಕಾರ
ಹೊಂದುತ್ತಾನೆ. ಆದ್ದರಿಂದ ಅವನನ್ನು ಕುರಿತು **'ನಮಃ ಶಿವಾಯ ಶಾಂತಾಯ'**
ಎಂದು ಹೇಳುತ್ತಾರೆ.

ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಜಗತ್ತಿನಲ್ಲಿ ಹೇತು-ಭೂತ ಸತ್ತೆಯು ಚಿತಿ
ಶಕ್ತಿಯೇ ಆಗಿದೆ. ಶಿವನು ಆ ಚಿತಿ ಶಕ್ತಿಗಿಂತ ಬೇರಲ್ಲ, ಈ ಕಾರಣದಿಂದ ಅವನನ್ನು
ಕುರಿತು 'ಕಾರಣತ್ರಯ ಹೇತವೇ' ಎಂದು ಹೇಳಲಾಗಿದೆ. ಯಾವ ಪರಮ ತತ್ತ್ವ
ರೂಪಿಯು ತನ್ನಮಧುರ, ಮಹಾನ್ ದ್ಯುತಿಯಿಂದ ಸೃಷ್ಟ ಮತ್ತು ಅಸೃಷ್ಟವಾದುದೆಲ್ಲದರ
ಒಳಹೊರಗನ್ನು, ಉಜ್ಜ್ವಲಗೊಳಿಸಿರುವನೋ, ಉದ್ಭಾಸಿತಗೊಳಿಸಿರುವನೋ,
ಆಕೀರ್ಣ-ವಿಕೀರ್ಣಗೊಳಿಸಿರುವನೋ, ಅವನ ಸಮ್ಮುಖದಲ್ಲಿ ಆ ಸರ್ವಸತ್ತೆಗಳು ತಲೆ
ಬಾಗಿವೆ. ಪೂರ್ಣ ಸಮರ್ಪಿತವಾಗಿವೆ. ಇದರಿಂದ ಅವನು ಸಮಸ್ತ ಸತ್ತೆಗಳ
ಪರಮಗತಿಯಾಗಿದ್ದಾನೆ. ಆದ್ದರಿಂದ ಅವನ ಸಂಬಂಧದಲ್ಲಿ "ನಿವೇದಯಾಮಿ ಚಾತ್ಮಾನಂ
ತ್ವಂ ಗತಿಃ ಪರಮೇಶ್ವರ" ಎಂದು ಹೇಳಿದ್ದಾರೆ.

"ಎಲೈ ಶಿವನೇ! ಎಲೈ ಪರಮೇಶ್ವರ! ಎಲೈ ಗತಿಯ ಪರಮ ಗತಿಯೇ! ಎಲೈ
ಸಮಸ್ತ ಭ್ರಾಂತಿಯ ಅಂತಿಮ ವಿಭ್ರಾಂತಿಯೇ! ನಾನು ನನ್ನ ಸತ್ತಾ ಬೋಧೆಯ ಎಲ್ಲ
ವನ್ನೂ ನಿನ್ನ ಚರಣದಲ್ಲಿ ನಿವೇದಿಸುತ್ತಿರುವೆ." ನಿನ್ನನ್ನು ಬಿಟ್ಟು ನನಗೆ ಬೇರಾರೂ
ಇಲ್ಲ. ಏನಿನಿತೂ ಇಲ್ಲ. ಹೆಚ್ಚೇನು? ನಿನ್ನ ಹೊರತು ನನ್ನ ಅಸ್ತಿತ್ವವೇ ಇಲ್ಲ.

ಕಾಶೀ : ೧೩-೮-೧೯೮೨.